
ಕರ್ಮವೀರ
ದೀಪಾವಳಿ ಸಂಚಿಕೆ
೧೯೭೪
ರೂ.5/-

ಕರ್ನಾಟಕ ನಡೆದು ಬಂದ ದಾರಿ

ಉಜ್ವಲ ಇತಿಹಾಸ ಪರಂಪರೆಯುಳ್ಳ ಕನ್ನಡ ಪ್ರದೇಶ ಒಂದು ರಾಜ್ಯವಾಗಿ ರೂಪುಗೊಂಡಿದ್ದು 1956 ರಲ್ಲಿ. ಒಂದು ವರುಷದ ಹಿಂದೆ ಕರ್ನಾಟಕವೆಂದು ಹೆಸರಿಟ್ಟುಕೊಂಡು ಭಾವನಾತ್ಮಕ ಸಮಗ್ರತೆ ಪಡೆಯಿತು.

ಕರ್ನಾಟಕವು ಎಲ್ಲ ಸಂಪನ್ಮೂಲಗಳಲ್ಲೂ ಸಮೃದ್ಧ ಪ್ರದೇಶ, ಇವುಗಳನ್ನು ಬಳಸಿಕೊಂಡು ರಾಜ್ಯದ ಉಜ್ವಲ ಭವಿಷ್ಯಕ್ಕೆ ಬುನಾದಿ ಪದಗಿಸಲು ಈಗ ಜರುಗುತ್ತಿರುವ ಅಭಿವೃದ್ಧಿ ಕಾರ್ಯಗಳ ಸಿಂಹಾವ ಲೋಕನದಿಂದ ನಡೆದು ಬಂದ ದಾರಿಯಲ್ಲಿಯ ಮಹತ್ವ ಮೈಲುಗಲ್ಲು ಗಳನ್ನು ಸ್ಪಷ್ಟವಾಗಿ ಕಾಣಬಹುದು.

ಕಳೆದ ಎರಡು ದಶಕಗಳಲ್ಲಿ ಆಹಾರ ಉತ್ಪಾದನೆ ದ್ವಿಗುಣಿತವಾಗಿದೆ. ಕೃಷಿ ಕ್ಷೇತ್ರದಲ್ಲಿ ನೂತನ ವಿಕ್ರಮ ಸಾಧಿಸಲಾಗಿದೆ. ವರಲಕ್ಷ್ಮಿ ಹತ್ತಿಯುಬೆಳೆಯು ವರವಾಗಿ ಪರಿಣಮಿಸಿದೆ. ಕಬ್ಬು, ಎಣ್ಣೆ ಕಾಳುಗಳು ಹಾಗೂ ಇತರ ಬೆಳೆಗಳ ಉತ್ಪಾದನೆ ಅಧಿಕವಾಗಿದೆ.

ವಿದ್ಯುತ್ತ ಪೂರೈಕೆಯ ವಿಷಯದಲ್ಲಿ, ಕಾಳಿಯೋಜನೆ ಒಂದು ಹೊಸ ಅಧ್ಯಾಯ. 1978 ರ ಹೊತ್ತಿಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಈ ಯೋಜನೆಯಿಂದ 910 ಮೇಗಾ ವ್ಯಾಟ್ ವಿದ್ಯುತ್ತ ದೊರೆಯುವುದು. ಅಂದರೆ 4000 ದಶಲಕ್ಷ ಘಟಕಗಳನ್ನು ಪಡೆಯಬಹುದು ಇದರಿಂದ ರಾಜ್ಯದ ವಿದ್ಯುತ್ತ ಉತ್ಪಾದನೆ ಎರಡರಷ್ಟು ಹೆಚ್ಚುವುದು. ಈಗ ರಾಜ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಸಂಖ್ಯೆಯ ಹಳ್ಳಿಗಳಿಗೆ ವಿದ್ಯುತ್ತಪೂರೈಕೆಯಾಗಿದೆ. ಉಳಿದರ್ಧ ಹಳ್ಳಿಗಳಿಗೆ ಐದನೇ ಯೋಜನೆ ಅವಧಿಯಲ್ಲಿ ಈ ಸೌಕರ್ಯ ಒದಗಲಿದೆ.

ಉದ್ದಿಮೆ ಕ್ಷೇತ್ರದಲ್ಲಿ ಏಂದಿನಿಂದಲೂ ಒಂದು ಹೆಜ್ಜೆ ಮುಂದಿದೆ. ರಾಜ್ಯದಲ್ಲಿ 1956 ರಲ್ಲಿ 1635 ರಷ್ಟು ಕಾರಖಾನೆಗಳಿದ್ದವು. ಅವುಗಳ ಸಂಖ್ಯೆ ಇಂದು 4000ಕ್ಕೆ ಸಮೀಪಿಸಿದೆ.

ರೇಶಿಮೆ ಉದ್ದಿಮೆಯಲ್ಲಿ ರಾಜ್ಯವು ವೈಶಿಷ್ಟ್ಯಪೂರ್ಣ ಪ್ರಗತಿ ಸಾಧಿಸಿದೆ. ನಾಲ್ಕನೇ ಯೋಜನೆ ಅವಧಿಯಲ್ಲಿ 14 ಲಕ್ಷ ಕೆ.ಜಿ. ಯಿಂದ 20 ಲಕ್ಷ ಕೆ. ಜಿ. ಯಷ್ಟು ಉತ್ಪಾದನೆ ಹೆಚ್ಚಿದೆ. ಇತ್ತೀಚೆಗೆ 'ಬಾಯೊ-ವೋಲ್ಟಿನ್' ತಳಿಯ ಶೋಧನೆ ಈ ಉದ್ದಿಮೆಯಲ್ಲಿ ನೂತನ ಯುಗವನ್ನೇ ಪ್ರಾರಂಭಿಸಿದೆ.

ಆರೋಗ್ಯ, ಶಿಕ್ಷಣ, ಕುಡಿಯುವ ನೀರಿನ ಪೂರೈಕೆ ಇತ್ಯಾದಿ ಸಾರ್ವಜನಿಕ ಸೇವೆಗಳಿಗಾಗಿ ರಾಜ್ಯದ ಆದಾಯದಲ್ಲಿ ನೂರಕ್ಕೆ ೩೦ ರಷ್ಟು ವಿನಿಯೋಗವಾಗುವುದು. 1956 ರಲ್ಲಿ ಕೇವಲ 207 ಆಸ್ಪತ್ರೆ ಹಾಗೂ ಔಷಧಾಲಯಗಳಿದ್ದವು. ಈಗ ಅವುಗಳ ಸಂಖ್ಯೆ ಸುಮಾರು ೧೫೦೦ ಕ್ಕೆ ಏರಿದೆ.

ಕರ್ನಾಟಕ ರಾಜ್ಯವು ಇತ್ತೀಚಿನ ವರುಷಗಳಲ್ಲಿ ಅಭಿವೃದ್ಧಿಗೆ ನೆರವಾಗಬಲ್ಲ ಅನೇಕ ಆರ್ಥಿಕ ಸಂಸ್ಥೆಗಳನ್ನು ರಚಿಸಿದೆ. ಅಗತ್ಯವಾದ ಹಣಕಾಸನ್ನಲ್ಲದೆ ಆಡಳಿತ ಮತ್ತು ಸಿಬ್ಬಂದಿಯನ್ನು ಒದಗಿಸುವುದಕ್ಕೂ ಅಂತಾರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಿಂದ ಬೃಹದ್ ಯೋಜನೆಗಳಿಗೆ ನೆರವನ್ನು ಪಡೆಯುವುದಕ್ಕೂ ಈ ಸಂಸ್ಥೆಗಳಿಂದ ತುಂಬಾ ಅನುಕೂಲವಾಗಿದೆ. ಹಣಕಾಸಿನ ಕಾರ್ಪೋರೇಶನ್, ಉದ್ಯಮ ಅಭಿವೃದ್ಧಿ ಕಾರ್ಪೋರೇಶನ್ ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು. ಕ್ಷೀರ ಅಭಿವೃದ್ಧಿ ಯೋಜನೆ ಮುಂತಾದವುಗಳಿಗೆ ನೂರಾರು ಕೋಟಿ ರೂಪಾಯಿಗಳ ನೆರವು ದೊರೆಯುವಂತಾಗಿದೆ.

ಬಡತನ ಸೀಮಾ ರೇಖೆಯ ಕೆಳಗಿನ ಜನರಿಗೂ ಸಾಧನೆಯ ಲಾಭ ದೊರೆಯಬೇಕಾದರೆ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನ ಮಾನಗಳು ಉತ್ತಮಗೊಳ್ಳಬೇಕು. ಈ ದಿಶೆಯಲ್ಲಿ ಪರಿಣಾಮಕಾರಿ ಹೆಜ್ಜೆ ಇಡಲಾಗಿದೆ. ಸ್ವಂತದ ನೆಲವೆಂಬುದು ಇಲ್ಲದ ಭೂ ರಹಿತರಿಗೆ ಮನೆ ಕಟ್ಟಿಕೊಳ್ಳಲು ಉಚಿತವಾಗಿ ನಿವೇಶನ ಪದಗಿಸಲಾಗಿದೆ. ಈಗಾಗಲೆ ೨,೮೫,೦೦೦ ನಿವೇಶನ ಹಂಚಲಾಗಿದೆ. ಇದರಲ್ಲಿ ೯೧,೫೨೦ ನಿವೇಶನಗಳನ್ನು ಪರಿಶಿಷ್ಟಜಾತಿ ಹಾಗೂ ಜನಾಂಗದವರಿಗೆ ಹಂಚಲಾಗಿದ. ಇನ್ನು ೨,೩೦,೬೩೮ ನಿವೇಶನಗಳಿಗೆ ಅಗತ್ಯವಾದ ಹಣಕಾಸನ್ನು ಒದಗಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ಕೃಷಿ ಕ್ಷೇತ್ರದಲ್ಲಿ ನೂತನ ಅಧ್ಯಾಯವನ್ನು ಪ್ರಾರಂಭಿಸುವ ಭೂ-ಸುಧಾರಣೆ ಕಾನೂನು ಜಾರಿಯಲ್ಲಿ ಬಂದಿದೆ. ಹಿಂದುಳಿದ ವರ್ಗಗಳ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಕೈಕೊಳ್ಳಲಾಗಿದೆ.

74/D. I. P. 924

(ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರಕಟಿತ)

we wish you all happy deepavali

I_DEX TO ADVERTISERS

ಪರಿವಿಡಿ

ಕರ್ಮವೀರ
ದೀಪಾವಳಿ ಸಂಚಿಕೆ



ನಮ್ಮ ನುಡಿ

ಕರ್ಮವೀರ ಎಂದಿನಂತೆ ಈ ವರ್ಷವೂ ದೀಪಾವಳಿ ಸಂಚಿಕೆಯನ್ನು ತನ್ನ ಓದುಗರಿಗೆ ಅರ್ಪಿಸಲು ಸಂತೋಷಪಡುತ್ತಾನೆ. ಪತ್ರಿಕೋದ್ಯಮದಲ್ಲಿಯ ಭಾರಿ ವಿಪತ್ತುಗಳು—ಪತ್ರಿಕಾ ಮುದ್ರಣ ಕಾಗದದ ಅಭಾವ, ಸಲಕರಣೆಗಳ ಬೆಲೆ ಏರಿಕೆ ಮತ್ತು ಅಭಾವ—ಈ ವರುಷ ನಮ್ಮೆಲ್ಲರನ್ನು ತುಂಬ ಗೊಂದಲದಲ್ಲಿ ಕೆಡವಿರುವವು. ಈ ವರೆಗೆ ನಾವು ಓದುಗರಿಗೆ ಸಲ್ಲಿಸುತ್ತ ಬಂದ ಈ ಸಾಹಿತ್ಯ ಸೇವೆ ನಿಲ್ಲಬಾರದು; ದೀಪಾವಳಿಗೆ ಅದು ಎಂದಿನಂತೆ ಮುದವನ್ನು ನೀಡಬೇಕು ಎಂಬ ಉದ್ದೇಶದಿಂದ ಅನೇಕ ತೊಂದರೆಗಳನ್ನು ಎದುರಿಸಿ ಈ ಸಂಚಿಕೆಯನ್ನು ತಮಗೆ ನಾವು ಸಾದರಪಡಿಸುತ್ತಿದ್ದೇವೆ. ತಾವೆಲ್ಲರೂ ಎಂದಿನಂತೆ ಹೃತ್ಪೂರ್ವಕವಾಗಿ ಬರಮಾಡಿಕೊಳ್ಳುವಿರಿ ಎಂದು ಹಾರೈಸುತ್ತೇವೆ.

ಈ ಸಲವೂ ನಮ್ಮ ವಿಶೇಷತೆಯನ್ನು ಕಾಪಾಡಿಕೊಂಡು ಬಂದಿದ್ದೇವೆ. 'ಶಿಲ್ಪದಲ್ಲಿ ಶಿವ' ಒಂದು ವಿಶಿಷ್ಟವಾದ ಸಚಿತ್ರ ಲೇಖನ. ಶಿಲ್ಪದಲ್ಲಿ ಶಿವನನ್ನು ಚಿತ್ರಿಸಿದ ರೀತಿಯನ್ನೂ, ಅಲ್ಲಿ ಮೂಡಿಬಂದ ಶಿವಕಥೆಯನ್ನು ಈ ಲೇಖನದಲ್ಲಿ ನಿರೂಪಿಸಲಾಗಿರುವುದು. ಆ ಶಿಲ್ಪವೂ ತುಂಬ ಸೊಗಸಾಗಿದೆ. ಅದನ್ನು ಸೆರೆಹಿಡಿದು ನಿಮಗೆ ತೋರುವಂತೆ ಮಾಡುವಲ್ಲಿ ವಿಶೇಷ ನೆರವು ನೀಡಿದವರು ಬೆಂಗಳೂರಿನ ಪ್ರಸಿದ್ಧ ಛಾಯಾಗ್ರಾಹಕರಾದ ಶ್ರೀ ಬಿ. ಕೇಸರಸಿಂಗರು.

ಇಂಥದೇ ಇನ್ನೊಂದು ವಿಶೇಷಲೇಖನ "ನಾವು ಒಂದು, ನಮ್ಮ ವೃತ್ತಿಯೂ ಒಂದು." ಒಂದೇ ವೃತ್ತಿಯಲ್ಲಿರುವ ದಂಪತಿಗಳಿಗೆ ಅನುಕೂಲತೆಗಳೇನು, ಅನಾನುಕೂಲತೆಗಳೇನು? ತೊಂದರೆಗಳೇನು? ಅವನ್ನು ಅವರು ಹೇಗೆ ಪರಿಹರಿಸಿಕೊಳ್ಳುವರು? ಇದೊಂದು ಸಮೀಕ್ಷೆ.

ಇದರ ಜೊತೆಗೆ ಒಂದು ಸಂಪೂರ್ಣ ಕಾದಂಬರಿ—ಕನ್ನಡದ ಖ್ಯಾತ ಲೇಖಕರ ಕಥೆಗಳು, ವಿಡಂಬನಗಳು, ಕವನಗಳು ಈ ಸಂಚಿಕೆಯಲ್ಲಿ ನಿಮಗಾಗಿ ಕಾದಿವೆ. ಖ್ಯಾತಜ್ಯೋತಿಷಿ ಶ್ರೀ ಎನ್. ಕೆ. ಜೋಗಳೇಕರರು ತಮ್ಮ ಭವಿಷ್ಯವಾಣಿಯಿಂದ ನಿಮ್ಮನ್ನು ತಣಿಸುವರು. ಹಿಂದಿ–ಕನ್ನಡ ಚಿತ್ರರಂಗಗಳ ಒಂದು ವರುಷದ ಪ್ರಗತಿಯ ನೋಟವಿಲ್ಲಿದೆ.

ಹೀಗೆ ಪುಟಗಳು ಕಡಿಮೆ ಇದ್ದರೂ ನಿಮಗೆ ಇಲ್ಲಿ ರಸದೂಟ ನೀಡಿದ್ದೇವೆ. ನೀವೂ ಅದನ್ನು ಸವಿಯುವಿರಿ ಎಂದು ನಮಗೆ ಬಲವಾಗಿ ನಂಬಿಕೆ ಇದೆ. ಈ ಸಂಚಿಕೆ ಸರ್ವಾಂಗ ಸುಂದರವಾಗುವಂತೆ ಪರಿಶ್ರಮಿಸಿದ ಸಹಕಾರಿಗಳಿಗೆಲ್ಲ, ಉತ್ತಮ ಮುಖಚಿತ್ರ ಒದಗಿಸಿದ ಕಲಾವಿದ ಶ್ರೀ ನಾನಾಸಾಹೇಬ ದೇಸಾಯಿ, ಉತ್ತಮ ಚಿತ್ರಗಳನ್ನು ಒದಗಿಸಿದ ಶ್ರೀ ಬಿ. ಕೇಸರಸಿಂಗ, ಮತ್ತು ಜಾಹೀರಾತು ನೀಡಿ ಸಹಕರಿಸಿದ ಎಲ್ಲ ಜಾಹೀರಾತುದಾರರಿಗೆ ನಮ್ಮ ಅನಂತ ವಂದನೆಗಳು.

ದೀಪಾವಳಿ ಸರ್ವರಿಗೂ ಮಂಗಳದಾಯಕವಾಗಿ ಪರಿಣಮಿಸಲಿ!

ವ್ಯವಸ್ಥಾಪಕ ಸಂಪಾದಕರು:
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು
ಖಾದ್ರಿ ಶಾಮಣ್ಣ

ಸಹಾಯಕ ಸಂಪಾದಕರು:
ಎಸ್. ವಿ. ಪಾಟೀಲ



ಒಂದು ಸಂದರ್ಶನ

ಸಾಂಸ್ಕೃತಿಕ ಯಾತ್ರೆ

–ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಜಗದ್ಗುರುಗಳು

ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರುಗಳಾದ ಶ್ರೀ ನಿ. ನಿ. ಪ್ರ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಇತ್ತೀಚೆ ಲ್ಯುವೆನ್‌ದಲ್ಲಿ ಹಾಗು ಈ ಹಿಂದೆ ಕಿಯೋಟೋದಲ್ಲಿ ಜರುಗಿದ ವಿಶ್ವಧರ್ಮ ಸಮ್ಮೇಲನಗಳಲ್ಲಿ ಭಾರತದ ಪರವಾಗಿ ಭಾಗವಹಿಸಿದ್ದರು. ಅವರು ಈ ಸಮ್ಮೇಲನ ಹಾಗು ವಿದೇಶ ಸಂಚಾರಗಳಲ್ಲಿ ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಬಗೆಗೆ ಪಾಶ್ಚಿಮಾತ್ಯರಲ್ಲಿ ಒಳ್ಳೆಯ ಭಾವನೆ, ಗೌರವ ಮೂಡಿಸಿದ್ದಾರೆ. ಅವರ ಕೆಲವು ಅನುಭವ ವಿಚಾರಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ವಿಶ್ವಧರ್ಮ ಸಮ್ಮೇಳನ ಕಿಯೋಟೋದಿಂದ ಲ್ಯುವೆನ್ ವರೆಗೆ ಸಾಧಿತವಾದುದೇನು?

ಕಿಯೋಟೋ ಸಮ್ಮೇಲನಕ್ಕಿಂತ ಲ್ಯುವೆನ್ ಪರಿಷತ್ತಿನಲ್ಲಿ ಪರಸ್ಪರ ತಿಳುವಳಿಕೆ, ಧರ್ಮ ಮತ್ತು ಶಾಂತಿಸಲುವಾಗಿ ಅಂತಃಕರಣಪೂರ್ವಕವಾಗಿ ಮಾನವೀಯ ಕಲ್ಯಾಣ ದೃಷ್ಟಿಯಿಂದ ಅನೇಕ ರಾಷ್ಟ್ರದಿಂದ ಬಂದ ಪ್ರತಿನಿಧಿಗಳು ಪ್ರಾಂಜಲ ಮನಸ್ಸಿನಿಂದ ವಿಚಾರ ಗೋಷ್ಠಿಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಗೊಳಿಸಿದ್ದರು. ಅವರು ನಿಶ್ಶಸ್ತ್ರೀಕರಣ, ಸಮೃದ್ಧ ರಾಷ್ಟ್ರಗಳು ಉಳಿದ ರಾಷ್ಟ್ರಗಳಿಗೆ ಸಹಾಯ ನೀಡಬೇಕು ಇತ್ಯಾದಿ. ಮುಖ್ಯ ವಿಷಯಗಳಿಗೆ ಹೆಚ್ಚು ಮಹತ್ವ ನೀಡಿದ್ದರು. ಪ್ರಶ್ನೋತ್ತರಗಳಿಗೆ ಹೆಚ್ಚು ಪ್ರಾಧಾನ್ಯವಿತ್ತು. ಚರ್ಚಾಗೋಷ್ಠಿಗಳಲ್ಲಿ ಆದ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತರಬೇಕೆಂಬುದೇ ಎಲ್ಲರ ಅಭಿಪ್ರಾಯವಾಗಿತ್ತು. ವಿಶ್ವಶಾಂತಿಯುಂಟಾಗಬೇಕಾದರೆ ದ್ವೇಷಾಸೂಯೆಗಳು ಮೊದಲು ನಿರ್ಮೂಲವಾಗಬೇಕು. ಭೌತಿಕ ಪ್ರಗತಿಯ ಶರವೇಗದಲ್ಲಿ ಜ್ಞಾನದ ತಿರುಳನ್ನು ಮರೆಯಬಾರದು. ಬೌದ್ಧಿಕ ಶಕ್ತಿಯನ್ನು ಬೆಳೆಸುತ್ತಿದ್ದರೂ ಹೋರಾಟದಲ್ಲಿಯೇ ಕಾಲ ಕಳೆಯಬಾರದು. ಅಶಾಂತಿಗೆ ಮೂಲವಾದ ಭೂ, ಧನ, ಅಧಿಕಾರದ ಪ್ರಾಪ್ತಿಯ ವಿಸ್ತರಣದ ಆಶೆಗಳನ್ನು ಮಾನವ ಕಲ್ಯಾಣಕ್ಕೆ ಪರಿಣಮಿಸಿದರೆ ಮಾತ್ರ ಶಾಶ್ವತವಾದ ಶಾಂತಿ, ಸುಖವು ಸಿಗಬಹುದಾಗಿದೆ. ಎಲ್ಲಕ್ಕೂ ಮಿಗಿಲಾಗಿ ಧಾರ್ಮಿಕ ಭಾವನೆಯು ಪ್ರಪಂಚದ ತುಂಬೆಲ್ಲ ಹಬ್ಬುವಂತೆ, ಲೋಕವೆಲ್ಲ ಭಾವೈಕ್ಯದಿಂದ ಸುಂದರವಾಗುವಂತೆ ಕಾರ್ಯರೂಪಕ್ಕೆ ತರುವದೇ ಮೊದಲಾದ ವಿಚಾರಗಳು ಅಲ್ಲಿ ವ್ಯಕ್ತವಾದವು. ಸಂತತಿ ನಿಯಮನದ ಬಗ್ಗೆಯೂ ಕೂಲಂಕಷವಾಗಿ ವಿಚಾರ ನಡೆದು, ಅದಕ್ಕಾಗಿ ಭಾರತೀಯ ಸಂಸ್ಕೃತಿಯ ಮಹತ್ವವನ್ನು ಹಾಗೂ ಮಾನವ ಶ್ರೇಷ್ಠವಾಗಿರುವ ಆಚಾರ ವಿಚಾರಗಳನ್ನು ಶಿವಶರಣರ ಕಾಯಕತತ್ವವನ್ನು ನಾವು ವಿವರಿಸಿದೆವು ಅದಕ್ಕೆ ಜನರ ಮೆಚ್ಚುಗೆಯು ಕಂಡು ಬಂದಿತು.

ಕಿಯೋಟೋದಕ್ಕಿಂತ ಹೆಚ್ಚು ರಾಷ್ಟ್ರದ ಪ್ರಮುಖ ಪ್ರತಿನಿಧಿಗಳು ಇಲ್ಲಿ ಈ ಸಲ ಕೂಡಿದ್ದರಿಂದ, ಕಿಯೋಟೋದ ಪ್ರಭಾವವು ಇದ್ದಿರಬಹುದೆಂದೆನ್ನಿಸುತ್ತದೆ. ಪ್ರತಿಯೊಂದು ರಾಷ್ಟ್ರದವರು ವಿಶ್ವಶಾಂತಿಗಾಗಿ ಪರಿಶ್ರಮ ವಹಿಸಬೇಕೆಂದು ಈ ಸಮ್ಮೇಳನದಲ್ಲಿ ನಿರ್ಣಯ ತೆಗೆದುಕೊಂಡರಲ್ಲದೆ, ಹುಬ್ಬಳ್ಳಿಯಲ್ಲಿ 1972ನೆಯ ಇಸ್ವಿಯಲ್ಲಿ ಜರುಗಿಸಿದ ಸರ್ವಧರ್ಮ ಸಮ್ಮೇಳನದ ಬಗ್ಗೆ ಮುಕ್ತಾಯ ಸಮಾರಂಭದಲ್ಲಿ ಅಧ್ಯಕ್ಷರು ಮುಕ್ತಕಂಠದಿಂದ ಪ್ರಶಂಸಿಸಿದರು. ಇದರಿಂದ ಹುಬ್ಬಳ್ಳಿಯ ಸಮ್ಮೇಳನವು ಅವರಿಗೆ ಮೆಚ್ಚಿಗೆಯಾದಂತೆ ಕಂಡುಬಂದಿತ್ತು.

ಕಿಯೋಟೋದ ಸಭೆಯು ಉಚ್ಚ ಆದರ್ಶಗಳನ್ನು ಮಂಡಿಸಿದ್ದರೆ ಲ್ಯುವೆನ್‌ದಲ್ಲಿ ಆ ಆದರ್ಶಗಳ ಮೂಲಕ ಮುನ್ನಡೆಯಲು ಸಾಧ್ಯವಾಗಿದೆ. ಇಂಥ ಪರಿಷತ್ತುಗಳ ಅಗಾಧ ಅನುಭವ ಹಾಗು ಅಧಿಕೃತ ಧಾರ್ಮಿಕ ಸಂಸ್ಥೆಗಳ ನಡುವೆ ನಡೆಸಿದ ವಿಮಲ ಚರ್ಚೆಗಳ ಪರಿಣಾಮವಾಗಿ ನಮ್ಮಲ್ಲಿಯ ಅಭಿಮಾನ ಪೂರ್ಣ ಪೂರ್ವಗ್ರಹ ದೂಷಿತ ಪ್ರತ್ಯೇಕತೆಯು ಸುದೀರ್ಘ ಕಾಲಾವಧಿಯು ಇಂದು ಇಲ್ಲದಂತಾಗಿದೆ ಎಂದು ನಂಬಬಹುದು. ಈ ಸಲದ ಲ್ಯುವೆನ್ ಸಭೆಯಲ್ಲಿ "ವಿಶ್ವ ಸಂಸ್ಥೆಯ ನಿರ್ಣಯಗಳನ್ನು ರಾಷ್ಟ್ರ ಜೀವನದಲ್ಲಿ ಕಾರ್ಯರೂಪದಲ್ಲಿ ತರುವಂತೆ ಒಪ್ಪಂದ ಒಡಂಬಡಿಕೆಗಳನ್ನು ತಮ್ಮ ಸರಕಾರಗಳು ಮನ್ನಿಸುವಂತೆ ವಿಶ್ವದ ಸಕಲ ಧಾರ್ಮಿಕ ಸಂಸ್ಥೆಗಳು ತಮ್ಮ ಸರಕಾರಗಳ ಮೇಲೆ ಒತ್ತಾಯ ತಂದು ರಾಷ್ಟ್ರದ ತಮ್ಮ ಅನುಯಾಯಿಗಳನ್ನು ಜಾಗೃತಗೊಳಿಸಿ, ವಿಶ್ವಶಾಂತಿಗೆ ಸಹಕಾರ ನೀಡಬೇಕೆಂಬುದೇ ಮುಖ್ಯ ಸಂದೇಶವಾಗಿತ್ತು. ಧರ್ಮ ಮತ್ತು ಜೀವನದ ಗುಣಮಟ್ಟ, ನಿಶ್ಶಸ್ತ್ರೀಕರಣ ಹಾಗು ರಕ್ಷಣೆ, ಆರ್ಥಿಕ ಉನ್ನತಿ; ಮಾನವನ ಸ್ವತಂತ್ರತೆಯು ಮುಖ್ಯ ಮೌಲ್ಯಗಳು ಈ ವಿಷಯಗಳ ಬಗ್ಗೆ ಸುದೀರ್ಘ ವಿಚಾರ ವಿನಿಮಯ ಮಾಡಿ ಮಾನವ ಕಲ್ಯಾಣವನ್ನು ಸಾಧಿಸುವದೇ ಮುಖ್ಯ ಗುರಿಯಾಗಿತ್ತು.

ಈ ಸಮ್ಮೇಳನದಲ್ಲಿ ಭಾಗವಹಿಸಿದ ಬಗೆಗೆ ನಿಮಗೇನೆನಿಸುತ್ತದೆ?

ವಿಶ್ವದ ಅನೇಕ ರಾಷ್ಟ್ರಗಳ ಅನೇಕ ಧಾರ್ಮಿಕ ಮುಖಂಡರು ಒಂದೆಡೆ ಕೂಡಿಕೊಂಡು ವಿಚಾರ ವಿನಿಮಯ ಮಾಡಿ ರಾಜಕೀಯದಿಂದ ಕಲುಷಿತವಾತಾವರಣ ಬೆಳೆಯದಂತೆ ಮಾಡಲು ಮತ್ತು ವಿಶ್ವದಲ್ಲಿ ಶಾಂತಿಯನ್ನು ಪ್ರತಿಷ್ಠಾಪಿಸಲು ಈ ಸಮ್ಮೇಳನವು ಉತ್ತಮ ವೇದಿಕೆಯಾಗಿತ್ತೆಂಬುದು ನಮ್ಮ ಅಭಿಪ್ರಾಯ. ಮೇಲಿಂದ ಮೇಲೆ ಈ ರೀತಿ ಪರಸ್ಪರ ವಿಚಾರ ವಿನಿಮಯ ಮಾಡಿ ಕಾರ್ಯ ಪ್ರವೃತ್ತರಾದರೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಹಾಯವಾದೀತು. ಇದರಿಂದ ದ್ವೇಷಾಸೂಯೆಗಳು ನಷ್ಟವಾಗುವವು. ರಾಷ್ಟ್ರರಾಷ್ಟ್ರಗಳಲ್ಲಿರುವ ಅಂತಃಕಲಹಗಳು ದೂರಾಗಬಹುದು. ಭಾವೈಕ್ಯವನ್ನು ಸಾಧಿಸಲು ಇದೊಂದು ದೊಡ್ಡ ಸಾಧನ.

ಹಿಂದು ಧರ್ಮದ ಬಗೆಗೆ ಅಲ್ಲಿ ತಿಳುವಳಿಕೆ ಹೆಚ್ಚಿಸಲು ಸಾಧ್ಯವಾಯಿತೆ?

ಹಲ ಕೆಲವು ಸಂದರ್ಭಗಳಲ್ಲಿ ನಾವು ಹಿಂದು ಧರ್ಮದ ಮಹತಿಯನ್ನು ಪ್ರಸ್ತಾಪಿಸಿದೆವು. ಆದರೆ ಈ ಸಮ್ಮೇಳನವು ಕೇವಲ ಒಂದೇ ಧರ್ಮದ ವಿಚಾರವನ್ನು ಪ್ರಸ್ತಾಪಿಸತಕ್ಕ ವೇದಿಕೆಯಾಗಿದ್ದಿಲ್ಲ. ಮತ್ತು ಈ ಸಮ್ಮೇಲನದಲ್ಲಿ ವಿಶ್ವಬಾಂಧವ್ಯ ಮಾನವ ಕುಲದ ಕಲ್ಯಾಣ ಇವೇ ಮುಖ್ಯ ವಿಷಯಗಳಾಗಿದ್ದರೂ ಪ್ರಾಸಂಗಿಕವಾಗಿ ಹಿಂದುಧರ್ಮದ ಮುಖಾಂತರ ವಿಶ್ವಶಾಂತಿ ಸಾಧ್ಯವೆಂದು ಹೇಳಿದೆವಲ್ಲದೆ, ಜೊತೆಗೆ ಸಕಲರಿಗೂ ಲೇಸನೆ ಬಯಸುವ ವೀರಶೈವ ಧರ್ಮದ ವಿಶಾಲತೆಯನ್ನೂ ವಿವರಿಸಿದೆವು.

ಭಾರತೀಯ ಸಂಸ್ಕೃತಿಯ ಪರಂಪರೆ ಹಾಗು ಧಾರ್ಮಿಕ—ಹಿನ್ನೆಲೆಗಳನ್ನು ಅರಿಕೆ ಮಾಡಲು ಸಾಧ್ಯವಾಯಿತೆ?

Religion and Population. (ಧರ್ಮ ಮತ್ತು ಜನಸಂಖ್ಯೆ) ಈ ವಿಷಯದ ಚರ್ಚೆ ನಡೆದಾಗ ಭಾರತೀಯ ವಿಚಾರಗಳನ್ನು ಸ್ಪಷ್ಟಪಡಿಸಿದೆವು. ಜನಸಂಖ್ಯೆ ಹೆಚ್ಚದಿರಲು ಭಾರತೀಯ ಸಂಸ್ಕೃತಿಯ ಪ್ರಕಾರ ಆತ್ಮ ಸಂಯಮವೇ ಮುಖ್ಯ ಕಾರಕವೆಂದು ಪ್ರತಿಪಾದಿಸಿದೆವು. ಇದರಷ್ಟು ಹಿತಕಾರಿ ಮತ್ತೊಂದಿಲ್ಲ. ಭಾರತೀಯ ಸಂಸ್ಕೃತಿಯನ್ನು ಧರ್ಮದ ನಡುವಳಿಕೆಯನ್ನು ಅರ್ಥ ಮಾಡಿಕೊಂಡು, ಅದರಂತೆ ಮನಃಪೂರ್ವಕವಾಗಿ ಕೃತಿಯಲ್ಲಿಳಿಸಿದರೆ, ಮಾನವ ಜನಾಂಗವನ್ನೇ ಎಚ್ಚರಿಸುವ ಮಹಾಶಕ್ತಿಯಿದೆ ಎಂದು ತಿಳಿಸಿದೆವು.

ನಿಮ್ಮ ಪೂಜೆ ಪುನಸ್ಕಾರ ನಿತ್ಯವಿಧಿ ನಿಯಮಗಳನ್ನು ಅನುಸರಿಸಲು ಯೋಗ್ಯವಾದ ಅವಕಾಶಗಳು ಲಭ್ಯವಾದವೆ?

ನಮ್ಮ ವಿದೇಶಗಳ ಪ್ರವಾಸದಲ್ಲಿ, ನಮ್ಮ ನಿತ್ಯ ನಿಯಮ ಪೂಜಾದಿಗಳಿಗೆ ಯಾವ ಆತಂಕವೂ ಬರಲಿಲ್ಲ. ನಮಗಾಗಿ ಒಂದು ರೂಮು ಪ್ರತ್ಯೇಕವಿರುತ್ತಿದ್ದರಿಂದ ನಮ್ಮ ಪೂಜೆಗೆ ಅನುಕೂಲವಾಗುತ್ತಿತ್ತು. ಲ್ಯುವೆನ್‌ದಲ್ಲಿಯಂತೂ ವಿಶ್ವಶಾಂತಿ ಸಮ್ಮೇಳನದವರೇ ವ್ಯವಸ್ಥೆ ಮಾಡಿದ್ದರು. ಇನ್ನುಳಿದ ರಾಷ್ಟ್ರಗಳಲ್ಲಿ, ಆ ಆ ರಾಷ್ಟ್ರದ ಭಾರತದ ರಾಯಭಾರಿಗಳು ಸರ್ವರೀತಿಯಿಂದಲೂ ವ್ಯವಸ್ಥೆ ಮಾಡಿದ್ದರಲ್ಲದೆ, ಮತ್ತೊಂದು ರಾಷ್ಟ್ರಕ್ಕೆ ವಿಮಾನ ಹತ್ತುವವರೆಗೂ ನಮ್ಮ ಜತೆಯಲ್ಲಿದ್ದು ಆ ದೇಶದ ಬಗ್ಗೆ ವಿವರಿಸುತ್ತಿದ್ದರು. ಒಟ್ಟಿನಲ್ಲಿ ಎಲ್ಲಿಯೂ ನಮ್ಮ ಪೂಜೆಗೆ ಚ್ಯುತಿ ಬರಲಿಲ್ಲ. ಪ್ರವಾಸದಲ್ಲಿ ಹಣ್ಣು, ಹಾಲು ಇದರ ಮೇಲಿನಿಂದ ನಮ್ಮ ಜೀವನ ಸಾಗುತ್ತಿತ್ತು.

ಭಾರತೀಯ ಧರ್ಮಗುರುಗಳ ಬಗೆಗೆ ನೀವು ಪ್ರವಾಸ ಮಾಡಿದ ರಾಷ್ಟ್ರಗಳ ಜನತೆ ಯಾವ ಬಗೆಯ ಪ್ರತಿಕ್ರಿಯೆಯನ್ನು ತೋರಿದರು?

ನಮಗೆ ತಿಳಿದ ಹಾಗೆ ಭಾರತೀಯ ಧರ್ಮಗುರುಗಳ ಬಗೆಗೆ ಒಳ್ಳೇ ಸದ್ಭಾವನೆಯನ್ನು ತೋರಿಸುತ್ತಿದ್ದರು. ನಮ್ಮೊಡನೆ ಅನೇಕ ವಿಷಯಗಳ ಬಗೆಗೆ ಪ್ರಸ್ತಾಪ ಮಾಡುತಿದ್ದರು. ಭಾರತೀಯ ಸಂಸ್ಕೃತಿಯ ಬಗ್ಗೆಯೂ ತುಂಬಾ ಮೆಚ್ಚುಗೆಯನ್ನು ವ್ಯಕ್ತ ಮಾಡುತ್ತಿದ್ದರು. ಭಾರತೀಯ ವಿವಾಹ ಪದ್ಧತಿಯು ಉತ್ತಮವಾದುದೆಂದು ಪ್ರಶಂಸಿಸುತ್ತಿದ್ದರು. ಮಹಾತ್ಮಾ ಗಾಂಧಿಯವರ ಅಹಿಂಸಾ ಮಾರ್ಗವು ಕೆಲವರಿಗೆ ತುಂಬಾ ಹಿಡಿಸಿತ್ತು. ಮತ್ತೆ ಕೆಲವರು ಅಹಿಂಸೆಯೆಂದೆನ್ನುತ್ತ ಕುಳಿತರೆ ರಾಷ್ಟ್ರೋದ್ಧಾರವೆಂತು? ಅನ್ನುವವರೂ ಇದ್ದರು. ಭಾರತೀಯರ ಆಧ್ಯಾತ್ಮಿಕತೆಯನ್ನು ಮೆಚ್ಚಿಕೊಂಡವರೂ ಇದ್ದರು. ಭಾರತದ ಮಹರ್ಷಿ ಮಹೇಶಯೋಗಿಗಳು ನಡೆಸುತ್ತಿರುವ ಸಹಸ್ರಾರು ಧ್ಯಾನಯೋಗದ ಕೇಂದ್ರಗಳೇ ಇದಕ್ಕೆ ಸಾಕ್ಷಿ. ಯುರೋಪಖಂಡದ 5 ಲಕ್ಷಕ್ಕಿಂತ ಹೆಚ್ಚು ಜನ ಸುಶಿಕ್ಷಿತರಿಗೆ ಧ್ಯಾನಯೋಗದ ಮಹಿಮೆಯನ್ನು ತಿಳಿಸಿ ಹಿಂದು ಸಂಸ್ಕೃತಿಯ ಹಿರಿಮೆಯನ್ನು ಹೆಚ್ಚಿಸುತ್ತಿರುವದು ಕಂಡು ನಮಗೆ ಅತೀವ ಆನಂದವನ್ನುಂಟು ಮಾಡಿತು. ಅಜಮಾಸು 20–25 ರಾಷ್ಟ್ರಗಳಲ್ಲಿ ಇವರ ಧ್ಯಾನಯೋಗ ಶಕ್ತಿಗೆ ಆಕರ್ಷಿತರಾಗಿದ್ದಾರೆಂದು ಸ್ವಿಝರ್ಲಂಡದಲ್ಲಿರುವ ಅರೋಜಾದ ಅವರ ಶಿಷ್ಯರು ಹೇಳಿದರು. ಇದರ ಮೇಲಿಂದ ಭಾರತೀಯ ಸಂಸ್ಕೃತಿಯು ಅವರಿಗೆ ಅಚ್ಚು ಮೆಚ್ಚಿನದಾಗಿದೆನ್ನಬಹುದು.

ಅಲ್ಲಿಯ ಜನರು ಸಾತ್ವಿಕರೆ? ಜನಜೀವನ ಹೇಗಿದ್ದಿತು?

ವಿದೇಶಿಯರಲ್ಲಿ ಸಾತ್ವಿಕತೆಗಿಂತ ಸಾಹಸಪ್ರಿಯತೆ ಹೆಚ್ಚು ಕಂಡು ಬರುತ್ತಿತ್ತು. ಅದಕ್ಕೆ ಆಹಾರವೂ ಕಾರಣವಾಗಿರಬಹುದು. ಅವರ ಸಭ್ಯತೆ, ಪ್ರಾಮಾಣಿಕತೆ, ಅತಿಥಿಸತ್ಕಾರಪ್ರಿಯತೆಗಳು ಎದ್ದು ಕಾಣುತ್ತಿದ್ದವು. ನಾವು ವಿದೇಶೀಯರಲ್ಲಿ ಮೆಚ್ಚಿದ ಗುಣಗಳೆಂದರೆ ಅವರ ರಾಷ್ಟ್ರಾಭಿಮಾನ, ಭಾಷಾಭಿಮಾನ, ಶಿಸ್ತು, ಕಲಾಭಿರುಚಿ, ವಿಮರ್ಶಾತ್ಮಕ ಬುದ್ಧಿ, ಹಾಗು ತಮ್ಮ ಜೀವನದಲ್ಲಿ ಶ್ರದ್ಧೆ, ವಿಶ್ವಾಸವಿಟ್ಟುಕೊಂಡು ವೈಜ್ಞಾನಿಕ ಪ್ರಗತಿಯಲ್ಲಿ ಮುಂದಾಗಿದ್ದಾರೆ, "ಕಾಯಕವೇ ಕೈಲಾಸ" ಈ ನುಡಿಯ ನಡೆ ವಿದೇಶಗಳಲ್ಲಿಯೆ ಹೆಚ್ಚಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಭಾರತದ ವಿವಾಹ ಪದ್ಧತಿಯು ಅಲ್ಲಿ ಕಾಣುವದು ವಿರಳ. ಭಾರತೀಯ ಸಂಸ್ಕೃತಿಯನ್ನು ಅವರು ಮೆಚ್ಚಿಕೊಂಡಂತೆ ನಾವೆಷ್ಟು ಮೆಚ್ಚಿಕೊಂಡು ಕೃತಿಗಿಳಿಸಿದ್ದೇವೆಂಬುದು ತಿಳಿಸಲು ಕಠಿಣವಾಗುತ್ತದೆ. ಅವರ ಆ ರಾಷ್ಟ್ರಾಭಿಮಾನ, ಆ ಪ್ರಾಮಾಣಿಕತೆ ಇನ್ನೆಂದು ಇಲ್ಲಿಗೆ ಬರುವದೋ? ಕಾದು ನೋಡಬೇಕು.

ವಿದೇಶಗಳಲ್ಲಿ ಧಾರ್ಮಿಕ ಭಾವನೆಗಳು ತೀವ್ರವಾಗಿವೆಯೆ?

ವಿದೇಶಗಳಲ್ಲಿ ಧಾರ್ಮಿಕ ಶ್ರದ್ಧೆ ಇದೆ ಎಂಬುದು ಗೋಚರವಾಗುತ್ತಿತ್ತು. ಆದರೆ ಇಲ್ಲಿಯ ಮಡಿವಂತಿಕೆ ಅಲ್ಲಿ ಕಂಡು ಬರುತ್ತಿದ್ದಿಲ್ಲ. ಪೂಜಾವಿಧಾನ, ಮುಂತಾದವುಗಳನ್ನು ಹೇಳಿದರೆ ಆಶ್ಚರ್ಯದಿಂದ ಕೇಳುತ್ತಿದ್ದರು ಉತ್ಸುಕರಾಗುತ್ತಿದ್ದರು.

ಭಾರತೀಯರು, ಭಾರತೀಯ ಸಂಸ್ಕೃತಿಯ ಬಗೆಗೆ ನಿಮಗೆ ಕಂಡುಬಂದ ಪ್ರತಿಕ್ರಿಯೆ?

ಭಾರತೀಯರು ಭಾರತೀಯ ಸಂಸ್ಕೃತಿಯ ಬಗೆಗೆ ಬೇಕಾದಷ್ಟು ತತ್ವ ಪೂರ್ಣವಾಗಿ ಹೇಳುತ್ತಾರೆ. ಆದರೆ ಕೃತಿ ಮಾತ್ರ ಶೂನ್ಯವೆಂಬಂತೆ ಕಾಣುತ್ತದೆ. ಭಾರತಕ್ಕೆ ಇದೀಗ ಬೇಕಾಗಿರುವದು ತತ್ವಬೋಧನೆಗಿಂತಲೂ, ಕೃತಿಯು (ಆಚರಣೆಯು) ಅವಶ್ಯಕವಾಗಿದೆ. ವಿದೇಶಿಯರ ಪ್ರಾಮಾಣಿಕತೆ, ರಾಷ್ಟ್ರಾಭಿಮಾನ ಅವಶ್ಯ ಬೇಕೆನಿಸುತ್ತದೆ.

ಭೌದ್ಧಿಕ ವಾದವನ್ನು ಧಾರ್ಮಿಕ ಜಾಗೃತಿಯಿಂದ ಗೆಲ್ಲಬಹುದೆಂದು ನಿಮಗೆನಿಸಿತೆ?

ಭೌತಿಕವಾದವನ್ನು ಧಾರ್ಮಿಕ ಜಾಗೃತಿಯಿಂದ ಗೆಲ್ಲುವ ಬದಲು ಭೌತಿಕತೆ, ಹಾಗು ಧಾರ್ಮಿಕತೆ ಇವೆರಡನ್ನೂ ಪರಸ್ಪರ ಸಮನ್ವಯ ದೃಷ್ಟಿಯಲ್ಲಿ ಕಂಡು, ಕಾರ್ಯರೂಪದಲ್ಲಿ ತಂದರೆ ವಿಶ್ವಶಾಂತಿ ಸಾಧ್ಯ. ಒಂದು ಬಿಟ್ಟು ಒಂದು ಅಸಾಧ್ಯ. ಭೌತಿಕ ಪ್ರಗತಿ ಹಾಗು ಆತ್ಮಿಕ ಪ್ರಗತಿ ಎರಡೂ ಪೂರಕವಾಗಿರಬೇಕು. ಇದೀಗ ವಿದೇಶದಲ್ಲಿ ಭೌತಿಕ ಪ್ರಗತಿ ಹೆಚ್ಚಾಗಿದ್ದರಿಂದ ಕೇವಲ ಅದರಿಂದ ಶಾಂತಿ ಸಿಗಲಾರದೆಂದು ತಿಳಿದಿದ್ದರಿಂದ ಧರ್ಮದತ್ತ ಮನವೆಳಸುತ್ತಿದ್ದಾರೆ. ವಿದೇಶಗಳಲ್ಲಿ ನಾವು ಸಂಚರಿಸಿದ ಕಡೆ, "ನಿಮಗೆ ಯೋಗಸಾಧನೆಯು ಗೊತ್ತಿದೆಯೆ? ಧ್ಯಾನದ ಅವಸ್ಥೆಗಳು ಏನು? ಧ್ಯಾನದಿಂದ ಶಾಂತಿ ಸಿಕ್ಕೀತೇ? ಆನಂದದ ಮೂಲ ಬೇರು ಧ್ಯಾನಯೋಗವೆ? ಹೇಗೆ?" ಇವೇ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ನಮ್ಮ ಹತ್ತರ ಬಂದಾಗ ಕೇಳುತ್ತಿದ್ದರು.

ನಮಗಿಂದು ಭೌತಿಕ ಪ್ರಗತಿಯೂ ಬೇಕು. ಆತ್ಮಿಕ ಪ್ರಗತಿಯೂ ಬೇಕು. ಒಂದು ಬಿಟ್ಟು ಒಂದು ಬೆಳೆಸಿದರೆ ರಾಷ್ಟ್ರವು ಬೆಳೆಯಲಾರದು.

"ಪ್ರತಿಯೊಬ್ಬನೂ ತನ್ನ ಆಧ್ಯಾತ್ಮಿಕ ಸಂಸ್ಕೃತಿ ಹಾಗು ಸ್ಥಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಮಾನವ ಜನಾಂಗಕ್ಕೆ ಸೇವೆ ಸಲ್ಲಿಸಬೇಕು. ಶಾಂತಿಯು ಈಗ ಸ್ವೇಚ್ಛೆಯಂತೆ ಪುರಸ್ಕರಿಸಬಹುದಾದ ಅಥವಾ ತಿರಸ್ಕರಿಸಬಹುದಾದ ಆದರ್ಶವಾಗಿ ಉಳಿದಿಲ್ಲ. ಮಾನವನು ಇಂದು ತಾರಾಮಂಡಲವನ್ನೇ ಉಧ್ವಸ್ತಗೊಳಿಸಬಲ್ಲ ಅಪಾರ ಶಕ್ತಿ ಸಂಪಾದಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಶಾಂತಿಯು ಅತ್ಯಗತ್ಯದ ವ್ಯಾವಹಾರಿಕ ಅವಶ್ಯಕತೆ ಆಗಿದೆ. ಆದ್ದರಿಂದ ಯುದ್ಧ ನಿರ್ಮೂಲನಕ್ಕಾಗಿ ದುಡಿಯಲು ಪ್ರತಿಜ್ಞಾಬದ್ಧರಾಗಿರಬೇಕು. ನಾವು ಧ್ಯಾನ ಪ್ರಾರ್ಥನೆಗಳತ್ತ ಹೊರಳಿದರೆ ನಮ್ಮಲ್ಲಿ ಹೃದಯ ಪರಿವರ್ತನೆಯಾಗಿ ತ್ಯಾಗ, ನಮ್ರತೆ, ಆತ್ಮಸಂಯಮಾದಿಗಳು ಬೆಳೆದು ಬರುತ್ತವೆ. ತತ್ಪರಿಣಾಮವಾಗಿ ನ್ಯಾಯ ಅಭಿವೃದ್ಧಿ ವಿಮುಕ್ತಿ ಶಾಂತಿಗಳು" ಲ್ಯುವೆನ್ ಪರಿಷತ್ತಿನಲ್ಲಿ ಚರ್ಚಿಸಿದ ಈ ವಿಚಾರಗಳು ನಮ್ಮೆಲ್ಲರನ್ನೂ ಜಾಗೃತಗೊಳಿಸಿ ವಿಶ್ವಶಾಂತಿಯ ಕಡೆಗೆ ಕರೆದೊಯ್ಯಲೆಂಬುದೇ ನಮ್ಮ ಹೃದಯದ ಹಾರೈಕೆ. ●

ವೈಕುಂಠಕೆ ಹೋಗುವೆನು

ತುಕಾರಾಮನ ಪಾತ್ರಧಾರಿ
ನಾಟಕದಲಿ

ತಾನು ವೈಕುಂಠಕೆ
ಹೋಗುವೆನು ಎನಲು

ಎಷ್ಟು ಜನ ತನ್ನೊಡನೆ
ಬರುವಿರಿ ಎಂದು ಕೇಳಲು

ಮೈಮರೆತು ಹೇಳಿದರು
ನಾವೆಲ್ಲ ಎಂದು!

– ಗುಂಡ್ಮಿ, ಚಂದ್ರಶೇಖರ ಐತಾಳ



ದೀಪಾವಳಿಯು ಸರ್ವರಿಗೂ ಶುಭವನ್ನೀಯಲಿ !

೩೫ ವರುಷಗಳಿಂದ ಪತ್ರಿಕೋದ್ಯಮದಲ್ಲಿ ಹಿರಿದಾದುದು

ಭಾರತ ಬುಕ್ ಡಿಪೋ ಮತ್ತು ಪ್ರಕಾಶನ

ಸುಭಾಸ ರೋಡ, ಧಾರವಾಡ ೫೮೦೦೦೧

ಶಾಲೆ ಕಾಲೇಜುಗಳಿಗೆ, ವಾಚನಾಲಯಗಳಿಗೆ ಬೃಹತ್ ಪ್ರಮಾಣದಲ್ಲಿ ಪೂರೈಸಬಹುದಾದ ಪುಸ್ತಕ ಮಾರಾಟದ ಮಳಿಗೆ

೨೨ ವರುಷಗಳಿಂದಲೂ ಪ್ರಖ್ಯಾತಿ

ಮ್ಯಾಗಝಿನ್ ಪಬ್ಲಿಕೇಶನ್

ಚಂದ್ರಸದನ, ಸ್ಟೇಶನ್ ರೋಡ, ಧಾರವಾಡ—೫೮೦೦೦೧

ಕರ್ನಾಟಕದ ವಿದ್ಯಾರ್ಥಿಗಳಿಗೆ ಅತ್ಯಂತ ಮಾರ್ಗದರ್ಶಿಯಾದ ಹಾಗೂ ಅತ್ಯಧಿಕ ಪ್ರಸಾರದಲ್ಲಿಯ ಶೈಕ್ಷಣಿಕ ಮಾಸಪತ್ರಿಕೆಗಳು

★ ಎಸ್. ಎಸ್. ಸಿ. ಮ್ಯಾಗಝಿನ್
★ ಮುಲ್ಕೀ ಮ್ಯಾಗಝಿನ್
★ ಕಾಲೇಜ ಮ್ಯಾಗಝಿನ್

೧೦ ವರ್ಷಗಳಿಂದ ಉತ್ತರಕರ್ನಾಟಕದಲ್ಲಿ ಏಕೈಕ ಆಧುನಿಕ ವರ್ಣ ಮುದ್ರಣ ಕೇಂದ್ರ

ಭಾರತ ಪ್ರಿಂಟಿಂಗ ಪ್ರೆಸ್

ಹಾಗೂ

ಫೋಟೋ ಆಫ್‌ಸೆಟ್ ವರ್ಕ್ಸ

ಚಂದ್ರಸದನ, ಸ್ಟೇಶನ್ ರೋಡ್, ಧಾರವಾಡ ೫೮೦೦೦೧

ಸಾ ವ ಧಾ ನ

ಇಂದಿಲ್ಲ ?
ನಾಳೆ, ನಾಡಿದ್ದು,
ನೂರು ವರ್ಷ, ಸಹಸ್ರ,
ದಶಲಕ್ಷ, ದಶಕೋಟಿ.
ಇಂದಿಗೇ ಎಂಬ ಹಟವಿಲ್ಲ,
ಯಾವ ಆಟವಂಟವಿಲ್ಲ.
ಎಂದು ಮನ–ಮನೆ ತುಂಬಿತೋ
ಅಂದು ಓವರ್ ಎಂಬೆ
ಸಾಕ್ಷಾತ್ಕಾರವಾದಂದು ಸಾಕ್ಷಾತ್ಕರಿಸಿಕೊಂಬೆ
ಮುಕ್ತಿ ಬಳಿಸಾರಿದ ದಿನ, ಬಾ ಎಂಬೆ,
ಇಲ್ಲಿ ಯಾವ ಗಲಾಟೆ, ಯಾವ ಗಡಿಬಿಡಿಯಿಲ್ಲ,

ನಾನಲ್ಲ ಶೂನ್ಯ, ನಾನಲ್ಲ ಪೂರ್ಣ.
ಅಂಕಿಯೊಳಗೊಂದಂಕಿ, ಬೆಂಕಿಯೊಳಗೊಂದು ಕಿಡಿ,
ಇದಕಾವ ಶೂನ್ಯ ಬಂದು ಸಲುವದೊ?
ಇದೆಂದು ಪೂರ್ಣವಾಗುವದೊ?

ಎನಗೇಕೆ ಆ ಚಿಂತೆ ?
ಬಂದುದಕೆ ಸೇರಿತಧಿಕ,
ಬೆಳೆಯಿತು ಗುಣಾಕಾರ,
ಈಗ ಬರುತಿರುವದಂತೆ,
ಮುಂದೆ ಭಾಗಾಕಾರ.
ಯಾ ದೈವ ಬಂದು ತಾಗುವದೊ?
ಇನ್ನೇನೇನಾಗುವದೊ?
ಕಂಡವರಾರು ?
ಅದಕೆಲ್ಲ ನಾ ಸಿದ್ಧ,
ಅದಕೆಲ್ಲ ಬದ್ಧ

ಎಂದು ಮನ–ಮನೆ ತುಂಬಿತೋ
ಅಂದು ಓವರ್ ಎಂಬೆ.
ಸಾಕ್ಷಾತ್ಕಾರವಾದಂದು ಸಾಕ್ಷಾತ್ಕರಿಸಿಕೊಂಬೆ,
ಮುಕ್ತಿ ಬಳಿ ಸಾರಿದ ದಿನ, ಬಾ ಎಂಬೆ.
ಇಲ್ಲಿ ಯಾವ ಗಲಾಟೆ, ಯಾವ ಗಡಿಬಿಡಿಯಿಲ್ಲ

— ಪಿನಾಯುಳ

ಹೆಗ್ಗಳಿಕೆ

ಪರೋಪದೇಶದ ಅಗ್ಗಳಿಕೆ
ನಮಗೆಲ್ಲ ಹೆಗ್ಗಳಿಕೆ!

ಭಯವಿಲ್ಲ ಜೀವಕ್ಕೆ–
ಧಮನಿಯೊಳಗಣ ರಕುತ ಹೆಪ್ಪುಗಟ್ಟುವತನಕ
ಕೊರೆವ ಕುತಂತ್ರ, ಗಣತಂತ್ರ, ಮುಖಜಾಡ್ಯದಲಿ
ನರಮುಂಜ ನರಳುತಿವೆ ಕೆಂಜೋಳಕ.
ಜನನಾಯಕರ ನಾಲಗೆಯು ನಂಜಿನಜೇನು
ಸುರಿಸುತಿವೆ–ನಾತಿನಮೃತವನು.

× × ×

ಹೊಸಗಾಳಿಗೂಳಿ
ಸಿಕ್ಕಿದ ಹೊಲಹೊಕ್ಕು ಮೆಯ್ದು ಉಂಡಮನೆಗಳದೇಕೆ!
ಬಹುಮಂತದ ಬಲದ ಹೆಡಮುರಿಗೆಯಲಿ
ಅಬಲರನು ಆಳುವ ಹೊಲಬರಸುತನ!
ಇರುವೆ ನಂಬಿರಲಿಲ್ಲ: ಹಾವು ಹುತ್ತವುತ್ತುವದೆಂದು
ಹುಲ್ಲು ಹುಟ್ಟುವು ಪೆಟ್ಟಲಿಪುನರಿ?

— ರಾಘವೇಂದ್ರ


ಸುವರ್ಣ ಕುಂಭ
ನಿಮ್ಮ ಆದಾಯದ ಕೆಲ ಭಾಗ ಅಂದರೆ ಕನಿಷ್ಟ ಶೇ. 10 ರಷ್ಟು ನಿಯಮಿತವಾಗಿ ಉಳಿತಾಯಮಾಡಿರಿ. ನಿಮ್ಮ ಉಳಿತಾಯಗಳು ಎಷ್ಟು ಶೀಘ್ರ ಬೆಳೆದು ಬಂದಿವೆ ಎಂಬುದು ನಿಮಗೇ ಅಚ್ಚರಿ. ಬಡ್ಡಿಯು ಮೊಬಲಗು ಕೂಡಿ ಅವು ಬೆಳೆದು "ಸುವರ್ಣಕುಂಭ"ಗಳಾಗುತ್ತವೆ.
ನಮ್ಮ ಮಾಸಿಕ ಇನ್‌ಕಮ್ ಸರ್ಟಿಫಿಕೇಟ್ಸ ವ ರಿಕರಿಂಗ್ ಡಿಪಾಜಿಟ್ ಇವುಗಳ ಸಂಯುಕ್ತ ಯೋಜನೆಯಲ್ಲಿ ಸಾಲಿಯಾನ್ ಶೇಕಡಾ 17 ಕ್ಕೂ ಮಿಕ್ಕಿಬಹುದೊಡ್ಡ ಮೊತ್ತದ ಬಡ್ಡಿ ದೊರೆಯುತ್ತದೆ.
ಬ್ಯಾಂಕ ಆಫ್ ಇಂಡಿಯಾ
ವಿವರ ನಿಮ್ಮ ಸಮೀಪದ ಶಾಖಾ ಕಚೇರಿಯಲ್ಲಿ ಲಭ್ಯ

"ನಾವೂ ಒಂದು. ನಮ್ಮ ವೃತ್ತಿಯೂ ಒಂದು"

ಒಂದು ಸಮೀಕ್ಷೆ

ಎಸ್. ವಿ. ಪಾಟೀಲ

ಗಂಡ-ಹೆಂಡತಿ ಇಬ್ಬರೂ ಇಂದು ಸೇವೆ, ಉದ್ಯೋಗ, ನೌಕರಿಯಲ್ಲಿ ತೊಡಗಬೇಕಾದ ಅನಿವಾರ್ಯವಾದ ಪರಿಸ್ಥಿತಿ ಪ್ರಾಪ್ತವಾಗಿದೆ. ಶ್ರೀಮಂತ ವರ್ಗದವರಿಗೆ ಇದು ಅವಶ್ಯಕತೆ ಎನಿಸದೇ, ಅನಿವಾರ್ಯವೆಂದೆನಿಸದೇ ಇರಬಹುದು. ಹೆಚ್ಚು ಸಂಬಳ ತರುವ ಗಂಡಂದಿರಿರುವಾಗಲೂ ಈ ಪ್ರಶ್ನೆ ತಲೆದೋರಲಿಕ್ಕಿಲ್ಲ. ಅಂಥವರು ನೌಕರಿ ಮಾಡುವುದೇ ಆದಲ್ಲಿ ಅದೊಂದು ಹವ್ಯಾಸವೆನಿಸಬಹುದು; ಇಲ್ಲವೇ ಹೆಚ್ಚಿನ ವಿಲಾಸಿ ಜೀವನಕ್ಕೆ ಆಸ್ಪದ ದೊರೆವುದು ಎಂದಿರಬಹುದು: ಇದಕ್ಕೆ ಮಿಗಿಲಾಗಿ ಸಮಯ ಹೋಗುವುದಿಲ್ಲ; ಸುಮ್ಮನೇ ಕುಳಿತು ಮಾಡುವದೇನು ಎಂದೂ ಅವರು ಈ ರೀತಿ ಉದ್ಯೋಗದಲ್ಲಿ ತೊಡಗಬಹುದು. ಅಂಥವರ ಸಂಖ್ಯೆಯೇನೂ ಕಡಿಮೆ. ಅನಿವಾರ್ಯವಾದ ಅವಶ್ಯಕತೆಯೆಂದು ಇಂದು ಗೃಹಿಣಿಯರು ದುಡಿಮೆಗೆ ಇಳಿಯುವುದು ಹೆಚ್ಚಾಗಿರುವುದು. ಅವರು ನೌಕರಿಯನ್ನು ಮಾಡುವರು, ಆದರೆ ತಮಗೆ ಅನುಕೂಲವಾದ ವೃತ್ತಿಯನ್ನು ಆಯ್ದುಕೊಳ್ಳುವರು. ಶಿಕ್ಷಕ, ದಾಯಿಯರಾಗಲು ಇಷ್ಟಪಡುವವರು ಹೆಚ್ಚು. ಬ್ಯಾಂಕುಗಳು, ಅರೆ ಸರಕಾರಿ ಸಂಸ್ಥೆಗಳಲ್ಲಿಯೂ ಈಗ ಅಧಿಕ ಸಂಖ್ಯೆಯಲ್ಲಿ ಗೃಹಿಣಿಯರು ಬಂದಿರುವರು. ಅನೇಕರು ಅಧಿಕಾರಿ ಹುದ್ದೆಗಳನ್ನು ನಿರ್ವಹಿಸುತ್ತಿರುವರು. ಹೀಗಿದ್ದರೂ ಗಂಡ-ಹೆಂಡತಿಯರು ಒಂದೇ ವೃತ್ತಿಯಲ್ಲಿ ತೊಡಗಿರುವುದು ಅಪರೂಪ; ಒಂದೇ ಆಫೀಸಿನಲ್ಲಿ ಇರುವದು ಇನ್ನೂ ಅಪರೂಪ. ಇಂಥ ಪ್ರಸಂಗಗಳು ಅಪವಾದಾತ್ಮಕವಾಗಿ ಕಂಡುಬರುತ್ತವೆ.

ಒಂದೇ ವೃತ್ತಿಯಲ್ಲಿ ತೊಡಗಿದವರಲ್ಲಿ ವೈದ್ಯಕೀಯ, ಶಿಕ್ಷಣ ರಂಗಗಳಲ್ಲಿ ಕೆಲಮಟ್ಟಿಗೆ ಹೆಚ್ಚಾಗಿ ಕಂಡುಬರುವರು. ಒಂದೇ ಆಫೀಸಿನಲ್ಲಿ, ಒಂದೇ ಸಂಸ್ಥೆಯಲ್ಲಿ ಅಲ್ಲದಿದ್ದರೂ ಬೇರೆ ಬೇರೆ ಬ್ಯಾಂಕುಗಳಲ್ಲಿ ಬೇರೆ ಬೇರೆ ಆಫೀಸುಗಳಲ್ಲಿ ತೊಡಗಿದವರೂ ಕೆಲಮಟ್ಟಿಗೆ ಸಿಕ್ಕುವರು. ಆದರೆ ಕಲಾವಿದ ದಂಪತಿಗಳು ದೊರೆಯುವುದು ವಿರಳ. ಪತಿ-ಪತ್ನಿಯರು ಸಂಗೀತಗಾರರಾಗಿರುವುದು, ನೃತ್ಯಗಾರರಾಗಿರುವ ಅತಿ ಕಡಿಮೆ ನಿದರ್ಶನಗಳು ಇವೆ. ಅದೇ ನಾಟ್ಯರಂಗದಲ್ಲಿ ದಂಪತಿಗಳು ಇರುವ ಉದಾಹರಣೆಗಳು ಸಿಗುತ್ತವೆ. ಇವರೆಲ್ಲರಿಗಿಂತ ಅತಿ ವಿರಳವೆಂದರೆ ವಕೀಲ ವೃತ್ತಿಯಲ್ಲಿ, ರಾಜಕಾರಣದಲ್ಲಿ ತೊಡಗಿದ ದಂಪತಿಗಳು. ಅದೇ ರೀತಿ ಸಮಾಜ ಸೇವೆಯಲ್ಲಿ ತೊಡಗಿದ. ದಂಪತಿಗಳ ಸಂಖ್ಯೆಯೂ ಕಡಿಮೆ. ಸಾಹಿತ್ಯವನ್ನು ಒಂದು ವೃತ್ತಿಯೆಂದು ಹೇಳಲಾಗದಿದ್ದರೂ ಹವ್ಯಾಸವೆನಿಸಿಯೂ ಇಬ್ಬರೂ ಈ ಬಗೆಯ ಹವ್ಯಾಸಕ್ಕೊಳಗಾಗಿರುವುದು ಕೆಲಮಟ್ಟಿಗೆ ಅಪರೂಪವೆಂದೇ ಹೇಳಬೇಕು. ಹೀಗೆ ಒಂದೇ ವೃತ್ತಿಯಲ್ಲಿ ತೊಡಗಿದ ದಂಪತಿಗಳು, ಇತರ ದಂಪತಿಗಳಿಗಿಂತ ಹೆಚ್ಚು ಸುಖಿಗಳೆ? ಅವರಿಗೆ ಪ್ರಯೋಜನಗಳು ಸಾಕಷ್ಟು ಲಭಿಸುವವೆ. ಅವರ ಜೀವನವು ಹೆಚ್ಚು ಸುಖಮಯವೆ? ಅವರಿಂದ ವೃತ್ತಿಗೆ, ಸಮಾಜಕ್ಕೆ, ಸಾಹಿತ್ಯಕ್ಕೆ ಹೆಚ್ಚಿನ ಸೇವೆ ಸಲ್ಲುವುದೆ? ಇಂಥ ದಾಂಪತ್ಯವನ್ನು ಅವರು ಇಷ್ಟಪಡುವರೆ? ಈ ಬಗೆಯ ಪ್ರಶ್ನೆಗಳನ್ನು ಅವರು ವಿಚಾರಿಸಿದ್ದಾರೆಯೆ? ಇದಕ್ಕೂ ಮುಖ್ಯವಾಗಿ ಈ ಬಗೆಯ ದಾಂಪತ್ಯದಿಂದ ಅವರಿಗೆ ಆಗಿರುವ ಅನುಕೂಲತೆಗಳು ಏನು? ಕೇವಲ ಆರ್ಥಿಕ ಅನುಕೂಲತೆಯೊಂದನ್ನು ಮಾತ್ರ ಅವರು ಪಡೆದಿದ್ದಾರೆಯೆ? ಇನ್ನಿತರ ಅನುಕೂಲತೆಗಳು ಅವರಿಗೆ ದೊರೆತಿದ್ದರೆ, ಅವು ಎಂಥವು? ಏನು? ಅವರು ಇದರಿಂದಾಗಿ ಅನುಭವಿಸುವ ಅನಾನುಕೂಲತೆಗಳಾವು? ಅವನ್ನು ನಿವಾರಿಸಿಕೊಳ್ಳಲು ಅವರಿಗೆಷ್ಟರಮಟ್ಟಿಗೆ ಸಾಧ್ಯವಾಗಿದೆ? ಗಂಡ-ಹೆಂಡಿರಿಬ್ಬರೂ ಒಂದೇ ವೃತ್ತಿಯಲ್ಲಿ ತೊಡಗಿರುವದರಿಂದ ಅನುಭವಿಸುತ್ತಿರುವ ತೊಂದರೆಗಳೇನು? ಯಾವ ಸ್ವರೂಪದವು? ಸಾಮಾನ್ಯವಾಗಿಯಾದರೂ ಬರಬಹುದಾದವೆ? ಒಂದೇ ವೃತ್ತಿಯಲ್ಲಿದ್ದುದರಿಂದಲೇ ಬಂದವೆ? ಈ ಮೊದಲಾಗಿ ಪ್ರಶ್ನೆಗಳಿಗೆ ಈ ಬಗೆಯಲ್ಲಿ ಒಂದೇ ವೃತ್ತಿಯಲ್ಲಿರುವ ದಂಪತಿಗಳು ಏನು ಹೇಳುತ್ತಾರೆ?

ಅನುಕೂಲತೆಗಳು

ವೃತ್ತಿಯಿಂದ ವೃತ್ತಿಗೆ ಈ ಪ್ರಶ್ನೆಗಳಿಗೆ ದೊರಕುವ ಉತ್ತರಗಳು ಭಿನ್ನವಾಗುತ್ತವೆ, ಅದೇಕೆ ಒಂದೇ ವೃತ್ತಿಯಲ್ಲಿರುವ ದಂಪತಿ ದಂಪತಿಗೂ ಪ್ರತಿಕ್ರಿಯೆ ಬೇರೆ ಬೇರೆಯಾಗಿ ಬರುವುದು. ಆರ್ಥಿಕ ಅನುಕೂಲತೆಯ ಅಂಶವನ್ನು ಸಾಮಾನ್ಯವಾಗಿ ಎಲ್ಲ ದಂಪತಿಗಳೂ ಒಪ್ಪಿಕೊಳ್ಳುವರು. ಜೀವನದಲ್ಲಿ ಸುಖ-ನೆಮ್ಮದಿಗಳಿಗೆ ಇದರಿಂದ ತುಂಬ ಸಹಾಯ ಪ್ರಯೋಜನವಾಗಿರುವುದು ಅಲ್ಲದೇ ಮಕ್ಕಳಿಗೆ ಯೋಗ್ಯ ಶಿಕ್ಷಣ ನೀಡಲು ಅವರಿಗೆ ಅವಶ್ಯವಿರುವ ಸೌಕರ್ಯಗಳನ್ನು ಒದಗಿಸಲು ಇದರಿಂದ ತುಂಬ ಸಹಾಯಕಾರಿಯಾಗಿರುವುದು. ಜೀವನದ ಅವಶ್ಯಕತೆಗಳು ಸುಲಭವಾಗಿ ಸಾಧ್ಯವಾಗುವವು. ಅದಕ್ಕಾಗಿ ಅವರು ಇತರರಂತೆ ಪರದಾಡಬೇಕಾಗುವದಿಲ್ಲ. ಆರ್ಥಿಕ ದೃಷ್ಟಿಯಿಂದ ಅವರು ಹೆಚ್ಚಾಗಿ ಚಿಂತಿಸುವ ಪ್ರಮೇಯವೇ ಒದಗಿ ಬರುವುದಿಲ್ಲ. ಇದು ಎಲ್ಲ ದಂಪತಿಗಳ ಸ್ಪಷ್ಟವಾದ ಅಭಿಪ್ರಾಯವಾಗಿರುವುದು. ತಂತಮ್ಮ ವೃತ್ತಿಯ ವಿಷಯವಾಗಿ ಪರಸ್ಪರ ಚರ್ಚೆ-ವಿಚಾರ ವಿನಿಮಯ ನಡೆಸಲು ಸಾಧ್ಯವಾಗುವುದು ಇನ್ನೊಂದು ಅನುಕೂಲವಾಗಿರುವುದು. ಶಿಕ್ಷಕ ವೃತ್ತಿಯಲ್ಲಿದ್ದರೆ ಪರಸ್ಪರ ಪಾಠ್ಯಕ್ರಮ ಅಧ್ಯಯನ ಶಿಕ್ಷಣರಂಗದಲ್ಲಿಯ ಸಮಸ್ಯೆಗಳನ್ನು ಹೆಚ್ಚು ತಿಳುವಳಿಯಿಂದ, ಸಹಕಾರಿ ಮನೋಭಾವದಿಂದ ವಿಚಾರಿಸಲು ಅನುಕೂಲವಾಗುವುದು. ತಂತಮ್ಮ ಅನುಭವಗಳನ್ನು ವಿನಿಯೋಗ ಕೂಡ ಮಾಡಿಕೊಳ್ಳಬಹುದು. ಒಂದೇ ಶಾಲೆಯಲ್ಲಿ, ಕಾಲೇಜಿನಲ್ಲಿದ್ದರೆ ಮತ್ತು ಒಂದೇ ವಿಷಯದ ಬೋಧಕರಾಗಿದ್ದರೆ ಪತ್ನಿಯ ವರ್ಗಗಳನ್ನು ಪತಿ, ಪತಿಯ ವರ್ಗಗಳನ್ನು ಪತ್ನಿ ಕೆಲವೊಂದು ಅನಿವಾರ್ಯ ಪ್ರಸಂಗಗಳಲ್ಲಿ ನಿರ್ವಹಿಸಬಹುದು. "ಇವತ್ತು ಅದೇನೋ ಬೇಸರ ನೀನೇ ನನ್ನ ವರ್ಗಗಳನ್ನು ನಿರ್ವಹಿಸು' ಎಂದು ತಮ್ಮ ಪತಿ ತಮಗೆ ಅವರ ವರ್ಗಗಳನ್ನು ವಹಿಸುತ್ತಿರುವುದನ್ನು ಪ್ರಾಧ್ಯಾಪಿಕೆ ಪತ್ನಿ ನಗುನಗುತ್ತಲೇ ಹೇಳಿದರು. ಇದಕ್ಕೆ ತದ್ವಿರುದ್ಧವಾಗಿ ಪತ್ನಿ ಮನೆಗೆಲಸ ಪೂರೈಸುವುದು ವಿಲಂಬವಾದಾಗಲೆಲ್ಲ ಅವಳ ವರ್ಗಗಳನ್ನು ತಾನು ನಿರ್ವಹಿಸುತ್ತ ಬಂದುದನ್ನು ಪತಿ ಪ್ರಾಧ್ಯಾಪಕರೊಬ್ಬರು ನಿವೇದಿಸಿದರು. ಹೀಗೆ ಇದೊಂದು ತುಂಬ ಅನುಕೂಲಕರವೆಂಬುದನ್ನು ಅವರು ಒಪ್ಪುತ್ತಾರೆ. ವೈದ್ಯಕೀಯ ವೃತ್ತಿಯನ್ನು ಕೈಕೊಂಡ ದಂಪತಿಗಳ ಅಭಿಪ್ರಾಯವೂ ಇದೇ ಆಗಿರುವುದು. ಇಬ್ಬರೂ ಖಾಸಗಿ ದವಾಖಾನೆ ತೆರೆದಿದ್ದರೆ ರೋಗಿಗಳ ತಪಾಸಣೆ, ನಿದಾನ ಮತ್ತು ಚಿಕಿತ್ಸೆಗಳಲ್ಲಿ ಪರಸ್ಪರ ಸಹಕರಿಸಿ ಕೆಲಸ ಮಾಡಲು ಸಾಧ್ಯವುಂಟು. ಪರಸ್ಪರ ಕೆಲಸವನ್ನು ಹಂಚಿಕೊಳ್ಳಲೂ ಬಹುದು. ರೋಗ ನಿದಾನ ಮತ್ತು ಚಿಕಿತ್ಸೆಗಳ ವಿಷಯವಾಗಿ ಪರಸ್ಪರ ಚರ್ಚಿಸಬಹುದು; ವಿಚಾರ ವಿನಿಮಯವನ್ನು ನಡೆಸಬಹುದು. ವೈದ್ಯಕೀಯ ಸಮಸ್ಯೆಗಳ ಬಗೆಗೂ ಈ ರೀತಿ ಪರಸ್ಪರ ಸಹಕರಿಸುವುದು ಸಾಧ್ಯವಿದೆ. ಇದೇ ಬಗೆಯ ಸಹಕಾರವು ವಕೀಲ ವೃತ್ತಿಯಲ್ಲಿರುವ ದಂಪತಿಗಳಿಗೂ ಸಾಧ್ಯವಿದೆ. ಕಾಯ್ದೆ ಅಂಶಗಳನ್ನು ಕುರಿತು ವಿಚಾರಿಸಲು, ಖಟ್ಲೆಗಳ ಬಗೆಗೆ ಪರಿಶೀಲಿಸಲು ಪರಸ್ಪರರಿಗೆ ಅವಕಾಶವಿರುವುದು. ಇಂಥದೇ ಅನುಕೂಲ ಸಾಹಿತಿ ದಂಪತಿಗಳಿಗೆ, ಸಾಮಾಜಿಕ ಕಾರ್ಯದಲ್ಲಿ ತೊಡಗಿರುವ ದಂಪತಿಗಳಿಗೂ ಇರುವುದು. ಪರಸ್ಪರರ ಬರವಣಿಗೆಯ ಬಗೆಗೆ, ಸಾಹಿತ್ಯದ ಬಗೆಗೆ ಸಮುಚಿತವಾಗಿ ವಿಚಾರಿಸಲು, ಸಲಹೆ ನೀಡಲು ಟೀಕೆ ಟಿಪ್ಪಣೆ ನಡೆಸಲು ಸಾಧ್ಯವಾಗುವುದು; ಲೋಪದೋಷಗಳನ್ನು ಅರಿತುಕೊಂಡು ತಿದ್ದಿಕೊಳ್ಳಲು ಅನುವಾಗುವುದು. ಸಾಮಾಜಿಕ ಕಾರ್ಯದಲ್ಲಿ ತೊಡಗಿದ ದಂಪತಿಗಳು, ತಂತಮ್ಮ ಕೆಲಸ, ಕ್ಷೇತ್ರ, ಅಲ್ಲಿಯ ಆಗುಹೋಗುಗಳು, ಇವನ್ನು ಕೂಲಂಕಷವಾಗಿ ಚರ್ಚಿಸಬಹುದಲ್ಲದೇ ಸಾಮಾಜಿಕ ಸಮಸ್ಯೆಗಳನ್ನು ಕುರಿತು ವಿಚಾರ ವಿನಿಮಯವನ್ನು ನಡೆಸಬಹುದಾಗಿದೆ. ಒಂದೇ ವೃತ್ತಿಯಲ್ಲಿ ತೊಡಗಿರುವವರಿಗೆ ಇದೊಂದು ದೊಡ್ಡ ಅನುಕೂಲತೆಯೆಂದು ಹಲವಾರು ದಂಪತಿಗಳು ಅಭಿಪ್ರಾಯ ಪಟ್ಟರು.

ಅನಾನುಕೂಲತೆಗಳು

ಕೌಟುಂಬಿಕ ಜೀವನಕ್ಕೆ ಮಾತ್ರ ಈ ಬಗೆಯಲ್ಲಿ ಗಂಡ-ಹೆಂಡಿರು ಒಂದೇ ವೃತ್ತಿಯಲ್ಲಿರುವದರಿಂದ ತುಂಬ ಅನಾನುಕೂಲವಾಗಿ ಪರಿಣಮಿಸುವುದು. ಇಬ್ಬರೂ ಒಂದೇ ಸಮಯಕ್ಕೆ ಹೋಗುವುದು, ಕೆಲಸದ ಪೂರ್ವ

ತಯಾರಿ ಮಾಡಿಕೊಳ್ಳುವುದು ಇಂಥ ಸಂದರ್ಭದಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಹೊಣೆ ನಿರ್ವಹಿಸುವುದು ಕಷ್ಟಸಾಧ್ಯವಾಗುವುದು. ಮನೆಯಲ್ಲಿಯ ಅಡಿಗೆ ಮೊದಲಾಗಿ ಕೆಲಸಗಳನ್ನು ನಿರ್ವಹಿಸುವುದು ಕೂಡ ಇಷ್ಟೇ ಕಠಿಣವಾಗಿ ಪರಿಣಮಿಸುವುದು. ಮನೆಯನ್ನು ನೋಡಿಕೊಳ್ಳುವದಕ್ಕೆ ಅವರಿಗೆ ಹೆಚ್ಚು ಅವಕಾಶಗಳು ದೊರೆಯುವದಿಲ್ಲವೆಂದರೂ ಸರಿಯೇ. ಹೊರಗೆ-ಹೋಗುವ ಸಮಯದಲ್ಲಿ ವ್ಯತ್ಯಾಸವೇನಾದರೂ ಇದ್ದರೆ 'ಪರಸ್ಪರ ಭೆಟ್ಟಿಯಾಗುವ, ಊಟ ಉಡುಗೆಯತ್ತ ಲಕ್ಷ್ಯ ಕೊಡುವ ಸಂದರ್ಭಗಳೂ ಕಡಿಮೆಯಾಗುವವು ಮಕ್ಕಳ ಸೂಕ್ತ ಪಾಲನೆ ಪೋಷಣೆಗೆ ಲಕ್ಷ್ಯಕೊಡುವದಂತೂ ಇನ್ನೂ ದೂರವುಳಿಯಿತು. ತಂದೆ-ತಾಯಿಗಳ ವಾತ್ಸಲ್ಯ-ಮಮತೆ, ಪ್ರೇಮಗಳನು ಅವುಗಳಿಗೆ ನೀಡುವುದು ಇವರಿಗೆ ಸಾಧ್ಯವಾಗುವದಿಲ್ಲ. ಮನೆಯ ಅಲಂಕಾರ, ಸೊಬಗು ಇವುಗಳತ್ತ ಲಕ್ಷ್ಯ ಕೊಡುವದಿರಲಿ ಮನೆಯ ಸ್ವಚ್ಛತೆ, ದೈನಂದಿನ ಅವಶ್ಯಕತೆಗಳನ್ನು ಕೂಡ ಪೂರ್ಣವಾಗಿ ಗುಮನಿಸುವುದೂ ಸಾಧ್ಯವಾಗುವದಿಲ್ಲ. ಈ ಮಾತು ಬಹುಶಃ ದಿನದ ಬಹು ಭಾಗವನ್ನು ಹೊರಗೆ ಕಳೆಯಬೇಕಾಗಿ ಬರುವ ವೈದ್ಯಕೀಯ ದಂಪತಿಗಳಿಗೆ ಹೆಚ್ಚಾಗಿ ಅನ್ವಯಿಸುವುದು. ಶಿಕ್ಷಕ-ಪ್ರಾಧ್ಯಾಪಕ, ವಕೀಲ ದಂಪತಿಗಳಿಗೆ ಕ್ರಮವಾಗಿ ಕಡಿಮೆ ಕಡಿಮೆಯಾಗಿ ಅನ್ವಯಿಸುವುದು. ಆದರೆ ಅದೇ ಸಾಮಾಜಿಕ ಕಾರ್ಯಕರ್ತರು ಮತ್ತು ರಾಜಕಾರಣಿ ದಂಪತಿಗಳೂ ಇಂಥ ಅನಾನುಕೂಲತೆಯನ್ನು ಹೆಚ್ಚಾಗಿ ಅನುಭವಿಸುವರು. ನಿಯತಕಾಲಿಕ ವೃತ್ತಿಯಲ್ಲಿ ತೊಡಗಿರುವವರಿಗೆ ಸ್ವಲ್ಪ ಪರಿಶ್ರಮವೆನಿಸಿದರೂ ಕೆಲ ಮಟ್ಟಿಗೆಗಾದರೂ ಮನೆ, ಗೃಹಾಲಂಕಾರ ಈ ವಿಷಯಗಳನ್ನು ಗಮನಿಸಲು ಸಾಧ್ಯವಾಗುವುದು." ಎಷ್ಟು ಹಣ ಬಂದರೇನು? ಜೀವಕ್ಕೆ ನೆಮ್ಮದಿ ಇಲ್ಲ; ನಮ್ಮ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗುವದಿಲ್ಲ. ಅದೇಕೆ ಸಾಯಂಕಾಲ ಮಾತ್ರ ಅವರ ಮುಖಗಳನು, ಅದೂ ಬಾಡಿದ ಮುಖಗಳನ್ನು ನಾವು ನೋಡುತ್ತೇವೆ. ಆಗ ಹೊಟ್ಟೆಯಲ್ಲಿ ಕಸಿವಿಸಿಯಾಗುತ್ತದೆ. ಆದರೆ ಮಾಡುವದೇನು?" ಎಂದು ಹಲವಾರು ದಂಪತಿಗಳು ತುಂಬ ವ್ಯಾಕುಲರಾಗಿ ಮಾತನಾಡಿದಾಗ ಈ ಪಾಡು ಯಾರಿಗೂ ಬೇಡ ಎಂದೆನಿಸುವುದು; ಓರ್ವ ವೈದ್ಯರಂತೂ ಹೃದಯ ತುಂಬಿ ಬಂದು ಹೇಳಿದರು. "ನಮ್ಮ ಮನೆಯಲ್ಲಿ ಮೀನುಗಳನ್ನು ಸಾಕಿದ್ದೇವೆ. ಅದರ ನೀರನು ಕೂಡ ಬದಲಿಸಲು ಆಗುತ್ತಿಲ್ಲ. ಇನ್ನು ಮಕ್ಕಳ ಪಾಡಂತೂ ಹೇಳುವುದೇ ಬೇಡ. ಅವು ಯಾರದೋ ಕೃಪಾ ಛತ್ರದಲ್ಲಿ ಬೆಳೆಯುತ್ತವೆ. ಅವಕ್ಕೆ ತಮ್ಮ ತಂದೆ-ತಾಯಿಗಳ ಗುರುತು ಮರೆತಿಲ್ಲ ಇದೇ ಹೆಚ್ಚಿನದು" ಅವರ ಈ ಮಾತುಗಳಲ್ಲಿ ಅತ್ಯಂತ ದಾರುಣ ವ್ಯಥೆ ಕಂಡು ಬರುತ್ತಿತ್ತು. ಮಕ್ಕಳು ಆಯಾಳ ಶುಶ್ರೂಷೆಯನು ಅವಲಂಬಿಸಬೇಕಾಗಿದ್ದರೆ ತಾವು ಅಡುಗೆಯವರ ಮೇಲೆ ಸೇವಕರ ಮೇಲೆ ಅವಲಂಬಿಸಿ ಜೀವನ ನಿರ್ವಹಿಸಬೇಕಾಗಿ ಬರುವದರಿಂದ ಆ ಊಟವೊ, ಆ ರುಚಿಯೋ ಯಾರಿಗೂ ಬೇಡ ಎಂದು ಹಲವು ದಂಪತಿಗಳು ನೊಂದುಕೊಳ್ಳುತ್ತಾರೆ. ಸಾಮಾಜಿಕ ಜೀವನವೂ ಅನೇಕ ಸಲ ನಮಗೆ ಕನಸೇ ಆಗಿ ಪರಿಣಮಿಸಿರುತ್ತದೆ; ಸಭೆ ಸಮಾರಂಭಗಳೂ ಇಲ್ಲ. ಮನೋರಂಜನೆಯೂ ಇಲ್ಲ; ಆಪ್ತರು ಇಷ್ಟರು ಮತ್ತು ಸ್ನೇಹಿತರೊಂದಿಗೆ ಅವರು ಬಂದಾಗ ಮಾತನಾಡಲು ಆಗುವದಿಲ್ಲ ಹೆಚ್ಚೇನು ಈ ವೃತ್ತಿಯಲ್ಲಿ ನಾವು, ನಾವು ಆಗಿ ಉಳಿದಿರುವುದಿಲ್ಲ. ನಾವು ಈ ವೃತ್ತಿಯ ಕೈಗೊಂಬೆಗಳಾಗಿ ಪರಿಣಮಿಸುತ್ತೇವೆಂದರೆ ತಪ್ಪಲ್ಲ ಎಂದು ಅಳಲನ್ನು ಕೆಲವು ದಂಪತಿಗಳು ತೋಡಿಕೊಳ್ಳುತ್ತಾರೆ. ಹೀಗೆ ಹಲವಾರು ತಾಪತ್ರಯಗಳು, ತೊಂದರೆಗಳನ್ನು ಅನುಭವಿಸಬೇಕಾಗಿ ಬರುತ್ತಿದ್ದರೂ, ತುಂಬ ಅನಾನುಕೂಲತೆಗಳನ್ನು ಎದುರಿಸುತ್ತಿದ್ದರೂ ದಂಪತಿಗಳು ಒಂದೇ ವೃತ್ತಿಯಲ್ಲಿ ತೊಡಗಿರುವದೇಕೆ? ತೊಡಗಲು ಅಪೇಕ್ಷೆಯನ್ನು ಪಡುತ್ತಿರುವದೇಕೆ- "ನಾವು ಹಿಂದಿರುಗಿ ಬರಲಾರದ ಈ ಲೋಕದಲ್ಲಿ ಸೇರಿ ಹೋಗಿದ್ದೇವೆ" ಎಂದು ಹಲವರು ದಂಪತಿಗಳು ಹೇಳುವರಾದರೂ ಅದುವೇ ಜೀವನ ಅದನ್ನು ಎದುರಿಸಿ ಬಾಳುವಲ್ಲಿಯೇ ಜೀವನದ ರಹಸ್ಯ ಅಡಗಿದೆ ಎಂಬ ಮಾತನು ಬಹು ಸಂಖ್ಯೆ ದಂಪತಿಗಳು ಒಪ್ಪಿಕೊಳ್ಳುತ್ತಾರೆ


ಕೆಲವು ಅನುಭವಗಳು

ಡಾ. ವಿಜಯ ತೆರಗುಂಡಿ ಮತ್ತು ಅವರ ಪತ್ನಿ ಡಾ. ಪ್ರೇಮಾ ತೆರಗುಂಡಿ ವೈದ್ಯಕೀಯ ದಂಪತಿಗಳು. ಡಾ. ವಿಜಯ ಬಾಲರೋಗ ತಜ್ಞರು. ಡಾ. ಪ್ರೇಮಾ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುವರು. ಅಲ್ಲದೇ ಪತಿಗೆ ಅವರ ನರ್ಸಿಂಗ್ ಹೋಮದ ಸೇವೆಯಲ್ಲಿ ನೆರವು ನೀಡುವರು. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು. "ನಾವು ಒಂದೇ ವೃತ್ತಿಯಲ್ಲಿರುವದರಿಂದ ಆರ್ಥಿಕ ಮತ್ತು ವೃತ್ತಿಯ ಅನುಕೂಲತೆಗಳು ನಮಗೆ ದೊರಕಿವೆ. ಆದರೆ ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳುವುದೇ ಆಗುತ್ತಿಲ್ಲ. ಸಾಮಾಜಿಕ ಜೀವನಕ್ಕೆ ನಾವು ಎರವಾಗಿದ್ದೇವೆ. ಆರ್ಥಿಕ, ಭೌತಿಕ ಸುಖ ದೊರೆಯುತ್ತಿದ್ದರೂ ಮಾನಸಿಕ ನೆಮ್ಮದಿ-ಸುಖ ಇಲ್ಲ." ಎನ್ನುತ್ತಾರವರು. "ಕೆಲಸಕ್ಕೆ ಹೋಗುವಾಗ ಅನೇಕ ಸಲ ನಾನು ಮಗುವನ್ನು ಕರೆದೊಯ್ಯಬೇಕಾಗುತ್ತದೆ. ಅಲ್ಲಿನೇ ಅವರಿಗೆ ಯಾವುದೇ ರೀತಿಯ ತೊಂದರೆಯಾದರೂ ಮನಸ್ಸು ಸ್ಥಿಮಿತವನ್ನು ಕಳೆದುಕೊಳ್ಳುವುದು" ಡಾ. ಪ್ರೇಮಾ ಹೇಳುತ್ತಾರೆ. "ನಮಗೆ ನಮ್ಮದೇ ಆದ ಜೀವನವೆಂಬುದೇ ಇಲ್ಲವಾಗಿದೆ. ಮಕ್ಕಳನ್ನು ನೋಡಿಕೊಳ್ಳಬೇಕಾದ ತಾಯಿ ಕೆಲಸಕ್ಕೆ ಹೋಗುತ್ತಾಳೆ: ರೋಗಿಗಳನ್ನು ಉಪಚರಿಸುತ್ತಾಳೆ. ತಂದೆಯಾದ ನಾನು ಮಕ್ಕಳಿಗೇನಾದರೂ ಆದಾಗ ಚಿಂತಿತನಾಗುತ್ತೇನೆ, ವ್ಯಗ್ರನಾಗುತ್ತೇನೆ. ಇನ್ನೊಬ್ಬರಿಗೆ ಸಮಾಧಾನ ಹೇಳುವ ನಾನು ಅಸಮಾಧಾನಗೊಳ್ಳುತ್ತೇನೆ. ನಾವು-ಮಕ್ಕಳು ಕೌಟುಂಬಿಕ ಜೀವನಕ್ಕೆ ಎರವಾಗುತ್ತೇವೆ. ಆದರೂ ನಾವು ಈ ಬಿಡಲಾರದ ಲೋಕದಲ್ಲಿ ಸಿಲುಕಿದ್ದೇವೆ" ಎಂದು ಡಾ. ವಿಜಯ ವ್ಯಥೆಪಡುತ್ತಾರೆ.

ಶ್ರೀ ವಿಠ್ಠಲ ಸರಾಫ್ ಮತ್ತು ಶ್ರೀಮತಿ ಶುಭದಾ ಸರಾಫ್ ವಕೀಲ ದಂಪತಿಗಳು. ಶ್ರೀ ಸರಾಫರು ಕಲಾ ಪದವೀಧರರಾದರೆ ಅವರ ಶ್ರೀಮತಿ ವಿಜ್ಞಾನ ಪದವೀಧರೆ. ಒಂದೇ ವೃತ್ತಿ ಅವರಿಗೂ ಸಾಮಾಜಿಕ ಜೀವನಕ್ಕೆ ವ್ಯತ್ಯಯ ತಂದಿದೆ. ಮನೋರಂಜನೆ, ಸಭೆ-ಸಮಾರಂಭಗಳಿಗೆ ಅವರಿಗೆ ಹೋಗುವದಾಗುವದಿಲ್ಲ. ಅಷ್ಟೊಂದು ಅವಶ್ಯಕತೆಯೂ ಅವರಿಗೆನಿಸಿಲ್ಲ. ಅವರು ಖಟ್ಲೆ ನಡೆಸಲು ಭಿನ್ನ ಭಿನ್ನ ನ್ಯಾಯಾಲಯಗಳಿಗೆ ಹೋಗುವರು. ಮನೆಯಲ್ಲಿ ಪೂರ್ವ ತಯಾರಿಗೂ ಬೇರೆ ಬೇರೆ ಸಮಯ ಗೊತ್ತು ಪಡಿಸಿಕೊಂಡಿದ್ದಾರೆ. ಕಾಯ್ದೆ ಅಂಶಗಳ ಬಗೆಗೆ ಅರಿಯಲು, ಚರ್ಚಿಸಲು ವಿಚಾರ ವಿನಿಮಯ ನಡೆಸಲೂ ತುಂಬ ಅನುಕೂಲ



ಸರಾಫ ದಂಪತಿಗಳು



ತೆರಗುಂಡಿ ದಂಪತಿಗಳು



ಕುರ್ತಕೋಟಿ ದಂಪತಿಗಳು



ದೇಸಾಯಿ ದಂಪತಿಗಳು

ವಾಗಿರುವುದಾಗಿ ಅವರು ಒಪ್ಪುತ್ತಾರೆ. ಅನೇಕ ಸಲ ಭಿನ್ನಾಭಿಪ್ರಾಯ, ಮತ ಭೇದವಾಗುವದುಂಟು. ಆದರೆ ಅದು ವೃತ್ತಿಯ ಸಂಬಂಧದಲ್ಲಿ ಮಾತ್ರ. ಮನೆಯಲ್ಲಿ ಅಂಥದಕ್ಕೆ ಅಸ್ಪದವಿಲ್ಲ. ಶ್ರೀಮತಿ ಶುಭದಾ ತಾವು ಗೃಹಿಣಿಯೆಂಬುದನು ಮರೆತಿಲ್ಲ. ಬೆಳಿಗ್ಗೆ ತಿಂಡಿ ತಿನಿಸು, ತುಳಸಿ ಪೂಜೆ, ತಾವು ಕೆಲವರಿಗೆ ಅಡಿಗೆ ಮಾಡುವುದು ಹೀಗೆ ಗೃಹಕೃತ್ಯದಲ್ಲಿಯೂ ಅವರು ಪಾಲ್ಗೊಳುತ್ತಾರೆ. ಸಮಯದ ಅಭಾವದ ಬಗೆಗೆ ಈ ದಂಪತಿಗಳು ತುಂಬ ದೂರಿಕೊಳ್ಳುತ್ತಾರೆ.

ಶ್ರೀ ರಾಮರಾವ ದೇಸಾಯಿ ಮತ್ತು ಶ್ರೀಮತಿ ಜಾನಕಿಬಾಯಿ ದೇಸಾಯಿ ಶಿಕ್ಷಕ ದಂಪತಿಗಳು. ಒಂದೇ ವೃತ್ತಿಯಲ್ಲಿದ್ದುದು ಅವರಿಗೊಂದು ವರದಾನವಾಗಿ ಪರಿಣಮಿಸಿದೆ. ಶ್ರೀಯುತರು ಕಲಾಪದವೀಧರರು. ಶ್ರೀಮತಿಯವರು ವಿಜ್ಞಾನ ಪದವೀಧರೆ. ಪಾಠಗಳ ಬಗೆಗೆ ಅವರಿಗೆ ಚರ್ಚಿಸುವ ಅವಶ್ಯಕತೆ ಬಿದ್ದಿಲ್ಲ. ಆದರೆ ಅನುಭವಗಳನ್ನು ಅವರು ವಿನಿಮಯಿಸಿಕೊಳುತ್ತಾರೆ. ಆರ್ಥಿಕ ದೃಷ್ಟಿಯಿಂದಂತೂ ತುಂಬ ಪ್ರಯೋಜನಕಾರಿಯಾಗಿ ಪರಿಣಮಿಸಿದೆ. "ಮನೆಯಲ್ಲಿ–ಹಬ್ಬ–ಹುಣ್ಣಿಮೆ, ಸಾಂಪ್ರದಾಯಿಕತೆ ಎಲ್ಲವನ್ನು ಪಾಲಿಸಿಕೊಂಡು ಶಿಕ್ಷಕಿಯಾಗಿ ಕೆಲಸ ಮಾಡುವುದು ಪರಿಶ್ರಮದ್ದೆನಿಸಿದರೂ ಅಷ್ಟು ತೊಂದರೆದಾಯಕವೆನಿಸಿಲ್ಲ. ನಾನು ತಡಮಾಡಿ ಶಿಕ್ಷಕಿಯಾದ್ದರಿಂದ ಮಕ್ಕಳ ಲಾಲನೆ ಪಾಲನೆಗೆ ಅಂಥ ತೊಂದರೆ ಬರಲಿಲ್ಲ" ಶ್ರೀಮತಿ ದೇಸಾಯರು ತಿಳಿಸಿದರು. ಆದರೆ ಇಬ್ಬರೂ ಶಾಲೆಗೆ ಹೋದಾಗ ಕಿರಿ ಮಕ್ಕಳನ್ನು ನೋಡಿಕೊಳುವುದು ಸ್ವಲ್ಪ ಕಠಿಣವೆನಿಸುತ್ತಿತ್ತು. ಎಂದರು ಶ್ರೀ ದೇಸಾಯಿಯವರು. ಒಂದೇ ವೃತ್ತಿಯಲ್ಲಿದ್ದು ಹೀಗೆ ಸಮಾಧಾನ ವ್ಯಕ್ತಪಡಿಸಿದ ದಂಪತಿ ಇವರೊಬ್ಬರೇ ಎನ್ನಬೇಕು.

ಶ್ರೀ ಮೋಹನ ಮುತಾಲಿಕ ದೇಸಾಯಿ ಮತ್ತು ಅವರ ಪತ್ನಿ ಶ್ರೀಮತಿ ಮೀನಾಕ್ಷಿ ಮುತಾಲಿಕ ದೇಸಾಯಿ ಇಬ್ಬರೂ ಶಿಕ್ಷಕ ವೃತ್ತಿಯಲ್ಲಿದ್ದವರು,ಆದರೆ ಮಗನ ಲಾಲನೆಗೆ ತೊಂದರೆಯಾಗತೊಡಗಿದಾಗ, ಅದರಿಂದ ಸ್ಥಿಮಿತ ತಪ್ಪತೊಡಗಿದಾಗ ಮಗನಿಗಿಂತ ವೃತ್ತಿ ಹೆಚ್ಚಿನದಲ್ಲ ಎಂದು ಶ್ರೀಮತಿಯವರು ಅದಕ್ಕೆ ರಾಜೀನಾಮೆ ಸಲ್ಲಿಸಿದರು. ಆದರೆ ವಿದ್ಯಾರ್ಥಿಗಳಿಗೆ ಈಗಲೂ ಅವರು ಪಾಠಗಳನ್ನು ಬೋಧಿಸುವರು. ಈ ರೀತಿ ತಾತ್ಕಾಲಿಕ ತೊಂದರೆ ಕಂಡು ಬಂದರೂ ಪರಸ್ಪರ ವಿಚಾರವಿನಿಮಯ ಚರ್ಚೆ ಸಲಹೆಗಳಿಗೆ ಇದು ತುಂಬ ಅನುಕೂಲವಾಗಿ ಪರಿಣಮಿಸಿತ್ತೆಂದು ದಂಪತಿಗಳ ಅಭಿಪ್ರಾಯ.

ಶ್ರೀ ಚಂದ್ರಶೇಖರ ದೀಕ್ಷಿತ ಮತ್ತು ಶ್ರೀಮತಿ ಮಾಲಾ ದೀಕ್ಷಿತ ಇಬ್ಬರೂ ಪ್ರಾಧ್ಯಾಪಕ ವೃತ್ತಿಯಲ್ಲಿದ್ದವರು. ಇಬ್ಬರದೂ ಭಿನ್ನ ವಿಷಯಗಳು. ಒಬ್ಬರು ಬೆಳಿಗ್ಗೆ ಒಬ್ಬರು ಮಧ್ಯಾಹ್ನ ಹೋಗಬೇಕಾಗಿದ್ದಾಗ ಊಟ–ಉಡಿಗೆಯದು ತೊಂದರೆಯೆನಿಸುತ್ತಿತ್ತು. ಗಂಡನಿಗೆ ಬಿಸಿ ಅಡಿಗೆ ಬಡಿಸುವ, ಎದುರಿಗೆ ಕುಳಿತು ಉಪಚರಿಸುವ ಗೃಹಿಣಿಯ ಕರ್ತವ್ಯಕ್ಕೆ ಎರವಾಗುತ್ತಿದ್ದೇನಲ್ಲ ಎಂದು ಶ್ರೀಮತಿ ದೀಕ್ಷಿತರಿಗೆ ತುಂಬ ವ್ಯಥೆಯೆನಿಸುತ್ತಿತ್ತು. ಈಗ ಇಬ್ಬರೂ ಹೋಗುವ ಸಮಯ ಒಂದೇ ಆಗಿದೆ. ಅಂಥ ಸಮಸ್ಯೆ ಇಲ್ಲ. ಆದರೆ ಮಕ್ಕಳನ್ನು ನೋಡಿಕೊಳುವುದು ಸಮಸ್ಯೆಯಾಗಿದೆ. ಎಲ್ಲಿ ಹೊರಗೆ ಹೋದರೂ ಲಕ್ಷ್ಯವೆಲ್ಲ ಮನೆಯತ್ತಲೇ ಇರುವುದು. ಆದರೆ ಬೋಧನಕ್ಕೆ ಅದರಿಂದ ಯಾವುದೇ ವ್ಯತ್ಯಯವಾಗುವದಿಲ್ಲ. ವಿಷಯಗಳು ಭಿನ್ನವಾದರೂ ಅನುಭವಗಳನ್ನು ಹಂಚಿಕೊಳ್ಳುವರು ಆರ್ಥಿಕವಾಗಿ ಅನುಕೂಲತೆಯಾದರೂ ಅನಾನುಕೂಲತೇಗಳೇ ಹೆಚ್ಚು ಎಂದು ಈ ದಂಪತಿಗಳ ಅನುಭವವಾಗಿದೆ.

ಶ್ರೀ ಶಂಕರ ಕುರ್ತಕೋಟಿ ಮತ್ತು ಶ್ರೀಮತಿ ಶಕುಂತಲಾ ಕುರ್ತಕೋಟಿ ರಾಜಕಾರಣದಲ್ಲಿ, ಸಾಮಾಜಿಕ ಕಾರ್ಯದಲ್ಲಿ ತೊಡಗಿದವರು. ಅವರಿಗೆ ಅನಾನುಕೂಲತೆಗಳೇ ಹೆಚ್ಚು. ಮಗ ದೊಡ್ಡವನಾಗುವವರೆಗೆ ಒಬ್ಬರಿಲ್ಲ ಒಬ್ಬರು ಮನೆಯಲ್ಲ ಉಳಿಯುತ್ತಿದ್ದರು. ಈಗ ಅಂಥ ಪ್ರಶ್ನೆ ಇಲ್ಲ. ಒಬ್ಬರ ಅತಿಥಿಗಳು ಬಂದಾಗ, ಒಬ್ಬರು ಮಾತನಾಡುವಾಗ ಇನ್ನೊಬ್ಬರು ಗೃಹಕೃತ್ಯವನ್ನು ನೋಡುವರು. ಚರ್ಚೆ–ವಿಚಾರ ವಿನಿಮಯಕ್ಕೆ ತುಂಬ ಅನುಕೂಲವಾಗಿದೆ. ಅನೇಕ ಸಲ ಭಿನ್ನಾಭಿಪ್ರಾಯವಾದುದುಂಟು. ಆದರೆ ಅದು ಯಾವ ಕಾಲಕ್ಕೂ ದುಷ್ಪರಿಣಾಮವನ್ನುಂಟು ಮಾಡಿಲ್ಲ. ಹೀಗೆ ಒಂದೇ ವೃತ್ತಿಯಲ್ಲಿ ತೊಡಗುವದರಿಂದ ಪರಸ್ಪರ ಪೂರಕವಾಗಿ ಕೆಲಸ ಮಾಡಬಹುದೆಂದು ಈ ದಂಪತಿಗಳ ಅಭಿಪ್ರಾಯ.

ಶ್ರೀ ಜಂತಲಿ ಮತ್ತು ಶ್ರೀಮತಿ ಜಂತಲಿ ಸಂಗೀತವನ್ನು ಒಂದೇ ವೃತ್ತಿಯಾಗಿ ಮಾಡಿಕೊಂಡವರು. ಆರ್ಥಿಕ ದೃಷ್ಟಿಯಿಂದ ಇದು ದಂಪತಿಗಳಿಗೆ ಅನುಕೂಲಕರವಾಗಿದೆಯಲ್ಲದೇ ಪರಸ್ಪರ ವಿಚಾರವಿನಿಮಯ, ಚರ್ಚೆಗಳಿಗೂ ಪ್ರಯೋಜನಕಾರಿಯಾಗಿರುವುದು. ಶ್ರೀ ಜಂತಲಿ ಹಿಂದುಸ್ತಾನಿ ಅಧ್ಯಯನ ಮಾಡಿದವರು. ಶ್ರೀಮತಿಯವರು ಕರ್ನಾಟಕ ಅಧ್ಯಯನ ಮಾಡಿದವರು. ಹೀಗಿದ್ದರೂ ಪರಸ್ಪರ ಪದ್ಧತಿಗಳ ಹೆಚ್ಚಿನ ಬೆಳವಣಿಗೆಗೆ ಪೋಷಕವಾಗಿಯೇ ಪರಿಣಮಿಸಿದೆ. ಇವರದು ಸಾಂಪ್ರದಾಯಿಯಕವಾದ ಮನೆತನ. ಹೀಗಾಗಿ ಮನೆಯಲ್ಲಿ ಸಾಂಪ್ರದಾಯಕ ವಾತಾವರಣ. ಅದನ್ನು ಶ್ರೀಮತಿಯವರು ಹೆಚ್ಚಿನ ತೊಂದರೆ ಎಂದು ಪರಿಗಣಿಸುವದಿಲ್ಲ. ಮತಭೇದಗಳು ಹಣಿಕಿಕ್ಕಿದರೂ ಪರಸ್ಪರ ತಿಳುವಳಿಕೆಯಿಂದ ನಿವಾರಣೆಗೊಳುತ್ತವೆ. ಮಕ್ಕಳ ಲಾಲನೆ–ಪಾಲನೆಗೆ ಅವರಿಗೆ ಅಂಥ ತೊಂದರೆಯೇನೂ

ಮಂಗಳೂರಿನ ಸೆಕೆ

ಮಂಗಳೂರ ಪೇಟೆಯಲಿ ಹೊರಗೆ ಬಟ್ಟೆಯ ಹಾಕಿ
ಕಳುವಾಗುವುದೆಂದು ಎಚ್ಚರಿಸಿದವಗೆ
'ಯಾರಿಗೆ ಬೇಕಿಲ್ಲಿ ಬಟ್ಟೆಗಿಟ್ಟೆ ಸ್ವಾಮಿ
ಈ ಸೆಕೆಗೆ, ಇನ್ನಿರದ ಸಂಕಟಕ್ಕೆ!'

– ಗುಂಡ್ಮಿ ಚಂದ್ರಶೇಖರ ಐತಾಳ



ಕಣವಿ ದಂಪತಿಗಳು



ದೀಕ್ಷಿತ ದಂಪತಿಗಳು

ಅನಿಸುವದಿಲ್ಲ. ಆದರೆ ಸಂಗೀತಾರಾಧನೆಗೆ ಸಮಯ ಮಾತ್ರ ಸಾಕಷ್ಟು ಲಭ್ಯವಾಗುವದಿಲ್ಲ ಎಂದು ದಂಪತಿಗಳ ದೂರು.

ಶ್ರೀ ಕೃಷ್ಣರಾವ ಮತ್ತು ಶ್ರೀಮತಿ ಚಂದ್ರಭಾಗಾದೇವಿ ನೃತ್ಯ ದಂಪತಿಗಳು. ನೃತ್ಯದಿಂದಾಗಿಯೇ ಅವರು ಒಲಿದು ಒಂದಾದವರು. ಇಬ್ಬರೂ ಸೇರಿ ನೃತ್ಯವರ್ಗಗಳನ್ನು ನಡೆಸುತ್ತಾರೆ. ನೃತ್ಯ ಕಾರ್ಯಕ್ರಮಗಳನ್ನು ಜರುಗಿಸುತ್ತಾರೆ. ಆರ್ಥಿಕ ಪ್ರಯೋಜನವಂತೂ ಸರಿಯೇ. ಈ ವೃತ್ತಿಯನ್ನು ಬೆಳೆಸಿಕೊಂಡು ಬರುವಲ್ಲಿ ಪರಸ್ಪರ ವಿಚಾರವಿನಿಮಯ ನಡೆಸುವುದು. ಚರ್ಚೆಗೂ ಅನುಕೂಲ. ಮಕ್ಕಳ ಲಾಲನೆ-ಪಾಲನೆಗೂ ಅವರಿಗೆ ಅಂಥ ತೊಂದರೆಯೇನೂ ಆಗಿರುವದಿಲ್ಲ. ಆದರೆ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಕಷ್ಟಸಾಧ್ಯ. ಅತಿಥಿ ಅಭ್ಯಾಗತರನ್ನು ನೋಡಿಕೊಳ್ಳುವುದೂ ಕಷ್ಟಸಾಧ್ಯವೇ ಅನಿಸುವುದು. ಇಬ್ಬರೂ ನೃತ್ಯಗಾರರಾಗಿರುವದರಿಂದ ಪರಸ್ಪರ ದೂರುವ ಅವಕಾಶವೇ ಇಲ್ಲವೆಂದು ದಂಪತಿಗಳು ಹೇಳುತ್ತಾರೆ.

ಸಾಹಿತ್ಯಕ ದಂಪತಿಗಳು

ಶ್ರೀ ಚನ್ನವೀರ ಕಣವಿ ಮತ್ತು ಶ್ರೀಮತಿ ಶಾಂತಾದೇವಿ ಕಣವಿ ಸಾಹಿತ್ಯದ ಹವ್ಯಾಸವುಳ್ಳ ದಂಪತಿಗಳು. ಶ್ರೀ ಕಣವಿ ಕವಿಗಳಾದರೆ, ಶ್ರೀಮತಿಯವರು ಕತೆಗಾರರು. ಅವರು ಪದವೀಧರೆಯಲ್ಲ' ಆದರೆ ಉತ್ತಮ ಸಂಸ್ಕಾರಬಲ. ಸಾಹಿತ್ಯಕ ಹಿನ್ನಲೆ ಅವರಿಗಿದೆ. ಇಲ್ಲಿ ಆರ್ಥಿಕ ಅನುಕೂಲದ ಪ್ರಶ್ನೆಯೇ ಇಲ್ಲ. ಆದರೆ ಪರಸ್ಪರ ವಿಚಾರ ವಿನಿಮಯಕ್ಕೆ, ಚರ್ಚೆಗೆ ಹೆಚ್ಚು ಅನುಕೂಲವಾಗಿದೆ. ಶ್ರೀ ಕಣವಿ ಅವರು ತಮ್ಮ ಕವನಗಳನ್ನು ಓದಿ ತೋರಿಸುತ್ತಾರೆ. ಶ್ರೀಮತಿ ಕಣವಿಯವರು ಹಾಗೇ ಕಥೆಗಳನ್ನು ಮನೆಯಲ್ಲಿ ಮೊದಲು ಓದುವರು. ಅವಕ್ಕೆ ತಲೆಬರೆಹ ಕೊಡುವ ಕೆಲಸ ಶ್ರೀ ಕಣವಿಯವರದೆ. ಬಹುಶಃ ಇಂಥ ನೆರವು, ನೀಡುತ್ತಿದ್ದುದರಿಂದ ಮತ್ತು ಸಾಹಿತಿಯ ಪತ್ನಿಯೆನಿಸಿದ್ದರಿಂದ ತಮ್ಮ ಪತ್ನಿಗೆ ಶ್ರೀ ಕಣವಿಯವರೇ ಲೇಖನಗಳನ್ನು ಬರೆದು ಕೊಡುತ್ತಿರಬೇಕೆಂಬ ಸಂಶಯಕ್ಕೆ ಕಾರಣವಾಗಿದ್ದಿತಂತೆ. ಶ್ರೀಮತಿ ಕಣವಿ ಅವರಿಗೆ ಇದು ತುಂಬ ಬೇಸರದ ವಿಷಯವಾಗಿತ್ತು. ಆದರೂ ಅವರು ಧೈರ್ಯವಾಗಿ ಮುಂದುವರಿಸಿದರು. ಒಮ್ಮೊಮ್ಮೆ ಇಂಥ ಅನಾನುಕೂಲತೆ ತೊಂದರೆಗಳನ್ನು ಎದುರಿಸಬೇಕಾಗಿ ಬರುವದೇನೊ! ಶ್ರೀ ಕಣವಿಯವರು ವಿಚಾರ ಶೀಲ ಗ್ರಂಥಗಳನ್ನು ಮಾತ್ರ ಓದುವವರು. ಶ್ರೀಮತಿ ಕಣವಿ ಲಲಿತ ಸಾಹಿತ್ಯದ ಪರಿಚಯವನ್ನು ಅವರಿಗೆ ಮಾಡಿಕೊಡುವರು. ಒಬ್ಬರು ಇನ್ನೊಬ್ಬರಿಗೆ ನಾವು ಓದುಗನ ದೃಷ್ಟಿಕೋನವನ್ನು ಒದಗಿಸಿಕೊಡುತ್ತೇವೆಂದು ಈ ದಂಪತಿಗಳು ಹೇಳುತ್ತಾರೆ

ಶ್ರೀ ಸಂಗಪ್ಪ ಮಾಳವಾಡ ಮತ್ತು ಶ್ರೀಮತಿ ಶಾಂತಕ್ಕ ಮಾಳವಾಡರೂ ಸಾಹಿತ್ಯಕ ಆಸಕ್ತಿ-ಹವ್ಯಾಸದ ದಂಪತಿಗಳು. ಶ್ರೀ ಮಾಳವಾಡರು ವಿಚಾರಶೀಲ, ವಿಮರ್ಶಾತ್ಮಕ ಸಾಹಿತ್ಯದವರು. ಶ್ರೀಮತಿಯವರು ಲಲಿತ ಸಾಹಿತ್ಯದವರು. ಈ ಸಾಹಿತ್ಯದ ಆಸಕ್ತಿ ಇವರಿಗೆ ಸಂಸಾರದಲ್ಲಿ ಒಂದು ನೆಮ್ಮದಿ



ಶ್ರೀ ಮತ್ತು ಶ್ರೀಮತಿ ಮಾಳವಾಡ



ಶ್ರೀ ನಿರಂಜನ ಮತ್ತು ಅನುಪಮಾ ನಿರಂಜನ




ಶ್ರೀ ಕೃಷ್ಣರಾವ ಮತ್ತು ಶ್ರೀಮತಿ ಚಂದ್ರಭಾಗಾದೇವಿ



ಜಂತಲಿ ದಂಪತಿಗಳು

ಒಪ್ಪಗಿಸಿದೆ. ಅದೊಂದು ದೊಡ್ಡ ಅನುಕೂಲವೇ ಆಗಿದೆ. ಒಂದೇ ಬಗೆಯ ಶಿಕ್ಷಿತವರ್ಗದವರಿರುವದರಿಂದ ಇಬ್ಬರೂ ಸೇರಿ ಅವರನ್ನು ಬರಮಾಡಿಕೊಳ್ಳುತ್ತಾರೆ. ಅಂಥ ಸಮಾರಂಭಗಳಲ್ಲಿ ಇಬ್ಬರೂ ಸೇರಿ ಪಾಲ್ಗೊಳ್ಳುತ್ತಾರೆ. ಬರೆಹದ ಬಗೆಗೆ ಸ್ವಾರಸ್ಯಕರವಾದ ಚರ್ಚೆ ನಡೆಯುವುದುಂಟು. ಒಮ್ಮೊಮ್ಮೆ ಭಿನ್ನಾಭಿಪ್ರಾಯ ಮೂಡುತ್ತಿರುವದುಂಟು. ಶ್ರೀಮತಿಯವರು ಗೃಹಿಣಿಯ ಹೊಣೆಯನ್ನು ಹೊರಬೇಕಾಗುವದರಿಂದ ಬಿಡುವಿನ ಸಮಯ ಬೇರೆಯಾಗಿ ಅಷ್ಟರ ಮಟ್ಟಿಗೆ ಅನಾನುಕೂಲತೆಯಾಗುತ್ತಿದೆ. ವಿಚಾರ ವಿಮರ್ಶಾ ಸಾಹಿತ್ಯವನ್ನು ಶ್ರೀ ಮಾಳವಾಡರು, ಲಲಿತ ಸಾಹಿತ್ಯವನ್ನು, ಶ್ರೀಮತಿಯವರೂ ಓದುತ್ತಾರೆ. ಓದಿದ ಕೃತಿಗಳ ಒಳೆಯ ಭಾಗಗಳನ್ನು ಪರಸ್ಪರ ತಿಳಿಸುತ್ತಾರೆ. ಪತ್ರವ್ಯವಹಾರವು ಸಾಮಾನ್ಯವಾಗಿ ಒಂದೇ ಆಗಿರುವದರಿಂದ ದಂಪತಿಗಳ ಪರವಾಗಿ ಶ್ರೀಮತಿ ಮಾಳವಾಡರು ಪತ್ರವ್ಯವಹಾರ ನಡೆಸುತ್ತಾರೆ. ಸಂತಾನ ಪ್ರಾಪ್ತಿಯ ಅಭಾವವನ್ನು ಕೂಡ ಈ ಸಾಹಿತ್ಯಾಸಕ್ತಿ ನಮಗೆ ತುಂಬಿಕೊಟ್ಟಿದೆಯೆಂದು ಈ ದಂಪತಿಗಳು ಹೇಳುತ್ತಾರೆ.

ಶ್ರೀ ಕೆ.ಎಸ್. ನಿರಂಜನ ಮತ್ತು ಶ್ರೀಮತಿ ಅನುಪಮಾ ನಿರಂಜನ ಸಾಹಿತ್ಯಕ ದಂಪತಿಗಳು. ಶ್ರೀ ನಿರಂಜನರು ವೃತ್ತಿ ಹವ್ಯಾಸಗಳೆರಡರಿಂದಲೂ ಸಾಹಿತಿಗಳು. ಶ್ರೀಮತಿ ಅನುಪಮಾ ವೃತ್ತಿಯಿಂದ ವೈದ್ಯರು. ಸಾಹಿತ್ಯ ಅವರ ಪ್ರಬಲವಾದ ಹವ್ಯಾಸ. ಈ ದಂಪತಿಗಳಿಗೆ ಅದು ಅನುಕೂಲವನ್ನು ತಂದು ಕೊಟ್ಟಿದೆ. ಅವರು ಪರಸ್ಪರ ವಿಚಾರವಿನಿಮಯ, ಚರ್ಚೆ, ಟೀಕೆಗಳನ್ನು ನಡೆಸುತ್ತಾರೆ. ಇದರಿಂದ ತಮಗೆ ಪ್ರಯೋಜನವೇ ಆಗಿದೆಯೆನ್ನುತ್ತಾರೆ. ಆದರೆ ಸತಿ-ಪತಿಯರಲ್ಲಿ ವೈಯಕ್ತಿಕ ಭೇದಗಳಿಲ್ಲ. ಇದಕ್ಕೆ ಪ್ರತಿಯಾಗಿ ಮನೆಯಲ್ಲಿ ಸಾಹಿತ್ಯಕ ವಾತಾವರಣ ನಿರ್ಮಾಣವಾಗಿದೆ. ಮಕ್ಕಳಿಗೂ ಅದರ ಗೀಳು (ಹಿರಿಯ ಮಗಳು ತೇಜಸ್ವಿನಿ ಬರೆದ ಕವನ ಸಂಗ್ರಹ ಪ್ರಕಟವಾಗಿದೆ.) ವಿರಸ, ತಪ್ಪು ತಿಳುವಳಿಕೆಗಳು ಮೂಡಿದ್ದರೂ ಅವು ಅಂಥ ಮಹತ್ವದವಲ್ಲ. ಆದರೆ ಬರವಣಿಗೆಯಲ್ಲಿ ಸರಿಯೆನಿಸಿದುದನ್ನು ಬರೆಯುವದು. ಆ ವಿಷಯದಲ್ಲಿ ಇಬ್ಬರೂ ಸ್ವತಂತ್ರರು. ನಿರಂಜನರಿಗೆ ಸಾಹಿತ್ಯ ಪೂರ್ಣ ಸಮಯದ ವೃತ್ತಿ. ಶ್ರೀಮತಿ ಅನುಪಮಾರಿಗೆ ವೈದ್ಯಕೀಯ ಹಾಗೂ ಮನೆಕೆಲಸಗಳ ಬಳಿಕ ಉಳಿದ ವೇಳೆ. ಸಾಹಿತ್ಯ ರಚನೆಗೆ ಬಿಡುವು. ಮನೆಯಲ್ಲಿರುವಾಗ ಪರಸ್ಪರ ಚರ್ಚೆ ನಡೆಸುವದುಂಟು. ಶ್ರೀ ನಿರಂಜನರು ಕಟ್ಟುನಿಟ್ಟಿನ ಅಭಿಪ್ರಾಯದವರು. ಹೀಗಾಗಿ ಪರಸ್ಪರ ಸಾಹಿತ್ಯವರ್ಧನೆಗೆ ನೆರವಾಗಿ ನಿಂತಿದ್ದಾರೆ. ಹೀಗೆ ಸಾಹಿತ್ಯಕ ಒಲವು ಅವರನ್ನು ಒಂದುಗೂಡಿಸಿದೆ. ಪರಸ್ಪರರು ಕೈಹಿಡಿದುದೇ ಒಂದು ಅನುಭವವೆನ್ನುವ ಈ ದಂಪತಿಗಳಿಗೆ ಈ ಒಂದೇ ಹವ್ಯಾಸದಿಂದ ಅನಾನುಕೂಲಗಳಾಗಲಿ, ತೊಂದರೆಗಳಾಗಲಿ ಇಲ್ಲ.



ಶಿಲ್ಪದಲ್ಲಿ ಶಿವ

ಶಂಕರಾನಂದ

"ಸತ್ಯಂ-ಶಿವಂ ಸುಂದರಂ" ಎಂದು ಶಿವನ ಹಿರಿಮೆಯನ್ನು, ಮಹಿಮೆಯನ್ನು ವಿಶ್ವವ್ಯಾಪಿಯಾಗಿ ಹಾಡಲಾಗಿರುವುದು. ವೇದ-ಪುರಾಣಗಳ ಕಾಲದಿಂದಲೂ ಅವನ ಆರಾಧನೆ ಸಾರ್ವತ್ರಿಕವಾಗಿದೆ. ಪ್ರಾಣಿ ಜಗತ್ತಿನ ಒಡೆಯನಾಗಿ ಅವನು ಪಶುಪತಿಯೆನಿಸಿದ್ದಾನೆ; ಅರಣ್ಯ-ಸಸ್ಯಗಳ ಅಧಿಪತಿಯೆನಿಸಿ ವನಸ್ಪತಿಯೆನಿಸಿದ್ದಾನೆ; ಭಯಂಕರ ವಿನಾಶಕಾರಿಯೆನಿಸಿ ರುದ್ರನೆನಿಸಿದ್ದಾನೆ; ಕಲ್ಯಾಣ ಗುಣದವನೆನಿಸಿ ಶಿವನೆನಿಸಿದ್ದಾನೆ. ಮಾನವ ಕುಲಕ್ಕೆ ಸಂಗೀತ ಶಿಲ್ಪಗಳನ್ನು ಕಲಿಸಿದವನು ಅವನು. ಅವರಿಗೆ ಬುದ್ಧಿಯನ್ನು ದಯಪಾಲಿಸಿದವನು, ಭವ ಬಂಧನ ಹರಿಯಲು ಯೋಗವನ್ನು ಕಲಿಸಿದವನು. ಇದರ ಜೊತೆಗೆ ತಾಪಸಿ, ಶುಭಕಾರಿ ಸರ್ವಶಕ್ತನು ಅವನು. ಅಂತೇ ಮಹಾದೇವ, ಈಶ್ವರ, ಪರಮೇಶ್ವರ ಎಂಬ ಅಭಿದಾನವನ್ನು ಪಡೆದವನು ಅವನು. ವೇದಾಂತದಲ್ಲಿಯ ಏಕಾಮೇವಾದ್ವಿತೀಯ ಪುರುಷನೆನಿಸಿದವನು ಶಿವನು. ಮಹಾಕವಿ ಕಾಳಿದಾಸನು ಅಂತೇ ಅವನನ್ನು ಸ್ಥಾಣು, ಎಂದು ಬಣ್ಣಿಸಿದ್ದಾನೆ.

ಸೃಷ್ಟಿ-ಸ್ಥಿತಿ-ಲಯಗಳ ಸಾಕಾರ

ವಿಶ್ವರೂಪಿ ಆತ್ಮದಲ್ಲಿ ಲೀನವಾಗಿ ಮಹಾಯೋಗಿಯೂ ಎನಿಸಿದ್ದಾನೆ. ಯೋಗಮೂರ್ತಿಯಾಗಿ ಆತ್ಮ ನಿಗ್ರಹವನ್ನು ತೋರಿ ಆಧ್ಯಾತ್ಮಿಕ ಉನ್ನತಿಗೆ ಸಾಧಕನಾಗಿದ್ದಾನೆ. ಭಾರತೀಯ ಧಾರ್ಮಿಕ ಆಚಾರ ವಿಚಾರಗಳಿಗೆ ಪ್ರೇರಕನಾಗಿದ್ದಾನೆ. ಈ ಅಂಶವು ವಿಸ್ತಾರವಾದಾಗ ದಕ್ಷಿಣಾಮೂರ್ತಿಯೆನಿಸಿರುವನು. ಯೋಗ ದಕ್ಷಿಣಾಮೂರ್ತಿಯಾಗಿ ಯೋಗದ ಗುರುವೆನಿಸಿರುವನು. ತಾಂತ್ರಿಕ ಧರ್ಮದಲ್ಲಿ ಲಕುಳೀಶನಾಗಿ ಪಾತ್ರ ನಿರ್ವಹಿಸುವನು. (ಶಿವನ ೨೮ ನೆ ಅವತಾರವೆಂದು ಪರಿಗ್ರಹಿತನಾಗಿದ್ದಾನೆ) ಜ್ಞಾನ ಇಲ್ಲವೇ ವ್ಯಾಖ್ಯಾನ ದಕ್ಷಿಣಾಮೂರ್ತಿಯಾಗಿ ಇಲ್ಲವೇ ಕಲೆ-ಶಾಸ್ತ್ರಗಳ ಆಗರವೆನಿಸಿದ್ದಾನೆ. ವೀಣಾಧರಮೂರ್ತಿಯಾಗಿ ವೀಣೆಯಿಂದ ಸುಮಧುರ ನಾದಮಾಧುರ್ಯವನ್ನು ನೀಡುತ್ತಿದ್ದಾನೆ. ಸೌಂದರ್ಯದ ಅಧಿಪತಿಯೆನಿಸಿ ಉಮೆಯನ್ನು ವರಿಸಲು ಬಂದು ಕಲ್ಯಾಣಸುಂದರಮೂರ್ತಿಯೆನಿಸಿದ್ದಾನೆ. ಲೋಕಕಲ್ಯಾಣಕಾರಕನಾಗಿ ಅನುಗ್ರಹಮೂರ್ತಿಯೆನಿಸಿದ್ದಾನೆ. ಪ್ರಳಯಕಾರಿಯಾಗಿ ಸಂಹಾರಮೂರ್ತಿಯಾಗಿ ಕಾಣಿಸಿಕೊಂಡಿದ್ದಾನೆ. ಸರ್ವಸಂಗತ್ಯಾಗಿಯಾಗಿ ಭಿಕ್ಷಾಟನಮೂರ್ತಿಯಾಗಿ ಕಂಗೊಳಿಸಿದ್ದಾನೆ. ಸೃಷ್ಟಿ ಸ್ಥಿತಿಲಯಗಳ ಸಾಕಾರವಾಗಿ ಮಹೇಶ್ವರಮೂರ್ತಿಯೆನಿಸಿದ್ದಾನೆ. ನಾಟ್ಯಶಾಸ್ತ್ರದ ಅಧಿಪತಿಯೆನಿಸಿ, ಅದರ ಗುರುವಾಗಿ, ಅಮರತಾಂಡವ ನೃತ್ಯವನ್ನು ಸೃಷ್ಟಿಸಿ ನಟರಾಜನಾಗಿ ಜನಮನವನ್ನು ಸೂರೆಗೊಂಡಿದ್ದಾನೆ. ವಿಶ್ವದಲ್ಲಿ ಹುದುಗಿದ ಅನಂತಶಕ್ತಿಯ ದ್ಯೋತಕನಾಗಿ ಲಿಂಗರೂಪಿಯಾಗಿ ಹೆಚ್ಚಾಗಿ ಕಾಣಿಸಿಕೊಂಡಿದ್ದಾನೆ.

ಅವನು ಗಣಾಧಿಪತಿಯೂ ಅಹುದು. ಅವನ ಗಣಗಳು ಅತ್ಯಂತ ಬಲಶಾಲಿಯಾದುವೆನಿಸಿವೆ. ಅರ್ಧನಾರೀಶ್ವರ ರೂಪವು ಅವನ ಇನ್ನೊಂದು ಆಕರ್ಷಕ ರೂಪವಾಗಿರುವುದು. ಉಮೆಯ ಪ್ರೀತಿ ನಿಷ್ಠೆಗಳಿಗೆ ಮಾರುಹೋದ ಶಿವನು ಅವಳು ತನ್ನ ಅವಿಭಾಜ ಅಂಗವಾಗಿರುವಂತೆ ವರವನ್ನು ಕರುಣಿಸಿದನು. ಹೀಗೆ ಅವಳು ಅವನ ವಾಮ ಭಾಗಕ್ಕೆ ಶಾಶ್ವತವಾಗಿ ನೆಲಸಿದಳು. ಶಿವನು ಅರ್ಧನಾರೀಶ್ವರನಾದನು. ಸ್ತ್ರೀ ಪುರುಷ ಅಂಶಗಳ ಸಂಯೋಗ ರೂಪವನ್ನು ಧರಿಸಿ ನಿಂತನು. ಆದರ್ಶ ದಾಂಪತ್ಯದ ಅಂಶವನ್ನು ಶಿವನು ಈ ಮೂಲಕ ತೋರಿದನು. ಸೋಮಸ್ಕಂದವಾಗಿ ಪುತ್ರವಾತ್ಸಲ್ಯವನ್ನು ತೋರಿ ಆದರ್ಶ ಪಿತನು ಎನಿಸಿದನು. ಹೀಗೆ ಮಂಗಲಮೂರ್ತಿಯಾಗಿ ಶಿವನು ಭಕ್ತರ ಇಷ್ಟಾರ್ಥಗಳನು ಈಡೇರಿಸುವ ಕರುಣಾಸಿಂಧುವಾಗಿ ಆದರ್ಶ ಪತಿ. ಆದರ್ಶಪಿತನಾಗಿ ಜನಮನದಲ್ಲಿ ನೆಲೆಯೂರಿದ್ದಾನೆ. ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣೀಭೂತನೆನಿಸಿದ್ದಾನೆ.

ಛಾಯಾ ಚಿತ್ರಗಳು:

ಬಿ. ಕೇಸರಸಿಂಗ, ಸುರೇಂದ್ರ ಕ್ಷತ್ರಿ

ಜೆ. ಕೆ. ರಾಶಿನಕರ

ಶಿವನು ತನ್ನ ನಾಲ್ಕು ಕೈಗಳಲ್ಲಿ ಒಂದರಲ್ಲಿ ಡಮರುವನ್ನು ಧರಿಸಿರುವನು; ಇನ್ನೊಂದರಲ್ಲಿ ಮೃಗವನ್ನು ಧರಿಸಿರುವನು. ಮೂರನೆಯದು ಭಕ್ತರಿಗೆ ವರವನು ನೀಡುವ ಮುದ್ರೆಯ ದ್ದರೆ ನಾಲ್ಕನೆಯದು ಮಾನವ ಕುಲಕ್ಕೆ ರಕ್ಷಣೆಯನ್ನು ಒದಗಿಸುವ ಅಭಯ ಮುದ್ರೆಯನ್ನು ಹೊಂದಿರುವದು. ಹೀಗೆ ನಾನಾ ಬಗೆಯ ಮುದ್ರೆಗಳಿಂದ ಕಂಗೊಳಿಸುವನು ಶಿವನು ಅವನು ಇನೂ ಹಲವಾರು ರೂಪಗಳಲ್ಲಿ ಕಾಣಿಸಿಕೊಳ್ಳುವುದೂ ಉಂಟು.

ಕರುಣಾಮಯಿ; ಗಾತ್ರಾತೀತ

ಶಿವನು ಭಕ್ತರಿಗೆ ಬೇಡಿದ್ದನ್ನು ಕೊಡಬಲ್ಲ ಮತ್ತು ಅಂಥ ಐಸಿರಿಯುಳ್ಳವನು. ಆದರೆ ಸ್ವತಃ ಬಡತನದ ಜೀವನವನು ನಡೆಸುವನು. ಸ್ಮಶಾನದಲ್ಲಿ ಅವನ ವಾಸ. ರುಂಡಮಾಲಾಧಾರನು. ತಲೆಯ ಮೇಲೆ ಗಂಗೆಯನ್ನು ಧರಿಸಿದವನು. ಭಸ್ಮಲೇಪಿತನು. ಹುಲಿ ಚರ್ಮ ಇಲ್ಲವೇ ಆನೆಯ ಚರ್ಮವನು ಮಾತ್ರ ಹೊತ್ತಿರುವನು. ಜಟಾಧಾರಿ. ಹಾವು ಅವನ ಪರಮ ಭೂಷಣ. ನಂದಿ ಅವನ ವಾಹನವು. ಹಣೆಗಣ್ಣನು. ಆದರೆ ಆ ಕಣ್ಣು ಜಾಜ್ವಲ್ಯವಾದುದು. ಉರಿಗಣ್ಣು ಎಂದೇ ಹೆಸರು ಪಡೆದುದು. ಅವನ ಕೋಪಾತಿರೇಕವನ್ನು ಈ ಕಣ್ಣು ವ್ಯಕ್ತಪಡಿಸುವುದು. ಕಾಮದಹನಕ್ಕೆ ಉಪಯೋಗವಾದುದು ಈ ಕಣ್ಣು. ಆ ಮೂಲಕ ಅವನು 'ಸೃಷ್ಟಿ'ಯನ್ನು ನಿಯಂತ್ರಿಸಲು ಮುಂದಾದನು. ಈ ಹಣೆಗಣ್ಣು ತೆರೆಯದಂಥ ಸಮಾಧಾನವನ್ನು ಅವನು ತಂದುಕೊಳ್ಳುವನು. ತ್ರಿಶೂಲಧಾರಿ.

(ಕನ್ನಡನಾಡಿನ ಮತ್ತು ವಿವಿಧ ರಾಜ್ಯಗಳಲ್ಲಿ ನಾನು ಸಂಚರಿಸುತ್ತಿದ್ದಾಗ ಶಿವನ ಶಿಲ್ಪ ವೈಭವವನ್ನು ಕಂಡಾಗ ಈ ಲೇಖನದ ವಿಚಾರ ಮೂಡಿತು. ಶ್ರೀ ಬಿ. ಕೇಸರಸಿಂಗರು ಹೆಚ್ಚಿನ ಚಿತ್ರಗಳನ್ನು ಒದಗಿಸಲು ಮುಂದೆ ಬಂದರು. ಇಲ್ಲಿ ಸಾಧ್ಯವಾದ ಮಟ್ಟಿಗೆ ವ್ಯಾಪಕರೀತಿಯಲ್ಲಿ "ಶಿಲ್ಪದಲ್ಲಿ ಶಿವ" ಕಂಡು ಬಂದ ಬಗೆ ರೂಪಗೊಂಡ ರೀತಿ ವಿವರಿಸಲು ಯತ್ನಿಸಿದ್ದೇನೆ. ವಿಶ್ವವ್ಯಾಪಿ ಶಿವನನ್ನು, ಅವನ ಶಿಲ್ಪವೈಭವವನ್ನು ಈ ಕಿರುಲೇಖನದಲ್ಲಿ ಪೂರ್ಣ ಮಾಡಿಸಲು ಸಾಧ್ಯವಾಗಿಲ್ಲ. ಇನ್ನೂ ಅನೇಕ ಸ್ಥಳಗಳಲ್ಲಿ ಉಳಿದಿರುವ ಸಾಧ್ಯತೆಯೂ ಇದೆ. ಈ ದಿಸೆಯಲ್ಲಿ ಇದೊಂದು ಯತ್ನ ಎಂದು ಮಾತ್ರ ಓದುಗರು ಪರಿಗಣಿಸಬೇಕು.

ಲೇಖಕ)

ಈ ವಿಶ್ವವನ್ನು ಆಳಲು ಅವನಿಗೆ ಅದೊಂದೇ ಅಸ್ತ್ರವು ಸಾಕು. ಡಮರುವಿನಿಂದ ಮೊದಲ ನಾದವನ್ನು, ನೀಡಿದನವನು. ಈ ನಾದದಿಂದ ಭಾಷೆಗಳು ರೂಪುಗೊಂಡವು. 'ಮಹೇಶ್ವರ ಸೂತ್ರ'ದಲ್ಲಿ ಅದಕ್ಕಾಗಿ ಸೂತ್ರಗಳನ್ನು ಶಿವನು ನಿರ್ಮಿಸಿದನು.

ಶಿವನು ಗಾತ್ರಾತೀತವೆನಿಸಿದ್ದಾನೆ. ಋಗ್ವೇದದ ಪುರುಷ ಸೂಕ್ತದಲ್ಲಿ ಈ ಮಾತನ್ನು ಹೇಳಿ ಬ್ರಹ್ಮ ವಿಷ್ಣು ಈರ್ವರು ಈ ವಿಷಯದಲ್ಲಿ ಪಡೆದ ಅನುಭವವನ್ನು ನಿರೂಪಿಸಲಾಗಿರುವುದು.ಅದೇ ರೀತಿಯಲ್ಲಿ ಅವನು ಅಭವನು ಮತ್ತು ಭವನಾಗಿದ್ದಾನೆ; ವಿಶ್ವಕಲ್ಯಾಣಕಾರಿ ಶಂಕರನು, ಪ್ರಳಯ ಕಾಲದಲ್ಲಿ ಅವನು ತಳೆಯುವ ರೂಪವು, ಭಯಂಕರವಾದುದೇನೊ ನಿಜವು; ಆದರೆ ತುಂಬ ಕರುಣಾಮಯಿ. ಕೈಲಾಸವನ್ನು ಅಲ್ಲಾಡಿಸಿದ ಉದ್ಧಟತನ ತೋರಿದ ರಾವಣನನ್ನು ಮೆಚ್ಚಿಕೊಂಡವನು ಶಿವನು. ಮಾರ್ಕಾಂಡೇಯನನ್ನು ಯಮನಿಂದ ರಕ್ಷಿಸಿ ಚಿರಂಜೀವಿಯಾಗಿ ಮಾಡಿದನು. ಇಂಥ ಮೃದು ಸ್ವಭಾವದವನು. ಅಂತೆಯೇ ಬಸವಣ್ಣನವರು ನಂಬಿ ಕರೆದೆಡೆ ಓ ಎಂಬನೆ ಶಿವನು ಎಂದು ಅವನ ಭಕ್ತ ಪಕ್ಷಪಾತವನ್ನು ಬಣ್ಣಿಸಿದ್ದಾರೆ.

ಶಿವೋಪಾಸನೆ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಮಧ್ಯ ಏಸಿಯದಿಂದ ಕನ್ಯಾಕುಮಾರಿಯವರೆಗೆ ಸಿಂಧೂ ನದಿಯಕೊಳ ದಿಂದಇಂಡೋಚೀನ ಇಂಡೋನೇಶಿಯಗಳವರೆಗೆ ಸಮಸ್ತ ಏಶಿಯದಲ್ಲಿ ಪ್ರಾಚೀನ ಕಾಲದಲ್ಲಿಯೇ ಶಿವೋಪಾಸನೆ ಪ್ರಚಲಿತವಿತ್ತೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ: ಜಾವಾ, ನೇಪಾಳಗಳಲ್ಲಿ ಈಗಲೂ ಶಿವೋಪಾಸನೆ ಕಂಡುಬರುತ್ತಿದೆ. ಭಾರತದಲ್ಲಿ ಸಾರ್ವತ್ರಿಕವಾಗಿದ್ದರೂ ದಕ್ಷಿಣದಲ್ಲಿ ಕೇರಳದಲ್ಲಿ ಸ್ವಲ್ಪ ಮಟ್ಟಿಗೆ ವಿರಳ. ಆದರೆ ಕರ್ನಾಟಕ, ಆಂಧ್ರ, ತಮಿಳು ನಾಡುಗಳಲ್ಲಿ ಅವನ ಉಪಾಸನೆಗೆ ಹೆಚ್ಚು ಇಂಬು ದೊರೆತಿದೆ. ಉತ್ತರಭಾರತದಲ್ಲಿ ಗುಜರಾಥ, ಮಹಾರಾಷ್ಟ್ರ, ಬಿಹಾರ, ಓಡಿಸಾ ಹಾಗೂ ಉತ್ತರ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗಿರುವುದು. ರಾಜಸ್ಥಾನದಲ್ಲಿ ಕೆಲಮಟ್ಟಿಗೆ ಕಂಡು ಬಂದರೂ ಪಂಜಾಬದಲ್ಲಿ ವಿರಳ. ಬಂಗಾಳದಲ್ಲಿ ಅಷ್ಟಾಗಿರುವದಿಲ್ಲ. ಶಿವ ಭಾರತೀಯ ಜನಮನವನ್ನು ಸೂರೆಗೊಂಡ ಏಕಮೇವ ದೇವತೆಯೆಂದರೂ ಕೂಡ ತಪ್ಪೆನ್ನಿಸುವದಿಲ್ಲ. ಅಂತೆಯೇ ಪತಂಜಲಿ ಶಿವನನ್ನು ಲೌಕಿಕ ದೇವತೆ-ಜನ ಸಾಮಾನ್ಯರ ದೇವತೆ-ಎಂದು ಕರೆದಿದ್ದಾನೆಂದು ತೋರುತ್ತದೆ.

ಶಿವೋಪಾಸಕರು ತಮ್ಮ ಈ ಇಷ್ಟ ದೇವತೆಯನ್ನು ನಾನಾ ಭಂಗಿಗಳಲ್ಲಿ, ರೂಪಗಳಲ್ಲಿ ಕಾಣಬಯಸುವುದು, ಆರಾಧಿಸಲು ಮುಂದಾಗುವುದು ಸ್ವಾಭಾವಿಕ. ಅದಕ್ಕನುಗುಣವಾಗಿ ಅವರು ಶಿವನ ವಿಗ್ರಹ-ಪ್ರತಿಮೆಗಳನ್ನು ಶಿಲೆ-ಕಂಚುಗಳಲ್ಲಿ ನಿರ್ಮಿಸಿದರು. ಶಿಲ್ಪಿಗಳು ಇಲ್ಲಿ ಅಪೂರ್ವ ರೀತಿಯಲ್ಲಿ ಕೆತ್ತನೆ ಕೆಲಸವನ್ನು ನಡೆಯಿಸಿ ತಮ್ಮ ಹಸ್ತಕೌಶಲವನ್ನು ಮೆರೆದಿದ್ದಾರೆ. ಕೆಲವರು ಕಾಲಾರಿಮೂರ್ತಿ, ಭೈರವನಾಗಿ ರೂಪಿಸಿದ್ದರೆ, ಹಲವರು ನಟರಾಜನಾಗಿ ರೂಪಿಸಿದ್ದಾರೆ. ಇನ್ನು ಕೆಲವರು ನಂದಿಸಹಿತ ಶಿವನನ್ನು ರೂಪಿಸಿದ್ದಾರೆ. ಅರ್ಧನಾರೀಶ್ವರನಾಗಿ, ತ್ರಿಮುಖ, ಚತುರ್ಮುಖನಾಗಿ, ರೂಪುಗೊಂಡುದು ಉಂಟು. ನಾಲ್ಕು ಕೈಗಳಿಂದ ಹದಿನಾರು ಕೈಗಳನ್ನು ಅವನಿಗೆ ಕಲ್ಪಿಸಿದರು. ಉಮಾ ಸಹಿತ ಶಿವನನ್ನು ಅಲ್ಲದೇ, ಅವರ ಕಲ್ಯಾಣೋತ ವವನ್ನು ಚಿತ್ರಿಸಿ ಆದರ್ಶ ದಾಂಪತ್ಯದ ಆದರ್ಶವನ್ನು ರೂಪಿಸಿದ್ದೂ ಉಂಟು. ಇನ್ನು ಹಲವರು ಗರ್ಭಗೃಹಗಳಲ್ಲಿ ಅರ್ಚನೆಗೆ ಅವನ ವಿಶ್ವರೂಪವಾದ ಲಿಂಗದ ಬದಲು ವಿಗ್ರಹವನ್ನು ಪ್ರತಿಷ್ಠಾಪಿಸಿದ್ದೂ ಇದೆ. ಶಿವಲೀಲೆಯ ಹಲವಾರು ಸನ್ನಿವೇಶಗಳನ್ನು ರೂಪಿಸಿ ತೃಪ್ತಿಗೊಂಡವರೂ ಉಂಟು.

ಅಲಭ್ಯ ಕೆತ್ತನೆಗಳು

ಸಿಂಧು ಕೊಳದ ಮುದ್ರೆಗಳಲ್ಲಿ ಶಿವನ ಯೋಗ ಮುದ್ರೆಯ ಚಿತ್ರವು ಲಭ್ಯವಾಗಿದೆ. ಅಲ್ಲಿಂದಲೇ ಶಿವನ ಈ ವಿವಿಧ ರೂಪಗಳ ಕೆತ್ತನೆಗೆ ಆರಂಭವಾದುದು ವ್ಯಕ್ತವಾಗುತ್ತದೆ. ಆದರೂ ಪರಕೀಯರ ದಾಳಿಗಳಿಂದ ನಾಶಗೊಂಡ ಹಲವಾರು ಶಿಲ್ಪ ಕೃತಿಗಳಲ್ಲಿ ಮಸಳಿಸಿ ಹೋಗಿದ್ದರೂ ಇನ್ನು ಅನೇಕ ಅಪೂರ್ವ, ಅಪರೂಪ ಕೆತ್ತನೆಗಳು ಕಂಡು ಬರುತ್ತಿವೆ. ಅನೇಕ ಶೈವ ಪಂಥದ ರಾಜರು ಈ ಕೆಲಸದಲ್ಲಿ ಮುಂದಾಗಿ ತುಂಬ ಸಮರ್ಥ ರೀತಿಯಲ್ಲಿ ಅದನ್ನು ನಿರ್ವಹಿಸಿರುವರು. ರಾಷ್ಟ್ರಕೂಟರು, ಪೂರ್ವದ ಚಾಳುಕ್ಯರು ಮತ್ತು ಚೋಳರು ದಕ್ಷಿಣದಲ್ಲಿ ಇಂಥ ಅಪೂರ್ವ ಕಾರ್ಯವನ್ನು ನಿರ್ವಹಿಸಿದವರಲ್ಲಿ ಪ್ರಮುಖರು. ಉತ್ತರದಲ್ಲಿ ಪ್ರತಿಹಾರರು ಮತ್ತು ಚಂದೇಲರು, ಈ ಕಾರ್ಯ ಕೈಕೊಂಡ ಪ್ರಮುಖರು. ಪೂರ್ವದಲ್ಲಿ ಕಳಿಂಗರು ಈ ವಿಷಯದಲ್ಲಿ ಪ್ರಮುಖರು.

ಇವೆಲ್ಲವುಗಳಲ್ಲಿ ರಾಷ್ಟ್ರಕೂಟ ೧ನೇ ಕೃಷ್ಣನು ಕಟ್ಟಿಸಿದ ಎಲ್ಲೋರಾದ ಕೈಲಾಸನಾಥ ದೇವಾಲಯವು ನಿಜವಾಗಿ ಅಪ್ರತಿಮವಾದುದು. ವಿಶ್ವದ ಕಲಾಸೃಷ್ಟಿಗಳಲ್ಲಿ ಅದೊಂದೆಂದು ಪರಿಗಣಿತವಾಗಿದೆ. ಮೊದಲ ನೋಟಕ್ಕೇ ಅದು ಶಿವನ ವಿಶ್ವರೂಪದಂತೆ ತೋರುವುದು. ಅಲ್ಲಿಯ ಕೆತ್ತನೆಗಳು ಶಿವಕಾರುಣ್ಯದ, ಅವನ ವಿಶ್ವರೂಪ ದರ್ಶನದ ನೋಟವನ್ನು ಒದಗಿಸಿ ಒಂದು ಪ್ರತ್ಯೇಕ ಸೃಷ್ಟಿಯಾಗಿವೆ ಅಲ್ಲಿರುವ ವಿಗ್ರಹಗಳು ಹೊಚ್ಚ ಹೊಸವೆಂಬಂತೆ ಆಕರ್ಷಕವಾಗಿವೆ. ಶಿವನ ಸಕಲ ಅಂಶಗಳು-ಬುದ್ಧಿ ಕಲ್ಯಾಣ, ಪ್ರೇಮಮಯತೆ, ಸೃಷ್ಟಿ,ಸ್ಥಿತಿ, ಲಯ-ಕವಿಯ ಕಲ್ಪಕ ಬುದ್ಧಿಯಂತೆ ಒಡ ಮೂಡಿವೆ. ಶಿವನು ಪಾರ್ವತಿಯೊಂದಿಗೆ ಸಂಭಾಷಿಸುವ ಸನ್ನಿವೇಶ, ಪಾರ್ವತಿಯನ್ನು ಪ್ರೇಮದಿಂದ ಮೈದಡವುವ ಸನ್ನಿವೇಶ, ಪಾರ್ವತಿ ಅವನಿಗೆ ಅಂಟಿಕೊಂಡು ಕುಳಿತಿರುವ ಸನ್ನಿವೇಶ ತುಂಬ ಮಾನವೀಯವಾಗಿ ಅಲ್ಲಿ ಚಿತ್ರಿತವಾಗಿವೆ. ರಾವಣ ಕೈಲಾಸ ಪರ್ವತವನ್ನು ಅಲುಗಾಡಿಸುತ್ತಿದ್ದಾನೆ; ಹೆಣ್ಣು ಹೃದಯದ ಪಾರ್ವತಿ ಗೊಂದಲಗೆಟ್ಟಿದ್ದಾಳೆ; ಅವಳು ತನ್ನ ಪತಿಯ ರಕ್ಷಣೆಯಲ್ಲಿ ಪಾಲಿದ್ದಾಳೆ; ಗಣಗಳು ಮತ್ತು ಸೇವಕಿಯರು ತುಂಬ ಗಾಬರಿಗೊಂಡು ಕುಳಿತಿದ್ದಾರೆ. ಆದರೆ ಶಿವ ಏನೇನೂ ಸಂಭವಿಸದಂತೆ ನಿಶ್ಚಲವಾಗಿ ಕುಳಿತಿದ್ದಾನೆ, ಎಂಥ ಅದ್ಭುತ ನಿಶ್ಚಿಂತೆ ಅದು!

ಶಿವ ಕಾಳಭೈರವನಾಗಿ ಪ್ರಳಯಾಂತಕನಾಗಿದ್ದಾನೆ: ಅವನ ಒಂದು ಹಸ್ತದ ಹೊರತಾಗಿ ಉಳಿದವುಗಳು ಭಯವುಂಟುಮಾಡುವಂತೆ ಸೆಟೆದುನಿಂತಿವೆ; ಒಂದು ಪಾರ್ವತಿಗೆ ಚಿಂತೆಗೇನೂ ಕಾರಣವಿಲ್ಲವೆಂದು ಸಂತೈಸುತ್ತಿದೆ. ಹಾಸ್ಯದ ಚಿತ್ರಗಳೂ ಇಷ್ಟೇ ಮಾನವೀಯವಾಗಿವೆ. ಶಿವ-ಪಾರ್ವತಿ ಪಗಡೆಯಾಡುತ್ತಿದ್ದಾರೆ. ಪಾರ್ವತಿಗೆ ಅದೇಕೊ ಆಟವನ್ನು ಮುಂದುವರಿಸಲು ಮನಸ್ಸಿಲ್ಲ. ಶಿವ ಅವಳ ಕೈ ಹಿಡಿದು ಆಟ ಮುಂದುವರಿಸಲು ಬಲವಂತಪಡಿಸುತ್ತಿದ್ದಾನೆ. ಅವರಿಬ್ಬರ ಮಧ್ಯದಲ್ಲಿ ದಾಳಪಟ್ಟಿಗಳಿವೆ, ಕೆಳಗಡೆ ಕಿಡಿಗೇಡಿ ನಂದಿ ತುಂಟತನ ನಡೆಸಿದ್ದಾನೆ. ಅವನು ಒಂದು ಕಾಲನ್ನು ಗಣದ ತಲೆಯ ಮೇಲೆ ಇರಿಸಿದ್ದಾನೆ. ಇಬ್ಬರು ಗಣಗಳು ಕೋಡು ಹಿಡಿದಿದ್ದಾರೆ; ಒಬ್ಬನು ಬಾಲ ತಿರುವುತ್ತಿದ್ದಾನೆ. ಯಜಮಾನ-ಯಜಮಾನಿ ಆಟದಲ್ಲಿ ಮಗ್ನರಾಗಿದ್ದಾರೆ; ಸೇವಕರೂ ವಿನೋದದಲ್ಲಿ ತೊಡಗಿದ್ದಾರೆ, ಇದು ನಿಜವಾಗಿ ಸುಖಸಂಕಥಾ ವಿನೋದವಲ್ಲವೆ?

ಶಿವ-ಪಾರ್ವತಿ ಕಲ್ಯಾಣ

ಅಲ್ಲಿ ನಮ್ಮ ಮನಸೆಳೆವ ಇನ್ನೊಂದು ನಯನ ಮನೋಹರ ದೃಶ್ಯ ಶಿವ-ಪಾರ್ವತಿ ಪರಿಣಯದ್ದು, ರತಿ ತನ್ನ ಪ್ರಿಯ ಪತಿ ಕಾಮದೇವನ ಕೈ ಹಿಡಿದು ಮುನ್ನಡೆಸುತ್ತಿದ್ದಾಳೆ; ಅವಳ ಸ್ನೇಹಿತನಾದ ವಸಂತ ಬೆಂಬತ್ತಿದ್ದಾನೆ. ಬ್ರಹ್ಮನು ಪಾರ್ವತಿಯ ಮಾತೆಗೆ ಮಗಳ ಮದುವೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದಾನೆ. ಇದರ ನಂತರ ಪರಿಣಯದ ಸನ್ನಿವೇಶವು. ಶಿವನು ಗಂಭೀರವೇ ಮೂರ್ತಿಭವಿಸಿದಂತಿದ್ದಾನೆ; ಲಜ್ಜಾಶೀಲೆಯಾದ ಪಾರ್ವತಿ. ಅವರ ಪರಿಣಯವಾಗಿದೆ. ಅವಳ ತಂದೆ, ತಾಯಿ ಮೇನಾದೇವಿ ಮತ್ತು ದೇವತೆಗಳು ಅಲ್ಲಿ ಸೇರಿದ್ದಾರೆ. ಶಿಲ್ಪದಲ್ಲಿ ಎಂಥ ಅದ್ಭುತವಾದ ಕೆತ್ತನೆ; ಚಿತ್ರಣ! ಶಿವ ಎಂಥ ಪ್ರೇಮಮಯಿ! ತನ್ನ ವಧುವನ್ನು ಆಲಂಗಿಸಿಸುವಾಗಲೂ ಎಂಥ ಬೆಡಗು ತೋರಿದ್ದಾನೆ! ಇದೆಂಥ ಅದ್ಭುತ ರಮ್ಯ ಶಿಲ್ಪ ಎಂದು ಪಾಶ್ಚಿಮಾತ್ಯ ಶಿಲ್ಪತಜ್ಞರು ಈ ಸನ್ನಿವೇಶಗಳಿಗೆ ಮಾರು ಹೋಗಿರುವರಲ್ಲಿ ಅಚ್ಚರಿಯೇನು? ಇದರ ಜೊತೆಗೆ ಶಿವತಾಂಡವ ನೃತ್ಯದ ವೈಖರಿ, ಸಪ್ತಮಾತೃಕೆಯರು ಅದನ್ನು ನಿರೀಕ್ಷಿಸುವುದು ಹೀಗೆ ಇನ್ನು ಕಲ ಸನ್ನಿವೇಶಗಳು ಚಿತ್ರಿತವಾಗಿವೆ. ಏನದರ ಕೆತ್ತನೆ! ಜೀವನದ ಬೆಡಗು! ಶಿಲ್ಪದ ಸೊಗಸು! ಆ ಭಂಗಿ, ವಿನ್ಯಾಸ, ರೇಖಾ ಚಿತ್ರಣ ಅಂಗ ಸೌಷ್ಟವದ ಚಲವು, ಕಣ್ತಣಿಯೇ ನೋಡಬೇಕು; ಮನವಾರೆ ನಲಿಯಬೇಕು. ಹೃನ್ಮನಗಳನ್ನು ತುಂಬಿಕೊಳ ಬೇಕು.

ಜಾವಾ ಮತ್ತು ನೇಪಾಳಗಳಲ್ಲಿಯ ಶಿವ ಮೂರ್ತಿಗಳೂ ಭವ್ಯವಾಗಿವೆ! ಮನೋಹರವಾಗಿವೆ. ಜಾವಾದ ಪ್ರಂಬಾನಾಪುರ ವಿಷ್ಣುದೇವಾಲಯದಲ್ಲಿರುವ ಶಿವ ವಿಗ್ರಹವು ಮನೋಹರವಾಗಿದೆ. ಆದರೆ ತಲೆಯ ಮೇಲಿನ ಕಿರೀಟದ ಮಧ್ಯದಲ್ಲಿ ಸೇರಿಕೊಂಡಿರುವ ತಲೆಬುರುಡೆ ಸೌಮ್ಯ ಮುಖಕ್ಕೆ ವಿರೋಧಾಭಾಸವುಂಟುಮಾಡುವುದು. ಅಲ್ಲದೇ ಹಣೆಯಲ್ಲಿ ಲಂಬವಾಗಿ ನಿಂತಿರುವ ಮೂರನೆಯ ಕಣ್ಣು ಈ ಗಾಂಭೀರ್ಯವನ್ನು ಇನ್ನೂ ಹೆಚ್ಚಿಸಿದೆ. ಆದರೆ ಇಂಥ ದಿವ್ಯ ದೃಷ್ಟಿಯ ಮೂರ್ತಿ ಬಹುಶಃ ಇದೊಂದೇ ಎಂದು ತೋರುತ್ತದೆ. ನೇಪಾಳದಲ್ಲಿಯ ವಿಗ್ರಹವು ಕಂಚಿನದು. ಶಿವ-ಪಾರ್ವತಿ ಗಾಢಾಂಗನದಲ್ಲಿರುವರು. ಅವರು ಏಕಾತ್ಮರಾಗಿದ್ದರೂ ನಿಗ್ರಹದ ಮುಖಮುದ್ರೆಯನ್ನು ಅಲ್ಲಿ ಕಾಣಬಹುದು.

ಖಜುರಾಹೊದ ಅಪ್ರತಿಮವಾದ ವಿಗ್ರಹಗಳಲ್ಲಿ ಅಲ್ಲಾಬಾದ ವಸ್ತುಸಂಗ್ರಹಾಲಯದಲ್ಲಿ ನೋಡಲು ದೊರೆವ ಹರ-ಗೌರಿ ವಿಗ್ರಹಗಳು ನಿಜವಾಗಿ ಅಪೂರ್ವವಾದುವು. ಶಿಲ್ಪಿಯ ಸೌಂದರ್ಯ ದೃಷ್ಟಿ ಇಲ್ಲಿ ವ್ಯಕ್ತವಾಗಿದೆ. ಅವನು ನಡೆಸಿದ ಕುಸುರಿನ ಕೆಲಸ ನೋಡಲು ದೊರೆಯುತ್ತದೆ. ಆ ಕಲಾಭಿವ್ಯಕ್ತಿ ಯಾರನ್ನಾದರೂ ಮುಗ್ಧಗೊಳಿಸುವಂಥದು. ಶಿವ ಪಾರ್ವತಿಯರ ಈ ಭಂಗಿ ಸಾಂಪ್ರದಾಯಕವಾಗಿದೆ. ಇಂಥ ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲಿಯೇ ಶಿಲ್ಪಿ ಶಿವನ ಬಡಗನ್ನು, ಪಾರ್ವತಿಯ


ದೀಪಾವಳಿಯ
ಶುಭಾಶಯಗಳು
MAFATLAL GROUP
ಮಫತಲಾಲ
ಗ್ರುಪ್

ನಿಷ್ಠೆಯನ್ನು ಮೆರೆದು ತೋರಿದ್ದಾನೆ. ಶಿವನ ಅಂಗ ಭಂಗಿಯ ಒಂದೊಂದು ವಿನ್ಯಾಸವೂ ಅತ್ಯಂತ ಸ್ಪಷ್ಟವಾಗಿ ಒಡಮೂಡಿದೆ. ಭಾರವಾದ ದುಂಡು ಮೊಲೆಗಳಿಂದ ಬೆಡಗಿಯಾಗಿ ಕಾಣುವ ಪಾರ್ವತಿ, ನಿರ್ದೋಷವಾದ ವಕ್ರಗಳ ವಿನ್ಯಾಸದಿಂದ ಗಾಂಭೀರ್ಯವನ್ನು ಮೆರೆಯುತ್ತಾಳೆ. ದೇವ-ದೇವತೆಯರ ಮುಖಗಳ ಕೆತ್ತನೆಯಲ್ಲಿ ಶಿಲ್ಪಿಯು ಅಪರೂಪವಾದ ಕೌಶಲ್ಯವನ್ನು ತೋರಿದ್ದಾನೆ. ಹೀಗಾಗಿ ಅವು ಅದ್ಭುತವಾಗಿ ಮನಮೋಹಕವಾಗಿ ನಿಂತಿವೆ. ಸೃಷ್ಟಿ ಲಯಗಳ ಅಧಿಪತಿ ಶಿವ ಸೂಸುವ ನಗೆಮಲ್ಲಿಗೆ ನೋವು ನಲಿವುಗಳಿಂದ ಅತೀತವಾಗಿದ್ದರೂ ಸಂತೋಷ ಭರಿತವಾಗಿ ಸುಖಿಯಾಗಿದ್ದಾನೆಂಬ ಭಾವನೆಯನ್ನು ಮೂಡಿಸುತ್ತದೆ. ಪಾರ್ವತಿಯ ನಿರ್ಮಲ ಪ್ರೇಮಾಧಿಕ್ಯತೆ ಅವಳ ಮುಖ ಭಾವದಲ್ಲಿ ಹೊರಸೂಸಿ ನಿಂತಿದೆ. ಅವಳು ಆತುರೆಯಾದ ಯಕ್ಷಿಣಿಯೂ ಅಲ್ಲ. ಮೋಹಕ ಅಪ್ಸರೆಯೂ ಅಲ್ಲ. ದಿವ್ಯ ಸೌಂದರ್ಯವನ್ನು ಮೆರೆವ ಪ್ರಗಲ್ಭೆ; ಮುಗ್ಧೆ, ಶಿಲ್ಪಿಯ ಕಲ್ಪಕ ಬುದ್ಧಿ ಇಲ್ಲಿ ತುಂಬ ಕೌತುಕ ರೂಪ ತಳೆದು ನಿಂತಿರುವದನ್ನು ಕಂಡಾಗ ನೋಡುಗನಲ್ಲಿ ಧನ್ಯಭಾವ ಮೂಡಿದರೆ ಅಚ್ಚರಿಯೇನು?

ಮುಂಬಯಿಯ ಬಳಿಯ ಎಲಿಫೆಂಟಾ ಗುಹೆಗಳಲ್ಲಿ ಶಿವನ ಹಲವಾರು ಅಪರೂಪ ಲೀಲೆಗಳನ್ನು ಕೆತ್ತಲಾಗಿದೆ. ಅದಕ್ಕಿಂತ ಮಿಗಿಲಾಗಿ ಅಲ್ಲಿಯ ಮಹೇಶಮೂರ್ತಿ ಶಿಲ್ಪದಲ್ಲಿ ತೋರಿ ಬರುವ ಅದ್ಭುತ ಸೃಷ್ಟಿಯೇ ಸರಿ. ಈ ತ್ರಿಮುಖಮೂರ್ತಿ ವಿಶ್ವದ ಶಿಲ್ಪಕಲೆಯಲ್ಲಿಯೇ ಶ್ರೇಷ್ಠವಾದ ಕೊಡುಗೆ ಎಂದು ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯವಿದೆ. ಒಂದೊಂದು ಮುಖದಲ್ಲಿಯೂ ವ್ಯಕ್ತವಾಗುವ ತೇಜಸ್ಸು, ಪ್ರತಿಭೆ, ನಿತ್ಯನೂತನವಾಗಿ ತೋರುತ್ತಿವೆ. ಅಲ್ಲಿ ದಿವ್ಯಕಳೆ ತಾನೇ ತಾನಾಗಿ ರಾರಾಜಿಸುತ್ತಿವೆ. ಮುಖ, ತುಟಿ ಅದೇಕೆ ಮೂಗಿನ ಹೊಳೆಗಳನ್ನು ಕಟೆಯುವಾಗ ಕೂಡ ಶಿಲ್ಪಿ ತನ್ನ ಕಲಾಚಾತುರ್ಯವನ್ನು ತೋರಿ ಅಪರೂಪವಾದ ಅಪೂರ್ವತೆಯನ್ನು ತುಂಬಿದ್ದಾನೆಂಬುದು ಕಂಡು ಬರುವುದು. ಜೀವನದ ಒಂದು ಶಕ್ತಿ ಸರ್ವ ಸುಖ ಸಂತೋಷಗಳ ಸಂಗಮ ಆ ಮುಖಗಳಲ್ಲಿ ಎದ್ದು ಕಾಣುವುದು. ಈ ಮುಖಗಳ ಮುದ್ರೆ ಗಂಭೀರವಾಗಿದ್ದರೂ ಮನಮೋಹಕವಾಗಿರುವುದು. ದಿವ್ಯತೆ ಅಲ್ಲಿ ತಾನೇ ತಾನಾಗಿ ರಾರಾಜಿಸುತ್ತಿವೆ.

ಒಂದು ಖಾಸಗಿ ಸಂಗ್ರಹಾಲಯದಲ್ಲಿ ಕನೌಜದ ಚತುರ್ಮುಖ ಶಿವನ ವಿಗ್ರಹವು ಅಪೂರ್ವವಾಗಿದೆ. ಅದು ಶಿವನ ವಾಮದೇವ, ತತ್ಪುರುಷ, ಅಘೋರ ಮತ್ತು ಸದ್ಯೋಜಾತ ಅಂಶಗಳನ್ನು ವ್ಯಕ್ತಪಡಿಸಿದ್ದು, ಇನ್ನೊಂದು ಅಂಶ ಈಶಾನವು ಮೇಲ್ಭಾಗಕ್ಕೆ ಇರಬೇಕಾಗಿತ್ತು, ಆದರೆ ಶಾಸ್ತ್ರೀಯವಾಗಿ ಅದನ್ನು ತೋರಿಸುವುದು ಸಾಧ್ಯವಿಲ್ಲವೆಂದು ಬಿಟ್ಟಿರಬೇಕೆನಿಸುತ್ತದೆ. ಈ ವಿಗ್ರಹವು ಶಿವನ ತೇಜಃಪುಂಜವಾದ ಕಂಗಳು ಮತ್ತು ಸುಂದರವಾದ ಮುಖಗಳನ್ನು ತೋರುವುದು. ಕನೌಜದಲ್ಲಿಯೂ ಶಿವ-ಪಾರ್ವತಿ ಪರಿಣಯದ ಮನೋಹರ ದೃಶ್ಯವಿದೆ. ಓಸಿಯಾ (ರಾಜಸ್ಥಾನ)ದಲ್ಲಿಯ ಬ್ರಾಹ್ಮಣ ದೇವಾಲಯದ ಹೊರಗೋಡೆಯ ದೃಶ್ಯಾವಳಿಯಲ್ಲಿ ಶಿವನ ಅಪೂರ್ವ ಕೆತ್ತನೆಯಿದೆ. ಸೋಮನಾಥ ದೇವಾಲಯದ ಆವಾರದಲ್ಲಿ ನಟರಾಜನ ಪೂರ್ವ ವಿಗ್ರಹವಿದೆ. ಅಲ್ಲಿ ಆವಾರದಲ್ಲಿರುವ ಭೈರವ ವಿಗ್ರಹವು ಶಿವನ ರುದ್ರ ರೂಪವನ್ನು ಪ್ರತಿನಿಧಿಸುತ್ತಿದೆ. ಕೋಟಾ (ರಾಜಸ್ಥಾನ)ದ ಬಳಿಯ ಅತ್ರು ಶಿವವಿಗ್ರಹವೂ ಸುಂದರವಾಗಿದೆ. ಈಗ ಅದು ಸ್ವಲ್ಪ ಮಟ್ಟಿಗೆ ಭಿನ್ನವಾಗಿದ್ದರೂ ಅದರ ಸೌಂದರ್ಯವು ಮಾಸಿಲ್ಲವೆಂದ ಮೇಲೆ ಚೆನ್ನಾಗಿದ್ದಾಗ ಅದು ಎಷ್ಟೋಂದು ಸುಂದರವಾಗಿತ್ತೆಂದು ಊಹಿಸಬಹುದು ಶಿವನ ವೀರಭಂಗಿಯನ್ನು ಇಲ್ಲಿ ಕಾಣಬಹುದು. ಅಭನೇರಿಯ ಅರ್ಧನಾರೀಶ್ವರ ಉಳಿದವುಗಳಿಗಿಂತ ಸ್ವಲ್ಪ ಬೇರೆಯಾಗಿದೆ. ಶಿವ ತ್ರಿಶೂಲ-ಕಮಲಗಳನ್ನು ಧರಿಸಿದ್ದರೆ,ದೇವಿ ಒಂದು ಕೈಯಲ್ಲಿ ಕನ್ನಡಿ ಹಿಡಿದಿದ್ದು ಇನ್ನೊಂದನ್ನು ತೊಡೆಯ ಮೇಲೆ ಇರಿಸಿರುವಳು.





↑ ಎಲ್ಲೋರಾ ಗುಹಾಲಯದಲ್ಲಿನ ತಾಂಡವ ಶಿವ

← ಧ್ಯಾನಸ್ಥ ಶಿವ—ಜಾವಾದ ಶಿಲ್ಪಾವಶೇಷ

ಸರ್ವರಿಗೂ ದೀಪಾವಳಿಯ ಶುಭಾಶಯಗಳು !

ಮೆ॥ ಪೂರ್ಣಿಮಾ ರಬ್ಬರ ಪ್ರೊಡಕ್ಟ್ಸ

೧೧।೧ ಗಣೇಶಪೇಟ ಕ್ರಾಸ ಹುಬ್ಬಳ್ಳಿ - ೨೦

ಫೋನ:— ಆಫೀಸ್: 3188 ಮನೆ: 7229

ವ್ಯಾಪಾರಿ ಬಂಧುಗಳಿಗೆ ಹಾಗೂ ರೈತ ಬಾಂಧವರಿಗೆ ಒಳ್ಳೇ ಸುಸಂಧಿ

ಮೆ॥ ಪೂನಾ ರಬ್ಬರ ಮ್ಯಾನ್ಯುಫ್ಯಾಕ್ಚರ ಪ್ರೈ. ಲಿ., ಪೂನಾ

ಇವರು ತಯಾರಿಸುವ ಕರ್ನಲ್ ಬ್ರ್ಯಾಂಡ ಸೆಕ್ಷನ್ ಮತ್ತು ಡಿಲ್ಹಿವರಿ ಹೋಜ ಪೈಪ ಮತ್ತು ರಬ್ಬರ ಗಾರ್ಡ ಟ್ರಾಲಿ ವ್ಹೀಲ ನಮ್ಮ ಹತ್ತಿರ ಭರಪೂರ ಸಂಗ್ರಹದಿಂದ ಯೋಗ್ಯ ಬೆಲೆಗೆ ಲಿಗುತ್ತವೆ. ನಾವು ಉತ್ತರ ಕರ್ನಾಟಕಕ್ಕೆ ಏಕೈಕ ಹಂಚಿಕೆದಾರರೆಂದು ನೇಮಕಗೊಂಡಿರುತ್ತೇವೆ.

-ಸಹ ಹಂಚಿಕೆದಾರರು-

ಶ್ರೀ ಮಲ್ಲಿಕಾರ್ಜುನ ಮಶಿನರಿ ಸ್ಟೋರ್ಸ ಇಂಡಿ ರೋಡ, ವಿಜಾಪೂರ

ಯಡಹಳ್ಳಿ ಅಗ್ರೋ ಟ್ರೇಡರ್ಸ. ಬಾಗಲಕೋಟ

ಶ್ರೀ ಶಕ್ತಿ ಮ್ಶೀನರಿ ಅ್ಯಂಡ ಹಾರ್ಡವೇರ ಸ್ಟೋರ್ಸ. ಇಳಕಲ್ಲ

ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ದೀಪಾವಳಿಯು ಶುಭದಾಯಕವಾಗಲಿ !

ನೀವು ಸಂದರ್ಶಿಸಲೇಬೇಕಾದ ಅತ್ಯುತ್ತಮ ಹೆಸರುವಾಸಿ...

'ಹೊಟೆಲ್ ಪಿಕನಿಕ್'

ಉತ್ತಮ ಮಾಂಸಾಹಾರಿ ಮತ್ತು ಶಾಖಾಹಾರಿ ಊಟಕ್ಕೆ ಸಂದರ್ಶಿಸಿರಿ..


ವಿದ್ಯಾನಗರ (ಹಬೀಬನಗರ) ಹುಬ್ಬಳ್ಳಿ—೨೧

ಬಾರ್ ಮತ್ತು ಹೊಟೆಲ್

'HOTEL PICNIC'

Attached PEG-BAR Rooms

Phone No: — 634



ನಿಮ್ಮ ಟ್ರ್ಯಾಕ್ಟರ ಕೆಟ್ಟಿದೆಯೇ ಏಕೆ ?

ಬಿಡಿ ಭಾಗಗಳ ಕೊರತೆಯೇ ?

ನಿಮ್ಮ ಟ್ರ್ಯಾಕ್ಟರ್ ಯಾವುದಾದರೂ ಇರಲಿ; ನಿಮ್ಮ ಟ್ರ್ಯಾಕ್ಟರ್‌ಗಳಿಗೆ ಬೇಕಾಗುವ ಸರ್ವೀಸ್ ಹಾಗೂ ಬಿಡಿಭಾಗಗಳಿಗಾಗಿ ಅವಶ್ಯ ಸಂದರ್ಶಿಸಿರಿ. . . .

ಟ್ರ್ಯಾಕ್ಟರ ಸೆಂಟರ


ವಿಶಾಲ ಕರ್ನಾಟಕ ಬಿಲ್ಡಿಂಗ್, ಹುಬ್ಬಳ್ಳಿ-೨೦

ಫೋನ್. ಆಫೀಸು: 2591 ★ ಮನೆ: 3809

ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು!



ಕೇದಾರೇಶ್ವರನಲ್ಲಿನ ಕೈಲಾಸವನ್ನು ರಾವಣ ಎತ್ತಿದ್ದು—ಹೊಯ್ಸಳರ ಶಿಲ್ಪ



ಎಲ್ಲೋರಾ ಗುಹೆ—ರಾವಣ ಕೈಲಾಸವೆತ್ತುತ್ತಿರುವ ಶಿಲ್ಪ

ಬದಾಮಿ, ಐಹೊಳೆ ಹಾಗೂ ಪಟ್ಟದಕಲ್ಲು ಗಳಲ್ಲಿ ಕಂಡು ಬರುವ ಕೆತ್ತನೆ ಕೂಡ ತುಂಬ ಸೊಗಸಾಗಿದೆ. ಇಲ್ಲಿ ಶಿವನ ಮೂರ್ತಿಗಳು, ಶಿವ ಪಾರ್ವತಿಯರ ಮೂರ್ತಿಗಳು ಹೀಗೆ ಬಹು ಸಂಖ್ಯೆಯಲ್ಲಿ ನೋಡಲು ದೊರೆಯುತ್ತವೆ. ಶಿಲ್ಪಿಯ ಹಸ್ತ ಕೌಶಲ ಕಲ್ಪಕ ಬುದ್ಧಿ, ಕಲಾಚಾತುರ್ಯ ಸಾಕಷ್ಟು ಕಂಡು ಬರುವುದು. ಈ ರೀತಿ ಮೂರ್ತಿಗಳು ಅಲ್ಲದೇ, ಆತನ ಲೀಲೆಗಳು ಮತ್ತಿತರ ಸನ್ನಿವೇಶಗಳನ್ನು ಚಿತ್ರಿಸಲಾಗಿರುವುದು. ಆ ಮೂರ್ತಿಗಳ ಮುಖದ ದಿವ್ಯ ಕಳೆ, ಭಾವಾಭಿವ್ಯಕ್ತಿ, ಸೊಗಸಾದ ಕೆತ್ತನೆ ಯಾರನ್ನೂ ಮುಗ್ಧಗೊಳಿಸುವುದು. ಮನಸ್ಸು ತುಂಬಿ ನಿಲ್ಲುವುದು. ನೋಡಿ ನೋಡಿದಷ್ಟು ಸಾಲದು, ಇನ್ನು ಕಣ್ಣುಗಳಲ್ಲಿ ತುಂಬಿಕೊಳ ಬೇಕು ಎಂದೆನಿಸುವುದು ಎಲ್ಲೋರಾದ ಕೈಲಾಸನಾಥ ದೇವಾಲಯದಂತೆ ಈ ಮೂರೂ ಸ್ಥಳಗಳಲ್ಲಿ ಕೂಡ ಶಿವನ ಹಿರಿಮೆ, ಗರಿಮೆ, ಮಹಾತ್ಮ್ಯೆ ಮೆರೆದು ತೋರಿಸಲಾಗಿರುವುದು. ಕನ್ನಡದ ನೆಲದಲ್ಲಿಯ ಈ ಸೃಷ್ಟಿ ಯಾತ್ರಿಕರನ್ನು ಕೈ ಮಾಡಿ ಕರೆಯುತಿದೆ: ಬಾ ಇಲ್ಲಿ, ನೋಡು ಈ ಶಿಲ್ಪ ಸಂಪದವ ಮನದಣಿಯೆ; ಸವಿ ನಿನ್ನ ಕಣ್ಣುಗಳಿಂದ ಹೃನ್ಮನಗಳಿಂದ, ತುಂಬಿಕೊ ಕಣ್ಣು ಮನಗಳಲ್ಲಿ, ಎನ್ನುತ್ತಿದೆ.

ಕಲ್ಲುಕಲ್ಲಿನಲಿ ಕಥೆ

ಶಿವ ಪಾರ್ವತಿಯನ್ನು ಮೃದಡೆವಿ ಸಂತೈಸುವ (ಬದಾಮಿ ೩ ನೇ ಗುಹೆ ೧ ನೇ ಕಂಬ) ನಂದ್ಯಾಸ್ಯ ಪಾರ್ವತಿ—ಪರಮೇಶ್ವರರು ನರ್ತಿಸುತ್ತಿರುವ (ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯದ ಮಂಟಪ), ಶಿವಪಾರ್ವತಿಯರಿಬ್ಬರೇ ನರ್ತಿಸುತ್ತಿರುವ (ಅದೇ ದೇವಾಲಯದ ಎಡಗಡೆಯ ೨ನೆಯ ಸಾಲಿನ ೨ನೇ ಕಂಬ) ರಾವಣನು ಕೈಲಾಸ ಪರ್ವತವನ್ನು ಎತ್ತುವಾಗ ಶಿವ–ಪಾರ್ವತಿ ಅಲ್ಲಿ ಕಾದಾಡುತ್ತಿರುವರು (ಕಾಶೀ ವಿಶ್ವನಾಥ ದೇವಾಲಯ ಪಟ್ಟದಕಲ್ಲು) ಮಾರ್ಕಾಂಡೇಯನಿಗೆ ಶಿವನ ಪ್ರತ್ಯಕ್ಷನಾದುದು (ಪಟ್ಟದಕಲ್ಲು ವಿರೂಪಾಕ್ಷ ದೇವಾಲಯ) ಸಪ್ತ ಮಾತೃಕೆಯರೊಡನೆ ನಟರಾಜನ ನೃತ್ಯ (ಐಹೊಳೆ ದುರ್ಗದ ಗುಡಿ) ಈ ಮೊದಲಾಗಿ ದೃಶ್ಯಾವಳಿಗಳು ಅತ್ಯಂತ ನಯನಮನೋಹರವಾಗಿರುವವು. ಶಿಲ್ಪಿಯ ಕಲ್ಪಕ ಬುದ್ಧಿ ಇಲ್ಲೆಲ್ಲ ಚೆನ್ನಾಗಿ ಸ್ಫುಟವಾಗಿರುವುದು ಕಂಡು ಬರುವುದು. ಇತರ ಕೆಲ ವಿಗ್ರಹಗಳನ್ನು ನಾವಿಲ್ಲಿ ಗಮನಿಸಬೇಕು.

ಬದಾಮಿ: 1ನೆಯ ಗುಹೆ ನಟರಾಜ (ಅಂಗಳದಲ್ಲಿ) ಅರ್ಧನಾರೀಶ್ವರ ಹರಿಹರ 3 ನೆಯ ಗುಹೆ 2 ನೇ ಕಂಬ ಅರ್ಧನಾರೀಶ್ವರ 4 ಮತ್ತು 6ನೇ ಕಂಬ: ಶಿವ ಮತ್ತು ಪಾರ್ವತಿ ಮತ್ತು ಹರಿಹರ, ಛತ್ತಿನಲ್ಲಿ ನಂದಿಯ ಮೇಲೆ ಶಿವ (ಗಣಪತಿ) ಮೊದಲಾದವರು ಆತನ ಸುತ್ತ ನರ್ತಿಸುತ್ತಿದ್ದಾರೆ. (ಭೂತನಾಥ ಗುಡಿಗಳ ಗುಂಪು 1) ಲಕುಳೀಶ (ಕುಳಿತ ಭಂಗಿಯಲ್ಲಿ) ಮಾಲಗಿತ್ತಿ ಶಿವಾಲಯ: ಹೊರಗೋಡೆಯ ಮೇಲೆ ಶಿವ.

ಪಟ್ಟದಕಲ್ಲು: ವಿರೂಪಾಕ್ಷ ದೇವಾಲಯ: 1ನೆಯ ಸಾಲಿನ 5ನೇ ಕಂಬ: ದಕ್ಷಬ್ರಹ್ಮ ಯಜ್ಞ–ನಂದಿಯ ಮೇಲೆ ಶಿವ: ಮಂಟಪದ ಬಲಗಡೆಯ 1ನೆಯ ಕಂಬ ಕಿರಾತಾರ್ಜುನೀಯ ದೃಶ್ಯಗಳು 4–5 ನೇ ಕಂಬ. ಶಿವಪಾರ್ವತಿ. ನಟರಾಜ–ಪಾರ್ವತಿ. 2ನೇ ಸಾಲಿನ 1ನೇ ಕಂಬ ಕಮಲದ ಮೇಲೆ ಯೋಗಾಸನದಲ್ಲಿ ಕುಳಿತ ಚತುರ್ಭುಜ ಶಿವ ಉತ್ತರದ ಅರ್ಧ ಮಂಟಪ. ಶಿವ ಅಪಸ್ಮಾರ ಪುರುಷನ ಮೇಲೆ ಕುಣಿಯುತ್ತಿರುವುದು: ಹೊರಗೋಡೆಯ ಮೇಲೆ ಅಷ್ಟಭುಜಶಿವ ಮತ್ತು ಲಿಂಗೋದ್ಭವ ಮೂರ್ತಿ: ಮಲ್ಲಿಕಾರ್ಜುನ ಗುಡಿ ಬಲಗಡೆಯ 1ನೇ ಸಾಲಿನ 1, 2, 5 ನೇ ಕಂಬಗಳು: ಶಿವ ಪಾರ್ವತಿ 2ನೇ ಸಾಲಿನ 3ನೇ ಕಂಬ ಕಿರಾತಾರ್ಜುನೀಯ ದೃಶ್ಯ. ಎಡಗಡೆಯ 2ನೇ ಸಾಲು 2ನೇ ಕಂಬ: ಶಿವ–ಪಾರ್ವತಿ ನರ್ತಿಸುತ್ತಿರುವುದು: ದಕ್ಷಿಣದ ಗೋಡೆ: ಲಕುಳೀಶ ಗಜಾಸುರ ಸಂಹಾರಮೂರ್ತಿ: ಶಿವ ಮತ್ತು ಹರಿಹರ. ಕಾಶೀ ವಿಶ್ವನಾಥ ದೇವಾಲಯ ಬಲಗಡೆಯ 2ನೇ ಕಂಬ ಲಿಂಗೋದ್ಭವ ಮೂರ್ತಿ: ಅರ್ಧನಾರೀಶ್ವರ ಶಿವ–ಪಾರ್ವತಿ ಮತ್ತು ತ್ರಿಪುರಾಸುರ ವಧೆ ದೃಶ್ಯ. ಸಂಗಮೇಶ್ವರ ಗುಡಿ ಹೊರಗೋಡೆ: ಅಜಾಸುರ ಸಂಹಾರ ಮೂರ್ತಿ: ಗಳಗನಾಥ ಗುಡಿ: ಅಂಧಕಾಸುರ [illegible] ನವೆ [illegible] ನ ಗುಡಿ: ನಟರಾಜ: ಹರಿಹರ ಮತ್ತು ಅರ್ಧ ನಾರೀಶ್ವರ: ಪಾಪನಾಥನ

ಗುಡಿ ಹೊರಗಿನ ಉತ್ತರದ ಗೋಡೆ: ಕಿರಾತಾರ್ಜು ನೀಯ ದೃಶ್ಯ. ದಕ್ಷಿಣದ ಗೋಡೆ: ನಟರಾಜ.

ಐಹೊಳೆ: ದುರ್ಗದಗುಡಿ ಮಂಟಪದ ಹೊರ ಗೋಡೆ ಶಿವ. ಹರಿಹರರ ಮುಂದಿನ ಚಿಕ್ಕ ಗುಡಿಯಲ್ಲಿ ಬಿಡಿಯಾದ ಲಕುಳೀಶನ ವಿಗ್ರಹ: ಕೊಂತ ಗುಡಿ: ಛತ್ತಿನಲ್ಲಿ ಶಿವ; ಹುಚ್ಚಪ್ಪಯ್ಯನ ಗುಡಿಯ ಶಿಖರದ ಮುಂಭಾಗ ನಟರಾಜ. ರಾವಳಪಡಿ: ಸಪ್ತ ಮಾತೃಕೆಯರೊಡನೆ ನರ್ತಿಸುತ್ತಿರುವ ನಟರಾಜ. ಬ್ರಾಹ್ಮಣ ಗುಹಾಲಯ: ಶಿವ ಪಾರ್ವತಿ ಅರ್ಧನಾರೀಶ್ವರ ಹೀಗೆ ಇಲ್ಲಿ ಶಿವ ಶಿಲ್ಪದಲ್ಲಿ ನಿಬಿಡವಾಗಿ ನಾನಾ ರೂಪದಲ್ಲಿ ಮೂಡಿನಿಂತಿದ್ದಾನೆ.

ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದಲ್ಲಿ ನಂದಿಯನ್ನು ಏರಿದ ಶಿವ ಪಾರ್ವತಿಯ ವಿಗ್ರಹವು ನಯನ ಮನೋಹರವಾಗಿ ರೂಪಿತವಾಗಿರುವುದು. ಸಾಮಾನ್ಯವಾಗಿ ಗರ್ಭಗುಡಿಯಲ್ಲಿ ಶಿವನ ಮೂರ್ತಿ ಇರುವುದು ಕಡಿಮೆ. ಅದರಲ್ಲಿಯೂ ಪಾರ್ವತಿ ಸಹಿತ ಶಿವನಿರುವುದು ಇನ್ನೂ ಕಡಿಮೆ. ಈ ದೃಷ್ಟಿಯಿಂದ ಈ ಮೂರ್ತಿದ್ವಯವು ಅಪರೂಪದ್ದಾಗಿರುವುದು. ಪುಟ್ಟದಾದರೂ ಆಕರ್ಷಕವಾಗಿರುವ ನಂದಿ, ತೇಜಸ್ವಿ ಮುಖ ಮುದ್ರೆಯ ಶಿವ, ಅವನನ್ನು ಅವಲಂಬಿಸಿರುವ ಪಾರ್ವತಿ ಜನ ಕಲ್ಯಾಣಕ್ಕಾಗಿ ಜಗತ್ತಿನ ಸಂಚಾರಕ್ಕೆ ಹೊರಟಿರುವ ಭಂಗಿಯನ್ನು ತೋರುತ್ತಿದೆ. ಕುಂದಗೋಳದ ಶಂಭುಲಿಂಗನ ದೇವಸ್ಥಾನದಲ್ಲಿ ಮಧ್ಯದ ಚಾವಣಿಯಲ್ಲಿ ಮಧ್ಯದಲ್ಲಿ ಶಿವ ನರ್ತಿಸುವ ದೃಶ್ಯಾವಳಿ ಇದೆ. ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ಗರ್ಭಗುಡಿಯ ಹೊರ ಬಾಗಿಲ ಮೇಲೆ ಶಿವನ ಚಿತ್ರದ ಅಪೂರ್ವ ಕೆತ್ತನೆ ಇದೆ. ಹೊಂಬಳದಲ್ಲಿಯ ಶಂಕರಲಿಂಗನ ದೇವಸ್ಥಾನದಲ್ಲಿ ಭಿಕ್ಷಾಟನ ಮೂರ್ತಿ ಮತ್ತು ಉಮಾ ಮಹೇಶ್ವರರ ವಿಗ್ರಹಗಳನ್ನು ಬಹು ಸುಂದರವಾಗಿ ರೂಪಿಸಲಾಗಿದೆ.

ದೇವನಹಳ್ಳಿ (ಬೆಂಗಳೂರು ಜಿಲ್ಲೆ) ಸಿದ್ಧೇಶ್ವರ ದೇವಾಲಯದಲ್ಲಿ ಹನ್ನೊಂದು ಅಡಿ ಎತ್ತರದ ಮೂರ್ತಿ ಇದೆ. ಎಡಗೈಯಲ್ಲಿ ಲಿಂಗವನ್ನು ಹಿಡಿದು ಬಲಗೈಯಿಂದ ಅದನ್ನು ಪೂಜಿಸುವ ಭಂಗಿಯಲ್ಲಿ ನಿಂತಿರುವುದು. ಶಿವಗಂಗೆಯಲ್ಲಿರುವ ಸುಬ್ರಮಣ್ಯೇಶ್ವರ ದೇವಾಲಯದಲ್ಲಿ ಅತ್ಯಂತ ಸುಂದರ ಮೂರ್ತಿ ಇದೆ. ಮುಂಭಾಗದಲ್ಲಿ 5 ಮುಖಗಳು ಹಿಂಭಾಗದಲ್ಲಿ ಒಂದು ಮುಖವೂ ಇದೆ. ಹನ್ನೆರಡು ಕೈಗಳು ಇವೆ. ಕರ್ನಾಟಕದಲ್ಲಿ ಇಂಥ ಮೂರ್ತಿ ಇದೊಂದೇ ಆಗಿರುವುದು ವಿಶೇಷವಾಗಿದೆ. ಬಸರಾಳು (ಮಂಡ್ಯ) ವಿನಲ್ಲಿ ಮಲ್ಲಿಕಾರ್ಜುನ ದೇವಾಲಯದಲ್ಲಿ ಅಂಧಕಾಸುರನ ತಲೆಯ ಮೇಲೆ ನರ್ತಿಸುತ್ತಿರುವ ಹದಿನಾರು ಕೈಗಳ ಶಿವನಿದ್ದಾನೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿರುವ ಎರಡು ಗರ್ಭಗುಡಿಗಳಲ್ಲಿ ಹೊಯ್ಸಳೇಶ್ವರ ಮತ್ತು ಶಾಂತಳೇಶ್ವರರ ಸುಂದರ ಮೂರ್ತಿಗಳಿವೆ. ದೇವಾಲಯದ ದೃಶ್ಯಾವಳಿಯಲ್ಲಿ ನಂದಿಯನ್ನು ಏರಿದ ಶಿವ ಪಾರ್ವತಿಯರ ಮೂರ್ತಿ ನಯನ ಮನೋಹರ ಪಾ.ದೆ.

ಹರಿಹರ (ಚಿತ್ರದುರ್ಗ)ದ ಹರಿಹರೇಶ್ವರ ದೇವಸ್ಥಾನದ ಹರಿಹರಮೂರ್ತಿ ನಾಲ್ಕು ಅಡಿ ಎತ್ತರವಾಗಿ ಭವ್ಯವಾಗಿದೆ. ಎಡಭಾಗ ವಿಷ್ಣು ರೂಪವಾಗಿದ್ದರೆ ಬಲಭಾಗ ಶಿವ ರೂಪದಲ್ಲಿದ್ದು ತ್ರಿಶೂಲ ಜಪಸರ ಧರಿಸಿದೆ. ತಲೆಯ ಮೇಲೆ ವಿಷ್ಣು ಭಾಗದಲ್ಲಿ ಕಿರೀಟವಿದ್ದರೆ ಶಿವ ಭಾಗದಲ್ಲಿ ಚಂದ್ರಜಟೆ ಇದೆ. ಇದೊಂದು ಅಪರೂಪವಾದ ಸೃಷ್ಟಿ. ಹರಿ ಹರರಲ್ಲಿಯ ಅಭೇದತ್ವವನ್ನು ಪೂಜಿಸುವ ಕಲ್ಪನೆ ಇಲ್ಲಿ ಮೂಡಿ ನಿಂತಿರುವುದು.

ಶಿವೆಯೊಂದಿಗೆ ಶಿವ

ಅರಳಗುಪ್ಪೆಯಲ್ಲಿಯ ಪುರಾತನವಾದ ಕಲ್ಲೇಶ್ವರ ದೇವಸ್ಥಾನದ ಮಧ್ಯದ ಚೌಕಟ್ಟಿನಲ್ಲಿರುವ ತಾಂಡವೇಶ್ವರ ವಿಗ್ರಹವು ಅದ್ಭುತವಾದ ಶಿಲ್ಪ ಕಲಾಕೃತಿಯಾಗಿರುವುದು. ಇದಕ್ಕೆ ಸರಿಸಮವಾದ ಶಿಲ್ಪ ಕೆತ್ತನೆ ದಕ್ಷಿಣ ಭಾರತದಲ್ಲಿಯೆ ಇಲ್ಲವೆಂಬ ಅಭಿಪ್ರಾಯವಿದೆ. ಎರಡು ಹಸ್ತಗಳಲ್ಲಿ ತ್ರಿಶೂಲ ಧರಿಸಿದ್ದರೆ ಒಂದು ಅಭಯಮುದ್ರೆ ತೋರುತ್ತದೆ. ಇನ್ನೊಂದು ನರ್ತನದ ಭಂಗಿಯಲ್ಲಿದೆ. ಮುಖ ಮುದ್ರೆ ತುಂಬ ಗಂಭೀರವಾಗಿದೆ.

ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿರುವ ಬಿಹಾರದ ಉಮಾ ಮಹೇಶ್ವರ ವಿಗ್ರಹವು ಸ್ವಲ್ಪ ಭಿನ್ನವಾಗಿದ್ದರೂ ಮಹೇಶ್ವರನು ಉಮೆಯನ್ನು ಸಂತೈಸುವ ಅಪೂರ್ವ ಭಂಗಿಯಲ್ಲಿರುವುದು . ಮಹೇಶ್ವರನು ಒಂದು ಕೈಯಿಂದ ಉಮೆಯನ್ನು ಬಳಸಿರುವನು. ಅವನ ಒಂದು ಕಾಲು ಕೆಳಗಿನ ನಂದಿಯ ಮೇಲಿದೆ. ಉಮೆ ಮಹೇಶ್ವರನ ತೊಡೆಯ ಮೇಲೆ ಆಸೀನಳಾಗಿದ್ದಾಳೆ. ಅವಳು ಲಜ್ಜಾಶೀಲೆಯಾಗಿದ್ದಾಳೆ.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಮೈಸೂರಲ್ಲಿ ನಿರ್ಮಿಸಿದ ಶಿವ ದೇವಾಲಯದ ಶಿವ ವಿಗ್ರಹವು ತ್ರಿಶೂಲಧಾರಿಯಾಗಿ ಅಭಯ ಮುದ್ರೆ ಹೊಂದಿ, ನಸುನಗೆ ಸೂಸುತ್ತ ಕಲ್ಯಾಣಕಾರಿಯಾಗಿರುವುದು. ಅಲ್ಲಿಯ ದೃಶ್ಯಾವಳಿಯಲ್ಲಿ ನಂದಿಯನ್ನು ಆರೋಹಿಸಿದ. ಶಿವ–ಪಾರ್ವತಿ ಗಣೇಶನನ್ನು ತಮ್ಮೊಂದಿಗೆ ಕೂಡಿಸಿಕೊಂಡಿದ್ದಾರೆ. ಇಲ್ಲಿ ಪತ್ನಿ ಮುಂದೆ ಕುಳಿತಿದ್ದು, ಶಿವ ಅವಳ ಹಿಂದೆ ಮಗ ಅವನ ಹಿಂದೆ ಈ ದೃಶ್ಯವು ಅತ್ಯಂತ ಆಕರ್ಷಕವಾಗಿರುವುದು. ಕಡೂರಿನ ದೇವಸ್ಥಾನದಲ್ಲಿ ರಾವಣ ಕೈಲಾಸದಲ್ಲಿ ತಪಸ್ಸು ಮಾಡುವ, ಶಿವ–ಪಾರ್ವತಿಯರು ಆಸೀನವಾಗಿರುವ ದೃಶ್ಯಾವಳಿ ಇರುವುದು. ಅದೇ ರೀತಿ ಸಿದಗಂಗೆಯ ನಟರಾಜನ ಚತುರ್ಭುಜ ಕಂಚಿನ ವಿಗ್ರಹವೂ ತುಂಬ ಮೋಹಕವಾಗಿರುವುದು. ಇನ್ನೊಂದು ಅಷ್ಟಭುಜ ಕಂಚಿನ ವಿಗ್ರಹವು ಭಯಾನಕ ಮುಖ ಮುದ್ರೆ ತಳೆದಿದೆ. ರಾಕ್ಷಸನನ್ನು ತುಳಿದು ನಿಂತಿರುವ ಈ ಮೂರ್ತಿ ರುದ್ರ ಮನೋಹರವಾಗಿರುವುದು. ರಾಮನಾಥಪುರ ದೇವಾಲಯದಲ್ಲಿಯೂ ಕಂಚಿನ ನಟರಾಜ ವಿಗ್ರಹವಿದೆ. ಸುತ್ತಲೂ ಪ್ರಭಾವಳಿ ಇರುವುದು ಇದರದೊಂದು ವಿಶೇಷವಾಗಿರುವುದು ಒಂದು ಕೈಯಲ್ಲಿ ಡಮರು, ಇನ್ನೊಂದು ಕೈಯಲ್ಲಿ ಕಮಲ. ಒಂದು ಕೈಯಿಂದ ಅಭಯ ಮುದ್ರೆ. ಇನ್ನೊಂದು ನೃತ್ಯ ಭಂಗಿಯಲ್ಲಿದೆ. ಬೆಂಗಳೂರಿನ ನರಹರಿ ಗುಡ್ಡದಲ್ಲಿ ಸುಬ್ರಹ್ಮಣ್ಯನೊಂದಿಗೆ ಶಿವನಿದ್ದಾನೆ.

ಗುಡಿಮಲ್ಲಮ್ ಶಿವ ವಿಗ್ರಹವು ತಾರಕಾಸುರನನ್ನು ತುಳಿದು ನಿಂತಿದ್ದರೂ ಗಂಭೀರ ಮುದ್ರೆ ತಾಳಿದ್ದರೂ ಕಲ್ಯಾಣಕಾರಿಯಾಗಿ ತೋರುವುದು. ತಂಜಾವೂರಿನ ಬೃಹದೀಶ್ವರ ದೇವಸ್ಥಾನದ ಒಳಗಡೆಗಿರುವ ಸುಂದರ ಮೂರ್ತಿ ಮತ್ತು ಅವನ ಪತ್ನಿಯ ಕಂಚಿನ ವಿಗ್ರಹ ಆಕರ್ಷಕವಾಗಿವೆ. ಅದೇ ದೇವಾಲಯದ ಹೊರಗಿನ ದೃಶ್ಯಾವಳಿಗಳಲ್ಲಿ ಲಿಂಗೋದ್ಭವ ಶಿವ, ಚತುರ್ಭುಜ ಶಿವ ವಿಗ್ರಹಗಳೂ ನೋಡುಗರ ಮನಸ್ಸನ್ನು ಸೆಳೆಯುತ್ತಿವೆ. ಚತುರ್ಭುಜ ಶಿವ ಅಭಯ ಮುದ್ರಾಂಕಿತನಾಗಿರುವನು. ಕಂಚಿಯ ಏಕಾಂಬರನಾಥ ದೇವಾಲಯದಲ್ಲಿ ದೃಶ್ಯಾವಳಿಯಲ್ಲಿ ಶಿವ–ಪಾರ್ವತಿ ಮಗು ಗಣೇಶನನ್ನು ಲಾಲಿಸುತ್ತಿರುವ ದೃಶ್ಯ ಕಣ್ಣಿಗೆ ಹಬ್ಬವನ್ನುಂಟು ಮಾಡುವುದು. ಮೂರ್ತಿಗಳು ತುಂಬ ಸುಂದರವಾಗಿವೆ ಪಳನಿಯ ಸುಬ್ರಹ್ಮಣ್ಯ ದೇವಾಲಯದಲ್ಲಿ ಶಿವ–ಪಾರ್ವತಿಯರ ವಿಗ್ರಹಗಳೂ ಮನಾಕರ್ಷಕವಾಗಿವೆ. ಆಧುನಿಕತೆ ಇಲ್ಲಿ ಹಣಿಕೆ ಹಾಕಿರುವುದು. ಇಂಥ ಅನೇಕ ದೃಶ್ಯಗಳೂ ಇಲ್ಲಿವೆ. ಮಧುರೆಯ ಮೀನಾಕ್ಷಿ ದೇವಾಲಯದಲ್ಲಿ ಮತ್ತು ಅಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ನಟರಾಜನ ವಿವಿಧ ಭಂಗಿಯ ಅದ್ಭುತ ರಮ್ಯವಾದ ಕಂಚಿನ ವಿಗ್ರಹಗಳಿವೆ. ತ್ರಿಚನಾಪಳ್ಳಿಯ ಉಚಿ ಪುಳೆಯಾರ ದೇವಾಲಯದಲ್ಲಿ ಶಿವ ಭಕ್ತನನ್ನು ನನ್ನು ಅನುಗ್ರಹಿಸುವ ದೃಶ್ಯವಿದೆ.

ಶಿವ ಲೀಲಾವಳಿ

ತಿರುಪತಿಯ ಬಳಿ ಇರುವ ಕಾಳಹಸ್ತಿ ದೇವಾಲಯ ಮತ್ತು ಗುಹಾ ದೇವಾಲಯಗಳು ಇಂಥ ದೃಶ್ಯಾವಳಿಗೆ ಹೆಸರಾಗಿವೆ. ದೇವಾಲಯದಲ್ಲಿರುವ ತ್ರಿಮೂರ್ತಿ ಶಿವಲಿಂಗವನ್ನು ಆಧರಿಸಿದ್ದಾನೆ. ಈ ಮೂರ್ತಿ ಬಹು ಮನೋಹರವಾಗಿದೆ. ಗುಹಾ ದೇವಾಲಯದಲಿರುವ ನಟರಾಜನೊಂದಿಗೆ ನಂದಿ ಸಹಿತ ಪಾರ್ವತಿ ಇರುವ ದೃಶ್ಯಾವಳಿಯೂ ಸೊಗಸಾಗಿರುವುದು. ಹೇಮಾವತಿಯ ನೃತ್ಯ ಶಿವವಿಗ್ರಹವು ಅಷ್ಟಭುಜಗಳು ಗಂಭೀರ ಮುಖ ಮುದ್ರೆಯಿಂದ ಶೋಭಾಯಮಾನವಾಗಿರುವುದು ಈ ಈಶ್ವರ ದೇವಾಲಯದ ಮೂರ್ತಿ ಅಭಯ ಮುದ್ರೆ ತೋರಿದರೂ ಹೊಳೆವ ಕಂಗಳಿಂದ ತ್ರಿಶೂಲಧಾರಿಯಾಗಿ ರುದ್ರ ಗಂಭೀರವಾಗಿದೆ, ಶ್ರೀಶೈಲ ದೇವಾಲಯದ ಹೊರ ವಲಯದ ಗೋಡೆಗಳಲ್ಲಿಯ ದೃಶ್ಯಾವಳಿಯಲ್ಲಿ ನಂದಿಯನ್ನು ಆರೋಹಿಸಿದ ಶಿವ ಪಾರ್ವತಿ ಗಣಗಳೊಂದಿಗೆ ಸಾಗಿರುವ ದೃಶ್ಯವಿದೆ.

ಹೀಗೆ ಶಿಲ್ಪದಲ್ಲಿ ಶಿವನ ಮೂರ್ತಿಗಳು, ವಿಗ್ರಹಗಳು, ದೃಶ್ಯಾವಳಿಗಳು ವಿವಿಧವಾಗಿವೆ. ಭಕ್ತರು, ಉಪಾಸಕರು ಅವನನ್ನು ಕಾಣಬಯಸಿದ ರೀತಿಯಲ್ಲೆಲ್ಲ ಅವನನ್ನು ರೂಪಿಸಿಕೊಂಡಿದ್ದಾರೆ. ಆರಾಧಿಸಿದ್ದಾರೆ. ಉಪಾಸನೆ ಇನ್ನೂ ಸಾಗಿ ಬಂದಿದೆ. ಗಾತ್ರಾತೀತವಾದ ಶಿವನ ಬಗೆಗೆ ಇಷ್ಟೊಂದು ಅಗಾಧ ಗಾತ್ರದಲ್ಲಿ ಶಿಲ್ಪ ಸೃಷ್ಟಿಯಾದುದು ಕೂಡ ಇನ್ನೊಂದು ವಿಶೇಷವೇ ಆಗಿದೆ. ●

ಗ್ರಂಥಋಣ :

i) Saga of Indian Sculpture
— K. M. MUNSHI

ii) The Ideas of Indian Art
— E. B. HOWEL

iii) The Art of India
— AJIT MOOKERJEE

iv) ಕರ್ನಾಟಕದ ಯಾತ್ರೆ
— ಜೀರಿಗೆಕಟ್ಟೆ ಬಸಪ್ಪ

v) ಮೈಸೂರು ಗೆಜೆಟಿಯರ
— ಹಯವದನಾಚಾರ್

vi) ಟೈಮ್ಸ್ ಆಫ್ ಇಂಡಿಯಾ-ಮಾರ್ಚ್ ಅಂಕ ೧೯೭೦



ಸಿದ್ಧಗಂಗೆ ಕ್ಷೇತ್ರದ ನಟರಾಜ—ಕಂಚಿನ ಪ್ರತಿಮೆ



ಶಿವ – ಪಾರ್ವತಿ ಆಲಿಂಗನ ನೇಪಾಳದ ಅಪರೂಪದ ಕಂಚಿನ ಪ್ರತಿಮೆ



ಮಧುರೆಯ ಮೀನಾಕ್ಷಿ ದೇವಾಲಯದ್ದ ಶಿವನ ಕಂಚಿನ ಪ್ರತಿಮೆ



ಮಧುರಾ ಮೀನಾಕ್ಷಿ ದೇವಾಲಯದ ಕಂಚಿನ ಪ್ರತಿಮೆ ನಟರಾಜ



ಹಳೆಬೀಡು ದೇವಾಲಯದ ಮೇಲೆ ಕೆತ್ತಲ್ಪಟ್ಟಿರುವ ಸರ್ವಾಲಂಕಾರಿ ಶಿವ



ಕಂಚಿಯ ಏಕಾಂಬರನಾಥ ದೇವಾಲಯದ ಶಿವ-ಪಾರ್ವತಿ-ಗಣಪತಿ



ಬಾದಾಮಿಯ ಮೂರನೆಯ ಗುಹೆಯಲ್ಲಿ ಶಿವ—ಪಾರ್ವತಿ



ಉಮೆ-ಗಣಪನೊಂದಿಗೆ ನಂದಿವಾಹಿ ಉಮೇಶ—ಮೈಸೂರು



ಎಲ್ಲೋರಾ ಗುಹೆಯ ಶಿಲ್ಪ ಶಿವ—ಪಾರ್ವತಿ ಕಲ್ಯಾಣ



ಖಜುರಾಹೋದಲ್ಲಿನ →
ಶಿಲ್ಪ; ಹರ-ಗೌರಿ



ಪಳನಿಯ ಸುಬ್ರಹ್ಮಣ್ಯ ದೇವಾಲಯದಲ್ಲಿ ಪಾರ್ವತಿಯೊಂದಿಗೆ ಶಿವ



ಹತ್ತನೆ ಶತಮಾನದ ಬಿಹಾರದ →
ಶಿಲ್ಪ-ಉಮಾಮಹೇಶ್ವರ



ಶ್ರೀಶೈಲ ದೇವಾಲಯದ ಗೋಡೆಯ ಮೇಲೆ ಕೆತ್ತಲ್ಪಟ್ಟ
ಪಾರ್ವತೀ ಸಹಿತ ನಂದಿವಾಹನ ಶಿವ



ಎಲೆಫೆಂಟಾ ಗುಹೆಯಲ್ಲಿನ ತ್ರಿಮುಖ ಮಹೇಶ್ವರ



ಕಂಚಿಯ ಕೈಲಾಸನಾಥ ದೇವಾಲಯದ ಅಷ್ಟಭುಜ ತಾಂಡವಶಿವ



ಐಹೊಳೆಯ ದುರ್ಗಾದೇವಾಲಯದ ಅಷ್ಟಭುಜ ಶಿವ



ತಿರುಪತಿ ಬಳಿಯ ಕಾಳಹಸ್ತಿಯಲ್ಲಿ ತ್ರಿಮುಖ ಶಿವ



ತಂಜಾವೂರಿನ ಬೃಹದೀಶ್ವರ ದೇವಾಲಯದ ಅಭಯಹಸ್ತ ಶಿವ



ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ - ಸೋಮೇಶ್ವರಿ



ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ನಂದಿ ಸಮೇತ ಶಿವ



ಮೈಸೂರಿನ ಶ್ರೀ ಸಿದ್ಧಲಿಂಗಸ್ವಾಮಿ ದೇವಾಲಯದ ಶಿವನ ಮೂರ್ತಿ



ಹರಿಹರದ ಹರಿಹರೇಶ್ವರ



ಪಟ್ಟದಕಲ್ಲಿನ ಪಾಪನಾಥ ದೇವಾಲಯದ ನಟರಾಜ

ಅರಳಗುಪ್ಪೆಯ ನಟರಾಜ ವಿಗ್ರಹ →





ಆಂಧ್ರದ ಹೇಮಾವತಿಯ ಈಶ್ವರ ದೇವಾಲಯದ ಕಪೋಮುಗ್ನ ಶಿವ



ಕಾಳಹಸ್ತಿ ಗುಹಾಲಯದಲ್ಲಿನ ನಟರಾಜ ಮೂರ್ತಿ



ಬಾದಾಮಿಯ ಒಂದನೇ ಗುಹೆಯ ನಟರಾಜ



ಪಟ್ಟದಕಲ್ಲು— ಶಿವ—ಪಾರ್ವತಿ, ಕೈಲಾಸಪರ್ವತವೆತ್ತುವ ದಶಕಂಠ



ಆಂಧ್ರದ ಹೇಮಾವತಿಯ ನೃತ್ಯಶಿವ



ಐಹೊಳೆ ಗುಹಾಲಯದ ನಟರಾಜ




ಕಾಲಾರಿ ಶಿವ—ಪಟ್ಟದಕಲ್ಲಿನ ಶಿಲ್ಪ



ಬಾದಾಮಿಯ ೧ನೆ ಗುಹೆಯ ಅರ್ಧನಾರೀಶ್ವರ



ಶಿರುಚನಾಪಳ್ಳಿ ಬಂಡೆಯ ಮೇಲಣ ದೇವಾಲಯದ್ವಾರಶಿವ



ಪಟ್ಟದಕಲ್ಲು—ವಿರೂಪಾಕ್ಷ ದೇವಾಲಯದ ದ್ವಾರದಮೇಲೆ ಕೆತ್ತಲ್ಪಟ್ಟ ಶಿವ

ಅಣ, ಉಡುಗಿ

— ಅನುಪಮಾ ನಿರಂಜನ

ರಂಗೇಗೌಡ ಕಲ್ಯಾಣಕೇಂದ್ರದ ಅಧ್ಯಕ್ಷರು. ಅವರು ತಮ್ಮ ಕಚೇರಿಗೆ ಒಬ್ಬ ಸ್ಟೇನೋಗ್ರಾಫರಳನ್ನು ನೇಮಿಸಿಕೊಂಡರು. ಆಕೆ ನಳಿನಿ, ರಂಗೇಗೌಡರ ಮಗಳು ಶೋಭಾಳ ಕ್ಲಾಸಮೇಟ.

ಹಸಿರು ಶಾಲು ಹಾಸಿದ ಮೇಜಿಗೆ ದಪ್ಪ ಗಾಜು. ಅದರ ಮೇಲೆ ಎಡ ಬದಿಗೆ ಪ್ರಿಯದರ್ಶಿನಿ ಫೋನು, ಬಾಲ್‌ಪಾಯಿಂಟ್ ಪೆನ್ನುಗಳನ್ನಿರಿಸಿದ ಪೋರ್ಸಿಲಿನ್ ಬಟ್ಟಲು, ಬಲಬದಿಗೆ ಫೈಲುಗಳನ್ನಿಡುವ ನೀಲಿ ಪ್ಲಾಸ್ಟಿಕ್ ತಟ್ಟೆ ಮತ್ತು ಪಿಂಗಾಣಿಯ ಸಿಗರೇಟು ಆಷ್‌ಟ್ರೇ.

ಕೊಠಡಿಯ ತುಂಬ ಸಿಗರೇಟಿನ ಘಾಟು ತುಂಬಿತ್ತು. ಬಾಗಿಲಲ್ಲಿ ಮುಖ ತೋರಿಸಿದ ಗುಮಾಸ್ತ ಒಳಗೆ-ಹೋಗೋಣವೇ ಬೇಡವೇ ಎಂಬ ಅಂಜಿಕೆಯಿಂದ ಅಲ್ಲಿಯೇ ನಿಂತ.

ಕಾಲಿನ ಮೇಲೆ ಕಾಲು ಹಾಕಿಕೊಂಡು, ಮೆತ್ತನೆಯ ಗೋಡ್ರೆಜ್ ಕುರ್ಚಿಗೆ ಒರಗಿ ಹಾಯಾಗಿ ದಮ್ ಎಳೆಯುತ್ತಿದ್ದ ರಂಗೇಗೌಡರ ಧ್ಯಾನ ಭಗ್ನವಾದಂತಾಯಿತು. ಕಪ್ಪು ಚಪ್ಪಟೆ ಮುಖದಲ್ಲಿ ಸಿಟ್ಟು ಕುಣಿಯಿತು. ಬಂದವನು ತನ್ನ ಗುಮಾಸ್ತನೇ ಎಂಬುದು ಗೊತ್ತಾದಾಗ, ಯಾಕೆ ಬಂದ? ಎಂಬ ಕುತೂಹಲವೂ ಹುಟ್ಟಿತು. ಬಲು ಮುಖ್ಯ ವಿಷಯವಿಲ್ಲದೆ ಆತ ತಾನಾಗಿಯೇ ಒಳಗೆ ಬರುವುದಿಲ್ಲವೆಂಬುದೂ ಇವರಿಗೆ ಗೊತ್ತು.

"ಏನು? ಅಲ್ಯಾಕ್ ನಿಂತ್ಕಂಡಿದೀರ?"

"ನೋಟ್ ಬರ್‍ಕಂಬಂದಿವ್ನಿ ಸಾರ್. ಅಡ್ವಟೈಸ್‌ಮೆಂಟ್‌ಗೆ"

"ಓದ್‌ರಿ ನೋಡಾನ"

ರಂಗೇಗೌಡರು ಸಿಗರೇಟಿನ ತುದಿಯಲ್ಲಿದ್ದ ಬೂದಿಯನ್ನೂ ಆಷ್‌ಟ್ರೇಯೊಳಗೆ ಉದುರಿಸಿ ಬಾಯಿಂದ ಹೊಗೆಯುಗುಳಿದರು.

"ಹಿಂದುಳಿದವರ ಕಲ್ಯಾಣ ಕೇಂದ್ರ ಕಚೇರಿಗೆ ಒಬ್ಬ ಸ್ಟೆನೋಗ್ರಾಫರ್ ಬೇಕು. ಕನಿಷ್ಠ ಅರ್ಹತೆ ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ. ಕನ್ನಡ ಇಂಗ್ಲೀಷುಗಳೆರಡರಲ್ಲೂ ಟೈಪು ಮಾಡಬಲ್ಲ ಸಾಮರ್ಥ್ಯವಿರಬೇಕು. ಹಿಂದುಳಿದ ಪರಿಶಿಷ್ಟ ಜಾತಿಯವರಿಗೆ ಮೊದಲು ಅರ್ಹತೆ..."

"ಮುಖ್ಯವಾದ್ದೇ ಮರ್‍ತು ಬಿಟ್ರಿ"

"ಯಾವ್ದು ಸಾರ್."

"ನಮಗ್ ಬ್ಯಾಕಾಗಿರಾದು ಉಡ್ಗಿ ಅಂತ್ ಬರೀರಿ. ನಿಮ್ಮಂತೋ ಕೋತಿ ಮುಸುಡಿಗಳ್ನ ಆಫೀಸ್ನಲ್ಲಿ ದಿನಾ ನ್ವಾಡೀ ನ್ವಾಡೀ ನಂಗ್ ಸಾಕಾಗೋಗದೆ."

ಗುಮಾಸ್ತ ಉಗುಳು ನುಂಗಿದ. 'ಇವ ಪ್ಯಾಲಿನ ಆಫೀಸರಾಗಿರೋದ್ರಿಂದ ಏನಂದ್ರೂ ತಾನು ಸಹಿಸ್ಕೊಬೇಕ್ ಒಟ್ಟೀ ಪಾಡ್ಗೆ. ಏನನ್ನಾ ತಾನು ಜಂಬ ಮಾಡಿದ್ನೋ ವಾದಿಸಿದ್ನೋ ಕೆಲ್ಸಕ್ಕೇ ಕುತ್ರ ಬರತೈತೆ. ಇವ್ನಿಗೊಬ್ಬು ಉಡುಗಿ ಬೇಕು. ಉಡುಗಿಯಲ್ಲ ಯುವತಿ. ಇಲ್ಲೀ ವರ್‍ಕ ಇವ್ನ ಒರಗಿನ ಪರ್‌ತಾಪಗಳ್ನ ಕೇಳ್ತಾ ಇದ್ವಿ. ಇನ್ನ ಇಲ್ಲೂ ಏನೇನ್ ಆಗತೈತೂೋ!' ಗುಮಾಸ್ತ ತಲೆತಗ್ಗಿಸಿ ಹೊರಗೆ ಹೋದ.

ಉಡ್ಗಿ ಎಂದು ಹೇಳಿದ ಬಳಿಕ ರಂಗೇಗೌಡರ ಮುಖ ಖುಷಿಯಿಂದ ಕುಣಿಯಿತು. ತಮ್ಮ ವರ್ಗದಲ್ಲಿ ಅಂಥ ಚೆನ್ನಾಗಿರೋ ಹುಡಗೀರು ಇರ್‍ತಾರಾ ಅನಿಸಿತು. ಏನಿಲ್ಲದಿದ್ರೂ ಫಿಗರ್ ಇದ್ರೆ ಸಾಕು. ಈಗ ತಮ್ಮ ಮಗಳಿಲ್ವೆ? ಕಾಲೇಜು ಓದ್ತಾ ಅವಳೆ. ಯಾವಾಗ್ಲೂ ಬೆಲ್‌ಬಾಟಮ್ಸ್ ಹಾಕ್ಕೊಂಡು ಹೋಗುತಾಳೆ. ಅವಳ ಎದೆ ನೋಡಿದ್ರೆ ತನ್ನ ಮ್ಯೂಜುಮ್ ಅನ್ನುತ್ತೆ. ತನ್ನ ಮಗಳು ಅಂಬೋದೇ ಮರ್‍ತು ಹೋಗುತ್ತೆ. ತನ್ನ ಹೆಂಡ್ತಿ ಮುಖ ನೋಡಾಕಾಗಲ್ಲ. ಈಗಂತೂ ದಪ್ಪ ಬೇರೆ ಆಗವಳೆ. ಕಪ್ಪು ಮೂತಿ ಇನ್ನಷ್ಟು ಊದಿಕೊಂಡದೆ. ಯಾವಾಗ್ಲೂ ಸೆರಗನ್ನ ಮೈತುಂಬಾ-ಹೊದ್ಕೊಂಡು ಗೌರಮ್ಮನ ಅಂಗೆ ಕುಂತಿರ್‍ತಾಳೆ. ಎದೆ ಇರೋದ್ಯಾಕೆ? ತೋರಿಸ್ಕಳಾಕೆ ಅನ್ನಾದೂ-ಅವಳ್ಗೊತ್ತಿಲ್ಲ. ಈ ಕೆಲ್ಸಕ್ ಬರೋ ಉಡುಗಿ ನೋಡಾಕೂ ಚೆಂದಾಗಿದ್ರೆ ಈ ಆಫೀಸ್ನಲ್ಲಿ ಬೋರ್ ಆಗಾಕಿಲ್ಲ. ನೋಡಾನ...

ದಿರಿಸು ಹಾಕಿಕೊಂಡ ಜವಾನ ಒಳಗೆ ಬಂದು ಭಕ್ತಿಯಿಂದ ಬಾಗಿ ವಿಸಿಟಿಂಗ್ ಕಾರ್ಡೊಂದನು ಅವರ ಮುಂದೆ ಇರಿಸಿದ.

ರಂಗೇಗೌಡರು ಅದನ್ನೋದಿ ಹುಬ್ಬೇರಿಸಿ ಪ್ರಶ್ನಿಸಿದರು.

"ಕುಂತವ್ರಾ?"

"ಔದು ಬುದ್ಧಿ. ಅರ್ಧಗಂಟೆ ಆಯ್ತುರ."

ಅರ್ಧಗಂಟೆ ಕಾಯಿಸದೆ ಯಾರನ್ನೂ ಬಿಡಬಾರದೆಂಬುದು ಅವರ ಖಚಿತ ಅಭಿಪ್ರಾಯ

"ಕರಿ ಅಂಗಾದ್ರೆ."

ರಂಗೇಗೌಡರು ಸಿಗರೇಟನ್ನು ಚುರುಟಿ ತಮ್ಮ ಗಾಂಧೀಟೋಪ್ಪಿಗೆಯನ್ನು ಸರಿಪಡಿಸಿಕೊಂಡು, ಟ್ರೇನಿಂದ ಕಾಗದವೊಂದನ್ನು ತೆಗೆದು ತಮ್ಮ ಮುಂದಿರಿಸಿಕೊಂಡು ಆಲೋಚನಾ ಮಗ್ನರಾಗಿರುವವರಂತೆ ನಟಿಸುತ್ತಾ ಕುಳಿತರು.

ಸ್ಥೂಲಕಾಯದ ನಾಗೇಗೌಡರು ಒಳಗಡಿಯಿರಿಸಿ, ನಮಸ್ಕರಿಸಿದರು.

"ಬರ್‍ರಿ, ಕುಂತ್ಕೊಳಿ", ಎಂದು ರಂಗೇಗೌಡರು ತಮ್ಮ ಎದುರಿಗಿನ ಕುರ್ಚಿ ತೋರಿಸಿ ಮತ್ತೆ ಎದುರಿಗಿನ ಕಾಗದದ ಕಡೆಗೆ ಕಣ್ಣು ಹಾಯಿಸಿದರು.

"ನಮ್ ಕಚೇರಿ ಕಟ್ಟೋಕ್ಕೆ ಸರ್ಕಾರ್‌ದೋರು ಅತ್ತು ಲಕ್ಷ ಕೊಟ್ಟವ್ರೆ ಅಂತ ಕೇಳ್ದೆ."

"ಕೊಟ್ಟವ್ರೆ. ಅದ್ರೆ ಕೈಗೆ ಅಣ ಯಾವಾಗ್ ಬತ್ತೈತೋ ಏನೋ!"

"ಬಂದೇ ಬರತೈತೆ. ನಾನೂ ಕಂಟ್ರಾಕ್ಟ್ ಮಾಡ್ತಿವ್ನಿ. ನಿಮಗ್ಗೊತ್ತಿರಬೋದು. ನನ್ ಮಗ್ನೂ ಇದೇ ಬಿಜಿನೆಸ್ಸು. ಈ ಕೆಲ್ಸ ನಮ್ಗೆ ಕೊಟ್‌ಬುಟ್ರೆ... ಹ್ಹೆ...ಹ್ಹೆ.."

ರಂಗೇಗೌಡರು ಯೋಚಿಸಿದರು, ಈ ನನ್ ಮಗನಿಗೆ ಈ ಕಂಟ್ರಾಕ್ಟ್ ಕೊಟ್ಬಿಟ್ರೆ ಇನ್ನು ನಂಗೆ ಮೂರ್ ನಾಮ ಅಕ್ಬಿಡತಾನೆ. ನಮ್‌ನಮ್ಮೋರ್‍ನ ದುಡ್ಡು ಕಾಸಿನ ವಿಸಯ ಬಂದಾಗ ನಂಬ್ಲೇ ಬಾರ್‍ದಪೋ.

"ನೀವೇಳೋದು ನ್ಯಾಯ. ನಮ್ಮೋರಿಗೋಸ್ಕರ ಅಲ್ದೆ ಇನ್ಯಾರ್ಗೆ ನಾವ್ ಸಆಯಾ ಮಾಡ್ಬೇಕು? ಅದ್ರೆ ನನ್ ಕೈಯಾಗೇನೈತಿ? ಮಿನಿಸ್ಟ್ರು ಯಾರ್ಗೆ ಏಳ್ತಾರೋ ಅವರ್ಗೇ ಆಗತೈತೆ."

ಅವರು ಸುಮ್ಮನೆ ಗಂಟೆ ಬಾರಿಸಿದರು. ನಾಗೇಗೌಡರ ಮುಖ ಚಿಕ್ಕದಾಯಿತು. "ಅಂಗಾ?" ಎಂದು ಆತ ಪ್ರಶ್ನೆ ಕೇಳಿ ಮೇಲೆದ್ದು ನಿಂತರು. "ಸಮ್ಯ ಬಂದಾಗ ನಿಮ್ಮೋರವ್ರೆ, ಅನ್ನಾದನ್ನ ಮರೀಬಾಡ್ರೀ."

ಜವಾನ ಬಂದ. ಏನಿಲ್ಲವೆಂಬಂತೆ ಅವರು ಕೈಯಾಡಿಸಿದರು. ನಾಗೇಗೌಡ ಹೊರಹೋದ ಬಳಿಕ ರಂಗೇಗೌಡರು ಮೇಲೆದ್ದು ಶತಪಥ ಹಾಕಿದರು. 'ಹತ್ತು ಲಕ್ಷರೂಪಾಯಿ ಬಾಬತ್ತು. ಅದರಲ್ಲಿ ತಾನು ಸಾಧ್ಯವಾದಷ್ಟನ್ನು ಗಿಟ್ಟಿಸಿಕೊಳಬೇಕು. ಉಚ್ಚುಂಡೆ ಮದ್ವೇಲಿ ಉಂಡೋನೇ ಜಾಣ-ಅಂತೇನೋ ಅದಲ್ಲ ತಾನು ಹುಡುಗ ಆಗಿದ್ದದ್ದಾಗ ಹಳ್ಳೀಲಿ ಎಷ್ಟೊಂದು ಕಷ್ಟ ಪಟ್ಟೆ! ತಿನ್ನಕಿರ್‍ಲಿಲ್ಲ, ಉಡಾಕಿರ್‍ಲಿಲ್ಲ. ಓದ್ಬೇಕು, ಮುಂದೆ ಬರ್‍ಬೇಕು. ಆರುವರ ಅಂಗೆ ಆಗ್ಬೇಕು ಅನ್ನೋ ಆಸೆ ಬೆಟ್ಟದಷ್ಟಿತ್ತು. ಅದ್ಹೆಂಗೆ ಎಲ್. ಎಲ್.ಬಿ. ಮಾಡಿ ಲಾಯರಾದ್ನೋ? ಈ ಜಾತಿಗೆ ಸೇರ್‍ದೋನು ಅಂತ ಎಂ.ಎಲ್. ಸೀನೂ ಮಾಡಿದ್ರು. ಕಲ್ಯಾಣ ಕೇಂದ್ರದ ಅಧ್ಯಕ್ಷನ್ನೂ ಮಾಡಿದ್ರು. ಧೀಪ್‌ಗೂ ತಸಗೂ ಕೇವಲ ಕೇವಲ. ಇನ್ಯಾಕೆ ತಾನು ಕಷ್ಟ ಪಡ್ಬೇಕು? ಕೋರ್ಟಿನಲ್ಲಿ ಹೋಗಿ ಆ ಮುಂಗುಸಿ ಜಡ್ಜಿನ ಮುಂದೆ ನಿಂತು ವಾದಮಾಡಿ ಯಾಕೆ ಬೆವರಿಳಿಸಿಕೊಳ್ಬೇಕು? ಅದಕ್ಕೇ ಎಲ್ಲಾ ಬುಟ್ಬುಟ್ಟೆ. ಈಗ ಆರಷ್ಮಾಗಿ ಇಂಗೆ ಕುಂತು ಅವರಿವರ್ ಜೊತೆ ಮಾತಾಡ್ತಾ, ಬೇಜಾರಾದಾಗ ಬಾರಿಗೆ ಹೋಗಿ ಒಂದಿಷ್ಟು ಇಳಿಸಿ, ಸ್ನೇಯಿತೆಯರ್ ಜೊತೆ ಮಜಾ ಮಾಡ್ತು...'

ಜವಾನ ಮತ್ತೆ ಇಣುಕಿ,

"ಇನ್ನೊಬ್ರವ್ರೆ" ಎಂದ.

"ಒಳಕ್ಕಳ್ಸೋ ಬಡ್ಡೀ ಮಗ್ನೆ."

ಎತ್ತರದ ಗೌರವವರ್ಣದ ವ್ಯಕ್ತಿಯೊಬ್ಬರು ಒಳಗೆ ಬಂದರು. ಮುಖದಲ್ಲಿ ಶ್ರೀಮಂತ ಕಳೆ, ಗತ್ತು. ಕರೀ ಕೋಟು. ಜರೀಪೇಟ.

"ನಮಸ್ಕಾರ. ನನ್ಹೆಸರು ಶ್ರೀನಿವಾಸ ರಾವ್ ಅಂತ. ರಾವ್ ಅಂಡ್ ಸನ್ಸ್ ಕಂಟ್ರಾಕ್ಟ್ ಸಂಸ್ಥೆಯ ಮಾಲೀಕ ನಾನು. ನಮ್ಮ ಗಿರಾಕಿಗಳ್ಗೆ ನಾವು ಬಲು ನಿಷ್ಠರು."

ರಂಗೇಗೌಡ ಮುಗುಳು ನಗೆ ಬೀರಿದರು. ಮಾತನಾಡಲಿಲ್ಲ.

"ನಿಮ್ಮ ಸಂಸ್ಥೆಗೆ ಒಂದು ಕಟ್ಟಡ ಕಟ್ಟೋಕೆ ಹಣ ಮಂಜೂರಾಗಿದೆಯಂತ ತಿಳೀತು. ತುಂಬಾ ಸಂತೋಷದ

ವಿಷಯ. ನಮ್ಮ ಗಿರಾಕಿಗಳನ್ನು ತೃಪ್ತಿಪಡಿಸ್ಬೇಕು-ಅನ್ನೋದು ನಮ್ಮ ಮಾಟ್ಟೋ. ಈ ಕೆಲ್ಸ ನಮ್ಗೆ ಕೊಡ್ಸಿ. ಕೆಲ್ಸ ಆರಂಭವಾಗೋ ದಿನ ನಿಮ್ಗೆ ಒಂದು ಲಕ್ಷ ಕ್ಯಾಶ್ ಕೊಟ್ಬಿಡುತ್ತೇನೆ."

ರಂಗೇಗೌಡರ ಹೃದಯ ಆನಂದದಿಂದ ಬಿರಿಯಿತು. ಆದರೆ ಅವರ ಕಪ್ಪು ಮುಖದ ಗೆರೆಗಳು ಬದಲಾಗಲಿಲ್ಲ. ಅವರು ತುಸು ಯೋಚಿಸುವವರಂತೆ ನಟಿಸಿ,

"ನಿಮ್ಕೆಲ್ಸ ಚೆಂದಾಗಿರತ್ತೈತೆ ಅಂತ ನಂಗೊತ್ತು. ಆಗ್ಲಿ. ಒಂಭತ್ತು ಲಕ್ಷ ತೊಂಭತ್ತೈದು ಸಾವಿರಕೆ ಟೆಂಡರ್ ಕೊಡ್ರಿ."

"ನಾಳೇನೇ ಕಳಿಸ್ತೀನಿ. ಥ್ಯಾಂಕ್ಸ್", ಎನ್ನುತ್ತಾ ಶ್ರೀನಿವಾಸರಾವ್ ಕೈ ನೀಡಿ ರಂಗೇಗೌಡರ ಕೈ ಕುಲುಕಿದರು. ಬಿಳಿ ಕೈಯಲ್ಲಿ ಕರಿ ಹಸ್ತ ಬಂದಿಯಾಗಿತ್ತು.

× × × ×

ಇಂಟರ್‌ವ್ಯೂಗೆ ಬಂದಿದ್ದ ಆರು ಜನ ಹುಡುಗಿಯರಲ್ಲಿ ಒಬ್ಬಳನ್ನು ಆರಿಸಿಯಾಯಿತು. ಹೆಸರು ನಳಿನಾ.

ಹುಡುಗಿ ಶ್ಯಾಮಲಕಾಯೆ. ಇಪ್ಪತ್ತರ ಏರು ಯೌವನ. ದುಂಡುದುಂಡಗಿನ ಅಂಗಾಂಗಗಳು. ನಾಚುವ ಪ್ರವೃತ್ತಿ. ಮುಗ್ಧೆ.

ಇವು ರಂಗೇಗೌಡರನ್ನು ಬಲುವಾಗಿ ಆಕರ್ಷಿಸಿದುವು.

ಎಸರೂ ಚೆಂದಾಗೈತೆ. ನೋಡಾಕೂ ಪರ್‍ವಾಗಿಲ್ಲ. ತಬ್ಬಿಕೊಂಡ್ರೆ ಒಳೆ ನೋಪಾದ ಆಳು, ಎಂದು ಅವರು ಬಾಯಿ ಚಪ್ಪರಿಸಿಕೊಂಡರು.

ನಳಿನಾ ಮೊದಲನೆಯ ದಿನ ಕೆಲಸಕೆ ಬಂದ್ವಾಗ ಅವಳ ತಂದೆಯೂ ಬಂದು ರಂಗೇಗೌಡರ ಪಾದಗಳಿಗೆ ನಮಿಸಿದ್ದ.

"ನೀವ್ ನಮ್ ದ್ಯಾವ್ರು ಸೋಮ್ಯೋರೆ. ನಳಿನಿ ಇನ್‌ಮ್ಯಾಕೆ ನಮ್ಮಗ ಅಲ್ಲ ನಿಮ್ದು."

ಅದನ್ನು ಕೇಳಿ ರಂಗೇಗೌಡರಿಗೆ ಕಸಿವಿಸಿ. ಎಲಾ ಇವಳು ನನ್ನ ಮಗಳಾಗೋಷ್ಟು ಮಯಸ್ಸಾದೋನ ಹಂಗೆ ನಾನು ಕಾಣಸ್ತೀನಾ? ನಂಗ್ ಎಷ್ಟಾಯ್ತಪ್ಪ ವಯಸ್ಸು? ಹತ್‌ಹತ್ರ ಐವತ್ತಾಗಿರ್‌ಬೋದು. ಆದ್ರೆ ಎಂಗಿದೀನಿ ನಾನು! ಉಕ್ಕು ಅಂತಾರಲ್ಲ ಅಂಗೈತೆ ನನ್ ಮೈನು ಖಂಡಗು. ಕೂದಲು ಕೂಡಾ ಒಂದಾನ್ನಾ ಬೆಳಗಾಯ್ತಾ ಅದೂ ಇಲ್ಲ. ಈಗಿನ್ ಕಾಲದ್ ಮುಂಡೇಮಕವರಲ್ಲಾ ಮೂವತ್ತಕ್ಕೇ ಅವಕ್ಕೆ ಮುಪ್ಪು ಬರತೈತೆ. ಇನ್ನೇನ್ ಬಂದದಪ್ಪಾ ಅಂದ್ರೆ ಈ ಹೊಟ್ಟೆ ಒಂದು ಮುಂದೆ ಬಂದೈತೆ. ನನ್ನೆಲ್ಲ ಅಂಗೆ. ಕೂತೂ ಕೂತೂ ಅಂಗಾಗೈತೆ. ಅದೇನೋ ಟೆನಿಸೋ ಪನಿಸೊ ಅಂತಾರಲ್ಲಾ ಅದ ಆಡ್ಬಿಟ್ರೆ ಅಂದ್ರೆ ಈ ಒಟ್ಟೆ ಎಲ್ಲೋಗತೈತೋ ಏನೋ.

ನಳಿನಾಳ ತಂದೆ ಹೊರಟ ಹೋದ. ಹುಡುಗಿ ಹೊಸದಾಗಿ ತರಿಸಿದ್ದ ಟೈಪ್‌ರೈಟರಿನ ಮುಂದೆ ಕುಳಿತ ನಾಜೂಕಾಗಿ ಅದನ್ನೆಲ್ಲಾ ಒರೆಸಿಕೊಂಡು ಹಾಳೆಯನು ರೋಲರ್‌ಗೆ ಸಿಕ್ಕಿಸಿ ರಂಗೇಗೌಡರತ್ತ ತಿರುಗಿ ಪ್ರಶ್ನಿಸಿದಳು.

"ಡಿಕ್ಟೇಟ್ ಮಾಡ್ಬಿಟ್ರೆ ಟೈಪು ಮಾಡ್ಕೊಡ್ತೀನಿ ಸರ್."

ಆಹಾ ಎಷ್ಟು ಚೆಂದಾಗಿ ಮಾತಾಡ್ತಾಳೆ ಏ ನಿತಃ ರಂಗೇಗೌಡರಿಗೆ. ತನ್ನ ಮಗಳು ಶೋಭಾ ಹೀಗೇ ಮಾತಾಡತಾಳೆ. ತನ್ನ ಹಾಗೆ ಹಳೆ ಭಾಷೆ ಸೇರಿಸದೆ ಸ್ವಚ್ಛವಾದ ಉಚ್ಚಾರ ಮಾಡುತ್ತಾಳೆ. ಎಷ್ಟಾದರೂ ನಗರದಲ್ಲಿ ಓದಿದ್ ಉಡುಗಿ. ತಾನಾದ್ರೋ ಅಳ್ಳಿ ಮುಕ್ಕ ಆಗಿದ್ದೋನು.

"ನಿಂಗೆ ಇಂಗ್ಲೀಷ್ ಕನ್ನಡ ಎಲ್ಲಾ ಟೈಪು ಬಡಿಯಾಕೆ ಬತ್ತೈತಾ?"

"ಬರುತ್ತೆ ಸರ್."

ಇವಳ ಹತ್ತಿರ ಏನಾದರೂ ಮಾತಾಡಬೇಕು, ಅವಳ ಪ್ರೀತಿ ವಿಶ್ವಾಸಗಳನ್ನು ಗಳಿಸಬೇಕು ಎನ್ನುವ ಹಂಬಲ.

ನೀನು ಐಸ್ಕೂಲ್ ಪಾಸಾಗಿ ಎಷ್ಟು ವರ್ಷನಾಯ್ತು?"

"ಎರಡು ವರ್ಷ. ನಾನೂ ನಿಮ್ಮಗಳು ಶೋಭಾ ಹೈಸ್ಕೂಲಲ್ಲಿ ಕ್ಲಾಸ್ ಮೇಟ್ಸ್ ಆಗಿದ್ವು."

"ಓ!"

ರಂಗೇಗೌಡರಿಗೆ ಸಿಟ್ಟು. ಈ ಮಾತನ್ನು ಇವ್ಳು ಯಾಕೆ ಏಳ್ಬೇಕಾಗಿತ್ತು? ಇವಳಿಗೂ ತನ್ನ ಮಗಳಿಗೂ ಯಾವ ಹೋಲಿಕೆಯೂ ಇಲ್ಲ. ಅವಳು ಕುದುರೆಯಂಥ ಉಡುಗಿ. ಒಬೇ ಮಗಳೂಂತ ಮುದ್ದಾಗಿ ಬೆಳೆಸಿದ್ದಕ್ಕೆ ಈಗ ನನ್ ಮಾತಂದ್ರೆ ಅವಗೆ Dont care ಆಗ್ಯದೆ. ತಂಗಿಷ್ಟಬಂದ್ ಸಿನಿಮಾಕ್ಕೆ ಓಯ್ತಾಳೆ. ಬಿ.ಎ. ಆದ್ ಮ್ಯಾಲೆ ಪಾರಿನ್‌ಗೆ ಓಯ್ತೀನಿ ಅಂತ ಕುಣೀತವೆ. ಅವನ ಮಾತಂದ್ರೆ ಕಸಕ್ಕಿಂತ ಕಡೆ ಅವಗೆ.

'ಅದ್ಯಾಕ್ ಸೀರೆ ಉಟ್ಕಳಾದ್ ಬುಟ್ಬುಟ್ ಗಂಡು ಉಡುಗ್ರಂಗೆ ಷರಾಯಿಷಲ್ಟು ಆಕ್ಕೊಂತೀಯಾ?' ಅಂತ ಅವರಮ್ಮ ಕೇಳಿದ್ರೆ ಶೋಭಾ 'ನೀನ್ ಸುಮ್ನಿರಮ್ಮ ನಿಂಗೊತ್ತಾಗಲ್ಲ', ಅಂತ ದಬ್ಬಾಯ್ಸಿ ಬಿಡೋದಾ? ಒಂದಿನ ಇವ್ರೂ ನನ್ನೂವೆ ದಬಾಯಿಸ್ಬಿಟ್ರೆ…

'ಥೂ ಮನಸ್ಸು ಎಲ್ಲಿಂದೆಲ್ಲೊ ಓಯ್ತದೆ. ಕೆಲ್ಸಾನಾದ್ರೂ ಮಾಡಾವ ಎಂದುಕೊಳುತ್ತಾ ರಂಗೇಗೌಡರು ಒಂದೆರಡು ಕಾಗದಗಳನ್ನು ಡಿಕ್ಟೇಟ್ ಮಾಡಿದರು. ಅನಂತರ ನಳಿನಾ ಅವನ್ನು ಟೈಪು ಮಾಡಲು ಆರಂಭಿಸಿದಾಗ ಅವರು, ಕುಣಿಯುವ ಅವಳ ಸ್ತನಗಳನ್ನೇ ನೋಡುತ್ತಾ ಕುಳಿತರು. ಹುಡುಗಿ ಒಂದು ಸಾರಿ ತಲೆಯೆತ್ತಿ ನೋಡಿ ಅವರ ದೃಷ್ಟಿ ಎಲ್ಲಿತ್ತೆಂಬುದನ್ನು ಗಮನಿಸಿ ನಾಚಿ ನೀರಾದಳು. ಒಳಗೇ ಭೀತಿ ಹೆಡೆಯಾಡಿಸಿತು.

ಮರುದಿನ ಕೆಲಸ ಮುಗಿದ ಬಳಿಕ ರಂಗೇಗೌಡರು ಕೇಳಿದರು.

"ನಿಮ್ಮಪ್ಪಂಗೆ ಎಸ್ಟು ಜನ ಮಕ್ಳು?"

"ಆರು ಜನ. ನಾನೇ ಹಿರಿಯೋಳು. ಇಬ್ರು ತಂಗೀರಿದ್ದಾರೆ. ಮೂರು ಜನ ತಮ್ಮಂದ್ರು."

"ಓದತಾ ಅವ್ರಾ?"

"ಹೂಂ."

ನಳಿನಾಳ ಅಪ್ಪ ಯಾವುದೋ ಆಫೀಸಿನಲ್ಲಿ ಜವಾನನೆಂಬುದು ಅವರಿಗೆ ನೆನಪಾಯಿತು. ಕಡು ಬಡತನದ ದೆಸೆಯಿಂದ ಈ ಹುಡುಗಿ ಕೆಲಸಕ್ಕೆ ಸೇರಿದವಳೆಂಬುದು ಸ್ಪಷ್ಟ. ಇಂಥವರು ದುಡ್ಡಿನಾಸೆಗೆ, ಬಟ್ಟೆ ಒಡವೆಗಳಾಸೆಗೆ ಯಾವ ಆಮಿಷಕ್ಕೆ ಬೇಕಾದರೂ ಒಳಗಾಗುವರೆಂಬುದು ಅವರ ಅನುಭವಕ್ಕೆ ಬಂದ ಸಂಗತಿ.

ಒಂದು ದಿನ ನಳಿನ ಟೈಪು ಮಾಡುತ್ತ ಕುಳಿತಿದ್ದಾಗ ರಂಗೇಗೌಡರು ಮೇಲೆದ್ದು ಬಂದು ಅವಳ ಹೆಗಲ ಮೇಲೆ ಕೈಯಿಟ್ಟರು. ಹುಡುಗಿ ಚೇಳು ಕಡಿದವಳಂತೆ ಗಾಬರಿಯಿಂದ ಮೇಲೆದ್ದಳು. ರಂಗೇಗೌಡರು ಕಾಮ ತುಂಬಿದ ಕಣ್ಣುಗಳಿಂದ ಅವಳನ್ನೇ ನೋಡುತ್ತಾ ಅವಳ ತಲೆ ಸವರುತ್ತಾ,

"ಏಳ್ಬೇಡ, ಕುಂತ್ಕೋ ನಿನ್ನೂದಲು ಎಸ್ಟು ಚೆಂದಾಗೈತೆ!" ಎಂದರು.

ನಳಿನಿ ಬೆದರಿದ ಹರಿಣಿಯಾಗಿದ್ದಳು. ಅವಳು ನಿಂತುಕೊಂಡೇ ತೊದಲುತ್ತ,

"ಹೀಗ್ಮಾಡ್ಬಾರ್ದು ಸರ್, ನಾವು ಬಡವ್ರು"ಎಂದಳು.

"ಅದ್ಕೇ ನಾನೇಳಿದ್ ಅಂಗ್ ಕೇಳು. ನಿಂಗ್ ಬ್ಯಾಕಾದ್ ಕೊಡುತ್ತೀನಿ."

"ಬೇಡ ಸರ್, ನಂಗೇನೂ ಬೇಡ. ನಾನು ನಿಮ್ಮ ಮಗಳ ಹಾಗೆ."

ಕಾವೇರಿದ್ದ ಅವರ ಮೈ ತಣ್ಣಗಾಯಿತು. ಥೂ ಇವಳವ್ವನ ಎಂದುಕೊಂಡರು. ಸಿಟ್ಟಿನಿಂದ ಹೊರಗೆ ಹೋದರು. ಪಕ್ಕದ ಕೊಠಡಿಯಲ್ಲಿದ್ದ ಗುಮಾಸ್ತರುಗಳ ಮೇಲೆ ಕೂಗಾಡಿದರು.

ನಳಿನಾ ಕುಳಿತುಕೊಂಡು ನಿಟ್ಟುಸಿರು ಬಿಟ್ಟಳು.

ಹೊರಗೆ ಕಾರು ನಿಂತ ಶಬ್ದವಾಯಿತು. ಬಾಗಿಲಿನವರೆಗೆ ಹೋಗಿ ಬಂದ ಜವಾನ ಸಂಭ್ರಮದಿಂದ ಒಳಗೆ ಓಡಿ ಬರುತ್ತಾ,

"ಮಿನಿಸ್ಟ್ರು ಯಕ್ಕಣ್ಣಪ್ಪಾವ್ರು!" ಎಂದೊರೆದ.

ರಂಗೇಗೌಡರು ನಗೆಯ ಮುಖವಾಡ ಧರಿಸಿ ನಾಲ್ಕು ಹೆಜ್ಜೆ ಮುಂದೆ ಹಾಕುವ ಹೊತ್ತಿಗೆ ಉಪಮಂತ್ರಿ ಯಕ್ಕಣ್ಣಪ್ಪ ಒಳಗೇ ಅಡಿಯಿರಿಸಿದರು.



"ಏಳ್ಬೇಡ ಕುಂತ್ಕೋ ನಿನ್ನೂದಲು ಎಸ್ಟು ಚೆಂದಾಗೈತೆ" ಎಂದರು.

"ಅಲೋ ಅಲೋ", ಎನ್ನುತ್ತ ಇಬ್ಬರೂ ಪರಸ್ಪರ ಕೈಕುಲಿಕಿದರು. ಮಂತ್ರಿಗಳನ್ನು ಕೊಠಡಿಯೊಳಕ್ಕೆ ಕರೆದೊಯ್ದು ಕೂಡಿಸಿ ರಂಗೇಗೌಡರು ನಳಿನಳನ್ನು ಬಿರುಗಣ್ಣಿಂದ ನೋಡುತ್ತ,

"ನಾವ್ ಒಸಿ ಮಾತಾಡ್ಬೇಕು. ಒರಗೆ ಕುಂತಿರಮ್ಮ", ಎಂದರು.

ಆ ಮಾತಿನ ಹಿಂದೆ ಅಡಗಿದ್ದ ಕಾಠಿಣ್ಯ ಗುರುತಿಸಿ ನಳಿನ ಬೆದರು ಬೊಂಬೆಯಂತೆ ಮೇಲೆದ್ದು ಹೊರಗೆ ಓಡಿದಳು.

ಯಕ್ಕಣ್ಣಪ್ಪ ಜೇಬಿನಿಂದ ಸಿಗರೇಟೊಂದನ್ನು ತೆಗೆದು ರಂಗೇಗೌಡರಿಗೆ ಕೊಡುತ್ತಾ, "ಇಶಾ. ಪಾರಿನ್‌ದು ಇದು. ತಕಳಿ." ಎಂದು ತಾವೂ ಒಂದನ್ನು ಬಾಯಿಗಿರಿಸಿಕೊಂಡು, ಲೈಟರಿನಿಂದ ಸಿಗರೇಟು ತುದಿಯನ್ನು ಹಚ್ಚಿಕೊಂಡರು.

"ಯಾರು? ಒಸ ಉಡುಗೀನಾ? ಮಾಲು. ಬಲು ಚೆಂದಾಗೈತೆ.

"ಊಂ. ಇನ್ನೂ ಪಳಗ್‌ಬೇಕ್ರು. ಈಗ ಮುಟ್ಟಿದ್ರೆ ಮುನಿ" ಎಂದು ರಂಗೇಗೌಡರು ಬಾಯಿಂದ ಹೊಗೆಯ ವರ್ತುಲ ನಿರ್ಮಿಸುತ್ತಾ ನುಡಿದರು.

ಮಂತ್ರಿಗಳು ನಗೆ ಸೂಸುತ್ತಾ "ನಿಮ್ಕೈಲಿ ಪಳಗ್‌ದಿರೋದು ಯಾರದಪಾ", ಎಂದು ಮರುಪ್ರಶ್ನಿಸಿದರು.

ಅನಂತರ ಅವರ ಮಾತು ರಾಜಕೀಯಕ್ಕೆ ಇಳಿಯಿತು. ಕಲ್ಯಾಣ ಕೇಂದ್ರದ ಕಟ್ಟಡದ ವಿಷಯ, ತಮ್ಮ ಪಂಗಡದ ಜನಗಳಿಗೆ ಇಂಜಿನಿಯರಿಂಗು, ಮೆಡಿಕಲ್ ಕಾಲೇಜುಗಳಲ್ಲಿ ಸೀಟುಕೊಡಿಸುವ ಜವಾಬ್ದಾರಿ, ನಿರುದ್ಯೋಗಿಗಳಿಗೆ ಕೆಲಸಕೊಡಿಸುವ ಹೊಣೆ… ಇವುಗಳಲ್ಲೆಲ್ಲಾ ತಾವು ಎಷ್ಟೆಷ್ಟು ಪರ್‌ಸೆಂಟ್ ಹಣ ಸಂಪಾದಿಸಬಹುದು ಎಂಬ ಬಗ್ಗೆ ಚರ್ಚೆ.

× × ×

ಭಾನುವಾರ ಬೆಳಗ್ಗೆ ರಂಗೇಗೌಡರ ಹೆಂಡತಿ ಲಿಂಗಮ್ಮ ಕೇಳಿದರು;

"ಇವತ್ ರಜ ಐತೆ. ನಮ್ಮೂರ್ ದೇವಸ್ತಾನಕ್ ಒಗ್ಬರಾನ ಬನ್ರಿ"

"ನಂಗೆಲ್ಲೈತೆ ಸಮ್ಯ? ಇವತ್ ವಿಜಿಟರ್ಸ್ ಬರ್ತಾವೆ. ಮದ್ಯಾನ ಮಂತ್ರಿ ಯಕ್ಕಣ್ಣಪ್ಪನೋರ್ ಮನೆಗೋಗ್ಬೇಕು. ರಾಜಕೀಯ ಜಂಬ್ರ ನಿಂಗೇನು ತಿಳೀತೈತೆ? ನೀವೇ ಓಗ್ಬನ್ನಿ. ಶೋಬಾನೂ ಕರ್ಕಂಡೋಗು"

"ನೀವ್ ಬರ್ದೆ ನಾವೇ ಓದ್ರೆ ಏನ್ ಚೆಂದಾಗಿರತೈತೆ? ಮನೆ ದೇವ್ರು. ವರ್ಸಕ್ಕೊಂದಪಾದ್ರೂ ಓಗ್ಬರದಿದ್ರೆ ಎಂಗೆ? ನಿಮ್ಗೆ ದೇವ್ರು ದಿಂಡ್ರು ಯಾನೂ ಬ್ಯಾಡವಾಗೈತೆ," ಎಂದು ಲಿಂಗಮ್ಮ ಕಣ್ಣೀರು ತಂದುಕೊಂಡಳು.

ಅಷ್ಟರಲ್ಲಿ ಅಲ್ಲಿಗೆ ಬಂದ ಶೋಭಾ "ಹೌದಪ್ಪ, ಒಂದಿವ್ಸ ನಿನ್ ಕೆಲ್ಸದಿಂದ ಆಫ್ ತಕೊಂಡ್ರೆ ಹ್ಯಾಗೆ? ಯಾವಾಗ್ಲೂ ಕೆಲ್ಸ ಕೆಲ್ಸ ಅಂತಿರತೀಯ. ಅದೆಷ್ಟು ಸುಳ್ಳೋ ಅದೆಷ್ಟು ನಿಜವೊ!" ಎಂದು ಗೌಡರ ಎದುರಿಗೇ ನಿಂತಳು.

ಅವಳನ್ನು ಕಂಡು ರಂಗೇಗೌಡರ ಎದೆಗುಂಡಿಗೆ ಬಡಿದುಕೊಂಡಿತು. ತನ್ನ ಅಂತರಂಗ ನಿಜವಾಗಲೂ ಇವಳಿಗೆ ಗೊತ್ತೆ? ಎಂಬ ಭೀತಿ ಒಂದೆಡೆಗೆ. ಇಂಥ ಹುಡುಗಿಯನ್ನ ಮನೆಯಲ್ಲಿಟ್ಟುಕೊಂಡಿರಬಾರ್ದು

ನನ್ನ ಮನಸ್ಸೇ ಎಂಗೆಂಗೋ ಆಯ್ತದೆ. ಬೇಗ ಮದ್ವೆ ಮಾಡ್ ಕಳ್ಸಿಬುಡ್ಬೇಕು.' ಎಂದುಕೊಂಡರು.

"ಕಾರನ್ನ ನೀವ್ ತಕಂಡೋಗ್ರಿ. ನಾನು ಸ್ನೇಯಿತ್ರಿಗೆ ಫೋನು ಮಾಡಿ ಯಾವ್ದನ್ನ ಕಾರು ತರಿಸ್ಕಂತೀನಿ."

"ನಿಂಗೆ ಹೆಂಡ್ತಿ ಮಗು ಯಾರೂ ಬೇಡ ಅಲ್ವ ಅಪ್ಪ? ಈ ಕೆಲ್ಸ ಅವ್ರಿಗಿಂತ ಜಾಸ್ತಿಯಾಯ್ತು ಅಲ್ವ?" ಎಂದು ಮುಖ ಊದಿಸಿಕೊಂಡು ತನ್ನ ಕೊಠಡಿಗೆ ಹೊರಟು ಹೋದಳು ಮಗಳು. ಲಿಂಗಮ್ಮ ಕಣ್ಣೀರು ಒರಸಿಕೊಳು ತ್ತಾ ಅಡುಗೆಮನೆಗೆ ನಡೆದರು.

ಈಗ ರಂಗೇಗೌಡರ ಮನಸ್ಸು ನೆಮ್ಮದಿಗೊಂಡಿತು. 'ಮಧ್ಯಾಹ್ನ ಅರಾಮವಾಗಿ ಸ್ನೇಯಿತರ ಕೂಡ ಬಾರಿಗೆ ಓಗಿ ಕೋಳಿಮಾಂಸ ತಿಂದು ಮಜಾ ಮಾಡೋದ್ ಬಿಟ್ಟು ಪುಳಿಚಾರು ದೇವ್ರನ್ನ ಯಾರು ನೋಡಾಕೆ ಓಗ್ತಾರೆ? ಎಂದು ತುಟಿಗಳಲ್ಲೇ ನಕ್ಕರು.

ಲಿಂಗಮ್ಮ ಪೂಜಾ ಸಾಮಾಗ್ರಿಗಳನ್ನು ಅಣಿ ಮಾಡಿಕೊಂಡು ಮಗಳೊಂದಿಗೆ ತಮ್ಮ ಊರಿನ ದೇವಸ್ಥಾನಕ್ಕೆ ಹೊರಟರು. ನಗರದಿಂದ ಅಲ್ಲಿಗೆ ಇಪ್ಪತ್ತೇ ಮೈಲಿ. ಹೋಗಿ ಬರುವಾಗ ಮಧ್ಯಾಹ್ನ ದಾಟಿರುತ್ತದೆ.

"ನೀವ್ ನಮಕ ಕಾಯ್ಬೇಡ್ರ. ಉಂಡ್ಬಿಡಿ. ಅಡುಗೆಯೋನು ಎಂಗೂ ಅವ್ನೆ!" ಎಂದು ಆಕೆ ಹೇಳಿದುದು ರಂಗೇಗೌಡರ ಕಿವಿಗೆ ಬಿತ್ತೋ ಇಲ್ಲವೋ.

ಅವರು ಅತ್ತ ತೆರಳಿದ ಬಳಿಕ ರಂಗೇಗೌಡರು ಗರಿಗರಿಯಾದ ಖಾದಿ ಷರಟು ಷರಾಯಿಗಳನ್ನು ಧರಿಸಿ ಹೊರಗೆ ಹೊರಡಲು ಅಣಿಯಾಗತೊಡಗಿದರು. ಕ್ರಾಪು ಬಾಚುವಾಗ ಕನ್ನಡಿಯಲ್ಲಿ ತಮ್ಮ ಮುಖ ನೋಡಿ ಅವರಿಗೆ ಹೆಮ್ಮೆಯಾಯಿತು. ಈಗ ಎಲ್ರೂ ಮೀಸೆ ಬಿಡ್ತಾ ಅವ್ರೆ, ತಾನೂ ಬಿಟ್ರೆ ಎಂಗಿರತ್ತೈತೆ? ಎನಿಸಿತು. ಆಗ ಇದ್ದಕ್ಕಿದ್ದಂತೆ ಕರೆಗಂಟೆಯ ಶಬ್ದವಾಯಿತು.

ಬಾಗಿಲಾಚೆಗೆ ತಮ್ಮೂರಿನ ಪಟೇಲರು, ಅವರ ಮಗನ ಹಾಗೆ ಕಾಣುತ್ತಿದ್ದ ಹುಡುಗ. ಚಿಗುರು ಮೀಸೆಯ ಯೌವನ. ಅವನನ್ನು ಕಂಡು ಇವರಿಗೆ ಅಸೂಯೆ.

"ಬರ್ರಿ ಬರ್ರಿ, ಇಸ್ಟೊಂದು ಅಪ್ರೂಪ!"

ಎಲ್ಲರೂ ಕುಳಿತರು. ಅಡುಗೆಯವನು ಬಂದವರಿಗೆ ಕಾಫಿ ತಿಂಡಿ ಸರಬರಾಜು ಮಾಡಿದ. ಎಲ್ಲವನ್ನೂ ಮುಗಿಸಿದ ಬಳಿಕ ಪಟೇಲರೆಂದರು.

"ನಮ್ ಮಗಾಕೆ ಮೆಡಿಕಲ್‌ನಲ್ಲಿ ಸೀಟು ಕೊಡಿಸ್ಬೇಕಲ್ಲ."

"ನನ್ನೈಲಿ ಏನಾಗತ್ತೈತೆ ಪಟೇಲ್ರೇ?"

"ಅಂಗನ್ಬ್ಯಾಡಿ. ನೀವ್ ಎಂ.ಎಲ್.ಸಿ ಅಲ್ವ? ಮಂತ್ರಿಗು ನಿಮ್ ಮಾತ್ ಕೇಳ್ತಾರೆ."

ಆ ಮಾತು ಕೇಳಿ ರಂಗೇಗೌಡರಿಗೆ ಖುಷಿಯಾಯಿತು.

"ಎಸ್ಟು ಪರ್‌ಸೆಂಟ್ ಮಾರ್ಕ್ ಬಂದ್ವೈತೆ?"

"ಐವತ್ತೊಂದು ಪರ್ಸೆಂಟ್."

"ಬಲೇ ಕಸ್ಟ ಸೋಮಿ."

"ಅಂಗನ್‌ಬ್ಯಾಡಿ. ಊರ್‌ನಾಗೆ ನಿಮ್ ಜಮೀನ್ ತಾವ ನನ್‌ದೊಂದ್ ಖುಷ್ಕಿ ಜಮೀನಿದೆ. ಅದನ್ ನಿಮಗ್ ಬರ್ಕೊಡತೀನಿ."

"ಅಯ್ಯೋ ಅದೆಲ್ಲಾ ಬ್ಯಾಡ್ರಪೋ. ನಮ್ಮೋರ್ ನೀವು. ನಿಮ್ಗ ಸಹಾಯ ಮಾಡಾದು ನನ್ ಧರ್ಮ"

"ಪ್ರೀತಿಯಿಂದ್ ಕೊಡಾದನ್ನ ಬ್ಯಾಡ್ ಅನ್ಬಾರ್ದು ಗೌಡ್ರೆ."

"ನಿಮ್ಮಿಸ್ಟ."

ಪಟೇಲರು ಮೇಲೆದ್ದರು. ರಂಗೇಗೌಡರ ಮನಸ್ಸು ಆ ಹೊಸ ಜಮೀನಿನಿಂದ ತನಗೆ ಎಷ್ಟು ಲಾಭವಾಗುತ್ತೈತೆ ಎಂದು ಲೆಕ್ಕ ಹಾಕಲಾರಂಭಿಸಿತು. ಸೀಟು ಕೊಡಿಸೋದು ಕಷ್ಟವಲ್ಲ. ಯಕ್ಕಣ್ಣಪ್ಪಂಗೆ ಏಳಿದ್ರೆ ಆಯ್ತು...

"ಬತ್ತೀವಿ. ನೀವ್ ಕುಂತ್ಕಳಿ."

ಪಟೇಲರು ಹೊರಟು ಹೋದರು. ಒಂಟಿಯಾಗಿದ್ದ ರಂಗೇಗೌಡರ ಮನಸ್ಸು ನಳಿನಾಳ ಕಡೆ ತಿರುಗಿತು.

× × ×

ಮರುದಿನ ಆಫೀಸಿನಲ್ಲಿ ರಂಗೇಗೌಡರು ನಳಿನ ಟೈಪು ಮಾಡಿದ ಹಾಳೆಗಳನ್ನು ಮೇಜಿನ ಮೇಲೆ



"ನೀಚ ಪಾಪಿ—" ಎಂದು ಕೂಗಾಡಿದಳು

ಡಲು ಬಂದಾಗ ಅವಳ ಕೈ ಹಿಡಿದುಕೊಂಡರು. ಮನೆಗೆಲಸ ಮಾಡಿ, ಟೈಪು ಕುಟ್ಟಿ ಅವಳ ಕೈ ಒರಟಾಗಿತ್ತು, ನಿಜ. ಆದರೆ ತನ್ನ ಹೆಂಡತಿಯ ಮುದಿ ಕೈಯನ್ನು ಮುಟ್ಟಿದ್ದ ಅವರಿಗೆ ಈ ಕೈ ಸ್ಪರ್ಶ ಅಪ್ಯಾಯಮಾನವಾಗಿತ್ತು. ಅವಳು ಕೈ ಕೊಸರಿಕೊಳಲು ನೋಡಿ ಆ ಬಿಗಿ ಹಿಡಿತದಿಂದ ತಪ್ಪಿಸಿಕೊಳಲಾರದೆ ಹಾಗೆಯೇ ನಿಂತಳು.

"ಅಂಗ್ಯಾಕ್ಮಾಡ್ತಾರ್ರು ನಳಿನ. ನಂಗ್ ಬ್ಯಾಸ್ರ ಆಗಾಕಿಲ್ವ? ನೀನ್ ಬ್ಯಾರೆ ನಾನ್ ಬ್ಯಾರೆಯಾ?" ಎಂದು ಒಲಿಸುವ ಧ್ವನಿಯಲ್ಲಿ ರಂಗೇಗೌಡರು ನುಡಿದಾಗ ಅವಳಿಗೆ ಅಳು ಬರುವಹಾಗಾಯಿತು. ಆ ಮುಖವನ್ನು ನೋಡಿ ಅವರು ಇದ್ದಕ್ಕಿದ್ದಂತೆ ಅವಳ ಕೈಬಿಟ್ಟುಬಿಟ್ಟರು.

ನಳಿನ ಹೊರಗೆ ಹೋಗಿ ಬಂದಳು. ಅವಳ ಕೆಂಪು ಕಣ್ಣುಗಳು ಅವಳು ಅಳುತ್ತಿರುವುದಕ್ಕೆ ಸಾಕ್ಷಿಯಾಗಿದ್ದುವು. ಬಡವರಾದ ಮಾತ್ರಕ್ಕೆ ತಮ್ಮಂಥವರಿಗೆ ಶೀಲ ಇರಬಾರದೆ? ಬದುಕೋದೇ ಮುಖ್ಯವೆ? ಎಂಬ ಪ್ರಶ್ನೆಗಳು ಅವಳನ್ನು ಕಾಡಿದುವು. ರಂಗೇಗೌಡರನ್ನ ಎದುರು ಹಾಕಿಕೊಂಡರೆ ತಾನಿನ್ನು ಹೆಚ್ಚು ದಿನ ಆ ಆಫೀಸಿನಲ್ಲಿರೋಕಾಗೋಲ್ಲ. ಈ ಕೆಲಸ ಬಿಟ್ಟರೆ ತನಗೆ ಬೇರೆ ಯಾವುದು ಸಿಕ್ಕೀತು? ಮನೆಯಲ್ಲೋ ಒಂದು ಹೊತ್ತಿಗಿದ್ದರೆ ಇನ್ನೊಂದು ಹೊತ್ತಿಗೆ ಕೂಳಿಲ್ಲದ ಪರಿಸ್ಥಿತಿ. ಹೊಟ್ಟೆಗಾಗಿ ಏನೂ ಮಾಡಬಹುದೆ? ಮನುಷ್ಯನಿಗೆ ಅದೇ ಮುಖ್ಯವೇ? ಉಳಿದೆಲ್ಲಾ ಗೌಣವೆ? ದುಡಿಯುವ ಹುಡಿಗಿಯರೆಲ್ಲಾ ಇಂಥ ಪರಿಸ್ಥಿತಿ ಎದುರಿಸಬೇಕಾದೀತೆ? ಆದರೆ ಎಲ್ಲ ಆಫೀಸರರೂ ರಂಗೇಗೌಡರಂತಿರಲಾರರು. ಮುಖ್ಯ ನನ್ನ ಅದೃಷ್ಟ ಚೆನ್ನಾಗಿಲ್ಲ. ಹ್ಯಾಗೂ ಬೇರೆ ಕೆಲ್ಸಕ್ಕೆ ಪ್ರಯತ್ನ ಪಡ್ತಿರೋದು. ಅದು ಸಿಕ್ಕೋವರೆಗೆ ಇಲ್ಲಿ ಹ್ಯಾಗಾದ್ರೂ ಕಚ್ಕೊಂಡಿರೋದು...

ಅಂದು ಸಂಜೆ ಹೊರಡುವ ಮುಂಚೆ ರಂಗೇಗೌಡರು ಹೇಳಿದರು.

"ನಾಳೆ ಮಧ್ಯಾಹ್ನ ನಾವ್ ನಂದಿಗೆ ಓಗ್ಬೇಕಾಗುತ್ತೆ. ಮನೇಲ್ ಏಳ್ ಬುಟ್ಟು ಬಾಮ್ಮ."

"ನಾನ್ಯಾಕೆ ಸಾರ್?" ಭೀತದನಿ.

"ದೆಲ್ಲಿಯಿಂದ ಸೆಂಟ್ರಲ್ ಮಿನಿಸ್ಟರು ಬರ್ತಾರೆ. ಅವರ್ ಏಳೋದನ್ನ ನೀನು ಬರಕೋಬೇಕಾಗತ್ತೆ. ನಮ್ ಗುಮಾಸ್ತರು ಯಾವಕ್ಕೂ ಪ್ರಯೋಜ್ನ ಇಲ್ಲ."

"ಸಂಜೆಗೆ ವಾಪಸು ಬಂದ್ಬಿಡತೀವಲ್ಲ?"

"ಊಂ"

ಗೆದ್ದೆ ಎಂದುಕೊಂಡಳು ನಳಿನ. ನಂದಿಯನ್ನು ಅವಳು ನೋಡಿರಲಿಲ್ಲ. ಆ ಜಾಗ ತುಂಬಾ ಚೆನ್ನಾಗಿದೆಯಂತೆ. ನೋಡಿದ ಹಾಗೂ ಆಯಿತು. ಗೌಡರ ಜೊತೆಗೆ ಹೋದ ಮೇಲೆ ರಾಜಾತಿಥ್ಯ. ಅಲ್ಲಿ ಬೇಕಾದಷ್ಟು ಜನರಿರುತ್ತಾರೆ. ಹಾಡೇ ಹಗಲಿನಲ್ಲಿ ಇವನು ತನಗೆ ಏನು ಮಾಡಬಲ್ಲ? ಎಂಬ ಮೊಂಡು ಧೈರ್ಯವೂ ಅವಳಿಗೆ ಬಂತು.

ಮಧ್ಯಾಹ್ನ ಊಟದ ಹೊತ್ತಿಗೆ ಅವರು ನಂದಿ ತಲುಪಿದರು. ದೆಹಲಿಯಿಂದ ಮಿನಿಸ್ಟರು ಬರುವುದು ತಡವಾಗುತ್ತೆ, ಊಟ ಮಾಡಿ ಬಿಡಾಣ ಎಂದರು ಗೌಡರು. ವಿಶಾಲವಾದ ಕೊಠಡಿ. ನೆಲಕ್ಕೆಲ್ಲಾ ರತ್ನಗಂಬಳಿ. ದಪ್ಪಗಿನ ಹಾಸುಗೆಗಳಿದ್ದ ಮಂಚಗಳ ಮಹಾರಾಜರ ಮನೆ ಇಂಗೇ ಇರಬಾರದೇನೋ ಎಂದು ನಳಿನ ಲೆಕ್ಕ ಹಾಕಿದಳು.

ಭಾರತೀಯರು ಬೀಗ



ಅಮೇರಿಕನರಿಗು ನಮಗು
ಇಷ್ಟೇನೆ ವ್ಯತ್ಯಾಸ
ತಮ್ಮ ಮನೆಗೆ ಬೀಗ
ಹಾಕದ್ಹೋಗುವರು
ನಾವು ಮನೆಗೆ ಬೀಗ ಹಾಕಿ
ಹೋಗಿಯು ಮತ್ತೆ
ಎಳೆದು ಕಾಂಬೆವು
ಬಿತ್ತೊ ಇಲ್ಲವೊ ಎಂದು!

– ಗುಂಡಿ, ಚಂದ್ರಶೇಖರ ಐತಾಳ

ಮೇಜಿನ ಮೇಲೆ ಎದುರು ಬದುರಾಗಿ ಕುಳಿತು ಅವರು ಗಾಜಿನ ತಟ್ಟೆಗಳಲ್ಲಿ ಊಟ ಮಾಡಿದರು. ಕೈ ತೊಳೆದರು. ಹೊಟ್ಟೆ ತುಂಬಾ ಉಂಡ ನಳಿನಿಗೆ ಸ್ವರ್ಗಕ್ಕೆ ಮೂರೇ ಗೇಣು ಅನಿಸಿತು.

ಅವಳು ಚಪ್ಪಲಿ ಮೆಟ್ಟುತ್ತಾ,

"ಸಾರ್ ನಾನು ಹೊರಗೆ ಸುತ್ತಾಡ್ತಿರ್ತೀನಿ. ಮಿನಿಸ್ಟ್ರು ಬಂದ್ರೆ ಡ್ರೈವರ್ ಕೈಲಿ ಹೇಳಿ ಕಳಿಸ್ಬಿಡಿ. ಬಂದ್ಬಿಡತೀನಿ." ಎಂದಳು.

ರಂಗೇಗೌಡರು ಚಿಗರೆಯಂತೆ ಹಾರಿ ಬಾಗಿಲಿನ ಬೋಲ್ಟು ಹಾಕಿದರು. ಚೀರಲು ತೆರೆದ ಅವಳ ಬಾಯನ್ನು ಮುಚ್ಚಿದರು. ಒದ್ದಾಡುತ್ತಿದ್ದ ಅವಳ ದೇಹವನ್ನು ಅನಾಮತು ಎತ್ತಿ ಹಾಸಿಗೆಯ ಬಳಿಗೆ ಕೊಂಡೊಯ್ದರು.

ಆ ಘಟನೆ ನಡೆದ ಬಳಿಕ ಮೂರು ದಿನ ಕಳೆದರೂ ನಳಿನಿ ಆಫೀಸಿಗೆ ಬರಲಿಲ್ಲ. ಗುಮಾಸ್ತರು ಗುಸು ಗುಸು ಮಾತಾಡಿಕೊಂಡರು. ದಿಗ್ವಿಜಯಿ ರಂಗೇಗೌಡರಿಗೆ ಅದರ ಬಗ್ಗೆ ಕಳವಳವಿಲ್ಲ. ಎಲ್ಡು ದಿವ್ಸ ಬ್ಯಾಜಾರ್ ಮಾಡ್ಕೋತಾಳೆ. ಆಮ್ಯಾಕೆ ಬಂದೇ ಬರತಾಳೆ. ಇವೆಲ್ಲಾ ಬಡ್ತಿ ಮಗಂದು ಮಾಡ್ತಾ ಮಾಡ್ತಾ ರೂಢಿಯಾಗೋಗ್ತವೆ.

ಅಂದು ಸಂಜೆ ರಂಗೇಗೌಡರು ಮನೆಗೆ ಬಂದು ಕೋಟು ಬಿಚ್ಚುತ್ತಿರುವಾಗ ಶೋಭಾ ಬಿರುಗಾಳಿಯಂತೆ ಅವರ ಕೊಠಡಿಗೆ ನುಗ್ಗಿದಳು.

"ಅಪ್ಪ ಇದನ್ನೋದು!" ಎಂದು ಒಂದು ಕಾಗದವನ್ನು ಮೇಜಿನ ಮೇಲೆ ಹಾಕಿದಳು.

ಅಪರಿಚಿತ ಎನ್ನಿಸುವ ಪರಿಚಿತ ಅಕ್ಷರ.

ಸೋದರಿ ಶೋಭಾಗೆ,

ನಾನು ಹೈಸ್ಕೂಲಿನಲ್ಲಿ ನಿನ್ನ ಸಹಪಾಠಿಯಾಗಿದ್ದೆ. ನಿನಗೆ ನೆನಪಿದೆಯೋ ಇಲ್ಲವೋ. ಸದ್ಯಕ್ಕೆ ನಾನು ನಿಮ್ಮ ತಂದೆಯ ಆಫೀಸಿನಲ್ಲಿ ಸ್ಟೆನೋ ಆಗಿದ್ದೆ. ಈ ಕಾಗದ ಬರೆಯಲು ಒಂದೇ ಕಾರಣವಿದೆ. ನಿನ್ನೆ ನಂದಿಯಲ್ಲಿ ನಿಮ್ಮ ತಂದೆಯಿಂದ ನನ್ನ ಶೀಲಾಪಹರಣ ಆಯಿತು. ಇನ್ನು ಬದುಕಿರೋದರಲ್ಲಿ ಅರ್ಥವಿಲ್ಲ. ಅಂತ ಫಾಲಿಡಾಲ್ ಕುಡಿದು ಪ್ರಾಣ ಕಳ್ಕೊತಿದೀನಿ. ನಿನಗೆ ನನ್ನ ಸಂಕಟ ಅರ್ಥವಾಗುತ್ತೆ ಅಂತ ಈ ಕಾಗ್ದ ಬರೀತಿದೀನಿ. ಈ ವಿಷ್ಯ ನನ್ನಾಣೆ ಯಾರಿಗೂ ಹೇಳಬೇಡ...

ರಂಗೇಗೌಡರು ಸಿಟ್ಟಿನಿಂದ "ಉಚ್ಮುಂಡೆ" ಎಂದು ಅಬ್ಬರಿಸಿದರು.

ಶೋಭಾ ಸರಕ್ಕನೆ ಅವರ ಕೈನಿಂದ ಪತ್ರವನ್ನು ಕಸಿದುಕೊಂಡು

"ನೀನು ಇಂಥಾ ಕೆಲ್ಸ ಮಾಡ್ತೀಯಾ ಅಪ್ಪ? ಈ ಕಾಗ್ದಾ ಪೋಲೀಸಿನೋರಿಗೆ ಕೊಡ್ತೀನಿ. ಜೇರೆಯವರ್ಗೆ ಆದ್ಹಾಗೆ ನಿನ್ನ ವಿಚಾರಣೇನೂ ಆಗ್ಲಿ!" ಎಂದು ಕೂಗಿಕೊಂಡಳು.

ಗಲಾಟೆ ಕೇಳಿ ಲಿಂಗಮ್ಮ ಬಾಗಿಲಿಗೆ ಬಂದು ನಿಂತು ಗಾಬರಿಯಿಂದ ತಂದೆ ಮಗಳ ಸಂವಾದ ಕೇಳತೊಡಗಿದಳು.

"ನನ್ ಮಗಾಗಿದ್ಕೊಂಡು ನನ್ಮೇಲೇ ಕತೆ ಕಟ್ತೀಯಾ ಲೌಡಿ. ಕೊಡು. ಪೋಲೀಸ್‌ನೋರ್ಗಲ್ಲವಿದ್ರೆ ಛೀಪ್ ಮಿನಿಸ್ಟರಿಗೇ ಕೊಡು. ನಿಂಗೆ ಉಚ್ಚು ಇಡಿದೈತೆ ಅಂತೀನಿ. ನಿನ್ ಮಾತ್ ಯಾರ್ ಕೇಳ್ತಾರೆ ನೋಡಾನ?"

ಶೋಭಾ ಸಿಟ್ಟಿನಿಂದ ನಡುಗುತ್ತಾ,

"ನೀಚ! ಪಾಪಿ! ನಿನ್ನಂಥೋರು ಬದುಕಿರ್ಬಾರ್ದು!" ಎಂದು ಕೂಗಾಡಿದಳು.

"ಯವ್ವ ಇದೆಂಥ ಮಾತಂತೀಯೇ ನನ್ನವ್ವ ಬುಡ್ತು ಅನ್ನು." ಎಂದು ಏನೂ ತಿಳಿಯದ ಲಿಂಗಮ್ಮ ಕಣ್ಣೀರು ಹಾಕತೊಡಗಿದಳು.

ರಂಗೇಗೌಡರ ಲಾಯರ್ ಬುದ್ಧಿ ಕ್ಷಣಾರ್ಧದಲ್ಲಿ ಕೆಲಸ ಮಾಡಿತು. ಅವರು ಸರಕ್ಕನೆ ಮಗಳ ಕೈಹಿಡಿದು ಆ ಕಾಗದವನ್ನು ಕಿತ್ತುಕೊಂಡು ಚೂರು ಚೂರು ಮಾಡಿ ಆಷ್‌ಟ್ರೇಯಲ್ಲಿಟ್ಟು ಕಡ್ಡಿ ಹಚ್ಚಿದರು.

"ಓಗು ಕತ್ತೇ ಲೌಡಿ. ಊರ್ಗೆಲ್ಲಾ ಡಂಗುರ ಆಕ್ಕೊಂಡು ಬಾ ಓಗು!" ಎಂದು ಗಹಗಹಿಸಿ ನಕ್ಕರು.

ಬೆಳಗ್ಗೆ ಆಫೀಸಿನಲ್ಲಿ ರಂಗೇಗೌಡರು ಗುಮಾಸ್ತೆಗೆ ನುಡಿದರು.

"ಇನ್ನೊಂದು ಉಡ್ಗಿ ಸ್ಟೆನೋ ಅಡ್ವಟೈಸ್‌ಮೆಂಟ್ಕೊ–ಕೊಟ್ಬಿಡಿ."

ನಡೆದುದೆಲ್ಲಾ ಗೊತ್ತಿದ್ದರೂ ಅದಕ್ಕೆ ಪ್ರತಿ ಹೇಳಲಾರದ ಗುಮಾಸ್ತ ತಲೆಯಾಡಿಸುತ್ತ ಹೊರಗೆ ಹೋದ.

ಹಸಿರು ಶಾಲಿನ ಮೇಲಿದ್ದ ಗಾಜಿನಲ್ಲಿ ರಂಗೇಗೌಡರ ಮುಖವಾಡ ನಕ್ಕಿತು.

★ ● ●

ನೀಲಾಂಜನೆ,

ನೃತ್ಯ ಮತ್ತು

ಪುರುದೇವ

ರಂಗಭೂಮಿಯ ಮೇಲೆ—
ನೀಲಾಂಜನೆಯ ಭರ್ಜರಿ ನೃತ್ಯ ನಡೆದ ಸಂದರ್ಭ:
ನೀಲಾಂಜನೆಯ
ಅಡಿಗೆಜ್ಜೆಯುಲಿಗೆ, ಹೊಸ ಶೈಲಿ ಹೊಸ ಭಾವ–ಭಂಗಿಗೆ
ಅಲ್ಲಾಡುತ್ತಿತ್ತು ನೆಲ–ಮುಗಿಲು.
ನೃತ್ಯವಿಲಾಸದ ಮಿಂಚಿನ ಲಯ ಶಿಖರ ಮುಟ್ಟಿದ ಹೊತ್ತು
ಕಳಚಿದವು ಐಹಿಕದ ಚಿಂತೆಯ ಕೊಂಡಿ
ಶಿಬಿರ ಕಿತ್ತೋಡಿದವು
ಮುಪ್ಪು, ವ್ಯಥೆ, ಮರಣ ಇತ್ಯಾದಿ;
ಚಿತ್ರಗುಪ್ತನ
ಗ್ರಾಫ್ ಪುಸ್ತಕದ ಪುಟದಲ್ಲಿ
ಜರಾ–ಮರಣ ಸಂಕೇತಿಸುವ ದರ
ಇಳಿ ಇಳಿದಿತ್ತು
ಕೆಳಕೆಳಗೆ.
ಇನ್ನೊಂದೆಡೆಗೆ ನೀಲಿ ರೇಖೆ
ಏರೇರುತ್ತ ಹೋಗುತ್ತ ಸುಖದ ಪರಮಾವಧಿಯ
ಮುಟ್ಟುತ್ತಿತ್ತು!
ಇಂಥ ಸಂದರ್ಭದಲ್ಲಿ
ನೀಲಾಂಜನೆಯ ಆಯುಷ್ಯ ತೀರಿ
ಟಣ ಟಣ ಮೃತ್ಯುಗಂಟೆ ಬಾರಿಸಿದ್ದು!
ಅಚಾನಕವೆ ದೇಹದ ಶಕ್ತಿ ಕ್ಷೀಣಿಸಿದಾಕೆ
ಒಯ್ಯನೊಯ್ಯನೆ ಕುಸಿದದ್ದು; ಅಂಗಾಂಗದಲ್ಲಿ
ಹೊತ್ತಿ ಉರಿಯುತ್ತಿದ್ದ ದೀಪ ಆರಿ
ಕಗ್ಗತ್ತಲು ಕವಿದದ್ದು.

ಆಗ ಮುಂದೆ ನಡೆದದ್ದಿಷ್ಟು!
ವಜ್ರಾಯುಧನ ಶಕ್ತಿಸಂಚಲನದಿಂದ
ಕುಸಿದ ನೀಲಾಂಜನೆಯಲ್ಲಿ ಇನ್ನೊಂದೋ
ಜೀವವಿಳಿದದ್ದು!
ಮತ್ತೆ ನೃತ್ಯ: ಮತ್ತೆ ಸಂಗೀತ.
ಅವೇ ಪಾದ; ಅವೇ ಕೈ, ಅದೇ ಮುಖ!
ಆದರೆ, ನೀಲಾಂಜನೆಯಿಂದ ಭಿನ್ನವೆನಿಸುವ ರೂಪ
ಭಿನ್ನ ಭಿನ್ನ ಭಾವಾಭಿನಯ.
ನೀಲಾಂಜನೆಯ ಬೆಡಗು-ಬಿನ್ನಾಣ ನೃತ್ಯವೈಖರಿಗೆ
ಬೆಚ್ಚಿದ್ದ ಮೆಚ್ಚಿದ್ದ ಪುರುದೇವನಿಗೆ
ವಜ್ರಾಘಾತದನುಭವ.
ಒಂದೇ ಒಂದು ಕ್ಷಣದಲ್ಲಿ
ವೈಭವ–ವಿಲಾಸ–ರಾಜಗೋಪುರವುರುಳಿದ
ಸದ್ದು; ಕೇಳಿಸಿದ್ದು.
ನೃತ್ಯ-ಸಂಗೀತದಾವರಣದಲ್ಲಿ
ರಂಗಸಜ್ಜಿಕೆಯ ಮೇಲೆ ತೂಗಾಡುತ್ತಿತ್ತು
ಮೃತ್ಯು ಬೀಸಿದ ಕರಾಳ ಪಾಶ.
ಭೋಗ ಸಾಮ್ರಾಜ್ಯದ ಬಾಗಿಲು ಮುಚ್ಚಿ
ಹಾವು ಕಡಿದವನಂತೆ
ಎದ್ದು ನಿಂತ ಪುರುದೇವ.
“ಬಾ ಪುರೂ...ರವ ಬಾರಯ್ಯ ಬಾ ಬಾ”
ಎಂದು ಕೂಗಿ ಕರೆಯುತ್ತಿತ್ತು
ಹಳದಿ ಪೀತಾಂಬರವುಟ್ಟು ದಟ್ಟ
ಕಾಡು.

— ಬುದ್ದಣ್ಣ ಹಿಂಗಮಿರೆ


ನಾಡಿನ ಪ್ರತಿಯೊಬ್ಬರಿಗೂ
"ದೀಪಾವಳಿಯ
ಶುಭಸಂದೇಶಗಳು"
30 REGD.
ನಂಬರ್
ಮೂವತ್ತರ ಬೀಡಿಗಳು
ತಯಾರಕರು ದಿ ಭಾರತ್ ಬೀಡಿ ವರ್ಕ್ಸ್ (ರಿಜಿಸ್ಟರ್ಡ್) ಕಾರ್ಕಳ, ದ.ಕ
ತಯಾರಕರು:— ಭಾರತ ಬೀಡಿ ವರ್ಕ್ಸ್ ಪ್ರೈವೇಟ್ ಲಿಮಿಟೆಡ್
ರಿಜಿಸ್ಟರ್ಡ ಆಫೀಸು: "ಭಾರತ ಭಾಗ್, ಪೋಸ್ಟ್ ಬಾಕ್ಸ ನಂಬರ ೭೩೦.
ಕದ್ರಿ ರಸ್ತೆ. ಮಂಗಳೂರ—೫೭೫೦೦೩. (ದ. ಕ.)
ತಂತಿ: THIRTY BIDI
ದೂರವಾಣಿ: 3930 3330

ಆಸ್ಪತ್ರೆ

- ಎನ್. ಪ್ರಹ್ಲಾದರಾವ್

ಜೀವನವಿಡೀ ರೋಗಿಗಳ ಪರೀಕ್ಷೆ ಮಾಡುತ್ತಲಿರುವ ವೈದ್ಯನಿಗಿಂತ, ರೋಗಿಗಳ ಶುಶ್ರೂಷೆಯಲ್ಲಿ ತಮ್ಮ ಲಾವಣ್ಯಶ್ರೀಯನ್ನು ವ್ಯರ್ಥ ವ್ಯಯಿಸುವ ದಾದಿಯರು ಹೆಚ್ಚು ನತದೃಷ್ಟರು.

ಇತ್ತೀಚೆಗೆ ಬಹುಜನ ಹುಟ್ಟುವುದು ಆಸ್ಪತ್ರೆಯಲ್ಲಿಯೆ. ಹುಟ್ಟಿನಿಂದಲೇ ಅವರಿಗೂ ಆಸ್ಪತ್ರೆಗೂ ನಂಟು ಉಂಟಾಗಿರುತ್ತದಾಗಿ ಅವರಲ್ಲಿ ಅನೇಕರು ಬೆಳೆಯುವುದು ಆಸ್ಪತ್ರೆಯಲ್ಲಿಯೇ. ಆದರೆ ಯಾರೂ ತಮ್ಮ ತಮ್ಮ ಮನೆಗಳಲ್ಲಿ ಸಾಯುವುದಿಲ್ಲ. ಅದಕ್ಕಾಗಿ ಎಲ್ಲರೂ ಆಸ್ಪತ್ರೆಗಳಿಗೇ ಹೋಗಿ ಬಿಡುತ್ತಾರೆ. ಇಂಥವರಿಂದಾಗಿ ಆಸ್ಪತ್ರೆ ಬದುಕುವ ಜಾಗವಾಗದೆ ಸಾಯುವ ಜಾಗವಾಗಿ ಬಿಟ್ಟಿದೆ. ಇಂದಿನವರ ದುಡಿಮೆಯಲ್ಲಿ ಅರ್ಧ ಪಾಲು ಹೋಟೆಲುಗಳಿಗೆ ಹೋಗುತ್ತದೆ. ಅದೇ ಕಾರಣದಿಂದಾಗಿ ಉಳಿದರ್ಧ ಪಾಲು ಆಸ್ಪತ್ರೆಗೆ ಹೋಗುತ್ತದೆ. ಇನ್ನು ಉಳಿದದ್ದ (?) ಸಿನಿಮಕ್ಕೆ. ಏನಾದರೂ ಮಿಕ್ಕರೆ ಸಂಸಾರಕ್ಕೆ. ಎಷ್ಟೋ ಜನ ಹತ್ತಿರದ ಖಾಸಗಿ ಆಸ್ಪತ್ರೆಗೆ ಹೋದರೆ ಮೂರು ರೂಪಾಯಿ ಖರ್ಚಾಗುತ್ತದಲ್ಲ ಎಂದು ದೂರದ ಸರ್ಕಾರಿ ಆಸ್ಪತ್ರೆಯಿಂದ ಬಿಟ್ಟಿ ಔಷಧ ತರಲು ಹೋಗಿ ರಿಕ್ಷದವನಿಗೆ ಅದೇ ಮೂರು ರೂಪಾಯಿ ಕೊಡುತ್ತಾರೆ. ಅತಿಯಾದ ಮಿತವ್ಯಯ ಬುದ್ಧಿಯವರು ಕಾಯಿಲೆ ಬಂದೊಡನೆಯೆ ನಾಟಿ ವೈದ್ಯವನ್ನು ಪ್ರಾರಂಭಿಸಿ ಗುಣ ಕಾಣದೆ ದೊಡ್ಡಾಸ್ಪತ್ರೆಗೆ ಓಡಾಡಿ ಬಿಗಡಾಯಿಸಿದಾಗ ಖಾಸಗಿ ವೈದ್ಯರನ್ನು ಕಂಡು ಒಂದಕ್ಕೆ ಮೂರು ತೆರುತ್ತಾರೆ. ಬದುಕಿದಾಗ ಸುಖ ಸಂತೋಷಗಳಿಗೆ ಎಷ್ಟು ಖರ್ಚು ಮಾಡಬಹುದಾಗಿತ್ತೋ ಅದರ ನಾಲ್ಕರಷ್ಟನ್ನು ಸತ್ತ ಮೇಲಿನ ಶ್ರಾದ್ಧ ಕರ್ಮಗಳಿಗೆ ವ್ಯಯ ಮಾಡುವಂತೆ ಅನೇಕರು ಆರೋಗ್ಯ ಪಾಲನೆಗೆ ಖರ್ಚುಮಾಡಬೇಕಾದ್ದರ ಮೂರರಷ್ಟನ್ನು ಔಷಧಿಗೆ, ಶುಶ್ರೂಷೆಗೆ ವ್ಯಯಮಾಡುತ್ತಾರೆ. ಮನೆ ವೈದ್ಯರೊಬ್ಬರನ್ನು ನೇಮಿಸಿಕೊಳ್ಳುವುದು ಇಂದಿನ ಫ್ಯಾಷನ್ ಆಗಿ ಬಿಟ್ಟಿದೆ. ತಿಂಗಳಿಗೆ ಇಂತಿಷ್ಟು ಎಂದು ಕೊಟ್ಟರಾಯಿತು. ವೈದ್ಯರು ತಪ್ಪದೆ ವಾರಕ್ಕೊಮ್ಮೆ ಮನೆಗೆ ಬಂದು ಹೋಗುತ್ತಾರೆ. ಇದು ಜೀವ ವಿಮೆ ಕಂತು ಕಟ್ಟಿದ ಹಾಗೆ. ಸತ್ತರೆ ಮಾತ್ರ ವಿಮೆ ಮಾಡಿದವನಿಗೆ ಲಾಭ; ಬದುಕಿದ್ದರೆ ಕಂಪನಿಗೆ! ದೇಹ ವಿಜ್ಞಾನ ಬೆಳೆದಂತೆಲ್ಲ ವೈದ್ಯವೃತ್ತಿಗೆ ಹೆಚ್ಚಿನ ಗೌರವ. ಲಾಭ ಒದಗುತ್ತಿದೆಯಾಗಿ ವಿದ್ಯಾರ್ಥಿಗಳೆಲ್ಲ ವೈದ್ಯರಾಗಲು ಪ್ರಯತ್ನಿಸುತ್ತಿದ್ದಾರೆ, ಇನ್ನು ಇಪ್ಪತ್ತೈದು ವರ್ಷಗಳಲ್ಲಿ ಎಲ್ಲರೂ ವೈದ್ಯರಾಗಿ ಬಿಡುತ್ತಾರಾಗಿ ಅಲ್ಲಿಂದಾಚೆಗೆ ವ್ಯಕ್ತಿ ತನ್ನ ಕಾಯಿಲೆಗೆ ತಾನೇ ಔಷಧಿ ಕೊಟ್ಟುಕೊಳ ಬಹುದು. ಇಲ್ಲವೆ ವೈದ್ಯ ಮತ್ತೊಬ್ಬ ವೈದ್ಯನಿಗೆ ಔಷಧಿ ಕೊಡಬೇಕಾದ ಕಾಲ ಬರಬಹುದು.



× × ×

ಈಗ್ಗೆ 54 ವರ್ಷಗಳ ಹಿಂದಿನ ಮಾತು. ಜೂನ್ 10ನೆಯ ತಾರೀಖು. ಅಂದಿನ ಶುಭ ಲಗ್ನದಲ್ಲಿ ನನ್ನ ಅವತಾರವಾಯಿತು. ಯಾರು ಮುಂದೆ ತನ್ನ ಲಲಿತ ಪ್ರಬಂಧಗಳಿಂದಲೇ ಕನ್ನಡ ಸಾಹಿತ್ಯ ರಂಗದಲ್ಲಿ ಶಾಶ್ವತವಾದ ಹೆಸರು ಗಳಿಸಿದನೋ, ಯಾರು ಕನ್ನಡ ವಿಶ್ವಕೋಶದ ಸಂಪಾದಕರುಗಳಲ್ಲೊಬ್ಬನಾಗಿ ಅದರ ಆರು ಸಂಪುಟಗಳ ರಚನೆಗೆ ಕಾರಣನಾದನೋ (ಏಳನೆಯ ಸಂಪುಟ ಇದೀಗ ಬಿಡುಗಡೆಗೆ ಸಿದ್ಧವಾಗಿದೆ) ಯಾರು ತನ್ನ ಪಿನೋಕಿಯೊ, ವೀಂಚುಳಿ, ಕ್ರಿಸ್ಟೋಫರ್ ಕೊಲಂಬಸ್ ಮುಂತಾದ ಕೃತಿಗಳಿಂದ ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದನೋ ಯಾರು ಜೀವನವಿಡೀ ತಾನೂ ನಕ್ಕು, ಇತರರನ್ನೂ ನಗಿಸಿದನೋ ಅಂಥವನು ಅಂದು ಹುಟ್ಟಿದ. ಆತ ಹುಟ್ಟಿದ್ದು ಎಲ್ಲಿ? ಯಾವ ಆಸ್ಪತ್ರೆಯಲ್ಲಿ? ಹೀಗೆಂದು ನೀವು ಕೇಳಬಹುದು. ಅಂದು ಹೋಟಲಿಗೂ ಆಸ್ಪತ್ರೆಗೂ ನಮ್ಮವರಾರೂ ಹೋಗುತ್ತಿರಲಿಲ್ಲವಾಗಿ ನಾನು ನಮ್ಮ ಅಜ್ಜನ ಹಳಿಯಾದ ಮಂಡಗದ್ದೆಯಲ್ಲಿ ಅಜ್ಜನ ಹಳೆಯ ಮನೆಯ ಕತ್ತಲ ಕಿರುಕೋಣೆಯಲ್ಲಿ ಹುಟ್ಟಿದೆ. ನನ್ನ ಸಂಗಡ ಹುಟ್ಟಿದ ಅಂದಿನ ಮಹಾನುಭಾವರಾರೂ ಬಹುಶಃ ಆಸ್ಪತ್ರೆಯಲ್ಲಿ ಹುಟ್ಟಿರಲಾರರು, ಅವರೆಲ್ಲ ಅವತರಿಸಿದ್ದು ನನ್ನ ಹಾಗೆ ಅವರವರ ಅಜ್ಜಿ ಮನೆಯ ಕತ್ತಲ ಕೋಣೆಗಳಲ್ಲೆ. ಸಾಮಾನ್ಯವಾಗಿ ಕತ್ತಲ ನಡುವೆ ಹುಟ್ಟಿದ್ದರಿಂದಲೋ ಏನೋ ಬಹು ಬೇಗ ಬೆಳಕಿನತ್ತ ಸಾಗುವ ಹಂಬಲ ನನ್ನಲ್ಲುಂಟಾಯಿತು. ಅದು ಬೇರೆ ಮಾತು. ಕಣ್ಣು ಬಿಡುವುದಕ್ಕೇ ನನಗೆ 25–26 ವರ್ಷ ಹಿಡಿಯಿತಲ್ಲ! ಅಷ್ಟರಲ್ಲಿ ನನ್ನ ಮೊದಲ ಮಗ ಅವತರಿಸಿ ಆಗಿತ್ತು!

ಕತ್ತಲಕೋಣೆ ಎಂದರೆ ಹೇಗಿರುತ್ತದೆ ಎಂಬ ಕಲ್ಪನೆ ಈಗಿನವರಿಗೆ ಉಂಟಾಗುವುದು ಕಷ್ಟ. ನಮ್ಮ ಅಜ್ಜನ ಮನೆ ಇದ್ದದ್ದು ಶಿವಮೊಗ್ಗ ತೀರ್ಥಹಳ್ಳಿ ನಡುವಿನ ಮುಖ್ಯ ಬಸ್ಸು ರಸ್ತೆಯಲ್ಲಿ. ತುಂಗಾ ನದಿಯ ದಂಡೆಯಲ್ಲಿ. ನಾಲ್ಕು ಹೆಜ್ಜೆ ಹಾಕಿದರೆ ನದಿ ಸಿಗುವಂತಿತ್ತು. ಎದುರಿಗೇ ಒಂದು ಸಣ್ಣ ದೇವಸ್ಥಾನ. ಮನೆ ಹಳೆಯ ಕಾಲದ್ದು. ಊರ ಹೆಂಚಿನದು. ಮುಂದೆ ಒಂದು ಕಟ್ಟೆ. ಅದರ ಒಂದು ಭಾಗವಾಗಿ ಹೊರ

ಗಾಗುವವರ ಕೋಣೆ. ಹುಟ್ಟಿನ ಕೋಣೆಗಿಂತ ಮುಟ್ಟಿನ ಕೋಣೆ ಅದೆಷ್ಟೋ ಬೆಳಬೆಳಕಾಗಿತ್ತು. ಒಳಗೆ ಕಾಲಿಟ್ಟರೆ ಪಡಸಾಲೆ. ಅಲ್ಲಿಂದ ಅಡಿಗೆ ಮನೆಗೆ ಒಂದು ಓಣಿ. ಓಣಿಗೆ ಹೊಂದಿದಂತೆ ಸಣ್ಣ ಕತ್ತಲ ಕೋಣೆ. ಮೇಲೆ ಮುಚ್ಚಿಗೆ. ಕಿಟಕಿ ಇಲ್ಲ. ಒಳಗೆ ಹೋಗಲು ಬಾಗಿಲ ಚೌಕಟ್ಟು ಮಾತ್ರ. ಅದಕ್ಕೆ ಬಾಗಿಲಿಲ್ಲ. ಹಗಲಿನಲ್ಲೇ ದೀಪವಿಲ್ಲದೆ ಆ ಕೋಣೆಗೆ ಹೋಗಲು ಆಗುತ್ತಿರಲಿಲ್ಲ. ತೆನ್ನಾಲಿ ರಾಮಕೃಷ್ಣ ಕುದುರೆ ಸಾಕಿದ ಕೋಣೆ ಇದಕ್ಕಿಂತ ಎಷ್ಟೋ ಪಾಲು ಚೆನ್ನಾಗಿತ್ತೆಂದು ತೋರುತ್ತದೆ. ಹುಟ್ಟಿ ಮೂರು ತಿಂಗಳಾದ ಮೇಲೆಯೇ ನಾನು ಸೂರ್ಯನ ಬೆಳಕು ಕಂಡಿದ್ದು. ಅಲ್ಲಿಯವರೆಗೂ ಹರಳೆಣ್ಣೆಯ ಮಿಣ ಮಿಣ ದೀಪದಲ್ಲಿ ಪಿಳ ಪಿಳ ಕಣ್ಣು ಬಿಟ್ಟುಕೊಂಡು ಬೆಳೆದೆ. ನನ್ನ ಅಜ್ಜ ಅಜ್ಜಿ ಆಸ್ಪತ್ರೆಯ ಮೈಲಿಗೆ ನೀರನ್ನು ಒಮ್ಮೆಯೂ ಮುಟ್ಟಿದವರಲ್ಲ. ಅಂದ ಮೇಲೆ ನನಗಾಗಲಿ ನಮ್ಮ ತಾಯಿಗಾಗಲಿ ಅದು ಹೇಗೆ ಸಿಗಬೇಕು? ಹೆರಿಗೆಯಿಂದ ಹಿಡಿದು ಬಾಣಂತಿತನ ಪೂರ್ತಿ ಎಲ್ಲ ನಿರ್ವಹಿಸಿದವರು ನಮ್ಮ ಅಜ್ಜಿಯೇ. ಗುಡ್‌ಅರ್ಥ್ ಕಾದಂಬರಿಯಲ್ಲಿ ಆಕೆ ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳುತ್ತಾಳೆ. ಗುಡಿಸಲ ಹೊರಗೆ ನಿಂತ ಗಂಡ ಚಾಚಿದ ಹೆಂಡತಿಯ ಕೈಗೆ ಚೂಪಾದ ಬಿದಿರ ದಬ್ಬೆಯೊಂದನ್ನು ಕೊಡುತ್ತಾನೆ. ಹೊಕ್ಕಳ ಹುರಿ, ಕತ್ತರಿಸುವುದಕ್ಕೆ. ಅದರ ನೆನಪಾಗುತ್ತದೆ.

ತೀರ ಕತ್ತಲಿನ ವಾತಾರಣ, ಸಾಮ್ರಾಣಿ, ಬೆಳ್ಳುಳ್ಳಿಗಳ ಕಟುವಾದ ವಾಸನೆ, ಬಾಣಂತಿ ಕಾರದ ನಾತ, ಉಸಿರಾಡಲು ಆಗದಷ್ಟು ದಪ್ಪನಾದ ಹೊದಿಕೆ, ಕಿವಿ ಮುಚ್ಚುವ ಕುಲಾಯಿ ಇವುಗಳ ನಡುವೆ ನಾನು ಮೊಳೆತು ಬೆಳೆದೆ.

ಮೊನ್ನೆ ತಾನೆ, ಈಗ್ಗೆ ಆರು ತಿಂಗಳ ಹಿಂದೆ, ಕಾಮಾಕ್ಷಿ ಆಸ್ಪತ್ರೆಯ ಗಾಳಿ ಬೆಳಕುಗಳ ನಡುವೆ ಹುಟ್ಟಿ ನನ್ನ ಮನೆಯ ಹೊರ ಅಂಗಳದ ಹೂ ಗಿಡಗಳ ನಡುವೆ ಬೆಳೆದ ನನ್ನ ಮೊಮ್ಮಗ ಅಜ್ಜನ ಅವತರಣ ವೈಖರಿಯನ್ನು ಕೇಳಿದರೆ ಅದೆಷ್ಟು ನಗುತ್ತಾನೊ!

ಅಜ್ಜಿ ಅಜ್ಜ ಆಸ್ಪತ್ರೆಯ ದಿಕ್ಕಿಗೆ ತಲೆ ಹಾಕಿ ಮಲಗಿದವರಲ್ಲ. ಹಾಗೆಂದ ಮಾತ್ರಕ್ಕೆ ಮಂಡಗದ್ದೆಯಲ್ಲಿ ಆಸ್ಪತ್ರೆಯೇ ಇರಲಿಲ್ಲವೆಂದಲ್ಲ. ಬಸ್ಸು ರಸ್ತೆಯಲ್ಲಿ ತೀರ್ಥಹಳ್ಳಿಯ ಕಡೆಗೆ ಒಂದು ಫರ್ಲಾಂಗು ಹೋದರೆ ಬಲದ ಗುಡ್ಡದ ಮೇಲೆ ಒಂದು ಆಸ್ಪತ್ರೆ ಕಾಣುತ್ತದೆ. ಕ್ರೈಸ್ತ ಪಾದ್ರಿಗಳು ಕಟ್ಟಿದ್ದು. ನಾನು ಐದು ವರ್ಷದವನಾಗಿದ್ದಾಗ ಒಮ್ಮೆ ಆ ಮಾರ್ಗವಾಗಿ ಬಂದ ಗಾಂಧೀಜಿ ಆ ಆಸ್ಪತ್ರೆಯಲ್ಲಿ ಸ್ವಲ್ಪ ಕಾಲ ಇದ್ದು ಆಡಿನ ಹಾಲು ಕುಡಿದು ಮುಂದಕ್ಕೆ ಪ್ರಯಾಣ ಬೆಳೆಸಿದರು. ಆಗಲೇ ನಾನು ಅವರನ್ನು ಮೊದಲ ಬಾರಿ–ಅದು ಕೊನೆಯ ಬಾರಿಯೂ ಆಯಿತು–ಕಂಡದ್ದು. ಗಾಂಧೀಜಿ ಹೇಗೊ ನಮ್ಮ ಅಜ್ಜನೂ ಹಾಗೆಯೆ. ಹಿಂದಿನವರೆಲ್ಲ ಹಾಗೆಯೆ. ಆಸ್ಪತ್ರೆಯಲ್ಲಿ ಅವರಿಗೆ ನಂಬಿಕೆ ಸಾಲದು. ಕೊನೆಯವರೆಗೂ ಅವರು ಗಟ್ಟಿಮುಟ್ಟಾಗಿದ್ದರು. ಅವರಿಗೆ ಅವರೇ ವೈದ್ಯರು. ನಿತ್ಯದ ಅನ್ನ ಪಾನೀಯಗಳೇ ಅವರಿಗೆ ಔಷಧಿ, ಪಥ್ಯ. ಹಿತ್ತಲ ಗಿಡವೇ ಮದ್ದು. ನಾರಾಯಣನೇ ಜೀವದಾತ. ಕಾಫಿ, ಟೀ ಇತ್ಯಾದಿಗಳನ್ನು ಅವರು ಕುಡಿದವರಲ್ಲ. ಮಕ್ಕಳಿಗೆ ಬೆಳಗ್ಗೆ ಗಂಜಿ ಊಟ. ಅವರಿಗೋ ಮಧ್ಯಾಹ್ನ ಹನ್ನೊಂದಕ್ಕೆ ನದೀ ಸ್ನಾನ. ಅನಂತರ ದೇವರ ಪೂಜೆ, ಮಂಗಳಾರತಿ, ನೈವೇದ್ಯ. ಒಂದು ಗಂಟೆಗೆ ಒಂದು ಊಟ, ಎಷ್ಟೇ ಬಡತನ ಇರಲಿ, ಒಂದು ದಿನಕ್ಕೂ ಎಲೆಯ ಮುಂದೆ ತುಪ್ಪ ಇಲ್ಲದೆ ಇರುತ್ತಿರಲಿಲ್ಲ. ಅವರು ಮಾಡುತ್ತಿದ್ದುದು ಒಂದೇ ಊಟ. ಸಂಜೆ ಮಂಗಳಾರತಿ. ಒಂದಿಷ್ಟು ಬಿಸಿ ಪಾನಕ. ಅಂದರೆ ಬಿಸಿ ನೀರು. ಇಷ್ಟು ಬೆಲ್ಲ. ಮಾವಿನ ಹಣ್ಣಿನ ಕಾಲ ಬಂತೆಂದರೆ ಹಿತ್ತಲಲ್ಲಿ ಬೆಳೆದ ಐವತ್ತೋ ನೂರೋ ಹಣ್ಣುಗಳನ್ನು ಹಸಿಬೆ ಚೀಲಕ್ಕೆ ಹಾಕಿಕೊಂಡು ಚೀಲವನ್ನು ಹೆಗಲಿಗೇರಿಸಿ ಹದಿನಾರು ಮೈಲಿ ನಡೆದು ಶಿವಮೊಗ್ಗೆಯ ನಮ್ಮ ಮನೆಗೆ ಬಂದು ಬಿಡುತ್ತಿದ್ದರು. ನಡೆದು ಬರಬೇಡಿ, ಬಸ್ಸಿನಲ್ಲಿ ಬನ್ನಿ ಎಂದರೆ ಕೇಳುತ್ತಿರಲಿಲ್ಲ. ಬಸ್ಸಿನ ಮೈಲಿಗೆ ಅವರಿಗೆ ಹಿಡಿಸುತ್ತಿರಲಿಲ್ಲ. ನೆಗಡಿ, ಜ್ವರ ಎಂದು ಒಂದು ದಿನವೂ ಅವರು ಮುಸುಗರಪಟ್ಟುಕೊಂಡದ್ದರ ನೆನಪು ನನಗಿಲ್ಲ. ಶುಂಠಿ, ಕಷಾಯ, ದೊಡ್ಡ ಪತ್ರೆ ತಂಬುಳಿ, ರಾಗಿ ಹಿಟ್ಟಿನ ಪೌಲ್ಟೀಸು, ಶ್ರೀಗಂಧದ ಪಟ್ಟು, ಮೆಣಸಿನ ಸಾರು–ಇವೇ ಅವರ ಔಷಧಗಳು. ಉಪವಾಸ ಅವರ ಪ್ರಬಲವಾದ ಅಸ್ತ್ರ. ಅದರಿಂದ ಅವರು ಯಾವ ಕಾಯಿಲೆಯನ್ನಾದರೂ ಹೊಡೆದಟ್ಟುತ್ತಿದ್ದರು. ಅವರ ಕಟ್ಟುಪವಾಸದಿಂದಾಗಿ ರೋಗಾಣುಗಳಿಗೂ ಆಹಾರವಿಲ್ಲವಾಗಿ ಅವು ಸುಟ್ಟು ಬೂದಿಯಾಗುತ್ತಿದ್ದುವು.

ಹೀಗಿದ್ದ ಅಜ್ಜ ಕೊನೆಗಾಲದಲ್ಲಿ ಒಮ್ಮೆ ಆಸ್ಪತ್ರೆಯ ಮುಖ ನೋಡಬೇಕಾದ ಪ್ರಸಂಗ ಬಂತು. ಒಮ್ಮೆ ಬಹಿರ್ದೆಶಕ್ಕೆಂದು ಹಿತ್ತಲ ತೋಟಕ್ಕೆ ಹೋದವರು ಹೆಬ್ಬೆಟ್ಟಿಗೆ ಏನೋ ಕಡಿದ ಹಾಗೆ ಆಯಿತೆನ್ನುತ್ತ ಬಂದರು. ಹಿತ್ತಲಲ್ಲಿ ಹಲವು ಹತ್ತು ಶಾದರ ಬೆಳೆದಿತ್ತು. ಹೂವಿನ ಗಿಡ, ಮುಳು ಪೊದೆ, ಮಾವು, ಹಲಸು, ಸಂಪಗೆ–ಇವುಗಳ ನಡುವೆ ಒಂದು ಬೋಳು ಬಾವಿ ಬೇರೆ. ಇಷ್ಟರ ಮಧ್ಯೆ ಏನು ಕಡಿಯಿತೋ ಏನೋ. ಬಂದವರೆ ಏನೂ ಆಗದವರಂತೆ ಕೈ ಕಾಲು ತೊಳೆದು ಸ್ನಾನ ಮಾಡಿ ಊಟ ಮಾಡಿದರು. ಸಂಜೆಯ ಹೊತ್ತಿಗೆ ಹೆಬ್ಬೆಟ್ಟು ಸ್ವಲ್ಪ ಉರಿ ಉರಿ ಆಗುತ್ತಿದೆ ಎಂದರು. ಹಾವೊ ಚೇಳೊ ಕಡಿದಿರಬೇಕೆಂದು ಉಳಿದವರಿಗೆ ಭಯವಾಯಿತು. ಹಾವಿನ ಮಂತ್ರ ಹಾಕಿಸಿದರು. ಚೇಳಿನ ಮಂತ್ರವೂ ಆಯಿತು. ವಿಷಾಹಾರಿ ವೈದ್ಯವಾಯಿತು. ಹಾಗೂ ಹೀಗೂ ಎರಡು ಮೂರು ತಿಂಗಳು ಕಳೆಯಿತು. ಬೆರಳ ತುದಿ ಕ್ರಮೇಣ ನೀಲಿಗಟ್ಟಿತು. ಬರಬರುತ್ತ ಹಸಿರಾಯಿತು. ಹಸಿರು ಕ್ರಮೇಣ ಹಬ್ಬಿ ಪಾದಕ್ಕೆಲ್ಲ ಹರಡಲು ಮೊದಲಾಯಿತು. ಆಗಲೂ ಅಜ್ಜ ಆಸ್ಪತ್ರೆಗೆ ಬರಲು ? ... ಲ್ಲ. ಜೀ... ಅಲ್ಲಿಗೆ ತಾವು ಹೋಗಲ್ಲವಾಗಿ ಕೊನೆಗಾಲಕ್ಕ ತಮ್ಮನ್ನು ಅಲ್ಲಿಗೆ ಕರೆದೊಯ್ಯಬಾರದೆಂದು ಹಟ ಮಾಡಿದರು. ಹಾಗೂ ಹೀಗೂ ಮಾಡಿ ಒಂದು ದಿನ ಅವರನ್ನು ಆಸ್ಪತ್ರೆಗೆ ಕೊಂಡೊಯ್ದರು. ವಿಶದವಾದ ಪರೀಕ್ಷೆ ನಡೆಯಿತು. ಕೊಳಕು ಮಂಡಲವೊ ಯಾವುದೊ ಹಾವು ಕಚ್ಚಿರಬೇಕೆಂದು ತೀರ್ಮಾನವಾಯಿತು. ವಿಷ ವ್ಯಾಪಕವಾಗಿ ದೇಹದಲ್ಲಿ ಹರಡಿದೆಯಾಗಿ ಔಷಧಿ, ಚಿಕಿತ್ಸೆ ಸಲ್ಪ ಕಷ್ಟವೆಂದು ವೈದ್ಯರು ಅಭಿಪ್ರಾಯಪಟ್ಟರು.

ಅಂತೂ ಅಜ್ಜ ಆಸ್ಪತ್ರೆಯಲ್ಲಿ ಸತ್ತರು.

ಇಂದಿನ ಚಿತ್ರ ವಿಚಿತ್ರವಾದ ನೂರೆಂಟು ಕಾಯಿಲೆಗಳು ಅಂದು ಇರಲಿಲ್ಲವೊ ಇದ್ದರೂ ಅಜ್ಜನಿಗೆ ಅವು ಯಾವುವೂ ಬರಲಿಲ್ಲವೊ ಎಂಬ ಪ್ರಶ್ನೆ ನನ್ನನ್ನು ಇಂದಿಗೂ ಕಾಡುತ್ತಿದೆ.

× × ×

ಆರೋಗ್ಯ ಶಾಸ್ತ್ರ ಹೇಳುವಂತೆ ಆಸ್ಪತ್ರೆಗಳು ಊರ ಹೊರಗೆ ಇರಬೇಕು. ಹಿಂದೆ ಅವು ಹಾಗೆಯೇ ಇದ್ದವು. ಆದರೆ ಊರು ಬೆಳೆದು ಪಟ್ಟಣವಾದಾಗ ಆಸ್ಪತ್ರೆಗಳು ಊರ ಮಧ್ಯೆ ಸೇರಿ ಬಿಟ್ಟವು. ಮೈಸೂರು ಬೆಂಗಳೂರುಗಳಲ್ಲಿ ಆಗಿರುವುದೇ ಹೀಗೆ. ಆಸ್ಪತ್ರೆಗಳಲ್ಲಿ ರೋಗ ರುಜಿನ ಇರುವವರೆಲ್ಲ ಬಂದು ಹೋಗಿ ಮಾಡುತ್ತಾರೆ. ಅವರ ಗಾಳಿ ನಮ್ಮ ಮೇಲೆ ಬೀಸಬಾರದು ಎಂಬುದು ಸದುದ್ದೇಶ. ಈಗ ಊರಾವುದು ಆಸ್ಪತ್ರೆ ಯಾವುದು ಎಂದು ಗೊತ್ತಾಗದಷ್ಟು ಮಟ್ಟಿಗೆ ಅವೆರಡೂ ಒಂದಾಗಿ ಹೋಗಿವೆ.

ಬೆಳೆಬೆಳೆದಂತೆ ಆಸ್ಪತ್ರೆ ಊರ ನಡುವೆ ಸೇರಿದಂತೆ ಅಲ್ಲಿನ ವಿಶ್ವವಿದ್ಯಾನಿಲಯಗಳು ಊರ ಹೊರಗೆ ಹೋಗುತ್ತಿರುವುದು ಮರೆಯುವ ವಿಷಯವಲ್ಲ. ವಿದ್ಯೆಗೂ ಊರಿಗೂ ಏನೂ ಸಂಬಂಧವಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ವಿಶ್ವವಿದ್ಯಾನಿಲಯಗಳು ಊರಾಚೆ ಹೋಗಿಬಿಟ್ಟಿವೆ. ಅಲ್ಲಿಗೆ ಹೋಗಬೇಕೆಂದರೆ ಪರ ಊರಿಗೆ ಪ್ರಯಾಣ ಮಾಡಿದಷ್ಟೇ ಪ್ರಯಾಸವಾಗುತ್ತದೆ. ಅವುಗಳ ಗಾಳಿ ಸಹ ಊರ ಮೇಲೆ ಬೀಸಲು ಈಗ ಅವಕಾಶವಿಲ್ಲ. ಈಚಿನ ವಿದ್ಯಮಾನಗಳನ್ನು ನೋಡಿದರೆ ಊರಿನ ಆರೋಗ್ಯಪಾಲನೆಗೆ ಇಂಥ ವ್ಯವಸ್ಥೆಯೇ ಸರಿಯೆಂದು ನನಗನಿಸುತ್ತಿದೆ.

× × ×

ವೈದ್ಯ, ಎಂಜಿನಿ ಗ ಮೊದಲಾದವು ಬೇಗ ಹೆಚ್ಚು ಹಣ ಕೊಡುವ ವೃತ್ತಿಗಳೆಂದು ಹೆಸರಾಗಿವೆ.

ಲೋಕದ ಕಣ್ಣು ಹುಣ್ಣು

ಪುರುಷನಿಗಿಪ್ಪತ್ತರಲಿ ಲೋಕವೇ ಕಾಣಿಸದು
ಮೂವತ್ತರಲಿ ಸಂಸಾರ ಹಾರುವನು
ನಲ್ವತ್ತರಲಿ ಅವನು ಗಂಡಲ್ಲ ಹೆಣ್ಣು
ಬಳಿಕ ಏನೆನಲಿ ಲೋಕದ ಕಣ್ಣು ಹುಣ್ಣು!

– ಗುಂಡ್ಮಿ ಚಂದ್ರಶೇಖರ ಐತಾಳ

ಆದಕ್ಕೇ ಜನ ಅವನ್ನು ಕಲಿಯಲು ಹಾತೊರೆಯುತ್ತಾರೆ. ಎಷ್ಟೆ ಹಣ ಗಳಿಸಿದರೂ ವೈದ್ಯರನ್ನು ಸುಖಜೀವಿಗಳು ಎಂದು ಯಾರೂ ಹೇಳರು. ಜೀವನವಿಡೀ ರೋಗಿಗಳ ಸಂಪರ್ಕದಲ್ಲಿದ್ದುಕೊಂಡು, ಅವರ ಪರೀಕ್ಷೆ ಮಾಡುತ್ತ, ಅವರ ಹುಣ್ಣು ವ್ರಣಗಳಿಗೆ ಮದ್ದು ಹಾಕುತ್ತ ಇರಬೇಕೆಂದರೆ ಯಾರಿಗೆ ತಾನೆ ಮನಸ್ಸು ಬರುತ್ತದೆ? ನಾನಂತೂ ಆ ಕೆಲಸ ಮಾಡಲಾರೆ. ಒಂದು ದಿನ ಆಸ್ಪತ್ರೆಗೆ ಹೋಗಿ ಬಂದರೆ ಸಾಕು ಎಂಟು ದಿನ ಅದರ ಕಹಿ ನೆನಪು ನನ್ನನ್ನು ಕಾಡುತ್ತದೆ. ನರಕ ಸದೃಶವಾದ ಆ ಮಹಾಕೂಪದಲ್ಲಿ ಲವಲವಿಕೆಯಿಂದ ಸದಾ ಅರಳಿರುವ ಕಮಲಗಳೆಂದರೆ ದಾದಿಯರ ಮುಖಗಳು. ಅವನ್ನು ನೋಡಿಯೋ ಏನೋ ಸಾಯುವ ರೋಗಿ ಕೂಡ ಇನ್ನು ನಾಲ್ಕು ದಿನ ಬದುಕಲು ಯತ್ನಿಸುತ್ತಾನೆ. ಆಕೆ ನಗುತ್ತ ಬಂದು ಕೈ ಹಿಡಿದರೆ ಆಯಿತು, ನಿಂತು ಹೋದ ನಾಡಿ ಆಡಲು ಮೊದಲಾಗುತ್ತದೆ. ನರ್ಸ್, ನೀನೇ ನನ್ನ ಶುಶ್ರೂಷೆ ಮಾಡಲು ಬರುವುದಾದರೆ ನಾನು ಆಸ್ಪತ್ರೆಯಲ್ಲಿಯೇ ಇದ್ದು ಬಿಡುತ್ತೇನೆ" ಎಂದು ಒಬ್ಬ ರೋಗಿ ಉದ್ಗರಿಸಿದನಂತೆ. ಇನ್ನೊಬ್ಬ ಮದುವೆಯಾಗುವುದಾದರೆ ನಾನು ನಿನ್ನನ್ನೇ ಆಗುತ್ತೇನೆ." ಎಂದಾಗ ಒಬ್ಬ ನರ್ಸು "ಆಗಲಿ, ಅದಕ್ಕೇನು, ಅಗೋ ಅಲ್ಲಿ ಬರ್‍ತಾ ಇದಾರಲ್ಲ ಡಾಕ್ಟರರು, ಅವರು ನನ್ನ ಗಂಡ. ಅವರನ್ನು ಒಂದು ಮಾತು ಕೇಳಿಬಿಡಿ.' ಎಂದಳಂತೆ. ರೋಗದ ಸೋಂಕಿಗಿಂತ ಪ್ರೇಮದ ಸೋಂಕು ಬೇಗ ಹರಡುತ್ತದೆಂದು ಕಾಣುತ್ತದೆ. ಶೃಂಗಾರಕ್ಕೆ ಸತ್ತವರನ್ನು ಬದುಕಿಸುವ ಶಕ್ತಿ ಇದೆ ಎಂದು ಗೊತ್ತಾಗಬೇಕಾದರೆ ಆಸ್ಪತ್ರೆಯ ನರ್ಸುಗಳನ್ನು ನೋಡಬೇಕು.

ಒಮ್ಮೊಮ್ಮೆ ನನಗನಿಸುತ್ತದೆ, ಜೀವನವಿಡೀ ರೋಗಿಗಳನ್ನು ಪರೀಕ್ಷೆ ಮಾಡುವ ವೈದ್ಯ ಎಷ್ಟು ನತದೃಷ್ಟನೋ ಅದಕ್ಕಿಂತ ಹೆಚ್ಚು ನತದೃಷ್ಟರು ರೋಗಿಗಳ ನಡುವೆ ತಮ್ಮ ಲಾವಣ್ಯಶ್ರೀಯನ್ನು ವ್ಯರ್ಥ ಮಾಡುವ ಈ ದಾದಿಯರು.

ವೈದ್ಯರಲ್ಲಿ ರಸಿಕರು, ಸರಸಿಗಳು ಅನೇಕರಿದ್ದಾರೆ. ನನ್ನ ಗೆಳೆಯ ಒಬ್ಬ ವೈದ್ಯನಿದ್ದಾನೆ. ಅವನು ಎಲ್ಲ ಕಾಯಿಲೆಯವರಿಗೂ ಒಂದೇ ಔಷಧ ಕೊಡುತ್ತಾನೆ. ಎಲ್ಲರಿಗೂ ಒಂದೇ ಪ್ರಶ್ನೆ ಕೇಳುತ್ತಾನೆ. "ದಿನವೂ ಬೆಳಗ್ಗೆ ವಾಕ್ ಹೋಗುತ್ತೀರ?" ಎಂದು ಕೇಳುತ್ತಾನೆ. ಹುಂ ಎಂದವರಿಗೆ ಇನ್ನು ಮುಂದೆ ಹೋಗಬೇಡಿ, ನಿಲ್ಲಿಸಿಬಿಡಿ ಎಂದು ಹೇಳುತ್ತಾನೆ. ಊಹುಂ ಎಂದವರಿಗೆ ನಾಳೆಯಿಂದಲೇ ಹೋಗಿ ಎಂದು ಹೇಳುತ್ತಾನೆ. ಮತ್ತೊಬ್ಬ ವೈದ್ಯ ಇದ್ದಾನೆ. ಆತ ಒಂದೇ ಔಷಧಿಯನ್ನು ಮೂರು ರೂಪಗಳಲ್ಲಿ ಇಟ್ಟುಕೊಂಡಿದ್ದಾನೆ. ಮೊದಲ ಹದಿನೈದು ದಿನ ಪುಡಿ. ಅನಂತರದ ಹದಿನೈದು ಅದನ್ನೇ ಕಲಸಿ ಮಾಡಿದ ಮಾತ್ರೆಗಳು. ಆ ಮೇಲೆ ಒಂದು ತಿಂಗಳು ಅದನ್ನೇ ಕರಗಿಸಿ ಮಾಡಿದ ಕಷಾಯ.

ಇನ್ನೊಬ್ಬ ಕದೀಮ ವೈದ್ಯನಿದ್ದ. ಯಾರೇ ಬರಲಿ ಮೊದಲು ಆತ "ನೀವು ದಿನಾ ಏನು ಊಟ ಮಾಡುತ್ತೀರಿ?" ಎಂದು ಸಹಜ ದನಿಯಲ್ಲಿಯೇ ಕೇಳುತ್ತಿದ್ದ. ಅವರ ಊಟದ ವಿಧಿನಿಯಮಗಳನ್ನು ತಿಳಿದುಕೊಂಡು ಅದಕ್ಕೆ ತಕ್ಕ ಔಷಧಿ ಉಪಚಾರ ಕೊಡುವುದಕ್ಕಲ್ಲ, ಅವರ ಆರ್ಥಿಕ ಮಟ್ಟ ಏನು ಎನ್ನುವುದನ್ನು ಪತ್ತೆ ಹಚ್ಚಿ, ಅದಕ್ಕನುಗುಣವಾಗಿ ಬಿಲ್ಲು ಕೊಡುವುದಕ್ಕೆ! ಮಿಕ್ಕ ವೈದ್ಯರು ವ್ಯಾವಹಾರಿಕವಾಗಿ, ಬಂದವರನ್ನು ನಿಮ್ಮ ಸಂಬಳ ಎಷ್ಟು ಎಂದು ಕೇಳುತ್ತಾರೆ. ಒಮ್ಮೆ ಹೋದ ಗಿರಾಕಿಗಳು ಅವರಲ್ಲಿಗೆ ಇನ್ನೊಮ್ಮೆ ಹೋಗುತ್ತಿರಲಿಲ್ಲ. ಎಲ್ಲರೂ ಕದೀಮ ವೈದ್ಯನ ಮನೆ ಮುಂದೆ ಕ್ಯೂ ನಿಲ್ಲುತ್ತಿದ್ದರು. ಇನ್ನೊಬ್ಬ ವೈದ್ಯ ಬಡವರ ಆಧಾರಿ ಎಂದು ಹೆಸರು ಮಾಡಿಕೊಂಡಿದ್ದ. ಆತ ಮಾಡುತ್ತ ಇದ್ದುದು ಇಷ್ಟೆ. ಬಂದವರನ್ನು ಪರೀಕ್ಷೆ ಮಾಡಿ ಆದ ಮೇಲೆ ಔಷಧಿ ಕೊಟ್ಟು "ಇದನ್ನು ಬೆಲ್ಲದಲ್ಲಿ ಕಲಸಿ ಮೂರು ಹೊತ್ತು ನುಂಗು. ಬಿಸಿ ನೀರು ಕುಡಿ. ಹಾಲು ಹಣ್ಣು ಹಾರ್ಲಿಕ್ಸ್ ಯಾವುದೂ ಬೇಡ. ತಿಳಿ ಸಾರು, ಅನ್ನ ಬಳಸಿದ ಗಂಜಿ, ಕೊತ್ತಂಬರಿ ಬೀಜದ ಕಷಾಯ ಸೇವಿಸು ಎಂದು ಸಲಹೆ ಮಾಡುತ್ತಿದ್ದ. ಎಂಥ ಒಳ್ಳೆ ವೈದ್ಯ ಎಂದುಕೊಂಡು ಬಡವರೆಲ್ಲ ಅವನ ಹತ್ತಿರಕ್ಕೇ ಹೋಗುತ್ತಿದ್ದರು. ವೈದ್ಯಕೀಯ ವ್ಯವಹಾರದಲ್ಲಿ ಅತಿ ಪ್ರಮುಖ ಸ್ಥಾನ ಬಿಲ್ಲಿಗೆ ಸಲ್ಲುತ್ತದೆ. ವೈದ್ಯನ ಬಿಲ್ಲು ಬಹು ವೇಳೆ ರೋಗಿಯ ಪಾಲಿಗೆ ಬಾಣವಾಗುವುದೂ ಉಂಟು. ಆರು ತಿಂಗಳು ಔಷಧಿ ಸೇವಿಸಿ ಸಾವಿನ ದವಡೆಯಿಂದ ಪಾರಾದ ಒಬ್ಬ ರೋಗಿ ವೈದ್ಯ ಕೊಟ್ಟ ಬಿಲ್ಲು ನೋಡಿ ಎದೆ ಒಡೆದು ಸತ್ತುದುಂಟು. ಕಾಯಿಲೆ ಪೂರ್ತಿ ಗುಣವಾಗುವವರೆಗೆ ಆರುತಿಂಗಳಾಗಲಿ, ವರ್ಷವಾಗಲಿ–ವೈದ್ಯರಿಗೆ ಮೂರು ಪೈಸೆಯನ್ನಾದರೂ ಕೊಡಬಾರದು ಎಂದು ಅವರ ಉದ್ದೇಶವಲ್ಲ. ಬಾಕಿ ನಿಲ್ಲಿಸಿಬಿಟ್ಟರೆ ಹಣದ ಆಶೆಗಾದರೂ ವೈದ್ಯ ತಮ್ಮನ್ನು ಬದುಕಿಸುತ್ತಾನೆ ಎಂಬ ದೂರದ ಆಶೆ ಅಷ್ಟೆ.

× × ×

ಆರೋಗ್ಯಲಕ್ಷ್ಮಿ ಬಡವರಿಗೆ ಒಲಿದ ಹಾಗೆ ರೋಗಲಕ್ಷ್ಮಿ ಸಾಹುಕಾರರಿಗೆ ಒಲಿದಿರುತ್ತಾಳೆ.ಅವರವೇ ಆದ ಅನೇಕ ರೋಗಗಳಿವೆ. ಅವುಗಳ ಹೆಸರನ್ನು ಸಹ ನಾವಾರೂ ಕೇಳಿಲ್ಲ. ಅವರಿಂದಲೇ ವೈದ್ಯಶಾಸ್ತ್ರ ಅಷ್ಟೊಂದು ಬೆಳೆದಿರುವುದು. ಕ್ಲಬ್ಬಿಗೆ, ಬಾರಿಗೆ ಹೋದಷ್ಟು ಸಹಜವಾಗಿ ಅವರು ವೈದ್ಯರ ಹತ್ತಿರ ಹೋಗುತ್ತಾರೆ. ವೈದ್ಯರಿಗೆ ಅದು ಗೊತ್ತು. ಚಿತ್ರವಿಚಿತ್ರವಾದ ಮದ್ದು ಕೊಟ್ಟು ಅವರಿಂದ ಒಂದ ಕ್ಕೆರಡು ಕಾಸು ಸುಲಿಯುತ್ತಾರೆ. ಬಿಲ್ಲು ಭಾರವಾದಷ್ಟೂ ಔಷಧಿ ಉತ್ತಮವಾಗಿರುತ್ತದೆ ಎಂದು ಅವರ ಭಾವನೆ. ಬಡವ ಮನೆಯಲ್ಲೇ ಇದ್ದು ಉಪವಾಸ ಮಾಡಿ ಕಾಯಿಲೆ ಗುಣ ಮಾಡಿಕೊಂಡರೆ ಅವರು ಅಷ್ಟಕ್ಕಾಗಿ ಸ್ಯಾನಿಟೋರಿಯಂಗೊ ನರ್ಸಿಂಗ್ ಹೋಮಿಗೋ ಹೋಗುತ್ತಾರೆ. ಮುತ್ಯಾಲ ಶೆಟ್ಟಿಯ ಹಾಗೆ ವೈದ್ಯರ ಕುದುರೆ ಗಾಡಿಯ ಹಿಂದೆ ಒಂಬತ್ತು ಮೈಲಿ ಓಡಿದರೆ ಅಜೀರ್ಣ ರೋಗ ಹೋಗುತ್ತದೆ ಎಂದು ಅವರಿಗೆ ತಿಳಿಯದು. ವಾರಗಟ್ಟಲೆ ಕಾರು ಸವಾರಿ ಮಾಡುತ್ತ ಆಸ್ಪತ್ರೆಗೆ ಅಲೆದಾಡಿ ಅಜೀರ್ಣಕ್ಕೆ ಔಷಧಿ ತೆಗೆದುಕೊಳು ತ್ತಾರೆ. ಅತಿಯಾದ ಅಗ್ನಿ ಮಾಂದ್ಯದಿಂದ ನರಳುತ್ತಿದ್ದ ಸಾಹುಕಾರನೊಬ್ಬ ವೈದ್ಯನನ್ನು ಕುರಿತು "ಸ್ವಾಮಿ, ಈ ಮಾತ್ರೆಯನ್ನು ಊಟಕ್ಕೆ ಮೊದಲು ತೆಗೆದುಕೊಳ್ಳಬೇಕೋ ಊಟವಾದ ಮೇಲೊ?" ಎಂದು ಕೇಳಿದನಂತೆ. ಅಜೀರ್ಣಕ್ಕೆ ಲಂಘನವೇ ಮದ್ದು ಎಂದು ಅವನಿಗೆ ತಿಳಿಯದು.


ಇಂಥವರನ್ನು ಕಂಡರೆ ವೈದ್ಯರಿಗೆ ತುಂಬ ವಿಶ್ವಾಸ. "ಏನು ಡಾಕ್ಟರರೆ ಬಿಲ್ಲು ಒಂದಕ್ಕೆರಡು ಹಾಕಿದ್ದೀರಿ!" ಎಂದು ಒಬ್ಬ ಸಾಹುಕಾರ ಗೊಣಗಿದ್ದಕ್ಕೆ ವೈದ್ಯ ಹೇಳಿದನಂತೆ "ಹೌದು. ಏನು ಮಾಡುವುದಕ್ಕಾಗುತ್ತೆ? ಕಾರಿನ ಬೆಲೆ 25 ಸಾವಿರ ಇದ್ದದ್ದು 30 ಸಾವಿರ ಆಗಿದೆಯಲ್ಲ; ಹೇಗೆ ಕೊಳ್ಳುವುದು?"

× × ×

ನಾನು ಎಲ್ಲಿ ಹುಟ್ಟಿದೆನೊ ಹೇಗೆ ಬೆಳೆದೆನೊ ಹಾಗೆಯೇ ನನ್ನ ಮಕ್ಕಳೂ. ಅವರಲ್ಲಿ ಮೊದಲ ಇಬ್ಬರು ಅವರ ಅಜ್ಜಿಯ ಮನೆಯಲ್ಲಿ. ಉಳಿದವರು ನನ್ನ ಮನೆಯಲ್ಲಿ ಹುಟ್ಟಿದರು– ಕತ್ತಲ ಕೋಣೆಯಲ್ಲಲ್ಲ. ಸ್ವಲ್ಪ ಬೆಳಕಾಡುವ ಕೋಣೆಗಳಲ್ಲಿ. ನಾನಂತೂ ಯಾವತ್ತೂ ಆಸ್ಪತ್ರೆಗೆ ಹೋದುವವನಲ್ಲ. ಮರಕೋತಿ ಆಡುತ್ತ ಕೆಳಗೆ ಬಿದ್ದೆ. ಕೆಳದುಟಿ ಸೀಳಿ ಎರಡಾಗಿತ್ತು. ರಕ್ತ ಸೋರಿತು. ಮನೆಗೆ ಬಂದೆ. ಅಜ್ಜಿ ಬಿಸಿ ಕೆಂಡವನ್ನು ಪುಡಿ ಮಾಡಿ ಅಂಟಿಸಿದಳು. ಗಾಯ ಒಣಗಿ ಹೋಯಿತು. ಕಣ್ಣು ಬೇನೆ ಬಂತು. ದಾಳಿಂಬೆ ಹೂವಿನಿಂದ ಮಂತ್ರ ಹಾಕಿದರು. ಕೆಮ್ಮು ಬಂತು. ಹಿಪ್ಪಲಿ ತಿನ್ನಿಸಿದರು. ಹೊಟ್ಟೆ ಕೆಟ್ಟಿತು. ಸೋನಾಮುಖಿ ಕಷಾಯ ಕೊಟ್ಟರು. ತಲೆ ನೋವು ಬಂತು. ಬಜೆ ತೆಯ್ದು ಪಟ್ಟು ಹಾಕಿದರು. ನೆಗಡಿ ಕೆಮ್ಮು ಬಂತು. ಅದನ್ನೀಗ ಫ್ಲೂ ಎಂಬ ರಾಕ್ಷಸನನ್ನಾಗಿ ಮಾಡಿ ಕೂಡಿಸಿದ್ದಾರೆ. ಶುಂಠಿ ಕಷಾಯ, ಮೆಣಸಿನ ಸಾರು ಹಾಕಿದರು. ಇವತ್ತಿಗೂ ಅಷ್ಟೆ. ನಮ್ಮ ತಾಯಿ, ನಮ್ಮ ಸೋದರತ್ತೆ–ಇವರು ಮಾಡುವ ಅಡಿಗೆ ಔಷಧಿ ಇದ್ದ ಹಾಗೇ ಇರುತ್ತೆ! ಅವರಿಗೆ ಹೆದರಿ ನಾವೆಲ್ಲ ಮೂಗು ಮುಚ್ಚಿಕೊಂಡು ಊಟ ಮಾಡಿ ಬಿಡುತ್ತೇವೆ. ಮಾಗಿಯ ಕಾಲ ಪ್ರಾರಂಭವಾಯಿತೆಂದರೆ ಸಾಮಾನ್ಯವಾಗಿ ಎಲ್ಲರಿಗೂ ನೆಗಡಿ, ಕೆಮ್ಮು, ಜ್ವರ ಪ್ರಾರಂಭವಾಗುತ್ತದೆ. ಆಗ ನಮ್ಮ ಸೋದರತ್ತೆ ಬೇವಿನ ಚಕ್ಕೆ ಮತ್ತು ಇನ್ನು ಕೆಲವು ನಾರುಬೇರುಗಳನ್ನು ಹಾಕಿ ಕಷಾಯ ಇಳಿಸಿ ಎಲ್ಲರಿಗೂ ಕುಡಿಸಿ ಬಿಡುತ್ತಾರೆ. ಕಾರ್ಕೋಟಕ ವಿಷಕ್ಕಿಂತ ಅದು ಕಹಿಯಾಗಿರುತ್ತದೆ. ನಾಲಗೆಯಲ್ಲಿನ ಕಟು ಎಂಟು ದಿನವಾದರೂ ಹೋಗುವುದಿಲ್ಲ. ಆದರೆ ಯಾರಿಗೂ ಯಾವ ಕಾಯಿಲೆಯೂ ಅಂಟುವುದಿಲ್ಲ.

ಇಂಥ ಸುಲಭ ವೈದ್ಯ ನಮ್ಮ ಹೆಂಗಸರಲ್ಲಿ ಉಳಿದು ಬದಿದೆ. ಅವರೊಡನೆ ಅದು ನಾಶವಾಗಬಾರದು. ಉಪಾಧ್ಯಾಯವೃತ್ತಿ ವೈದ್ಯ ವೃತ್ತಿ ಹೆಂಗಸರಿಗೇ ಮೀಸಲಾಗಿರಬೇಕೆಂದು ನನ್ನ ಅಭಿಪ್ರಾಯ. ಅದಕ್ಕೆ ಅವರು ಹೇಳಿ ಮಾಡಿಸಿದವರು. ಆದರೆ ನಮ್ಮ ಅಜ್ಜಿಗೆ ಆರ್‌ಎಂಒ ಕೆಲಸ ಕೊಡಿ ಎಂದರೆ ಘನ ಸರ್ಕಾರ ಸುಲಭವಾಗಿ ಒಪ್ಪುತ್ತದೆಯೆ? ಮದುವೆಯಾದ ಮೇಲೆ ಪ್ರತಿಯೊಬ್ಬ ಹೆಂಗಸೂ ತನ್ನ ಗಂಡನಿಗೆ ಪಾಠ ಹೇಳಿಕೊಡುತ್ತಾಳೆ. ಹಾಗಿರುವಾಗ ಆಕೆ ಮಕ್ಕಳಿಗೂ ಮೇಷ್ಟರಾದರೆ ಏನು ತಪ್ಪು? ಸಾಕು ಮುಚ್ಚಿ ಬಾಯಿ ಎಂದು ಸದಾ ಗಂಡಸರನ್ನು ಹಳಿಯುವ ಹೆಂಗಸು ವೈದ್ಯಳಾದಳೆಂದರೆ "ಎಲ್ಲಿ ಸ್ವಲ್ಪ ಬಾಯಿ ಬಿಡಿ. ಆ ಎನ್ನಿ" ಅನ್ನುತ್ತಾಳಲ್ಲ! ಅದಕ್ಕಾಗಿಯಾದರೂ ಹೆಂಗಸರು ವೈದ್ಯರಾಗುವುದು ಮೇಲು. ಅದರಿಂದ ಸ್ತ್ರೀಸಹಜವಾದ ಸುಸ್ಮಿತಿ ಸ್ವಲ್ಪ ಕಡಿಮೆಯಾಗುತ್ತದೆ. ಇದರಲ್ಲಿ ಒಂದು ತೊಂದರೆ ಇದೆ. ನಿಜ. ಸುಂದರಿಯೊಬ್ಬಳು ವೈದ್ಯಳಾದರೆ ರಕ್ತದ ಒತ್ತಡ ಇರುವ ಗಂಡು ರೋಗಿಗಳಿಗೆ ಉಳಿಗಾಲವಿಲ್ಲವಾಗುತ್ತದೆ. ಆದರೂ ಹೆಂಗಸರಿಗಾಗಿ ಪ್ರಾಣ ಬಿಡುವ ಬಹುಜನರಲ್ಲಿ ಕೆಲವರಾದರೂ ಹೆಂಗಸಿಂದ ಬದುಕಬಹುದಲ್ಲ! ●

ಬೆಳಗಲು ಬಾಳ ದೀವಿಗೆಯ ಸುಸಮಯ ಇದುವೇ



ಜನತೆಗೆ ಕತ್ತಲೆಯಿಂದ ಬೆಳಕಿಗೆ ಸಾಗುವ ಮಾರ್ಗ ತೋರುವದೇ ಕೆನರಾ ಬ್ಯಾಂಕಿನ ಪರಂಪರೆ. ನಿರುದ್ಯೋಗಿ ತರುಣರಿಗೆ ತಮ್ಮ ಸ್ವಂತ ಕಾಲ ಮೇಲೆ ನಿಲ್ಲಲು ನೆರವು ನೀಡುವದೂ ಅದರಲ್ಲಿ ಒಂದು. ಅದರಂತೆ ಸಮಾಜದ ಸೌಕರ್ಯ ವಿರಹಿತ ವರ್ಗದವರಿಗೆ ಜೀವನೋಪಾಯ ಕಲ್ಪಿಸುವದು ಹಾಗೂ ಚಿಕ್ಕ ಪ್ರಮಾಣದ ಉದ್ಯಮಗಳು ಅಭಿವೃದ್ಧಿ ಹೊಂದುವಂತೆ ಬಂಡವಲು ಒದಗಿಸುವದು.

ದುಷ್ಟ ಶಕ್ತಿಗಳ ವಿರುದ್ಧ ಹೋರಾಡುವದು ದೀಪಾವಳಿ ಮಹೋತ್ಸವದ ದಿನಾಚರಣೆಯು ಒಂದು ಭಾಗ. ನಿರುದ್ಯೋಗ ಮತ್ತು ಬಡತನಗಳು ದೇಶಕ್ಕೆ ಕೆಡಕು ಮಾಡುವ ದುಷ್ಟ ಶಕ್ತಿಗಳೇ. ಅವುಗಳನ್ನು ಜಯಿಸಲೇಬೇಕು. ದೀಪಾವಳಿ ಆಚರಣೆಯ ರಾತ್ರಿಯಲ್ಲಿ ಬೆಳಗುವ ಲಕ್ಷಾನುಲಕ್ಷ ದೀಪಜ್ಯೋತಿಗಳು ನಮ್ಮ ಮಹದಾಶೆ — ಮಹತ್ವಾಕಾಂಕ್ಷೆಗಳನ್ನು ಈಡೇರಿಸಿ ಕೊಡಲಿ.

ಯಾವ ಮಹಾತ್ಯಾಗಕ್ಕೂ ನಮ್ಮನ್ನೇ ನಾವು ಅರ್ಪಿಸಿಕೊಳ್ಳೋಣ. ಹಾಗೂ ದಿವ್ಯ- ಭವ್ಯ "ನಾಳೆ"ಗಾಗಿ ಪ್ರಯತ್ನಿಸುತ್ತಲೇ ಇರೋಣ.

ಅಭಿವೃದ್ಧಿಗಾಗಿ ಸೇವೆ - ಸೇವೆಗಾಗಿ ಅಭಿವೃದ್ಧಿ.

ಕೆನರಾ ಬ್ಯಾಂಕ್

ಮುಖ್ಯ ಕಚೇರಿ :
ಬೆಂಗಳೂರು ೫೬೦೦೦೨

ಬಂದ, ಹೋದ

ಯಾವುದೋ ಬೀಜ, ಬಿತ್ತು
ಎಲ್ಲಿಯೋ ಚಿಗುರಾಗಿ, ಹಗುರಾಗಿ ಹೂವಾಗಿ
ಒಗರಾಗಿ ಕಾಯಾಗಿ, ಮಧುರಾಗಿ ಹಣ್ಣಾಗಿ
ಹಣ್ಣು–ಹಣ್ಣಾಗಿ
ಒಣಗಿತು
ಉರವಲಾಯ್ತು!

●

'ಜಾತಸ್ಯ ಮರಣಂ ಧ್ರುವಂ'
ಅನಾದಿ ಮಾತ್ರ ಅನಂತ
ವಸ್ತುವಿನೊಡನೆ ನೆರಳು ಬಂತು.
ಹುಟ್ಟು, ತನ್ನೊಡನೆ ಸಾವಿನ ಚೀಟಿ ತಂತು.
ಸಾಯದೇ ಇದ್ದವ, ಇನ್ನೂ ಹುಟ್ಟೇ ಇಲ್ಲ.
ಜನನ–ಮರಣದ ಗುಟ್ಟು
ಆಗಬಾರದೆ ರಟ್ಟು?
ಆಯಾ ರಾಮ, ಗಯಾ ರಾಮ
ಆ–ರಾಮದಲ್ಲಿಯೂ ರಾಮ
ಹ–ರಾಮದಲ್ಲಿಯೂ ರಾಮ
ನ–ರಾಮ
ಥೂ–ರಾಮ
ಹೇ ರಾಮ! ಹೇ ರಾಮ! ಹೇ ರಾಮ!

●

ಬಂದಾಗ–ಮಂಗಲ, ತೋರಣ, ಹಂದರ
ಚಿಗಿತ ವಂಶ, ಬಿದಿರ ತೂತು, ಹಾಡಿತ್ತು ಕೊಳಲು
ಹೊರಟಾಗ–ಅಮಂಗಲ, ಮಾರಣ, ಎಲುಬಿನ ಹಂದರ.
ಒಮ್ಮೆ ಅಂಗಳದಲ್ಲಿದ್ದ ಮಂಟಪದ ಬಿದಿರು
ಈಗ ಗಳ, ಗಳಗಳ, ಹೆಗಲಿಗೆ ಆಸರು
ಬಂದಾಗ ಸಂಗೀತ, ಶಹನಾಯಿ
ಹೊರಟಾಗ ಬೊಗಳಿತ್ತು ಬೀದಿನಾಯಿ
ಶಕುನ, ಅಪಶಕುನ, ಪಂಚಾಂಗದಲ್ಲಿತ್ತು ಪಾಪಗ್ರಹ.
ಈಗ ತಮಟೆ ಹಲಿಗೆ, 'ಕಣ್ಣ–ಕುಡು–ಕುಡು'
ಬಂದಾಗ ಬಿದಿಗೆ, ಮಳೆ–ಬಿಲ್ಲು ಕಮಾನು
ಹೊರಟಾಗ ಸಿದಿಗೆ, ಅಯ್ಯನವರ ವಿಮಾನು
ಬಂದಾಗ ಮೃಷ್ಟಾನ್ನ ಭೋಜನವನುಂಡ
ಭಟ್ಟ, ಹೊರಟಾಗ ಅಂದ, 'ಕಾಕ–ಪಿಂಡ'.
ಬಂದಿತ್ತು ಜ್ಯೋತಿ, ಹೊರಟಿತ್ತು ಚಿತೆ
ಅಂದು 'ಸೀತಾರಾಮ ಸ್ಮರಣ ಜಯ ಜಯ ರಾಮ'.
ಇಂದು, ಅವನೇ ರಾಮ, 'ರಾಮ–ಬೋಲೋ–ರಾಮ!'
ಹೇ ರಾಮ! ಹೇ ರಾಮ! ಹೇ ರಾಮ!

●

ರಾಮಾ
ನಿನಗೂ ಬಿಡಲಿಲ್ಲ 'ಹೇ ರಾಮ ರಾಮ'
ಕೃಷ್ಣ, ಬುದ್ಧ, ಕ್ರಿಸ್ತ, ಪೈಗಂಬರೆ
ಯಾರಿಗೂ ಬಿಡಲಿಲ್ಲ 'ಹೇ ರಾಮ ರಾಮ'
ನೀವು ಬಂದಂದು ನೆನೆಸಿ 'ಜಯಂತಿ' ಎಂದೆವು
ನೀವು ಹೊರಟರೆ ಅದಕೆ 'ಪುಣ್ಯತಿಥಿ' ಎಂದೆವು.
ಬಂದಾಗ ಅವತಾರ
ಹೋದಾಗ ಮಹಾಪ್ರಸ್ಥಾನ!

●

ಶ್ರೀ ಸಾಮಾನ್ಯ ಹುಟ್ಟಿರಲು ಮಿಡಿಯಿತು ಏಕ ತಾರೆ.
ಎಲ್ಲಿಯದೊ ಸ್ಪಂದನ, ಬಂಧನ; ಎಲ್ಲಿಯದೊ ಬಿತ್ತು! ಮುತ್ತು!
ಹೊರಟಾಗ ಶೋಕಗೀತ; ಮೂಕ ಸಂಗೀತ
ಹುಟ್ಟಿದ್ದು ಎಲ್ಲೋ, ಕೋಣೆ, ಮನೆ, ಮುನ್ಸಿಪಲ್ ಆಸ್ಪತ್ರೆ,
ಹೋದದ್ದು, ಕುಳಿತಲ್ಲೆ, ನಿಂತಲ್ಲೆ, ಮಲಗಿದಲ್ಲೆ 'ಬಸ್' ಚಕ್ರದಲ್ಲೆ
ಅಂಬುಲನ್ಸ್ ಕೊಟ್ಟಿತ್ತು, ಗಾರ್ಡ್ ಆಫ್ ಆನರು,
ಬಿಡಾಡಿ ಮಕ್ಕಳು ಹಾರಿಸಿದ ಬಿಟ್ಟಿ ಪಟಾಕಿ
೨೧–ಗನ್ ಸೆಲ್ಯೂಟ್, ಏನೇ ಅನ್ನಿ–
ಒಂದು ಪೀಡೆ ಪರಿಹಾರವಾಯಿತು.

●

"ಇರುವಾಗ ಇದ್ದಾಂಗೆ ಅನಿಸಲೆ ಇಲ್ಲ"
ಇದ್ದಾಗ ಸತ್ತಂತೆ ಬದುಕಿದವರೇ ಬಹಳ ಮಂದಿ.
ಖಾನೇ ಸುಮಾರಿಯಲಿ, ಪೋಲೀಸ್ ರೆಕಾರ್ಡಿನಲ್ಲಿ
ರೇಶನ್ ಕಾರ್ಡಿನಲಿ, ಅಲ್ಲಿ–ಇಲ್ಲಿ–!
ಹೆಚ್ಚು ಕಡಿಮೆಯಾದವರು ಇವರು.

●

ಇನ್ನು ಕೆಲವರು. ಇರುವಾಗ ಇದ್ದವರು,
ಇದ್ದಾಗ ಗುದ್ದಾಡಿದವರು, ಬದುಕಿದವರು
ಯೋಗ್ಯತೆ ಇರಲಿ ಬಿಡಲಿ, ಗದ್ದುಗೆ ಏರಿದವರು
ಧನ ಬಲ, ಜನ ಬಲ, ಶಕ್ತಿ ಬಲ–ಪಡೆದು,
ಉರಿದಾಡಿದವರು, ಎಗರಾಡಿದವರು.
ಹೋರಾಡಿದವರು,–ರಾಡಿದವರು,
ತಮ್ಮ ಗೋರಿಯ ತಾವೇ ಕಟ್ಟಿಕೊಂಡವರು.
ತಮ್ಮ ಮೂರ್ತಿಯ, ಕೀರ್ತಿಯ, ಕೆತ್ತಿಕೊಂಡವರು
ಇತಿಹಾಸದಲಿ ಹೆಸರು ಬರೆಸಿಕೊಂಡವರು!

●

ಇನ್ನು ಕೆಲವರು,
ಸತ್ತ ಮೇಲೂ ಬದುಕಿದವರು
ಹೆಸರಿನಲಿ ಉಸಿರಿನಲಿ
ಬುದ್ಧಿಯಲಿ, ಸಿದ್ಧಿಯಲಿ ಬದುಕಿದವರು
ದೇಹದ ಚೌಕಟ್ಟನ್ನು ಮೀರಿ ಬಾಳಿದವರು
ಕಾನ್‌ವಾಸ್ ಮೀರಿ ಚಿತ್ರ ತೆಗೆದವರು

ಮಾತು ಮಂತ್ರವದಾಗೆ
ಬಯಲಿನಲ್ಲೂ ಬದುಕಿದವರು
ಇವರ ಗಡ್ಡದ ಕೂದಲು ಕಳುವಾದರೆ
ಊರೇ ಸುಟ್ಟೀತು
ಇವರ ಹಲ್ಲಿನ ಸ್ಮಾರಕ ಅಲುಗಾಡಿದರೆ
ರಾಜ್ಯ ಕುಸಿದೀತು
ವಿಷ ಕುಡಿದು ಅಮೃತವನು ಹಂಚಿದವರು
ಸಿಲುಬೆಯಲಿ ಮುಕ್ತಿಯನು ತೋರಿದವರು

ಕುಡಿಯುವ ಮದಿರೆ ತಿನ್ನುವ ರೊಟ್ಟಿ
ಅದರಲಿ ಇಹುದು ಇವರ ರಕ್ತ–ಮಾಂಸದ ಬುತ್ತಿ!
ಸತ್ತರೂ ನಿತ್ಯ ಹುಟ್ಟುವರು
ಬಂಧಿತರು ಆದರೂ ಮುಕ್ತರಿವರು
ಅನುರಕ್ತರಾದರೂ ವಿರಕ್ತರಿವರು
ಸಾವಿರ ಹೆಂಡಿರಿದ್ದೂ ಇವರು ಬ್ರಹ್ಮಚಾರಿಗಳು
ಕಾಣದ ಕೈಯಂತೆ ಸರ್ವಶಕ್ತರಾಗಿಹರು
ವರ್ತಮಾನ–ಭವಿಷ್ಯಕ್ಕೆ ಸೇತುವೆ ಕಟ್ಟಿಹರು

'ಜೀವಿ'

ಬೊಂಬಾಯಿ

ಭಾರತದ ಮಹಾದ್ವಾರ
ಈ ನಗರ
ಹಲವು ಹೊರದೇಶಗಳ ಥಳಕು ಬೆಳಕು
ನಿತ್ಯ ಒಳಬರುವಂತೆ ತೆರೆದಿಟ್ಟ ಕಿಡಕಿ;
ಬಂದ ಬಂದುದನೆಲ್ಲ
ತನ್ನದೆನ್ನುವ ಹಾಗೆ ತೆಕ್ಕೆ ಹಾಕುವ ಧರತಿ
ತನ್ನ ಬೆರಕೆಯ ಮಹಿಮೆ ಕುರಿತು ಕಂಡ[illegible]ರು
ಸಮಯ ಸಿಕ್ಕಾಗೆಲ್ಲ
ಬಾರಿಸುತ ನಿಲ್ಲುವುದು ತನ್ನ ಬಂಡಬುಂಡಕಿ!
ನೆಲ ಮುಗಿಲು ಸಾಗರದ ಎಲ್ಲೆಲ್ಲ ಸಂಚರಿಸಿ
ಒಳ ಹೊರಗಿನವರನ್ನು ವಸ್ತು–ಒಡವೆಗಳನ್ನು
ಹೊತ್ತು ಸಾಗಿಸಬಲ್ಲ ಬಸ್ ರೈಲು ಹಡಗು ವಿಮಾನ
ಬಂದು ಸೇರುವವಿಲ್ಲಿ
ಬೊಂಬಾಯಿ ಸಂಸ್ಕೃತಿಯ ನಿರ್ಮಾಣಕೆ
ವಿಧವಿಧದ ವೈಚಿತ್ರ್ಯಗಳ ಸಮೈಕ್ಯ.

★

ಕಣ್ಸೆಳೆದು ಕೆರಳಿಸುವ ಭವ್ಯತೆಯ ಮಹಲುಗಳು
ಹತ್ತು ತರ ನರ್ತನದ ನವ್ಯತೆಯ ನವಿಲುಗಳು
ರೋಡು ರೋಡಿನ ಮೇಲೆ ಫ್ಯಾಷನಾ ಪರೇಡು
ವಿದ್ಯೆಗೂ ಬುದ್ಧಿಗೂ ಕಸರತ್ತು ಮಾಡಿಸುವ
ಯಾವುದಕ್ಕೂ ಇಲ್ಲಿ ಕೊರತೆಯೆಂಬುವುದಿಲ್ಲ
ಜೇಬಿನೊಳಗಿನಿತು ದುಡ್ಡಿದ್ದರದೆ ಸುಖವು
ಬಯಸಿದ್ದು ಬೇಡಿದ್ದು ಬಂದು ಬೀಳುವುಗೆಲ್ಲ
ತಾರೆಯರ ಈ ನಾಕ ಕಂಡವನೆ ಬಲ್ಲ
ತಾರುಣ್ಯ [illegible] ಗಲ್ಲ.

★

ಪರದೇಶಿಗಳ ಲೆಕ್ಕ ಹಾಕುವವನೇ ಪೆದ್ದ
ಯಾರು ಬಂದರು ಈ ಮಹಾನಗರ ಸ್ವಾಗತಕೆ ಸಿದ್ಧ!
ಅಂತೆಯೇ ದೂರದೂರಿಂದೇನೊ ಜನ
ಇಲ್ಲಿ ನೆಲೆಯೂರಲಿಕೆ ಬಂದರೋ ಬಂದರು
ಬಂದವರು ಬಂದವರು ಕರೆತಂದವರು
ಇಲ್ಲಿ ಕಾಲೂರಿಯೇ ನಿಂದರು
ಸುತ್ತು ಹತ್ತೂ ಕಡೆಗೆ ಕನ್ನಡಿಯ ಹಿಡಿಯುವೋಲು
ಈ ಕಡಲ ತಡಿಯೊಳಿರೆ 'ಬಂದರು'!

★

ಹೊರಗಿನ ಜನ ಹಾಯಾಗಿರೆ ಯಾರದು ತಕರಾರು?
ಒಳಗಿನ ಜನ ಒಳಬಂದರೆ ಒಳಗೊಳಗೇ ದೂರು;
ತಮ್ಮ ನೆರೆಹೊರೆಯವರ ಸುಟ್ಟು ಹಾಕಲಿಕೊಂದು
ಬೆಂಕಿ ಹುಟ್ಟಿದೆಯಿಲ್ಲಿ
ಈ ಇಲ್ಲಿ—ಭಾರತದ ದ್ವಾರದಲ್ಲಿ
ಸಾಗರವ ಒಡನಾಟದಲಿ ಬೆಳೆದ ಈ ನಗರದಲಿ!
ಅವರಿವರು ಸುಟ್ಟುರಿದು ಹೋದರೂ ತಮಗೇನು
ಎಂಬುವವರಿಗೂ ಒಮ್ಮೆ ಬಂದೀತು ಕುತ್ತು!
ಆರಾಮ ಕಾಪತ್ತು ಬರುವಾಗಲೇ ಶಂಕ ಹೊಡೆಯುವುದೇಕೆ;
ಕಣ್ಣುಳ್ಳ ಜಾಣ ಜನರಿಂದು ತೆರೆಯಿಂದೆ ಕಣ್ಣು!
ಬೆಂಕಿ ಹೊತ್ತಿಸುವವರ
ಹೊತ್ತಿಸಿದ ಬೆಂಕಿಯಲಿ ಹುಲ್ಲೆಸೆಯುವವರ
ಹಿಡಿದು ಕಿವಿ ಹಿಂಡದೆಯೆ ಸಡಿಲು ಬಿಟ್ಟು
ನಾಡಿಗರ ಸುಖನಿದ್ರೆ ಹಾಳ್ಗೆಡಿಸಿ ಬಿಡುವ ದಿನ
ತಮ್ಮ ಉದರದ ಬೆಂಕಿ ತಮ್ಮ ಬಲಿಯನೆ ಬೇಡಿ
[illegible] ಸುಡ್ತುವಾಗ
[illegible] ಶಿವ ನಾಮಸ್ಮರಣೆ ಮಾಡಿ???

– ಬಿ. ಎ. ಸನದಿ

ಸರಕಾರೀ ಅಳಿಯತನ

(ಏಕಾಂಕ) ಎನ್ಕೆ

—: ಪಾತ್ರಗಳು :—

(೧) ರಂಗಣ್ಣ
(೨) ರಂಜನಾ (ಆತನ ಹೆಂಡತಿ)
(೩) ಕಾಮದಾರ ಗಂಗಾಧರರಾಯ (ಆಕೆಯ ತಂದೆ)
(೪) ಗಂಗಾಬಾಯಿ (ರಾಯರ ಹೆಂಡತಿ)
(೫) ಆಫೀಸ ಸಿಪಾಯಿ Cum ಆಳು ಮನುಷ್ಯ ಸೋಮಣ್ಣ

(ರಂಗಣ್ಣನ ಮನೆ ರೇಡಿಯೋದಿಂದ ವಿವಿಧ ಭಾರತಿಯ ಒಂದು ಜಾಹೀರಾತು ಅದರೊಂದಿಗೆ ಒಂದು ಗೀತ. ರಂಗಣ್ಣ ಒಮ್ಮೆಲೆ ರೇಡಿಯೊ ನಿಲ್ಲಿಸಿ—)

ರಂಗಣ್ಣ:— ನೋಡು ಇವತ್ತಿನವರೆಗೂ ಬರ್ರಿ ಅಂತ ಒಂದು ಪತ್ರ ಇಲ್ಲ. ಆಮಂತ್ರಣ ಇಲ್ಲದ ಅಳಿಯತನ ಮಾಡಿಸಿಕೊಂಡು ಬಾ ಅಂದರ ನನ್ನ ಕಡಿಂದ ಆಗೋದಿಲ್ಲ.

ರಂಜನಾ:— ಅಲ್ಲಾ ಹೋದರೇನು ಬ್ಯಾಡಾ ಅಂತಾರೇನು?

ರಂಗಣ್ಣ:— ಅಳಿಯ ಅಂದರೇನು ಅಭಿಮಾನಶೂನ್ಯ ಪ್ರಾಣಿ ಅಂತ ತಿಳಿದೀಯೇನು?

ರಂಜನಾ:— ಆಹಾಹಾ! ನಮ್ಮ ಅಪ್ಪನ ಕೈಲೆ ನೌಕ್ರಿ ಸಿಗೋತನಕ ಎಲ್ಲಿ ಹೋಗಿತ್ತು ಈ ಅಭಿಮಾನ?

ರಂಗಣ್ಣ:— ನೌಕರಿ ಕೊಟ್ಟರ? ನೌಕರಿ ಕೊಟ್ಟ ಅಂತ ಹೇಳಿ ನಿಮ್ಮಪ್ಪನ ಚಾಕರಿ ಮಾಡು ಅಂದ್ಯೇನು? ನೌಕರಿ ಕೊಟ್ಟರ ನನ್ನ ಕಡಿಂದ ಸರ್ವೀಸ್ ತಗೋಳಿ. ಬಾಸ್ ಇದ್ದರ ಆಫೀಸಿನ್ಯಾಗ!...

ರಂಜನಾ:— ಈಗಿನ ಕಾಲದಾಗ ಕೈ ಬೆಚ್ಚಗ ಮಾಡದಿದ್ದರ ನೌಕರಿ ಎಲ್ಲಿ ಸಿಗತಾವ ನಿಮಗ? ಅಂಥಾದ್ದು ಕಾಸು ಖರ್ಚು ಇಲ್ಲದ ಕೆಲಸ ಸಿಕ್ಕಿತು.

ರಂಗಣ್ಣ:— ನಿಮ್ಮಪ್ಪನಿಗೂ. ಕಾಸು ವರದಕ್ಷಿಣೆ ಇಲ್ಲದ ಡಬಲ್, ಟ್ರಿಬಲಾ ಗ್ರ್ಯಾಜುಯೇಟ ವರ ಸಿಕ್ಕ.

ರಂಜನಾ:— ಸರಿ, ನಿಮಗ ನೌಕರಿ ಆತು. ನಮ್ಮಪ್ಪಗ ವರಾ ಆತು.

ರಂಗಣ್ಣ:— ವರ ನಿಮ ಪಗ ಅಲ್ಲ ನಿನಗ!

ರಂಜನಾ:— ಅಳಿಯಾ ಅನ್ನೋ ನಿಮ್ಮ ದರ್ಪ ನೋಡಿದರ ವರಾ ನಮ್ಮ ಅಪ್ಪಗ ಅಂತ ಅನಿಸತದ

ರಂಗಣ್ಣ:— ಏನು ದರ್ಪ ಮಾಡೀನೇ ನಾನು?

ರಂಜನಾ:— ಮತ್ತಿನ್ನೇನು. ಪರಿಷ್ಠ ಅಧಿಕಾರಿ ಅಂತ ಹೇಳಿ ನಮ್ಮಪ್ಪ ನಿಮ್ಮ ಬಾಸ್ ಆಗೋದು ಬಿಟ್ಟು ಗರಿಬ ಅಳಿಯ ಅಂತ ನೀವೇ ಆತನ ಬಾಸ್ ಆಗಿ ಬಿಟ್ಟೀರಿ.

ರಂಗಣ್ಣ:— ಮತ್ತ ನಿಮ್ಮಪ್ಪನೇನು ಒಂದಾನೊಂದು ಕಾಲಕ್ಕ ಅಳಿಯ ಆಗಿದ್ದೇ ಇಲ್ಲೇನು? ಹಿಂದಿನ ಕಾಲದ ಅಳಿಯಂದಿರು ಅಂದರೆ ಏನಂತ ಮಾಡೀದಿ? ದುರ್ವಾಸರು ಇದ್ದ ಹಾಂಗ ಇರತಿದ್ದರು. ಈಗಿನ ಕಾಲದ ನಮ್ಮಂತವರು ಸೌಮ್ಯವಾದಿ ಅಂದರ ಅಹಿಂಸಾಮೂರ್ತಿಗಳು ಗೊತ್ತದ ಏನು? ಅವರು ಹಿಟ್ಲರನ ಕಾಲದ ಅಳಿಯಂದಿರು, ನಾವು ಗಾಂಧೀ ಯುಗದ ಅಳಿಯಂದಿರು.

ರಂಜನಾ:— ಆಹಾಹಾ! ಗಾಂಧೀ ಯುಗದವರಂತ! ಮಹಾತ್ಮಾಗಾಂಧಿ ಯುಗದವರೊ? ಏನು ಇಂದಿರಾ ಗಾಂಧೀ ಯುಗದವರೊ? ಅಲ್ಲಾ ನೋಡಿದಿರೋ ಇಲ್ಲೊ ಮದುವಿ ದಿವಸನೇ ಮಾಮನೀ ಪ್ರಸ್ತ ಮತ್ತು ಕಳವೂಟ ಎರಡೂ ಒಂದರಲ್ಲೇ ಮಾಡಿ ಆದರ ಖರ್ಚು ವೆಚ್ಚ ಎಲ್ಲಾನೂ ನಮ್ಮ ತೌರು ಮನಿಯವರೇ ವಹಿಸಿಕೊಂಡರು. ಅಷ್ಟು ಆದರೂ ನೀವು ಊಟಕ್ಕೆ ಬರೋದಿಲ್ಲ ಅಂತ ಸಿಟ್ಟು ಮಾಡಿ ಸೆಟಗೊಂಡು ಕೂತಾಗ ನಿಮ್ಮ ಬಾಸ್ ಆದರೂ ನಮ್ಮಪ್ಪ ಪ್ರತಿಯಾಗಿ ಸಿಟ್ಟಿಗೇಳದೆ ತನ ಕೈಯೊಳಗಿನ ಬಂಗಾರ ಚೇನು ಸಹಿತ ವಾಚ್ ತೆಗೆದು ನಿಮ್ಮ ಕೈಗೆ ಕಟ್ಟಿಬಿಟ್ಟ.

ರಂಗಣ್ಣ:— ನಿಮ್ಮಪ್ಪಗೂ ಅದು ಯಾರ ಕಡಿಂದನೊ ಪ್ರಜೆಂಟ್ ಅಂತ ಬಂದಿದ್ದಿರಬೇಕೇಳು.

ರಂಜನಾ:— ಅಂದರ ಅವರ ಮಾವ ಕೊಟ್ಟದ್ದು ಅಂತೀರೇನು?

ರಂಗಣ್ಣ:— ಹೆಣ್ಣು ಕೊಟ್ಟ ಮಾವ ಅಲ್ಲದಿದ್ದರೂ ಮತ್ತ ಯಾವುದೋ ಕೆಲಸಾ ಮಾಡಿಸಿಕೊಂಡ ಮಾವ! ಕೈಯಾಗ ಅಧಿಕಾರ ಇರೋತನಕ ಪ್ರಜೆಂಟುಗಳಿಗೇನ ಕಡಿಮೆ?

ರಂಜನಾ:— ಅದೇನ ಇರ್ಲಿ. ಅದನ್ನು ತಗದು ನಿಮ್ಮ ಕೈಗೆ ಕಟ್ಟಿದ್ದು ನಮ್ಮ ಅಪ್ಪನ ಔದಾರ್ಯ ಅಲ್ಲವೇನು?

ರಂಗಣ್ಣ:— ಕಟ್ಟದೇ ಏನು ರೊಕ್ಕಸತಾನ. ನನ್ನಂತಹ ಟ್ರಿಬಲ್ ಗ್ರ್ಯಾಜುಯೇಟ್ ಅಳಿಯ ಸಿಕ್ಕದ್ದೇ ಅವನ ಪುಣ್ಯ.

ರಂಜನಾ:— ಮತ್ತ ನನ್ನಂತಹ ಸಿಂಗಲ್ ಗ್ರ್ಯಾಜ್ಯುಯೇಟ್ ಕನ್ಯಾ ಸಿಕ್ಕದ್ದು ನಿಮ್ಮ ಪುಣ್ಯ ಅಲ್ಲೇನು?

ರಂಗಣ್ಣ :— ನೀ ಗ್ರ್ಯಾಜುಯೇಟ್ ಏನೊ ಖರೆ. ಆದರೆ ಗ್ರ್ಯಾಜುಯೇಟ್ ಗೃಹಿಣೀ ಆದರ ಬಂತೇನು? ನಿಮ್ಮಪ್ಪ ನಿನಗೂ ಒಂದು ನೌಕರಿ ಹಚ್ಚಿ ಕೊಟ್ಟಿದ್ದರ ಭಲೋ ಆಗತಿತ್ತು.

ರಂಜನಾ:— ನಿಮ್ಮ department ನ್ಯಾಗ ಅಂತೀರೇನು? ನೋಡ್ರಿ ಮತ್ತು ಈಗಾದರೂ ಅದೇನು ಅಶಕ್ಯ ಇಲ್ಲ, ಒಂದು ವೇಳೆ ನೌಕರಿ ಸಿಕ್ಕಿ ನಾನೇ ನಿಮ್ಮ ಮೇಲಿನ ಬಾಸ್ ಆದರ?

ರಂಗಣ್ಣ :— ಓಹೊಹೋ!... ಬ್ಯಾಡ ಮಾರಾಯಳ. ಸರ್ವಥಾ ನೀನು ನೌಕರಿ ಮಾಡೋದು ಬ್ಯಾಡಾ. ಅತ್ಲಾಗ ಮಾವನೂ ಬಾಸ್‌ಉ ಇತ್ಲಾಗ ಹೇಣ್ತಿನೂ ಬಾಸ್‌ಊ ಅಂದರ ನಡುವೆ ನಮ್ಮಂತಹ ಜಾಮಾತೃಗಳ ಅವಸ್ಥೆ ವೈರಿಗೂ ಬ್ಯಾಡ.

ರಂಜನಾ:— ಜಾಮಾತಾ ಅಂದರ ದಶಮ ಗ್ರಹ.

ರಂಗಣ್ಣ :— ನೀ ಎಲ್ಲೋ ಸ್ವಾತಂತ್ರ್ಯ ಪೂರ್ವದ ಬೆಳಗಾವಿ ಕಾಂಗ್ರೆಸ್ ಕಾಲದ ಸುದ್ದಿ ಹೇಳತೀದಿ...ಬೆಳಗಾವಿ ಕಾಂಗ್ರೆಸ್ ಕಾಲಕ್ಕ ನಮ್ಮಪ್ಪನ ಮಾವ, ಅಂದರ ನಮ್ಮಜ್ಜ ಬೆಳಗಾವಿಯೊಳಗ ಇರತಿದ್ದನಂತ. ಕಾಂಗ್ರೆಸ್‌ನ ಸೇವಾ ಮಾಡಿಕೊಂಡು ಹೋಗಿ ನಮ್ಮಪ್ಪ ಎರಡನೇ ಸಲ ಅಳಿಯತನ ಮಾಡಿಸಿಕೊಂಡು ಬಂದಿದ್ದನಂತೆ. ಬರಬೇಕಾದರೆ ನೂಲು ಹುಣ್ಣಿಮೆಯೊಳಗಿನ ಬೆಳಿ ತಾಬಾಣ ಆಳೇತನದ ಉಡುಗೊರೆ ಬಾಕಿ ಬರಬೇಕಾಗಿತ್ತಂತೆ. ಅದನ್ನೆಲ್ಲ ವಸೂಲು ಮಾಡಿಕೊಂಡ ಬಂದನಂತ. ಆವಾಗ ನಮ್ಮಜ್ಜ ನಮ್ಮಪ್ಪಗ ದಶಮಗ್ರಹ ಅಂತ ಹೆಸರು ಇಟ್ಟನಂತ.

ರಂಜನಾ:— ಸರಿ, ನಿಮ್ಮಪ್ಪನ ಮಗಾ ನೀವು ಏಕಾದಶ ಗ್ರಹ! (ನಗುವಳು)

ರಂಗಣ್ಣ :— ಯಾಕ? ನಾನೇನು ಶನಿ, ಮಂಗಳರ ಹಾಂಗ ನಿಮ್ಮಪ್ಪನ ಕಾಡಿಸೀನೇನು? ದಶಮ ಗ್ರಹ ಅಂತ ಪೂರ್ವಗ್ರಹ ಪೀಡಿತಳಾಗಿ ಮಾತಾಡ ಬ್ಯಾಡಾ... ಹೋಗ್ಲಿ ಬಿಡು. Life is a compromise ಹೊಂದಾಣಿಕೆಯೇ ದಾಂಪತ್ಯ ರಥದ ಕೀಲ. ಏನಂತೀ? ಖರೆ ಹೇಳು ರಂಜನಾ, ನಾ ನಿನಗ ಏನು ಕಡಿಮೆ ಮಾಡೀನಿ? ಮನೆಯೊಳಗ ಗ್ಯಾಸ್ ಅದ, ಕುಕ್ಕರ್ ಅದ; dining table set ಮಾಡೀನಿ ಮನೆಯೊಳಗ ಹೀಟಿಂಗ್ ಸರ್ಕಿಟ್ ಅದ! ಬೇಕಾದರೆ ಒಬ್ಬ cook ಕೂಡ ನೇಮಿಸಿಕೊಳ್ಳೋಣು ಅಂದೆ. ನೀನ ಬ್ಯಾಡಾ ಅಂದಿ.

ರಂಜನಾ:— ಗೃಹಿಣೀ ಅಂದರ ಅನ್ನಪೂರ್ಣೆ ಅಂತ ಹೇಳತಾರ. ಅನ್ನಪೂರ್ಣೆಯ ಸವಟಿನ ರುಚಿ ಅಡುಗೆಯವಳ ಕೈಗೆ ಬಂದೀತೇನು?

ರಂಗಣ್ಣ :— ಆದರ ಇತ್ತಿತ್ತಲಾಗ ಅಡಿಗೀ ಮಾಡಲಿಕ್ಕೇ ಬೇಸರ ಅಂತ ಹೇಳಿ ತಲೆ ಸುತ್ತತದ ಅಂತ ಸುತ್ತಿ ಸುತ್ತಿಗೊಂಡು ಮಲಗಿಕೊಂಡು ಬಿಡತೀದಿ. ಕಳೆದ ಒಂದು ವಾರದಿಂದ ಮುಂಜಾನೆ ಖಾನಾವಳಿ ಡಬ್ಬಿ, ಸಂಜೆ ಮುಂದ ಮಸಾಲೆ ದೋಸೆ!...ಅನ್ನಪೂರ್ಣೆಗೆ ಅಚಾರಿ ಆದರ ಅನ್ನಬ್ರಹ್ಮ ತೃಪ್ತ ಆಗೋದು ಹ್ಯಾಂಗ ?

ರಂಜನಾ:— (Laughing romanticlly) ಗಂಡಸರು ಮಹಾ ಪೆದ್ದರಪ್ಪ! ಅಲ್ರೀ ತಲೆ ಸುತ್ತುತದ ಅಂತ ನಾನು ಹಾಸಿಗೆ ಹಿಡಿದದ್ದರ ಕಾರಣಾನೇ ಊಹಿಸವಲ್ರಿ, ಅಲ್ಲ?

ರಂಗಣ್ಣ :— ನಾನು ಎಂ. ಬಿ. ಬಿ. ಎಸ್. ಮಾಡಿಲ್ಲ; ಎಂ. ಎ. ಬಿಟಿ. ಮಾಡೀನಿ

ರಂಜನಾ:— ಎಂ.ಎ.ಬಿಟಿ ಮಾಡಿದರ Common sence ಕೂಡ ಇರಬಾರದೇನು? ...ಅಲ್ರಿ ಮೊನ್ನೆ ಕುಟುಂಬ ಯೋಜನಾದ ಕವಿ ಸಮ್ಮೇಳನದೊಳಗ ಭಾಗವಹಿಸಿದ್ದಿರಲ್ಲ?...ಮುಂದಿನ ಮಗು ಈಗಲ್ಲ, ಮೂರರ ನಂತರ ಬ್ರೇಕಿಲ್ಲ.—(brake) ನಿಮ್ಮದೇ ಜೋಕು. !...ಅರ್ಥ ಆಯಿತೇನು? ಮುಂದಿನ ಮಗೂ—

ರಂಗಣ್ಣ :— ಓಹೋಹೋ ಹಿಂಗೇನು ಸಮಾಚಾರ?... congraatulations!

ರಂಜನಾ:— ಯಾರಿಗೆ?

ರಂಗಣ್ಣ :— ನಿನಗ!



ರಂಜನಾ:— ಅಲ್ಲಾ ನಿಮಗ. (ಇಬ್ಬರೂ ನಗುವರು)
ರಂಜನಾ:— ಈಗ ಖುಷಿ ಆತಿಲ್ಲೊ? ಹಾಂಗಾರ ಶ್ವಶುರಗೃಹ ಪ್ರಯಾಣ!
ರಂಗಣ್ಣ:— ಆಮಂತ್ರಣ ಇಲ್ಲದ ಶಕ್ಯ ಇಲ್ಲ.
ರಂಜನಾ:— Life is a compromise ಮರೆತು ಬಿಟ್ರೇನು ನೀವೇ ಹೇಳಿ? (ಇಬ್ಬರಿಗೂ ನಗೆ) ಅಲ್ಲಾ ಆಮಂತ್ರಣ ಇಲ್ಲದೆ ಕವಿ ಸಮ್ಮೇಳನ ದೊಳಗ ಭಾಗ ತಗೊಳಲಿಕ್ಕೆ ಬರತದ. ಮಗಳು ತವರುಮನೆಗೆ, ಅಳಿಯ ಮಾವನ ಮನೇಗೆ ಹೋಗಲಿಕ್ಕೆ ಆಮಂತ್ರಣ ಬೇಕೇನು?...ಹೇಳಿದನಲ್ಲ, ನಮ್ಮವ್ವಗ ಈ ಸಂತೋಷದ ಸುದ್ದಿ ಹೇಳಬೇಕಾಗೇದ.
ರಂಗಣ್ಣ:— ಯಾಕ ಪತ್ರಾ ಹಾಕಿದರ ನಡೆಯೋದಿಲ್ಲೇನು? ಅಂಚೆ ಇಲಾಖೆಯ ಸಂಪೇನೂ ಇಲ್ಲಾ.
ರಂಜನಾ:— ಇಲ್ಲಾ ಇಂತಹ ಸುದ್ದಿ ಖುದ್ದಾಗಿಯೇ ಹೇಳಬೇಕಾಗತದ... ಅನ್ರಿ ಒಮ್ಮೆ.
ರಂಗಣ್ಣ:— ಹಾಂಗಾರ ರೀತಿ ಪ್ರಕಾರ ಅಳೇತನ ನಡೀಬೇಕು ನೋಡು. ಯೋಗ ಸ್ವಾಗತ, ಸರಬರಾಜು, ಆಗಬೇಕು. ಬರೋ ಮುಂದ ಉಡುಗೊರೆ ಉಚ್ಚಾಯ ಎಲ್ಲಾ ನಡೀಬೇಕು. ಸ್ವಲ್ಪ ಏನಾದರೂ ಹೆಚ್ಚು ಕಡಿಮೆ ಆದರ—
ರಂಜನಾ:— ನಿಮ್ಮ ಮಾವಂದಿರಿಗ Memo ಕೊಡೀರಂತ...(ಇಬ್ಬರೂ ನಗುವರು.)

II

(ಕಾಮದಾರ ಗಂಗಾಧರರಾಯರ ಮನೆ. ಆಳು ಮನುಷ್ಯ ಕಮ್ ಆಫೀಸ್ ಶಿಪಾಯಿ ಬೆಲ್ ಹಾಕುತ್ತಾನೆ. ಗಂಗಾಬಾಯಿ ಬಾಗಿಲು ತೆಗೆಯುತ್ತಾಳೆ—)
ಗಂಗಾಬಾಯಿ:— ಇದೇನು ಹಣ್ಣಿನ ಬುಟ್ಟಿ ಯಾಕೊ ಸೋಮಣ್ಣ?
ಸೋಮಣ್ಣ:— ಅಲ್ರಿಯವ್ವಾ ಡೊಣ್ಣ ಮೆಣಸಿನಕಾಯಿ ಬುಟ್ಟಿರಿ ಯವ್ವಾ.
ಗಂಗಾಬಾಯಿ:— ಪ್ಯಾಟ್ಯಾಗ ಮತ್ತೊಂದು ಪಲ್ಯಾನ ಇದ್ದಿದ್ದಿಲ್ಲೇನು?
ಸೋಮಣ್ಣ:— ಕೊಂಡುತಂದ ಕಾಯಿಪಲ್ಲ್ಯ ಅಲ್ರಿಯವ್ವಾ ಇದು. ಕಾಮದಾರ ಸಾಹೇಬರ ನಜರಾಣಾ ಪಲ್ಯಾ, ಡೊಣ್ಣಗಾಯಿ.
ಗಂಗಾಬಾಯಿ:— ಇದೇನೋ ಬರೇ ಡೊಣ್ಣಮೆಣಸಿನಕಾಯಿ. ನಜರಾಣಾ ಯಾರು ಕೊಟ್ಟಾರ?
ಸೋಮಣ್ಣ:— ಇರ್ಲಿ ಬಿಡ್ರಿ, ಹಬ್ಬಕ್ಕೆ ಡೊಣ್ಣಗಾಯಿನ ಮಾಡಿಬಿಡ್ರಿ—ಪಲ್ಯಾದ ಹಬ್ಬಾ ಅಂತ ಹೇಳಿ.
ಗಂಗಾಬಾಯಿ:— ಪಲ್ಯಾದ ಹಬ್ಬದಕಿಂತಾ ಮೊದಲು ನೀರು ತುಂಬೂ ಹಬ್ಬ ಆಗಬೇಕಲ್ಲ! ನೀರು ತುಂಬು ಹಬ್ಬಾ, ನಳಾನೇ ಬಂದಿಲ್ಲ. ಒಂದು ಹತ್ತು ಕೊಡಾ ಭಾವೀ ನೀರಾರೇ ಜಗ್ಗಿ ಹಾಕು.
ಸೋಮಣ್ಣ:— ಹೂನ್ರಿಯವ್ವಾ!... ನೀರಿನ ಹಬ್ಬ ಇಲ್ಲದೇ ಬರೇ ಪಲ್ಯಾದ ಹಬ್ಬ ಅಂತ ಡೊಣ್ಣಗಾಯಿ ಪಲ್ಯ ತಿಂದರ ಅಳಿಯಂದಿರು ಮಕ್ಕಳಿಗೆ ಕಣ್ಣಾಗ ಮೂಗಿನ್ಯಾಗ ನೀರು ತುಂಬೂ ಹಬ್ಬ ಆದೀತು.
ಗಂಗಾಬಾಯಿ:— ಹಾಂಗಾದರೆ ಅಳಿಯಂದಿರಿಗೆ ತಾರು ಕಳಿಸ್ಯಾರೊ ಇಲ್ಲೊ?
ಸೋಮಣ್ಣ:— ಅದೇನೊ ಗೊತ್ತಿಲ್ಲ ಬಿಡ್ರಿಯವ್ವಾ—

(ಗಂಗಾಧರ ರಾಯರ ಪ್ರವೇಶ)

ಗಂಗಾಧರ:— ಯೋ ಸ್ವಾಮ್ಯಾ, ಕಚೇರಿ ಪಟ್ಟಾ ಕೊಳಾಗ ಹಾಕಿಕೊಂಡುಕಾಯಿ ಪಲ್ಯಾ ತರಬ್ಯಾಡಾ ಅಂತಾ ಎಷ್ಟು ಸಾರೆ ಹೇಳಬೇಕಲೆ ನಿನಗ?
ಸೋಮ:— ನಾ ಕಾಯಿಪಲ್ಯ ಅಂತ ಎಲ್ಲೆ ಹೇಳ್ತೇನ್ರಿ? ಕೇಳಿದವರಿಗೆಲ್ಲ ಕಚೇರಿ ಕಾಗದ ಪತ್ರಾ ಅಂತ ಡಂಗರಾ ಹೊಡೀತೀನಿ.
ಗಂಗಾಧರ:— ಮೂರ್ಖಾ, ಮೂರ್ಖನ ಶಂದಾದ! ಅಲ್ಲೊ ಧಡಧಡೀತ ಡೊಣ್ಣ ಮೆಣಸಿನಕಾಯಿ ಬುಟ್ಟಿ ತಲೀಮ್ಯಾಲೆ ಇಟ್ಟುಕೊಂಡು ಬರತೀದಿ ಕಾಣಸೂದಿಲ್ಲ? ಬುಟ್ಯಾಗ ಕಾಗದ ಪತ್ರ ಇಟಗೊಂಡು ಬರತಾರೇನಲೆ?
ಸೋಮಣ್ಣ:— ಮತ್ತ ವೇಷ್ಟಪೇಪರ್ ಬುಟ್ಯಾಗ ಕಾಗದ ಪತ್ರಾ ಹಾಕತೀರಲ್ರಿ?
ಗಂಗಾಧರ:— ಮನೀಗೆ ವೇಸ್ಟ್ ಪೇಪರ್ ತರತಾರೊ, ಸಹಿ ಆಗೂ ಕಾಗದಾ ತರ ತಾರೊ? ಮೂರ್ಖಾ, ಮೂರ್ಖಾ— ಆ ಪಟ್ಟಾ ತಗದಿಟ್ಟು ಸಡೀ ಮೊದಲ.
ಸೋಮಣ್ಣ:— ಮತ್ತೆ ಡೊಣ್ಣಗಾಯಿ ಬುಟ್ಟಿ ಒಡದಿಟ್ಟು ಹೋಗ್ಲೇನ್ರಿ?
ಗಂಗಾಧರ:— ಬ್ಯಾಡಾ ಅದನ್ಯಾಕ ತಗೀತಿದಿ. ಇರ್ಲಿ ಹೊರಟು ಹೋಗು ನೀನು.
ಗಂಗಾಬಾಯಿ:— ಹೊರಟೇನು ಹೋಗತಾನ, ಮನ್ಯಾಗ ನೀರಿಲ್ಲಾ. ಒಂದು ಹತ್ತು ಕೊಡಾ ಭಾವಿ ನೀರು ಜಗ್ಗಿ ಹಾಕು ಅಂತ ಹೇಳಿನಿ ಬಳಿಗೆ.
ಗಂಗಾಧರ:— ಪಟ್ಟಾ ತಗದಿಟ್ಟು ನೀರು ಜಗ್ಗು ಅಂತ ಹೇಳು. ಅವಾ ಏನು ಸಾಹೇಬರ ಹುಕುಂ ಅಂತ ಪಟ್ಟಾ ಹಾಕ್ಕೊಂಡ ನೀರು ಜಗ್ಗೋ ಪೈಕಿ. ಅದ ಹೊತ್ತಿನಾಗ ಯಾರಾದರೂ ಅಂವಾ ಪಟ್ಟಾ ಹಾಕ್ಕೊಂಡದ್ದು ನೋಡಿ ಫೋಟೋ ತಗಿಯೋ ಆಟಾ.
ಗಂಗಾಬಾಯಿ:— ಅಷ್ಟು ತಿಳಿಯೋದಿಲ್ಲೇನು ಅವಗ, ನೀವು... ನೋಡ್ರಿ, ಅಲ್ಲೆ ಪಟ್ಟಾ ತಗದು ಗೂಟಕ್ಕೆ ಹಾಕ್ಯಾನ.
ಗಂಗಾಧರ:— ಅದಕ್ಕೆ ಹೇಳೋದು ಹೆಂಗಸರ ಬುದ್ಧಿ, ಶಿಪಾಯರ ಬುದ್ಧಿ ಮೊಳಕಾಲು ಕೆಳಗ ಅಂತ... ಯೋ ಸ್ವಾಮ್ಯಾ, ಬಂದವರಿಗೆಲ್ಲಾ ನಿನ್ನ ನಿಶಾನಿ ಹಾಂಗ ಕಾಣಬೇಕೇನದು—ಭ್ರಷ್ಟಾಚಾರದ ಬಾವುಟ ಅಂತ. ಗೂಟದಿಂದ ತಗದು ಕಚೇರಿ ಕಪಾಟನ್ಯಾಗ ಇಡು. ಅದನ್ನ.
ಸೋಮಣ್ಣ:— ಹೂನ್ರಿಯಪ್ಪಾ... ಈ ಡೊಣ್ಣಗಾಯಿನೂ ಕಚೇರಿ ಕಪಾಟನ್ಯಾಗ ಇಡತೇನ್ರಿ. ಯಾಕಂದರ ಇವೂ ಕಚೇರಿ ಕಾಯಿಪಲ್ಯಾ—
ಗಂಗಾಧರ:— ನಿನ್ನ ತಲ್ಯಾಗೂ ಬರೇ ಡೊಣ್ಣಗಾಯಿನ ತುಂಬಿಧಾಂಗ ಕಾಣತದ. ನೋಡು. ಮೂರ್ಖಾ, ಶತಮೂರ್ಖಾ.

(ಗಂಗಾಬಾಯಿ ಕೊಡತಂದು ಅಪ್ಪಳಿಸಿ—)

ಗಂಗಾಬಾಯಿ:— ಹೋಗು ನಿನ್ನಷ್ಟಕ್ಕೆ ನೀನು ಹಿತ್ತಲಕಡೆ ಇಟ್ಟ ಪೀಪಾಯಿ ಒಂದು ತುಂಬಿಹೋಗು.
ಸೋಮಣ್ಣ:— ಆಗಲ್ರಿಯವ್ವಾ.
ಗಂಗಾಬಾಯಿ:— ಮತ್ತ ಹಾಂಗಿಂದಹಾಂಗ ಹೋಗಬ್ಯಾಡಾ. ಚಹಾಕ ಇಟ್ಟೇನಿ ತಗೊಂಡು ಹೋಗು.
ಸೋಮಣ್ಣ:— ಹೂನ್ರಿ. ಅದನ್ನ ಹ್ಯಾಂಗ ಮರೀತೀನಿ ಬಿಡ್ರಿ. ಅದು ಮಾಮೂಲಿದು. (ಹೋಗುವನು.)
ಗಂಗಾಬಾಯಿ:— ಅಲ್ಲಾ ಮಗಳೂ ಅಳಿಯಂದಿರೂ ಬರತಾರೊ ಇಲ್ಲೊ ಮತ್ತ. ಇನ್ನೂ ತನಕಾ ಸುಳಿವೇ ಇಲ್ಲಾ. ತಾರಾರ ಕೊಟ್ಟೇರೊ ಇಲ್ಲೊ?
ಗಂಗಾಧರ:— ಹೂಂ, ಕೊಟ್ಟೇನಿ.
ಗಂಗಾಬಾಯಿ:— ಮತ್ಯಾಕ ಇನ್ನೂ ಬರಲಿಲ್ಲಾ? ಬೇಕಾದಷ್ಟು ಬಸ್ಸುಗಾಡಿ... ಏನು ಭಾಳ ದೂರನೂ ಅಲ್ಲಾ. ಇನ್ನೂ ಯಾಕ ಬರಲಿಲ್ಲ ಹಂಗಾದರ?
ಗಂಗಾಧರ:— ಇಲ್ಲಾ ಅವರು ಬರೋದಿಲ್ಲ.
ಗಂಗಾಬಾಯಿ:— (ಗಾಬರಿಯಿಂದ)ಅಯ್ಯ ಯಾಕಂತ? ತಾರಿಗೆ ಮತ್ತ ಉತ್ತರ ಬಂತೇನು ಇಷ್ಟರಾಗ?
ಗಂಗಾಧರ:— ಇಲ್ಲಾ.
ಗಂಗಾಬಾಯಿ:— ಮತ್ತ? ಹೇಳತೀರಲ್ಲಾ ಧಡಧಡೀತ—ಬರೂದಿಲ್ಲಾಂತ.
ಗಂಗಾಧರ:— ಹೌದು ಬರೂದಿಲ್ಲ.
ಗಂಗಾಬಾಯಿ:— ಅಂದರ? ಮತ್ತ ಬರಬೇಡಾ ಅಂತೇನಾರ ತಿಳಿಸೀರೇನು?
ಗಂಗಾಧರ:— ಹೌದು.
ಗಂಗಾಬಾಯಿ:— (ಕಣ್ಣೀರು ತಂದು) ಹ್ಯಾಂಗ ಹೇಳತಾರ ನೋಡು ಸ್ವಷ್ಟಾಗಿ. ಏನಾತು ನಿಮಗ ಒಂದು ಅಳಿಯತನ ಮಾಡಿಸಲಿಕ್ಕೆ? ನೀವು ಐದ್ವೈದು ವರ್ಷ ಅಳೇತನ ಮಾಡಿಸಿಕೊಂಡಿರಿ. ಐದ್ವೈದು ವರ್ಷಾನೂ ಉಡುಗೋರಿ ಉಚ್ಚಾಯಾ ಆತು. ಈಗ ಇರುವಾಕೀನ ಒಬ್ಬಾಕಿ ಮಗಳು. ಒಂದು ಅಳಿಯತನ ಮಾಡಿಸೋವಷ್ಟು ಹೂವತ್ತು ಇಲ್ಲ ನಿಮಗ? ಮದಿವಿಗಾದ್ರೂ ಏನು ಮಹಾ ಖರ್ಚು ಮಾಡೀರಿ ನೀವು. ಹುಡುಗ ನೌಕರಿ ಹಚ್ಚಿಕೊಡತೀನಿ ಅಂತಾ ಆಶಾ ತೋರಿಸಿ ವರದಕ್ಷಿಣೇನ ಕ್ಯಾ ಹೊಡಿಸಿದಿರಿ. ಪಾಪ, ಆಕಳಂಥಾ ಅಳಿಯ ಎಲ್ಲಾದಕ್ಕೂ ಸುಮ್ಮನ ಇದ್ದಾ ಅಂತ ನಿಮ್ಮದೇ ಮೇಲುಗೈ ಆತು.
ಗಂಗಾಧರ:— ಚಹಾ ಆತೇನು?
ಗಂಗಾಬಾಯಿ:— ಹ್ಯಾಂಗ ಶಾಂತರೀತಿಯಿಂದ ಕೇಳತಾರ ನೋಡು ಚಹಾ ಆತೇನು ಅಂತ. ನನ್ನ ಮನಸ್ಸು ಡಿಕಾಕ್ಶನ್ ಕುದ್ದಹಾಂಗ ಕುದೀಲಿಕ್ಕೆ ಹತ್ತೇದ. ಹಬ್ಬಕ್ಕೆ ಅಳಿಯಂದಿರು ಮಕ್ಕಳು ಬರತಾರ ಅಂತ ನಾಯೆಷ್ಟೊಂದು ಉಮೇದಿ ಹಚ್ಚಿಕೊಂಡಿದ್ದೆ. ಎಲ್ಲಾ ಹೊಳ್ಯಾಗ ದುಬಾರಿ ಹುಣಿಸೀ ಹಣ್ಣು ತೊಳೆಧಾಂಗ ಆತು.... ನಮ್ಮದೇ ಖೊಟ್ಟಿ ನಶೀಬ. ನೀವೇನು ಮಾಡೀರಿ ಅದಕ್ಕ.
ಗಂಗಾಧರ:— ಹೌದ, ಹೌದ ಸುರುವ ನೋಡು ಕಣ್ಣಾಗ ಗಂಗಾಯಮುನಾ!... ಮೊದಲ ಚಹಾನಾರ ಮಾಡಿಕೊಂಡು ಬಾ. ನಿನ್ನದೂ ಒಂದು ಕಪ್ಪು ಇಲ್ಲೇ ತಗೊಂಡು ಬಾ. ಇಬ್ಬರೂ ಕೂಡೇ ಚಹಾ ಕುಡಿಯೋಣ.
ಗಂಗಾಬಾಯಿ:— ಏನು ಬ್ಯಾಡಾ. ನಮ್ಮ ಹಣೇ ಬರಹದಾಗ ಬರೇ ಕಣ್ಣೀರು ಕುಡಿಯೋದದ... (ದುಃಖ ಉಕ್ಕಿಬರುವದು.)
ಗಂಗಾಧರ:— ಯಾಕ ಏನು ಕಡಿಮೆ ಆಗೇದ ನಿನಗ? ಮೊನ್ನೆ ಬದಾಮಿ ಇನ್ನ ಪೆಕ್ಶನ್‌ಗೆ ಹೋದಾಗ ಇಳಕಲ್ಲ ಸೀರೆ ತಂದುಕೊಟ್ಟೆ; ಅಲ್ಲದ್ಯ ಜರದ ಖೋಡಿ ಖಣಾ!

ಅಂದ ಮುನಿಶಾಬಾದಕ್ಕೆ ಹೋದಾಗ ಡಬ್ಬಿಗಟ್ಟಲೆ ಸಕ್ಕರಿ! ಗದಿಗ್ಗೆ ಅಂತ ಇನಸ್ಪೆಕ್ಷನ್‌ಗೆ ಹೋದರೆ ಧಡೇಗಟ್ಲೆ ಬಿಂಕದ ಕಟ್ಟ ಬೆಣ್ಣೆ! ಬೆಟಗೇರಿ ಬದ್ನಿಕಾಯಿ ಬುಟ್ಟಿ! ಏನು ಕಡಿಮೆ ಆಗೇದ ನಿನಗ? ಈಗ ನೋಡಿದ್ರಾ, ಬುಟ್ಟಿ ತುಂಬ ದೊಣ್ಣ ಮೆಣಸಿನ ಕಾಯಿ–

ಗಂಗಾಬಾಯಿ:— ಏನು ಮಾಡಂದಿರಿ ಬುಟ್ಟಿಗಟ್ಟಲೆ ದೊಣ್ಣಮೆಣಸಿನಕಾಯಿ ತಗೊಂಡು ಎದ್ಯಾಗ ಉರಿ ಬೀಳೋ ಹಾಂಗ?

ಗಂಗಾಧರ:— ಯಾಕ ಕಾಳಜೀ ಮಾಡತೀ. ನಿಪ್ಪಾಣಿಯಿಂದ ಒಂದು ಪೆಂಟಿ ಬೆಲ್ಲಾ ಹೇಳೀನಿ.

ಗಂಗಾಬಾಯಿ:— ಪೆಂಟಿ ಬೆಲ್ಲಾ ಏನು ತಲೀಮ್ಯಾಲೆ ಹೇರಿಕೊಂಡು ಹೋಗ ಬೇಕೇನು? ನಿಮ್ಮ ಪ್ರೀತಿ ಅಂದರ ಬರೇ ಕಚೇರಿ ಸಾಮಾನದಾಗ ಇರತದ ಕಾಣಸತದ. ಹೊಟ್ಟೀಲಿ ಹುಟ್ಟಿದ ಮಗಳ್ನ. ಮಾಡಿಕೊಂಡ ಅಳಿಯನ್ನ ದೀಪಾವಳಿ ಹಬ್ಬಕ್ಕೆ ಕರೆಯಿ ಸರಿ ಅಂದರ ಬರಬ್ಯಾಡಾ ಅಂತ ತಿಳಿಸೀನಿ ಅಂತೀರಿ!

ಗಂಗಾಧರ:— ಹೌದು ಏನು ಮಾಡತಾರ ಅವರು ಬಂದು?

ಗಂಗಾಬಾಯಿ:— ಎಂಥಾ ಕಟುಕರು ಇದ್ದೀರಿ ನೀವು? ಬಂದು ಏನು ಮಾಡ ತಾರಂತ! ಇಷ್ಟೆಲ್ಲಾ ಗಳಿಸಿದ್ದು, ಇಷ್ಟೆಲ್ಲಾ ಉಳಿಸಿದ್ದು ಹೊಟ್ಟೆಯ ಕರುಳಿಗೆ ಅಲ್ಲದಿದ್ದರ ಇನ್ಯಾರಿಗೆ?

(ಸೋಮಣ್ಣ ನೀರು ತುಂಬುವದನ್ನು ಮುಗಿಸಿ ಬರುವನು.)

ಗಂಗಾಧರ:— ನೀರು ತುಂಬೋದು ಆತೇನೋ ಸ್ವಾಮ್ಯಾ?

ಸೋಮಣ್ಣ :— ಆತರೀ ಸಾಯೇಬರ!

ಗಂಗಾಧರ:— ಹಾಂಗಾರ ನೀ ಮನೀಗೆ ಹೋಗಿ ಊಟಮಾಡಿಕೊಂಡು ಬಂದು ಬಿಡು. ಇವೊತ್ತ ರಾತ್ರಿ ಟೂರ್ ಮ್ಯಾಲೆ ಹೋಗಬೇಕು.

ಗಂಗಾಬಾಯಿ:— ಅಯ್ಯ ಹಣೇಬಾರ! ನಿಮಗೇನು ತಲೆಗಿಲಿ ಕೆಟ್ಟಿಲ್ಲ– ಹೌದಲ್ಲೊ?

ಸೋಮಣ್ಣ :— ಹಾಂಗೇನಿಲ್ರಿ ಬಾಯಾರ–

ಗಂಗಾಧರ:— ಏ, ನಿನ್ನ ತಲಿ ಅಲ್ಲಾ ನನ್ನ ತಲಿ ಕೆಟ್ಟಿಲ್ಲ ಹೌದಲ್ಲೊ ಅಂತ ಕೇಳಿದರು ನಿಮ್ಮ ಬಾಯಿ ಅವರು.

ಸೋಮಣ್ಣ :— ಹಾಂಗೇನಿಲ್ರೀ ಅಂತ ಹೇಳಿದೆನಲ್ರಿ, ಮತ್ತ?

ಗಂಗಾಧರ:— ಮೂರ್ಖಾ, ಶತ ಮೂರ್ಖಾ–ಹೋಗು ಲಗೂನ ಊಟ ಮಾಡಿ ಮನ್ಯಾಗ ಹೇಳಿ ಬಾ, ಟೂರ ಮ್ಯಾಲೆ ಹೋಗಬೇಕು ಅಂತಾ.

ಸೋಮಣ್ಣ :— ಯಪ್ಪಾ, ಮನ್ಯಾಗ ಹಬ್ಬರೀ–

ಗಂಗಾಬಾಯಿ:— ಸೋಡ್ರಿ ಅಂಥವನಿಗೆ ಸುದ್ದಾ ಗೊತ್ತಾಗತದ ಹಬ್ಬಾ ಮಾಡ ಬೇಕು ಅಂತ

ಗಂಗಾಧರ:— ಯಾಕೋ ಮನ್ಯಾಗೇನು ಅಳೀತನಾ ಮಾಡಿಸ್ತೀ ಏನು?

ಸೋಮಣ್ಣ :— ಹೂನ್ರಿ. ಮಗಳು ಚೊಚ್ಚಿಲ ಬಸುರಿ. ಅಳ್ಯಾ ಮಗಳೂ ಬಂದಾರ್ರಿ ಮನೀಗೆ… ಮತ್ತ ಹಬ್ಬದಾಗ ಎರಡು ದಿವಸ ರಜಾ…

ಗಂಗಾಧರ:— ರಜಾ ಅಲ್ಲ ಸಜಾ!… ಸರಕಾರೀ ಕೆಲಸ ಇದು ಗೊತ್ತೈತೆ? ರಜಾ ಅಂತ ರಜಾ.

ಸೋಮಣ್ಣ :— ಅಗ್ಗಿರಿ ಬರ್ರೀನಿ. ಮನ್ಯಾಗ ಹೇಳಿ ಬಿಟ್ಟು ಬರತೀನ್ರಿ… ಒಂದು ಐದು ರೂಪಾಯಿ

ಗಂಗಾಧರ:— ಹೂಂ. ತಗೋ tour advance ಅಂತ!

ಸೋಮಣ್ಣ :— ಹೂನ್ರಿ… ಹಾಗಾರ. ಗಡಾನ ಆಟಿ ಮನ್ಯಾಗ ಹೇಳಿಬರ ತೀನ್ರಿ… (ಹೋಗುವನು)

ಗಂಗಾಬಾಯಿ:— ಆಳು ಮನ್ಯರಿಗೆ ಸುದ್ದಾ ಅಳೀತನ ಮಾಡಿಸಬೇಕು ಅನ್ನೋ ಹೌಸು.

ಗಂಗಾಧರ:— ಹೌದು. ಖರೇ ಅದ. ಅವರದೇನು ಜೀವ ಅಲ್ಲ, ಜೀವನ ಅಲ್ಲ? ಅವರಿಗೇನು ಉಮೇದಿ ಇರೂದಿಲ್ಲ?

ಗಂಗಾಬಾಯಿ:— ನಿಮ್ಮದೇನು ಜೀವ, ಜೀವನ ಅಲ್ಲೇನು? ನನಗ್ಯಾಕ ಸಿಟ್ಟು ತರಸತೀರಿ ಮತ್ತ?

ಗಂಗಾಧರ:— ಸಿಟ್ಟು ಬರಲಿಕ್ಕೆ ಕಾರಣೇನು ಅಂತೀನಿ.

ಗಂಗಾಬಾಯಿ:— ಹೀಂಗ ಕೇಳಿ ಮತ್ತಷ್ಟು ಸಿಟ್ಟು ತರಿಸಬೇಡ್ರಿ.

ಗಂಗಾಧರ:— ನೋಡು ದಿವಸಕಾಲ ಈಗ ಬದಲಿ ಆಗ್ಯಾವ. ಮಾವನ ಮನೀಗೆ ಅಳಿಯತನಕ್ಕ ಬರೋದರ ಬದಲು ಅಳಿಯನ ಮನೀಗೆ ಮಾವತನಕೆ ಹೋದರೆ ತಪ್ಪೇನು?

ಗಂಗಾಬಾಯಿ:—ಅಂದರ ?

ಗಂಗಾಧರ:— ಅಳಿಯಂದಿರಲ್ಲಿಗೇ ನಾವು ಹೋಗೋದು. ಅಲ್ಲೇ ದೀಪಾವಳಿ ಹಬ್ಬ.

ಗಂಗಾಬಾಯಿ:— ಮತ್ತ ನಿಮ್ಮ ಟೂರು, ನಿಮ್ಮ ಇನ್ಸಪೆಕ್ಷನ್ನು?

ಗಂಗಾಧರ:— ಹೌದು. ಟೂರು, ಇನ್ಸಪೆಕ್ಷನ್ ಎಲ್ಲಾನೂ ಅಲ್ಲೆ.

ಗಂಗಾಬಾಯಿ:— ಒಡಪು ಕಟ್ಟಿ ಮಾತಾಡೋದು ಸಾಕು ಮಾಡ್ರಿ. ಮನಸ್ಸಿನಾಗ ಏನು ಬೇತ ಮಾಡೀರಿ ಅದನ್ನಾರ ಸ್ವಚ್ಛ ಹೇಳಿ ಬಿಡ್ರಿ.

ಗಂಗಾಧರ:— ಈ ಕಾಮದಾರ ಗಂಗಾಧರನ ಒಂದೊಂದು ಟೂರ್ ಅಂದರೆ ಒಂದೊಂದು ಅಳೀತನ ಇರತದ, ಸರಕಾರೀ ಅಳೀತನ! ಹೋದಲ್ಲೆಲ್ಲ ಟಿ.ಬಿ.

ಗಂಗಾಬಾಯಿ:— ಅಯ್ಯ ನನ್ನ ಹಣೇ ಬರಹ! ಟಿ.ಬಿ. ಅಂತ ಟಿ.ಬಿ. ಇಲ್ಲಿಲ್ಲಿದ್ದು ಅಪೇಕ್ಷಾ ನಿಮ್ಮದು.

ಗಂಗಾಧರ:— ಟಿ.ಬಿ. ಅಂದರ ಬ್ಯಾನಿ ಅಲ್ಲ, ಬಂಗಲೇ! Travellers Bungalow! ನಿಮ್ಮಂಥವರು ಅವಶ್ಯ ಅಪಾರ್ಥ ಮಾಡತೀರಿ ಅಂತ ಹೇಳಿ ಅವಕ್ಕ ಈಗ ಟಿ.ಬಿ. ಹೋಗಿ ಐ.ಬಿ. ಅಂತ ಕರೀತಾರ. ಐ.ಬಿ. ಅಂದರ ಅದೂ ಯಾವ ಬ್ಯಾನಿ ಹೆಸರೂ ಅಲ್ಲ Inspection Bungalow. ಅಂತಹ ಒಂದು ಬಂಗ್ಲೇದಾಗ ವಾಸ. ಸಮೀಚೀನ ಗ್ರಾಸ! ಆ ಫರ್ನೀಚರು, ಆ ಪ್ಯಾನು, ಆ ಸುಪ್ಪತ್ತಿಗಿ, ಆ ಮೊಜಾಯಿಕ್ ಫರಸೀ ನೆಲ ಆ ನಿರ್ಮಲವಾದ ಕಕ್ಕಸ ಮನೆ!… 'ಶ್ವಶುರ ಗೃಹವಾಸಂ ಸ್ವರ್ಗತುಲ್ಯಂ ನರಾಣಾಂ ಅಂತ ಹೇಳೋ ಹಾಂಗ ಇಂತಹ ಸ್ವರ್ಗ ಸದೃಶವಾದ ಬಂಗ್ಲೇದೊಳಗ ಮೂರು ದಿವಸ ಇಳಕೊಳೋದು. ಸರಕಾರೀ ಇನ್‌ಸ್ಪೆಕ್ಷನ್‌ನ್ನು ಸರಕಾರೀ ಅಳೀತನ! ಮಗಳ್ನ, ಅಳಿಯನ್ನ ಅಲ್ಲೇ ಕರಿಸಿ–ಕೊಳೋದು. ಎಲ್ಲಾರಿಗೂ ಅಳೀತನ! ಯಾಕಂದರ ಅಳಿಯನ ಆಫೀಸಿನ ಇನ್‌ಸ್ಪೆಕ್ಷನ್! ಕಾಗದ ಪತ್ರ ಎಲ್ಲಾ ಬಂಗ್ಲೇಕ್ಕ ತಗೊಂಡ ಬಾ ಅಂತ ಅಳಿಯಂದಿರಿಗೆ ಹೇಳಕಳಿಸೀನಿ. ಅವರಿಗೂ ಇನ್‌ಸ್ಪೆಕ್ಷನ್ ಸಲುವಾಗಿ ಮೂರು ದಿವಸ ಅಲ್ಲೇ ಇರಲಿಕ್ಕೆ ಬರತದ. ಅವರಿಗೂ ಒಂದು ಡಬಲ್ ರೂಮು, ನಮಗೂ ಒಂದು ಡಬಲ್ ರೂಮು! ಹ್ಯಾಂಗದ ಅಳೀತನ!

ಗಂಗಾಬಾಯಿ:— ಹಂಗಾದರ ಹಾಸಿಗೆ ಹುಪ್ಪಡಿ ಎಲ್ಲಾ ಕಟ್ಟಿಕೊಳ್ಳಲ್ಯಾ?



ಗಂಗಾಧರ:— ಏನೂ ಬ್ಯಾಡಾ ಕೈ ಬೀಸಿಗೋತ ಹೋಗೋದು. ಎಲ್ಲಾ ಅಲ್ಲೇ ತಯಾರ ಇರತದ.

ಗಂಗಾಬಾಯಿ:— ಪತ್ರ, ಉಂಡಿ, ಕರ್ಜಿಕಾಯಿನಾರ ಒಂದಿಷ್ಟು ಕಟ್ಟಿಕೊಂಡು ಬರತೀನಿ.

ಗಂಗಾಧರ:— ಒಂದೂ ಬ್ಯಾಡಾ. ಎಲ್ಲಾ ಅಲ್ಲೇ ತಯಾರ ಇರತದ. ಎಲ್ಲಾ ಸರಬರಾಜು ಮಾಡತಾರ.

III

(ತಾಯಿ ಮಗಳು ಇಬ್ಬರೂ ಕಿಲಕಿಲ ನಗುತ್ತಿರುವರು)

ಗಂಗಾಬಾಯಿ:— ಬಿಡು ನಮ್ಮವ್ವಾ ಒಳೇ ಸಂತೋಷದ ಸುದ್ದಿ ಹೇಳಿದಿ. ಖರೇ ದೀಪಾವಳಿಯ ಸಡಗರ ಅನಿಸಿತು... ಏನು ಛಂದ ಅದನ ರಂಜನಾ ಈ ಬಂಗಲೆ!... ಅದಕ್ಕ ಇವರು ವಾರದಾಗ ಮೂರು ಸಾರೆ ಟೂರ್ ಟೂರ್ ಅಂತಾರ!

ರಂಜನಾ:— ಮೇಕಪ್ ಮಾಡಿಕೊಳಲಿಕ್ಕೆ ಕನಡಿ ಎಂಥಾದ್ದು ಅದ ನೋಡು. ಮುಂದ ಕೂಡಲಿಕ್ಕೆ ಸುದ್ಧಾ ಸಣ್ಣ ಕುಶನ್ನು. ನೀನೂ ಹೆರಳು ಮಾರಿ ಇದೇ ಕನಡಿ ಮುಂದ ಮುಗಸಿದಿ ಹೌದಲ್ಲೊ?

ಗಂಗಾಬಾಯಿ:— ಆದರ ರಂಜನಾ, ಕಕ್ಕಸಮನಿ ಯಾವುದು ಬಚ್ಚಲುಮನಿ ಯಾವದು ಇದೇ ತಿಳಿಯೂದಿಲ್ಲ.

ರಂಜನಾ:— ಎರಡೂ ಒಂದೇ ಕಡೆಗೇ ಅವ್ವನ ಅವ್ವ!

ಗಂಗಾಬಾಯಿ:— ಥೂ ನಮ್ಮವ್ವ ಇದೊಂದು ಏನ ಅಸಹ್ಯ ಮಾಡ್ಯಾರ! ಈ ಬಚ್ಚಲದಾಗ ಮಡೀಲೆ ಹ್ಯಾಂಗ ಮೈ ತೊಳಕೋಬೇಕು?

ರಂಜನಾ— ಸ್ವಚ್ಛತಾನೇ ಇಲ್ಲಿಯ ಮಡಿ ನೋಡವ್ವಾ. ಕಕ್ಕಸು ಮನಿ ಸುದ್ಧಾ ಮಡೀಲೆ ಇರತದ.

ಗಂಗಾಬಾಯಿ:— ಹೋಗ ನಮ್ಮವ್ವ ನಿನ್ನದೂ ಒಂದು ಮಾತss!...ನೋಡವ ಉಂಡೀ ಅವಲಕ್ಕಿನಾರ ತರತೀನಿ ಅಂದರ ಅದೂ ಬ್ಯಾಡಾ ಅಂದರು. ಯಾವುದಕ್ಕೂ ಕತ್ತಿ ಹಾಯುಗೊಡಲಿಲ್ಲ.

ರಂಜನಾ:— ಉಂಡೀ ಅವಲಕ್ಕಿ ಯಾತಕ್ಕಬೇಕು-ಬ್ರೆಡ್ಡು ಆಮ್ಲೇಟ್ ಸಿಗತಿರಲಿಕ್ಕೆ.

ಗಂಗಾಬಾಯಿ:— ಥೂ ಹುಚ್ಚುಖೋಡಿ... (ಇಬ್ಬರೂ ನಗುವರು.)

(ಅದೇ ಬಂಗ್ಲೆಯ ಆಫೀಸ ರೂಮಿನಲ್ಲಿ)

ಗಂಗಾಧರ:— (ಬೆಲ್ ಬಾರಿಸುವನು) ಯೇ ಸ್ವಾಮ್ಯಾss

ಸೋಮಣ್ಣ:— ಯಪ್ಪಾ ಬಂದಿನ್ರಿ.

ಗಂಗಾಧರ:— ಪಟ್ಕಾ ಹಾಕ್ಕೊಂಡು ಬಾರಲೆ ಇದೇನು ಮನೀ ಮಾಡಿಯೇನು?

ಸೋಮಣ್ಣ:— ಹೂನ್ರಿಯಪ್ಪ!

ಗಂಗಾಧರ:— ಹಾಂಗ ಆ ರಂಗರಾಯರಿಗೆ ಬರಲಿಕ್ಕೆ ಹೇಳು. '72–73'ರ despatch ರಜಿಸ್ಟರ ತಗೊಂಡು ಬರಲಿಕ್ಕೆ ಹೇಳು.

ಸೋಮಣ್ಣ:— ಮತ್ತ ತಲಾಠೀ "ಸಭಾ ಯಾವಾಗ" ಅಂತ ಕೇಳಾಕ ಬಂದಾರ್ರೀ. ನಿಮಗೇನೊ ಪಾರ್ಟಿ ಇಟ್ಟಾರಂತರೀ—

ಗಂಗಾಧರ:— ಪಾರ್ಟೀ? ಎಲ್ಲಿ ಪಾರ್ಟೀಲೇ?... ತಲಾಠೀ ಸಭಾ ಹೋಗಿ ಲಾಠೀ ಸಭಾ ಆದೀತು,- ಹಿಂದಾಗಡ! ನಾನು ಹೊರಗಡೆ ಯಾವುದೂ ಪಾರ್ಟಿ ತಗೊಳು ದಿಲ್ಲಾಂತ ಗೊತ್ತಿಲ್ಲೇನು ಅವರಿಗೆ?

ಸೋಮಣ್ಣ:— ಹೌದರಿ ನಾನೂ ಹೇಳೀನಿ. ಅವರು ಹೊರಗಡೆ ಪಾರ್ಟಿ ತಗೊಳು ದಿಲ್ಲ, ಒಳಗಡೇನ ತಗೊಂತಾರೆ ಅಂತ.

ಗಂಗಾಧರ:— ಅದೇನು. ಅದನ್ನ ಹೆಣ್ಣುಮಕ್ಕಳ ಮುಂದ ಹೇಳಹೋಗು ಒಳಗಡೆ. ಇಲ್ಲಿ ಆಫೀಸ್‌ರೂಮಿನಾಗ ಇವೆಲ್ಲಾ ಮಾತು ತಗೀಬಾರದು ಅಂತ ತಿಳಿಯೂದಿಲ್ಲೇನಲೆ ನಿನಗ?...

ಸೋಮಣ್ಣ:— ಯಪ್ಪಾ. ಅಲ್ಲಲ್ಲ ಸಾಹೇಬರ–ರಂಗರಾವ್ ಬಂದಾರ್ರೀ. ರಜಿಸ್ತರೂ ತಂದಾರ.

ಗಂಗಾಧರ:— despatch Register ತಂದೀರಿ?

ರಂಗಣ್ಣ:— Yes sir.

ಗಂಗಾಧರ:— February 27, 1973! ಈ ತಾರೀಖಿಗೆ ಎಷ್ಟು ಪೇಪರ್ಸ ಡಿಸ್‌ಪೋಜ್ ಆಗ್ಯಾವ?

ರಂಗಣ್ಣ:— ಮೂವತ್ತು ಮೂರು.

ಗಂಗಾಧರ:— ಒಳೇದು... June 9, 1973. ಎಷ್ಟು disposals?

ರಂಗಣ್ಣ:— ಸುಮ್ಮನೆ ಪುಟಗಳನ್ನು ತೆರೆಯುವನು...

ಗಂಗಾಧರ:— ಹೂಂ. quick ಬೇಗ ತೆಗೆಯಿರಿ.

ರಂಗಣ್ಣ:— Yes Sir!... Sir ಅವೊತ್ತು Second Saturdy!

ಗಂಗಾಧರ:— Disposals ಎಷ್ಟು ಅಂತ ನಾನು ಕೇಳಿದ್ದು!

ರಂಗಣ್ಣ:— ಅವೊತ್ತು ಸೂಟಿ!

ಗಂಗಾಧರ:— Second saturday ಒಂದು ಹೊತ್ತು ಒಬ್ಬ despticher duty ಮ್ಯಾಲೆ ಇರಬೇಕು ಅಂತ instructon ಅದನೊ ಇಲ್ಲೊ?

ರಂಗಣ್ಣ:— ಆದರ–

ಗಂಗಾಧರ:— ನನಗ Instructions ಅವನೊ ಇಲ್ಲೊ ಇಷ್ಟು ಬೇಕು!

ರಂಗಣ್ಣ:— Yes, sir.

ಗಂಗಾಧರ:— ಏನು Yes sir? instructions ಅವನೊ ಇಲ್ಲೊ ಅಂತ ನಾ ಕೇಳಿದ್ದು.

ರಂಗಣ್ಣ:— Yes sir ಅವರಿ!...

ಗಂಗಾಧರ:— ಹೂಂ!... well you can go.

IV

(ಟಿ.ಬಿ.ಯ ರಂಗಣ್ಣ ಇರುವ ಡಬಲ್ ರೂಮಿನಲ್ಲಿ–)

ರಂಜನಾ:— (ಕಿಲಕಿಲನೆ ನಗುತ್ತ) ದೀಪಾವಳಿ ಬರೆಯುತಿದೆ
ತಾರಾವಳಿ ಕರೆಯುತಿದೆ.
ಪ್ರೇಮಲಹರಿಲಹರಿಯಾಗಿ
ಜೀವನ ಝರಿ ಹರಿಯುತಿದೆ॥

(ಅರ್ಧ ಕಳ ದನಿಯಲ್ಲಿ ಹಾಡುತ್ತಿರುವಳು)

ರಂಗಣ್ಣ:— ಬಹಳ ಖುಷಿ ಆಗೇದಲ್ಲ ನಿನಗ?

ರಂಜನಾ:— ನಿಮಗ?

ರಂಗಣ್ಣ:— ನಿಮ್ಮಪ್ಪ ನಾ ಅಳಿಯಾ ಅನ್ನೋದನ್ನ ಮರೆತು ಬಿಟ್ಟ ಹಾಂಗ ಕಾಣತದ!...

(ಇತ್ತ ಅದೇ ಟಿ.ಬಿ.ಯ ಗಂಗಾಧರರಾಯರ ಡಬಲ್ ರೂಮಿನಲ್ಲಿ)

ಗಂಗಾಧರ:— ಆಫೀಸ್ ಕೆಲಸದೊಳಗ ಅಳಿಯ ಅಲ್ಲಾ Subordinte officer! ಹೆಣ್ಣು ಕೊಟ್ಟ ಮಾವ ಅಲ್ಲ–ಬಾಸ್–ಉ!

ಗಂಗಾಬಾಯಿ:— ಆದರೇನಾಯಿತು ಪಾಪ, ಎಲ್ಲಾರ ಮುಂದೂ ಹೀಂಗ ಜಬರಿಸಿ ಮಾತಾಡತಾರ ಏನು?

ಗಂಗಾಧರ:— ಹಾಂಗ ಮಾಡಲಿಕ್ಕೇ ಬೇಕಾಗತದ...

ಗಂಗಾಬಾಯಿ: ಸಾಕು ಹೋಗ್ರಿ.

ಗಂಗಾಧರ:— ಈಗ ಅದಕ್ಕ ಏನು ಮಾಡಂದಿ?

ಗಂಗಾಬಾಯಿ:— ಒಂದು ಛಲೋ ಉಡುಗೊರೆ ಮಾಡ್ರಿ... ರಂಜನಾಗ ಛಲೋ ಒಂದು ಹಸಿರು ಸಿಲ್ಕ ಸೀರೆ ಉಡಿಸಬೇಕು.

ಗಂಗಾಧರ:— ಆಗಲಿ ಮಾರಾಯಳ ಆಗಲಿ!

(ರಂಗಣ್ಣನ ರೂಮು ಬಾಗಿಲು ತಟ್ಟುವ ಶಬ್ದ)

ಗಂಗಾಧರ:— May I come in?... ಅಲ್ಲಾ May we come in?

ರಂಜನಾ:— (ನಗುವಳು)

ರಂಗಣ್ಣ:— ಒಳಗ ಬನ್ರಿ.

ಗಂಗಾಧರ:— ಇದು Pocket Size ಟ್ರಾನ್ಸಿಸ್ಟರ್! ಅಳಿಯತನದ ಉಡುಗೊರೆ.

ಗಂಗಾಬಾಯಿ:— ಇದು ನಿನಗ ಹಸಿರು ಸಿಲ್ಕ ಸೀರೆ. ಹಸಿರು ಬ್ಲೌಜ್‌ಪೀಸು.

ರಂಗಣ್ಣ:— Thauk you! ಈ ಟ್ರಾನ್ಸಿಸ್ಟರಿಗೆ ಎಷ್ಟು ಬಿತ್ತು

ರಂಜನಾ:— ಸೀರೆಗೆ ಎಷ್ಟು ಬಿತ್ತವ್ವಾ?

ಇಬ್ಬರು:— ಏನೂ ಬಿದ್ದಿಲ್ಲ! ಎಲ್ಲಾ ಸರಕಾರೀ ಅಳಿಯತನ!

(ನಗುವರು, ರಂಗಣ್ಣ, ರಂಜನಾ ಕೂಡ ಅದೇ ನಗೆಯಲ್ಲಿ ಬೆರೆಯುವರು.)


ಆಗಮನ
ಇಲ್ನೋಡು ಅಳಿಯ
ದೇವರ್ದ ಕಾಗದ
ದೀಪಾವಳಿಗೆ ಬರ್ತಾರಂತೆ
ಅಳಿಯನ ಆಫೀಸರರನ್ನು ಕಂಡು
ರಜ ಸಿಗದಹಾಗೆ ಮಾಡಿ ಬರದಂತೆ
ಮಾಡುವೆ. ಹೇಗಿದೆ ನನ್ನ ಐಡಿಯಾ!
ಬಂದೆ! ಬಂದೆ! ಬಂದೆ!

ರಾಜ್ಯೋದಯದ ದಿನ

ಇಂದು ರಾಜ್ಯೋದಯದ ಶುಭದಿನ
ವೆಂದು ಮೋದದಿ ನಲಿಯುವಾ
ಇಂದು ಸರ್ವೋದಯದ ಮಂತ್ರವ
ನೊಂದೆ ಮನದಲಿ ಪಠಿಸುವಾ
ಹಾಲುಂಜೇನಿನ ಹೊಳೆಯು ಹರಿಸುತ
ಬಾಳುಗೊಳ್ಳುತ ಸುಖಿಸುವಾ
ಸೋಲು ಗೆಲವುಗಳಲ್ಲಿ ಚಿತ್ತದ
ತೋಲ ತಪ್ಪದೆ ನುಗ್ಗುವಾ
ಒಂದುಗೂಡಿದ ನಾಡನೆಂದಿಗು
ಒಂದೆ ಮನದಲಿ ಕಟ್ಟುವಾ
ಸಂದ ನಾಡಿನ ಕೀರ್ತಿ ಪ್ರಭೆಯು-
ನ್ನಿಂದು ನಾವ್ ಪ್ರಜ್ವಲಿಸುವಾ
ನಾಡು ಪುಣ್ಯದ ಬೀಡು ಕಲಿಗಳ
ಗೂಡು ಕಾಯಕದಾಗರಾ
ಪಾಡು ಧನಧಾನ್ಯಾದಿ ಸಂಪದ
ನೀಡಿ ತೋಷಿಸುವಾಕರಾ
ರನ್ನ ಕನ್ನಡ ನಾಡೊಳೆಮ್ಮಯ
ಚನ್ನಬಾಳಿದು ಬೆಳಗಲಿ
ಹೊನ್ನ ಹೊಳೆ ಮತ್ತೊಮ್ಮೆ ಕರೆಸುವ
ಘನ್ನ ಚೇತನ ಬೆಳಗಲಿ

ವ್ಯಕ್ತಿ —
ಯಾರಿಗೆ ಬೇಕಾಗೇದ ನಿನ್ ಕವಿತಾ
ಇದ್ದರ ಒಂದು ರೊಟ್ಟಿ ತಾ
ಒಂದು ಚರಿಗಿ ನೀರ ತತಾ
ಅಂತ ನಮ್ಮ ನಾಡಿನ ಜನತಾ
ಅರ್ಧಕ್ಕರ್ಧ ಕೂಗತಾ
ಇರುವಾಗ ಎಲ್ಲಿ ಬಂತು
ನಿನ್ನ ರಾಜ್ಯೋತ್ಸವ?
ಭಾಷಣಗಳ ಉತ್ಸವ
ಮೆರಗಿನ ದೀಪೋತ್ಸವ
ಭೂರಿ ಭೋಜನದ ಉತ್ಸವ
ಏನ್ ತಣಸೀತು
ಅರೆಹೊಟ್ಟೆಯವರ
ಹೊಟ್ಟೆಯೊಳಗಿನ ಡೊಂಬರಾಟ!
ಅನ್ನದೇವರು ಪಾತ್ರ
ಬಂದರ ಸುಸೂತ್ರ
ಸಾಗೀತು ಅವರ ಜೀವನ
ಆದೀತು ಬಾಳು ಹಸನ
ಎಲ್ಲಿ ನಡದದ, ಇವರ
ಹೊಟ್ಟೆ ತುಂಬಲಿಕ್ಕೆ ಕಾಯಕ
ಸರಕಾರದ ದುಡ್ಡ ಸೋರಿ
ಹೋಗತದ ತಳತನಕ
ಆದರ ಇಲ್ಲ, ಬರೂದೇ
ಇಲ್ಲ, ಬಡವರತನಕ.
ಡುಮ್ಮ ಹೊಟ್ಟೆ ಇನ್ನಷ್ಟು
ಡುಮ್ಮ ಮಾಡಿಕೊಳ್ಳೊ ಕಾಯಕ
ನಡೆದದ ನಡದದ ನಿರಂತರ
ಇವರಿಗೆಲ್ಲಿ ಬೈಗೂ ಬೆಳದಿನ ಅಂತರ
ಇವರಿಗೆಲ್ಲಿ ವಿಧಿನಿಷೇಧದ ಬೆಂಕರ
ಏರಿಹೋದ ನಿಚ್ಚಣಿಕೆ
ರೆಕ್ಕಾಡಿಸಿ ಒದ್ದ ಬಿಟ್ಟು
ಆಕಾಶದಾಗಲ ಏಣಿಕಿ
ಮಾಡೂ ಮನಸ್ಸಿಟ್ಟು
ಕೈಚಾಚಿ ಹವಣಿಸಿದರ
ಕೆಳಗ ಬಾಗಿ ನೋಡದಿದ್ದರ
ಧಡಂ ಅಂತ ನೆಲಕ್ಕುರುಳೂದು ಎಷ್ಟೊತ್ತು!
'ಮೀಸಿ ಮಣ್ಣಾಗಲಿಲ್ಲ' ಅಂದರ ಅಷ್ಟೇ ಹೋತು
ಬಿದ್ದದ್ದು ನೋಡೂದಿಲ್ಲ ಜನ ಅಷ್ಟೊತ್ತು
ಮ್ಯಾಲೆ ಏರಿದರೂ ನೆಲದ
ಮ್ಯಾಲೆ ಕಾಲು ಭದ್ರ ಇರಬೇಕು
ಕಟ್ಟಿಗೊಂಡವರ್ನ ಮರತು
ಬಿಟ್ಟೋಡೋದು ಕೆಟ್ಟ ಅನಸಬೇಕು
ಈಸಬೇಕು, ಅವರ್ನ ಕಟಗೊಂಡು
ಸಾಸ ಬೇಕು, ಅವರ್ನ ಎತಗೊಂಡು

ದಡ ಕಾಣಿಸಲಿಕ್ಕೆ
ಬಾಳ ಬೆಳಗಿಸಲಿಕ್ಕೆ
ಕೊಟ್ಟದ್ದು ತನಗೆ
ಬಚ್ಚಿಟ್ಟದ್ದು ಪರರಿಗೆ
ಅಂತ ಹೇಳಲಿಲ್ಲ ಸರ್ವಜ್ಞ ?
ಬಾಚಿದ್ದು ತನಗ
ಬೈತಿಟ್ಟದ್ದೂ ತನಗs
ಅಂತಾನಲ್ಲ ಇಂದಿನ ಗರ್ವಜ್ಞ !
ಈ ಬುದ್ಧಿ ಹೋಗಬೇಕು ಹಾಳಾಗಿ
ಜನ ಬಾಳೂದು ಬಿಡಬೇಕು ಹೋಳಾಗಿ
ಒಂದು ಒಂದು ನಾವೆಲ್ಲ ಒಂದು
ಅನ್ನೂ ಬುದ್ಧಿ ಮೂಡಿದಾಗ
ನಿಂದು ನಿಂದು ಇದಲ್ಲ ನಿಂದು
ಅಂತ ಕಾಯಕ ಮಾಡಿದಾಗ
ನಾಡಿನ ಶಾಪ ತೊಲಗೀತು
ನಾಡವರ ಹೊಟ್ಟೆ ತುಂಬೀತು
ನಾಡಿನ ಬಾಳು ಬೆಳಗೀತು
ನಾಕೂ ನಿಟ್ಟಿನ ಜನ ಹೊಗಳೀತು,
ಆಗ, ಬೇಕಾದಾವು ನಿನ್ನ ಕವಿತಾ
ನಾ ಹೇಳಿದ್ದು ನಿನಗs, ತಿಳೀತ?
ಏನಾದರ ಬಾಳ ಬಂಗಾರಾದೀತು
ಅನ್ನೂ ಮಾತು ನಾಕು ಹೇಳಿದರ ಕೇಳೀತು,
ಉತ್ತರ – ನಿರುತ್ತರ
-ದ. ಅ. ಕೆರೂರ

ಬರಲೇ ಇಲ್ಲ

ತರುತ್ತೇನೆಂದವ ಬರಲೇ ಇಲ್ಲ.
ನೋಡು, ನಾವಿಲ್ಲಿ ಕಾಯ್ತುರೆತು ಕೂತರೆ ಸಾಕು.
ಇವನೋ,
ಮಾತುಮಾತಿನ ಸುಂದರ ರತ್ನಜಾಲ ಬೀಸಿ
ಹರಿಶ್ಚಂದ್ರ ಮುದ್ರೆಯಲಿ ಸಹಿ ಹಾಕಿ
ಹತ್ತು ಬಾರಿ ಶಪಥಮಾಡಿ ಹೋದವನು
ಬರಲೇ ಇಲ್ಲ,
ಇಲೆಕ್ಶನ್ನಿಗೊಮ್ಮೆ ಸಾವಿರ ಹಿತವಚನ ಹೇಳಿ,
ಮರೆತ ನಮಗಿದು ದುಸ್ವಪ್ನವೇನಲ್ಲ.
ಆದರೂ ತಡೆಯದ ತವಕ ಬಾರನೇ?
ಅಥವಾ ಬರುತ್ತಾ ಹಾದಿಗೆಟ್ಟನೇ?
ಇದ್ದ ಹಳೇ ಕರಿರಸ್ತೆಗೆ ಬಳದಾರಿ. ಇದಕ್ಕಾ
ಅಡ್ಡಗಲ್ಲಿ–ಗೂ ಅಡ್ಡಗಲ್ಲಿ. ನಾಪೆ ಜಾತಿ ಸಂಗಡ
ಒಗೆದೇರಿಸಿದ ಮಿಸ್ಸಾಯಿಲು ಗುಡ್ಡ. ಇದಿ ಇ ... ಇದ್ದ.
ನಮ್ಮ ನಿಮ್ಮದು ಬಿಡಿ, ಸಾಕ್ಷಾತ್ ಜೇಮ್ಸ್ ಬಾಂಡ–
ನಪ್ಪನೂ ಹಾರಿ ಮುರಕೊಂಡನೋ ಗದ್ದ,
ಅಂಥಲ್ಲಿ ಈ ಮೋಟುಗಾಲಿನ ಕುಬ್ಜ
ಲಂಘಿಸಿ ಬರುವದೆಂದರೆ!
ತರುತ್ತೇನೆಂದವ ಬರಲೇ ಇಲ್ಲ,
ಸಾಲದ್ದಕ್ಕೇ ತೊಂದರ ನೋಡಿ.
ಫಕ್ಕನೆ ಮುತ್ತಿ ಸುಲಿವ ತ್ರಿಕಾಲಸಂಚಾರಿ
ಕಳ್ಳ ಕಾಕ ಪಿಂಡಾರಿ
ಖಾಸ್ ಧರ್ಮಸಂಸ್ಥಾಪನಕ್ಕಿಳಿದ ಲಂಚಾವತಾರಿ
ಕಿವಿಮಂತ್ರ ಊದುವ ಸದಾಜಾಗ್ರತ ಫಿತೂರಿ
ಮನೆ ಹತ್ತಿರ ಕಿಮ್ಮುವ ಪಕ್ಷಾಂತರ ಪುನೀತ ಪುಢಾರಿ
ವಚನ ಬಹಾದ್ದೂರ ಚತುರ ವ್ಯವಹಾರಿ
ಎಳಕೊಂಡು ಹೋದರೋ ಮರುಳುಗೊಳಿಸಿದರೋ
ತರುತ್ತೇನೆಂದವ ಬರಲೇ ಇಲ್ಲ,
ಅಂತೆ ಅಂತೆಗಳ ಕಂತೆ ಬಿಚ್ಚಿದ್ದನೊಬ್ಬ
ತೇಗುವ ಸೋಮಾರಿ ಹೊಟ್ಟೆಡುಬ್ಬ,
ತರುವದಾದರೂ ಏನೆಂತ ತಲೆಕೆರೆದನಂತೆ
ಯಾವದೂ ಅನಿಶ್ಚಿತವೋ ಗೋಗರೆದನಂತೆ
ಬೋರಿಂಗ್ ಸಂತರ ಮಂತ್ರಾಕ್ಷತೆಗೆ ಹೋಗಿದನಂತೆ
ಬಂದ್‌ಬಹಾದ್ದೂರರ ಚಾಣಾಕ್ಷತೆಗೆ ಸೋತಿದ್ದನಂತೆ
ತುಂಬಿತುಳುಕುವ ಆಸ್ಪತ್ರೆಯಲ್ಲಿ ಇದ್ದನಂತೆ
ನಂಬಿತಡಕುವ ಆಶ್ರಮದಲ್ಲಿ ಬಿದ್ದನಂತೆ
ಪೊನೊರ್ೀ ಅಂಗಡಿಸುತ್ತ ಹಾರಾಡುತ್ತಿದ್ದನಂತೆ
ಸ್ಯಾಡ್‌ಬರ್ನ್ಸ್ ಯುವಕರು ಘೇರಾವಿಸಿದ್ದರಂತೆ,
ಅದು ಅಂತೆ ಇದು ಅಂತೆ ನೋಡಿ ಅಂತೂ
ತರುತ್ತೇನೆಂದವ ಬರಲೇ ಇಲ್ಲ,
ತುಂಪರೇನು ಸುಖ ತರದಿದ್ದರೇನು ದುಃಖ
ಈ ಮಿಸ್ಸಾಯಿಲು ರಾಕೆಟ್ಟುಗಳ ಕ್ರೀಡಾರಂಗದಲ್ಲಿ
ಡವಡವ ಬಡಿವ ಬಡ ಹೃದಯುದ್ದು ಯಾವ ಲೆಖ್ಖ ?
ಸಾವಿರ ಸಂಧಿಕೂಟದೊಗಟು ಮಾತಿನ ಮರೆಯ
ಸ್ಫೋಟದಿ ಸುಡುವ ಜೀವದ್ದು ಯಾವ ಲೆಖ್ಖ ?
ಅಸ್ಥಿ ಪುಡಿರಂಗೋಲೆ ಹಾಕಿ ತಾಂಡವಿಸುವ
ಪ್ರಚಂಡ ಚಂಡೇಶರ ಮಧ್ಯೆ
ಬಲಹೀನ ಬದುಕಿನದು ಯಾವ ಲೆಖ್ಖ ?
ಎಂದು ಕಿಚಿಸುತ್ತಾ
ಉಳಿಪಸೋ ಅಳಿವನೋ.
ತರುತ್ತೇನೆಂದವ ಬರಲೇ ಇಲ್ಲ
ಸ್ವಾಮಿ,
ಇಂದಿಗೂ ಬರಲೇ ಇಲ್ಲ.
– ಅರವಿಂದ ನಾಡಕರ್ಣಿ

ಅಸ್ವಸ್ಥೆ

ಕೃಷ್ಣಮೂರ್ತಿ ಕಿತ್ತೂರ

ಮಲಗಿಕೊಂಡ ಮಗಳನ್ನು ಕಂಡು ತುಂಗಕ್ಕ ನಿಟ್ಟುಸಿರುಬಿಟ್ಟರು. ಅವರಿಗೆ ಏನೂ ತೋಚದಂತಾಗಿತ್ತು.

ಹೌದು, ಇಂದಿಗೆ ಹದಿನೈದು ದಿನಗಳೇ ಸಮೀಪಿಸಿದುವು. ಅಂದು ಸಾಯಂಕಾಲ ನಾಲ್ಕು ಗಂಟೆಗೇ ಮಗಳು ಮನೆಗೆ ಬಂದಳು. ಬಂದಳೇನು, ಅವರು ಅವಳನ್ನು ಕರಕೊಂಡು ಬಂದರು. ಆಫೀಸಿನಲ್ಲಿ ಒಮ್ಮೆಲೇ ಜೋಲಿ ಹೋಗಿ ಬಿದ್ದುಬಿಟ್ಟಳಂತೆ! ಅವಳ ಸಹೋದ್ಯೋಗಿಗಳು ಕೂಡಲೇ ಅವಳನ್ನು ಉಪಚರಿಸಿ, ಕಾರಿನಲ್ಲಿ ಮನೆಗೆ ಕರೆತಂದಿದ್ದರು.... ಸಾಯಂಕಾಲ ಮನೆಗೆ ಬಂದಿದ್ದ ಡಾ. ದೇಸಾಯಿಯವರು ಅವಳನ್ನು ಪರೀಕ್ಷಿಸಿ ಗಾಬರಿಯಾಗುವಂಥದೇನೂ ಇಲ್ಲವೆಂದು ಹೇಳಿ, ಚುಚ್ಚುಮದ್ದು ಕೊಟ್ಟು ಹೋಗಿದ್ದರು. ಅವರು ಮುಂದೆ ಒಂದು ವಾರದವರೆಗೆ ದಿನಾಲೂ ಮನೆಗೆ ಬರುತ್ತಿದ್ದರು. ಆದರೆ ಶೈಲಾ ಎಂದಿನಂತೆ ಎದ್ದು ಓಡಾಡಲಿಲ್ಲ.

ಕೊನೆಗೆ ಮೆಡಿಕಲ್ ಕಾಲೇಜಿನ ತಜ್ಞರನ್ನು ಡಾ. ದೇಸಾಯಿಯವರೇ ಕರೆತಂದಿದ್ದರು. ಅರ್ಧಗಂಟೆಯವರೆಗೆ ಅವಳನ್ನು ಪರೀಕ್ಷಿಸಿದ ಅವರು ಕೂಡ ಗಾಬರಿಗೆ ಏನೂ ಕಾರಣವಿಲ್ಲವೆಂದೇ ಹೇಳಿ, ಒಂದು ಪುಟದ ಪ್ರಿಸ್ಕ್ರಿಪ್ಶನ್ ಬರೆದುಕೊಟ್ಟು ಹೋಗಿದ್ದರು.

ಶೈಲಾನ ತಂದೆ, ಅವರೂ ಹೀಗೇ ಆಫೀಸಿನಿಂದ ಬಂದು ಮಲಗಿದವರು ಏಳಲೇ ಇಲ್ಲ. ಆ ಚಿತ್ರ ತುಂಗಕ್ಕನ ಕಣ್ಣ ಮುಂದೆ ಕಟ್ಟಿದಂತಾಗಿ ಅವರ ಕಣ್ಣು ತೇವಗೊಳ್ಳುತ್ತಿದ್ದವು. ಕೇವಲ ಎಂಟೇ ದಿನ ಮಲಗಿದ್ದವರು. ಹಾಗೆ ಹೋಗಿಯೇ ಬಿಡಬಹುದೆಂದು ಅನ್ನಿಸಿರಲೇ ಇಲ್ಲ. ನಂತರ ಡಾಕ್ಟರರು ಹೃದಯಾಘಾತ ಎಂದರು. ಆದರೆ ಪತಿಯ ಮರಣ ತುಂಗಕ್ಕನಿಗೆ ನಿಜವಾಗಿಯೂ ಆಘಾತವನ್ನುಂಟು ಮಾಡಿತ್ತು. ಕೇವಲ 45 ವಯಸ್ಸಿಗೇ ಅವರು ಮರಣವನ್ನಪ್ಪಿದಾಗ ಇಡೀ ಕುಟುಂಬವೇ ಅನಾಥವಾಗಿತ್ತು. ಸುಖದಲ್ಲಿ ಬೆಳೆದ ಮೂರು ಮಕ್ಕಳನ್ನು ನಂತರ ಅವರು ಎರಡೇ ಎರಡು ಕೋಣೆಯ ಮನೆಯಲ್ಲಿ ಎಂಥ ಕಷ್ಟದಿಂದ ಬೆಳೆಸಿದ್ದರು!

ಹಿರಿಯ ಮಗಳೇ ಶೈಲಾ. ತುಂಬ ಜಾಣೆ. ಅಷ್ಟೇ ವಿವೇಕಿ. ಪಿ.ಯೂ.ಸಿ. ಪರೀಕ್ಷೆಯಲ್ಲಿ ಕೇಂದ್ರಕ್ಕೇ ಮೊದಲಿಗಳಾಗಿ ಪಾಸಾಗಿದ್ದರೂ, ಮುಂದೆ ಕಲಿಯುವ ವಿಚಾರವನ್ನು ಬಿಟ್ಟು, ಸ್ಥಳೀಯ ಎಲ್.ಐ.ಸಿ. ಯ ಡಿವ್ಹಿಜನಲ್ ಆಫೀಸಿನಲ್ಲಿ ಕ್ಲಾರ್ಕ ಎಂದು ಸೇರಿ, ಇಬ್ಬರೂ ತಮ್ಮಂದಿರನ್ನು ಓದಿಸಿದ್ದಳು. ಅವಳಲ್ಲಿ ಅಂಥ ತಾಳ್ಮೆ, ಧೈರ್ಯ ಮನೋಬಲ ಎಲ್ಲಿಂದ ಬಂದವೆಂದು ತಾಯಿಯೇ ಬೆರಗಾಗಿದ್ದರು.

ಈಗ ಮನೆತನ ಒಂದು ವ್ಯವಸ್ಥೆಗೆ ಬಂದಿತ್ತು. ಶೈಲಾಗೆ ಸೆಕ್ಶನ್ ಹೆಡ್ ಎಂದ ಪ್ರಮೋಶನ್ ದೊರೆತಿತ್ತು. ಕೈ ತುಂಬ ಸಂಬಳವೂ ಬರುತ್ತಿತ್ತು. ರಾಮು ಸುರತಕಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕನಾದರೆ, ಶಾಮ, ಎಂ.ಎಸ್.ಸಿ. ಮುಗಿಸಿದ ನಂತರ ಯಾವುದೋ ಶಿಷ್ಯವೃತ್ತಿ ಪಡೆದು ಅಮೇರಿಕಾಕ್ಕೆ ಹೋಗಿದ್ದಾನೆ.

ಆದರೆ ಇಬ್ಬರೂ ಹಟವಾದಿಗಳು. ತನಗೆ ಆ ಬಗ್ಗೆ ತುಂಬ ಅಸಮಾಧಾನವೂ ಇದೆ. ಅಕ್ಕನ ಲಗ್ನವಾಗದ ತಾವು ಮದುವೆಯನ್ನು ಆಗುವುದಿಲ್ಲವೆಂದು ಅವರ ಹಟ. ರಾಮನಿಗೆ ಆಗಲೇ ಮೂವತ್ತು ಮೀರಿತ್ತು. ಈಗಿನ ಹುಡುಗರ ಸ್ವಭಾವವೇ ಅರ್ಥವಾಗುವುದಿಲ್ಲ. ಒಂದು ರೀತಿ ಗಂಡು ಹುಡುಗರ ವಿಚಾರವೂ ಸರಿಯೇ. ತಮಗಾಗಿ ಇಷ್ಟೆಲ್ಲಾ ತ್ಯಾಗ ಮಾಡಿದ ಅಕ್ಕನ ಬಗ್ಗೆ ಅವರಿಗೆ ಅಪಾರವಾದ ಮಮತೆ ಇದೆ: ಇರಬೇಕಾದದ್ದೇ. ಆದರೆ ಆ ಮಮತೆ ಹೀಗೆ ಮದುವೆಗೇ ಅಡಿಯಾದರೆ?

ಆಗಲೇ ಮೂವತ್ತೈದು ಮೀರಿದ ಶೈಲಾಗೆ ಈ ಬಗ್ಗೆ ಏನೆಂದು ಕೇಳುವುದು? ಈಗ 10–15 ವರ್ಷಗಳ ಹಿಂದೆಯೇ ಆಗಿದ್ದರೆ ಅವಳ ಮದುವೆ ಸಹಜವಾಗಿ ಆಗಬಹುದಿತ್ತು. ಶೈಲಾ ಅಂಥ ಅಪ್ರತಿಮ ಸುಂದರಿಯಲ್ಲವಾದರೂ ತುಂಬ ಲಕ್ಷಣವಾದ ಅವಳಿಗೆ ವರ ಹುಡುಕುವುದು ಸಮಸ್ಯೆಯಾಗಬೇಕಾಗಿರಲಿಲ್ಲ. ಇದು ಆಗಿನ ಮಾತು. ಆದರೆ ಈಗ?

ಕಳೆದ ವರ್ಷ ಮೇ ತಿಂಗಳಲ್ಲಿ ರಾಮು ಮನೆಗೆ ಬಂದಾಗ ಶೈಲಾನ ಬಗ್ಗೆ ಒಂದೆರಡು ವರಗಳ ಸೂಚನೆ ದೊರೆತಿತ್ತು. ಒಬ್ಬ ಕೈತುಂಬ ಸಂಬಳ ತರುವ ದೊಡ್ಡ ಅಧಿಕಾರದಲ್ಲಿಯೇ ಇದ್ದವ. ಆದರೆ ಎರಡನೆಯ ವರ. ಮೊದಲ ಹೆಂಡತಿ ಮೂರು ಮಕ್ಕಳನ್ನು ಬಿಟ್ಟು ತೀರಿದ್ದಳು. ಇನ್ನೊಬ್ಬಾತ ಮೊದಲನೆಯ ವರನೇ. ಆದರೆ ಆತನ ನಡತೆಯ ಬಗ್ಗೆ ಅನೇಕ ಮಾತುಗಳು ಕೇಳಿಬಂದಿದ್ದುವು. ತಾಯಿ–ಮಗ ಇಬ್ಬರಿಗೂ ಒಪ್ಪಿಗೆಯಾಗಲಿಲ್ಲ. ಶೈಲಾನನ್ನು ಆ ಬಗ್ಗೆ ಕೇಳಲೇ ಇಲ್ಲ.

ಗೋಡೆಗಳ ಮೇಲಿನ ಹಲ್ಲಿ ಲೊಚಗುಟ್ಟಿತು.

ಕೃಷ್ಣ ಕೃಷ್ಣ ಎನ್ನುತ್ತ ತುಂಗಕ್ಕ ಮಗಳ ಕಡೆಗೆ ನೋಡಿದರು. ಅವಳು ಕಣ್ಣು ತೆರೆದೇ ಮಲಗಿದ್ದಳು. "ತುಸು ಕಾಫೀನಾದರೂ ಕುಡೀತೀಯಾ?" ಕೇಳಿದರವರು.

ಮಗಳು ಬೇಡ ಎಂದಳು. ಯಾವಾಗ ಕೇಳಿದರೂ ಬೇಡ ಎಂದೇ ಹೇಳುತ್ತಾಳೆ. ಏನಾದರೂ ಕುಡಿಯಬೇಕೆಂದರೆ ಅಸಾಧ್ಯವಾದ ಗಂಟಲು–ನೋವು. ಈಗ ಎಷ್ಟೋ ಗುಣ. ಮೊದಲು ತ್ರಾಸ ಮಾಡಿಕೊಂಡು ಕುಡಿದರೂ ಅದೆಲ್ಲ ವಾಂತಿಯಾಗಿ ಬಿಡುತ್ತಿತ್ತು. ಅದರಿಂದ ಮತ್ತಷ್ಟು ನಿಶ್ಶಕ್ತಿ.

ಅಂದು ಸಾಯಂಕಾಲ ಮನೆಗೆ ಬಂದ ಶೈಲಾನ ಚಿತ್ರ ಈಗಲೂ ಅವರ ಕಣ್ಣ ಮುಂದೆ ಕಟ್ಟಿದಂತಿದೆ. ಅವಳು ಪೂರ್ತಿ ಸೋತು ಹೋಗಿದ್ದಳು. ಅದೆಂಥ Weakness ಒಂದೇ ದಿನದಲ್ಲಿ! ಅವಳ ಜೊತೆಗೆ ಬಂದಿದ್ದ ಟೈಪಿಸ್ಟ್ ಪ್ರಭು ಹೇಳಿದ್ದರು. ಮುಂಜಾನೆಯಿಂದ ಎಂದಿನಂತೆ ಚೆನ್ನಾಗಿಯೇ ಇದ್ದವರು ತಮ್ಮ ಚೇಂಬರಿನಲ್ಲಿ ಒಮ್ಮೆಲೇ ಕುಸಿದಿದ್ದರು. ಅಲ್ಲೇ ನಿಂತಿದ್ದ ಪ್ಯೂನ ಶಿವರಾಮನೇ ಎಬ್ಬಿಸಿದ್ದ. ಸಾಹೇಬರೂ ಧಾವಿಸಿ ಬಂದಿದ್ದರು. ಅವರಿಗೆ ಒಮ್ಮೆಲೇ ಏನಾಯಿತೆಂದು ಯಾರಿಗೂ ತಿಳಿಯಲಿಲ್ಲ. ಎರಡು ನಿಮಿಷದ ನಂತರ ಕಣ್ತೆರೆದಿದ್ದಳು. ಸಾಹೇಬರು ಒತ್ತಾಯದಿಂದ ತುಸು ಕಾಫಿ ಕುಡಿಸಿದ್ದರು....

ಮನೆಗೆ ಬಂದ ಶೈಲಾ ಎಲ್ಲವನ್ನೂ ಕಾರಿಕೊಂಡು ಬಿಟ್ಟಿದ್ದಳು. ಏನೋ ಪಿತ್ತವಾಗಿರಬೇಕೆಂದೇ ಅವರು ಮೊದಲು ತಿಳಿದರು. ಡಾಕ್ಟರರೂ ಎರಡು ದಿನಗಳಲ್ಲಿ ಎಲ್ಲ ಸರಿ ಹೋಗುವದು. Over-work ದಿಂದ ಹಾಗಾಗಿದೆ ಎಂದಿದ್ದರು.

ಹೌದು, ಇತ್ತೀಚೆಗೆ ಶೈಲಾ ಆಫೀಸಿನಿಂದ ಬರುವಾಗ ತುಂಬ ಬಳಲಿರುವುದನ್ನು ತಾನೂ ಗಮನಿಸಿದ್ದೆ. ಮೊದಲಾದರೆ ಮನೆಗೆ ಬಂದು ತುಸು ತಿಂಡಿ ತಿಂದು ಕಾಫಿ ಕುಡಿದ ನಂತರ ಅವಳಲ್ಲಿ ಮತ್ತೆ ಚೈತನ್ಯ ತುಂಬುತ್ತಿತ್ತು. ರೇಡಿಯೋ ಹಚ್ಚಿಕೊಂಡು ತಾನೂ ಏನಾದರೂ ಗುಣುಗುಣಿಸುವಳು. ಏನಾದರೂ ಓದುವಳು. ಚಿಕ್ಕ ಪುಟ್ಟ ಮನೆಗೆಲಸ ಮಾಡುವಳು. ಇಲ್ಲವಾದರೆ ತನ್ನ ಜೊತೆಗೆ ಗುಡಿಗೋ ಕಾಯಿಪಲ್ಯದ ಪೇಟೆಗೋ ಹೊರಡುವಳು...ಈಗ? ಈಗ ಸುಮಾರು ಒಂದು ತಿಂಗಳಾಗಿರಬಹುದು. ಅವಳ ರೀತಿಯೇ ಭಿನ್ನವಾಗಿದೆ. ಮನೆಗೆ ಬರುವಾಗಲೇ ದಣಿದಿರುತ್ತಾಳೆ. ಯಾವುದರಲ್ಲೂ ಆಸಕ್ತಿಯನ್ನು ತೋರುವುದಿಲ್ಲ. ಹಾಗೇಕೆ ಎಂದು ಕೇಳಿದಾಗ "ಏನೋ ಬೇಸರ" ಎಂದಿದ್ದಳು. ಮತ್ತೊಮ್ಮೆ ಕೇಳಿದಾಗ ಎಂದೂ ತೋರದ ಸಿಡುಕು ಅವಳಲ್ಲಿ ಕಂಡಿತ್ತು. ಡಾಕ್ಟರರಿಗಾದರೂ ತೋರಿಸೋಣವೇ?–ಎಂದಾಗ ತನಗೇನಾಗಿದೆ ಎಂದು ತನ್ನ

ಶೈಲಾಗೆ ಇದ್ದಕ್ಕಿದ್ದಂತೇ ಗಂಟಲು ನೋವು; ಜ್ವರ.........
ಮಲಗಿಬಿಟ್ಟ ಅವಳನ್ನು ಸಮಾಧಾನಿಸುವ ತಾಯಿ. ಆಗಾಗ
ಬಂದು "ಹ್ಯಾಗಿದೆ" ಎಂದು ಕೇಳುತ್ತಿದ್ದ ಆಫೀಸರ್ ಶೆಣೈ
ಯಾರಿಗೂ ಗೊತ್ತಾಗಲಿಲ್ಲ–ಅವಳ ಅಸ್ವಾಸ್ಥ್ಯದ ಕಾರಣ...

ಮೇಲೇ ಹರಿಹಾಯ್ದಿದ್ದಳು. ನಂತರ ಪಾಪ, ಅವಳಿಗೇ ಕೆಡುಕೆನಿಸಿರಬೇಕು; ಬಿಕ್ಕಿಬಿಕ್ಕಿ ಅತ್ತಿದ್ದಳು! ತನ್ನ ಭಾವನೆಗಳನ್ನು ಹತ್ತಿಕ್ಕಿ ತಾನೇ ಅವಳನ್ನು ಸಮಾಧಾನ ಮಾಡಬೇಕಾಗಿತ್ತು....

ಈಗ ಏನು ಮಾಡಬೇಕೆಂಬುದೇ ತಿಳಿಯದಾಗಿದೆ. ಡಾಕ್ಟರರಿಗೂ ತಿಳಿಯದಂಥ ಬೇನೆ ಏನಿರಬಹುದು. ENT ಸ್ಪೆಶಾಲಿಸ್ಟರು ಎಲ್ಲವೂ ನಾರ್ಮಲ್ ಎಂದೇ ರಿಪೋರ್ಟ್ ಕೊಟ್ಟಿರುವರು. ಆದರೆ ಗಂಟಲು ನೋವು ಮಾತ್ರ ಕಡಿಮೆಯಾಗಲೊಲ್ಲದು. ಅವಳ ಬಿಳಿಚಿಕೊಂಡ ಮುಖವನ್ನು ಅವಳ ವಾಂತಿಯನ್ನು ನೆನೆದಾಗಲೆಲ್ಲ ಒಂದು ಅವ್ಯಕ್ತ ಭೀತಿಯಿಂದ ತುಂಗಕ್ಕನ ಮೈಯಲ್ಲಿ ಒಮ್ಮೊಮ್ಮೆ ನಡುಕ ಮಿಂಚಿಹೋಗಿತ್ತು! ಛೇ, ಹಾಗಿರಲಾರದು. ಅವರಿಗೆ ತಮ್ಮ ಮಗಳ ಮೇಲೆ ಪೂರ್ತಿ ವಿಶ್ವಾಸವಿದೆ. "ಅಂಥ ಕೆಟ್ಟ ವಿಚಾರವಾದರೂ ತನ್ನ ತಲೆಯಲ್ಲಿ ಯಾಕೆ ಬಂದಿತೋ!"

ಮಗಳ ಚಿಂತೆಯಿಂದ ತುಂಗಕ್ಕ ಕೂಡ ಇಳಿದು ಹೋಗಿದ್ದಾರೆ. ದೂರದಲ್ಲಿರುವ ರಾಮುನಿಗೆ ಸುಮ್ಮನೆ ಗಾಬರಿಯಾಗುವನೆಂದು ತಿಳಿಸಿರಲೂ ಇಲ್ಲ... ಇಷ್ಟಾಗಿ ಅವನು ಬಂದಾದರೂ ಏನು ಮಾಡಬಲ್ಲ? ದೇಸಾಯಿ ಡಾಕ್ಟರರೇನು ಕಡಿಮೆ ಮಾಡುತ್ತಿರುವರೇ? ಅವಳ ಆಫೀಸಿನ ಶಣೈ ಸಾಹೇಬರು, ಪಾಪ ಎಂಥ ಒಳ್ಳೆಯವರು! ಈ ಹದಿನೈದು ದಿನದಲ್ಲಿ ನಾಲ್ಕು



ಐದು ಸಲ ಬಂದು ವಿಚಾರಿಸಿಕೊಂಡು, ಧೈರ್ಯ ಹೇಳಿ ಹೋದರು.

ಶಣೈ ಸಾಹೇಬರ ನೆನಪಾಗುತ್ತಲೇ, ಅವರು ನಿನ್ನೆ ಬಂದಾಗ ತಮ್ಮ ವಿಶ್ವಾಸದ ಡಾಕ್ಟರರನ್ನು ಕರೆತರಲಾ-ಎಂದು ಕೇಳಿದ್ದು ನೆನಪಾಯಿತು. ಯಾರ ಕೈಗುಣದಿಂದಾದರೂ ಶೈಲಾ ಮೊದಲಿನಂತಾಗಬಾರದೇ? ದೇವಾ, ಇನ್ನೂ ಏನೇನು ಕಾಣಬೇಕೊ?

ತುಂಗಕ್ಕ ಗಡಿಯಾರದ ಕಡೆಗೆ ನೋಡಿದರು. ಆರು ಗಂಟೆಯಾಗುಲಿತ್ತು. ಶಣೈ ಸಾಹೇಬರು ಐದಕ್ಕೇ ಬರುತ್ತೇನೆ ಎಂದಿದ್ದರು. ಮರೆತರೋ ಏನೋ! ಇಲ್ಲ, ಹಾಗೆ ಮರೆಯುವವರಲ್ಲ ಅವರು. ಬೇರೆ ಏನಾದರೂ ಕೆಲಸ ಇದ್ದಿರಬಹುದು.

ಹೀಗೆ ಯೋಚಿಸುವಂತೆಯೇ ಹೊರಗೆ ಕಾರಿನ ಸಪ್ಪಳವಾಯಿತು. ಎದ್ದು ಹೋಗಿ ನೋಡುವಷ್ಟರಲ್ಲಿ ಶಣೈ ಸಾಹೇಬರು ಬೇರೊಬ್ಬರ ಜೊತೆಗೆ ಒಳಗೇ ಬಂದರು. ಬರುತ್ತಲೇ,

"ಕ್ಷಮಿಸಿ, ತುಸು ತಡವಾಯಿತು... ಇವರು ನನ್ನ ಮಿತ್ರರು. ಡಾ. ಮೂರ್ತಿ ಅಂತ. ತಮ್ಮ ವೃತ್ತಿಯಲ್ಲಿ ತುಂಬ ಗಟ್ಟಿಗರು." ಎಂದರು.

ತುಂಗಕ್ಕ ಇಬ್ಬರಿಗೂ ನಮಸ್ಕರಿಸಿ "ಬರ್ರಿ"ಎಂದರು.

ಶಣೈ ಸಾಹೇಬರು "ಏನು ನಿಮ್ಮ ಮಗಳು ಇಂದು ಹೇಗಿದ್ದಾರೆ?" ಎಂದು ಕೇಳಿದರು.

"...ಇದ್ದಾಳೆ, ನೀವೇ ನೋಡಿರಿ. ಬರ್ರಿ ಒಳಗೆ" ಎಂದು ಹೇಳಿ ಪಡಸಾಲೆಯಿಂದ ಅವರನ್ನು ಶೈಲಾನ ಕೋಣೆಗೆ ಕರೆ ತಂದರು.

ತನ್ನ ಬಾಸನನ್ನು ಕಂಡು ಶೈಲಾ ಮುಗುಳುನಗು ತಂದುಕೊಂಡು ಎದ್ದು ಕೂಡ್ರತೊಡಗಿದಳು.

"ಬೇಡ ಬೇಡ, ಮಲಗಿಕೊಂಡೇ ಇರ್ರಿ. ಆಯಾಸವೇಕೆ?" ಎಂದು ಡಾ. ಮೂರ್ತಿ ಹೇಳಿ, ಒಂದು ಖುರ್ಚಿಯನ್ನು ಶೈಲಾನ ಸಮೀಪಕ್ಕೆ ಎಳೆದುಕೊಂಡು ಕುಳಿತು, ಅವಳನ್ನು ನಿರೀಕ್ಷಿಸಿ,

"ಈಗೇನು ತೊಂದರೆ?" ಎನ್ನುತ್ತ ಅವಳ ಮುಂಗೈಯನ್ನು ಹಿಡಿದು ನಾಡಿಯ ಮಿಡಿತ ನೋಡತೊಡಗಿದರು.

ಶೈಲಾನ ಎದೆ ಹೊಡೆದುಕೊಳ್ಳತೊಡಗಿತ್ತು, ಮುಖದಲ್ಲಿ ಬೆವರು ಕಾಣಿಸಿಕೊಳ್ಳಲಾರಂಭಿಸಿತು. ಅವಳನ್ನು ಗಮನಿಸುತ್ತಿದ್ದ ಡಾಕ್ಟರರು,

"ಗಾಬರಿ ಯಾಕೆ? ನನಗೆ ನಿನಗಿಂತ ದೊಡ್ಡ ಮಗಳಿದ್ದಾಳಮ್ಮ" ಎಂದು ಮುಗುಳುನಗೆ ಬೀರಿದರು.

ಶೈಲಾ ಹಾಗೇನೂ ಗಾಬರಿಯಾಗಿರಲಿಲ್ಲ. ಶೈಲಾ ಅವರತ್ತ ನೋಡಿದಳು. ಡಾ. ಮೂರ್ತಿ ಎತ್ತರ ನಿಲುವಿನ ಆಜಾನುಬಾಹು ವ್ಯಕ್ತಿ. ಪುಷ್ಕಳವಾಗಿ ಬೆಳೆದಿರುವ ನರೆಗೂದಲನ್ನು ಹಣೆಯ ಎರಡೂ ಪಕ್ಕದಲ್ಲಿ ಹಿಂದಕ್ಕೆ ಬಾಚಿರುವ ತಲೆ. ತುಂಬ ವಿಶಾಲವಾದ ಹಣೆ. ಅಸಾಧಾರಣವಾದ ಆತ್ಮವಿಶ್ವಾಸವನ್ನು ಸೂಚಿಸುವ ಮುಖಚರ್ಯೆಯ ಅವರನ್ನು ಕಂಡು ಅವಳಲ್ಲಿ ಏನೋ ಒಂದು ಬಗೆಯ ವಿಶ್ವಾಸ ಉಂಟಾಗತೊಡಗಿತು... ಆದರೂ ಏನೋ ಅವ್ಯಕ್ತ ಭೀತಿ.

"ಹೂಂ. ಈಗ ನಿಮಗೇನಾಗುತ್ತದೆ? ಹೆಚ್ಚು ತೊಂದರೆ ಯಾವುದು? ಎಲ್ಲಾ ವಿವರವಾಗಿ ಹೇಳಿರಿ." ಎಂದು ಅವರು ಶೈಲಾನನ್ನು ಪರೀಕ್ಷಿಸತೊಡಗಿದರು.

ಹಾಗೆ, ಶೈಲಾನ ಗಂಟಲನ್ನು ಪರೀಕ್ಷಿಸಿದಾಗ ಡಾಕ್ಟರರಿಗೆ ಅಲ್ಲಿ ಅಂಥ ವಿಶೇಷ ಹೆಚ್ಚಿನ ತೊಂದರೆಯೇನೂ ಕಾಣಲಿಲ್ಲ. ಆದರೂ ಟಂಗ ಡಿಪ್ರೆಸರ್‌ದ ಸಹಾಯದಿಂದ ಗಂಟಲನ್ನು ಪರೀಕ್ಷಿಸುವಾಗ ಮಾತ್ರ ಅವಳು ನೋವು ಎಂದಿದ್ದಳು. ಶೈಲಾನ ಗಂಟಲು ನೋವಿನಲ್ಲಿ ವೈಚಿತ್ರ್ಯವಿತ್ತು. ನೀರು ಕುಡಿದರೆ, ಅಷ್ಟೇಕೆ ಉಗುಳು ಮುಕ್ಕಿದರೂ, ಅತೀವ ನೋವಾಗುತ್ತಿದ್ದರೂ ಆಹಾರ ಪದಾರ್ಥಗಳನ್ನು ತಿನ್ನುವಾಗ ಅವಳಿಗೆ ಅಷ್ಟು ನೋವಾಗುತ್ತಿರಲಿಲ್ಲ. ಈಗ ನಾಲ್ಕು ದಿನಗಳಿಂದ ವಾಂತಿ ಮಾತ್ರ ಕಡಿಮೆಯಾಗಿತ್ತು. ದಿನಕ್ಕೆ ಎರಡು ಗಂಟೆ ಕೂಡ ನಿದ್ರೆಯಾಗುತ್ತಿರಲಿಲ್ಲ. ಅವಳು ಅಶಕ್ತಳಾಗಿದ್ದಳೆಂಬುದನ್ನು ಯಾರೂ ಗುರುತಿಸಬಹುದಿತ್ತು. ಆಗಾಗ ಅವಳ ಮುಖದಲ್ಲಿ ಅಲ್ಲಲ್ಲಿ ಮಾತ್ರ ಕಾಣಿಸಿಕೊಳ್ಳುವ ಬೆವರು, ಆಗಾಗ ಹೊಡೆದುಕೊಳ್ಳುವ ಎದೆ, ಸದಾ ಭಾರವಾಗಿರುವ ತಲೆ, ಹಣೆಯಂಚಿನಲ್ಲಿ ಮೊಳೆ ಜಡಿವಂತೆ ಕ್ಷಣಮಾತ್ರ ಬಂದು ಹೋಗುವ ನೋವು, ಕೆಲವು ಸಲ ಮಂಜುಮಂಜಾಗುವ ದೃಷ್ಟಿ– ಈ ಮೊದಲಾದವುಗಳನ್ನು ಕೆದಕಿ ಕೆದಕಿ ಕೇಳುವ ಪ್ರಶ್ನೆಗಳಿಂದ ಡಾಕ್ಟರರು ತಿಳಿದುಕೊಂಡರು.

ಶೈಲಾನನ್ನು ಪರೀಕ್ಷಿಸುವಾಗ ಡಾಕ್ಟರರ ದೃಷ್ಟಿ

ಅವಳ ಕಡೆಗೇ ಕೇಂದ್ರೀಕೃತವಾಗಿತ್ತು. ಅವರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಶೈಲಾ ಕೆಲವು ಸಲ ತಡವರಿಸಿದ್ದಳು. ಕೆಲವು ಸಲ ಉತ್ತರವನ್ನೇ ಕೊಡದೆ, ಬೆರಗುಗಣ್ಣುಗಳಿಂದ ಅವರನ್ನೇ ನೋಡುತ್ತಿದ್ದಳು. ಒಂದೆರಡು ಸಲ ಅವಳ ಮುಖ ಕೆಂಪೇರಿತ್ತು. ಎಷ್ಟೋ ವಿಚಾರಗಳನ್ನು ತಾಯಿಯೇ ತಿಳಿಸಿದ್ದರು. ಅಂತೂ ಡಾ. ಮೂರ್ತಿಯವರು Sensitive ಸ್ವಭಾವದ ಶೈಲಾನ ವ್ಯಕ್ತಿಚಿತ್ರವನ್ನೇ ಬರೆಯುವಷ್ಟು ವಿವರಗಳನ್ನು ಸಂಗ್ರಹಿಸಿದರೆನ್ನಬಹುದು.

ಮೂರ್ತಿಯವರು ಕೊನೆಗೆ ಏನೋ ತಮ್ಮಷ್ಟಕ್ಕೇ ವಿಚಾರಿಸುವವರಂತೆ ಒಂದೆರಡು ಮಿನಿಟು ತಡೆದು. ಕೊನೆಗೆ ಕೇಳಿದರು.

"Mental strain ಬಹಳ ಮಾಡಿಕೊಂಡಿದ್ದೀರೇನು?"

ಶೈಲಾ ಕ್ಷೀಣವಾಗಿ "ಅಂಥದೇನೂ ಇಲ್ಲ" ಎಂದಳು.

"ಆಫೀಸಿನಲ್ಲಿ ಪ್ರಮೋಶನ್ ಬಗ್ಗೆ ಏನಾದರೂ..."

"ಛೇ. ಇರಲಾರದು. ಆ ದೃಷ್ಟಿಯಿಂದ ಅವರು ಸುದೈವಿಗಳು," ಶಣೈ ಸಾಹೇಬರು ನಡುವೆ ತಾವಾಗಿಯೇ ನುಡಿದರು.

"ಹೌದು ಸರ್."

ಮತ್ತೆ ಒಂದು ಕ್ಷಣ ತಡೆದು ಡಾಕ್ಟರರು ಕೇಳಿದರು.

"Any disappointment?

ಶಣೈ ಸಾಹೇಬರೂ ಒಂದು ಕ್ಷಣ ಅಪ್ರತಿಭರಾದರು. ಇದು ತುಂಬ Odd ಪ್ರಶ್ನೆಯೆಂದು ತೋರಿತವರಿಗೆ. ಅವರೂ ಶೈಲಾನ ಮುಖವನ್ನೇ ನೋಡುತ್ತಿದ್ದರು.

ಅರೆಕ್ಷಣ ತಡೆದು ಶೈಲಾ ಇಲ್ಲವೆಂದು ಗೋಣು ಹಾಕಿದಳು.

ಅವಳ ಮುಖವನ್ನೇ ಗಮನಿಸುತ್ತಿದ್ದ ಡಾ. ಮೂರ್ತಿಯವರು ಅವಳನ್ನು ಮತ್ತೇನೂ ಕೇಳದೆ,

"Anyway, ಮನಸ್ಸನ್ನು ಶಾಂತಗೊಳಿಸಿಕೊಳ್ಳಿರಿ. ಎಲ್ಲಾ ಸರಿಯಾಗುವದು" ಎಂದು ಭರವಸೆಯ ಮಾತನ್ನಾಡಿದರು.

"ನಿಮ್ಮ ಕೈಗುಣದಿಂದಲಾದರೂ ನನ್ನ ಮಗಳು ಆರಾಮ ಆಗಲಿ." ತಾಯಿಯ ಗಂಟಲು ತುಂಬಿ ಬಂದಿತ್ತು.

"ಏನೂ ಚಿಂತಿಸಬೇಡಿರಿ. ಗುಣವಾಗುತ್ತದೆ. ಧೈರ್ಯವಾಗಿರಿ" ಎಂದು ಹೇಳಿ ಡಾಕ್ಟರರು ತಮ್ಮ ಬ್ಯಾಗಿನಲ್ಲಿಯ ಒಂದು ಚಿಕ್ಕ ಬಾಟಲಿಯಿಂದ ನಾಲ್ಕು ಗುಳಿಗೆಗಳನ್ನು ತೆಗೆದು. ತಾವೇ ಸ್ವತಃ ಶೈಲಾನ ಬಾಯೊಳಗೆ ಹಾಕಿದರು.

"ನಾನು ನಾಳೆ ಮತ್ತೆ ಬರುತ್ತೇನೆ"

"ಅವಳಿಗೆ ರಾತ್ರಿ ನಿದ್ರೆನೇ ಬರುವದಿಲ್ಲ... ಮಲಗುವಾಗ Gardinal ಕೊಡೋಣವೇ?" ತುಂಗಕ್ಕ ಕೇಳಿದರು.

"ಏನೂ ಬೇಡ. ಬೇರೆ ಯಾವ ಔಷಧಿಯೂ ಬೇಡ. ಕಾಫಿ ಮಾತ್ರ ಕೊಡಬೇಡಿರಿ... ಶೈಲಾ, ನೀವು ಮನಸ್ಸನ್ನು ಸ್ವಸ್ಥವಾಗಿರಿಸಿರಿ. ಅದು ಮುಖ್ಯ. ಎಲ್ಲಾ ಆರಾಮವಾಗುತ್ತದೆ. ಏನೇ ಇದ್ದರೂ ಎಲ್ಲಾ ತಲೆಯಿಂದ ತೆಗೆದು ಹಾಕಿರಿ." ಎಂದು ಹೇಳಿ ಹೊರಟರು.

ಶಣೈ ಸಾಹೇಬರೂ ಡಾಕ್ಟರರ ಜೊತೆ ಹೊರಟು ಹೋದರು.

ತಾಯಿ ಅವರನ್ನು ಕಳಿಸಲು ಹೆಬ್ಬಾಗಿಲುವರೆಗೆ ಹೋದರು.

× × ×

ಡಾಕ್ಟರರ ಪ್ರಶ್ನೆಗಳಿಂದ ಶೈಲಾ ಬೇಸತ್ತಿದ್ದಳು. ಅವರೊಮ್ಮೆ ಎದ್ದು ಹೋದರೆ ಸಾಕು ಎನಿಸುತ್ತಿತ್ತವಳಿಗೆ.

ಏನು ಅಸಂಬದ್ಧ ಹುಚ್ಚು ಹುಚ್ಚು ಪ್ರಶ್ನೆಗಳವು? ಮಂಟ್ಸಿನ ಬಗ್ಗೆ ನಾಲ್ಕು ನಾಲ್ಕು ಸಲ ಕೇಳಿದರು. ಕಳೆದ ಸಲ ಯಾವಾಗ ಆಗಿತ್ತು? ಎಷ್ಟು ದಿನವಾಯಿತು? ನಿಮ್ಮ ಸೈಕಲ್ ನಿಯಮಿತವಿದೆಯೇ?

ಅದೂ ಹೋಗಲಿ. ಆದರೆ ಅವರ ಕೊನೆಯ ಪ್ರಶ್ನೆ?

ಶೈಲಾ ಎದೆ ಡವಡವ ಹೊಡೆದುಕೊಳ್ಳತೊಡಗಿತ್ತು. ಮೂಗಿನ ತುದಿಯಲ್ಲಿ ಬೆವರ ಹನಿ ಕಾಣಿಸಿಕೊಂಡಿತು.

"ಛೇ. ಹಾಗೆ ಹೇಳಲಾಗದು. ಆದರೆ, ಅಂದ ಹಾಗೆ, ಈ ಗಂಟಲು ನೋವು ಎಂದಿನಿಂದ ಆರಂಭವಾಯಿತು?... ಆದರೆ ಅದಕ್ಕೂ ಗಂಟಲು ನೋವಿಗೂ ಏನು ಸಂಬಂಧ?"

ತನ್ನ ಪ್ರಶ್ನೆಯ ಉತ್ತರ ಅವಳಿಗೇ ಹೊಳೆಯಲಿಲ್ಲ. ಆದರೆ ಶಿವರಾಮ ಮಾತ್ರ ಅವಳ ಕಣ್ಣ ಮುಂದೆ ಮಿಂಚಿ ಹೋದ.

ಹೌದು. ಈಗ ಸುಮಾರು ಮೂರು ತಿಂಗಳ ಹಿಂದೆ ಆತ ತನ್ನ Section ಗೆ ವರ್ಗವಾಗಿ ಬಂದ. ತುಂಬ ನಿಷ್ಠಾವಂತ ಕೆಲಸಗಾರನೆಂದು ಆಫೀಸಿನಲ್ಲಿ ಎಲ್ಲರೂ ಅವನ ಬಗ್ಗೆ ಹೇಳುತ್ತಿದ್ದರು. ಅದು ಸರಿಯೇ. ಆತ ತನ್ನ ಕೆಲಸದಲ್ಲಿ ಎಂದೂ ಮೈಗಳ್ಳತನ ಮಾಡಿಲ್ಲ. ಉಳಿದವರಂತೆ ತಪ್ಪಿ ಕೂಡ ದೊಡ್ಡ ಧ್ವನಿಯಿಂದ ಮಾತಾಡಿಲ್ಲ. ಯಾವಾಗಲೂ "ಆಗಲಿ ಆಗಲಿ ಮ್ಯಾಡಂ" ಎಂದೇ ಹೇಳುವನು.

ಆತ ಸಿಗರೇಟು ಸೇದುವುದು ತನ್ನ ಕಣ್ಣಿಗೆ ಬಿದ್ದಿಲ್ಲವಾದರೂ, ಆತ ಮಾತ್ರ ತುಂಬ ಸೇದುತ್ತಿರಬೇಕು. ಆತ ಚೇಂಬರಿನಲ್ಲಿ ಬರುತ್ತಲೇ ಸಿಗರೇಟಿನ ಉಗ್ರ ವಾಸನೆ ಮೂಗಿಗೆ ಬಡಿಯುತ್ತದೆ. ಒಂದು ರೀತಿ ಓಕರಿಕೆಯೇ ಬಂದಂತಾಗುತ್ತದೆ. ತಾನದನ್ನು ತುಂಬ hate ಮಾಡುತ್ತೇನೆ. ಅನೇಕ ಸಲ ಬಯ್ದು ಬಿಡುವಷ್ಟು ಸಿಟ್ಟು ಬಂದುದೂ ಉಂಟು. ಆದರೆ ಸಿಟ್ಟಿನ ಅಭಿವ್ಯಕ್ತಿಗೆ ಸಭ್ಯತೆ ಅಡ್ಡ ಬಂದಿತ್ತು.

ಆದರೆ ಆತನ ಮುಖದಲ್ಲಿ ಮಾತ್ರ ಏನೋ ಆಕರ್ಷಣೆ ಇದೆಯೆಂದು ಯಾರೂ ಹೇಳಬಹುದಿತ್ತು. ಸಾದಾ ಕಾಟನ್ ಬಟ್ಟೆಯಲ್ಲಿ ಕೂಡ ಆತ ಒಳ್ಳೇ ಟ್ರಿಮ್ಮಾಗಿ ಇರುತ್ತಾನೆ. ಗೌರ ವರ್ಣದ ಮುಖ, ಕಾಡಿಗೆಯಂಥ ಕಪ್ಪನ್ನ ಗುಂಗುರುಗೂದಲು, ನೀಳವಾದ ಮೂಗು, ಕೆಂಪಾದ ತುಟಿ. ಬಹುಶಃ ಆತ ಎಲೆ ತಿನ್ನುವುದಿಲ್ಲ. ಆದರೂ ಅವನಿಗೆ ರಂಗುರಂಗಾದ ತುಟಿಗಳಿವೆ. ಎಲ್ಲಕ್ಕಿಂತ ಹೆಚ್ಚಾಗಿ ಸದಾಕಾಲ ಏನನ್ನೋ ಅಭಿವ್ಯಕ್ತಗೊಳಿಸುವ ಆತನ ವಿಶಾಲ ಬಿಳಿ ಕಣ್ಣುಗಳು. ಆ ಕಣ್ಣುಗಳಲ್ಲಿ ಅಡಗಿದ ಭಾವ ತನಗೆ ಎಂದೂ ಅರ್ಥವೇ ಆಗಲಿಲ್ಲ. ಆದರೂ ಅವುಗಳಲ್ಲಿ ಏನೋ ಆಕರ್ಷಣೆ.

ಟೈಪು ಮಾಡಿದ ಕಾಗದಗಳನ್ನು ತೆಗೆದುಕೊಂಡೊ, ಸಹಿ ಮಾಡಿದ ಪೇಪರುಗಳನ್ನು ಒಯ್ಯಲೋ ಆತ ಚೇಂಬರಿನಲ್ಲಿ ಹಲವು ಸಲ ಬಂದು ಹೋಗುತ್ತಿದ್ದ. ಹಾಗೆ ಬಂದಾಗಲೆಲ್ಲ ಶೈಲಾ ಆತನ ಕಡೆಗೆ ನೋಡುತ್ತಲೇ ಇರಲಿಲ್ಲ. ಆದರೆ ಎಂದೋ ಒಮ್ಮೆ ಅವಳಿಗೆ ಆತನ ಕಣ್ಣುಗಳಲ್ಲಿಯ ಆ ಹೊಳಪು ಕಂಡಿತು. ಅವಳು ದಂಗಾದಳು! ಒಂದು ಕ್ಷಣ ಅಧೀರಳೂ ಆದಳು! ಆ ಬೆಳ್ಳನ್ನ ಕಣ್ಣುಗಳು ಏನನ್ನು ಹೇಳುತ್ತಿದ್ದುವು? ಏನನ್ನು ಕೇಳುತ್ತಿದ್ದುವು?

ಛೇ-ಛೇ. ಅವೇನನ್ನು ಹೇಳುತ್ತವೆ? ಎಲ್ಲೋ ತನಗೆ ಹಾಗೆ ಭಾಸವಾಗಿರಬೇಕು.

ಇಷ್ಟಾಗಿ, ಅವನ ಕಣ್ಣುಗಳನ್ನು ತಾನೇಕೆ ನೋಡಬೇಕು?

ಆದರೆ ಎಂಥ ವಿಚಿತ್ರ! ಅಂದಿನಿಂದ ತಾನು ತಪ್ಪಿಸಬೇಕೆಂದರೆ ತನ್ನ ಲಕ್ಷವೆಲ್ಲ ಆತನ ಕಡೆಗೇ ಹೋಗತೊಡಗಿತು. ಆತ ಎದುರಿಗೆ ಬಂದಾಗಲೆಲ್ಲ ಅವನ ಕಣ್ಣುಗಳನ್ನು ನೋಡಬೇಕೆನಿಸುತ್ತಿತ್ತು. ಆದರೆ ಅವನ ಕಣ್ಣು ತಪ್ಪಿಸಿ ನೋಡಬೇಕೆಂದರೆ ಸಾಧ್ಯವೇ ಆಗುತ್ತಿರಲಿಲ್ಲ.

ನೋಡಬೇಕು. ಅಲ್ಲಿರುವ ಅಭಿವ್ಯಕ್ತಿಯನ್ನು ಗುರುತಿಸಬೇಕು. ಆ ಕಣ್ಣುಗಳಲ್ಲಿರುವ ಅರ್ಥವೇನು?

ಅದಮ್ಯ ಆಸೆಯಿರಬಹುದೇ?

ಶೈಲಾ ನಡುಗಿದಳು!

ಅವನು ನಿಜವಾಗಿಯೂ mischievous ಇದ್ದಾನೇನು?

ಆದರೆ ಎಲ್ಲರೂ ಅವನಿಗೆ ಸಭ್ಯತೆಯ ಪಟ್ಟ ಕಟ್ಟುವರಲ್ಲವೆ?

ಮ್ಯಾಡಂ ಮ್ಯಾಡಂ-ದೈನ್ಯವಾಣಿ ಕಿವಿಯಲ್ಲಿ ಹೇಳುತ್ತದೆ. ಆದರೆ ಆ ಮುಗುಳು ನಗೆ? ಎಂಥದದು?

ಆ ಮೋಹಕ ನಗೆಯಲ್ಲಿ ಇರುವುದೇನು? ಮುಗ್ಧತೆಯೋ? ಕುಹಕತನವೋ? ಅದಮ್ಯ ಆಸೆಯೋ?

ಉಳಿದವರು ತನ್ನತ್ತ ನೋಡುವಾಗ ಅವರ ಮುಖದಲ್ಲಿ ಕೇವಲ ಗೌರವಭಾವ ಮಾತ್ರ ಕಾಣುತ್ತದೆ; ಏಕೆ, ತುಸು ಭಯ ಭಕ್ತಿಯ ಛಾಯೆಯೂ ಇರುವುದಿಲ್ಲವೇ. ಆದರೆ ಈತ ಮುಗುಳು ನಗುವುದೇಕೆ? ಅದೇನು ಕುಹಕವೋ? ಅಥವಾ ತನಗೇ ಹಾಗೆ ಕಾಣುವುದೇ? ಅದು ಅವನ natural ರೀತಿಯೇ ಇರಬಹುದು ಅಲ್ಲವೇ?

ಅಲ್ಲಾ, ತಾನೇನು ಬೇರೆ ಸುಂದರ ಮುಖಗಳನ್ನು ಕಂಡೇ ಇಲ್ಲವೇ? ಆದರೂ ಇವನನ್ನು ಏಕೆ ನೋಡಬೇಕೆನಿಸುತ್ತದೆ? ಹೌದು ಯಾಕೆ?

ತಾನೇನಾದರೂ ಅವನಿಂದ ಮೋಹಿತಳಾಗಿರುವೆನೆ?

ಛೇ ಎಂಥ ಹುಚ್ಚು ವಿಚಾರ!

ಈ ವಿಚಾರದಿಂದ ಶೈಲಾ ತುಂಬ ಅಸ್ವಸ್ಥಳಾದಳು. ಒಂದು ಅವ್ಯಕ್ತ ಭೀತಿ ಅವಳನ್ನು ಆವರಿಸಿತು.

ಗೊಂಬಿಗೋಳ್

ರೆಪ್ಪಿ ಕಸಬರ್ಗಿ
ಕಣ್ಣಾನ ಕಸಾ ಉಡಗಾಕ ಇಡು
ಹೊರಗ ಮಳಿ ಪಿಚಿಪಿಚಿ
ಉಗಳಾಕ ಹತ್ತೇತಿ
ಗಡಾನ ಕೊಡಿಯೊಳಗ ಸರದು
ಎದ್ಯಾಗ ತೂರಕೊ
ಬಿದ್ದ ಗೊಂಬಿಗೂಡಿನ್ಯಾಗ
ತಬ್ಬಿದ ಗೊಂಬಿಗೋಳ್ ನಾವು

— ಶ್ರೀನಿವಾಸ ಕುಲಕರ್ಣಿ

ಅವಳಿಗೆ ಎಂದೂ ಇಂಥ ಅನುಭವವಾಗಿರಲಿಲ್ಲ. ಕಳೆದ ವರ್ಷ ತಾವಾಗಿಯೇ propose ಮಾಡಿದ ಅಸಿಸ್ಟಂಟ ಮ್ಯಾನೇಜರ ಪ್ರಭಾಕರರಾವ್ ಅವರಿಗೇ Sorry ಎಂದು ಹೇಳಿರಲಿಲ್ಲವೇ? ಸ್ಥಾನ-ಮಾನ-ಗುಣಗಳಲ್ಲದೆ ರೂಪದಲ್ಲಿ ಕೂಡ ಪ್ರಭಾಕರ ರಾವ್ ಗಣ್ಯರೇ. ಆಶ್ಚರ್ಯವೆಂದರೆ ಅವಳಿಗೆ ಯಾರ ಬಗ್ಗೆಯೂ ಅಂಥ ಆಸೆಯಾಗಲಿ, ಆಕರ್ಷಣೆಯಾಗಲಿ ಈ ವರೆಗೂ ಉಂಟಾಗಲೇ ಇಲ್ಲ.

ಶಿವರಾಮನ ಮೇಲೆ ಅವಳಲ್ಲಿ ಒಂದು ರೀತಿಯ ಕೋಪವೇ ಉಂಟಾಯಿತು. ಈ ಅಸ್ವಸ್ಥತೆಯಲ್ಲಿಯೇ ಕೆಲ ದಿನಗಳು ಕಳೆದುಹೋದುವು.

ಕೊನೆಗೆ ಅವನನ್ನು ಬೇರೆ ಸೆಕ್ಶನ್ನಿಗೆ ವರ್ಗ ಮಾಡಬೇಕು ಎಂದುಕೊಂಡಳು. ಆದರೆ ಶಣೈ ಸಾಹೇಬರು ಯಾಕೆ ಎಂದು ಕೇಳಿದರೆ ಏನು ಹೇಳುವುದು?

ಹೋಗಲಿ ತನ್ನ ಸೆಕ್ಶನ್ನಿಗೇ ಇರಲೊಲ್ಲ ತನಗೇನು? ಇಷ್ಟಾಗಿ ಆತನ ಬಗ್ಗೆ ತಾನೇಕೆ ಅಷ್ಟು ವಿಚಾರ ಮಾಡಬೇಕು? ತಾನಾರು ಅವನಾರು. ಕರೆಗಂಟೆ ಬಾರಿಸಿದರೆ "ಜೀ ಹುಜೂರ್"ಎಂದು ನಿಲ್ಲಬೇಕಾದ ಆತನಿಗೆ ತಾನೇಕೆ ಹೆದರಬೇಕು? ನಾಯಿಯನ್ನು ಹೊಡೆಯಲು ಬಣ್ಣದ ಕೋಲೇಕೆ?

ಹಾಗೆ, ಆಫೀಸಿನಲ್ಲಿ ಶೈಲಾ ತುಂಬ ಪ್ರಭಾವಿ ವ್ಯಕ್ತಿಯಾಗಿದ್ದಳು. ಡಿವಿಜನಲ್ ಮ್ಯಾನೇಜರ ಶಣೈ ಸಾಹೇಬರು ಕೂಡ ಅವಳನ್ನು ತುಂಬ ಆದರದಿಂದಲೇ ಕಾಣುತ್ತಿದ್ದರು. ಅವಳ ಗಾಂಭೀರ್ಯಯುಕ್ತ ಸರಳ ರೀತಿನೀತಿಗಳಿಂದ ಎಲ್ಲರೂ ಪ್ರಭಾವಿತರಾಗಿದ್ದರು. ಕೆಲಸದಲ್ಲಿ ತುಂಬ ಗಟ್ಟಿಗಳಾದ ಅವಳನ್ನು ಎಲ್ಲರೂ ಒಂದು ರೀತಿಯ ಭೀತಿಯಿಂದಲೇ ಕಾಣುತ್ತಿದ್ದರು.

ನಾಯಿಯನ್ನು ಹೊಡೆಯಲು ಬಣ್ಣದ ಕೋಲೇಕೆ? ಹೌದು. ಅವನನ್ನು neglect ಮಾಡಿ ಬಿಡಬೇಕು. ಮಾತನ್ನೇ ಕಡಿಮೆ ಮಾಡಿದರಾಯಿತು. ಕರೆಗಂಟೆ ಬಾರಿಸುವುದನ್ನು ಕಡಿಮೆ ಮಾಡಬೇಕು.

ಹೌದು, ಹಾಗೆಯೇ ಮಾಡಿದಳು ಶೈಲಾ. ಏನೋ ಕಾರಣದಿಂದ ಆತ ಒಳಗೆ ಬಂದರೆ ಸಿಡಿಮಿಡಿಗೊಳ್ಳತೊಡಗಿದಳು. ಸಣ್ಣ ಪುಟ್ಟ ತಪ್ಪುಗಳನ್ನೂ ಎತ್ತಿ ಆಡತೊಡಗಿದಳು. ಸಿಗರೇಟಿನ ಉಗ್ರವಾಸನೆ ಈಗ ಅವಳಿಗೆ ಅಸಹನೀಯವಾಗಿ ಕಾಣತೊಡಗಿತು. ಅವಳ ಮುಖದ ಮೇಲೆ ಸದಾಕಾಲ ಸಿಡುಕು ಕಾಣಿಸಿಕೊಂಡಿತು. ಬಹುಶಃ ಆತ ಕೆಲ ದಿನಗಳಲ್ಲಿ ಈ ಪರಿವರ್ತನೆಯನ್ನು ಗುರುತಿಸಿದ. ಆತ ಅವಳ ಕೋಣೆಯೊಳಗೆ ಬರಲಿಕ್ಕೆ ಹೆದರತೊಡಗಿದ. ಅದು ಅವನ ಮುಖದ ಮೇಲೆಯೇ ಒಡೆದು ಕಾಣುತ್ತಿತ್ತು.

ಬಹುಶಃ ಅವನದೇನೂ ತಪ್ಪಿಲ್ಲದೆ ತಾನು ಅವನನ್ನು ದಂಡಿಸುತ್ತಿರಬಹುದೇ ಪಾಪ!

ಅಂತೂ ಶೈಲಾನ ಮನಸ್ಸು ಸ್ತಿಮಿತಕ್ಕೆ ಬರದ ಹಾಗೇ ದಿನಗಳು ಕಳೆಯತೊಡಗಿದ್ದುವು. ಹಾಗಿರುವಾಗಲೇ ಆತನಿಗೆ ಉಡುಪಿ ಹೆಡ್ ಆಫೀಸಿಗೆ ವರ್ಗವಾಗಿತ್ತು. ಆದರೆ ಅವಳಿಗೆ ಅದನ್ನು ಯಾರೂ ಹೇಳಿರಲೇ ಇಲ್ಲ. ಆತನಿಗೇನಾದರೂ ಬಕ್ಷೀಸು ಕೊಡಬೇಕೆಂದು ನಿರ್ಧರಿಸಿ ಸ್ಟಾಫ್ ಕ್ಲಬ್ಬಿನ ಸೆಕ್ರೆಟರಿ ಮಿಸ್ಟರ್ ಪೈ ಬಂದು ಅವಳಿಂದ Contribution ಕೇಳಿದಾಗ ಅವಳಿಗೆ ವಿಷಯ ತಿಳಿದಿತ್ತು.

ಅದನ್ನು ಕೇಳುತ್ತಲೇ ತಾನಂದು ಉದ್ವೇಗಗೊಂಡಿದ್ದೆ; ನಿಜ.

ಆದರೆ ಅದನು ಪೈಗೆ ತೋರಗೊಡದೆ "ಅರೇ, ಅವನು ನನಗೆ ಹೇಳಿಯೇ ಇಲ್ಲವಲ್ಲ?" ಎಂದಿದ್ದಳು.

"ಇಲ್ಲ ಮೇಡಂ. ಇಂದೇ ಆರ್ಡರ್ ಬಂದಿದೆ. ಇಮ್ಮಿಡಿಯೇಟಾಗಿ ರಿಲೀವ್ಹ ಮಾಡಬೇಕೆಂದು ಬಂದಿದೆಯಂತೆ. ಸಾಹೇಬರು ಹೇಳು..."

"ಒಳ್ಳೇದು" ಎಂದು ಶೈಲಾ ಆತನನ್ನು ಮಧ್ಯದಲ್ಲಿಯೇ ತಡೆದು, ತನ್ನ ಪಾಲಿನ ವಂತಿಗೆಯನ್ನು ಕೊಟ್ಟು ಕಳಿಸಿದ್ದಳು.

ಆದರೆ ಆ ಇಡೀ ದಿನ ತಾನು ಅಸ್ವಸ್ಥಳಾಗಿಯೇ ಕಳೆದೆ. ನಾನೇಕೆ ಅವನ ಬಗ್ಗೆ ಚಿಂತಿಸಬೇಕು ಇದೂ ಒಂದು ರೀತಿ blessing in disguise ಅಲ್ಲವೇ?... ಆ ರಾತ್ರಿ ನಿದ್ರೆ ಮಾತ್ರ ಯಾಕೋ ಸರಿಯಾಗಲೇ ಇಲ್ಲ. ಮರುದಿನ ಮೈಯಲ್ಲಿಯ ಶಕ್ತಿಯೆಲ್ಲ ಉಡುಗಿ ಹೋದಂತಾಗಿತ್ತು. ಆಫೀಸಿಗೆ ಹೋಗದೆ ರಜೆ ಹಾಕಿ ಮನೆಯಲ್ಲೆ ಮಲಗಿಕೊಂಡಿದಳು.

ಮರುದಿನ ಮಾತ್ರ ಆರಾಮವೆನಿಸಿತ್ತು. ಮನಸ್ಸೂ ಹಗುರಾಗಿತ್ತು. ನಿತ್ಯದಂತೆ ಊಟ ಮಾಡಿ ಆಫೀಸಿಗೆ ಹೋಗಿದ್ದಳು.

ಚೇಂಬರಿನ ಬಾಗಿಲನ್ನು ತಾನೇ ತಳ್ಳಿಕೊಂಡು ಶೈಲಾ ಒಳಗೆ ಹೋದಳು. ಬಾಗಿಲ ಬಳಿಯ ಸ್ಟೂಲಿನ ಮೇಲೆ ಯಾರೂ ಇರಲಿಲ್ಲ. ಖಾಲಿ ಸ್ಟೂಲನ್ನು

ಕೇಗೂ ಅವಳಿಗೆ ಒಂದು ರೀತಿ ಸಮಾಧಾನವೇ ಆಯಿತು.

ಅಂದು ಟಪಾಲಿಗೆ ಬಂದ ಕಾಗದಗಳನ್ನು ಪ್ಯೂನ ಗಣಪೂ ತಂದು ಶೈಲಾನ ಟೇಬಲ್ಲಿನ ಮೇಲಿಟ್ಟು ಹೊರಟು ಹೋದ. ಬಾಗಿಲು ಕಿರ್‍ರೆಂದು ಹಾಕಿಕೊಂಡಿತು.

ಆಗ ತನ್ನ ಮೂಗಿಗೆ ಸಿಗರೇಟಿನ ವಾಸನೆ ಬಡಿದಿರಲಿಲ್ಲವೆಂಬ ವಿಚಾರ ಅವಳಲ್ಲಿ ಸುಳಿದುಹೋಯಿತು. ಅದರಿಂದ ಒಂದು ರೀತಿ ರಿಲೀಫ್ ಆದಂತಾಯಿತವಳಿಗೆ.

ಆತ ನಿನ್ನೆಯೇ ರಿಲೀವ್ಡ್ ಆಗಿ ಹೋಗಿರಬೇಕು ಒಳ್ಳೇದಾಯಿತು, ಆದರೆ ಹೋಗುವಾಗ ಬಂದು ಭೆಟ್ಟಿಯಾಗಿ ಹೇಳಿಯೂ ಹೋಗಲಿಲ್ಲವಲ್ಲ! ಎಂಥ ಉದ್ಧಟತನ! ಬಿಡಲೊಲ್ಲ. ತನಗೇನು?

ಶೈಲಾ ತನ್ನ ಕೆಲಸದಲ್ಲಿ ಮುಳುಗಿ ಎಲ್ಲವನ್ನೂ ಮರೆತಳು.

ದಿನಾಲು ಎರಡು ಗಂಟೆಗೆ ಬರಬೇಕಾದ ಕ್ಲಬ್ಬಿನ ಟೀ ಇನ್ನೂ ಬರಲಿಲ್ಲ. ಶೈಲಾ ಕೈಗಡಿಯಾರ ನೋಡಿಕೊಂಡಳು. ಎರಡು ಹೊಡೆದು ಹತ್ತು ನಿಮಿಷಗಳಾಗಿದ್ದವು.

ಚಹ ಇನ್ನೂ ಯಾಕೆ ಬರಲಿಲ್ಲ? ಟೀ ತಯಾರಿಸುವ ಪ್ಯೂನನಿಗೂ ಟ್ರಾನ್ಸಫರ್ ಆಯಿತೇನು?

ಅಷ್ಟರಲ್ಲಿಯೇ ಗಣಪೂ ಬಂದು ಟೀಯನ್ನು ರಿಕ್ರಿಯೇಶನ್ ಹಾಲಿನಲ್ಲಿಯೇ ಅರೇಂಜ ಮಾಡಿದ್ದಾರೆ. ಬರಬೇಕಂತೆ ಎಂದ. ಯಾಕೋ ಎಂದರೆ,

"ನಿಮ್ಮ ಶಿವರಾಮನಿಗೆ ಏನೋ ಬಕ್ಷೀಸು ಕೊಡುತ್ತಾರಂತೆ" ಎಂದ.

ಶೈಲಾನ ಎದೆ ಧಸಕ್ಕೆಂದಿತು. ಹಾಗಾದರೆ ಅವನು ನಿನ್ನೆಯೇ ಹೋಗಿಲ್ಲವೇನು? ಈತ, ಈ ಗಣಪೂ "ನಿಮ್ಮ ಶಿವರಾಮು" ಎಂದೇಕೆ ಹೇಳಿದ?

ಅವಳ ಹೃದಯದ ಬಡಿತಗಳು ಅವಳಿಗೇ ಕೇಳಿಸತೊಡಗಿದವು.

ಹೇಗೋ ಸಾವರಿಸಿಕೊಂಡು ಹೋಗಿ ಶೈಲಾ ಎಲ್ಲರೊಡನೆ ಚಹ ಕುಡಿದಿದ್ದಳು.

ಚಹ ಕುಡಿದಾದ ಮೇಲೆ ಸೆಕ್ರಟರಿ ಪೈ ಅವನಿಗೆ ಶುಭಕೋರಿ ಒಂದು ಪ್ಯಾಂಟ ಪೀಸ್ ಉಡುಗೊರೆ ಕೊಟ್ಟರು. ಬಹುಶಃ ಟೆರಿಕಾಟ್ ಇರಬಹುದು. ಡಾರ್ಕ ಕಲರಿನ ಪ್ಯಾಂಟು ಅವನಿಗೆ ತುಂಬಾ ಒಪ್ಪಬಹುದು.

ಕೊನೆಗೆ ಆತನೂ ತನ್ನ ಕೃತಜ್ಞತೆ ವ್ಯಕ್ತಪಡಿಸಿ ಎಲ್ಲರನ್ನೂ ವಂದಿಸಿದ. ಆಗ ಅವನ ಮುಖ ಸಪ್ಪಗಾಗಿರಲಿಲ್ಲವೇ? ಎಂದಿನ ಮೋಹಕ ಮುಗುಳು ನಗೆ ಕಾಣಲಿಲ್ಲ. ಎಲ್ಲರ ಎದುರಿಗೆ ಮಾತನಾಡುವ ಹೆದರಿಕೆ ಇರಬಹುದು. ಅಥವಾ ಅಗಲಿಕೆಯ ಕಾಲಕ್ಕೆ ಎಲ್ಲರಿಗೂ ಆಗುವಂತೆ ಅವನಿಗೂ ಹಳಹಳಿ ಆಗಿರಬಹುದೆ?

ಒಂದಿಬ್ಬರು ಅವನ ಹತ್ತಿರ ಹೋಗಿ ಒಂದೆರಡು ಮಾತನಾಡಿದರು. ಶಣ್ಯೆ ಸಾಹೇಬರು ಹೊರಗುತ್ತ ಏನೋ ನುಡಿದರು. ಎಲ್ಲರೂ ಗೊಳ್ಳನೆ ನಕ್ಕರು. ತನಗೆ ಏನೆಂದು ಸರಿಯಾಗಿ ತಿಳಿಯಲಿಲ್ಲ. ಆದರೂ ಎಲ್ಲರಂತೆ ತಾನೂ ನಗಲು ಯತ್ನಿಸಿದ್ದೆ.

ಹತ್ತು, ನಿಮಿಷಗಳ ನಂತರ ತನ್ನ ಚೇಂಬರಿನ ಬಾಗಿಲು ಕಿರ್‍ರೆಂದಿತು. ಮುಖವೆತ್ತಿ ನೋಡಿದೆ. ಆತ ನಿಂತಿದ್ದ. ಅದೇ ಮನೋಹರ ಮುಖ. ಅದೇ ಹೊಳೆ ಹೊಳೆಯುವ, ಅವ್ಯಕ್ತ ಅಭಿವ್ಯಕ್ತಿಯನು ಸೂಸುವ ಆ ಬೆಳಗಿನ ಮುಖ. ಅದೇ ಹೊಳೆಯುವ ಕಣ್ಣುಗಳು!

ಇಲ್ಲ: ಆತ ಅಂಥ indifferent ಆಗಿಲ್ಲ. ತನ್ನನ್ನು ಕಂಡು ಹೇಳಿ ಹೋಗಲು ಬಂದಿದ್ದ.

ಆದರೆ ಅವನು ಎದುರಿಗೆ ಬಂದು ನಿಂತಾಗ ಏನು ಮಾಡಬೇಕೆಂದು ತಿಳಿಯಲಿಲ್ಲ. ಏನು ಹೇಳಬೇಕೆಂದೂ ಹೊಳೆಯಲಿಲ್ಲ. ಅವನಿಗೇನಾದರೂ ತನ್ನ ವೈಯಕ್ತಿಕ present ಕೊಡಬಹುದಿತ್ತೇನೊ. ಆದರೆ ಇದು ಮೊದಲೇ ಯಾಕೆ ತನಗೆ ಹೊಳೆಯದೆ ಹೋಯಿತು?

ಆತನೇ ಹೇಳಿದ್ದ. ಅಂದು ರಾತ್ರಿಯೇ ಆತ ಹೊರಡಬೇಕು. ಉಡುಪಿಯ ಹತ್ತಿರದ ಹಳಿಯಲ್ಲಿಯೇ ಮುಪ್ಪಿನ ತಾಯಿ ಇರುವುದು. ಈಗ ಅವಳ ಮೈಯಲ್ಲೂ ಆರಾಮ ಇಲ್ಲ. ಅದಕ್ಕಾಗಿ T. A. ಸಿಗದಿದ್ದರೂ, ತಾನಾಗಿ ಬರೆದುಕೊಂಡು ರಿಕ್ವೆಸ್ಟ್ ಟ್ರಾನ್ಸಫರ್ ಮಾಡಿಸಿಕೊಂಡಿದ್ದು.

"ಒಳ್ಳೇದಾಯಿತು. **best luck**"

ಒಂದು ಕ್ಷಣ ತಡೆದು, "ಮ್ಯಾಡಂ ಏನಾದರೂ ತಪ್ಪಾಗಿದ್ದರೆ ಕ್ಷಮಿಸಿರಿ" ಆತ ಅತಿ ದೈನ್ಯದಿಂದ ನುಡಿದಿದ್ದ.

"ಛೇ, ಛೇ, ಏನೂ ತಪ್ಪಿಲ್ಲ. ಕ್ಷಮಿಸುವದೇನು?"

ಒಂದರೆನಿಮಿಷ ತಡೆದು "ಇಲ್ಲಾರೀ, ನನಗಂತೂ ಗೊತ್ತಾಗೂದಿಲ್ಲ. ಆದರೂ ಏನೋ ತಪ್ಪಾಗಿರಬಹುದು. ತಾವೂ ಏನೂ ಹೇಳಿಲ್ಲ. ಅಂದಿಲ್ಲ. ಆದರೂ......"

ತನಗೆ ಅತೀವ ವೇದನೆಯೆನಿಸತೊಡಗಿತು. ಒಂದು ರೀತಿ Guilty Conscious ಬಹುಶಃ ತನ್ನ ಇತ್ತೀಚಿನ ವರ್ತನೆಯಿಂದ ಆತ ನೊಂದುಕೊಂಡಿದ್ದ.

"ಇಲ್ಲ, ಏನೂ ಇಲ್ಲ " ಎಂದಿದ್ದೆ.

ಆತನ ಕಡೆಗೆ ನೋಡಿದ್ದೆ. ಅವನ ಆ ಅವ್ಯಕ್ತ ಅಭಿವ್ಯಕ್ತಿಯ ಕಣ್ಣುಗಳಲ್ಲಿ ಈಗ ಏನೋ ಅರ್ಥವಿರುವಂತೆ ಕಂಡಿತು. ಹೌದು. ಅದು ಕರುಣೆ. ಆತ ದುಃಖಿತನಾಗಿದ್ದ. ಆ ಅಯಸ್ಕಾಂತ ಕಣ್ಣುಗಳಲ್ಲಿ ನೀರು ತುಂಬ ತೊಡಗಿದ್ದವು.

"ಕ್ಷಮಿಸಿರಿ ಮ್ಯಾಡಂ" ಎನ್ನುತ್ತಿರುವಂತೆಯೇ ಶಿವರಾಂ ಬಗ್ಗಿ ತನ್ನ ಕಾಲುಗಳನ್ನೇ ಹಿಡಿದುಕೊಂಡಿದ್ದ!

"ಅರೇ!"

ತನ್ನ ಜಂಘಾಬಲವೇ ಉಡುಗಿ ಹೋಯಿತು!

ಆದರೂ ಕ್ಷಣಾರ್ಧದಲ್ಲಿ ಹೇಗೋ ಸಂಭಾಳಿಸಿಕೊಂಡು, "ಛೇ, ಛೇ ಏಳು" ಎನ್ನುತ್ತ ಆತನನ್ನು ಕೈ ಹಿಡಿದು ಎಬ್ಬಿಸಿದ್ದೆ.

ನನಗರಿವಿಲ್ಲದೇ ಆತನ ಕೈಗಳೆರಡನ್ನೂ ಹಿಡಿದುಕೊಂಡಿದ್ದ ನನ್ನ ಕೈಗಳು ಥರ ಥರ ಕಂಪಿಸುತ್ತಿದ್ದುವು.

ಮರುಕ್ಷಣವೇ ಆತನಂತೆ ತಾನೂ ದಿಗ್ಭ್ರಾಂತಳಾದೆ!

ಅನತ್ತ ನೋಡಿದೆ...ಆತ ಕೈಗಳನ್ನು ಮುಗಿದುಕೊಂಡೇ ಹಿಂದಕ್ಕೆ ತಿರುಗತೊಡಗಿದ. ಮತ್ತೆ ನೋಡಿದೆ ಇಲ್ಲ...ಆತ ಕಾಣಲಿಲ್ಲ. ತಿರುಗುತ್ತ ತಿರುಗುತ್ತ ಎಲ್ಲೋ ಮಾಯವಾಗಿದ್ದ. ಯಾರೂ ಇರಲಿಲ್ಲ. ಎಲ್ಲಾ ಅಂಧಃಕಾರ.

ಕತ್ತಲೆ ತುಂಬಿದ ಗವಿಯಲ್ಲಿ ಮ್ಯಾಡಂ ಮ್ಯಾಡಂ ಎಂಬ ಕ್ಷೀಣ ಧ್ವನಿ ಮಾತ್ರ ಎಲ್ಲೋ ದೂರದಿಂದ ಬರುತ್ತಿತ್ತು.

ಹೆದರಿಕೆಯಿಂದ ಚೀರಬೇಕೆಂದೆ...ಆಗಲಿಲ್ಲ. ಯಾರೋ ಗಂಟಲನ್ನು ಹಿಚುಕುತ್ತಿದ್ದರು.

"ಅಯ್ಯೋ, ಎಂಥ ನೋವು!"

ಕಣ್ಣು ತೆರೆದಾಗ ಶಣ್ಯೆ ಸಾಹೇಬರು ನೀರು ನೀರು ಎನ್ನುತ್ತಿದ್ದರು.

ಸಾಹೇಬರೇ ತನ್ನನ್ನು ಕೈ ಹಿಡಿದು ಕುರ್ಚಿಯಲ್ಲಿ ಮೇಲೆ ಕೂಡ್ರಿಸಿದ್ದರು.

"ಯಾಕೆ? ಏನಾಯಿತು? ಈಗ ಹುಷಾರೇ?"

ತಾನು ಸುತ್ತಲೂ ಕಣ್ಣಾಡಿಸಿ ನೋಡಿದ್ದೆ. ಆಫೀಸಿನ ಅನೇಕರು ಕಳವಳದಿಂದ ಕುತೂಹಲದಿಂದ ನೆರೆದಿದ್ದರು. ಅವರ ಮಧ್ಯೆ ಅಸ್ವಸ್ಥಭಾವದ, ದೈನ್ಯದಕಳೆ ತುಂಬಿದ ಆತನ ಮುಖವೂ ಕಂಡಿತು.

"ಯಾಕೋ ಕಣ್ಣಿಗೆ ಕತ್ತಲೆ ಬಂತು" ಹೇಳಬೇಕೆಂದರೆ ತನ್ನ ಗಂಟಲಲ್ಲಿ ಧ್ವನಿಯೇ ಬರಲಿಲ್ಲ. ಕೈಯಿಂದಲೇ ಸೂಚಿಸಿದ್ದೆ.

"ತುಸು ಕಾಫೀನಾದರೂ ಕುಡಿಸಿರಿ" ಯಾರೋ ಸೂಚಿಸಿದ್ದರು.

ಸಾಹೇಬರು ಕಾಫಿಯ ಗ್ಲಾಸನ್ನು ತನ್ನ ಕೈಗಿತ್ತರು. ಒಂದೇ ಒಂದು ಗುಟುಕು ಕುಡಿಯುವುದರಲ್ಲೇ ಸಾಕಾಗಿತ್ತು. ಗಂಟಲು ನೋಯುತ್ತಿತ್ತು.

ಮನೆಗೆ ಬಂದ ಮೇಲೆ ಆಫೀಸಿನಲ್ಲಿ ಸೇವಿಸಿದುದೆಲ್ಲ ವಾಂತಿಯಾಗಿತ್ತು. ಹೌದು. ಅದರ ಜೊತೆಗೇ ಗಂಟಲು ನೋವೂ ಹೆಚ್ಚಾಗಿತ್ತಲ್ಲವೇ?

"Mental strain ಬಹಳ ಮಾಡಿಕೊಂಡಿರೇನು?"

ಹೌದು. ತನಗೆ ಆತನಿಂದಾಗಿ Mental strain ಆಗಿತ್ತು. ಆದರೆ ಇಷ್ಟಾಗಿತ್ತೆಂದು ತನಗೆ ಅನ್ನಿಸಿರಲೇ ಇಲ್ಲವಲ್ಲ! ಛೇ!.

× × ×

"ಶೈಲಾ ಶೈಲಾ, ನಿದ್ದೆಯೇನು?" ತಾಯಿ ಮೆಲುವಾಗಿ ಕರೆಯುತ್ತಿದ್ದರು.

ಶೈಲಾ ಕಣ್ಣು ತೆರೆದಳು.

"ನಿದ್ದೆ ಹತ್ತಿತೆಂದು ಕಾಣುತ್ತದೆ?" ತಾಯಿ ಕೇಳಿದರು.

"ಇಲ್ಲ, ನಿದ್ದೆ ಬಂದಂತಾಗಿದೆ. ಕಣ್ಣು ಎಳೀತವೆ"

"ಈ ಬೋರ್ನವಿಟಾ ಕುಡಿದು ಮಲಗಿಬಿಡು"

"ಬೇಡ. ನಾಲ್ಕು ಬಿಸ್ಕೀಟ ಕೊಡು."

ಬಿಸ್ಕೀಟು ತಿಂದನಂತರ ತಾಯಿ ಒತ್ತಾಯದಿಂದ ಹಾಲು ಕುಡಿ ಎಂದರು.

ಶೈಲಾ ಈಗ ಬೇಡ ಎನ್ನಲಿಲ್ಲ. ಕುಡಿದು ಮಲಗಿಕೊಂಡಳು.

ಅವಳಿಗೆ ಎಚ್ಚರಾದಾಗ ಬೆಳ್ಳನೆ ಬೆಳಗಾಗಿತ್ತು.

ಶೈಲಾ ಹಾಸಿಗೆಯಲ್ಲೇ ಎದ್ದು ಕುಳಿತಳು.

ತಲೆ ಹಗುರಾದಂತೆ ತೋರಿತವಳಿಗೆ

ಮುದ್ದಣ ಕಂಡ ಶಿವ

ಡಾ|| ಶ್ರೀನಿವಾಸ ಹಾವನೂರ
ಮತ್ತು
ವಿದ್ವಾನ್ ರಾಮಚಂದ್ರ ಉಚ್ಚಿಲ್

ಮುದ್ದಣನ ಯಕ್ಷಗಾನ ಕೃತಿಗಳಾದ ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯಗಳಲ್ಲಿ ಶಿವನು ಕಥಾನಾಯಕನಲ್ಲ. ಅದ್ಭುತ ರಾಮಾಯಣ, ಶ್ರೀ ರಾಮ ಪಟ್ಟಾಭಿಷೇಕ ಹಾಗೂ ರಾಮಾಶ್ವಮೇಧಗಳಲ್ಲಿ ರಾಮನೇ ಮುಖ್ಯನಲ್ಲದೆ ಶಿವನಲ್ಲ. ಆದರೂ ಇವೈದೂ ಕೃತಿಗಳಲ್ಲಿ ಶಿವನು ಪ್ರಾಮುಖ್ಯವಾಗಿ ಕಾಣಿಸಿಕೊಳ್ಳುತ್ತಾನೆ. ಮುದ್ದಣನು ಸೃಷ್ಟಿಸಿದ ಯಾವುದೇ ನರ–ದೇವತಾ ಪಾತ್ರಗಳಿಗಿಂತ ಶಿವನು ಉಚ್ಚಸ್ಥಾನದಲ್ಲಿದ್ದಾನೆ–ವೈಕುಂಠದ ಶ್ರೀ ಹರಿ ಹಾಗೂ ಅಯೋಧ್ಯೆಯ ರಾಮಚಂದ್ರನೂ ಇವಕ್ಕೆ ಸರಿಸಾಟಿಯಲ್ಲ.

ಅದು ಹೇಗೆ ಸಾಧ್ಯ? ಮುದ್ದಣನು ಹರಿ–ಹರರಲ್ಲಿ ಭೇದ ಮಾಡದ ಅದ್ವೈತಿ. 'ಶಿವನೊಳಂ ತನ್ನೊಳಂ ಭೇದಮೇಂ ತಿಲಮಾತ್ರ ವಿಲ್ಲ' (ರಾಮಪ.) ಎಂದು ಸ್ವತಃ ಶ್ರೀರಾಮನ ಬಾಯಿಯಿಂದ ಹೇಳಿಸಿದ್ದಾನೆ–ಮುದ್ದಣ. ಮತ್ತಲ್ಲದೆ ರಾಮಚಂದ್ರನು ಶತ್ರುಘ್ನನಿಗೆ 'ಹರಿಹರರೊಳ್ ಭೇದಮನೆಣಿಸದವರಂ ಕಂಡರೆ ನೀನೂ ಅವರಲ್ಲಿ ಭೇದಮನೆಣಿಸಬೇಡ' ಎಂದೂ ಉಪದೇಶಿಸಿದ್ದಾನೆ. ಹೀಗಿರುತ್ತ, ಮುದ್ದಣನು ಹರನಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಸಲ್ಲಿಸಿರುವನೆಂಬ ಮಾತು ಮುದ್ದಣಾಭ್ಯಾಸಿಗಳಿಗೆ ಹಿಡಿಸದು. ನಾವಾದರೂ ಮೊದಲು ಹಾಗೇ ತಿಳಿದಿದ್ದೆವು. ಈಗ ಮಾತ್ರ ಮುದ್ದಣನು ಶಿವ ಪಕ್ಷಪಾತಿ–ಎಂಬ ನಿಶ್ಚಿತ ನಿಲುಮೆಗೆ ಬಂದಿದ್ದೇವೆ. ಇದನ್ನು ನಮಗೆ ಮನಗಾಣಿಸಿದ್ದು–ಗಣಕಯಂತ್ರ!

ಹೌದು. ಮುದ್ದಣನ ಶಬ್ದಸೃಷ್ಟಿಯ ವ್ಯಾಪ್ತಿ ವೈವಿಧ್ಯಗಳನ್ನು ಗಣಕ ಯಂತ್ರದ ನೆರವಿನಿಂದ ಅಭ್ಯಸಿಸುವ ಯೋಜನೆಯೊಂದನ್ನು ಮುಂಬಯಿಯ ಶ್ರೀ ದ್ವೈಪಾಯನ ಟ್ರಸ್ಟಿನವರು ಹಮ್ಮಿಕೊಂಡು ಆ ಕೆಲಸವನ್ನು ನಮಗೆ ಒಪ್ಪಿಸಿದ್ದಾರೆ. ಯೋಜನೆಯ ಮೊದಲ ಹಂತವೆಂದು, ಮುದ್ದಣನ ಕೃತಿ ಪಂಚಕದಲ್ಲಿ ಬರುವ ಶಿವನ ಹೆಸರಿನ ಎಲ್ಲ ಶಬ್ದಗಳನ್ನು ಗಣಕಯಂತ್ರಕ್ಕೆ ಪೂರೈಸಿದೆವು. ಅದರ ವಿಶ್ಲೇಷಣೆಯಿಂದ ಶಿವನೇ ಮುದ್ದಣನ ಆರಾಧ್ಯದೈವತವೆಂಬುದು . ಸ್ಪಷ್ಟವಾಗಿ ಗೋಚರವಾಯಿತು.

ಮೇಲಣ ಅಧ್ಯಯನಕ್ಕಾಗಿ ನಾವು ಇನ್ನು ಕೆಲವು ದೇವತಾ ಶಬ್ದಗಳನ್ನು ಕಂಪ್ಯೂಟರಿಗೆ ಪೂರೈಸಿದ್ದೆವು. ಆ ಯಂತ್ರವು ವಿಶ್ಲೇಷಿಸಿದ ಪ್ರಕಾರ ಅವನ ವಿವಿಧ ಕೃತಿಗಳಲ್ಲಿ ಎಷ್ಟು ಶಬ್ದಗಳಿವೆಯೆಂಬುದನ್ನು ಈ ಕೆಳಗಿನ ಪಟ್ಟಿಯಿಂದ ಕಾಣಬಹುದು.

ಇಂದ್ರ ಬ್ರಹ್ಮರು ಶಿವನ ಹಿರಿಮೆಗೆ ಸಾಟಿಯಾಗಲಾರರೆಂಬುದು ಸರಿಯೇ. ಹರಿಯನ್ನೂ ಬೇಕಾದರೆ ಕ್ಷಣ ಹೊತ್ತು ಬದಿಗಿರಿಸೋಣ. ಆದರೆ ಒಂದಲ್ಲ, ಮೂರು ಕಾವ್ಯಗಳಲ್ಲಿ ಕಥಾನಾಯಕನಾಗಿ ಬಂದಿದ್ದ ಶ್ರೀರಾಮನನ್ನೂ ಹಿಂದೆ ಹಾಕಿ ಶಿವನು (ಶಬ್ದರೂಪದಲ್ಲಿ) ಇಷ್ಟರ ಮಟ್ಟಿಗೆ ಕಾಣಿಸಿಕೊಳ್ಳುವುದಕ್ಕೆ ಏನೆಂದು ಅರ್ಥ ಹಚ್ಚುವಿರಿ.?

ಒಟ್ಟಿನ ಪದ ಪ್ರಯೋಗದ ಸಂಖ್ಯೆ 305 ಎಂದೆವು. (ಅವುಗಳಲ್ಲಿ ಶಿವ, ಹರ, ಈಶ್ವರ ಎಂಬ ಸಾಮಾನ್ಯ ಬಳಕೆಯಲ್ಲಿ ಪದಗಳನ್ನು ನಾವು ಗಣನೆಗೆ ತೆಗೆದುಕೊಂಡಿಲ್ಲ.) ಈ 305ರಲ್ಲಿ ಕೆಲವು ಪುನರುಕ್ತವಾಗುವುದು ಸಹಜವೇ. (ಉದಾ. ಗೆ. 'ಇಂದುಶೇಖರ'ವು ನಾಲ್ಕು ಸಲ ಬಂದಿದೆ). ಈ ಪುನರುಕ್ತಿಗಳನ್ನು ಬಿಟ್ಟರೆ, ಮುದ್ದಣನು ಬಳಸಿದ್ದ ಶಿವಾರ್ಥದ ಮೂಲ ಶಬ್ದಗಳು 188 ಇವೆ. ಇದು ದೊಡ್ಡ ಸಂಖ್ಯೆಯೇ. ಸಮಾನಾರ್ಥವನ್ನು ಕೊಡುವ ಅಮರಕೋಶದಲ್ಲಿ ಶಿವಪರವಾದ ನಾಮಗಳು 53 ಇವೆ. ಅವುಗಳಲ್ಲಿ ಮುದ್ದಣನು ಬಳಸಿಕೊಂಡದ್ದು 26 ಮಾತ್ರ. ಇನ್ನುಳಿದವು ಹಳೆಯ ಕಾವ್ಯಗಳಿಂದ ಸ್ವೀಕರಿಸಿದವುಗಳು. ಅದಕ್ಕಿಂತ ಹೆಚ್ಚಾಗಿ, ಮುದ್ದಣನೇ ಸೃಷ್ಟಿಸಿ ಕನ್ನಡ ವಾಗ್ದೇವಿಯ ಭಂಡಾರಕ್ಕೆ ಕಾಣಿಕೆಯಾಗಿ ಅರ್ಪಿಸಿದ ಶಬ್ದಗಳು ಸಾಕಷ್ಟಿವೆ. ಈ ಶಬ್ದ ಸಮುದಾಯವನ್ನು ಇನ್ನಷ್ಟು ವಿಶ್ಲೇಷಿಸಿದಾಗ ತೋರಿ ಬಂದ ಶಿವನ ಗುಣ ವಿಶೇಷಗಳ ಹರುಹು ನಮ್ಮನ್ನು ಬೆರಗುಗೊಳಿಸಿತು. ಸ್ಥಾಲೀಪುಲಾಕನ್ಯಾಯದಿಂದ ಕೆಲವನ್ನು ಮಾತ್ರ ಇಲ್ಲಿ ನಿರ್ದೇಶಿಸುತ್ತೇವೆ.

ಶಿವನು ತನ್ನ ಹಣೆಗಣ್ಣಿನಿಂದ ಕಾಮನನ್ನು ಸುಟ್ಟು ಹಾಕಿದ ಅಂಶವು ಮುದ್ದಣನನ್ನು ವಿಶೇಷವಾಗಿ ಸೆರೆಹಿಡಿದಿದೆ. ಆತ ಹಣೆಗಣ್ಣನೆಂಬುದನ್ನು ಅನಲೇಕ್ಷಣ, ಕೃಶಾನುನೇತ್ರ, ತ್ರಿಲೋಚನ, ನಿಟಿಲನಯನ, ನೀಲಲೋಹಿತ, ಫಾಲಾಕ್ಷ, ಭಾಳಾಕ್ಷ, ರಂಗತ್ರಿನೇತ್ರ ಮುಂತಾದ ಶಬ್ದಗಳು ಸಾರುತ್ತವೆ. ಜೊತೆಗೆ ಉರಿಗಣ್ಣ, ನೊಸಲ (ಕಣ್ಣ) ಹಣೆಗಣ್ಣ–ಎಂಬ ಅಚ್ಚ ಕನ್ನಡ ಶಬ್ದಗಳೂ ಇವೆ. ಇನ್ನು ಅವನು ಕಾಮಧ್ವಂಸಿಯೆಂಬುದನ್ನು ಅಂಗಜಾರಿ, ಕಂತುವೈರಿ, ಕಾಮಾರಾತಿ, ಜಿತಮದನ, ಚಿತ್ತಜಾರಿ, ಸ್ಮರಹರ, ಹರಿಸುತಾಹಿತವೆಂಬೀ ಶಬ್ದಗಳ ಬಳಕೆಯಲ್ಲಿ ಕಾಣುತ್ತೇವೆ. ದಪ್ಪಕವಣೆಯ =(ಕಂದರ್ಪಾರಿ) ಎಂಬುದು ಮುದ್ದಣನ ಖಾಸಾ ಸೃಷ್ಟಿ.

ದೇವತೆ	ರತ್ನಾ	ಕು. ವಿ.	ರಾಮಪ.	ಅ. ರಾ.	ರಾಮಾಶ್ವ.	ಒಟ್ಟು.
ಬ್ರಹ್ಮ	6	41	14	26	16	103
ಇಂದ್ರ	–	119	12	10	8	149
ಹರಿ	27	46	6	54	26	156
ರಾಮಚಂದ್ರ	2	–	106	19	64	191
ಹರ	12	212	25	5	51	305

ಶಿವನಿಗೆ ಮುಖಗಳು ಒಂದೊ? ಐದೊ? ಎಂಟೊ? ಪುರಾಣಗಳಲ್ಲಿಯೇ ಈ ಭೇದವಿದೆ. ಮುದ್ದಣನು ಶಿವನನ್ನು ಐಗಳ. ಐಮೊಗ, ಪಂಚವದನನೆಂದು ಕರೆದುದರ ಜೊತೆಗೆ ಅಷ್ಟಮೂರ್ತಿ, ಎಣ್ಮಯ್ಯವ ಎಂದೂ ಹೆಸರಿಸಿದ್ದಾನೆ. ಶಿವನ ಬಿಳಿಯ ಕುತ್ತಿಗೆಯು ಕಾಲಕೂಟ ವಿಷದಿಂದ ಕಪ್ಪು–ನೀಲಿ ಬಣ್ಣ ತಾಳಿದುದನ್ನು ಕಂದುಗೊರಲ, ನೀಲಕಂಧರ, ನಂಜುಂಡ, ಶಿತಿಕಂಠ–ಎಂಬೀ ಪದಗಳು ವರ್ಣಿಸುತ್ತವೆ.

ಶಿವನ ಶಿರೋಭೂಷಣಗಳಾದ ಅರ್ಧಚಂದ್ರ ಹಾಗೂ ಗಂಗಾ ಸಲಿಲ–ಇವು ಅರೆದಿಂಗಳ, ಗಂಗೋತ್ತಮಾಂಗ, ತೊರೆದಲೆಯ, ವಿಧುಲಾಂಛನ ಎಂಬ ಪದಗಳ ಮೂಲಕ ನಮ್ಮ ಮನದಲ್ಲಿ ಚೆನ್ನಾಗಿ ನೆಲೆಗೊಳ್ಳುತ್ತವೆ. ಇವುಗಳಲ್ಲಿ ತೊರೆದಲೆಯ ಎಂಬುದು ಮುದ್ದಣನ ಸ್ವಸೃಷ್ಟಿಯೆಂದು ತೋರುತ್ತದೆ. ಶಿವನು ವ್ಯೋಮಕೇಶನೆಂಬ ಕಲ್ಪನೆಯನ್ನು ಮುದ್ದಣನು ವಿಶೇಷವಾಗಿ ಮೆಚ್ಚಿಕೊಂಡಿರಬೇಕೆಂಬುದು, ಬಾಂಗುರುಳ, ಬಾಂಗೂದಲ, ಬಾಂಬೊಚ್ಚದಲೆಯ, ಬಾನ್ನವಿರ ಎಂಬೀ ಸ್ವಸೃಷ್ಟಿಯ ಇಲ್ಲವೆ ಈ ಹಿಂದೆ ಕ್ವಚಿತ್ತಾಗಿ ಶಬ್ದಗಳ ಬಳಕೆಯಲ್ಲಿ ವ್ಯಕ್ತವಾಗಿದೆ.

ಶಿವನು ಸರ್ಪಭೂಷಣನೆಂಬುದು ಬಹುಜನಪ್ರೀತವಾದುದು. ಮುದ್ದಣನಿಗೂ ಅಷ್ಟೇ. ಅಹೀನಾಲಂಕೃತಾಂಗ, ದ್ವಿಜರಾಜಧರ, ಫಣಿಕುಂಡಲ, ಭುಜಗಭೂಷ ಎಂದೆಲ್ಲ ಶಿವನನ್ನು ವರ್ಣಿಸಿದ್ದಾನೆ. ಅವರೆ ಶಿವನು 'ಎಲರುಣಿಪೆದೆಯ' (ಸರ್ಪವು ಹೆದೆಯಾಗಿ ಉಳ್ಳವ) ಎಂಬ ಅಂಶವು ಅಪೂರ್ವವಾದುದು. ಇತರ ವೇಷಭೂಷದ ಬಗ್ಗೆ ಹೇಳುವುದಾದರೆ, ಶಿವನು ಸಿತಾಂಗ, ಅರ್ಥಾತ್ ಬೂದಿಬಡಕ. ಅವನ ವ್ಯಾಘ್ರಾಂಬರವನ್ನು ಮುದ್ದಣನು 'ಬಗ್ಗದೊವಲೊಡೆಯ' ಎಂದು ಕನ್ನಡಿಸಿದ್ದಾನೆ. ತೊವಲುಡೆಯ, ತೊವಲ್ದೊಡೆಯ ಎಂದೂ ಕರೆದಿದ್ದಾನೆ

ಶಿವನನ್ನು ಅರೆಮೆಯ್ಯ, ಅರೆವೆಣ್ಮೆಯ್ಯ ಎಂದು ಹೇಳುವಾಗ, ಆತ ಗಿರಿಜಾಪತಿಯೆಂಬುದನ್ನು ಮುದ್ದಣನು ಗಮನಿಸಿರಲೇ ಬೇಕು. ಆ ಭಾವವನ್ನು ಹೊಮ್ಮಿಸುವ ಅನೇಕ ಶಬ್ದಗಳನ್ನು ಮುದ್ದಣನು ಬಳಸಿದ್ದಾನೆ. ಶಿವನು 'ಅಚಲಾತ್ಮಜಾನನ ಕೈರವಾಪ್ತ' ಎಂಬುದರ ಹಿಂದಿನ ಕಲ್ಪನೆ ರಮ್ಯವಾದುದು.

ಶಿವನು ಭವನೂ ಹೌದು. ಅಭವನೂ ಹೌದು. ಈಶನೂ ಅಹುದು, ಈಶನೀಶನೂ ಅಹುದು; ಅನರಂತೆ ಕಾಲಕಂಧರ ಕಾಲನು. ಶಿವನನ್ನು ಸಾಂತ(ಶಾಂತ) ಮತ್ತು ಸಬ್ಬ (ಶರ್ವ) ಎಂದು ವಿಶೇಷಿಸಿದುದು ಒಂದು ವಿಶೇಷ. ಇವು ಮುದ್ದಣನ ತದ್ಭವ ಪ್ರಿಯತೆಯ ಜೊತೆಗೆ ಶಿವನ ಸ್ವರೂಪ ದರ್ಶನಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ.

ಮೇಲಿನ ವಿವೇಚನೆಯಷ್ಟರಿಂದಲೇ ಮುದ್ದಣನು ಶಿವನನ್ನು ಅದೆಷ್ಟು ವೈವಿಧ್ಯಮಯವಾಗಿ ರೂಪಿಸಿರುವನೆಂಬುದು ಕಂಡುಬಾರದಿರದು. ಗಮನಿಸಬೇಕಾದ

ಇನ್ನೊಂದು ಮಾತೆಂದರೆ, ಶಿವನ ವ್ಯಕ್ತಿತ್ವದ ಅನೇಕ ಅಂಶಗಳು ನಮಗೆ ಗೊತ್ತಿದ್ದುವೇ ಆಗಿದ್ದರೂ, ಅವನ್ನು ಕಾವ್ಯದಲ್ಲಿ ಮೂಡಿಸುವಾಗ ಮುದ್ದಣನು ಹೊಸ ಹೊಸ ಶಬ್ದಗಳನ್ನು ಸೃಷ್ಟಿ ಮಾಡುತ್ತಿದ್ದುದು. ಜೊತೆಗೆ, ಒಮ್ಮೆ ಬಳಸಿದ ಶಬ್ದಗಳನ್ನು ಮತ್ತೆ ಮತ್ತೆ ತರಲು ಅವನ ಮನಸ್ಸು ಒಡಂಬಡುತ್ತಿದ್ದಿಲ್ಲ. ಶಿವ ಶಬ್ದಗಳ 188: 305 ಈ ಒಟ್ಟಿನ ಪ್ರಮಾಣವನ್ನು (ratio) ಗಮನಿಸಿದಾಗ ಇದು ವೇದ್ಯವಾಗುತ್ತದೆ.

ಇನ್ನೀಗ ಮುದ್ದಣನು ಕಥಾ ಸಂದರ್ಭಗಳಲ್ಲಿ, ಇತರ ವರ್ಣನೆಗಳಲ್ಲಿ ಎಷ್ಟರ ಮಟ್ಟಿಗೆ ಶಿವ ಪಾರಮ್ಯವನ್ನು ತೋರಿದ್ದಾನೆಂಬುದನ್ನು ನೋಡೋಣ. * ಮುದ್ದಣನು ಹಳೆಯ ಕವಿಗಳಂತೆ ದೇವತಾಸ್ತುತಿಯಿಂದ ಕಾವ್ಯವನ್ನು ಆರಂಭಿಸುವ ಪ್ರವೃತ್ತಿಯವನಲ್ಲವಾದರೂ, ಮೊದಲಿನ ಮೂರು ಕೃತಿಗಳಲ್ಲಿ ಆ ಕ್ರಮವೇ ಇದೆ, ಹಾಗೆ ಮಾಡುವಾಗ ಅವನು ಶಿವನಿಗೇ ಆದ್ಯತೆಯನ್ನು ನೀಡಿದ್ದಾನೆ. ರತ್ನಾವತೀ ಕಲ್ಯಾಣವನ್ನು 'ಹರಗಿರಿಜೆಯರಿಗೆ ಎರಗಿ' ಆರಂಭಿಸುತ್ತಾನೆ. ಹಾಗೂ 'ಪುರಹರನ ಕೃಪೆಯಿಂದ ಮುಂಗಥೆಯನ್ನು ವರ್ಣಿಪೆ'ನೆಂದು ಅದೇ ಪದ್ಯದಲ್ಲಿ ಹೇಳಿದ್ದಾನೆ. ಕುಮಾರ ವಿಜಯದಲ್ಲಿ ಗಣೇಶಸ್ತುತಿ ಮೊದಲಿಗೆ ಇದೆಯಾದರೂ, ಅದರ ನಂತರದ್ದು ಹರಸ್ತೋತ್ರವೇ. ಇದರಲ್ಲಿ ಕಥೆ ಹೇಳುವ ಸೂತ ಮತ್ತು ಅದನ್ನು ಆಲಿಸುವ ಮುನಿಗಳು ಪುರಹರನನ್ನು 'ನಿಶ್ಚಲ ಚಿತ್ತದಿಂದ ನೆನೆದು' ಮುಂದುವರಿಯುತ್ತಾರೆ. ಶ್ರೀ ರಾಮ ಪಟ್ಟಾಭಿಷೇಕದ ನಾಂದೀಪದ್ಯವಂತೂ ಶಿವ–ರಾಮರಿಬ್ಬರದೂ ಸ್ತುತಿಯಾಗಿದೆ. ಶ್ಲೇಷೆಯಿಂದಾಗಿ, ಕುಮಾರ ವಿಜಯದ ಕೊನೆಯಲ್ಲಿ ಮುದ್ದಣನು 'ಹರನು ಪ್ರೇರೇಪಿಸಿದ ತೆರನಿದೆ ಬರೆದೆ' ಎಂದು ಸ್ಪಷ್ಟಗೊಳಿಸಿ, ಶಿವನ ಹೆಸರಿನಲ್ಲೇ ಮಂಗಳ ಗೀತ ಹಾಡಿದ್ದಾನೆ.

ಶಿವಭಕ್ತರು

ಮುದ್ದಣನು ತನ್ನ ಕೃತಿ ಪಂಚಕದಲ್ಲಿ ಚಿತ್ರಿಸಿದ ಪಾತ್ರಗಳಲ್ಲಿ ಮುಕ್ಕಾಲು ಪಾಲಿನ ಜನ ಶಿವಭಕ್ತರು. ಅವರಲ್ಲಿ ಎದ್ದು ಕಾಣುವವರೆಂದರೆ ನಾರದ ಹಾಗೂ ಇಂದ್ರ–ಇಂದ್ರಾಣಿಯರು. ವೈಕುಂಠ ಲೋಕದಲ್ಲಿದ್ದುಕೊಂಡು ಸದಾ ವಿಷ್ಣುಧ್ಯಾನದಲ್ಲಿ ನಿರತರಾಗಿರಬೇಕಾದ ನಾರದನು ಶಿವದೀಕ್ಷೆಯನ್ನು ಹೊಂದಿದನೆ? ಎಂದೆನಿಸುವಷ್ಟು ಶಿವಧ್ಯಾನದಲ್ಲಿ ತೊಡಗಿದ್ದಾನೆ! ಅವನು ನಮಗೆ ಮೊದಲು ಕಾಣಿಸಿಕೊಳ್ಳುವುದು ದೃಢವರ್ಮನ ಆಸ್ಥಾನದಲ್ಲಿ. ಆಗಿನ 'ಕಂತು ಪಿತನಂ ಮನದಿ ಚಿಂತಿಸುತ' ಎಂಬೊಂದು ಕುಂಟುಪಂಕ್ತಿಯನ್ನು ಬಿಟ್ಟರೆ, ಮತ್ತಿನದೆಲ್ಲ ಶಿವಸ್ತುತಿಯೇ. ದೃಢವರ್ಮನಾದರೂ ಮೂಲತಃ 'ಶ್ರೀ ಕಾಂತನ ಕಟಾಕ್ಷವನ್ನು ಹೊಂದಿದವ, ಆದರೆ ಅವನಿಗೆ ಕರುಣದಿಂದ ಮಕ್ಕಳನ್ನು ದಯಪಾಲಿಸುವವ ಭಾವಜಾರಿಯು. ದೃಢವರ್ಮನ ಹೆಂಡತಿ ಸೌರಂಭೆಯಾದರೂ ಪುರಹರನನ್ನು ನೆನೆವುತ್ತ ಮಂತ್ರಪೂತ ಫಲವನ್ನು ಭಕ್ಷಿಸುತ್ತಾಳೆ.

---

* ಹೀಗೆ ಮಾಡುವಾಗ ಗಣಕ ಯಂತ್ರವು ನೆರವಾಯಿತೆಂಬುದನ್ನು ಮ[illegible] ಉಲ್ಲೇಖಿಸಬಯಸುತ್ತೇವೆ ಎಂದರೆ, ಅದು ಪಟ್ಟಿಮಾಡಿಕೊಟ್ಟ ಶಿವವಾಚಕಪದಗಳನ್ನು [illegible] ಅಂಥ ಸಂದರ್ಭಗಳನ್ನು ಸುಲಭ ಸಹಜವಾಗಿ ಗುರುತಿಸಲಾಗಿದೆ.

ನಾರದನ ಎರಡನೇ ಭೇಟಿ ನಮಗೆ ಶೂರ ಪದ್ಮಾಸುರನ ಆಸ್ಥಾನದಲ್ಲಿ ಅವನು 'ಕಾಲ ಕಂಧರ ಕಾಲ ಕಾಲ ದಿಶಾ ಪಟ ಫಾಲನಯನ ಶಂಕರ' ಎಂದು ಹಾಡಿಕೊಳ್ಳುತ್ತಲೇ ಒಳಗೆ ಪ್ರವೇಶಿಸುವನು. ಅಲ್ಲಿ ಕಲಹ ಬೀಜವನ್ನು ಬಿತ್ತಿ ಇಂದ್ರನ ಆಸ್ಥಾನಕ್ಕೆ ಹೋದಾಗ ಇಂದ್ರನು ಬರಮಾಡಿಕೊಳ್ಳುವುದು 'ಈಶ ಗಿರೀಶ ಗಣೇಶ ಮಹೇಶ ಉಮೇಶನ ಕರುಣದ ದಾಸ'ನನ್ನು, ಮತ್ತೊಂದು ಬಾರಿ ಇಂದ್ರನಲ್ಲಿಗೆ ಬಂದಾಗಲೂ ಅವನ ತಾಳ–ತಂಬೂರಿಗಳು ಶಿವಸ್ತೋತ್ರವನ್ನೇ ನುಡಿಸುತ್ತಿದ್ದುವು! ಯಕ್ಷಗಾನಗಳಲ್ಲಿ ಬರುವ ನಾರದ ಪಾತ್ರವು ಶಿವನನ್ನು ಹಾಡಿ ಹೊಗಳುವುದು ಅಪೂರ್ವವಲ್ಲವಾದರೂ, ಮುದ್ದಣ ಸೃಷ್ಟಿಸಿದ ನಾರದ ಮಾತ್ರ 99% ಶಿವಭಕ್ತನೇ ಇದ್ದಾನೆ.

ಶಿವಭಕ್ತೆಯರು

ರಾಕ್ಷಸನಾದ ಪದ್ಮಾಸುರನು ಇಂದ್ರಾಣಿಯನ್ನು ಅಪಹರಿಸಿಕೊಂಡು ಹೋಗುವ ಬರಿ ವಾರ್ತೆಯಿಂದ ಕಂಗೆಟ್ಟ ಇಂದ್ರನಿಗೂ ಸಾಮಾನ್ಯ ಮನುಷ್ಯನಿಗೂ ಅಂತರವೇ ಇಲ್ಲ. ಇದರಿಂದ ಪಾರಾಗಲು ಗಂಡ ಹೆಂಡಿರಿಬ್ಬರೂ ಮೊದಲಿನಿಂದ ಕೊನೆಯವರೆಗೆ ಶಿವನನ್ನೇ ನಂಬಿದ್ದಾರೆ. ಪದ್ಮಾಸುರನ ಇಂಗಿತವು ತಿಳಿದಾಗ 'ಏತಕೊ ಮುನಿದನೊ ಶಂಕರನು'? ಎಂದು ಇಂದ್ರನ ಯೋಚನೆ. ಇಂದ್ರಾಣಿ ಡಿಟೊ!' 'ಕಂಗೊರಳ ದಯವನ್ನು ತೊರೆದನೆ?' ಎನ್ನುತ್ತಾಳೆ. ಆ ಮುಂದೆ ಇಂದ್ರನು ಸತಿಯೊಡನೆ 'ವಿಪಿನದೊಳ್ ಈಶನ ಪದಯುಗ ಜಪಿಸುತ್ತ' ಇದ್ದನು. ಅತ್ತ, ಅಮರಾವತಿಯಲ್ಲಿ ಮಗ ಜಯಂತನು ಸೆರೆಹಿಡಿಯಲ್ಪಟ್ಟ ವಾರ್ತೆ ತಿಳಿದಾಗ 'ಚಂದ್ರಶೇಖರನ ಹೊರತು ಎಮ್ಮ ಸಾಕುವರಿಹರೆ' ಎಂದು ಇಂದ್ರಾಣಿ ದುಃಖಿಸುತ್ತಾಳೆ. ಆಗ 'ಕ್ಲೇಶ ಲೇಶ ಬೇಡ. ಮಧುರ ಭಾಷೆ, ಹರನ ಭಜಿಸಿರು' ಎಂದು ಅವಳ ಪತಿರಾಯನು ಸಮಾಧಾನ ಹೇಳುವನು. ಪದ್ಮಾಸುರನ ತಂಗಿ ಅಜಮುಖಿಯು ಕೈಮಾಡಿದಾಗಲಂತೂ ಇಂದ್ರಾಣಿಯ ಶಿವಭಕ್ತಿ ಉಕ್ಕೇರಿದೆ. 'ನಂಬಿದ ಭಕ್ತರ ಸಲಹುವೆನೆಂಬುವ ಬಿರುದೆಲ್ಲಿಹುದೆಲೆ ಶಂಭು, ಸದಾಶಿವ, ಮೃಡ ಎನಗಿಂಬಿಲ್ಲವೆ ಸ್ವಾಮಿ' ಎಂದು ಹಲುಬುತ್ತಾಳೆ. ಜೊತೆಗೆ ಗಿರಿಜೆಯನ್ನೂ ಪ್ರಾರ್ಥಿಸುತ್ತಾಳೆ.

ದೇವೇಂದ್ರನ ಮನಃಸ್ಥಿತಿಯೇ ಹಾಗಿದ್ದಾಗ ಉಳಿದ ದೇವತೆಗಳ ಪಾಡೇನು? ಮುದ್ದಣನು ಅವರ ಮುಖದಿಂದ ಹಲವಾರು ಸ್ತೋತ್ರಗಳನ್ನು ಹೊರಡಿಸಿ ಆ ಮೂಲಕ ತನ್ನ ಶಿವಭಕ್ತಿ ಪ್ರದರ್ಶಿಸಿದ್ದಾನೆ.

ಮುದ್ದಣನು ಕೈಕೇಯಿಯನ್ನೂ ಶಿವಭಕ್ತೆಯನ್ನಾಗಿ ಮಾಡಿದ್ದಾನೆ. ಸಂದರ್ಭ: ಶ್ರೀರಾಮನು ಅಯೋಧ್ಯೆಗೆ ಮರಳಿದ ಮೇಲೆ ತನ್ನ ತಾಯಂದಿರನ್ನು ಕಾಣಹೋಗಿದ್ದುದು. ಕೈಕೇಯಿಯ ಎದುರಿಗೆ ನಿಂತು ರಾಮನು ಮಾತನಾಡಿಸಿದರೂ ಆಕೆ ಮಾತಾಡಲೊಲ್ಲಳು. ಅದರ ಕಾರಣವನ್ನು ಮುದ್ದಣನು ಊಹಿಸಿದ್ದು ಹೀಗೆ: "ಏಕಚಿತ್ತದಿಂ ಮೌನಗೊಂಡು ಅಭವನಂ ಧ್ಯಾನಿಪಳೆ? ಇನ್ನೊಬ್ಬ ಶಿವಭಕ್ತನೆಂದರೆ, 'ಕಾಮಹರನಡಿಯ ನೆನೆವ ಯೋಗಿಯಹೆ' ಎಂದು ಹೇಳಿಕೊಳ್ಳುವ ದೂರ್ವಾಸ, ರಾಜಕುವರಿ ರತ್ನಾವತಿಯ ಶಿವನಿಷ್ಠೆಯು 'ಲೋಕೇಶನಪ್ಪಣೆಯ ಲೋಕದೊಳು ಮೀರ್ವರಾರು' ಎಂದು ತಂದೆಗೆ ಉಪದೇಶಿಸುವಷ್ಟು ಗಾಢವಾದುದು. ಅವನು ಕೇಳಿ ಅವನಿಗೆ ತುಂಬ ಸಂತೋಷವಾಯಿತಂತೆ. ಅವಳ ಪ್ರಿಯಕರನಾದ ವತ್ಸಾಖ್ಯ,

ಅದರಂತೆ ಭರತ ಇವರು ಕೂಡ ಶಿವನನ್ನೇ ನೆನೆಯುತ್ತಾರೆ. ಮುದ್ದಣನ ಪಾತ್ರಗಳಿಗೆ ಆಣೆ ಹಾಕುವ ಪ್ರಸಂಗ ಬಂದರೆ, ಜಿತಕಾಲನಾಣೆ: ವಿಧುಧರನಾಣೆ' ಧೂರ್ಜಟಿಯಾಣೆ ಎಂದೇ ಹೇಳುತ್ತಾರೆ. ಇವರ ಪಾಲಿಗೆ 'ಸಂಕಟ ಬಂದಾಗ ಗಿರಿಜಾರಮಣ'ವಲ್ಲದೆ, ವೆಂಕಟರಮಣನಲ್ಲ!

ಪಿನಾಕಿ ಭಕುತರು

ರಾಕ್ಷಸರಿಗೂ ಶಿವನೇ ದೇವರು– ಅವರಲ್ಲಿ ಕೆಲವರನ್ನು ಅವನು ಸಂಹರಿಸಿದ್ದರೂ ಕೂಡ! ದೇವತೆಗಳಂತೂ ಶಿವನಿಂದಲೇ ಅವರು ಅಷ್ಟು ಸೊಕ್ಕೇರಿದುದೆಂದು ನೆರೆ ನಂಬಿದ್ದಾರೆ. "ಭಾಳನಯನನು ಅವರ ಆಳಾಗಿಹನು" ಎಂದು ನಿರ್ಭಿಡೆಯಿಂದ ಹೇಳುತ್ತಾರೆ. ಅದ್ಭುತ ರಾಮಾಯಣದಲ್ಲಿ ಶತಕಂಠನಿಗೆ ಮಹಾದೇವನ ಕೃಪಾಪ್ರಸಾದವಿದ್ದಿತೆಂದೇ, ಅವನು ರಾಮನನ್ನು ಹಣ್ಣು ಮಾಡಿದನು. ಕುಮಾರ ವಿಜಯದಲ್ಲಿ ಬರುವ ಭಾನುಕೋಪನು ಯುದ್ಧಕ್ಕೆ ಹೊರಡುವ ಮುನ್ನ ತಾಯಿಯ ಬಳಿಗೆ ಹೋದಾಗ, ಆಕೆ ಪುರಹರನ ಪಾದವನ್ನು ನೆರೆನಂಬು' ಎನ್ನುತ್ತಾಳೆ. ಅವನ ಬಂಧುವಾದ (ಪದ್ಮಾಸುರನ ಇನ್ನೊಬ್ಬ ಮಗ) ಹಿರಣ್ಯನನ್ನು ನಮಗೆ ಪರಿಚಯಿಸಿಕೊಡುವಾಗ, ಮುದ್ದಣನು 'ಶ್ರೀ ಮಹೇಶ ಪದಾಬ್ಜ ಮಧುಕರ ಪ್ರೇಮಪುತ್ರ' ನೆಂಬ ಶಿಫಾರಸನ್ನು ಅವನಿಗೆ ಕೊಟ್ಟುಬಿಟ್ಟಿದ್ದಾನೆ. ವಿಭೀಷಣನನ್ನು ನೆನಪಿಗೆ ತರುವ ಹಿರಣ್ಯನು ಷಣ್ಮುಖನೊಂದಿಗೆ ಯುದ್ಧ ಬೇಡವೆಂಬ ಸಲಹೆಯನ್ನು ಮಾಡಿದ್ದಾಗ, ತಂದೆ ಕೇಳುವುದಿಲ್ಲ. 'ಚಿಂತೆಯಿಲ್ಲ, ಯುದ್ಧದಲ್ಲಿ ಮಡಿದರೆ, ವೃಷಾರೂಢನಂಘ್ರಿಯನ್ನು ಕಾಣಬಹುದು' ಎಂಬ ಮನೋಭಾವ ಅವನದು. ಯುದ್ಧರಂಗದಲ್ಲಿ ಸ್ವತಃ ಶಿವನ ಮಗನೇ ಎದುರಿಗಿದ್ದರೇನಾಯಿತು, 'ಪಿನಾಕಿ ಭಕುತರು ನಾವು' ರಣದೊಳಪಜಯ ಸೋಕದು' 'ಎಂಬ ದೃಢಭಕ್ತಿ ಅವನದು.

ಇನ್ನೀಗ ಶ್ರೀ ಹರಿ, ಅವನ ಸುದರ್ಶನ ಚಕ್ರವು ರುದ್ರಾನುಗ್ರಹದಿಂದ ದೊರೆತುದೆಂದು ಮುದ್ದಣನು ಹೇಳುತ್ತಾನೆ. ಅದ್ಭುತ ರಾಮಾಯಣದಲ್ಲಿ' ಅದರಲ್ಲಿಯೆ ಒಂದೆಡೆ, ರಾಮನನ್ನು 'ನೀನೇ ಮಾದೇವಂ, ನೀನೆ ಮಾಧವಂ' ಎಂದು ಸೊಗಸಾಗಿ ವರ್ಣಿಸಿದ್ದಿದೆ. ಇಲ್ಲಿ ಹರಿಹರಾಭೇದವು ಸ್ಪಷ್ಟವಾಗಿ ಬಂದಿದೆ. ಇತ್ತ ಪದ್ಮಾಸುರ ರಕ್ಕಸನಿಂದ ಬಂದ ವಿಪತ್ತನ್ನು ಪರಿಹರಿಸಲು ಬ್ರಹ್ಮನ ಸಲಹೆಯ ಮೇರೆಗೆ ಇಂದ್ರನು ದೇವತೆಗಳೊಡನೆ ಕಾತರಭಾವದಿಂದ ವಿಷ್ಣುವಿನ ಬಳಿ ಬಂದರೆ, ಅವನಲ್ಲಿರುವ ಪರಿಹಾರ ಒಂದೇಯೆ. "ದಯಾಂಬುಧಿ ಚಂದ್ರಶೇಖರನ ಮರೆ ಸಾರು, ನಿಜ ಪತ್ನಿಯೊಡನೆ!" ಇದಕ್ಕೆ ಪ್ರತಿಯಾಗಿ ಒಂದು ಸನ್ನಿವೇಶವು ಕುಮಾರ ವಿಜಯದಲ್ಲಿ ಬರುತ್ತದೆ. ಗಿರಿಜೆಯು ತನ್ನ 'ಕುಮಾರ'ನನ್ನು ಯುದ್ಧಕ್ಕೆ ಕಳಿಸುವಾಗ ಉಪದೇಶಿಸುವುದು ಹೀಗೆ: "ರತಿಪತಿಪಿತನ ನೆಚ್ಚುತ ಜತನದಿ ದಿತಿಸುತರನು ಜಯಿಸುತ ಬಾ."

ಹಾಗೆಂದು ಮುದ್ದಣನ ಮಾಧವನು ನಿಷ್ಕ್ರಿಯನೇನಲ್ಲ. ತನ್ನ ಚೊಚ್ಚಲ ಕೃತಿಯಲ್ಲಿ ಮುದ್ದಣನು ಶ್ರೀ ಕೃಷ್ಣನಿಗೆ ಮಂಗಳವನ್ನು ಹಾಡಿದ್ದಾನೆ. ಅದ್ಭುತ ರಾಮಾಯಣದ ಪೂರ್ವಾರ್ಧದಲ್ಲಿರುವ ಶ್ರೀಮತೀ ಪರಿಣಯ ಪ್ರಸಂಗದಲ್ಲಿ ಅವನೇ ಕಥಾನಾಯಕನು. ನಾರದನಿಗೆ ಬುದ್ಧಿಗಲಿಸಿದ, ಹೃದ್ಯವಾದ ಆ ಸನ್ನಿವೇಶವನ್ನು ಮುದ್ದಣನು ಆತ್ಮೀಯತೆಯಿಂದ ಚಿತ್ರಿಸಿದ್ದಾನೆ. ತಿಳಿಯಬೇಕಾದ್ದೆಂದರೆ, ಮುದ್ದಣನು ಶ್ರೀ

ಹರಿಯ ಮುಟ್ಟವನೇನು ಸೋಗಿಲ್ಲ; ಹರನಿಗೆ ಸಮಾನನಾದ ಅವನು ಕಂಡಿದ್ದಾನೆ. ಆದರೆ ಮಾದೇವನಿಗೆ ಕೊಟ್ಟಷ್ಟು ಮಹತ್ವ, ಪ್ರಾಶಸ್ತ್ಯಗಳನ್ನು ನಮ್ಮ ಮಾಧವನಿಗೆ ಕೊಟ್ಟಿಲ್ಲ!

ಶಿವ-ರಾಮ

ಶ್ರೀರಾಮಚಂದ್ರ, ಶಿವರ ಸಂಬಂಧವು ಇದಕ್ಕೂ ಹೆಚ್ಚು ಆಳವಾಗಿ ಬಂದಿದೆ; ವೈವಿಧ್ಯದಿಂದ ಕೂಡಿದೆ. ಶ್ರೀ ರಾಮನು 'ಇಂದುಶೇಖರನ ಕೃಪೆ ಮೊದಲು ಎಮ್ಮೊಳಾಯ್ತು?' ಎಂದೂ, ಕೈಕೇಯಿಯೆದುರು 'ಮಾತೆ ನೀಂ ಪರಸಲ್, ಎಣ್ಮಯ್ಯಂ ಕರುಣಿಸಲ್' ಎಂದೂ ಶಿವನ ಮೇಲ್ಮೆಯನ್ನು ಒಪ್ಪಿಕೊಂಡಿದ್ದಾನೆ. ಕೈಲಾಸದ ಈ ಬರಿಗೈ ಗೊರವನು, ರಾಮನ ಪಟ್ಟಾಭಿಷೇಕದ ಕಾಲಕ್ಕೆ ಸುವರ್ಣವನ್ನು ಉಡುಗೊರೆಯಾಗಿ ಕೊಟ್ಟನು. ಸ್ವಯಂ ಬಂದು 'ನಿನ್ನ ನರನಟನೆಯಿಂದ ಧರೆಗೆ ಮಂಗಳಮಾಯ್ತು… ನಿನ್ನವತರಣೆ ಲೇಸು ಪೊಸತಾದುದೆಂದು ಅಭವಂ ಅಭಿನಂದಿಸಿದನು.'

ಈ ಸಂದರ್ಭದಲ್ಲಿ ಶಿವನು ರಾಮನಿಗೆ ಹಿರಿಯಣ್ಣನಂತೆ ಇದ್ದರೂ, ರಾಮಾಶ್ವಮೇಧದ ಕಾಲಕ್ಕೆ ರಾಮನಿಗೆ ಹೆಚ್ಚಿನ ಪ್ರಾಶಸ್ತ್ಯ ಸಂದಿದೆ. ಇಲ್ಲಿ ಶಿವನೂ ರಾಮನಂತೆ ಭೂಮಿಗಿಳಿದು ಬಂದಿದ್ದಾನೆ. ವೀರಮಣಿ ಎಂಬ ರಾಜನ ಮಗಳು ಇಕ್ಷುಮತಿಯ ಗಂಡನಾಗಿ, ಅಳಿಯನು ತನ್ನಲ್ಲಿಯೇ ನಿಂತು ರಾಜ್ಯ ರಕ್ಷಣೆ ಮಾಡಬೇಕೆಂಬುದು, ಮದುವೆಯ ಕಾಲಕ್ಕೆ ಮಾವ ಹಾಕಿದ ಕರಾರು. ಸರಿ; ರಾಮನ ಯಾಗದ ಕುದುರೆ ಬಂದಿತು. ವೀರಮಣಿಯು ಅದನ್ನು ಕಟ್ಟಿ ಹಾಕಿದಾಗ ಶಿವನು ರಾಮನ ಸೈನ್ಯದ ವಿರುದ್ಧ ಕಾದಾಡಬೇಕಾಯಿತು. ಶಿವನು ಹನುಮಂತನೊಡನೆ ಸೆಣಸುತ್ತಿದ್ದಾಗ ಶ್ರೀರಾಮನೇ ಯುದ್ಧರಂಗಕ್ಕೆ ಬರಬೇಕೆ? ಆಗ ಯುದ್ಧವನ್ನು ನಿಲ್ಲಿಸಿ, ಶಿವನು ರಾಘವನ ದರ್ಶನಕ್ಕೆ ಧಾವಿಸಿ, ಕುದುರೆಯನ್ನು ಕಟ್ಟಿ ಹಾಕಿದ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಳ್ಳುವನು. 'ತನಗುಂ ಶಿವಂಗಂ ಇನಿಸುಂ ಭಿನ್ನಮಿಲ್ಲೆಂಬ' ಮಾತನ್ನು ರಾಮನು ಬಹಿರಂಗವಾಗಿ ಸಾರುತ್ತಾನೆ. ಇದನ್ನೆಲ್ಲ ಗಮನಿಸಿದಾಗ, ಮುದ್ದಣನು ಚಿತ್ರಿಸಿದ್ದುದು ಶಿವ-ರಾಮನನ್ನು; ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬನಾದ ರಾಮನನ್ನಲ್ಲ, ಎನಿಸುತ್ತದೆ.

ವಿವಿಧ ವರ್ಣನೆಗಳ ಸಂದರ್ಭದಲ್ಲಿ ಮುದ್ದಣನ ಶಿವನನ್ನು ನೇರವಾಗಿ ಪ್ರಶಂಸಿಸಿ, ತನ್ನ ಭಕ್ತಿಯನ್ನು ವ್ಯಕ್ತಪಡಿಸಿದ ಉದಾಹರಣೆಗಳು ಬೇಕಾದಷ್ಟಿವೆ. ಮಳಲಿ ಸುಬ್ಬರಾಯರು 'ವಿಧುಧರನ ಸದ್ಭಕ್ತ'ರಂತೆ. ಅವರ ಈ ಪರಮ ಶಿಷ್ಯನು ಅಂತೆಯೇ ಇರುವುದು ಸಹಜವೆನ್ನೋಣವೇ? ಮುದ್ದಣನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಶಿವನ ಒಂದು ಹೆಸರನ್ನೇ ತಾನಿಟ್ಟುಕೊಂಡಿದ್ದಾನೆ. !! ಲಕ್ಷ್ಮೀ ನಾರಾಯಣ? ಅಲ್ಲ. ಅದು ತೊಟ್ಟಿಲ ಹೆಸರಾಯಿತು. 'ಮುದ್ದಣ' ಎಂಬುದು ಅವನ ತಂದೆತಾಯಿಗಳು ಅಚ್ಚೆಯಿಂದ ಕರೆದ ಹೆಸರಾಯ್ತು. ಮುದ್ದಣ ನಿಟ್ಟುಕೊಂಡಿದ್ದ ಕಾವ್ಯನಾಮ ಕನ್ನ(ಣ್ಣ)ಡಿಗ! ರಾಮನು ತನ್ನ ಕಣ್ಣನ್ನು ಕೀಳಿ ಶಿವನ ಪಾದಕ್ಕೆ ಒಪ್ಪಿಸಿದನೆಂಬುದು ಯಾವುದೋ ಪುರಾಣದ ಕಥೆ. ಆದ ಕಾರಣ ಶಿವನು ಕಣ್ಣು + ಅಡಿ + ಗ = ಕಣ್ಣಡಿಗ. ಅದು ಕನ್ನಡಿಗ ಎಂದಾದುದು ಮುದ್ರಣ ದೋಷವೊ ಮುದ್ದಣನ ಆಶಯವೋ ತಿಳಿಯದು. ಅಂತೂ ಆ ಪದವು ಈ ಮುದ್ದಣನ ಮೂರು ಕೃತಿಗಳಲ್ಲಿ ಪರ್ಯಾಯ ಮುದ್ರಿಕೆಯಾಗಿ ಬಂದಿದೆ.

ಮುದ್ದಣನ 'ಪೇಟೆಂಟ್' ಆದ ಸಪ್ತಾಕ್ಷರೀ ಮಂತ್ರವನ್ನು ಶಿವನೇ ಮೊದಲು ಜಪಿಸಿದುದಂತೆ! ಆದರಿಂದ ಶಿವನಿಗೆ ಸಿದ್ಧಿಯೂ ದೊರೆಯಿತಂತೆ. 'ರಾಮ ಚಾರಿತ್ರ್ಯವೆಂಬ ಪೀಯೂಷದ ಕಣಗಳು ಸ್ವರ್ಗದಿಂದ ಭೂಮಿಗೆ ಜಗಳ್ದುವು. ಸರಿ; ಅದು ಮುದ್ದಣನಿಗೆ, "ಶಿವನ ಜಟಾಜೂಟದಿಂ ಕೆಳಗೆ ಜಗುಳ್ದ ವಿಯದ್ಗಂಗಾಸಲಿಲದಂತೆ ಭಾಸವಾಯಿತು. ಸಮುದ್ರದ ವರ್ಣನೆ ಮಾಡುವಾಗ (ರಾಮಪ,ದಲ್ಲಿ) ಒಂದೆಡೆ ಸಮುದ್ರನಾಥನು, ದೇವತೆಗಳೆಲ್ಲ ತನ್ನನ್ನು ಕಡೆಗಣಿಸಿ ತಮ್ಮ ಸ್ವಾರ್ಥ ಸಾಧಿಸಿಕೊಂಡರೆಂದು ಹೇಳುವಂತೆ ತೆರೆಗಳು ಮೊರೆಯುತ್ತಿದ್ದುವೆಂದು ವರ್ಣಿಸಿದ್ದಿದೆ. ಉದಾಹರಣೆಗೆ ಇಂದ್ರ: ಅವನ ಕಾಮಧೇನು ಐರಾವತಗಳೆಲ್ಲ ಸಮುದ್ರಮಂಥನದ ಕಾಲಕ್ಕೆ ದೊರೆತವುಗಳು. ಅಷ್ಟನ್ನೂ, ಅವನು ಪಡೆದು ಸಮುದ್ರದ ನೀರನ್ನು ಮೇಘ ರೂಪದಿಂದ ಹೀರುತ್ತಾನಲ್ಲವೆ. ಆದರೆ ಮೃಡನು ಹಾಗಲ್ಲ. ವಿಷವನ್ನಿತ್ತರೂ ಆತ ವಿಷವನ್ನೆಣಿಸಲಿಲ್ಲವಂತೆ.

ಉತ್ಕಟ ಶಿವಭಕ್ತಿ

ಇನ್ನಷ್ಟು ಉದಾಹರಣೆಗಳನ್ನು ಕೊಡೋಣವೆ? ವಾಲ್ಮೀಕಿ ಮುನಿಯನ್ನು ವರ್ಣಿಸುವ ಪ್ರಸಂಗದಲ್ಲಿ ಮುದ್ದಣನಿಗೆ ಶಿವನ ವೇಷ-ಭೂಷಣಗಳೇ ಹೋಲಿಕೆಯಾಗಿ ದೊರೆತವು. ರಾಮಾಶ್ವಮೇಧದಲ್ಲಿ ಒಂದೆಡೆ ಹೂಗಳ ವರ್ಣನೆ ಮಾಡಬೇಕೆಂದೆನಿಸಿತು– ಮುದ್ದಣನಿಗೆ. ಅವು ಕಾಮನ ಬತ್ತಳಿಕೆಯಂತಿವೆ, ಎಂದು ಊಹಿಸಿದ. ಯಾಕೆ? ತಪಸ್ಸಿಗೆ ಕುಳಿತಿದ್ದ ಶಿವನನ್ನು ಗೆಲ್ಲಲು ತನ್ನ ಬತ್ತಳಿಕೆಯಲ್ಲಿದ್ದ ಐದು ಬಾಣಗಳು ಸಾಕಾಗಲಿಲ್ಲವೆಂದು ಕಾಮನು ಇವನ್ನು ಒಟ್ಟುಗೂಡಿಸಿದನೆಂದು ಮುದ್ದಣ ಕಲ್ಪಿಸಿದ್ದಾನೆ. ಇದೊಂದು ಎಳೆದು ತಂದ ಕಲ್ಪನೆ ಎಂದೆನಿಸಬಹುದು. ಆದರೆ ಮುದ್ದಣನ ಉತ್ಕಟ ಶಿವಭಕ್ತಿಗೆ ಯಾರೇನು ಮಾಡಿಯಾರು? ಅವನು ಶಿವನನ್ನು ತೆಂಗಿನಕಾಯಿಗೂ ತಳಕು ಹಾಕಿದ್ದಾನೆ! ಶಿವನಂತೆ ಅದೂ ಮುಕ್ಕಣ್ಣ ಹಾಗೂ ತೊವಲ್ದೊದೆಯ.

ಮುನಿಗಳ ಆಶ್ರಮ ವರ್ಣನೆಯಲ್ಲಿ, ಅಲ್ಲಿದ್ದ ಪ್ರಾಣಿಗಳು ತಮ್ಮ ವೈರತ್ವವನ್ನು ಮರೆತು ಕೂಡಿ ಬಾಳುತ್ತಿದ್ದುವೆಂದು ನಮ್ಮ ಪ್ರಾಚೀನ ಕವಿಗಳು ತಪ್ಪದೇ ಹೇಳಿದ್ದಾರೆ. ಮುದ್ದಣನು ಇದಕ್ಕೆ ಹೊರತಲ್ಲ. ವಾಲ್ಮೀಕಿಯ ಆಶ್ರಮದಲ್ಲಿ ಸಿಂಹ, ನವಿಲು, ಸರ್ಪ– ಈ ಪ್ರಾಣಿಗಳು ಜೊತೆಯಾಗಿ ಇದ್ದುವಂತೆ. ಇವೇ ಪ್ರಾಣಿಗಳನ್ನು ಮುದ್ದಣನು ಆಯ್ದುಕೊಂಡದ್ದರ ಬುದ್ಧಿವಂತಿಕೆ ಹೀಗಿದೆ! ಸಿಂಹವು ಪಾರ್ವತಿಯ– ವಾಹನ; ಬಸವ ಅವನದ್ದೇ. ಇತ್ತ ನವಿಲು ಷಣ್ಮುಖನ ವಾಹನವಾದರೆ ಹಾವು ಗಣಪತಿಯ ಹೊಟ್ಟೆಯ ಪಟ್ಟಿಯಾಗಿದ್ದಿತು. ತನ್ನ ಬಳಗದವರ ಪರಸ್ಪರ ಕಾದಾಟವನ್ನು ನಿಲ್ಲಿಸಲು ತಾನೇ ವಿಷವನ್ನು ನುಂಗಿದ ಶಿವನು ಮೇಲಣ ನಾಲ್ಕು ಪ್ರಾಣಿಗಳಿಗೆ ಸಹ ಜೀವನದ ಬುದ್ಧಿವಾದ ಹೇಳಿದನೊ ಎಂಬಂತೆ, ಅವು ಅಲ್ಲಿ ಇದ್ದುವಂತೆ! ಮುದ್ದಣನು ಹಳೆಯ ಕವಿ ಸಮಯವೊಂದನ್ನು ಶಿವನ ಹೆಗ್ಗಳಿಕೆಗೆ ಸಲ್ಲುವಂತೆ ಮಾರ್ಪಡಿಸಿಕೊಂಡಿದ್ದಾನೆ.

ಶಿವನ ಹೂಟ

ಅದರಂತೆ ಋತುವರ್ಣನೆಯೂ ಹಳಗನ್ನಡ ಕಾವ್ಯದಲ್ಲಿ ಕ್ರಮಪ್ರಾಪ್ತವಾದುದು. ಚಳಿಗಾಲ ಬಂದಾಗ ವಿಷ್ಣು ಮೊದಲಾದ ದೇವತೆಗಳು ಹೇಗೆ ತಮ್ಮನ್ನು ರಕ್ಷಣೆ ಮಾಡಿಕೊಂಡರೆಂಬುದರ ವರ್ಣನೆ ರಾಮಾಶ್ವಮೇಧದಲ್ಲಿ ಬರುತ್ತದೆ. ಅವರಲ್ಲಿ ಶಿವನ ಹೂಟವು ಅತ್ಯಂತ ಮನೋಜ್ಞವಾಗಿದೆ. ಹಿಮಗಿರಿಯಲ್ಲಿದ್ದರೂ ಶಿವನು ಹಿಮಕ್ಕೆ ಹೆದರಿ, ಹೊತ್ತ ಹೊರೆಯಾದ ಚಂದ್ರನನ್ನು ಮೊದಲು ಆಕಾಶಕ್ಕೆ ತಳ್ಳಿದನು. ನೆತ್ತಿಯಲ್ಲಿದ್ದ ಗಂಗೆಯನ್ನು ನೆಲಕ್ಕಿಳಿಸಿದನು. ಇವೆರಡೂ ತಂಪನ್ನು ಹೆಚ್ಚಿಸುವಂಥವು! ಪುಣ್ಯಕ್ಕೆ ಅವನ ಬಳಿ ಹಣೆಗಣ್ಣ ಬೆಂಕಿಯಿದ್ದಿತಲ್ಲ! ಶಿವನು ಅದನ್ನು ಉರಿ ಮಾಡಿ, ಬಿಸಿಬಿಸಿ ಬೂದಿಯನ್ನು ಮೈತುಂಬ - ಬಳಿದುಕೊಂಡ. ಮೇಲೆ ದಪ್ಪನಾದ ಹುಲಿ ಚರ್ಮವನ್ನು ಹೊದ್ದುಕೊಂಡ. ಹೇಗೂ ಅರ್ಧನಾರೀಶ್ವರ! 'ಅಂಗಜವೈರಿಸು ಬೆರೆವೊಡಲೊಳಿರ್ದನು'.

ಇನ್ನೊಂದೇ ನಿದರ್ಶನವನ್ನು ಕೊಟ್ಟು ಮುದ್ದಣನ ಅಂತರ್ಯದ ಶಿವಪ್ರೇಮದ ವಿವರಣೆಯನ್ನು ಮುಕ್ತಾಯಗೊಳಿಸೋಣ. ಇಕ್ಷುಮತಿಯ ಗಂಡನಾಗಿ ಶಿವನು ಒಂದಂಶದಲ್ಲಿ ಭೂಮಿಯ ಮೇಲಿದ್ದುದನ್ನು ಮಾವನಿಗಾಗಿ ಯುದ್ಧಕ್ಕೆ ಹೊರಟದ್ದನ್ನೂ ಈ ಮೊದಲು ಪ್ರಸ್ತಾಪಿಸಿದ್ದೇವೆ. ನೆನಪಿಡಿ: ಮೊದಲ ಹೆಂಡತಿ–ಪಾರ್ವತಿಯ ತಂದೆಯನ್ನು ಧ್ವಂಸಮಾಡಿದ ಶಿವನು, ಈ ಕಿರಿಯ ಹೆಂಡತಿಯ ಅಪ್ಪನ ಮನೆಯಳಿಯನಾಗಿದ್ದಾನೆ! ಯುದ್ಧಕ್ಕೆ ಹೊರಡುವ ಮುನ್ನ ಶಿವನು ತನ್ನ ಹರೆಯದ ಪತ್ನಿಯನ್ನು ಬೀಳ್ಕೊಡಲೆಂದು ಬಂದನು. ಆಗ ಆ ಚೆಲುವೆ ಅವನನ್ನು ತಡೆದು ನಿಲ್ಲಿಸಿ, ಆ ಬಾನ್-ಕುರುಳನ ಮುಂಗುರಳನ್ನು ತೀಡಿ, ನೇವರಿಸಿದಳು. ಜಟಾಧರನ ಜಡೆಯನ್ನು ಮುಡಿಗಟ್ಟಿದಳು. ಚಂದ್ರಮೌಳಿಯ ನಡುನೆತ್ತಿಯ ಜೋಲ್ಮುಡಿಗೆ ಪೂಸರವನ್ನು ಮುಡಿಸಿದಳು. ಗಂಗೋತ್ತಮಾಂಗನ ಮುಂದಲೆಗೆ ಶಿರಸ್ತ್ರಾಣವನ್ನು ಅಳವಡಿಸಿದಳು. ಫಣಿಕುಂಡಲನ ಕಿವಿಗೆ, ಮಕರಕುಂಡಲವನ್ನಿಟ್ಟಳು. ಕಂದುಗೊರಲನ ಬಳಿ ಕೊರಳಿಗೆ– ಪಚ್ಚೆಯ ಕಂಠಿಕೆಯನ್ನು ತೊಡಿಸಿದಳು. ರುಂಡಮಾಲನ ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಹಾಕಿದಳು. ವ್ಯಾಘ್ರಚರ್ಮಾಂಬರನಿಗೆ ಉತ್ತಮವಸ್ತ್ರಗಳನ್ನು ತೊಡಿಸಿದಳು. ಭಸ್ಮಧರನ ಮೈಗೆ ಗಂಧವನ್ನು ಲೇಪಿಸಿದಳು. ಬೆಳಡಿಯನ ಧವಳ ಪಾದಕ್ಕೆ ಬಂಗಾರದ ಪಾದುಕೆಯನ್ನು ಒಪ್ಪಿಸಿದಳು. ತ್ರಿಶೂಲಿಯ ಕೈಗೆ ಬಿಲ್ಲು ಬಾಣಗಳನ್ನು ಕೊಟ್ಟಳು. ಫಾಲನೇತ್ರನ ಹಣೆಗೆ ವೀರಸೇಸೆಯನ್ನಿಕ್ಕಿದಳು… ಮನಸ್ಸಿನಂತೆ ಮಾದೇವ! ಹೀಗೆ ತನಗಿಷ್ಟಬಂದಂತೆ ಅಲಂಕರಿಸಿ, ಆ ಪಂಚಮುಖನ ಶೋಭೆಯನ್ನು ತಾನೇ ಮೆಚ್ಚಿಕೊಂಡು ಮುದ್ದಿಟ್ಟು ಕಳುಹಿದಳು!

ಈ ರೀತಿಯ ಮಂಗಳ ಮನೋಹರ ಶಿವನ ದರ್ಶನವನ್ನು ನಮಗೆ ಒದಗಿಸಿದ ಮುದ್ದಣನೇ, ನಿನಗೆ ನಮ್ಮ ಮನಃಪೂರ್ವಕ ವಂದನೆಗಳು! ●

ವರ್ಷ ಭವಿಷ್ಯ

ಜ್ಯೋತಿಷಿ :

ಎನ್. ಕೆ. ಜೋಗಳೇಕರ

ಜ್ಯೋತಿಷ್ಯ ಕಾರ್ಯಾಲಯ :

ಜವಳೀಪೇಟೆ, ಧಾರವಾಡ–೧

ದೂರವಾಣಿ : ೮೭೮೮

ವಿಕ್ರಮ ಸಂವತ್ಸರ ೨೦೩೧–೩೨ ರ ಭವಿಷ್ಯ ಅರ್ಥಾತ್ ಶ್ರೀಮನ್ನೃಪ ಶಾಲಿವಾಹನ ಶಕೆ ೧೮೯೬ ನೆಯ ಆನಂದ ಸಂವತ್ಸರದ ಕಾರ್ತಿಕ ಶುದ್ಧ ಪ್ರತಿಪದೆಯಿಂದ ೧೮೯೭ನೆಯ ರಾಕ್ಷಸ ಸಂವತ್ಸರದ ಅಶ್ವಿನ ಬಹುಳ ಅಮಾವಾಸ್ಯೆಯವರೆಗೆ ಅಂದರೆ ಕ್ರಿಸ್ತ ಶಕೆ ೧೯೭೪ ನೇ ನವ್ಹಂಬರ ೧೪ ರಿಂದ ೧೯೭೫ನೆಯ ನವ್ಹಂಬರ ೧೧ ರ ವರೆಗೆ ಅರ್ಥಾತ್ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗಿನ ವರ್ಷಭವಿಷ್ಯ.



ಮೇಷ

ಈ ವರುಷ ಈ ರಾಶಿಯವರಿಗೆ ಮಿಶ್ರ ಫಲವಿದೆ. ಆರೋಗ್ಯ, ಆರ್ಥಿಕ ದೃಷ್ಟಿಯಿಂದ ತೃಪ್ತಿಕರವಿದ್ದರೆ ಕೌಟುಂಬಿಕ ದೃಷ್ಟಿಯಿಂದ ತಾಪದಾಯಕವಿದೆ. ಪೂರ್ವಾರ್ಧ ಪ್ರಗತಿದಾಯಕವಿದ್ದರೆ ಉತ್ತರಾರ್ಧ ತೊಂದರೆಯದಾಗಿದೆ.

ವರುಷದ ಪ್ರಾರಂಭದಲ್ಲಿ ಮೂರನೆಯವನಾಗಿ ಶುಭ ಫಲವನ್ನು ನೀಡುವ ಶನಿ ವರ್ಷಾಂತ್ಯದಲ್ಲಿ ನಾಲ್ಕನೆಯವನಾಗಿ ಅಶುಭದಾಯಕನಾಗಬಹುದಾದರೂ ದೀರ್ಘ ಅವಧಿಯವರೆಗೆ ಅವನು ಶುಭಫಲವನ್ನೇ ನೀಡುವನು. ವರುಷದ ಪ್ರಾರಂಭದಲ್ಲಿ ಹನ್ನೊಂದನೆಯವನಾಗಿ ಅತ್ಯಂತ ಶುಭ ಫಲದಾಯಕನಾಗಿದ್ದ ಗುರು, ಫೆಬ್ರುವರಿ 19ರಿಂದ ಹನ್ನೆರಡನೆಯವನಾಗಿ ಬರುವದರಿಂದ-ವರ್ಷಾಂತ್ಯದವರೆಗೂ ಆತ ಅಶುಭ ಫಲವನ್ನೇ ನೀಡುವನು. ಹೀಗಾಗಿ ಈ ವರುಷ ಅಶುಭ ಫಲಗಳೇ ಹೆಚ್ಚು; ಆದರೆ ಈ ಅಶುಭ ಫಲಗಳು ಅಶ್ವಿನಿ ನಕ್ಷತ್ರದವರಿಗಿದ್ದರೆ ಭರಣೀ, ಕೃತ್ತಿಕಾ ನಕ್ಷತ್ರದವರಿಗೆ ಶುಭಫಲಗಳು ಬಹಳ. ಎಂಟನೆಯ ರಾಹುವಿನ ಅನಿಷ್ಟಫಲವೂ ಕೂಡ ವರ್ಷಾಂತ್ಯದವರೆಗೆ ಇದ್ದೇ ಇರುತ್ತದೆ. ಆರೋಗ್ಯ ದೃಷ್ಟಿಯಿಂದ ನೋಡಿದರೆ, ದೈಹಿಕವಾಗಿ ವರುಷವಿಡೀ ಚನ್ನಾಗಿದ್ದರೂ ಮಾರ್ಚ 19ರಿಂದ ಮೇ 15 ಹಾಗೂ ಜುಲೈ 15ರಿಂದ ಅಗಸ್ಟ 14ರ ವರೆಗಿನ ಅವಧಿಯಲ್ಲಿ ಆರೋಗ್ಯ ಕೆಡಬಹುದಾಗಿದೆ. ನಿಮ್ಮ ಆರ್ಥಿಕ ಪರಿಸ್ಥಿತಿಯು ವರುಷವಿಡೀ ತೃಪ್ತಿಕರವಿರುವದು. ಅದರಲ್ಲಿಯೂ ಡಿಸೆಂಬರ್ 15ರಿಂದ ಮಾರ್ಚ 19 ಹಾಗು ಜೂನ್ 15ರಿಂದ ಜುಲೈ 15ರವರೆಗಿನ ನಾಲ್ಕು ತಿಂಗಳ ಕಾಲದಲ್ಲಿ ಆರ್ಥಿಕ ದೃಷ್ಟಿಯಿಂದ ಅತ್ಯಂತ ಅನುಕೂಲಕರವಿದ್ದು ಈ ಅವಧಿಯಲ್ಲಿ ಸಟ್ಟಾ, ಲಾಟರಿ, ಬಹುಮಾನ, ಬಕ್ಷೀಸ್, ದತ್ತಕ, ಕಮೀಶನ್, ಏಜನ್ಸಿ, ಮೊದಲಾದ ಮೂಲದಿಂದ ಆಕಸ್ಮಿಕ ಧನಯೋಗವುಂಟಲ್ಲದೆ. ಬಹುದಿನಗಳಿಂದ ಬರಬೇಕಾಗಿದ್ದ ಹಣವು ಬಂದು ನಿಮ್ಮ ಆರ್ಥಿಕ ಸ್ಥಿತಿಯು ಸುಭದ್ರವಾಗುವದು. ಕೋರ್ಟು ಕಚೇರಿಯ ವ್ಯವಹಾರದಲ್ಲಿ ಈ ವರುಷ ಮಿಶ್ರಫಲವಿದೆ. ಮೊಕದ್ದಮೆಗಳು ಪೂರ್ವಾರ್ಧದಲ್ಲಿ ನಡೆದರೆ ಜಯಮಾಲೆ ನಿಮ್ಮ ಕೊರಳಿಗೆ, ಉತ್ತರಾರ್ಧದಲ್ಲಿ ನಡೆದರೆ ಹಾನಿ ಕಟ್ಟಿಟ್ಟದ್ದು.

ಈ ರಾಶಿಯ ನೌಕರವರ್ಗದವರಿಗೆ ಈ ವರುಷ ಶುಭಾಶುಭದ ಮಿಶ್ರ ಫಲವಿದೆ. ಡಿಸೆಂಬರ್ 15 ರಿಂದ ಮಾರ್ಚ್ 15ರ ವರೆಗಿನ ಮೂರು ತಿಂಗಳ ಕಾಲ ಮಾತ್ರ ಶುಭವಿದ್ದು ಈ ಅವಧಿಯಲ್ಲಿ ಬಡತಿ ಲಭಿಸಿ ಅನುಕೂಲಕರ ಸ್ಥಳಕ್ಕೆ ಬದಲಿಯಾಗುವುದು. ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ, ಮೊದಲಾದ ಶುಭ ಘಟನೆಗಳು ಜರಗುವವು. ಆದರೆ ಉಳಿದ ಒಂಭತ್ತು ತಿಂಗಳುಗಳ ಕಾಲ ತೀರ ತಾಪದಾಯಕವಾಗಿದೆ. ಅದರಲ್ಲಿಯೂ ಮಾರ್ಚ್ 16ರಿಂದ ಮೇ 15, ಹಾಗೂ ಜುಲೈ 16 ರಿಂದ ಸಪ್ಟೆಂಬರ್ 16ರ ವರೆಗಿನ ಕಾಲ ಅತ್ಯಂತ ತಾಪದಾಯಕ. ಈ ಅವಧಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿಯಾಗುವುದಲ್ಲದೆ ವರಿಷ್ಠರ ಅಸಹನೀಯ ಕಿರುಕುಳದಿಂದ ನೌಕರಿಗೆ ರಾಜೀನಾಮೆ ನೀಡುವ ಪ್ರಸಂಗವೂ ಉಂಟಾಗುವುದು. ತಾಳ್ಮೆಯಿಂದ ಪರಿಸ್ಥಿತಿಯನ್ನು ಎದುರಿಸಿರಿ. ಪರಮಾತ್ಮನ ಕೃಪೆಯಿಂದ ಎಲ್ಲವೂ ಸರಿಯಾಗುತ್ತದೆ. ಬಾಹ್ಯ ಹಾಗು ಪ್ರವಾಸಿ ಕೆಲಸಗಾರರು, ತಾಂತ್ರಿಕ ವರ್ಗದವರು, ಗಿರಣಿ, ಕಾರಖಾನೆಗಳ ಕಾರ್ಮಿಕರಿಗೆ ಈ ವರುಷ ಉತ್ತೇಜಕವಾಗಿದೆ. ಆದರೆ ಕಾರಕೂನ ವರ್ಗ, (ವೈಟ ಕಾಲರ್) ಶಿಕ್ಷಕ, ಪತ್ರಿಕೋದ್ಯಮಿ, ಸಾಹಿತಿ, ಕಲಾವಿದ, ಬುದ್ಧಿಜೀವಿಗಳಿಗೆ ಈ ವರುಷ ಪ್ರತಿಕೂಲವಿದೆ. ಗುರು ಹನ್ನೊಂದನೆಯವನಾಗಿರುವವರೆಗೆ ಅಂದರೆ ನವೆಂಬರ್ 14ರಿಂದ ಮಾರ್ಚ್ 19ರ ವರೆಗಿನ ಈ ನಾಲ್ಕು ತಿಂಗಳ ಅವಧಿಯಲ್ಲಿ ಅವರ ಬೇಡಿಕೆಗಳು ಈಡೇರುತ್ತವೆ. ಮಾನ–ಸನ್ಮಾನ ದೊರೆಯುತ್ತವೆ.


ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರು ಠೋಕ ಹಾಗೂ ಕಮೀಶನ್ ಏಜೆಂಟರು, ಗಿರಣಿ ಕಾರಖಾನೆ, ಟಾಕೀಜ, ಹೋಟೆಲ, ಒಡೆಯರಿಗೆಲ್ಲ ಈ ವರುಷ ಮಿಶ್ರ ಫಲವಿದೆ. ಪೂರ್ವಾರ್ಧವು ಪ್ರಗತಿದಾಯಕವಾದರೆ ಉತ್ತರಾರ್ಧವು ತೊಂದರೆಯದು. ಉದ್ಯೋಗ, ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಾದರೂ ನೌಕರರ ಸಮಸ್ಯೆಗಳೊಡನೆ ಸರಕಾರದ ನಿರ್ಬಂಧನೆಗಳನ್ನು ಎದುರಿಸಬೇಕಾಗುತ್ತದೆ. ಈ ರಾಶಿಯ ಸಾಹಿತಿ, ಮೊದಲಾದ ಬುದ್ಧಿಜೀವಿಗಳಿಗೆ ನವಂಬರ 15 ರಿಂದ ಮಾರ್ಚ್ 19 ರ ವರೆಗಿನ ಕಾಲ ಪ್ರಗತಿದಾಯಕವಿದ್ದು, ಉದ್ಯೋಗದಲ್ಲಿ ಸ್ಥಿರತೆ, ಮನ್ನಣೆ, ದೊರೆತು ಅನೇಕ ಸಂಘ ಸಂಸೆ ಹಾಗು ಸರಕಾರದಿಂದ ಪ್ರಶಸ್ತಿ, ಪದಕ, ಬಿರುದು ಬಾವಲಿಗಳನ್ನು ಪಡೆಯುವರು. ಆದರೆ ಮಾರ್ಚ್ 20ರಿಂದ ವರ್ಷಾಂತ್ಯದ ಕಾಲ ತೀರ ತೊಂದರೆಯದಿದ್ದು, ಉದ್ಯೋಗದಲ್ಲಿ ತೊಂದರೆಗಳು ಎದುರಾಗುವ ಶತ್ರುಗಳ ಕಾಟ ಹಾಗು ಆರ್ಥಿಕ ಮುಗ್ಗಟ್ಟನ್ನೂ ಎದುರಿಸಬೇಕಾಗುವುದು. ಈ ರಾಶಿಯ ಕೃಷಿವರ್ಗದವರಿಗೆ ಈ ವರುಷ ಏರಿಳಿತಗಳು ಬಹಳ. ಪೂರ್ವಾರ್ಧದಲ್ಲಿ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು, ಆರ್ಥಿಕ ಸ್ಥಿತಿ ಚೇತರಿಸಿ ಬೇಸಾಯಕ್ಕೆ ಬೇಕಾಗಬಹುದಾದ ಉಪಕರಣ. ದನಕರುಗಳನ್ನು ಖರೀದಿಸುವ ಇಲ್ಲವೆ ನವೀಕರಿಸುವ ಸುಯೋಗವುಂಟು. ಆದರೆ ಉತ್ತರಾರ್ಧ ಕಷ್ಟದಾಯಕವಾಗಿದ್ದು, ಬೇಸಾಯವನ್ನು ಮುಂದುವರಿಸುವುದೇ ಕಠಿಣವಾಗುತ್ತದೆ. ಹೊಲ, ಮನೆಗಳನ್ನು ಒತ್ತಿ ಹಾಕುವ ಪ್ರಸಂಗ ಬರಬಹುದು. ಅಥವಾ ಅಧಿಕ ಬಡ್ಡಿ ತೆತ್ತಿ ಸಾಲಮಾಡುವ ಪರಿಸ್ಥಿತಿ ಬರುವುದು.

ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿರುವುದು. ಡಿಸೆಂಬರ 15 ರಿಂದ ಮಾರ್ಚ್ 20 ಹಾಗು ಮೇ 15ರಿಂದ ಜುಲೈ 15ರ ವರೆಗಿನ ಅವಧಿಯಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮಿಗಳಾಗುವರು. ವಿವಾಹಿತ ಸ್ತ್ರೀ ಪುರುಷ ಮತ್ತು ಗೃಹಿಣಿಯರಿಗೆ ಹನ್ನೆರಡನೆಯ ಗುರುವಿನಿಂದಾಗಿ ಈ ವರುಷ ನಿರುತ್ಸಾಹವಿದೆ. ಅದರಲ್ಲಿಯೂ ಉತ್ತರಾರ್ಧವಂತೂ ತೀರ ತಾಪದಾಯಕವಾಗಿದೆ. ಆಪ್ತೇಷ್ಟರಲ್ಲಿ ಭಿನ್ನಾಭಿಪ್ರಾಯ, ತಪ್ಪು ತಿಳುವಳಿಕೆಗಳುಂಟಾಗಿ ನಿತ್ಯ ಕಲಹ ಪ್ರಾರಂಭವಾಗುವುದರಿಂದ ಅಸಮಾಧಾನ

ವೈಗುತ್ತದೆ. ವಿಚಿತ್ರ ಕುಟುಂಬ ಒಡೆಯುವುದು. ಆದರೆ ಗುರು ಹನ್ನೊಂದನೆಯವನಾಗಿರುವ ಕಾಲದಲ್ಲಿ ಅಂದರೆ ನವೆಂಬರ 14ರಿಂದ ಮಾರ್ಚ್ 15ರ ವರೆಗಿನ ಅವಧಿ ಅನುಕೂಲದಾಯಕವಿದ್ದು, ಇದೇ ಅವಧಿಯಲ್ಲಿ ಬೆಲೆಯುಳ ವಸ್ತು ಒಡವೆಗಳ ಖರೀದಿ, ತೀರ್ಥ ಯಾತ್ರಾ ಸಂದರ್ಶನ, ನೂತನ ಗೃಹಪ್ರವೇಶ, ಮೊದ ಲಾದ ಶುಭ ಘಟನೆಗಳು ಜರುಗುವವು. ಮಿಕ್ಕ ಎಂಟು ತಿಂಗಳ ಕಾಲ ಕೌಟುಂಬಿಕ ಅಸಂತೋಷ ಹೆಚಿ ಗೃಹ ಕಲಹ ಪರಾಕಾಷ್ಟಕ್ಕೆ ಮುಟ್ಟುತ್ತದೆ. ಈ ರಾಶಿಯ ಗರ್ಭಿಣಿ ಸ್ತ್ರೀಯರಿಗೆ ಈ ವರುಷ ಮುಕ್ಕಾಲು ಭಾಗ ಅಶುಭ ವಿದ್ದು, ಕಾಲುಭಾಗ ಮಾತ್ರ ಶುಭದಾಯಕವಿದೆ. ಹೆರಿಗೆಯು ನವೆಂಬರ 14ರಿಂದ ಮಾರ್ಚ್ 15ರ ಒಳ ಗಿನ ಅವಧಿಯಲ್ಲಾದರೆ ಸುಖಪ್ರಸವ ಹಾಗು ಪುತ್ರ ಸಂತಾನವಾಗುವುದು. ಮಾರ್ಚ್ 15ರಿಂದ ವರ್ಷಾಂತ ದ ವರೆಗಿನ ಅವಧಿಯಲ್ಲಿ ಹೆರಿಗೆಯಾದರೆ ಕಷ್ಟದಾಯಕ ವಾಗುವುದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯ ಕರ್ತರಿಗೆ ಹನ್ನೊಂದನೆಯ ಗುರು ಈ ವರುಷ ನಿರುತ್ಸಾಹ ದಾಯಕನಿರುವನು. ಪ್ರಾಮಾಣಿಕ ಬುದ್ಧಿವಂತ ಪ್ರತಿಭಿ ಶರೆಂದು ಕೀರ್ತಿ ಪಡೆದ ನಿಮ್ಮನ್ನು ಜನರು ತಿರಸ್ಕಾರ ದಿಂದ ಕಾಣತೊಡಗುವರು. ಬದಲಾದ ಪರಿಸ್ಥಿತಿ ಯನ್ನು ಧೈರ್ಯದಿಂದ ಎದುರಿಸಬೇಕಲ್ಲದೇ ಹತಾಶ ರಾಗಬೇಡಿರಿ. ನವಂಬರ 15ರಿಂದ ಮಾರ್ಚ 19ರ ನಡುವಣ ನಾಲ್ಕು ತಿಂಗಳ ಕಾಲ ನಿಮಗೆ ಶುಭವೂ ಅನುಕೂಲವೂ ಇದ್ದು, ಈ ಕಾಲದಲ್ಲಿ ಜರುಗಲಿರುವ ಯಾವುದೇ ಚುನಾವಣೆಗೆ ಸ್ಪರ್ಧಿಸಿದರೂ ಖಂಡಿತ ವಾಗಿ ಆಯ್ಕೆಯಾಗಿ ಸ್ಥಾನ ಮಾನ ಅಧಿಕಾರ ಪಡೆಯು ವಿರಿ. ಆದರೆ ಮಾರ್ಚ್ 20ರಿಂದ ವರ್ಷಾಂತ್ಯದ ವರೆ ಗಿನ ಕಾಲ ತೊಂದರೆಯದು. ಮಿತ್ರರು ಶತ್ರುಗಳಾಗಿ ಅವಿಶ್ವಾಸ ವ್ಯಕ್ತಪಡಿಸುವುದರಿಂದ ಸ್ಥಾನಮಾನ ಅಧಿ ಕಾರದಿಂದ ಕೆಳಗಿಳಿಯಬೇಕಾಗುತ್ತದೆ. ಮಿಥ್ಯಾಪವಾದ ವನ್ನು ಎದುರಿಸಬೇಕಾಗುತ್ತದೆ. ಇದೇ ಸಮಯದಲ್ಲಿ ಚುನಾವಣೆಗಳು ಜರುಗಿದರೆ ಭಾಗವಹಿಸದಿರುವುದು ಹಿತ ಕರ.

ಈ ರಾಶಿಯ ವಿದ್ಯಾರ್ಥಿಗಳಿಗೆ ದ್ವಾದಶ ಗುರುವಿ ನಿಂದಾಗಿ ಈ ವರುಷ ನಿರುತ್ಸಾಹದಾಯಕವಿದೆ. ನವಂ ಬರ 15ರಿಂದ ಮಾರ್ಚ 19ರ ಒಳಗೆ ಜರುಗಲಿರುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆ, ಆಗುವರಲ್ಲದೆ ಶ್ರೇಣಿ, ದರ್ಜೆಗಳನ್ನು ಹೊಂದಿ ಪ್ರಶಸ್ತಿ ಪದಕಗಳನ್ನೂ ಪಡೆಯುವರು. ಆದರೆ ಮಾರ್ಚ್ 20ರಿಂದ ವರ್ಷಾಂತ್ಯದ ವರೆಗೆ ಜರುಗಲಿರು ವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಪರೀಕ್ಷೆಯ ಫಲಿ ತಾಂಶವು ಸಂಶಯಾಸ್ಪದವಿರುವುದಲ್ಲದೆ ಕಳೆದ ವರುಷ ದೊರೆತ ವಿದ್ಯಾರ್ಥಿವೇತನ, ಶಿಷ್ಯವೃತ್ತಿಗಳಿಗೆ ಎರ ವಾಗಬಹುದಲ್ಲದೆ ಶಿಕ್ಷಣವನ್ನು ಮುಂದುವರಿಸುವುದು ಕಠಿಣವಾಗುವುದು.



ವೃಷಭ

ಬರಲಿರುವ ಹನ್ನೊಂದನೆ ಗುರುವು ಹಾಗೂ ವರ್ಷಾಂತ್ಯದಲ್ಲಿ ಸಾಡೇಸಾತಿಯಿಂದ ಮುಕ್ತರಾಗಿ ಮೂರನೆಯ ಶನಿಯು ಶುಭಫಲ ಪಡೆಯುವ ಈ ರಾಶಿಯವರಿಗೆ ಈ ವರುಷವು ಯಶೋದಾಯ ಕವೂ ಸುಖಪ್ರದವೂ ಆಗಿರುವುದು.

ಕಳೆದ ಏಳೂವರೆ ವರುಷದಿಂದ ಇದ್ದ ಸಾಡೇಸಾತಿ ಯಿಂದ ಈ ವರ್ಷಾಂತ್ಯದಲ್ಲಿ ಮುಕ್ತರಾಗುವಿರಿ. ಅಲ್ಲದೆ ಫೆಬ್ರುವರಿ 19ರಿಂದ ಬರಲಿರುವ ಹನ್ನೊಂದನೆಯ ಗುರುವಿನ ಶುಭಫಲವೂ ಕೂಡ ವರ್ಷಾಂತ್ಯದ ವರೆಗೆ ಇರುವುದು. ಹೀಗೆ ಎರಡು ಪ್ರಬಲ ಗ್ರಹಗಳಾದ ಗುರು–ಶನಿಯರ ಅನುಗ್ರಹ ವರುಷವಿಡೀ ಇರುವುದ ರಿಂದ ನೀವು ಈ ವರುಷ ಸುದೈವಿಗಳು. ಕಳೆದ ಅನೇಕ ವರುಷಗಳಿಂದ ನೆನಗುದಿಗೆ ಬಿದ್ದಿದ್ದ ಕಾರ್ಯಗಳೆಲ್ಲ ಈ ವರುಷ ನೆರವೇರುವುದರಿಂದ ಮನಸ್ಸು ಪ್ರಸನ್ನವಾಗು ವುದು. ನಿಮ್ಮ ಆರೋಗ್ಯ ವರುಷದ ಮುಕ್ಕಾಲು ಅವಧಿಯ ವರೆಗೆ ಉತ್ತಮವಿದ್ದಾಗ್ಯೂ ಡಿಸೆಂಬರ 15 ರಿಂದ ಜನವರಿ 13, ಏಪ್ರಿಲ್ 12ರಿಂದ ಮೇ 15 ಹಾಗೂ ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಮೂರು ತಿಂಗಳಲ್ಲಿ ಶಾರೀರಿಕ ಪೀಡೆ, ಉಂಟಾಗಬಹು ದಾಗಿದೆ. ನಿಮ್ಮ ಆರ್ಥಿಕ ಸ್ಥಿತಿಯು ವರುಷವಿಡೀ ತೃಪ್ತಿ ಕರವಿರುವುದು. ಅದರಲ್ಲಿಯೂ ಜನವರಿ 14ರಿಂದ ಏಪ್ರಿಲ್ 12. ಜುಲೈ 15ರಿಂದ ಆಗಸ್ಟ 15 ಹಾಗು ಅಕ್ಟೋಬರ 18ರಿಂದ ವರ್ಷಾಂತ್ಯದ ವರೆಗಿನ ಅವಧಿ ಯಲ್ಲಿ ದತ್ತಕ, ವಾರಸಾ, ಸಟ್ಟಾ, ಲಾಟರಿ, ಬಹು ಮಾನ, ಬಕ್ಷೀಸ್, ಕಮಿಶನ್, ಏಜೆನ್ಸಿ, ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭದ ಯೋಗವುಂಟು. ಕೋರ್ಟು ಕಚೇರಿಯ ಕಾರ್ಯದಲ್ಲಿ ಈ ವರುಷ ಜಯ ಲಕ್ಷ್ಮಿ ನಿಮ್ಮ ಕೊರಳಿಗೆ ಮಾಲೆ ಹಾಕುವಳು. ಅದ ರಲ್ಲಿಯೂ ಫೌಜದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧವೂ ನೌಕರಿ ಹಾಗೂ ರಾಜಕೀಯ ವ್ಯಾಜ್ಯಗಳಿಗೆ ಮಧ್ಯ ದಲ್ಲಿಯೂ ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧ ದಲ್ಲಿಯೂ ಯಶಸ್ಸು ಲಭಿಸುತ್ತದೆ.

ಈ ರಾಶಿಯ ನೌಕರವರ್ಗದವರಿಗೆ ಈ ವರುಷ ಶುಭದಾಯಕವಿದ್ದು, ಜನವರಿ 14ರಿಂದ ಏಪ್ರಿಲ್ 12 ಹಾಗು ಅಕ್ಟೋಬರ 18ರಿಂದ ವರ್ಷಾಂತ್ಯದ ಕಾಲ ಶುಭ ವೂ ಅನುಕೂಲವೂ ಇದ್ದು, ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ. ಹಂಗಾಮಿ ನೌಕರರಿಗೆ ನೌಕರಿಯಲ್ಲಿ ಕಾಯಂ ಆಗುವಿಕೆ. ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ. ಮೊದಲಾದ ಶುಭಫಲಗಳು ದೊರೆಯುವವು. ಈ ರಾಶಿಯ ಕಾರಖಾನೆ ಕಾರ್ಮಿಕ ಶ್ರಮಜೀವಿ ಪ್ರವಾಸಿ ಕೆಲಸಗಾರ, ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೆಲ್ಲ ಉತ್ತರಾರ್ಧವು ಪ್ರಗತಿ ದಾಯಕವಾಗಿದೆ. ಫೆಬ್ರುವರಿ 19ರಿಂದ ಬರುವ ಹನ್ನೊಂದನೆಯ ಗುರುವಿನ ಶುಭಫಲದ ಮೂಲಕ ಬುದ್ಧಿಜೀವಿ, ಪತ್ರಿಕೋದ್ಯಮಿ, ಸಾಹಿತಿ, ಶಿಕ್ಷಕ, ಕಲಾ ವಿದರಿಗೆ ಈ ವರುಷ ಅತ್ಯಂತ ಶುಭದಾಯಕವಿರುವು ದಲ್ಲದೆ ಅವರ ಜೀವನದಲ್ಲಿಯೇ ಈ ವರುಷವು ಅಪೂರ್ವವಾಗಿದೆ. ಬಹುದಿನಗಳ ಅವರ ಆಶೆ–ಆಕಾಂಕ್ಷೆ ಗಳು ಈಡೇರುವವು. ಮಾನ, ಸನ್ಮಾನ, ಮನ್ನಣೆ, ಪ್ರಶಸ್ತಿ ಪದಕಗಳು ದೊರೆಯುವವು. ದ್ರವ್ಯಾನು ಕೂಲ, ವಾಹನ ಸೌಖ್ಯ, ಸ್ಥಾವರ ಆಸ್ತಿ ಸಂಪಾದನೆ ಪರದೇಶ ಪರ್ಯಟನ ಮೊದಲಾದ ಮಹತ್ವದ ಘಟನೆ ಗಳು ಈ ವರುಷ ಜರುಗುವವು. ಕೃತ್ತಿಕಾ ಹಾಗೂ ರೋಹಿಣಿಯ ಮೊದಲಿನ ಎರಡು ಚರಣದ ವೃಷಭ ರಾಶಿಯವರಿಗೆ 70ರಷ್ಟು ಶುಭಫಲ ದೊರೆತರೆ ರೋಹಿಣಿಯ ಕೊನೆಯ ಎರಡು ಚರಣ ಮತ್ತು ಮೃಗಶಿರಾದ ವೃಷಭರಾಶಿಯವರಿಗೆ 50ರಷ್ಟು ಶುಭಫಲ ದೊರೆಯುವುದು. ಅದರಲ್ಲಿಯೂ ಜನ ವರಿ 14ರಿಂದ ಏಪ್ರಿಲ್ 12. ಜುಲೈ 15ರಿಂದ ಆಗಸ್ಟ 16. ಅಕ್ಟೋಬರ 18ರಿಂದ ವರ್ಷಾಂತ್ಯದ ವರೆಗಿನ ಅವಧಿಯಲ್ಲಿ ಶುಭಘಟನೆಗಳು ಜರುಗುವವು.


ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರು, ಕಮಿಶನ್ ಏಜಂಟು, ಹಂಚಿಕೆದಾರ, ಟಾಕೀಜು, ಚಾಳ, ಗಿರಣಿ, ಹೋಟೆಲ ಕಾರಖಾನೆಗಳ ಒಡೆಯ ಮೊದಲಾದ ವರು ಫೆಬ್ರುವರಿ 19ರಿಂದ ಬರುವ ಹನ್ನೊಂದನೆಯ

ಗುರುವಿನ ಮೂಲಕ ಉದ್ಯೋಗದಲ್ಲಿ ಪ್ರಗತಿ, ಉತ್ಕರ್ಷ ಸಾಧಿಸುವರು. ಹೊಸ ಶಾಖೆಗಳನ್ನು ತೆರೆಯುವರು. ಈ ವರುಷದ ಅಂತ್ಯದಲ್ಲಿ ಸಾಡೇಸಾತಿಯಿಂದ ಮುಕ್ತರಾದ ಕಾರಣ ಈ ರಾಶಿಯ ಕೃಷಿಕ ವರ್ಗದವರಿಗೆ ಉತ್ತರಾರ್ಧವು ಉತ್ತೇಜಕರವಾಗಿದೆ. ಹಿಂಗಾರಿ ಬೆಳೆ ನಿರೀಕ್ಷೆಗಿಂತ ಅಧಿಕ ಫಸಲು ಬರುವುದರಿಂದ ದ್ರವ್ಯಾನುಕೂಲತೆಯಾಗಿ ಹಿಂದಿನ ವರುಷದ ಸಾಲವನ್ನೆಲ್ಲ ತೀರಿಸಿ ಹೊಸದಾಗಿ ಹೊಲ, ಮನೆ, ದನಕರುಗಳನ್ನು ಕೊಳ್ಳುವರಲ್ಲದೆ ಟ್ರ್ಯಾಕ್ಟರ, ಟ್ರಕ್ಕು, ಪಂಪ ಸೆಟ್, ಮೊದಲಾದ ನೀರಾವರಿ ಉಪಕರಣಗಳನ್ನು ಕೊಳ್ಳುವರು. ಇಲ್ಲವೇ ನವೀಕರಣ ಮಾಡುವರು.

ಬರಲಿರುವ ಹನ್ನೊಂದನೆಯ ಗುರುವಿನ ಶುಭಫಲದ ಮೂಲಕ ಈ ರಾಶಿಯ ವಧೂವರರಿಗೆ ಕಂಕಣ ಬಲ ಕೂಡಿ ಬಂದಿರುವುದಲ್ಲದೆ ಫೆಬ್ರುವರಿಯಿಂದ ಜುಲೈ ತಿಂಗಳ ನಡುವಿನ ಅವಧಿಯಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮದ ಆನಂದ ಜೀವನವನ್ನು ಅನುಭವಿಸುವರು. ವಿವಾಹಿತ ಸ್ತ್ರೀ ಪುರುಷ ಹಾಗು ಗೃಹಿಣಿಯರಿಗೆ ಈ ವರುಷ ಪ್ರೋತ್ಸಾಹದಾಯಕವಾಗಿದ್ದು, ಸ್ಥಾವರ ಆಸ್ತಿಯ ಸಂಪಾದನೆ, ತೀರ್ಥಯಾತ್ರಾ ಸಂದರ್ಶನ, ವಸ್ತು ಒಡವೆ ಕೊಳ್ಳುವಿಕೆ, ವಾಹನ ಸೌಖ್ಯ, ಮೊದಲಾದ ಶುಭಘಟನೆಗಳು ಜರುಗುವವು. ತಪ್ಪು ತಿಳುವಳಿಕೆಯಿಂದ ಒಡೆದು ಹೋಗಿದ್ದ ಕುಟುಂಬ ಮತ್ತೆ ಒಂದುಗೂಡಿ ಆಪ್ತೇಷ್ಟರು ಸ್ನೇಹಿತರು, ನೆರೆ ಹೊರೆಯವರೊಂದಿಗೆ ಸ್ನೇಹ, ಪ್ರೀತಿ, ವಿಶ್ವಾಸ ವರ್ಧಿಸುವುದು. ಈ ರಾಶಿಯ ಗರ್ಭಿಣಿಯರಿಗೆ ಹನ್ನೊಂದನೆಯ ಗುರುವಿನ ಮೂಲಕ ಹೆರಿಗೆಯು ಸುಖಪ್ರದವಾಗುವುದಲ್ಲದೆ ಗಂಡುಸಂತಾನದ ಯೋಗವುಂಟು. ಆದರೆ ಹೆರಿಗೆಯು ಡಿಸೆಂಬರ 15 ರಿಂದ ಜನವರಿ 13, ಜುಲೈ 1ರಿಂದ ಸಪ್ಟೆಂಬರ 16ರ ಅವಧಿಯಲ್ಲಾದರೆ ತುಸು ಕಷ್ಟಕರವಾಗುವುದು.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ಅತ್ಯಂತ ಶುಭದಾಯಕವಾಗಿದ್ದು, ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸ್ಥಾನ, ಮಾನ, ಅಧಿಕಾರ ಪಡೆಯುವರಲ್ಲದೆ ಜಿಲ್ಲೆಯ ರಾಜ್ಯದ ರಾಷ್ಟ್ರದ ಗಣ್ಯವ್ಯಕ್ತಿಗಳಾಗುವುದರಲ್ಲಿ ಸಂದೇಹವಿಲ್ಲ. ಶತ್ರುಗಳು ಮಿತ್ರರಾಗುವ ಕಾರಣ ಈ ವರುಷ ಜರುಗಬಹುದಾದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಅವಿರೋಧ ಆಯ್ಕೆ ಇಲ್ಲವೆ ಅತ್ಯಧಿಕ ಬಹುಮತದಿಂದ ಆಯ್ಕೆಯಾಗುವರು.

ಈ ರಾಶಿಯ ವಿದ್ಯಾರ್ಥಿಗಳಿಗೆ ಹನ್ನೊಂದನೆಯ ಗುರುವಿನಿಂದಾಗಿ ಈ ವರುಷ ಪ್ರೋತ್ಸಾಹದಾಯಕವಿದೆ. ಕುಂಠಿತವಾದ ಶಿಕ್ಷಣ ಮುಂದುವರೆಯುವದಲ್ಲದೆ ಶಿಷ್ಯವೃತ್ತಿ, ವಿದ್ಯಾರ್ಥಿವೇತನ, ಲಭಿಸುವುದು. ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೆ ಸಂಶೋಧನೆಗಾಗಿ ವಿದೇಶ ಪ್ರವಾಸ ಕೈಕೊಳ್ಳುವ ಸುಯೋಗವೂ ಈ ವರುಷದಲ್ಲಿದೆ. ಜನವರಿ 14 ರಿಂದ ಏಪ್ರಿಲ್ 12, ಮೇ 15ರಿಂದ ಆಗಸ್ಟ 15, ಹಾಗು ಅಕ್ಟೋಬರ 18ರ ನಂತರ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆಯಾಗುವರಲ್ಲದೆ ದರ್ಜೆ, ಶ್ರೇಣಿ, ಪ್ರಶಸ್ತಿ, ಪದಕಗಳನ್ನು ಪಡೆಯುವರು. ಆದರೆ ಡಿಶೆಂಬರ 15 ರಿಂದ ಜನವರಿ 13 ಏಪ್ರಿಲ್ 12ರಿಂದ ಮೇ 14 ಹಾಗೂ ಆಗಸ್ಟ 15ರ ನಡುವಿನ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ತೇರ್ಗಡೆ ಆಗುವರೇನೋ ನಿಜ: ಆದರೆ ದರ್ಜೆ, ಶ್ರೇಣಿಯ ಬಗೆಗೆ ಖಚಿತವಾಗಿ ಹೇಳಲು ಬಾರದು.



ಮಿಥುನ

ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದ ಈ ವರುಷದಲ್ಲಿ ಯಾವ ಮಹತ್ವದ ಶುಭಾಶುಭ ಫಲಗಳು ದೊರೆಯವು. ಯಥಾಸ್ಥಿತಿ ಇರುವದು.

ಈ ವರುಷ ಈ ರಾಶಿಯವರಿಗೆ ಯಾವ ಹೆಚ್ಚಿನ ಏರಿಳಿತವಿರದೇ ಯಥಾಸ್ಥಿತಿ ಮುಂದುವರಿಯುವುದು. ಜನ್ಮಸ್ಥನಾಗಿದ್ದ ಶನಿ ಈ ವರ್ಷಾಂತ್ಯದಲ್ಲಿ ಎರಡನೆಯವನಾಗಿ ಸಾಡೇಸಾತಿಯ ಕೊನೆಯ ಕಾಲು ಭಾಗದವನಾಗಿದ್ದರೂ ಮೃಗಶಿರಾ ನಕ್ಷತ್ರದ ಮಿಥುನ ರಾಶಿಯವರು ಸಾಡೇಸಾತಿಯ ಅನಿಷ್ಟತೆಯಿಂದ ಮುಕ್ತರಾದರೆ ಪುನರ್ವಸುವಿನ ಮಿಥುನ ರಾಶಿಯವರಿಗೆ ಸಾಡೇಸಾತಿಯ ಪ್ರಖರತೆ ಈ ವರುಷವೂ ಮುಂದುವರೆಯುವುದು. ಆರಿದ್ರಾ ನಕ್ಷತ್ರದವರು ಅನಿಷ್ಟತೆಯಿಂದ ಮುಕ್ತರಾಗಿಲ್ಲವಾದರೂ ಪ್ರಖರತೆ ಇರುವುದಿಲ್ಲ. ಇದುವರೆಗೆ ಒಂಭತ್ತನೆಯವನಾಗಿ ಶುಭಫಲವನ್ನು ನೀಡುತ್ತಿದ್ದ ಗುರು ಬರುವ ಫೆಬ್ರುವರಿಯಿಂದ ಹತ್ತನೆಯವನಾಗಿ ಶುಭಫಲವನ್ನು ಕೊಡದಿದ್ದರೂ ಅಶುಭಫಲವನ್ನು ಕೊಡುವುದಿಲ್ಲ. ಪುನರ್ವಸು ನಕ್ಷತ್ರದ ಮಿಥುನರಾಶಿಯವರಿಗೆ ಈ ವರುಷವೂ ಒಂಭತ್ತನೆಯ ಗುರುವಿನ ಶುಭಫಲ ದೊರೆತರೆ ಮೃಗಶಿರಾ ಆರಿದ್ರಾ ನಕ್ಷತ್ರಗಳ ಮಿಥುನ ರಾಶಿಯವರಿಗೆ ಹತ್ತನೆಯ ಗುರುವಿನ ಫಲವು ದೊರೆಯುತ್ತದೆ. ಆರೋಗ್ಯ ದೃಷ್ಟಿಯಿಂದ ನೋಡಲಾಗಿ ಕಳೆದ ವರುಷ ಉಂಟಾಗಿದ್ದ ಶಾರೀರಿಕ ಪೀಡೆಯು ಜನ್ಮಸ್ಥ ಶನಿಯ ನಿರ್ಗಮನದಿಂದ ಕಡಿಮೆಯಾದರೂ ಜನವರಿ 14ರಿಂದ ಫೆಬ್ರುವರಿ 12, ಮೇ 15ರಿಂದ ಜುಲೈ 15, ಸಪ್ಟೆಂಬರ 16ರಿಂದ ಅಕ್ಟೋಬರ 18ರ ವರೆಗಿನ ಈ ನಾಲ್ಕು ತಿಂಗಳ ಕಾಲ ಮಾತ್ರ ಶಾರೀರಿಕ ಪೀಡೆ ಹೆಚ್ಚುವುದಲ್ಲದೆ ಅಪಘಾತದ ಭಯವುಂಟು. ಬರಬೇಕಾಗಿದ್ದ ಹಣ ಈ ವರುಷ ಬರುವುದರಿಂದ ಆರ್ಥಿಕ ಸ್ಥಿತಿ ಹಿಡಿತದಲ್ಲಿರುವುದು. ನವಂಬರ 15ರಿಂದ ಡಿಸಂಬರ 16 ಹಾಗೂ ಫೆಬ್ರುವರಿ 12 ರಿಂದ ಮೇ 15ರ ವರೆಗಿನ ಈ ನಾಲ್ಕು ತಿಂಗಳ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಸಾಕಷ್ಟು ಬರುವುದರಿಂದ ನಿಮ್ಮ ಆರ್ಥಿಕ ಸ್ಥಿತಿ ಹಿಡಿತದಲ್ಲಿ ಬರುವುದಲ್ಲದೆ ಕಳೆದ ವರುಷ ಅರ್ಧಕ್ಕೆ ನಿಂತ ಕಾರ್ಯಗಳೆಲ್ಲವೂ ಈ ಅವಧಿಯಲ್ಲಿ ಪೂರ್ತಿಯಾಗುವವು; ಆದರೆ ಡಿಶೆಂಬರ 15ರಿಂದ ಫೆಬ್ರುವರಿ 12, ಮೇ 15ರಿಂದ ಆಗಸ್ಟ 15 ಸಪ್ಟೆಂಬರ 16ರಿಂದ ಅಕ್ಟೋಬರ 17ರ ವರೆಗಿನ ಈ ಆರು ತಿಂಗಳ ಕಾಲ ಆರ್ಥಿಕ ದೃಷ್ಟಿಯಿಂದ ತೀರ ಪ್ರತಿಕೂಲವಿರುವುದಲ್ಲದೆ ಈ ಕಾಲದಲ್ಲಿ ಬರತಕ್ಕ ಹಣ ಸಕಾಲದಲ್ಲಿ ಬರದೆ ಕೊಡತಕ್ಕ ಹಣಕ್ಕಾಗಿ ವಿಶೇಷ ತೊಂದರೆಯಾಗುವುದು. ಆರ್ಥಿಕ ತಾಪತ್ರಯ ಪರಾಕಾಷ್ಟಕ್ಕೆ ತಲುಪುವುದಲ್ಲದೇ ಸಾಲಗಾರರಿಂದ ಅವಮಾನಕಾರಕ ಪ್ರಸಂಗವನ್ನೂ ಎದುರಿಸಬೇಕಾಗುವುದು. ಮನೆಯಲ್ಲಿ ಜರುಗಲಿರುವ ಮಂಗಲಕಾರ್ಯಕ್ಕಾಗಿ ಹೊಸ ಸಾಲಕ್ಕೆ ಮೊರೆಹೋಗುವ ಪ್ರಸಂಗವೂ ಇದೇ ಅವಧಿಯಲ್ಲಿ ಬರಬಹುದಾಗಿದೆ. ಕೋರ್ಟು ಕಚೇರಿಯ ಕಾರ್ಯದಲ್ಲಿ ರಾಜೀ, ಸಂಧಾನ ಮನೋಭಾವನೆಯಿಂದ ಲಾಭ ತಟ್ಟುತ್ತದೆ, ನ್ಯಾಯ ನಿರ್ಣಯ ಪೂರ್ವಾರ್ಧದಲ್ಲಿ ನಡೆದರೆ ಹಾನಿಯಾಗದಿದ್ದರೂ ಲಾಭವಿಲ್ಲ. ಆದರೆ ತೀರ್ಮಾನ ಉತ್ತರಾರ್ಧದಲ್ಲಿ ಜರುಗಿದರೆ ಹಾನಿ ನಿಶ್ಚಿತವೆಂದೇ ಹೇಳಬಹುದು.


ಈ ರಾಶಿಯ ನೌಕರವರ್ಗದವರಿಗೆ ಈ ವರ್ಷ

ಮಿಶ್ರಫಲವಿದೆ. ನವಂಬರ 14ರಿಂದ ಡಿಸೆಂಬರ 15, ಫೆಬ್ರುವರಿ 12ರಿಂದ ಮೇ 15, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಐದು ತಿಂಗಳುಗಳು ಶುಭವೂ ಅನುಕೂಲವೂ ಇರುವುದರಿಂದ ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ವರಿಷ್ಠರಿಂದ ಸಹಕಾರ ದೊರೆಯುವುದು. ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ, ಹಂಗಾಮಿ ನೌಕರರಿಗೆ ಕಾಯಂ ಆಗುವಿಕೆ, ಮೊದಲಾದ ಶುಭಫಲಗಳು ದೊರೆಯುವವು, ಆದರೆ ಡಿಸೆಂಬರ 15ರಿಂದ ಫೆಬ್ರುವರಿ 11, ಮೇ 15ರಿಂದ ಆಗಸ್ಟ 15, ಸಪ್ಟೆಂಬರ 16ರಿಂದ ಅಕ್ಟೋಬರ 17ರ ವರೆಗಿನ ಈ ಆರು ತಿಂಗಳ ಕಾಲ ತೀರ ತಾಪದಾಯಕವೂ ಪ್ರತಿಕೂಲವೂ ಆಗಿದ್ದು, ಬೇಡಾದ ಸ್ಥಳಕ್ಕೆ ಬದಲಿ, ಹಿಂಬಡತಿ, ವರಿಷ್ಠರ ಕಿರುಕುಳದಿಂದ ನೌಕರಿಗೆ ತಿಲಾಂಜಲಿಯನ್ನೀಯುವಷ್ಟರ ಮಟ್ಟಿಗೆ ಅಸಹನೀಯವಾಗುತ್ತದೆ. 'ತಾಳಿದವ ಬಾಳಬಲ್ಲ' ಎಂಬುದನ್ನು ಮಾತ್ರ ಮರೆಯದಿರಿ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಸಂಚಾರಿ ಕೆಲಸಗಾರ, ಗಿರಣಿ–ಕಾರಖಾನೆಗಳ ಶ್ರಮಿಕ ವರ್ಗಕ್ಕೆ ಈ ವರುಷ ಪ್ರೋತ್ಸಾಹದಾಯಕವಾಗಿರುವುದಿಲ್ಲವಾದರೂ ಪೂರ್ವಾರ್ಧವು ಇದ್ದುದರಲ್ಲಿಯೇ ಅನುಕೂಲಕರವಾಗಿದ್ದು, ಅವರ ಕೆಲ ಬೇಡಿಕೆಗಳು ಈಡೇರುವವು. ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಲೇಖಕ, ಕಲಾವಿದ ಪತ್ರಿಕೋದ್ಯಮಿ, ಶಿಕ್ಷಕ ಮೊದಲಾದವರಿಗೆ ಈ ವರುಷ ಮಿಶ್ರಫಲವಿದೆ. ಪೂರ್ವಾರ್ಧವು ಶುಭದಾಯಕವಿದ್ದು, ಉದ್ಯೋಗದಲ್ಲಿ ಪ್ರಗತಿ, ಸ್ಥಿರತೆ, ಮನ್ನಣೆ ದೊರೆಯುವುದಲ್ಲದೆ ಸರಕಾರ, ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪದಕಗಳು ಲಭಿಸುವವು. ಮಾನ, ಸನ್ಮಾನ ಪಡೆದು ದ್ರವ್ಯಾನುಕೂಲತೆಯುಂಟಾಗುವುದು. ಆದರೆ ಉತ್ತರಾರ್ಧವು ತೀರ ನಿಕೃಷ್ಟವಾಗಿದ್ದು, ಉದ್ಯೋಗದಲ್ಲಿ ತೊಂದರೆ ಹಾಗು ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗುವುದು. ಈ ರಾಶಿಯ ಕೃಷಿಕ ವರ್ಗದವರಿಗೆ ಮಿಶ್ರಫಲವಿದೆ. ಮುಂಗಾರಿ ಬೆಳೆ ನಿರೀಕ್ಷೆಗಿಂತ ಹೆಚ್ಚು ಬಂದು ಆರ್ಥಿಕ ಸ್ಥಿತಿ ಚೇತರಿಸುವುದು. ಹೊಸ ಜಾಗೆ, ಮನೆ, ಹೊಲ, ದನಕರುಗಳು, ಬೇಸಾಯದ ಉಪಕರಣಗಳನ್ನು ಕೊಳ್ಳುವ ಇಲ್ಲವೇ ನವೀಕರಿಸುವ ಸಾಧ್ಯತೆ ಉಂಟು. ಆದರೆ ಹಿಂಗಾರಿ ಬೆಳೆ ಕೈಕೊಡುವುದರಿಂದ ನಿಮ್ಮ ಲೆಕ್ಕ ಸಂಪೂರ್ಣ ತಪ್ಪುತ್ತದೆ. ಅದರಲ್ಲಿಯೂ ಮೇ 15ರಿಂದ ಅಕ್ಟೋಬರ 18ರ ವರೆಗಿನ ಈ ಐದು ತಿಂಗಳುಗಳು ತೀರ ತೊಂದರೆಯವು. ಸಾಲಗಾರರ ಕಾಟ, ಹೊಸ ಸಾಲಕ್ಕಾಗಿ ಪರದಾಟ, ಹೊಲ, ಮನೆ ಒತ್ತಿ ಹಾಕಿ ಋಣಮುಕ್ತರಾಗುವ ಸನ್ನಿವೇಶ ಬರುತ್ತದೆ. ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರು ಠೋಕ, ಕಮಿಷನ, ಏಜೆಂಟ, ಹಂಚಿಕೆದಾರ ಗಿರಣಿ, ಕಾರಖಾನೆ, ಟಾಕೀಜ, ಹೊಟೇಲುಗಳ ಮಾಲಕ ವರ್ಗದವರಿಗೆ ಈ ವರುಷ ಪ್ರೋತ್ಸಾಹದಾಯಕವಿರುವುದಿಲ್ಲ. ಪೂರ್ವಾರ್ಧ ಶುಭವೂ ಅನುಕೂಲವೂ ಆಗಿದ್ದು, ಉದ್ಯೋಗದಲ್ಲಿ ಪ್ರಗತಿ ಸಾಧಿಸಿ, ಆರ್ಥಿಕ ಸ್ಥಿತಿ ಚೇತರಿಸಿದರೆ ಉತ್ತರಾರ್ಧದಲ್ಲಿ ಉದ್ಯೋಗದಲ್ಲಿ ಹಿನ್ನಡೆ, ಆರ್ಥಿಕ ಮುಗ್ಗಟ್ಟು; ನೌಕರರ ಸಮಸ್ಯೆಗಳೊಂದಿಗೆ ಸರಕಾರದ ನಿರ್ಬಂಧನೆಗಳನ್ನೂ ಎದುರಿಸಬೇಕಾಗುತ್ತದೆ.

ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿದ್ದು, ನವಂಬರ 15ರಿಂದ ಜನವರಿ 14, ಫೆಬ್ರುವರಿ 12ರಿಂದ ಮೇ 15, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಆರು ತಿಂಗಳುಗಳ ನಡುವಿನ ಅವಧಿಯಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮದ ಆನಂದಮಯ ಜೀವನದಲ್ಲಿ ಓಲಾಡುವರು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರು ಹಾಗು ಗೃಹಿಣಿಯರಿಗೆ ಈ ವರುಷ ಮಿಶ್ರಫಲವಿದೆ. ಪೂರ್ವಾರ್ಧವು ಶುಭದಾಯಕವಾಗಿದ್ದು, ಈ ಕಾಲದಲ್ಲಿ ಬೆಲೆಯುಳ್ಳ ವಸ್ತು, ಒಡವೆಗಳನ್ನು ಕೊಳುವ ನೂತನಗೃಹ ಪ್ರವೇಶ, ತೀರ್ಥಯಾತ್ರೆ ಸಂದರ್ಶನ ಮೊದಲಾದ ಶುಭ ಘಟನೆಗಳು ಜರುಗಿದರೆ ಉತ್ತರಾರ್ಧವು ತೊಂದರೆಯದು. ಪ್ರತಿನಿತ್ಯದ ಗೃಹಕಲಹ ಹಾಗು ಮಿಥ್ಯಾಪವಾದದಿಂದಾಗಿ ಮನಸ್ಸಿಗೆ ನೆಮ್ಮದಿ ಇರದು. ಈ ರಾಶಿಯ ಗರ್ಭಿಣಿಯರಿಗೆ ಈ ವರುಷ ಶುಭದಾಯಕವಾಗಿದೆ. ಗುರು ಒಂಭತ್ತನೆಯವನಿರುವ ಕಾಲದಲ್ಲಿ ಹೆರಿಗೆಯಾದರೆ ಸುಖಪ್ರದವಾಗುವುದು. ಆದರೆ ಮೇ 15ರಿಂದ ಅಗಸ್ಟ 15, ಹಾಗೂ ಸಪ್ಟೆಂಬರ 16ರಿಂದ ಅಕ್ಟೋಬರ 17ರ ನಡುವಿನ ಅವಧಿಯಲ್ಲಿ ಕುಸು ಕಷ್ಟದಾಯಕವಾಗುವುದು.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಮಿಶ್ರಫಲವಿದೆ. ಪೂರ್ವಾರ್ಧವು ಪ್ರಗತಿದಾಯಕವಾಗಿದ್ದು, ಸ್ಥಾನಮಾನ, ಅಧಿಕಾರ, ಪಡೆಯುವರು. ಇದೇ ಸಮಯದಲ್ಲಿ ಚುನಾವಣೆ ಜರುಗಿದಲ್ಲಿ ಸ್ಪರ್ಧೆ ತುರುಸಿನದಾದರೂ ಆಯ್ಕೆ ನಿಶ್ಚಿತ. ಆದರೆ ಉತ್ತರಾರ್ಧವು ತೊಂದರೆಯದಾಗಿದ್ದು, ಮಿತ್ರರು ಶತ್ರುಗಳಾಗುವುದರಿಂದ ಅವಿಶ್ವಾಸ ಸೂಚನೆಗೆ ಗುರಿಯಾಗಿ ಸ್ಥಾನಮಾನ, ಅಧಿಕಾರಕ್ಕೆ ಚ್ಯುತಿಬರುತ್ತದೆ. ಚುನಾವಣೆಗಳು ಉತ್ತರಾರ್ಧದಲ್ಲಿ ಜರುಗಿದರೆ ಸ್ಪರ್ಧಿಸದಿರುವುದು ಹಿತಕರ.

ಈ ರಾಶಿಯ ವಿದ್ಯಾರ್ಥಿಗಳಿಗೆ ಪೂರ್ವಾರ್ಧವು ಶುಭದಾಯಕವಿದ್ದು, ಕುಂಠಿತವಾದ ಶಿಕ್ಷಣ ಮುಂದುವರೆಯುವುದು. ಶಿಷ್ಯವೃತ್ತಿ, ವಿದ್ಯಾರ್ಥಿವೇತನ ದೊರೆಯುವುದು. ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ವಿದೇಶ ಪ್ರಯಾಣದ ಯೋಗವೂ ಉಂಟು. ಆದರೆ ಉತ್ತರಾರ್ಧವು ತೊಂದರೆಯದು. ಶಿಷ್ಯವೃತ್ತಿ ವಿದ್ಯಾರ್ಥಿವೇತನಕ್ಕೆ ಎರವಾಗುವರಲ್ಲದೇ ಶಿಕ್ಷಣ ಮುಂದುವರಿಸುವುದು ಕಠಿಣವಾಗುವುದು. ನವಂಬರ 15ರಿಂದ ಡಿಸೆಂಬರ 15 ಹಾಗು ಫೆಬ್ರುವರಿ 12ರಿಂದ ಮೇ 15ರ ನಡುವಿನ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆ ಹೊಂದಿ ಶ್ರೇಣಿ, ದರ್ಜೆ, ಪ್ರಶಸ್ತಿ, ಪದಕಗಳನ್ನು ಪಡೆಯುವರು. ಡಿಸೆಂಬರ 16ರಿಂದ ಫೆಬ್ರುವರಿ 12, ಮೇ 15ರಿಂದ ಆಗಸ್ಟ 15, ಸಪ್ಟಂಬರ 16ರಿಂದ ಅಕ್ಟೋಬರ 18ರ ಒಳಗೆ ಜರುಗುವ ಪರೀಕ್ಷೆಗೆ ಕಟ್ಟುವವರ ಫಲಿತಾಂಶ ಸಂಶಯಾಸ್ಪದವಾಗಿದೆ,



ಕರ್ಕ

ಈ ವರುಷ ಈ ರಾಶಿಯವರಿಗೆ ಬರಲಿರುವ ಒಂಭತ್ತನೆಯ ಗುರುವಿನಿಂದಾಗಿ ಸಾಡೇಸಾತಿಯ ಅನಿಷ್ಟ ಪರಿಣಾಮ ಕಡಿಮೆಯಾಗುವದು.

ಸಾಡೇಸಾತಿ ಹಾಗೂ ಎಂಟನೆಯ ಗುರುವಿನ ಅನಿಷ್ಟತೆಯಿಂದ ಕಳೆದ ವರುಷ ನಿಮ್ಮ ಜೀವನದ ಮೇಲೆ ಮುಸುಕಿದ್ದ ಕಾರ್ಮೋಡಗಳು ಈ ವರುಷದ ಮಧ್ಯದಲ್ಲಿ ಬರುವ ಒಂಭತ್ತನೆಯ ಗುರುವಿನಿಂದಾಗಿ ಚದುರಿ ಹೋಗಿ, ನಿದ್ರಾರಹಿತವಾದ ಅನೇಕ ರಾತ್ರಿಗಳನ್ನು ಕಳೆದ

ನೀವು ಈ ವರುಷದ ಮಧ್ಯದಿಂದ ಕೆಲಮಟ್ಟಿಗೆ ಸುಖ ಶಾಂತಿಯನ್ನು ಪಡೆಯುವಿರಿ. ಪುನರ್ವಸು, ಪುಷ್ಯ ನಕ್ಷತ್ರದವರಿಗೆ ಸುಖ–ಶಾಂತಿಗಳ ಭರವಸೆ ಇದ್ದರೆ ಆಶ್ಲೇಷಾ ನಕ್ಷತ್ರದ ಕರ್ಕ ರಾಶಿಯವರಿಗೆ ಈ ವರುಷವು ಕ್ಲೇಶದಾಯಕವಾಗಿದೆ. ವರ್ಷಾಂತ್ಯದಲ್ಲಿ ಬರುವ ಜನ್ಮಸ್ಥ ಶನಿಯ ಮೂಲಕ ವರುಷವಿಡೀ ಈ ರಾಶಿಯವರ ಆರೋಗ್ಯ ಚೆನ್ನಾಗಿರದು. ಅದರಲ್ಲಿಯೂ ನವಂಬರ 15ರಿಂದ ಜನವರಿ 14, ಫೆಬ್ರುವರಿ 12ರಿಂದ ಮಾರ್ಚ್ 15, ಜೂನ 15ರಿಂದ ಆಗಸ್ಟ 15ರ ವರೆಗಿನ ಈ ಐದು ತಿಂಗಳ ಅವಧಿಯಲ್ಲಿ ರೋಗ ಉಲ್ಬಣಿಸುವುದಲ್ಲದೆ ಅಪಘಾತದ ಭಯವುಂಟು. ಸಂಶಯ ಪ್ರವೃತ್ತಿಯವರಾದ ನೀವು ಆರೋಗ್ಯ ಸುಧಾರಿಸದು ಎಂಬ ಚಿಂತೆಯಲ್ಲಿ ಯೇ ಇನ್ನಿಷ್ಟು ಮಾನಸಿಕ ತೊಂದರೆಗೊಳಗಾಗುವಿರಿ. ಕಳೆದ ವರುಷ ಗಂಭೀರವಾಗಿದ್ದ ನಿಮ್ಮ ಆರ್ಥಿಕಸ್ಥಿತಿ ಬರುವ ಒಂಭತ್ತನೆಯ ಗುರುವಿನ ಮೂಲಕ ಚೇತರಿಸಿಕೊಳ್ಳುವುದಲ್ಲದೆ ಮಾರ್ಚ 15ರಿಂದ ಜೂನ 15 ಹಾಗು ಸಪ್ಟಂಬರ 16ರಿಂದ ಅಕ್ಟೋಬರ 17ರ ವರೆಗಿನ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಸಂದಾಯವಾಗುವುದರಿಂದ ಕಳೆದ ವರುಷದಿಂದಿದ್ದ ಡಾಕ್ಟರ, ವಕೀಲರ ಬಿಲ್ಲುಗಳಿಂದಲೂ ಸಾಲಗಾರರ ಕಾಟದಿಂದಲೂ ಮುಕ್ತರಾಗುವಿರಿ. ಆದರೆ ನವಂಬರ 15ರಿಂದ ಮಾರ್ಚ 15 ಹಾಗೂ ಜೂನ 15ರಿಂದ ಸಪ್ಟೆಂಬರ 16ರ ವರೆಗಿನ ಈ ಏಳು ತಿಂಗಳ ಅವಧಿಯಲ್ಲಿ ನಿಮ್ಮ ಆರ್ಥಿಕಸ್ಥಿತಿ ಗಂಭೀರ ಸ್ವರೂಪ ತಾಳುವುದು. ಬರತಕ್ಕ ಹಣ ಸಮಯಕ್ಕೆ ಬರದೆ ಕೊಡತಕ್ಕ ಹಣಕ್ಕಾಗಿ ಸಾಕುಬೇಕಾಗುವುದಲ್ಲದೆ ಅವಮಾನವನ್ನು ಸಹಿಸಬೇಕಾಗುತ್ತದೆ. ಈ ಅವಧಿಯಲ್ಲಿ ಆದಾಯ ಕಡಿಮೆಯಾಗಿ ವೆಚ್ಚ ವಿಪರೀತ ಬೆಳೆಯುತ್ತದೆ. ಸೂಕ್ಷ್ಮಮತಿಗಳಾದ ನೀವು ಮಾನಸಿಕ ಸ್ವಾಸ್ಥ್ಯಕ್ಕೆರವಾಗುವಿರಿ. ಕಳೆದ ವರುಷದಿಂದ ನೆನೆಗುದಿಗೆ ಬಿದ್ದ ವಾದ–ಸ್ಪರ್ಧೆಯ ಕಾರ್ಯದಲ್ಲಿ ಬರುವ ನವಮ ಗುರುವಿನ ಮೂಲಕ ಯಶಸ್ಸು ಲಭಿಸುವುದು. ರಾಜಕೀಯ, ಮೊಕದ್ದಮೆ,ನೌಕರಿಗೆ ಸಂಬಂಧಿಸಿದ ವ್ಯಾಜ್ಯ, ದಿವಾಣಿ ಮೊಕದ್ದಮೆಗಳಿಗೆ ಮಾರ್ಚ 15ರಿಂದ ಜೂನ 15ರ ವರೆಗೆ ಅಥವಾ ಆಗಸ್ಟ 15ರಿಂದ ವರ್ಷಾಂತ್ಯದ ವರೆಗೆ ಯಶಸ್ಸು ದೊರೆತರೆ ಫೌಜದಾರಿ ಮೊಕದ್ದಮೆಗಳನ್ನು ಕೈಗೊಳ್ಳದಿರುವುದು ಹಿತಕರ.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷದ ಮಧ್ಯದಿಂದ ಬರುವ ನವಮ ಗುರುವಿನ ಶುಭಫಲದಿಂದ ಅನುಕೂಲವುಂಟು. ಕಳೆದ ವರುಷದಿಂದಿದ್ದ ವರಿಷ್ಠರ ಅವಕೃಪೆ ದೂರವಾಗುವುದು. ಮಾರ್ಚ 15ರಿಂದ ಜೂನ 15ರ ಹಾಗೂ ಆಗಸ್ಟ 15ರಿಂದ ಅಕ್ಟೋಬರ 17ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ನಿರುದ್ಯೋಗಿಗಳಿಗೆ ನೌಕರಿ ಲಭ್ಯ, ಹಂಗಾಮಿ ನೌಕರದಾರರಿಗೆ ಕಾಯಂ ಆಗುವುದು, ಅನುಕೂಲ ಜಾಗೆಗೆ ಬದಲಿ, ನೌಕರಿಯಲ್ಲಿ ಬಡತಿ ಮೊದಲಾದ ಶುಭಫಲಗಳು ಲಭಿಸುವವು. ಆದರೆ ನವಂಬರ 15ರಿಂದ ಮಾರ್ಚ್ 15 ಹಾಗು ಜೂನ 15ರಿಂದ ಆಗಸ್ಟ 15ರ ವರೆಗಿನ ಈ ಆರು ತಿಂಗಳ ಕಾಲ ಪ್ರತಿಕೂಲವಿದ್ದು, ವರಿಷ್ಠರ ಕಿರುಕುಳ ಹೆಚ್ಚು. ಅನಪೇಕ್ಷಿತ ಸ್ಥಳಗಳಿಗೆ ಬದಲಿಯಾಗುವ ಸಂಭವ, ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಪ್ರವಾಸಿ ಕೆಲಸಗಾರರು. ಗಿರಣಿ–ಕಾರಖಾನೆಗಳ ಶ್ರಮಜೀವಿಗಳಿಗೆಲ್ಲ ಈ ವರುಷ ಹೇಳಿಕೊಳ್ಳುವಂಥ ಪ್ರೋತ್ಸಾಹದಾಯಕವಾಗಿಲ್ಲವಾದರೂ ಕಳೆದ ವರುಷದಷ್ಟು ಪ್ರತಿಕೂಲವೂ ತಾಪದಾಯಕವೂ ಆಗಿರದು. ಮಾರ್ಚ್ 15ರಿಂದ ಜೂನ 15 ಹಾಗೂ ಆಗಸ್ಟ 15ರಿಂದ ಅಕ್ಟೋಬರ 17ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಈ ರಾಶಿಯ ಈ ವರ್ಗದವರ ಕೆಲ ಬೇಡಿಕೆಗಳು ಈಡೇರುವುದರಲ್ಲಿ ಸಂದೇಹವಿಲ್ಲ.

ಬರುವ ನವಮ ಗುರುವಿನ ಮೂಲಕ ಈ ರಾಶಿಯ ಬುದ್ಧಿಜೀವಿ, ಕಲಾವಿದ, ಸಾಹಿತಿ, ಪತ್ರಿಕೋದ್ಯಮಿ ಶಿಕ್ಷಕ, ಕಾರಕೂನರಿಗೆ ಈ ವರುಷ ಪ್ರೋತ್ಸಾಹದಾಯಕವಿದೆ. ಉದ್ಯೋಗದಲ್ಲಿ ಉತ್ಕರ್ಷ ಹೊಂದಿ, ಕಳೆದ ವರುಷ ಆಗದೇ ಇದ್ದ ಕಾರ್ಯಗಳು ಈ ವರುಷ ಪೂರ್ತಿಯಾಗುವವು. ಸರಕಾರ ಹಾಗು ಸಂಸ್ಥೆಗಳಿಂದ ಮಾನಸನ್ಮಾನ, ಮನ್ನಣೆ, ಪ್ರಶಸ್ತಿ ಪದಕಗಳು ದೊರೆಯುವುವಲ್ಲದೇ ವಾಹನ ಸೌಖ್ಯ, ಪರದೇಶ ಪರ್ಯಟನಗಳಂಥ ಶುಭ ಘಟನೆಗಳು ಜರುಗುವವು. ಮಾರ್ಚ್ 15ರಿಂದ ಜೂನ 15 ಹಾಗು ಅಗಸ್ಟ 15 ರಿಂದ ಅಕ್ಟೋಬರ 17ರ ವರೆಗಿನ ಅವಧಿಯಲ್ಲಿ ಈ ಎಲ್ಲ ಶುಭ ಘಟನೆಗಳು ಜರುಗಬಹುದಾಗಿದೆ.


ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರು ಕಮಿಶನ ಏಜಂಟ, ಹಂಚಿಕೆದಾರ, ಕಾರಖಾನೆ, ಗಿರಣಿ, ಚಾಳ,ಹೋಟೆಲುಗಳ ಮಾಲಕ ವರ್ಗದವರಿಗೆ ಮಿಶ್ರ ಫಲವಿದ್ದು, ಕಳೆದ ವರುಷ ಕುಂಠಿತವಾಗಿದ್ದ ಉದ್ಯೋಗ

ಮತ್ತೆ ಈ ವರುಷ ಚೇತರಿಸಿಕೊಳುವುದು. ನೌಕರರ ಸಮಸ್ಯೆ ಹಾಗು ಸರ್ಕಾರದ ನಿಬಂಧನೆಗಳಿಂದ ಕಳೆದ ವರುಷ ಜರ್ಜರಿತರಾಗಿದ್ದ ನೀವು ಈ ವರುಷ ದ ಮಧ್ಯ ದಿಂದ ಅಂದರೆ ಮಾರ್ಚ್ 15ರಿಂದ ಜೂನ 15ರ ವರೆಗಿನ ಈ ಮೂರು ತಿಂಗಳ ಕಾಲದಲ್ಲಿ ಚೇತರಿಸಿಕೊಳುವಿರಿ. ಎಲ್ಲ ಸಮಸ್ಯೆಗಳು ಪರಿಹಾರವಾಗಿ ಉದ್ಯೋಗ ದಲ್ಲಿ ಸ್ಥಿರತೆ, ಪ್ರಗತಿ ಸಾಧಿಸುವುದು, ಈ ರಾಶಿಯ ಕೃಷಿಕ ವರ್ಗದವರಿಗೆ ಪೂರ್ವಾರ್ಧವು ಪ್ರತಿಕೂಲವಿದ್ದರೆ ಉತ್ತರಾರ್ಧವು ಪ್ರಗತಿದಾಯಕವಿದೆ. ಮುಂಗಾರಿ ಬೆಳೆ ಕೈ ಕೊಟ್ಟರೆ ಹಿಂಗಾರೀ ಬೆಳೆ ಕೈ ಹಿಡಿಯುವುದು. ಕಳೆದ ವರುಷ ಒತ್ತಿ ಹಾಕಲ್ಪಟ್ಟ ಹೊಲ ಮನೆಗಳನ್ನು ಈ ವರುಷ ಬಿಡಿಸಿಕೊಳುವರು. ಕುಂಠಿತವಾದ ಬೇಸಾಯ ಮತ್ತೆ ಪ್ರಾರಂಭವಾಗುವುದಲ್ಲದೇ ಮಾರ್ಚ್ 15ರಿಂದ ಜೂನ 15ರ ಒಳಗಿನ ಈ ಮೂರು ತಿಂಗಳ ಕಾಲದಲ್ಲಿ ಹೊಸದಾಗಿ ದನಕರುಗಳನ್ನು ಕೊಳುವ, ಕೃಷಿಗೆ ಬೇಕಾಗುವ ಉಪಕರಣಗಳನ್ನು ಖರೀದಿಸುವ ಯೋಗವುಂಟು.

ಕಳೆದ ವರುಷಗಳಿಂದ ಪ್ರಯತ್ನಿಸುತ್ತಿರುವ ಈ ರಾಶಿಯ ವಧೂವರರಿಗೆ ನವಮ ಗುರುವಿನ ಮೂಲಕ ಕಂಕಣಬಲ ಈ ವರುಷ ಕೂಡಿ ಬಂದಿರುವುದು. ಮಾರ್ಚ್ 15ರಿಂದ ಜೂನ ಕೊನೆಯ ಒಳಗೆ ಅಥವಾ ಆಗಸ್ಟ 15ರಿಂದ ಅಕ್ಟೋಬರ 17ರ ಒಳಗೆ ವಿವಾಹ ಸಾಂಗವಾಗಿ ಗೃಹಸ್ಥಾಶ್ರಮದ ಆನಂದಮಯ ಜೀವನ ದಲ್ಲಿ ಪದಾರ್ಪಣ ಮಾಡುವರು. ಅಷ್ಟಮ ಗುರು ಹಾಗೂ ಸಾಡೇಸಾತಿಯ ಮೂಲಕ ಒಡೆದು ಹೋದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದು. ತಪ್ಪು ತಿಳುವಳಿಕೆ ಹಾಗು ಗೃಹಕಲಹದಿಂದ ಸ್ಮಶಾನ ದಂತೆ ಕಾಣುತ್ತಿದ್ದ ಮನೆ ಈ ವರುಷ ನಂದನವನದಂತೆ ಶೋಭಿಸುವುದು. ಗೃಹಿಣಿ, ವಿವಾಹಿತ ಸ್ತ್ರೀ ಪುರುಷರಿಗೆ ಈ ವರುಷ ಪ್ರಗತಿದಾಯಕವಿದ್ದು, ಮಾರ್ಚ್ 15 ರಿಂದ ಜೂನ 15ರ ವರೆಗಿನ ಈ ಮೂರು ತಿಂಗಳ ಅವಧಿಯಲ್ಲಿ ತೀರ್ಥಯಾತ್ರಾಸಂದರ್ಶನ, ಬೆಲೆಯುಳ ವಸ್ತು ಒಡವೆ ಕೊಳುವ ಯೋಗವಿದೆ. ಬಹುತರ ಅವರ ಎಲ್ಲ ಆಶೆ ಆಕಾಂಕ್ಷೆಗಳು ಈಡೇರುವವು. ಈ ರಾಶಿಯ ಗರ್ಭಿಣಿಯರಿಗೆ ಹೆರಿಗೆಯು ನವೆಂಬರ 15ರಿಂದ ಮಾರ್ಚ್ 15ರ ಹಾಗು ಜೂನ 15 ರಿಂದ ಅಗಸ್ಟ 15ರ ನಡುವಿನ ಅವಧಿಯಲ್ಲಾದರೆ ಪ್ರಸೂತಿಯು ಕಷ್ಟಕರವಿದ್ದು, ಶಸ್ತ್ರಕ್ರಿಯೆಯ ಪ್ರಸಂಗವೂ ಬರಬಹುದು; ಆದರೆ ಜನವರಿ 14ರಿಂದ ಫೆಬ್ರುವರಿ 11, ಆಗಸ್ಟ 15ರಿಂದ ವರ್ಷಾಂತ್ಯದ ವರೆಗಿನ ಅವಧಿ ಯಲ್ಲಿ ಸುಖಪ್ರಸವವಾಗುವುದು.

ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷದ ಮಧ್ಯದಿಂದ ಬರುವ ನವಮ ಗುರುವಿನ ಮೂಲಕ ಪ್ರೋತ್ಸಾಹದಾಯಕವಿದ್ದು, ಶತ್ರುಗಳು ಮಿತ್ರ ರಾಗುವುದರಿಂದ ಸಲ್ಲದ ಅಪವಾದಕೆ ಗುರಿಯಾಗಿದ್ದ ನೀವು ಮಾರ್ಚ್ 15ರ ನಂತರ ದೋಷಮುಕ್ತರಾಗುವಿರಿ. ಅನೇಕ ಸಂಘ, ಸಂಸ್ಥೆಗಳ ಪದಾಧಿಕಾರಿಗಳಾಗಿ ಕಳೆದುಕೊಂಡಿದ್ದ ಸ್ಥಾನಮಾನ ಪುನಃ ಪಡೆಯುವಿರಿ. ಮಾರ್ಚ್ 15ರ ನಂತರ ಜರುಗಲಿರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ಅತ್ಯಧಿಕ ಮತಗಳಿಂದ ಆಯ್ಕೆ ಆಗುತ್ತದೆ. ಆದರೆ ನವೆಂಬರ 14ರಿಂದ ಮಾರ್ಚ್ 14ರ ವರೆಗಿನ ಕಾಲ ಎಲ್ಲ ದೃಷ್ಟಿಯಿಂದ ಪ್ರತಿಕೂಲವಿರುವುದರಿಂದ ಚುನಾವಣೆಗಳಂಥ ಗೊಂದಲ ದಿಂದ ದೂರವಿರುವುದು ಹಿತಕರ.

ಈ ರಾಶಿಯ ವಿದ್ಯಾರ್ಥಿಗಳಿಗೆ ಈ ವರುಷ ಪ್ರೋತ್ಸಾಹದಾಯಕವಿದೆ. ಕಳೆದ ವರುಷದಿಂದ ಅರ್ಧಕ್ಕೆ ನಿಂತ ಶಿಕ್ಷಣ ಮತ್ತೆ ಈ ವರುಷ ಮುಂದುವರೆಯುವುದು. ಶಿಕ್ಷಕರ ಅವಕೃಪೆಗೆ ಪಾತ್ರರಾಗಿದ್ದ ವಿದ್ಯಾರ್ಥಿಗಳು ಈ ವರುಷ ಅವರ ಕೃಪೆಗೆ ಪಾತ್ರರಾಗುತ್ತಾರೆ. ನಿಂತು ಹೋದ ಶಿಷ್ಯವೃತ್ತಿ, ವಿದ್ಯಾರ್ಥಿವೇತನ ಮತ್ತೆ ದೊರೆಯುವುದು. ಯಾವ ವಿದ್ಯಾರ್ಥಿಯ ಪರೀಕ್ಷೆಯು ಮಾರ್ಚ್ 15ರಿಂದ ಜೂನ 15 ಹಾಗೂ ಆಗಸ್ಟ 15ರ ಮೇಲೆ ಜರುಗುವುದೋ ಅಂಥ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆಯಾಗುವರಲ್ಲದೆ ಶ್ರೇಣಿ, ದರ್ಜೆ, ಪ್ರಶಸ್ತಿ, ಪದಕಗಳನ್ನು ಪಡೆಯುವರು. ಆದರೆ ನವಂಬರ 15ರಿಂದ ಮಾರ್ಚ್ 14ರ ಒಳಗೆ ಹಾಗು ಜೂನ 16ರಿಂದ ಆಗಸ್ಟ 14ರ ವರೆಗೆ ಜರುಗುವ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳ ಫಲಿತಾಂಶವು ಸಂಶಯಾಸ್ಪದ.



ಸಿಂಹ

ವರ್ಷಾಂತ್ಯದಿಂದ ಪ್ರಾರಂಭವಾಗಲಿರುವ ಸಾಡೇಸಾತಿ ಹಾಗೂ ಮಧ್ಯದಿಂದ ಬರುವ ಅಷ್ಟಮ ಗುರುವಿನ ಪರಿಣಾಮವಾಗಿ ಈ ರಾಶಿಯವರಿಗೆ ಕೌಟುಂಬಿಕ ವಿರಸ, ಶಾರೀರಕ ಪೀಡೆ ಮೊದಲಾದ ತೊಂದರೆಗಳು ಉದ್ಭವಿಸಿ ಈ ವರುಷ ಮಾನಸಿಕ ನೆಮ್ಮದಿ ದೊರೆಯದು.

ವರ್ಷಾಂತ್ಯದಿಂದ ಸಾಡೇಸಾತಿ ಪ್ರಾರಂಭವಾದರೂ ಮಘಾ ನಕ್ಷತ್ರದವರಿಗೆ ಸಾಡೇಸಾತಿಯ ಅನಿಷ್ಟ ಪ್ರಭಾವ ಈ ವರುಷವಿದ್ದರೂ ಪೂರ್ವಾ, ಉತ್ತರಾ ನಕ್ಷತ್ರಗಳ ಸಿಂಹ ರಾಶಿಯವರಿಗೆ ಶನಿಯ ಶುಭಫಲ ದೊರೆಯುತ್ತದೆ. ಮಘಾದವರಿಗೆ ಮುಂಬರುವ ಅಷ್ಟಮ ಗುರುವಿನ ಅನಿಷ್ಟತೆ ಹಾಗು ವರುಷವಿಡೀ ಚತುರ್ಥ ರಾಹುವಿನ ಅಶುಭಫಲವು ದೊರೆಯುವುದರಿಂದ ನಿಮ್ಮ ಸ್ಥಿತಿ ದಯನೀಯ. ಪ್ರಾಮಾಣಿಕ, ಬುದ್ಧಿವಂತ, ಪ್ರತಿಷ್ಠಿತರೆಂದು ಕೀರ್ತಿಪಡೆದ ನಿಮ್ಮನ್ನು ಜನ ಈಗ ತಿರಸ್ಕಾರದಿಂದ ಕಾಣತೊಡಗುವರು. ಬದಲಾದ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕಲ್ಲದೇ ಹತಾಶರಾಗಬೇಡಿರಿ. ಪ್ರಾಣದೇವರು ಹಾಗು ಶ್ರೀ ಗುರುದತ್ತರನ್ನು ಭಜಿಸಿರಿ. ಎಲ್ಲವೂ ಸರಿಯಾಗುವುದು. ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರದು. ಅದರಲ್ಲಿಯೂ ನವಂಬರ 14 ರಿಂದ ಜನವರಿ 13, ಮಾರ್ಚ್ 15ರಿಂದ ಏಪ್ರಿಲ್ 12, ಜುಲೈ 15ರಿಂದ ಸಪ್ಟೆಂಬರ 16ರ ವರೆಗಿನ ಈ ಐದು ತಿಂಗಳ ಅವಧಿಯಲ್ಲಿ ರೋಗ ಉಲ್ಬಣಿಸಿ ಅಪಘಾತದ ಭಯವುಂಟು. ಆದುದರಿಂದ ಈ ಕಾಲ ದಲ್ಲಿ ಈ ರಾಶಿಯ ತಾಂತ್ರಿಕ ವರ್ಗ. ವಾಹನ ಚಾಲಕ, ವರ್ಕಶಾಪ, ಮಶಿನರಿ ಕೆಲಸಗಾರರು ವಿಶೇಷ ಎಚ್ಚರಿಕೆಯುಲ್ಲಿರುವುದು ಅವಶ್ಯ. ನಿಮ್ಮ ಆರ್ಥಿಕ ಸ್ಥಿತಿಯು ಈ ವರುಷ ಗಂಭೀರ ಸ್ವರೂಪ ತಾಳುವುದು. ಡಾಕ್ಟರ, ವಕೀಲರ ಬಿಲ್ಲು ಹಾಗು ಅತಿಥಿಗಳ ಸತ್ಕಾರದಲ್ಲಿಯೇ ನಿಮ್ಮ ಹಣ ಖರ್ಚಾಗುವುದು. ಅನಿರೀಕ್ಷಿತ ಹಾಗೂ ಆಕಸ್ಮಿಕವಾಗಿ ಸಾಕಷ್ಟು ಹಣ ಬಂದರೂ ವೆಚ ವಿಪರೀತ ಬೆಳೆಯುವುದರಿಂದ. ಸಾಲಗಾರರ ಕಾಟದಿಂದ ಹೊಸ ಸಾಲಕ್ಕಾಗಿ ಪರದಾಡಬೇಕಾಗುತ್ತದೆ. ಆದಾಗೂ ಜನವರಿ 14ರಿಂದ ಮಾರ್ಚ್ 15 ಹಾಗು ಏಪ್ರಿಲ್ 12ರಿಂದ ಜುಲೈ 15ರ ವರೆಗಿನ ಕಾಲದಲ್ಲಿ ನಿರೀಕ್ಷಿಸಿದ ಮೂಲದಿಂದ ಹಣಕಾಸಿನ ಸಹಾಯ ದೊರೆಯುವುದಲ್ಲದೆ ಆಕಸ್ಮಿಕ ಧನಲಾಭವಾಗುವುದರಿಂದ ಅವಮಾನದ ಪ್ರಸಂಗ ತಪ್ಪುವುದು. ಆದರೆ ನವಂಬರ 15ರಿಂದ ಜನವರಿ 13, ಮಾರ್ಚ್ 16ರಿಂದ ಏಪ್ರಿಲ 11, ಜುಲೈ 15ರಿಂದ ಅಕ್ಟೋಬರ 17ರ

ವರೆಗಿನ ಈ ಆರು ತಿಂಗಳುಗಳ ಅವಧಿಯಲ್ಲಿ ಆರ್ಥಿಕ ಸ್ಥಿತಿ ಗಂಭೀರ ಸ್ವರೂಪ ತಾಳಿ ನಿಮ್ಮ ಸತ್ವಪರೀಕ್ಷೆ ಯಾಗುವುದಾದರೂ ಅದರಿಂದ ಖಂಡಿತ ಪಾರಾಗುವಿರಿ. ದಾವೆ, ಫಿರ್ಯಾದಿ ಮೊದಲಾದ ಸ್ಪರ್ಧೆಯ ಕಾರ್ಯಗಳನ್ನು ಈ ವರುಷ ಕೈಗೊಳ್ಳದಿರುವುದೇ ಹಿತಕರ. ರಾಜಕೀಯ, ದಿವಾಣಿ, ವ್ಯಾಜ್ಯಗಳಿಗೆ ಈ ವರುಷ ಪ್ರತಿಕೂಲವಿದೆ. ಆದರೆ ಫೌಜದಾರಿ ಹಾಗು ಕಾರ್ಮಿಕರ ವ್ಯಾಜ್ಯಗಳಿಗೆ ಪೂರ್ವಾರ್ಧದಲ್ಲಿ ನಿರ್ಣಯ ದೊರೆತರೆ ಜಯ ಖಂಡಿತ. ಉತ್ತರಾರ್ಧದಲ್ಲಿ ದೊರೆತರೆ ಯಶಸ್ಸು ಲಭಿಸದು.

ಈ ರಾಶಿಯ ನೌಕರವರ್ಗದವರಿಗೆ ಪೂರ್ವಾರ್ಧಕ್ಕಿಂತ ಉತ್ತರಾರ್ಧದ ಕಾಲ ಹೆಚ್ಚು ತೊಂದರೆಯದಾಗಿದೆ. ಮಾರ್ಚ್ 15ರಿಂದ ಏರ್ಪಿಲ್ 12 ಹಾಗು ಜುಲೈ 15ರಿಂದ ವರ್ಷಾಂತ ದ ವರೆಗಿನ ಕಾಲ ತೀರ ಅಸಹನೀಯವಾಗಿರುವುದು. ಈ ಅವಧಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿಯಾಗುವುದು. ವರಿಷ್ಠರಿಂದ ವಿಶೇಷ ಕಿರುಕುಳ ಉಂಟಾಗುವುದರಿಂದ ನೌಕರಿಗೆ ರಾಜೀನಾಮೆ ಕೊಡಬೇಕಾದ ಪ್ರಸಂಗವೂ ಬರಬಹುದಾಗಿದೆ. ತಾಳಿದವ ಬಾಳಬಲ್ಲ ಎಂಬ ಉಕ್ತಿಯನ್ನು ನೆನಪಿನಲ್ಲಿಡಿರಿ. ನವೆಂಬರ 15ರಿಂದ ಮಾರ್ಚ 15 ಹಾಗೂ ಏಪ್ರಿಲ್ 12ರಿಂದ ಜುಲೈ 14ರ ವರೆಗಿನ ಕಾಲ ತುಸು ಉತ್ಸಾಹದಾಯಕವಾಗಿರುವದು. ನಿಮ್ಮ ಆಶೆ ಕೆಲ ಮಟ್ಟಿಗೆ ಈಡೇರುವುದು. ಹಂಗಾಮಿ ನೌಕರರಿಗೆ ಅಸ್ಥಿರ ಪರಿಸ್ಥಿತಿಯೇ ಮುಂದುವರಿಯುವುದರಿಂದ ವರುಷವಿಡೀ ಚಿಂತೆಯಲ್ಲಿಯೇ ಕಳೆಯಬೇಕಾಗುವುದು.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ, ಶಿಕ್ಷಕ, ಪತ್ರಿಕೋದ್ಯಮಿ, ಕಾರಕೂನ ವರ್ಗದವರಿಗೆ ಬರಲಿರುವ ಅಷ್ಟಮ ಗುರುವಿನಿಂದಾಗಿ ಈ ವರುಷ ಪ್ರತಿಕೂಲವಿದೆ. ಉದ್ಯೋಗದಲ್ಲಿ ಚಟುವಟಿಕೆ ಇರದು. ಮಿತ್ರರು ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುವುದು. ವರ್ಷವಿಡೀ ಮನಸ್ಸಿಗೆ ನೆಮ್ಮದಿ ಇರದಾದರೂ ಗುರು ಏಳನೆಯ ವನಾಗಿರುವವರಿಗೆ ಅಂದರೆ ನವಂಬರ 14ರಿಂದ ಫೆಬ್ರುವರಿ 19ರ ವರೆಗಿನ ಅವಧಿಯಲ್ಲಿ ಮಾತ್ರ ಕೆಲಮಟ್ಟಿಗೆ ಉತ್ತೇಜನವಿದೆ. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರ, ಸಂಚಾರಿ ನೌಕರ ಹಾಗು ಶ್ರಮಜೀವಿಗಳಿಗೆ ಹನ್ನೊಂದನೆಯ ಶನಿ ಬಹುದಿನಗಳ ವರೆಗೆ ಇರುವುದರಿಂದ ಈ ವರುಷ ಪ್ರಗತಿದಾಯಕವಿದ್ದು ನವಂಬರ 15ರಿಂದ ಮಾರ್ಚ್ 15 ಹಾಗೂ ಏಪ್ರಿಲ್ 12ರಿಂದ ಜುಲೈ 14ರ ವರೆಗಿನ ಈ ಏಳು ತಿಂಗಳುಗಳ ಅವಧಿಯಲ್ಲಿ ಅವರ ಬಹಳಷ್ಟು ಬೇಡಿಕೆಗಳು ಈಡೇರುವವು. ಆದರೆ ಜುಲೈ 16ರಿಂದ ಸಾಡೇಸಾತಿಯ ಛಾಯೆ ಬೀಳುವುದರಿಂದ ನೌಕರಿಯಲ್ಲಿ ತೊಂದರೆಯಾಗುವುದು.


ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷ ಮಿಶ್ರ ಫಲವುಂಟು. ಹಿಂಗಾರಿ ಬೆಳೆಗಳಿಗಿಂತಲೂ ಮುಂಗಾರಿ ಬೆಳೆ ಉತ್ತಮವಾಗಿ ಬಂದು ಹೊಸದಾಗಿ ಮನೆ ದನಕರುಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಸಾಧ್ಯತೆಯುಂಟು. ಟ್ರಕ್, ಟ್ರ್ಯಾಕ್ಟರ, ಪಂಪಸೆಟ್ಟು ಮೊದಲಾದ ಕೃಷಿ ಉಪಕರಣಗಳನ್ನು ಕೊಳ್ಳುವ ಯೋಗ. ಆದರೆ ಜುಲೈ 15ರಿಂದ ವರ್ಷಾಂತ್ಯದ ವರೆಗಿನ ಈ ನಾಲ್ಕು ತಿಂಗಳ ಅವಧಿ ತೀರ ತಾಪದಾಯಕವಾಗಿದೆ. ಅನೇಕ ಜಟಿಲ ಸಮಸ್ಯೆಗಳನ್ನು ಎದುರಿಸಬೇಕಾಗುವುದು. ಅಜ್ಜಿ ನೂತದ್ದೆಲ್ಲ ಮೊಮ್ಮಗನ ಉಡುದಾರಕ್ಕೆ ಎಂಬ ಹಾಗೆ ಮೊದಲಿನ ಎಂಟು ತಿಂಗಳಲ್ಲಿ ಗಳಿಸಿ ಉಳಿಸಿದ್ದ ಹಣವನ್ನು ವರುಷದ ಕೊನೆಯ ನಾಲ್ಕು ತಿಂಗಳಲ್ಲಿ ವೆಚ್ಚ ಮಾಡಬೇಕಾದ ಅನಿವಾರ್ಯ ಪ್ರಸಂಗ ಬರುವುದು. ಬೇಸಾಯವನ್ನು ಮುಂದುವರಿಸುವುದು ಕಠಿಣವಾಗಿ ಹೊಲ ಮನೆಗಳನ್ನು ಒತ್ತಿ ಹಾಕುವ ಪ್ರಸಂಗ ಬರಬಹುದಾಗಿದೆ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಿ, ಹಂಚಿಕೆದಾರ, ಗಿರಣಿ, ಕಾರಖಾನೆ, ಚಾಳ, ಟಾಕೀಜ, ಹೋಟೆಲುಗಳ ಮಾಲಕ ವರ್ಗದವರಿಗೆ ಉತ್ಸಾಹದಾಯಕವಾದ ವರ್ಷವಿದಾಗಿಲ್ಲ. ಸರಕಾರದ ನಿಬಂಧನೆ ಹಾಗು ನೌಕರರ ಸಮಸ್ಯೆಗಳನ್ನು ವರುಷವಿಡೀ ಎದುರಿಸಬೇಕಾಗುತ್ತದೆ. ಹೊಸ ಉದ್ಯಮಗಳನ್ನು ಆರಂಭಿಸಬೇಕೆಂಬ ವಿಚಾರವನ್ನು ಈ ವರುಷ ಬಿಟ್ಟು ಕೊಡುವುದು ಹಿತಕರ. ಆದಾಗ್ಯೂ ನವಂಬರ 15ರಿಂದ ಫೆಬ್ರುವರಿ 11, ಏಪ್ರಿಲ್ 12ರಿಂದ ಜುಲೈ 15ರ ವರೆಗಿನ ಆರು ತಿಂಗಳಲ್ಲಿ ಮಾತ್ರ ಇದ್ದುದರಲ್ಲಿಯೇ ಉತ್ತೇಜಕರವಾಗಿದ್ದು ಮಿಕ್ಕ ಕಾಲ ನಿರುತ್ಸಾಹದಾಯಕವಾಗಿರುವುದು.

ಈ ರಾಶಿಯ ವಧೂವರರ ವಿವಾಹವು ಪೂರ್ವಾರ್ಧದಲ್ಲಿ ಜರುಗಿದರೆ ಮಾತ್ರ ತೊಂದರೆ ಕಡಿಮೆ. ಉತ್ತರಾರ್ಧದಲ್ಲಿ ಮದುವೆ ಗೊತ್ತಾದರೂ ಬಿಡುಗಡೆಯಾಗುವ ಸಂಭವ ಹೆಚ್ಚು. ನವ್ಹೆಂಬರ 15ರಿಂದ ಫೆಬ್ರುವರಿ ಕೊನೆಯವರೆಗೆ ಹಾಗೂ ಮೇ, ಜೂನ, ತಿಂಗಳಲ್ಲಿ ವಿವಾಹಯೋಗವಿರುವುದಲ್ಲದೆ ಮದುವೆ ಜರುಗುವುದು. ವಿವಾಹಿತ ಸ್ತ್ರೀಪುರುಷರು ಹಾಗು ಗೃಹಿಣಿಯರಿಗೆ ಈ ವರುಷ ಪ್ರತಿಕೂಲವಿದೆ. ಜೀವನದ ತೂಗುಯ್ಯಾಲೆಯಲ್ಲಿ ಸುಖದ ಸೋಪಾನ ಹತ್ತಿ, ಕಷ್ಟಕಾರ್ಪಣ್ಯದ ಸುಳಿವೇ ಅರಿಯದಂತೆ ಸಂಸಾರದ ರಸನಿಮಿಷಗಳನ್ನು ಅನಂತವಾದಿ ಅನುಭವಿಸಿ, ಮನೆಯೆಂದರೆ ಸ್ವರ್ಗ ಸಮಾನವೆಂದು ತಿಳಿದ ನಿಮಗೆ ಈ ವರುಷ ಅದೇ ಮನೆ ನರಕ ಸದೃಶವಾಗಿ ಕಾಣುತ್ತದೆ. ಗೃಹಕಲಹದಿಂದ ಮನೆ ಇಂದು ಸ್ಮಶಾನದಂತೆ ಗೋಚರವಾಗುತ್ತದೆ. ಏಕತ್ರ ಕುಟುಂಬ ಒಡೆದು ಹೋಗುತ್ತದೆ. ಈ ರಾಶಿಯ ಗರ್ಭಿಣಿಯರಿಗೆ ಅಷ್ಟಮ ಗುರುವಿನಿಂದಾಗಿ ಪ್ರತಿಕೂಲವಿದ್ದು, ಗರ್ಭಸ್ರಾವ, ಗರ್ಭಪಾತದ ಭಯವುಂಟು. ಪ್ರಸೂತಿ ಕಷ್ಟದಾಯಕವಾಗಿದ್ದು, ಶಸ್ತ್ರಕ್ರಿಯೆ ಅನಿವಾರ್ಯವಾಗುವುದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ಮಿತ್ರರು ಶತ್ರುಗಳಾಗಿ ಅವಿಶ್ವಾಸ ವ್ಯಕ್ತಪಡಿಸುವುದರಿಂದ ಸ್ಥಾನಮಾನ ಅಧಿಕಾರದಿಂದ ಕೆಳಗಿಳಿಸಲ್ಪಡುವ ಸಂಭವವಿದೆ. ಅಲ್ಲಸಲ್ಲದ ಅಪವಾದಕ್ಕೆ ಗುರಿಯಾಗಬೇಕಾಗುವುದು. ಚುನಾವಣೆಯ ಜಂಜಡದಿಂದ ಈ ವರುಷ ದೂರ ಉಳಿಯುವುದು ಹಿತಕರ. ನವಂಬರ 15ರಿಂದ ಫೆಬ್ರುವರಿ 19, ಮೇ 15ರಿಂದ ಜುಲೈ 15ರ ನಡುವಿನ ಈ ಐದು ತಿಂಗಳ ಅವಧಿಯಲ್ಲಿ ಚುನಾವಣೆ ಜರುಗಿದರೆ ಸ್ಪರ್ಧೆ ತೀವ್ರವಾಗಿ ಅತ್ಯಲ್ಪ ಬಹುಮತ ಪಡೆದು ಆಯ್ಕೆಯಾಗಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಈ ವರುಷ ತೀವ್ರ ತೊಂದರೆಯದು. ಶಿಕ್ಷಣ ಮುಂದುವರಿಸುವುದು ಕಷ್ಟವಾಗುತ್ತದೆ. ಕಳೆದ ವರುಷ ಪಡೆದ ಶಿಷ್ಯವೃತ್ತಿ, ವಿದ್ಯಾರ್ಥಿ ವೇತನ, ಉಳಿಸುವುದಕ್ಕಾಗಿ ಹೆಣಗಾಡಬೇಕಾಗುತ್ತದೆ. ನವಂಬರ 15ರಿಂದ ಫೆಬ್ರುವರಿ 15, ಹಾಗು ಏಪ್ರಿಲ್ 12ರಿಂದ ಜುಲೈ 15ರ ಅವಧಿಯಲ್ಲಿ ಜರುಗಲಿರುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ತೇರ್ಗಡೆಯಾಗುವರು; ಆದರೆ ಶ್ರೇಣಿ, ದರ್ಜೆ, ವಿದ್ಯಾರ್ಥಿ ವೇತನ, ದೊರೆಯದು. ಫೆಬ್ರುವರಿ 16ರಿಂದ ಏಪ್ರಿಲ್ 11 ಹಾಗೂ ಜುಲೈ 15ರಿಂದ ವರ್ಷಾಂತ್ಯದ ವರೆಗೆ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಫಲಿತಾಂಶ ಸಂಶಯದಾಯಕ.



ಕನ್ಯಾ

ವರ್ಷಾಂತ್ಯದಲ್ಲಿ ಬರುವ ಹನ್ನೊಂದನೆಯ ಶನಿ ಹಾಗೂ ಬರಲಿರುವ ಏಳನೆಯ ಗುರು ಶುಭದಾಯಕರಾಗಿರುವದರಿಂದ ಈ ವರುಷ ಈ ರಾಶಿಯವರ ಜೀವನದಲ್ಲಿಯೇ ಸುವರ್ಣಕಾಲವಾಗಿದೆ. ಎಲ್ಲ ದೃಷ್ಟಿಯಿಂದಲೂ ಅತ್ಯಂತ ಯಶೋದಾಯಕವಾಗಿದೆ.

ಶುಭಫಲದಾಯಕನಾಗಿರುವ ಶನಿಯ ಕೃಪಾಕಟಾಕ್ಷಕ್ಕೆ ಪಾತ್ರರಾದ ನಿಮಗೆ ಮುಂಬರುವ ಏಳನೆಯ ಗುರುವಿನ ಶುಭಫಲವೂ ದೊರೆಯುವುದು. ತೃತಿಯ ರಾಹುವಿನ ಶುಭಫಲವಂತೂ ವರುಷವಿಡೀ ಇದ್ದೇ ಇರುವುದು. ಹೀಗೆ ಬಲಾಢ್ಯ ಗ್ರಹಗಳ ಅನುಗ್ರಹವನ್ನು ಪಡೆದ ನಿಮಗೆ ಈ ವರುಷವು ಅತ್ಯಂತ ಅಪೂರ್ವ ಹಾಗು ಸ್ಮರಣೀಯ ಕಾಲವಾಗಿದ್ದು, ಕಳೆದ ಅನೇಕ ವರುಷಗಳಿಂದ ಅರ್ಧಕ್ಕೆ ನಿಂತ ಕಾರ್ಯಗಳೆಲ್ಲವೂ ನೆರವೇರಲಿವೆಯಲ್ಲದೆ ನಿಮ್ಮ ಎಲ್ಲ ಆಶೆ–ಆಕಾಂಕ್ಷೆಗಳು ಈಡೇರುವವು. ಡಿಸೆಂಬರ 15ರಿಂದ ಜನವರಿ 14, ಏಪ್ರಿಲ್ 12ರಿಂದ ಮೇ 14, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಮೂರು ತಿಂಗಳನ್ನು ಬಿಟ್ಟು ಉಳಿದ ಒಂಭತ್ತು ತಿಂಗಳುಗಳ ಕಾಲ ನಿಮ್ಮ ಆರೋಗ್ಯ ಚೆನ್ನಾಗಿರುವುದು. ಆರ್ಥಿಕ ದೃಷ್ಟಿಯಿಂದ ಈ ವರುಷ ತೃಪ್ತಿಕರವಿರುವುದಲ್ಲದೆ ಬರತಕ್ಕ ಹಣ ಸಮಯಕ್ಕೆ ಬರುವುದು. ನವಂಬರ 14ರಿಂದ, ಡಿಸೆಂಬರ 14. ಫೆಬ್ರುವರಿ 12ರಿಂದ ಮಾರ್ಚ್ 15, ಮೇ 15ರಿಂದ ಅಗಸ್ಟ 15ರ ವರೆಗಿನ ಈ ಐದು ತಿಂಗಳ ಕಾಲ ನಿಮಗೆ ಆರ್ಥಿಕ ದೃಷ್ಟಿಯಿಂದ ಅತ್ಯಂತ ಶುಭದಾಯಕವಾಗಿದ್ದು, ಇದೇ ಅವಧಿಯಲ್ಲಿ ಸಟ್ಟಾ, ಲಾಟರಿ, ದತ್ತಕ, ಕಮಿಷನ್, ಮೊದಲಾದ ಮೂಲದಿಂದ ಆಕಸ್ಮಿಕ ಧನಾಗಮನವಾಗಿ, ವಾಹನ ಸೌಖ್ಯ, ಪರದೇಶ ಪರ್ಯಟನಗಳಂಥ ಶುಭಘಟನೆಗಳು ಕೂಡ ಜರುಗುವವು. ಕೋರ್ಟು ಕಚೇರಿಯ ವ್ಯವಹಾರದಲ್ಲಿ ಈ ವರುಷ ಪ್ರಚಂಡ ಜಯ ಲಭಿಸುವುದಲ್ಲದೆ ಫೌಜದಾರಿ ಮೊಕದ್ದಮೆಗಳಿಗೆ ಪೂರ್ವಾರ್ಧದಲ್ಲಿಯೂ, ರಾಜಕೀಯ ಹಾಗೂ ನೌಕರಿ ವ್ಯಾಜಗಳಿಗೆ ವರುಷದ ಮಧ್ಯಕಾಲದಲ್ಲಿಯೂ, ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿ ಜಯ ಲಭಿಸಿ ಶತ್ರುಗಳು ಶರಣಾಗತರಾಗುವರು.


ಈ ರಾಶಿಯ ನೌಕರವರ್ಗದವರಿಗೆ ಈ ವರುಷ ಅತ್ಯಂತ ಯಶೋದಾಯಕವಾಗಿದೆ. ವರಿಷ್ಠರ ಸಹಕಾರ, ಸಹಾಯ ವರುಷವಿಡೀ ದೊರೆಯುವುದು. ನವಂಬರ 15ರಿಂದ ಡಿಸೆಂಬರ 14, ಫೆಬ್ರುವರಿ 12ರಿಂದ ಏಪ್ರಿಲ್ 12, ಮೇ 15ರಿಂದ ಅಗಸ್ಟ 15ರ ವರೆಗಿನ ಈ ಆರು ತಿಂಗಳ ಕಾಲ ಅತಂತ ಶುಭದಾಯಕವಾಗಿದ್ದು, ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ. ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ, ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ ಮೊದಲಾದ ಶುಭಘಟನೆಗಳು ಜರಗುತ್ತವೆ. ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ. ಶಿಕ್ಷಕರು, ಪತ್ರಿಕೋದ್ಯಮಿ ಹಾಗು ಕಾರಕೂನ ಮೊದಲಾದವರಿಗೆ ಈ ವರುಷದ ಮಧ್ಯದಿಂದ ಅನುಕೂಲ ಕಾಲ ಬರುವುದಲ್ಲದೆ ಉತ್ತರಾರ್ಧದಲ್ಲಿ ಉದ್ಯೋಗದಲ್ಲಿ ಪ್ರಗತಿ. ಸ್ಥಿರತೆ, ಸರಕಾರ ಹಾಗು ಸಮಾಜದಿಂದ ಪ್ರಶಸ್ತಿ ಪದಕಗಳನ್ನು ಪಡೆಯುವರು. ಸ್ಥಾನಮಾನ ಲಭಿಸುವುದು. ಪರದೇಶ ಪರ್ಯಟನ, ದ್ರವ್ಯಾನುಕೂಲತೆ ಮುಂತಾದ ಶುಭಘಟನೆಗಳು ಜರುಗುವುವು. ಈ ರಾಶಿಯ ಬಾಹ ಹಾಗು ತಾಂತ್ರಿಕ ಕೆಲಸಗಾರ. ಸಂಚಾರಿ ನೌಕರ, ಗಿರಣಿ, ಕಾರಖಾನೆಗಳ ಶ್ರಮಜೀವಿಗಳಿಗೆಲ್ಲ ಈ ವರುಷ ಪ್ರಗತಿದಾಯಕವಿದೆ. ಫೆಬ್ರುವರಿ 12ರಿಂದ ಮಾರ್ಚ್ 15, ಮೇ 15ರಿಂದ ಅಗಸ್ಟ 15ರ ವರೆಗಿನ ಅವಧಿಯಲ್ಲಿ ಅವರ ಬಹಳಷ್ಟು ಬೇಡಿಕೆಗಳು ಈಡೇರುವವು. ದ್ರವ್ಯಾನುಕೂಲತೆ ಉಂಟಾಗುವುದು. ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲ ತೀರಿಸುವರು. ಹೊಸ ಜಾಗೆ, ಮನೆ, ಹೊಲ (ಭೂಮಿ) ಟ್ರಕ್, ಟ್ರ್ಯಾಕ್ಟರ್, ಪಂಪಸೆಟ್ಟು, ದನಕರು, ಇವೇ ಮೊದಲಾದ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಯೋಗವಿರುವುದು.

ಈ ರಾಶಿಯ ಗಿರಣಿ, ಕಾರಖಾನೆ, ಟಾಕೀಜ, ಚಾಳ, ಹೊಟೇಲ ಮೊದಲಾದ ಮಾಲಕ ವರ್ಗ ಠೋಕ ವ್ಯಾಪಾರಸ್ಥ, ಹಂಚಿಕೆದಾರ ಮೊದಲಾದ ಸ್ವತಂತ್ರ ವ್ಯಾಪಾರೋದ್ಯಮಿಗಳಿಗೆ ಈ ವರುಷ ಅತ್ಯಂತ ಪ್ರಗತಿದಾಯಕವಿದ್ದು, ಉದ್ಯೋಗದಲ್ಲಿ ಉತ್ಕರ್ಷೆಯಿದೆಯಲ್ಲದೆ ಹೊಸದಾಗಿ ಶಾಖೆಗಳನ್ನು ತೆರೆಯಬಹುದು. ಕಳೆದ ವರ್ಷದಿಂದಿದ್ದ ಸರಕಾರದ ನಿರ್ಬಂಧನೆಗಳೂ ಈ ವರುಷ ದೂರಾಗುವವು. ಅದರಲ್ಲಿಯೂ ನವಂಬರ 15ರಿಂದ ಡಿಸೆಂಬರ 15, ಜನವರಿ 14ರಿಂದ ಏಪ್ರಿಲ್ 12, ಮೇ 15ರಿಂದ ಆಗಸ್ಟ 15ರ ವರೆಗಿನ ಈ ಏಳು ತಿಂಗಳ ಕಾಲವಂತೂ ಅತ್ಯಂತ ಪ್ರಗತಿದಾಯಕವಾಗಿದೆ. ನಿರೀಕ್ಷೆಗಿಂತ ಹೆಚ್ಚು ಪ್ರಗತಿ ಸಾಧ್ಯವಾಗಿ ವಿಪುಲ ಲಾಭ ದೊರೆಯುವುದು.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣಬಲ ಕೂಡಿ ಬಂದಿರುವುದು. ನವಂಬರ 15ರಿಂದ ಡಿಸೆಂಬರ 16, ಫೆಬ್ರುವರಿ 12ರಿಂದ ಆಗಸ್ಟ 15ರ ವರೆಗಿನ ಅವಧಿಯಲ್ಲಿ ವಿವಾಹ ಸಾಂಗವಾಗಿ, ವೈವಾಹಿಕ ಜೀವನದ ಆನಂದಸಾಗರದಲ್ಲಿ ಓಲಾಡುವರು. ಈ ರಾಶಿಯ ವಿವಾಹಿತ ಸ್ತ್ರೀ, ಪುರುಷ ಹಾಗು ಗೃಹಿಣಿಯರಿಗೆ ಈ ವರುಷ ಪ್ರಗತಿದಾಯಕವಿದ್ದು, ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದು. ಬೆಲೆಯುಳ್ಳ ವಸ್ತು ಒಡವೆಗಳನ್ನು ಕೊಳ್ಳುವ, ತೀರ್ಥಯಾತ್ರಾಸಂದರ್ಶನ, ನೂತನ ಗೃಹಪ್ರವೇಶ ಇವೇ ಮೊದಲಾದ ಶುಭಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ಪೂರ್ವಾರ್ಧದಲ್ಲಾದರೆ ತೊಂದರೆಯಾಗುವುದು; ಉತ್ತರಾರ್ಧದಲ್ಲಿ ಮಾತ್ರ ಹೆರಿಗೆ ಸುಖಪ್ರದವಾಗುವುದು.

ಈ ರಾಶಿಯ ರಾಜಕೀಯ. ಸಾಮಾಜಿಕ ಕಾರ್ಯಕರ್ತರಿಗೆ ಅಪೂರ್ವ ವರುಷವಿದಾಗಿದೆ. ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವರಲ್ಲದೇ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಗೌರವ. ಸ್ಥಾನಮಾನ ಅಧಿಕಾರ ಪಡೆದು. ರಾಜ್ಯಮಟ್ಟದ ರಾಜಕೀಯ ಗಣ್ಯವ್ಯಕ್ತಿಗಳಾಗುವುದರಲ್ಲಿ ಸಂಶಯವಿಲ್ಲ. ಈ ವರುಷದಲ್ಲಿ ಜರುಗಲಿರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಆಯ್ಕೆ ನಿಶ್ಚಿತವೆಂದೇ ತಿಳಿಯಬೇಕು. ಚುನಾವಣೆಗಳು ಪೂರ್ವಾರ್ಧದಲ್ಲಿ ಜರುಗಿದರೆ ಅತಲ್ಪ ಬಹುಮತದಿಂದ ಉತ್ತರಾರ್ಧದಲ್ಲಿ ಜರುಗಿದರೆ ಪ್ರಚಂಡ ಬಹುಮತದಿಂದ ಇಲ್ಲವೆ ಅವಿರೋಧ ಆಯ್ಕೆಯಾಗಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳು ಈ ವರುಷ ಅರ್ಧಕ್ಕೆ ನಿಲ್ಲಿಸಿದ ಶಿಕ್ಷಣವನ್ನು ಮತ್ತೆ ಮುಂದುವರಿಸುವರು; ಸ್ಪರ್ಧಾತ್ಮಕ ಹಾಗು ವಿಭಾಗ ಪರೀಕ್ಷೆ ಮತ್ತು ಶಾಲೆ–ಕಾಲೇಜು, ವಿದ್ಯಾ ಮಂಡಲಗಳ ಪರೀಕ್ಷೆಗಳಿಗೆ ಈ ವರುಷ


ದೀಪಾವಳಿಯು ಸರ್ವರಿಗೂ ಸುಖ-ಸಮೃದ್ಧಿ ನೀಡಲಿ!!
ಸ್ತ್ರೀ ಸಹಜ ಸೌಂದರ್ಯವೇ
ಮಹಿಳೆಯ ಹೆಗ್ಗಳಿಕೆ
ನಿಮ್ಮ ಸೌಂದರ್ಯಕ್ಕೆ ವಿಶೇಷ ಪಾಲನೆ ಅಗತ್ಯ. ಈ ವಿಷಯದಲ್ಲಿ
ಅನಿತಾ ಸೋಪು ನಿಮ್ಮನ್ನೇ ವಿಶೇಷ ಗಮನ ನೀಡುತ್ತದೆ. ನಿಮ್ಮ ಚರ್ಮದಲ್ಲಿನ
ಸ್ವಾಭಾವಿಕ ತೈಲಾಂಶವನ್ನು ಉಳಿಸಿಡುವುದೇ ಅಲ್ಲದೆ,
ಅನಿತಾ ನಿಮ್ಮನ್ನು ಬಿಸಿಲು, ಮಳೆ ಅಥವಾ ಚಳಿಯ ವಾತಾವರಣ
ದಲ್ಲಿಯೂ ಸಹ ಸಾವೀನ್ಯತೆಯಿಂದ ನಳನಳಿಸುವಂತೆ ಇಟ್ಟಿರುತ್ತದೆ.
ಅನಿತಾ ನಿಮ್ಮ ಸೌಂದರ್ಯವನ್ನು ರಕ್ಷಿಸುತ್ತದೆ
ಟಾಯ್ಲೆಟ್ ಸೋಪ್
anita
TOILET SOAP
ತಯಾರಿಕರು
ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್
ಮಂಗಳೂರು

ಪ್ರೋತ್ಸಾಹದಾಯಕವಿದೆ. ಫೆಬ್ರುವರಿ 12 ರಿಂದ ಏಪ್ರಿಲ್ 12, ಮೇ 15ರಿಂದ ಆಗಸ್ಟ 15ರ ವರೆಗಿನ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆಯಾಗುವರಲ್ಲದೆ, ಪ್ರಶಸ್ತಿಪದಕಗಳನ್ನು ಪಡೆಯುವರು. ವಿದ್ಯಾರ್ಥಿ ವೇತನ, ಶಿಷ್ಯವೃತ್ತಿ, ಲಭಿಸಬಹುದಾಗಿದೆ. ನವೆಂಬರ 15ರಿಂದ ಫೆಬ್ರುವರಿ 11 ಹಾಗು ಏಪ್ರಿಲ್ 12ರಿಂದ ಮೇ 14 ಮತ್ತು ಆಗಸ್ಟ 15ರ ನಂತರ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಫಲಿತಾಂಶ ಸಂಶಯಾಸ್ಪದ.



ತುಲಾ

ಈ ರಾಶಿಯುವರಿಗೆ ಈ ವರುಷ ಉದ್ಯೋಗ ಹಾಗು ಆರ್ಥಿಕ ಉತ್ಸಾಹದಾಯಕವಾದರೆ ಕೌಟುಂಬಿಕ, ಪ್ರಾಪಂಚಿಕ, ಶೈಕ್ಷಣಿಕ ದೃಷ್ಟಿಯಿಂದ ನಿರುತ್ಸಾಹದಾಯಕವಾಗಿದೆ.

ಇದುವರೆಗೆ ಐದನೆಯವನಾಗಿ ಶುಭ ಫಲವನ್ನೀಯುತ್ತಿದ್ದ ಗುರು ಫೆಬ್ರುವರಿ 19ರಿಂದ ಆರನೆಯವನಾಗುವುದರಿಂದ ಶುಭಫಲದ ಪ್ರಮಾಣ ಕಡಿಮೆ. ಚಿತ್ರಾ, ಸ್ವಾತಿ, ನಕ್ಷತ್ರದವರಿಗೆ ಶುಭಫಲದ ಪ್ರಮಾಣ ಕಡಿಮೆಯಾದರೆ ವಿಶಾಖಾ ನಕ್ಷತ್ರದ ತುಲಾ ರಾಶಿಯವರಿಗೆ ಈ ವರುಷವೂ ಗುರುವಿನ ಶುಭಫಲ ದೊರೆಯುವುದು. ವರ್ಷಾಂತ್ಯದಲ್ಲಿ ಬರುವ ದಶಮ ಶನಿಯು ಶುಭದಾಯಕನಿದ್ದು, ಸಂಪೂರ್ಣ ಶುಭಫಲ ನೀಡುವನು. ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರುವುದಾದರೆ ಜನವರಿ 14ರಿಂದ ಫೆಬ್ರುವರಿ 12, ಮೇ 15ರಿಂದ ಜೂನ 15, ಸಪ್ಟೆಂಬರ 16ರಿಂದ ಅಕ್ಟೋಬರ 17ರ ವರೆಗಿನ ಈ ಮೂರು ತಿಂಗಳ ಅವಧಿಯಲ್ಲಿ ಮಾತ್ರ ಕಿಂಚಿತ್ ಕೆಡಬಹುದಾಗಿದೆ. ಮಿಕ್ಕ ಒಂಭತ್ತು ತಿಂಗಳ ಕಾಲ ಉತ್ತಮವಿರುವುದು. ಆರ್ಥಿಕ ಸ್ಥಿತಿ ಈ ವರುಷ ಅತ್ಯಂತ ತೃಪ್ತಿಕರವಿರುವುದು. ಅದರಲ್ಲಿಯೂ ನವಂಬರ 15ರಿಂದ ಜನವರಿ 13, ಮಾರ್ಚ್ 15ರಿಂದ ಏಪ್ರಿಲ್ 12, ಜೂನ 15ರಿಂದ ಸಪ್ಟೆಂಬರ 16ರ ವರೆಗಿನ ಆರು ತಿಂಗಳ ಕಾಲ ಆರ್ಥಿಕ ದೃಷ್ಟಿಯಿಂದ ಅತ್ಯಂತ ತೃಪ್ತಿಕರವಿರುವುದಲ್ಲದೆ ಇದೇ ಅವಧಿಯಲ್ಲಿ ಸಟ್ಟಾ, ಲಾಟರಿ, ದತ್ತಕ, ವಾರಸಾ, ಬಹುಮಾನ, ಕಮಿಷನ್ ಮೊದಲಾದ ಮೂಲದಿಂದ ಆಕಸ್ಮಿಕ ಧನಾಗಮನದ ಯೋಗವಿರುವುದು. ಹಿಂದಿನ ಸಾಲವನ್ನೆಲ್ಲ ತೀರಿಸಿ ಹೊಸ ಸ್ಥಾವರ ಆಸ್ತಿಯನ್ನು ಸಂಪಾದಿಸಬಹುದಾಗಿದೆ. ವಾಹನ ಖರೀದಿ, ತೀರ್ಥಯಾತ್ರಾಸಂದರ್ಶನ ಪರದೇಶ ಪರ್ಯಟನಗಳಂಥ ಶುಭಘಟನೆಗಳು ಇದೇ ಅವಧಿಯಲ್ಲಿ ಜರುಗುವವು. ಕೋರ್ಟು ಕಚೇರಿಯ ಕೆಲಸಗಳಲ್ಲಿ ಈ ವರುಷ ಜಯ ಲಭಿಸುತ್ತದೆ. ರಾಜಕೀಯ ಹಾಗು ನೌಕರಿ ಮೊಕದ್ದಮೆಗಳಿಗೆ ಪೂರ್ವಾರ್ಧದಲ್ಲಿ ಫೌಜದಾರಿ ಹಾಗು ದಿವಾಣಿ ಮೊಕದ್ದಮೆಗಳಿಗೆ ಉತ್ತರಾರ್ಧದಲ್ಲಿ ಜಯ ಲಭಿಸಿ ಶತ್ರುಗಳು ಶರಣಾಗತರಾಗುತ್ತಾರೆ,

ಈ ರಾಶಿಯ ನೌಕರವರ್ಗದವರಿಗೆ ಈ ವರುಷ ಆರ್ಥಿಕ ದೃಷ್ಟಿಯಿಂದ ಶುಭದಾಯಕವಿದ್ದರೆ, ಅಧಿಕಾರ ದೃಷ್ಟಿಯಿಂದ ಅಶುಭದಾಯಕವಿದೆ. ನವಂಬರ 15ರಿಂದ ಜನವರಿ 13, ಮಾರ್ಚ್ 15ರಿಂದ ಏಪ್ರಿಲ್ 12 ಹಾಗೂ ಜೂನ 15ರಿಂದ ಸಪ್ಟೆಂಬರ 15ರ ವರೆಗಿನ ಈ ಆರು ತಿಂಗಳ ಕಾಲ ಶುಭವೂ ಅನುಕೂಲಕರವೂ ಆಗಿದ್ದು, ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ, ಮೊದಲಾದ ಶುಭಘಟನೆಗಳು ಜರುಗಬಹುದು. ಜನವರಿ 14ರಿಂದ ಮಾರ್ಚ್ 14, ಏಪ್ರಿಲ್ 13ರಿಂದ ಜೂನ 14 ಸಪ್ಟೆಂಬರ 16ರಿಂದ ವರ್ಷಾಂತ್ಯದ ವರೆಗಿನ ಈ ಆರು ತಿಂಗಳ ಕಾಲ ತೀರ ತೊಂದರೆಯದಾಗಿದ್ದು, ಅನಪೇಕ್ಷಿತ ಸ್ಥಳಕ್ಕೆ ಬದಲಿ, ವರಿಷ್ಠರ ಕಿರುಕುಳ ಹಾಗು ಆರ್ಥಿಕ ಹಾನಿಯಾಗಬಹುದಾಗಿದೆ. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರ, ಗಿರಣಿ–ಕಾರಖಾನೆಯ ಕಾರ್ಮಿಕ ಸಂಚಾರಿ ನೌಕರರಿಗೆ ಬರುವ ದಶಮ ಶನಿಯ ಮೂಲಕ ಈ ವರುಷ ಪ್ರಗತಿದಾಯಕವಾಗಿದೆ. ಮಾರ್ಚ್ 15ರಿಂದ ಮೇ 14 ಹಾಗು ಜೂನ 15ರಿಂದ ಸಪ್ಟೆಂಬರ 15ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಅವರ ಬಹಳಷ್ಟು ಬೇಡಿಕೆಗಳು ಈಡೇರುತ್ತವೆ.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ, ಶಿಕ್ಷಕ, ಕಾರಕೂನ, ಪತ್ರಿಕೋದ್ಯಮಿಗಳಿಗೆ ಮುಂಬರುವ ಷಷ್ಟಮ ಗುರುವಿನಿಂದಾಗಿ ಹೇಳಿಕೊಳ್ಳುವಂಥ ಪ್ರಗತಿ ಕಂಡುಬಾರದು. ಆರ್ಥಿಕದೃಷ್ಟಿಯಿಂದ ಹಾನಿ ಏನಿಲ್ಲವಾದರೂ ಸ್ಥಾನಮಾನ ಅಧಿಕಾರಕ್ಕೆ ಎರ


ವಾಗಬೇಕಾಗುತ್ತದೆ. ಜನವರಿ 14ರಿಂದ ಮಾರ್ಚ್ 14, ಮೇ 15ರಿಂದ ಜೂನ 15, ಸಪ್ಟೆಂಬರ 15ರಿಂದ ಅಕ್ಟೋಬರ ಕೊನೆಯ ವರೆಗಿನ ಕಾಲದಲ್ಲಿ ಅವಮಾನ ಕಾರಕ ಪ್ರಸಂಗಗಳನ್ನು ಎದುರಿಸಬೇಕಾಗುವುದು. ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲವೆಲ್ಲ ತೀರುವುದು. ಹೊಸದಾಗಿ ಹೊಲ ಮನೆ, ಜಾಗೆ ಹಾಗು ಬೇಸಾಯಕ್ಕೆ ಬೇಕಾದ ಉಪಕರಣ, ಟ್ರಕ್, ಟ್ರ್ಯಾಕ್ಟರ ಪಂಪಸೆಟ್ಟು, ಮೊದಲಾದವುಗಳನು ಖರೀದಿಸುವ ಇಲ್ಲವೆ ನವೀಕರಿಸುವ ಸಾಮರ್ಥ್ಯ ಬರುವುದು.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿಗಳು ಠೋಕ ವ್ಯಾಪಾರಸ್ಥರು, ಗಿರಣಿ, ಕಾರಖಾನೆ, ಟಾಕೀಜ, ಚಾಳ, ಹೊಟೇಲ, ಮೊದಲಾದ ಮಾಲಕ ವರ್ಗದವರಿಗೆ ಉದ್ಯೋಗ, ಆರ್ಥಿಕ ದೃಷ್ಟಿಯಿಂದ ಈ ವರುಷ ಪ್ರಗತಿದಾಯಕವಿರುವುದಾದರೂ ನೌಕರರ ಸಮಸ್ಯೆ ಹಾಗೂ ಸರಕಾರದ ನಿರ್ಬಂಧನೆಗಳನ್ನು ಎದುರಿಸಬೇಕಾಗುವ ಪ್ರಸಂಗ ಎದುರಾಗುವುದು.

ಈ ರಾಶಿಯ ವಧೂವರರಿಗೆ ಪೂರ್ವಾರ್ಧವು ಶುಭದಾಯಕವಾಗಿರುವದಾದರೆ ಉತ್ತರಾರ್ಧವು ಅಶುಭದಾಯಕವಿದೆ. ಪೂರ್ವಾರ್ಧದಲ್ಲಿ ಮದುವೆ ನಿಶ್ಚಯವಾದಲ್ಲಿ ನಿರ್ವಿಘ್ನದಿಂದ ವಿವಾಹ ಸಾಂಗವಾಗುವುದು. ಉತ್ತರಾರ್ಧದಲ್ಲಿ ವಿವಾಹ ಗೊತ್ತಾದರೆ ಮುರುಗಡೆಯಾಗಬಹುದಾಗಿದೆ. ಈ ರಾಶಿಯ ವಿವಾಹಿತ ಸ್ತ್ರೀ ಪುರುಷ ಹಾಗು ಗೃಹಿಣಿಯರಿಗೆ ಆರನೆಯ ಗುರುವಿನಿಂದಾಗಿ ಆಪ್ತೇಷ್ಟರಲ್ಲಿ ವಿರಸ, ಗೃಹಕಲಹಗಳಿಂದ ಈ ವರುಷ ಮಾನಸಿಕ ನೆಮ್ಮದಿ ಇರದು. ಅದರಲ್ಲಿಯೂ ಜನವರಿ 14ರಿಂದ ಮಾರ್ಚ್ 15 ಸಪ್ಟೆಂಬರ 17ರಿಂದ ಅಕ್ಟೋಬರ ಕೊನೆಯ ವರೆಗಿನ ಕಾಲವಂತೂ ಗೃಹಕಲಹ, ಮಿಥ್ಯಾಪವಾದಗಳಿಂದ ಮನೆಯ ಪರಿಸ್ಥಿತಿ ತೀರ ಹದಗೆಡುವುದು. ಆದರೆ ಆರ್ಥಿಕ ದೃಷ್ಟಿಯಿಂದ ಗೃಹಿಣಿಯರಿಗೆ ಈ ವರುಷ ಪ್ರಗತಿದಾಯಕವಿದ್ದು, ನವಂಬರ 14ರಿಂದ ಜನವರಿ 13, ಫೆಬ್ರುವರಿ 12ರಿಂದ ಏಪ್ರಿಲ್ 12 ಹಾಗು ಜುಲೈ 15ರಿಂದ ಸಪ್ಟೆಂಬರ 16ರ ವರೆಗಿನ ಈ ಆರು ತಿಂಗಳ ಕಾಲದಲ್ಲಿ ಬೆಲೆಯುಳ ವಸ್ತು ಒಡವೆಗಳನ್ನು ಖರೀದಿಸುವ, ನೂತನ ಗೃಹಪ್ರವೇಶ, ತೀರ್ಥಯಾತ್ರಾಸಂದರ್ಶನಗಳಂಥ ಶುಭಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭಿಣಿ ಸ್ತ್ರೀಯರ ಹೆರಿಗೆ ನವಂಬರ 15ರಿಂದ ಜನವರಿ 13, ಫೆಬ್ರುವರಿ 12ರಿಂದ ಏಪ್ರಿಲ್ 12, ಜುಲೈ 15ರಿಂದ ಸಪ್ಟೆಂಬರ 16ರ ವರೆಗಿನ ಅವಧಿಯಲ್ಲಾದರೆ ಸುಖಪ್ರದವಾಗುವುದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಮುಂಬರುವ ಆರನೇ ಗುರುವಿನಿಂದಾಗಿ ಈ ವರುಷ ನಿರಾಶಾದಾಯಕದಾಗಿದೆ. ಆದಾಗ್ಯೂ ನವಂಬರ 15ರಿಂದ ಜನವರಿ 14, ಮಾರ್ಚ್ 15ರಿಂದ ಏಪ್ರಿಲ್ 12, ಜುಲೈ 15ರಿಂದ ಸಪ್ಟೆಂಬರ 16ರ ವರೆಗಿನ ಅವಧಿಯಲ್ಲಿ ಇದ್ದುದರಲ್ಲಿಯೇ ಅನುಕೂಲವಾಗಿದೆ. ಮಾನ, ಸನ್ಮಾನಗೌರವಗಳನ್ನು ಪಡೆಯಬಹುದು. ಇದೇ ಅವಧಿಯಲ್ಲಿ ಚುನಾವಣೆ ಜರುಗಿದಲ್ಲಿ ಸ್ಪರ್ಧೆ ತುರುಸಿನದಾದರೂ ಆಯ್ಕೆ ಖಂಡಿತ; ಆದರೆ ಫೆಬ್ರುವರಿ 12ರಿಂದ ಮಾರ್ಚ್ 14, ಏಪ್ರಿಲ್ 12ರಿಂದ ಜುಲೈ 14 ಮತ್ತು ಸಪ್ಟೆಂಬರ 16ರಿಂದ ವರ್ಷಾಂತ್ಯದ ವರೆಗಿನ ಕಾಲವು ತೀರ ಪ್ರತಿಕೂಲವಾಗಿದ್ದು, ಮಿತ್ರರು ಶತ್ರುಗಳಾಗುವುದರಿಂದ ಮಿಥ್ಯಾಪವಾದಕ್ಕೆ ಗುರಿಯಾಗಿ ಸ್ಥಾನಮಾನ, ಅಧಿಕಾರವನ್ನು ಕಳೆದುಕೊಳ್ಳಬಹುದು. ಈ ಅವಧಿಯಲ್ಲಿ ಜರಗುವ ಚುನಾವಣೆಗಳಿಗೆ ಸ್ಪರ್ಧಿಸದಿರುವುದು ಹಿತಕರ.

ಈ ರಾಶಿಯ ವಿದ್ಯಾರ್ಥಿಗಳಿಗೆ ಆರನೆಯ ಗುರುವಿನಿಂದಾಗಿ ಆರ್ಥಿಕ ದೃಷ್ಟಿಯಿಂದೇನೋ ಈ ವರುಷ ಪ್ರಗತಿದಾಯಕವಾಗಿದ್ದರೂ ಮನೆಯ ಕಲುಷಿತ ವಾತಾವರಣ ಹಾಗು ಶಿಕ್ಷಕರ ಅವಕೃಪೆಯಿಂದಾಗಿ ಶಿಕ್ಷಣ ಮುಂದುವರಿಯುವುದು ಕಠಿಣವಾಗುವುದು. ನವಂಬರ 14ರಿಂದ ಏಪ್ರಿಲ್ 12 ಹಾಗೂ ಆಗಸ್ಟ ತಿಂಗಳಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಶ್ರೇಣಿ ದರ್ಜೆ ಪಡೆದು ತೇರ್ಗಡೆಯಾಗುವರಲ್ಲದೇ ಪ್ರಶಸ್ತಿ, ಪದಕ, ಶಿಷ್ಯವೃತ್ತಿ ವಿದ್ಯಾರ್ಥಿ ವೇತನವನ್ನು ಪಡೆಯುವರು. ಆದರೆ ಏಪ್ರಿಲ್ 13ರಿಂದ ಜುಲೈ ಕೊನೆಯ ವರೆಗೆ ಹಾಗೂ ಸಪ್ಟೆಂಬರ 16ರ ನಂತರ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶವನ್ನು ಹೇಳುವುದು ಕಠಿಣ.



ವೃಶ್ಚಿಕ

ಮುಂಬರುವ ಪಂಚಮ ಗುರು ಶುಭದಾಯಕ ಹಾಗು ವರ್ಷಾಂತ್ಯದಲ್ಲಿ ನಿರ್ಗಮಿಸುವ ಅನಿಷ್ಟ ಅಷ್ಟಮ ಶನಿಯ ಮೂಲಕ ಈ ವರುಷ ವಿಶಾಖ, ಅನುರಾಧಾ ನಕ್ಷತ್ರದ ವೃಶ್ಚಿಕ ರಾಶಿಯವರಿಗೆ ಪ್ರಗತಿದಾಯಕವಾಗಿದ್ದರೆ ಜ್ಯೇಷ್ಠಾದವರಿಗೆ ಅತ್ಯಂತ ಕ್ಲೇಶದಾಯಕ ವರ್ಷವಿದಾಗಿದೆ.

ಹಿಂದಿನ ವರುಷ ಘಟಿಸಿದ ಸಂಗತಿಗಳನು ನೆನೆಸಿಕೊಂಡಲ್ಲಿ ನಿಮ್ಮ ಮೈ ಜುಮ್ಮೆನ್ನಿಸುವುದು. ಆರೋಗ್ಯ, ಗೃಹಸೌಖ್ಯಕ್ಕೆರವಾದವರೆಷ್ಟು? ಶಿಕ್ಷಣ ಹಾಗು ಉದ್ಯೋಗದಲ್ಲಿ ಹಾನಿ ಹೊಂದಿದವರೆಷ್ಟೆಂಬುದನ್ನು ಹೇಳುತ್ತಾ ಹೋದರೆ ಅದೊಂದು ದೀರ್ಘಪಟ್ಟಿಯೇ ಆಗುವುದು. ಇರಲಿ, ಮುಂಬರುವ ಪಂಚಮ ಗುರುವಿನಿಂದಾಗಿ ಈ ವರುಷ ಕ್ರಮೇಣ ಸುಧಾರಿಸುತ್ತ ಹೋಗುವುದು. ಆದರೆ ಈ ಸುಧಾರಣೆ ವಿಶಾಖಾ ಅನುರಾಧಾ ನಕ್ಷತ್ರದವರಿಗೆ ಮಾತ್ರವಿದ್ದು, ಜ್ಯೇಷ್ಠಾದ ವೃಶ್ಚಿಕ ರಾಶಿಯವರಿಗೆ ಎಲ್ಲ ದೃಷ್ಟಿಯಿಂದ ಅತ್ಯಂತ ತಾಪದಾಯಕವಾಗಿದೆ. ಪ್ರಾಣ ದೇವರು ಹಾಗು ಶ್ರೀ ಗುರುದತ್ತರನ್ನು ಪ್ರಾರ್ಥಿಸಿರಿ. ಎಲ್ಲವೂ ಸರಿಯಾಗುವುದು. ಕಳೆದ ವರುಷದಿಂದಿದ್ದ ಶಾರೀರಿಕ ಪೀಡೆ ಸ್ವಜನ ವಿರೋಧದಿಂದ ಉಂಟಾದ ಮಾನಸಿಕ ತೊಂದರೆಯು ಈ ವರುಷ ಕಡಿಮೆ; ಆದರೂ ಡಿಸೆಂಬರ 15ರಿಂದ ಜನವರಿ 13, ಫೆಬ್ರುವರಿ 12ರಿಂದ ಏಪ್ರಿಲ್ 12, ಜೂನ 15ರಿಂದ ಜುಲೈ ಕೊನೆಯ ವರೆಗೆ ಹಾಗೂ ಅಕ್ಟೋಬರ 18ರ ನಂತರದ ಈ ಆರು ತಿಂಗಳ ಕಾಲ ಮಾತ್ರ ಶಾರೀರಿಕ ಪೀಡೆ ಇರದು. ಆದರೆ ಶತ್ರುಪೀಡೆಯಿಂದ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. ಮುಂಬರುವ ಪಂಚಮ ಗುರುವಿನಿಂದ ನಿಮ್ಮ ಆರ್ಥಿಕ ಸ್ಥಿತಿ ಈ ವರುಷ ತೃಪ್ತಿಕರವಿರುವುದು. ಹಿಂದೆ ಮಾಡಿದ ಸಾಲವನ್ನು ಉತ್ತರಾರ್ಧದಲ್ಲಿ ತೀರಿಸುವ ಶಕ್ತಿ ಬಂದಾಗ್ಯೂ ನವಂಬರ 15ರಿಂದ ಜನವರಿ 13, ಫೆಬ್ರು

ವರಿ 12ರಿಂದ ಏಪ್ರಿಲ್ 12, ಜೂನ 15ರಿಂದ ಜುಲೈ ಕೊನೆಯ ವರೆಗಿನ ಈ ಐದೂವರೆ ತಿಂಗಳ ಕಾಲ ತೀರ ಪ್ರತಿಕೂಲವಿದೆ. ಆದಾಯ ಅಲ್ಪ ವೆಚ್ಚ ವಿಪರೀತ. ಸಾಲಗಾರರ ಕಾಟ, ಹಳೆ ಸಾಲ ತೀರಿಸಲು ಹೊಸ ಸಾಲಕ್ಕಾಗಿ ಪರದಾಟ, ಹಾಗು ಅಪಮಾನದ ಪ್ರಸಂಗವನ್ನೂ ಎದುರಿಸಬೇಕಾಗುವುದು; ಆದರೆ ಯಶಸ್ಸು ನಿಶ್ಚಿತ. ಜನವರಿ 14ರಿಂದ ಫೆಬ್ರುವರಿ 11. ಎಪ್ರಿಲ್ 12ರಿಂದ ಮೇ 14. ಆಗಸ್ಟ 1ರಿಂದ ಅಕ್ಟೋಬರ 17ರ ವರೆಗಿನ ಈ ನಾಲ್ಕೂವರೆ ತಿಂಗಳ ಕಾಲ ಆರ್ಥಿಕ ದೃಷ್ಟಿಯಿಂದ ಅತ್ಯಂತ ಯಶೋದಾಯಕವಾಗಿದೆ. ನಿರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೆ ಆಕಸ್ಮಿಕ ಧನಪ್ರಾಪ್ತಿಯ ಯೋಗವುಂಟು. ಕೋರ್ಟು, ಕಚೇರಿಯ ಕೆಲಸದಲ್ಲಿ ಈ ವರುಷದ ಪೂರ್ವಾರ್ಧವು ಪ್ರತಿಕೂಲವಿದ್ದರೆ ಉತ್ತರಾರ್ಧವು ಅನುಕೂಲವಾಗಿದೆ. ಆದುದರಿಂದ ಮೊಕದ್ದಮೆಗಳನ್ನು ಉತ್ತರಾರ್ಧದ ವರೆಗೆ ಮುಂದೂಡುವುದು ಹಿತಕರ.

ಈ ರಾಶಿಯ ನೌಕರವರ್ಗದವರಿಗೆ ಈ ವರುಷದ ಮಧ್ಯದಿಂದ ಅನುಕೂಲವಾಗಿದೆ. ಕಳೆದ ವರುಷ ವರಿಷ್ಠರೊಡನೆ ಉಂಟಾದ ತಪ್ಪು ತಿಳುವಳಿಕೆ ಕ್ರಮೇಣ ದೂರಾಗಿ ಸಹಾಯ, ಸಹಕಾರ ಹೆಚ್ಚುವುದು. ಜನವರಿ 14ರಿಂದ ಫೆಬ್ರುವರಿ 12 ಎಪ್ರಿಲ್ 12ರಿಂದ ಜೂನ 15. ಜುಲೈ 15ರಿಂದ ಅಕ್ಟೋಬರ 17ರ ವರೆಗಿನ ಈ ಆರು ತಿಂಗಳ ಕಾಲ ಈ ರಾಶಿಯ ನಿರುದ್ಯೋಗಿ ಯುವಕರಿಗೆ ಉದ್ಯೋಗ ಲಭಿಸುವುದು. ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿಯಾಗುವ ಹಾಗೂ ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ, ಇವೇ ಮೊದಲಾದ ಶುಭಫಲಗಳು ಲಭಿಸುವವು. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಗಿರಣಿ–ಕಾರಖಾನೆಗಳ ಕಾರ್ಮಿಕ, ಶ್ರಮಜೀವಿ, ಸಂಚಾರಿ ನೌಕರರಿಗೆ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಕಳೆದ ವರುಷದಂತೆ ಉದ್ವಿಗ್ನ, ಪ್ರತಿಕೂಲ ಪರಿಸ್ಥಿತಿ ಇರದಲ್ಲದೆ ಅವರ ಕೆಲ ಬೇಡಿಕೆಗಳು ಉತ್ತರಾರ್ಧದಲ್ಲಿ ಈಡೇರುವವು. ಸಂಧಾನ ಮನೋಭಾವನೆ ರೂಪಿಸಿಕೊಳ್ಳುವುದು ಹಿತಕರ.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ, ಶಿಕ್ಷಕ, ಪತ್ರಿಕೋದ್ಯಮಿ, ಕಾರಕೂನ ವರ್ಗಕ್ಕೆ ಮುಂಬರುವ ಪಂಚಮ ಗುರುವಿನಿಂದಾಗಿ ಈ ವರುಷ ಪ್ರೋತ್ಸಾಹದಾಯಕವಿದೆ.ಜನವರಿ 14ರಿಂದ ಫೆಬ್ರುವರಿ 11, ಏಪ್ರಿಲ್ 12ರಿಂದ ಮೇ 14. ಜುಲೈ 15ರಿಂದ ಅಕ್ಟೋಬರ 17ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಸರಕಾರ, ಸಂಸ್ಥೆಗಳಿಂದ ಪ್ರಶಸ್ತಿ, ಪದಕಗಳು ಲಭಿಸಿ ವಾಹನಸೌಖ್ಯ, ದ್ರವ್ಯಾನುಕೂಲತೆ, ಉದ್ಯೋಗದಲ್ಲಿ ಉತ್ಕರ್ಷ, ಸಾಧಿಸುವುದಲ್ಲದೆ ಕಳೆದ ವರುಷ ಆಗದೆ ಉಳಿದ ಕಾರ್ಯಗಳೂ ಪೂರ್ತಿಯಾಗುವವು. ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಸ್ಥ, ಹಂಚಿಕೆದಾರ, ಗಿರಣಿ–ಕಾರಖಾನೆ, ಟಾಕೀಜ. ಚಾಳ, ಹೊಟೇಲುಗಳ ಮಾಲಕ ವರ್ಗದವರಿಗೆ ಪೂರ್ವಾರ್ಧವು ಪ್ರತಿಕೂಲವಿದ್ದರೆ ಉತ್ತರಾರ್ಧವು ಪ್ರಗತಿದಾಯಕವಿದೆ. ನೌಕರರ ಸಮಸ್ಯೆ ಹಾಗೂ ಸರಕಾರದ ನಿರ್ಬಂಧನೆಗಳು ಉತ್ತರಾರ್ಧದಲ್ಲಿ ದೂರವಾಗಿ ಕುಂಠಿತವಾಗಿದ್ದ ಉದ್ಯೋಗ ಮತ್ತೆ ಚೇತರಿಸಿಕೊಳ್ಳುವುದು. ಹೊಸದಾಗಿ ಉದ್ಯೋಗ ಪ್ರಾರಂಭ ಮಾಡಬೇಕೆಂಬುವವರು ಉತ್ತರಾರ್ಧದಲ್ಲಿ ಪ್ರಾರಂಭಿಸಬೇಕು.

ಈ ರಾಶಿಯ ಕೃಷಿಕ ವರ್ಗದವರಿಗೂ ಕೂಡ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಕುಂಠಿತವಾಗಿದ್ದ ಬೇಸಾಯ ಮತ್ತೆ ಪ್ರಾರಂಭವಾಗುವುದು. ಒತ್ತಿ ಹಾಕಲ್ಪಟ್ಟ ಹೊಲ–ಮನೆಗಳನ್ನು ಬಿಡಿಸಿಕೊಳ್ಳುವ ಇಲ್ಲವೆ ಹೊಸದಾಗಿ ದನಕರುಗಳನ್ನಾಗಲೀ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳುವುದಾಗಲೀ ಸಾಧಿಸಬಹುದಾಗಿದೆ.

ಕಳೆದ ಅನೇಕ ವರುಷಗಳಿಂದ ಪ್ರಯತ್ನಿಸುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿರುವುದರಿಂದ ಮಾರ್ಚ 15ರಿಂದ ಜೂನ 15ರ ವರೆಗೆ ಹಾಗೂ ಆಗಸ್ಟ15ರಿಂದ ಅಕ್ಟೋಬರ 17ರ ವರೆಗಿನ ಈ ಐದು ತಿಂಗಳಲ್ಲಿ ವಿವಾಹಜರುಗಿ ಗೃಹಸ್ಥಾಶ್ರಮದ ಜೀವನದಲ್ಲಿ ಪದಾರ್ಪಣ ಮಾಡುವರು. ಅಷ್ಟಮ ಶನಿ ಹಾಗೂ ಚತುರ್ಥ ಗುರುವಿನಿಂದಾಗಿ ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದು. ತಪ್ಪು ತಿಳುವಳಿಕೆಯ ಮೂಲಕವೂ ಗೃಹ ಕಲಹದಿಂದಲೂ ಸ್ಮಶಾನದಂತೆ ಕಾಣುತ್ತಿದ್ದ ಮನೆ ಈ ವರುಷ ಮತ್ತೆ ನಂದನವನದಂತೆ ಶೋಭಿಸುವದು. ಗೃಹಿಣಿ, ವಿವಾಹಿತಪುರುಷರಿಗೆಲ್ಲ ಈ ವರುಷ ಪ್ರಗತಿದಾಯಕವಿದ್ದು, ಏಪ್ರಿಲ್ 12ರಿಂದ ಜೂನ 14 ಹಾಗೂ ಆಗಸ್ಟ 15ರಿಂದ ಅಕ್ಟೋಬರ 17ರ ವರೆಗಿನ ಈ ನಾಲ್ಕು ತಿಂಗಳ ಕಾಲದಲ್ಲಿ ಸ್ಥಾವರ ಆಸ್ತಿ ಸಂಪಾದಿಸುವಿಕೆ, ಬೆಲೆಯುಳ್ಳ ವಸ್ತು ಒಡವೆಗಳನ್ನು ಕೊಳ್ಳುವಿಕೆ, ತೀರ್ಥಯಾತ್ರಾಸಂದರ್ಶನ ಮುಂತಾದ ಅವರ ಎಲ್ಲ ಕೋರಿಕೆಗಳು ಈಡೇರುವವು. ಈ ರಾಶಿಯ ಗರ್ಭವತಿಯರ ಹೆರಿಗೆಯು ನವಂಬರ 15ರಿಂದ ಜನವರಿ 13 ಹಾಗೂ ಫೆಬ್ರುವರಿ 12ರಿಂದ ಏಪ್ರಿಲ್ 11 ಹಾಗೂ ಜೂನ 15ರಿಂದ ಜುಲೈ ಕೊನೆಯ ವರೆಗಿನ ಕಾಲದಲ್ಲಿ ಆದರೆ ಕಷ್ಟದಾಯಕ. ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ. ಮಿಕ್ಕ ಕಾಲದಲ್ಲಿ ಆದರೆ ಸುಖಪ್ರದವಾಗುತ್ತದೆ.

ಈ ರಾಶಿಯರಾಜಕೀಯ,ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷದ ಮಧ್ಯದಿಂದ ಬರುವ ಪಂಚಮ ಗುರುವಿನಿಂದಾಗಿ ಪ್ರೋತ್ಸಾಹದಾಯಕ ವರುಷವಿದಾಗಿದೆ. ಶತ್ರುಗಳು ಮಿತ್ರರಾಗುವ ಕಾರಣ ಕಳೆದ ವರುಷ ಸುಳ್ಳದ ಅಪವಾದಕ್ಕೆ ಗುರಿಯಾಗಿದ್ದ ನೀವು ದೋಷಮುಕ್ತರಾಗುವಿರಲ್ಲದೆ ಮಾರ್ಚ 15ರಿಂದ ಜೂನ 15ರ ಆಗಸ್ಟ 15ರಿಂದ ಅಕ್ಟೋಬರ 17ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಕಳೆದುಕೊಂಡಿದ್ದ ಸ್ಥಾನಮಾನ, ಅಧಿಕಾರವನ್ನು ಪುನಃ ಪಡೆಯುವಿರಿ. ಅನೇಕ ಸಂಘ ಸಂಸ್ಥೆಗಳ ಪದಾಧಿಕಾರ, ಸದಸ್ಯತ್ವ ಪಡೆದು ಗಣ್ಯವ್ಯಕ್ತಿಗಳಾಗುವಿರಿ. ಇದೇ ಅವಧಿಯಲ್ಲಿ ಚುನಾವಣೆಗಳು ಜರುಗಿದಲ್ಲಿ ಸ್ಪರ್ಧೆಯಲ್ಲಿ ಜಯ ಖಂಡಿತ, ಆದರೆ ಮಿಕ್ಕ ಕಾಲದಲ್ಲಿ ಚುನಾವಣೆ ಜರುಗಿದರೆ ಸ್ಪರ್ಧಿಸದಿರುವುದು ಹಿತಕರವು.

ಈ ರಾಶಿಯ ವಿದ್ಯಾರ್ಥಿಗಳಿಗೆ ಮುಂಬರುವ ಪಂಚಮ ಗುರುವಿನಿಂದ ಈ ವರುಷ ಪ್ರಗತಿದಾಯಕವಾಗಿದೆ. ಕಳೆದ ವರುಷದಿಂದ ಅರ್ಧಕ್ಕೆ ನಿಂತಿದ್ದ ಶಿಕ್ಷಣ ಮತ್ತೆ ಈ ವರುಷ ಮುಂದುವರೆಯುವುದಲ್ಲದೆ ಶಿಕ್ಷಕರ ಅವಕೃಪೆಗೆ ಪಾತ್ರರಾದ ಈ ರಾಶಿಯ ವಿದ್ಯಾರ್ಥಿಗಳು ಈ ವರುಷ ಮತ್ತೆ ಅವರ ಕೃಪೆಗೆ ಪಾತ್ರರಾಗುವರು. ನಿಂತಿದ್ದ ಶಿಷ್ಯವೃತ್ತಿ, ವಿದ್ಯಾರ್ಥಿವೇತನ ಈ ವರುಷ ಮತ್ತೆ ಮುಂದುವರೆಯುವುದು. ಮಾರ್ಚ 15ರಿಂದ ಜೂನ 15 ಹಾಗು ಆಗಸ್ಟ 15ರಿಂದ ಅಕ್ಟೋಬರ 17ರ ಒಳಗೆ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆಯಾಗಿ ದರ್ಜೆ, ಶ್ರೇಣಿ ದೊರೆತು, ಸಂಶೋಧನೆ ಇಲ್ಲವೆ ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶ ಯಾತ್ರೆ ಕೈಗೊಳ್ಳುವರು. ಜೂನ 15ರಿಂದ ಆಗಸ್ಟ 14. ನವಂಬರ 14ರಿಂದ ಮಾರ್ಚ 15ರ ವರೆಗೆ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ಸಂಶಯಾಸ್ಪದವಾಗಿದೆ.


ಡೆಟ್ ಒಗೆಯುವ ಬಿಲ್ಲೆ
ಸಾಬೂನಿಗಿಂತ 1½ ಪಾಲು ಹೆಚ್ಚು ಶಕ್ತಿಶಾಲಿ —ಕ್ಷಾರಯುಕ್ತ ನೀರಿನಲ್ಲಿಯೂ.
ಡೆಟ್ ಒಗೆಯುವ ಪೌಡರ್
ಹಲವಾರು ಸೈಜ್‌ಗಳಲ್ಲಿ ದೊರೆಯುತ್ತದೆ. ಇದರ ಮಿಶ್ರಣದಲ್ಲಿ ಬಟ್ಟೆಗಳನ್ನು ನೆನೆಸಿ, ಸ್ವಚ್ಛ ನೀರಿನಲ್ಲಿ ಅದ್ದಿ ತೆಗೆಯಿರಿ. ನಿಮ್ಮ ಕೈಗಳಿಗೂ ಮೃದುವಾಗಿದೆ.
ಎನ್-ಡೆಟ್
ಕಲೆಗಳನ್ನು ತೆಗೆಯುವ ಎನ್ಸೈಮ್‌ಯುಕ್ತ ಒಗೆಯುವ ಪೌಡರ್ ಕ್ರಿಯಾಶೀಲ ಆದರೂ ಹಾನಿರಹಿತ.
new!
det
detergent washing cake
NEW!
TRIPLE ACTION
white
det
WASHES WHITEST
enzyme
det
washes away stubborn stains
ಎಂದೂ ಇರಲಿಲ್ಲ, ದೊರೆಯಲಿಕ್ಕಿಲ್ಲ, ಇಂತಹ ಬಿಳಿಪು—ಡೆಟ್ ಉತ್ಕೃಷ್ಟ ಉತ್ಪಾದನೆಗಳಿಂದ ದೊರೆಯುವ ಬಿಳಿಪು
Shilpi HPMA 8A/74 Kan



ಧನು

ಈ ವರುಷದ ಮಧ್ಯದಿಂದ ಬರುವ ಚತುರ್ಥ ಗುರು, ವರ್ಷಾಂತ್ಯದಲ್ಲಿ ಬರುವ ಅಷ್ಟಮ ಶನಿ, ವರುಷವಿಡೀ ಇರುವ ದ್ವಾದಶ ರಾಹು ಹೀಗೆ ತ್ರಿಗ್ರಹಗಳೂ ಅಶುಭವಿರುವದರಿಂದ ಈ ರಾಶಿಯವರು ವರುಷವಿಡೀ ತೊಂದರೆಯನ್ನೇ ಎದುರಿಸಬೇಕಾಗುತ್ತದೆ.

ಈ ರಾಶಿಯವರು ಫೆಬ್ರುವರಿ 9ರಿಂದ ಬರುವ ಚತುರ್ಥ ಗುರುವಿನ ಅನಿಷ್ಟತೆಯನ್ನು ಎದುರಿಸಬೇಕಾಗುವುದಲ್ಲದೆ ವರುಷವಿಡೀ ದ್ವಾದಶ ರಾಹುವಿನ ಅಶುಭ ಫಲವನ್ನನುಭವಿಸಬೇಕಾಗುತ್ತದೆ. ವರ್ಷಾಂತ್ಯದಲ್ಲಿ ಬರುವ ಅಷ್ಟಮ ಶನಿಯ ಪ್ರಖರತೆಯಂತೂ ಹೇಳತೀರದು. ಈ ಅಷ್ಟಮ ಶನಿಯ ಅನಿಷ್ಟತೆ ಮೂಲಾ ನಕ್ಷತ್ರದವರಿಗೆ ಮಾತ್ರವಿದ್ದು, ಪೂರ್ವಾಷಾಢ ಹಾಗೂ ಉತ್ತರಾಷಾಢ ಧನುರಾಶಿಯವರಿಗೆ ಇರುವುದಿಲ್ಲ. ಅನೇಕ ಗ್ರಹಗಳ ಅವಕೃಪೆಗೆ ಪಾತ್ರರಾದ ನಿಮಗೆ ಈ ವರ್ಷವು ಸತ್ವಪರೀಕ್ಷೆಯ ಕಾಲವಾಗಿದೆ. ಧೈರ್ಯಶಾಲಿಗಳಾದ ನೀವು ಇಂಥ ಕಠಿಣ ಪರಿಸ್ಥಿತಿಯಿಂದ ಪಾರಾಗುವಿರಿ. ಆದರೆ ಮಾತಿನಿಂದಲೇ ಶತ್ರುಗಳನ್ನು ನಿರ್ಮಾಣ ಮಾಡಿಕೊಳ್ಳುವ ನಿಮ್ಮ ಸ್ವಭಾವವನ್ನು ತಿದ್ದಿಕೊಳ್ಳುವುದು ಹಿತಕರ. ಎಲ್ಲ ಸಂಕಟಗಳಿಂದ ಮುಕ್ತರಾಗಲು ಆ ವಿಘ್ನೇಶ್ವರನ ಪ್ರಾರ್ಥನೆ ಮಾಡಿರಿ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರದು. ಒಂದಿಲ್ಲೊಂದು ಕಿರುಕುಳ, ಪೀಡೆ, ಉಪದ್ರವ ಇದ್ದೇ ಇರುವುದು. ನವಂಬರ 14ರಿಂದ ಜನವರಿ 13 ಮಾರ್ಚ್ 15ರಿಂದ ಏಪ್ರಿಲ್ 12, ಜೂನ್ 15ರಿಂದ ಆಗಸ್ಟ 15ರವರೆಗಿನ ಈ ಐದು ತಿಂಗಳ ಕಾಲದಲ್ಲಿ ರೋಗ ಉಲ್ಬಣಿಸುವುದಲ್ಲದೆ ಅಪಘಾತದ ಭೀತಿಯುಂಟು. ಆದುದರಿಂದ ಈ ಅವಧಿಯಲ್ಲಿ ವಾಹನ ಚಾಲಕರು ತಾಂತ್ರಿಕ ಹಾಗೂ ಬಾಹ್ಯ ಕೆಲಸಗಾರರು ವರ್ಕಶಾಪ, ಮಶೀನ ಶಾಪಗಳಲ್ಲಿ ಕೆಲಸ ಮಾಡುವವರು ವಿಶೇಷ ಎಚ್ಚರಿಕೆಯಲ್ಲಿರುವುದು ಅವಶ್ಯ. ಆರ್ಥಿಕ ದೃಷ್ಟಿಯಿಂದ ಈ ವರುಷ ತೀವ್ರ ತೊಂದರೆಯದು. ಡಾಕ್ಟರ, ವಕೀಲರ ಬಿಲ್ಲುಗಳಿಗಾಗಿಯೇ ಮುಕ್ಕಾಲು ಆದಾಯ ಖರ್ಚಾಗುವುದು. ಆದಾಯ ಅಲ್ಪ, ವೆಚ್ಚ ವಿಪರೀತ. ಹಳೇ ಸಾಲ ತೀರಿಸಲು ಹೊಸ ಸಾಲಕ್ಕಾಗಿ ಅಲೆಯುವುದರಲ್ಲಿಯೇ ವರುಷವಿಡೀ ಕಳೆಯಬೇಕಾಗುತ್ತದೆ. ಆದಾಗ್ಯೂ ಫೆಬ್ರುವರಿ 12 ರಿಂದ ಮಾರ್ಚ 15, ಮೇ 15ರಿಂದ ಜೂನ 14. ಆಗಸ್ಟ 15ರಿಂದ ನವಂಬರ 11ರ ವರೆಗಿನ ಈ ಐದು ತಿಂಗಳು ಇದ್ದುದರಲ್ಲಿಯೇ ಅನುಕೂಲವಿದೆ. ನಿರೀಕ್ಷಿಸಿದ ಮೂಲದಿಂದ ದ್ರವ್ಯಾನುಕೂಲತೆಯಾಗುವುದರಿಂದ ಅವಮಾನದ ಪ್ರಸಂಗ ತಪ್ಪುವುದು. ಆದರೆ ನವಂಬರ 14ರಿಂದ ಜನವರಿ 13, ಮಾರ್ಚ 15ರಿಂದ ಏಪ್ರಿಲ್ 12, ಜೂನ್ 15ರಿಂದ ಸಪ್ಟಂಬರ 16ರ ವರೆಗಿನ ಅವಧಿಯಲ್ಲಿ ನಿಮ್ಮ ಆರ್ಥಿಕ ಸ್ಥಿತಿಯು ಪರಾಕಾಷ್ಠೆಯನ್ನು ಮುಟ್ಟಿ ಸತ್ವಪರೀಕ್ಷೆಯಾಗುವುದಾದರೂ ಜಯ ಗಳಿಸುವಿರಿ. ಕೋರ್ಟು ಕಚೇರಿಯಿಂದ ಹಾಗು ಇತರ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಈ ವರುಷ ಕೈ ಹಾಕದಿರುವುದೇ ಹಿತಕರ. ದಾವೆ ದಾಖಲು ಮಾಡುವುದು ಅನಿವಾರ್ಯವಾದಲ್ಲಿ, ಫೆಬ್ರುವರಿ 12ರಿಂದ ಮಾರ್ಚ 14, ಮೇ 15ರಿಂದ ಜೂನ 15, ಆಗಸ್ಟ 15ರಿಂದ ವರ್ಷಾಂತ್ಯದ ಅವಧಿಯಲ್ಲಿ ದಾಖಲು ಮಾಡಿ, ವರುಷವಿಡೀ ಮುದ್ದತ್ತು ತೆಗೆದುಕೊಳ್ಳುತ್ತ ಮುಂದೂಡುವುದು ಹಿತಕರ.

ಈ ರಾಶಿಯ ನೌಕರವರ್ಗದವರು ಈ ವರುಷ ಮೇಲಧಿಕಾರಿಗಳ ಉಪಟಳಕ್ಕೆ ಬೇಸತ್ತು ಇಲ್ಲವೇ ಹಿಂಬಡತಿ ಮೂಲಕ ರಾಜೀನಾಮೆ ಕೊಡುವ ಪ್ರಸಂಗ ಬರಬಹುದು. ಜೀವನವೆಂದರೆ ಸುಖದುಃಖಗಳ ಆಗರವಿದ್ದಂತೆ. ಅಶುಭಸ್ಯ ಕಾಲ ಹರಣಂ ಎಂಬಂತೆ ನೀವು ತಾಳ್ಮೆಯಿಂದ ಇದ್ದರೆ ಎಲ್ಲವೂ ಸರಿಯಾಗುವುದು. ಈ ವರುಷದ ನವಂಬರ 15ರಿಂದ ಜನವರಿ 13, ಮಾರ್ಚ 15ರಿಂದ ಏಪ್ರಿಲ್ 12 ಜೂನ್ 15ರಿಂದ ಆಗಸ್ಟ 15ರ ವರೆಗಿನ ಈ ಐದು ತಿಂಗಳ ಅವಧಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿ. ಇಲ್ಲವೆ ವರಿಷ್ಠರಿಂದ ಅಸಹನೀಯ ಕಿರುಕುಳ ಉಂಟಾಗಬಹುದಾಗಿದೆ. ಆದರೆ ಫೆಬ್ರುವರಿ 2ರಿಂದ ಮಾರ್ಚ 14, ಮೇ 15ರಿಂದ ಜೂನ 14, ಸಪ್ಟೆಂಬರ 16ರಿಂದ ನವಂಬರ 10ರ ವರೆಗಿನ ಅವಧಿ ಇದ್ದುದದರಲ್ಲಿಯೇ ಅನುಕೂಲಕರವಾಗಿದೆಯಲ್ಲದೆ ವರಿಷ್ಠರ ತಪ್ಪು ತಿಳುವಳಿಕೆ ದೂರಾಗಿ ಸಹಕಾರ ಕುದುರುವುದರಲ್ಲಿ ಸಹಾಯಕವಾಗುವುದು. ಈ ರಾಶಿಯ ನಿರುದ್ಯೋಗಿಗಳಿಗೆ ಈ ವರುಷ ಅಸಹನೀಯವಾಗಿದೆಯಾದರೂ ಫೆಬ್ರುವರಿ 12ರಿಂದ ಮಾರ್ಚ 15, ಮೇ 15ರಿಂದ ಜೂನ್ 15 ಹಾಗೂ ಸಪ್ಟೆಂಬರ, ಅಕ್ಟೋಬರ ಈ ಅವಧಿಯಲ್ಲಿ ತುಸು ಅನುಕೂಲವಾಗಿರುವುದು. ಹಂಗಾಮಿ ನೌಕರದಾರರ ತಲೆಯ ಮೇಲೆ ಖಡ್ಗ ಯಾವಾಗಲೂ ತೂಗಾಡುತ್ತಿರುತ್ತದೆ. ಅಥವಾ ಅಸ್ಥಿರತೆಯಲ್ಲಿಯೇ ಇದೊಂದು ವರುಷ ಕಳೆಯಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಶ್ರಮಜೀವಿ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆಲ್ಲ ಶನಿ–ರಾಹುದ್ವಯರು ಅಶುಭರಿರುವುದರಿಂದ ಈ ವರುಷ ನಿರುತ್ಸಾಹದಾಯಕವಾಗಿದೆ. ಹೆಚ್ಚಿನ ಹವ್ಯಾಸಕ್ಕೆ ಹೋಗದೆ ರಾಜಿ ಇಲ್ಲವೇ ಸಂಧಾನ ಮನೋಭಾವನೆಯಿಂದ ವರ್ತಿಸುವುದು ಹಿತಕರವು. ಜನವರಿ 14ರಿಂದ ಮಾರ್ಚ 15, ಮೇ 15ರಿಂದ ಜೂನ 15, ಸಪ್ಟೆಂಬರ 15 ರಿಂದ ನವೆಂಬರ 10ರ ವರೆಗಿನ ಈ ಐದು ತಿಂಗಳ ಅವಧಿಯಲ್ಲಿ ಇವರ ಬೇಡಿಕೆಗಳು ಕೆಲಮಟ್ಟಿಗೆ ಈಡೇರಬಹುದು.ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷ ನಿರೀಕ್ಷಿಸಿದಂತೆ ಬೆಳೆ ಬಾರದಿರುವುದರಿಂದ ಇಲ್ಲವೆ ಕಳವು, ತುಡುಗು, ಬೆಂಕಿ, ಮೊದಲಾದ ಅನಾಹುತಗಳು ಸಂಭವಿಸಿ ಸಾಲ ಮಾಡುವ ಅಥವಾ ಹೊಲ–ಮನೆಗಳನ್ನು ಒತ್ತಿ ಹಾಕಬಹುದಾದ ಸಂದರ್ಭ ಉಂಟು. ಬೇಸಾಯ ಸಾಗಮಾಡುವುದು ದುಸ್ಸಾಧ್ಯವಾಗುತ್ತದೆ.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ ಶಿಕ್ಷಕ, ಪತ್ರಿಕೋದ್ಯಮಿ, ಕಾರಕೂನ ವರ್ಗದವರಿಗೆ ಬರುವ ಚತುರ್ಥ ಗುರುವಿನ ಅಶುಭ ಫಲದ ಮೂಲಕ ಈ ವರುಷ ಪ್ರತಿಕೂಲವಿದೆ. ಉದ್ಯೋಗದಲ್ಲಿ ಚಟುವಟಿಕೆ ಕಂಡುಬರದು. ಮಿತ್ರರು ಶತ್ರುಗಳಾಗುವ ಮೂಲಕ ಮಿಥ್ಯಾಪವಾದವನ್ನು ಎದುರಿಸಬೇಕಾಗುವುದು. ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ ಕೋಟಿ ವ್ಯಾಪಾರಸ್ಥ, ಹಂಚಿಕೆದಾರ, ಗಿರಣಿ, ಕಾರಖಾನೆ, ಚಾಳ, ಹೊಟೇಲ, ಮೊದಲಾದ ಮಾಲಕ ವರ್ಗದವರಿಗೆ ಉತ್ಸಾಹದಾಯಕ ವರುಷವಿದಾಗಿಲ್ಲ. ನೌಕರರ ಸಮಸ್ಯೆಗಳೊಂದಿಗೆ ಸರಕಾರದ ನಿರ್ಬಂಧನೆಗಳನ್ನು ಎದುರಿಸಬೇಕಾಗುವುದು. ಹೊಸ ಶಾಖೆ ಪ್ರಾರಂಭಿಸಬೇಕೆಂಬ ವಿಚಾರ ಈ ವರುಷ ಕೈ ಬಿಡುವುದು ಹಿತಕರವು. ನವಂಬರ 14ರಿಂದ ಮಾರ್ಚ 15, ಸಪ್ಟೆಂಬರ 16ರಿಂದ ನವಂಬರ ವರೆಗಿನ ಈ ಆರು ತಿಂಗಳ ಕಾಲ ಇದ್ದುದರಲ್ಲಿಯೇ ತುಸು ಅನುಕೂಲವಾಗಿದೆ.

ಈ ರಾಶಿಯ ವಧೂವರರಿಗೆ ಈ ವರುಷ ಪ್ರತಿಕೂಲವಿದ್ದು, ಮದುವೆ ನಿಶ್ಚಯವಾದರೂ ಮುಂದೂಡುವ ಪರಿಸ್ಥಿತಿ ಎದುರಾಗಬಹುದು. ಇಲ್ಲವೆ ಮುರುಗಡೆಯಾಗಬಹುದಾಗಿದೆ. ಅದರಲ್ಲಿಯೂ ಮಾರ್ಚ 15ರಿಂದ ಏಪ್ರಿಲ್ 12, ಜೂನ್ 15 ರಿಂದ ಆಗಸ್ಟ 15ರ ವರೆಗಿನ ಈ ಮೂರು ತಿಂಗಳ ಕಾಲವಂತೂ ತೀರ ತಾಪದಾಯಕವಾಗಿದೆ. ಸಲ್ಲದ ಅಪವಾದದಿಂದಾಗಿ ಅನೇಕ ವಿಘ್ನಗಳು ಬರಬಹುದಾಗಿದೆ. ಕಳೆದ ವರುಷ ನಿಶ್ಚಿತವಾಗಿದ್ದರೆ ನವಂಬರ 14ರಿಂದ ಮಾರ್ಚ 15, ಮೇ 15ರಿಂದ ಜೂನ 15ರ ಒಳಗೆ ವಿವಾಹ ಜರುಗಿಸಬಹುದು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷ ಹಾಗು ಗೃಹಿಣಿಯರಿಗೆ ಈ ವರುಷ ಕ್ಲೇಶದಾಯಕವಾಗಿದೆ. ಪ್ರತಿನಿತ್ಯದ ಗೃಹ ಕಲಹದಿಂದಾಗಿ ನಿದ್ರಾರಹಿತವಾದ ಹಲವು ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ತಪ್ಪು ತಿಳುವಳಿಕೆ, ಭಿನ್ನಾಭಿಪ್ರಾಯದಿಂದ ಏಕತ್ರ ಕುಟುಂಬ ಒಡೆದು ಹೋಗಬಹುದಾಗಿದೆ. ನವಂಬರ 14ರಿಂದ ಜನವರಿ 13, ಮಾರ್ಚ 15ರಿಂದ ಏಪ್ರಿಲ್ 12, ಜೂನ 15ರಿಂದ ಆಗಸ್ಟ 15ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಗೃಹಕಲಹ ಪರಾಕಾಷ್ಠೆಯನ್ನು ತಲುಪುತ್ತದೆ. ಈ ರಾಶಿಯ ಗರ್ಭವತಿಯರಿಗೆ ಈ ವರುಷ ಪ್ರತಿಕೂಲವಾಗಿದ್ದು, ಹೆರಿಗೆ ತೊಂದರೆಯದಲ್ಲದೆ ಶಸ್ತ್ರಕ್ರಿಯೆಯು ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ಚೆನ್ನಾಗಿರುವದಿಲ್ಲ. ಚುನಾವಣೆ ಮೊದಲಾದ ಜಂಜಾಟದಿಂದ ದೂರ ಇರುವುದು ಹಿತಕರವು. ಮಿತ್ರರು ಶತ್ರುಗಳಾಗುವುದರಿಂದ ಮಿಥ್ಯಾಪವಾದಕ್ಕೆ ಗುರಿಯಾಗಬೇಕಾಗುವುದು. ಅವಿಶ್ವಾಸ ವ್ಯಕ್ತಪಡಿಸುವುದರಿಂದ ಸ್ಥಾನಮಾನ ಅಧಿಕಾರದಿಂದ ಕೆಳಗಿಳಿಯಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಈ ವರುಷ ತೀರ ತೊಂದರೆಯದು. ಶಿಕ್ಷಕರ ಅವಕೃಪೆ, ಮನೆಯಲ್ಲಿಯ ವಿಷಮ ವಾತಾವರಣ ಇಲ್ಲವೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಶಿಕ್ಷಣವನ್ನು ಮುಂದುವರಿಸುವುದೇ ಕಷ್ಟಸಾಧ್ಯವಾಗುತ್ತದೆ. ಕಳೆದ ವರುಷ ಸಂಪಾದಿಸಿದ್ದ ವಿದ್ಯಾರ್ಥಿವೇತನ ಅಥವಾ ಶಿಷ್ಯವೃತ್ತಿಯನ್ನು ಈ ವರುಷ ಕಳೆದುಕೊಳ್ಳಬೇಕಾಗುತ್ತದೆ. ನವಂಬರ 15ರಿಂದ ಮಾರ್ಚ 15. ಮೇ 15ರಿಂದ ಜೂನ 15 ಮತ್ತು ಆಗಸ್ಟ 15ರ ನಂತರ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಸಾಮಾನ್ಯ ದರ್ಜೆಯಲ್ಲಿ ಹೇಗೋ ತೇರ್ಗಡೆಯಾಗುವರು. ಆದರೆ ಮಾರ್ಚ 15ರಿಂದ ಮೇ 14, ಹಾಗೂ ಜೂನ 15ರಿಂದ ಆಗಸ್ಟ 14ರ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವವರ ಫಲಿತಾಂಶ ಹೇಳುವುದು ಸಾಧ್ಯವಾಗದು.

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!!

ಫೋನ್: 26749 ಗ್ರಾಂ: CHITVINODH

ಸುಧಾಕರ ಸಿಂಡಿಕೇಟ್ ಪ್ರೈವೇಟ್ ಲಿ.

[ಭಾರತೀಯ ಕಂಪನಿಗಳ ಕಾಯ್ದೆ ೧೯೫೬ರ ಪ್ರಕಾರ ಇನ್‌ಕಾರ್ಪೋರೇಟ್ ಆದದ್ದು]

ರಜಿಸ್ಟರ್ಡ ಕಚೇರಿ: ೧೪೦ ನಾಗಸಂದ್ರಾ ರೋಡ, ಬಸವನಗುಡಿ

ಪೋ. ಬಾ. ನಂ. ೭೨೦ ಬೆಂಗಳೂರು—೪




★ ಚಂದಾ ಕಾನೂನಿನ ಪ್ರಕಾರ ನಮ್ಮ ಯೋಜನೆಯು ಸಕಲ ಸೌಲಭ್ಯವನ್ನು ಚಂದಾದಾರರಿಗೆ ನೀಡುವ ಭರವಸೆ ಕೊಡುತ್ತೇವೆ. ಕೊನೆಯಾಗುವುದರೊಳಗಾಗಿ ಯೋಜನೆಯ ಅವಧಿಯಲ್ಲಿಯೇ ಹಿಂತೆಗೆದುಕೊಂಡ ಚಂದಾದಾರರ ಮೊಬಲಗನ್ನು ಅವರು ಸಂದಾಯಮಾಡಿದಷ್ಟು ರಕಮನ್ನು ಮಾತ್ರ ಬಡ್ಡಿರಹಿತವಾಗಿ ಯೋಜನೆಯು ಮುಗಿಯುದ ೩೦ ದಿನಗಳ ಮೇಲೆ ಕೊಡಲಾಗುವದು. ಚಂದಾದಾರರು ಚಂದಾ ಕಾನೂನಿನ ಮೇರೆಗೆ ಚಂದಾದಾರರಾಗಿ ನಮ್ಮ ಯೋಜನೆಯಲ್ಲಿ ಹಣದ ಸೌಲಭ್ಯ ಪಡೆಯಬಹುದೇ ಹೊರತು ಬೇರೆ ಯಾವ ತರಹದಿಂದಲೂ ನಮ್ಮಲ್ಲಿ ತೊಡಗಿಸಿದ ಮೊಬಲಗನ್ನು ವಾಪಸ್ಸಪಡೆಯಲಾಗದು. ನಮ್ಮ ಯೋಜನೆಗಳನ್ನು ಅರಿತುಕೊಂಡು ಪೂರ್ಣಲಾಭ ಪಡೆಯಿರಿ.

ಚಿಟ್ ಪ್ರಮೋಟರುಗಳಲ್ಲಿಯೇ ಪ್ರಮುಖರಾದ

"ಸುಧಾಕರ ಚಿಟ್ ಫಂಡ"

ಸಂಸ್ಥೆಯು ನಿಮ್ಮ ಪ್ರಾಮಾಣಿಕ ಸೇವೆಯಲ್ಲಿದೆ.



ಮಕರ

ಈ ವರುಷ ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಯಾವ ಹೆಚ್ಚಿನ ಶುಭಾ-ಅಶುಭ ಘಟನೆಗಳು ಜರುಗವು, ಹೋದ ವರುಷದಂತೆ ಯಥಾಸ್ಥಿತಿಯೇ ಮುಂದುವರಿಯುತ್ತದೆ.

ಕಳೆದ ವರುಷದಿಂದ ದ್ವಿತೀಯನಾಗಿ ಶುಭ ಫಲ ಕೊಡುತ್ತಿದ್ದ ಗುರು ತೃತಿಯನಾಗುವುದರಿಂದ ಶುಭಫಲ ನೀಡದಿದ್ದರೂ ಅಶುಭಫಲವನು ನೀಡಲಾರ. ಈ ವರೆಗೆ ಆರನೆಯವನಾಗಿ ಶುಭ ಫಲ ಕೊಡುತ್ತಿದ್ದ ಶನಿ ವರುಷಾಂತ್ಯದಲ್ಲಿ ಏಳನೆಯವನಾಗುವುದರಿಂದ ಶುಭಫಲದ ಪ್ರಮಾಣ ಕಡಿಮೆಯಾದರೂ ಅಶುಭ ಫಲ ಕೊಡುವುದಿಲ್ಲ. ಹನ್ನೊಂದನೆಯ ರಾಹುವಿನ ಶುಭಫಲವಂತೂ ವರುಷವಿಡಿ ಇರುತ್ತದೆ. ಹೀಗೆ ಗ್ರಹಗತಿ ಇರುವುದರಿಂಧ ಈ ವರುಷ ಈ ರಾಶಿಯವರಿಗೆ ಯಾವ ಹೆಚ್ಚಿನ ವ್ಯತ್ಯಾಸವಾಗದೇ ಕಳೆದ ವರ್ಷದಂತೆ ಯಥಾಸ್ಥಿತಿ ಮುಂದುವರಿಯುವುದು. ಅದರಲ್ಲಿಯೂ ಶ್ರವಣಾ. ಧನಿಷ್ಟಾ ನಕ್ಷತ್ರದವರಿಗೆ ಶುಭಫಲಗಳು ಹೆಚ್ಚು ದೊರೆತರೆ ಉತ್ತರಾಷಾಢದವರಿಗೆ ಶುಭಫಲಗಳು ಕಡಿಮೆ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರುವುದಾದರೂ ಡಿಸೆಂಬರ 15ರಿಂದ ಜನವರಿ 13, ಏಪ್ರಿಲ್ 12ರಿಂದ ಮೇ 14. ಆಗಸ್ಟ 15ರಿಂದ ಸಪ್ಟೆಂಬರ 15 ಈ ಮೂರು ತಿಂಗಳ ಕಾಲ ಮಾತ್ರ ಆರೋಗ್ಯ ಕಿಂಚಿತ್ ಕೆಡಬಹುದಾಗಿದೆ. ಉಳಿದ ಅವಧಿಯಲ್ಲಿ ಆರೋಗ್ಯ ಉತ್ತಮವಿರುವುದು. ಈ ರಾಶಿಯವರ ಈ ವರುಷದ ಆರ್ಥಿಕ ಸ್ಥಿತಿ ಅತ್ಯಂತ ತೃಪ್ತಿಕರವಾಗಿದೆ. ಆದರಲ್ಲಿಯೂ ನವಂಬರ 15ರಿಂದ ಡಿಸೆಂಬರ 15, ಫೆಬ್ರುವರಿ 12ರಿಂದ ಏಪ್ರಿಲ್ 12. ಜೂನ 15ರಿಂದ ಜುಲೈ 15, ಸಪ್ಟೆಂಬರ 16ರಿಂದ ವರ್ಷಾಂತ್ಯದ ವರೆಗಿನ ಈ ಆರು ತಿಂಗಳ ಕಾಲವಂತೂ ಯಶೋದಾಯಕವಾಗಿದೆ. ಈ ಅವಧಿಯಲ್ಲಿ ನಿರೀಕ್ಷಿಸಿದೆಡೆಯಿಂದ ಹಣವಂತೂ ಬಂದೇ ಬರುತ್ತದಲ್ಲದೇ ದತ್ತಕ, ವಾರಸಾ, ಸಟ್ಟಾ, ಲಾಟರಿ. ಬಕ್ಷೀಸ್ ಮೊದಲಾದ ಮೂಲದಿಂದ ಆಕಸ್ಮಿಕ ಧನಯೋಗ ಉಂಟು. ಹಿಂದಿನ ಸಾಲವೆಲ್ಲ ತೀರಿ ಸ್ಥಾವರ ಆಸ್ತಿ ಸಂಪಾದಿಸಬಹುದಾಗಿದೆ. ವಾಹನ . ಸೌಖ್ಯ, ಪರದೇಶ ಪರ್ಯಟನ. ತೀರ್ಥಯಾತ್ರಾಸಂದರ್ಶನಗಳಂಥ ಶುಭ ಘಟನೆಗಳೂ ಈ ಅವಧಿಯಲ್ಲಿ ಜರಗುವವು. ಕೋರ್ಟು ಕಚೇರಿಯ ಯಾವುದೇ ಬಗೆಯ ದಾವೆ ವ್ಯಾಜ್ಯಗಳಲ್ಲಿ ಖಂಡಿತ ಜಯ ದೊರೆಯುತ್ತದೆ. ಅದರಲ್ಲಿಯೂ ರಾಜಕೀಯ ಹಾಗೂ ನೌಕರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಪೂರ್ವಾರ್ಧದಲ್ಲಿ ಜಯ ದೊರೆತರೆ ಫೌಜದಾರಿ ಹಾಗೂ ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿ ಯಶಸು ದೊರೆಯುತ್ತದೆ.

ಈ ರಾಶಿಯ ನೌಕರವರ್ಗದವರಿಗೆ ಅತ್ಯಂತ ಶುಭದಾಯಕ ವರುಷವಿದಾಗಿದ್ದು ಅದರಲ್ಲಿಯೂ ನವಂಬರ 15ರಿಂದ ಡಿಸೆಂಬರ 15, ಜನವರಿ 14 ರಿಂದ ಏಪ್ರಿಲ್ 12, ಜೂನ 15ರಿಂದ ಜುಲೈ 15, ಸಪ್ಟೆಂಬರ 16ರಿಂದ ವರುಷಾಂತ್ಯದ ವರೆಗಿನ ಈ ಏಳು ತಿಂಗಳುಗಳ ಕಾಲದಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗಳಿಗೆ ಬದಲಿ, ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ, ಮೊದಲಾದ ಶುಭಘಟನೆಗಳು ಜರುಗುವವು. ಆದರೆ ಡಿಸೆಂಬರ 15ರಿಂದ ಜನವರಿ 13, ಏಪ್ರಿಲ್ 12ರಿಂದ ಮೇ 14. ಜುಲೈ 15ರಿಂದ ಸಪ್ಟೆಂಬರ 15ರ ವರೆಗಿನ ಅವಧಿ ಅಶುಭವೂ ಪ್ರತಿಕೂಲವೂ ಆಗಿರುವುದು. ಈ ಕಾಲದಲ್ಲಿ ಅನಪೇಕ್ಷಿತ ಸ್ಥಳಕೆ ಬದಲಿ, ವರಿಷ್ಠರ ಕಿರುಕುಳವನ್ನು ಎದುರಿಸಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ವರ್ಗ ಮತ್ತು ವರ್ಕಶಾಪಗಳಲ್ಲಿ ಕೆಲಸ ಮಾಡುವ ನೌಕರರಿಗೆ ಶನಿ-ರಾಹು ದ್ವಯರು ಶುಭರಿರುವುದರಿಂದ ಈ ವರ್ಷವು ಅವರ ಜೀವನದಲ್ಲಿಯೇ ಸುವರ್ಣಕಾಲವಾಗಿದೆ. ಅದರಲ್ಲಿಯೂ ನವಂಬರ 15ರಿಂದ ಡಿಸೆಂಬರ 15, ಮಾರ್ಚ 15 ರಿಂದ ಏಪ್ರಿಲ್ 12, ಜೂನ 15ರಿಂದ ಜುಲೆ 15. ಸಪ್ಟೆಂಬರ 15ರಿಂದ ನವಂಬರ 10ರ ವರೆಗಿನ ಅವಧಿಯು ಅತ್ಯಂತ ಶುಭಪ್ರದವಾಗಿರುವುದಲ್ಲದೆ ಅವರ ಬೇಡಿಕೆಗಳು ಈಡೇರುವವು. ಆದ್ದರಿಂದ ಈ ಕಾಲದಲ್ಲಿ ರಭಸದಿಂದ. ನಿಷ್ಠೆಯಿಂದ ಕಾರ್ಯ ಮಾಡಿ ಬೇಡಿಕೆಗಳನ್ನು ಈಡೇರಿಸಿಕೊಳ್ಳಿರಿ.

ಈ ರಾಶಿಯ ಬುದ್ಧಿಜೀವಿ. ಸಾಹಿತಿ. ಕಲಾವಿದ. ಶಿಕ್ಷಕ, ಪತ್ರಿಕೋದ್ಯಮಿ, ಕಾರಕೂನ ವರ್ಗದವರಿಗೆ ಉತ್ಕರ್ಷದ ವರ್ಷವಿದು. ಉದ್ಯೋಗದಲ್ಲಿ ಪ್ರಗತಿ, ಸ್ಥಿರತೆ, ಮನ್ನಣೆ ದೊರೆಯುವವು. ಸರಕಾರಿ ಹಾಗು ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಪದಕ, ಬಹುಮಾನಗಳು ದೊರೆತು ವಾಹನ ಸೌಖ್ಯ, ಪರದೇಶ ಪರ್ಯಟನಗಳಂಥ ಶುಭಘಟನೆಗಳು ಈ ವರುಷ ಜರುಗುವವು. ಅದರಲ್ಲಿಯೂ ನವಂಬರ 15ರಿಂದ ಡಿಸೆಂಬರ 15, ಜನವರಿ 14ರಿಂದ ಏಪ್ರಿಲ್ 12, ಸಪ್ಟೆಂಬರ 16ರಿಂದ ವರ್ಷಾಂತ್ಯದ ವರೆಗಿನ ಅವಧಿ ಅಪೂರ್ವ ಹಾಗು ಸ್ಮರಣೀಯವಾಗಿದ್ದು, ಅವರ ಬಹುದಿನಗಳ ಆಶೆ-ಆಕಾಂಕ್ಷೆಗಳು ಈಡೇರುವವು. ಈ ರಾಶಿಯ ಕೃಷಿಕ ವರ್ಗದವರಿಗೆ ಶನಿ-ರಾಹುವಿನ ಶುಭಫಲ ವರುಷವಿಡೀ ಇರುವುದರಿಂದ ಈ ವರುಷ ಅತ್ಯಂತ ಯಶೋದಾಯಕವಾಗಿದೆ. ನಿರೀಕ್ಷೆಗಿಂತ ಹೆಚ್ಚು ಬೆಳೆ ಬರುವುದರಿಂದ ಹಿಂದಿನ ಸಾಲವೆಲ್ಲ ತೀರಿ ಹೊಸದಾಗಿ ಹೊಲ-ಮನೆ, ಜಾಗೆ, ತೋಟ ಹಾಗು ದನ ಕರುಗಳು. ಟ್ರಕ್ ಟ್ರ್ಯಾಕ್ಟರ. ಪಂಪಸೆಟ್ಟು ಮೊದಲಾದ ಬೇಸಾಯಕ್ಕೆ ಉಪಯುಕ್ತವಾದ ಉಪಕರಣಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಸಾಮರ್ಥ್ಯ ಬರುತ್ತದೆ. ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಿ. ಗಿರಣಿ-ಕಾರಖಾನೆ ಹೋಟೆಲ, ಟಾಕೀಜ. ಚಾಳ, ಮಾಲಿಕ ವರ್ಗದವರಿಗೆ ಈ ವರುಷ ಅತ್ಯಂತ ಪ್ರಗತಿದಾಯಕವಾಗಿದ್ದು, ನವಂಬರ 14ರಿಂದ ಡಿಸೆಂಬರ 15. ಜನವರಿ 14ರಿಂದ ಏಪ್ರಿಲ್ 12, ಮೇ 15ರಿಂದ ಜುಲೈ 15, ಸಪ್ಟೆಂಬರ 16ರಿಂದ ವರ್ಷಾಂತ್ಯದವರೆಗಿನ ಅವಧಿಯು ಅತ್ಯಂತ ಪ್ರಗತಿದಾಯಕವಾಗಿದೆ. ಈ ಕಾಲದಲ್ಲಿ ಉದ್ಯೋಗ-ವ್ಯಾಪಾರದಲ್ಲಿ ಪ್ರಗತಿ, ಹೊಸ ಶಾಖೆ ಅಥವಾ ಹೊಸ ಉದ್ಯೋಗ ಪ್ರಾರಂಭಿಸಿ ಅಗಣಿತ ದ್ರವ್ಯ ಹಾಗು ಸ್ಥಾವರ ಆಸ್ತಿಯ ಸಂಪಾದನೆ ಸಾಧ್ಯ.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮಕ್ಕಾಗಿ ಕಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವುದು. ಗೃಹಸ್ಥಾಶ್ರಮಕ್ಕೆ ಪದಾರ್ಪಣ ಮಾಡುವರೆಂದೇ ಹೇಳಬೇಕು. ಆದರಲ್ಲಿಯೂ ಪೂರ್ವಾರ್ಧವು ಹೆಚ್ಚು ಶುಭದಾಯಕವಿದೆ. ಈ ರಾಶಿಯ ಸ್ತ್ರೀ ಪುರುಷರು ಹಾಗು ಗೃಹಿಣಿಯರಿಗೆ ಈ ವರುಷ ಅತ್ಯಂತ ಶುಭದಾಯಕ ಹಾಗು ಸ್ಮರಣೀಯವಾಗಿದ್ದು, ಈ ವರುಷ ಬೆಲೆಯುಳ ವಸ್ತು ಒಡವೆಗಳನ್ನು ಕೊಳ್ಳುವ, ನೂತನ ಗೃಹಪ್ರವೇಶ, ತೀರ್ಥಯಾತ್ರಾಸಂದರ್ಶನ, ವಾಹನ ಸೌಖ್ಯ, ಮನೆಯಲ್ಲಿ ಮಂಗಲ ಕಾರ್ಯ ಜರಗುವ, ಇವೇ ಮೊದಲಾದ ಶುಭಘಟನೆಗಳು ಜರಗುವವು. ಈ ರಾಶಿಯ ಗರ್ಭವತಿ ಸ್ತ್ರೀಯರಿಗೆ ಈ ವರುಷ ಶುಭದಾಯಕವಿದ್ದು ಹೆರಿಗೆ ಸುಖಪ್ರದವಾಗಿ ಪುತ್ರಸಂತಾನವಾಗುವ ಯೋಗವಿದೆ. ಆದರೆ ಡಿಸೆಂಬರ 15ರಿಂದ ಜನವರಿ 13, ಏಪ್ರಿಲ್ 12ರಿಂದ ಮೇ 15, ಆಗಸ್ಟ 15ರ ವರೆಗಿನ ಅವಧಿಯಲ್ಲಿ ಹೆರಿಗೆ ತೊಂದರೆಯದು. ಉಳಿದ ಒಂಭತ್ತು ತಿಂಗಳ ಕಾಲದಲ್ಲಿ ಹೆರಿಗೆ ಆದರೆ ಸುಖಪ್ರದವಾಗುವುದರಲ್ಲಿ ಸಂದೇಹವಿಲ್ಲ.


ಅನೇಕ ಗ್ರಹಗಳ ಬೆಂಬಲ ಪಡೆದ ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಈ ವರ್ಷ ತುಂಬ ಯಶೋದಾಯಕವಾಗಿದೆ. ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ, ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಗೌರವ ಸ್ಥಾನಮಾನ, ಅಧಿಕಾರ ಪಡೆದು ರಾಜ್ಯಮಟ್ಟದ ರಾಷ್ಟ್ರ ಮಟ್ಟದ ಗಣ್ಯವ್ಯಕ್ತಿಗಳಾಗುವುದರಲ್ಲಿ ಸಂದೇಹವಿಲ್ಲ. ಶತ್ರುಗಳು ಮಿತ್ರರಾಗು

ಎಚ್ಚರಾಗಲಿಲ್ಲ




ಓ! ಮನವೆ!
ಕಳೆದ ರಾತ್ರಿ ನಿನ್ನ
ಪ್ರೀತಿಸುವಾತ ಬಂದು
ನಿನ್ನೆದೆಯ ಬಾಗಿಲು ತಟ್ಟ
ಹೋದನೆಂದೆನಿಸುತ್ತದೆ
ಭಾಗ್ಯ ಬಂದಾಗ ನೀನು
ಎಚ್ಚರಾಗಲಿಲ್ಲ!

– ಪಂಚಾಕ್ಷರಿ ಹಿರೇಮಠ


ಹಬ್ಬಗಳು
ಭಾರತೀಯ ಪರಂಪರೆಯ ಸುಂದರ ಅಂಗ!
ಸ್ವಸ್ತಿಕ್ ಶಿಕಾಕಾಯಿ ಶಂಪೂ ಸೋಪ್
ಭಾರತೀಯ ಮಹಿಳೆಯ
ಅಂದವಾದ ತಲೆಗೂದಲಿನ ಪರಂಪರಾಗತ ರಹಸ್ಯ!
SWASTIK
SHIKAKAI

ವುದರಿಂದ ಈ ವರುಷದಲ್ಲಿ ಜರುಗುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಅವಿರೋಧ ಆಯ್ಕೆ ಸಾಧ್ಯವಾಗಬಹುದು. ಇಲ್ಲವೆ ಅತ್ಯಧಿಕ ಬಹುಮತ ಪಡೆದು ವಿಜಯ ಪಡೆಯಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳು ಈ ವರುಷ ಕುಂಠಿತ ಗೊಂಡಿದ್ದ ತಮ್ಮ ಶಿಕ್ಷಣವನ್ನು ಮತ್ತೆ ಮುಂದುವರಿಸುವರಲ್ಲದೆ ವಿದ್ಯಾರ್ಥಿವೇತನ, ಶಿಷ್ಯವೃತ್ತಿ, ಕೂಡ ಪಡೆಯುವರು. ನವಂಬರ 15ರಿಂದ ಡಿಸೆಂಬರ 15, ಜನವರಿ 14ರಿಂದ ಏಪ್ರಿಲ್ 12, ಜೂನ 15ರಿಂದ ಜುಲೈ 15, ಸಪ್ಟೆಂಬರ 15ರಿಂದ ವರ್ಷಾಂತ್ಯದ ವರೆಗಿನ ಈ ಏಳು ತಿಂಗಳ ಕಾಲದಲ್ಲಿ ಜರುಗಬಹುದಾದ ಯಾವುದೇ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಅತ್ಯುತ್ತಮ ದರ್ಜೆಯಲ್ಲಿ ಪಾಸಾಗಿ ಪ್ರಶಸ್ತಿ, ಪದಕ, ಶಿಷ್ಯವೃತ್ತಿ, ವಿದ್ಯಾರ್ಥಿ ವೇತನ ಪಡೆದು ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೆ ಸಂಶೋಧನೆಗಾಗಿ ವಿದೇಶ ಸಂಚಾರವನ್ನು ಕೈಕೊಳ್ಳಬಹುದಾಗಿದೆ. ಡಿಸೆಂಬರ 15ರಿಂದ ಜನವರಿ 13, ಏಪ್ರಿಲ್ 12ರಿಂದ ಜೂನ 15, ಜುಲೈ 16ರಿಂದ ಸಪ್ಟೆಂಬರ 15ರ ವರೆಗಿನ ಈ ಐದು ತಿಂಗಳಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವವರು ತೇರ್ಗಡೆಯಾಗಲು ಬಹಳ ಪರಿಶ್ರಮಪಡಬೇಕಾಗುವುದು.



ಕುಂಭ

ಬಳಲಿರುವ ದ್ವಿತೀಯ ಗುರು ಹಾಗು ವರ್ಷಾಂತ್ಯದಲ್ಲಿ ಬರುವ ಎಂಟನೆಯ ಶನಿ ಹಾಗು ವರ್ಷವಿಡೀ ಇರುವ ಶುಭಫಲದಾಯಕ ರಾಹು, ಹೀಗೆ ಅನೇಕ ಗ್ರಹಗಳ ಅನುಗ್ರಹ ಪಡೆದ ಈ ರಾಶಿಯವರಿಗೆ ತುಂಬ ಉತ್ಕರ್ಷದ ಕಾಲವಾಗಿದ್ದು ಅವರ ಎಲ್ಲ ಆಶೆ ಆಕಾಂಕ್ಷೆಗಳು ಈಡೇರುವವು.

ಮೂಡುಗಾಳಿಯ ದಿನಗಳಲ್ಲಿ ಗಿಡಮರಗಳು ಒಣಗಿ ವಸಂತ ಮಾಸದಲ್ಲಿ ಮತ್ತೆ ಚಿಗಿತು ನಳನಳಿಸುವಂತೆಯೆ ಗ್ರಹಗಳು ಪ್ರತಿಕೂಲವಿದ್ದಾಗ ಮಾನವನ ಜೀವನದಲ್ಲಿ ಸಂಕಟಗಳೂ, ಅನುಕೂಲವಿದ್ದಾಗ ಸುಖ ಸೌಭಾಗ್ಯಗಳೂ ಲಭಿಸುವಂತೆ ಈ ವರುಷದ ನಿಮ್ಮ ಗ್ರಹಗತಿಯಿಂದ ಕಂಡು ಬರುವುದು. ಈ ವರುಷದ ಮಧ್ಯದಿಂದ ಗುರು ದ್ವಿತೀಯನಾಗಲಿದ್ದು, ಶುಭಫಲದಾಯಕನಿರುವನು. ವರ್ಷಾಂತ್ಯದಲ್ಲಿ ಪಂಚಮ ಶನಿಯ ಅನಿಷ್ಟತೆ ದೂರಾಗಿ ಆರನೆಯವನಾಗಲಿರುವುದರಿಂದ ಆತ ಶುಭದಾಯಕನಾಗಿರುವನು. ದಶಮ ಶುಭಫಲದಾಯಕ ರಾಹುವಂತೂ ಇಡೀ ವರುಷ ಇರುತ್ತಾನೆ. ಹೀಗೆ ಅನೇಕ ಗ್ರಹಗಳ ಬೆಂಬಲ ಪಡೆದ ನೀವು ಈ ವರುಷ ಸುದೈವಿಗಳೇ ಸರಿ! ನಿಮ್ಮ ಬಹು ದಿನಗಳ ಆಶೆಆಕಾಂಕ್ಷೆಗಳು ಈಡೇರುವವು. ನಿಮ್ಮ ಆರೋಗ್ಯ ವರುಷದ ಮುಕ್ಕಾಲು ಅವಧಿಯ ವರೆಗೆ ಚೆನ್ನಾಗಿರುವುದಾದರೂ ಜನವರಿ 14ರಿಂದ ಮಾರ್ಚ 15, ಮೇ 15ರಿಂದ ಜೂನ 14, ಸಪ್ಟೆಂಬರ 16ರಿಂದ ಅಕ್ಟೋಬರ 17ರ ವರೆಗಿನ ಅವಧಿಯಲ್ಲಿ ಮಾತ್ರ ಶಾರೀರಿಕ ಪೀಡೆ ಉಂಟಾಗಬಹುದಾಗಿದೆ. ಬರಬೇಕಾಗಿದ್ದ ಹಣವು ನಿರೀಕ್ಷಿಸಿದಂತೆ ಸಾಕಷ್ಟು ಬರುವುದರಿಂದ ನಿಮ್ಮ ಆರ್ಥಿಕ ಸ್ಥಿತಿ ತೃಪ್ತಿಕರವಿರುವುದಲ್ಲದೆ ನವಂಬರ 14ರಿಂದ ಜನವರಿ 14, ಮಾರ್ಚ 15ರಿಂದ ಮೇ 15, ಜುಲೈ 15ರಿಂದ ಆಗಸ್ಟ 15, ಅಕ್ಟೋಬರ 17ರಿಂದ ನವಂಬರ 10ರ ವರೆಗಿನ ಅವಧಿಯಲ್ಲಿ ದತ್ತಕ, ವಾರಸಾ, ಲಾಟರಿ, ಬಹುಮಾನ, ಬಕ್ಷೀಸ್, ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭವಾಗುವುದು. ಕಳೆದ ವರುಷ ಆಗದೇ ಇದ್ದಕಾರ್ಯಗಳು ಈ ಅವಧಿಯಲ್ಲಿ ಪೂರ್ತಿಯಾಗಿ ಸುಖ ಸೌಭಾಗ್ಯಗಳು ಬೆಂಬತ್ತಿ ಬರುವವು. ಯಾವುದೇ ಬಗೆಯ ದಾವೆ, ಫಿರ್ಯಾದಿ ಹಾಗು ಖಾಸಗಿ ಕಾರ್ಯದಲ್ಲಿ ಖಂಡಿತವಾಗಿಯೂ ಈ ರಾಶಿಯವರಿಗೆ ಈ ವರುಷ ಜಯ ಕಟ್ಟಿಟ್ಟದ್ದು. ಅದರಲ್ಲಿಯೂ ಫೌಜದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧದಲ್ಲಿಯೂ ದಿವಾಣಿ, ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿಯೂ ಜಯ ಲಭಿಸುತ್ತದೆ.

ಈ ರಾಶಿಯ ನೌಕರ ವರ್ಗದವರಿಗೆ ಕಳೆದ ವರುಷದ ಅಸ್ಥಿರತೆ ದೂರಾಗುವುದು. ವರಿಷ್ಠರ ಸಹಾಯ ಸಹಕಾರ ಲಭಿಸುವುದಲ್ಲದೆ ನವಂಬರ 14ರಿಂದ ಜನವರಿ 13 ಮಾರ್ಚ 15ರಿಂದ ಮೇ 15, ಜುಲೈ 15ರಿಂದ ಆಗಸ್ಟ 15 ಹಾಗೂ ಅಕ್ಟೋಬರ 18ರಿಂದ ನವಂಬರ ಅಂತ್ಯದ ವರೆಗಿನ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ಎರಡು ಹುದ್ದೆಗಳ ಕಾರ್ಯ ನಿರ್ವಹಿಸುವ ಸುಯೋಗ ಉಂಟು. ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವುದು. ಹಂಗಾಮಿ ನೌಕರದಾರರಿಗೆ ಕಾಯಂ ಆಗುವಿಕೆ ಮೊದಲಾದ ಶುಭ ಘಟನೆಗಳು ಜರುಗುವವು. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರ, ಶ್ರಮಜೀವಿ, ಪ್ರವಾಸಿ ಕೆಲಸಗಾರ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆ ಮಿಶ್ರಫಲವಿದೆ. ವರುಷದ ಪ್ರಾರಂಭದ ನಾಲ್ಕು ತಿಂಗಳು ಹಾಗೂ ಕೊನೆಯ ಎರಡು ತಿಂಗಳು ಹೀಗೆ ಆರು ತಿಂಗಳ ಕಾಲ ಶುಭವಿದ್ದು, ಈ ಅವಧಿಯಲ್ಲಿ ಅವರ ಬಹಳಷ್ಟು ಬೇಡಿಕೆಗಳು ಈಡೇರುವವು. ಆದರೆ ಮಧ್ಯದ ಆರು ತಿಂಗಳ ಕಾಲ ತೀರ ತಾಪದಾಯಕವಾಗಿದ್ದು, ವರಿಷ್ಠರ ಕಿರುಕಳವನ್ನು ಎದುರಿಸಬೇಕಾಗುತ್ತದೆ.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ ಶಿಕ್ಷಕ, ಪತ್ರಿಕೋದ್ಯಮಿ ಕಾರಕೂನ ವರ್ಗದವರಿಗೆಲ್ಲ ಬರಲಿರುವ ದ್ವಿತೀಯ ಗುರುವಿನ ಶುಭಫಲದ ಮೂಲಕ ಉದ್ಯೋಗದಲ್ಲಿ ಪ್ರಗತಿ, ಸ್ಥಿರತೆ, ಮನ್ನಣೆ ದೊರೆಯುವುದು. ನವಂಬರ 14ರಿಂದ ಜನವರಿ 14, ಮಾರ್ಚ 15ರಿಂದ ಮೇ 15, ಜುಲೈ 15ರಿಂದ ಸಪ್ಟೆಂಬರ 15, ಅಕ್ಟೋಬರ 17ರಿಂದ ವರುಷಾಂತ್ಯದ ವರೆಗಿನ ಈ ಎಂಟು ತಿಂಗಳ ಕಾಲ ಅತ್ಯಂತ ಶುಭದಾಯಕವಾಗಿದೆ. ಈ ಕಾಲದಲ್ಲಿ ಸರಕಾರ ಹಾಗೂ ಸಂಘಸಂಸ್ಥೆಗಳಿಂದ ಪ್ರಶಸ್ತಿಪದಕ ಬಿರುದು-ಬಾವಲಿಗಳನ್ನು ಪಡೆದು ವಿಶೇಷ ಧನ ಸಂಪಾದನೆಯಾಗುವುದು. ವಾಹನ ಸೌಖ್ಯ, ಸ್ಥಾವರ ಆಸ್ತಿಯ ಸಂಪಾದನೆ, ಪರದೇಶ ಪರ್ಯಟನಗಳಂಥ, ಸ್ಮರಣೀಯ ಘಟನೆಗಳು ಜರುಗುತ್ತವೆ. ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಲೋಕವ್ಯಾಪಾರಸ್ಥ, ಚಾಳ, ಟಾಕೀಜ, ಹೊಟೇಲ, ಗಿರಣಿ ಕಾರಖಾನೆಗಳ ಮಾಲಕ ವರ್ಗದವರಿಗೆ ಈ ವರುಷ ಪ್ರೋತ್ಸಾಹದಾಯಕವಾಗಿದೆ. ಕಳೆದ ವರುಷ ಎದುರಾಗಿದ್ದ ನೌಕರರ ಸಮಸ್ಯೆಗೆ ಪರಿಹಾರ ದೊರೆತು ಸರಕಾರದ ನಿಬಂಧನೆಗಳೂ ದೂರಾಗುವವು. ನವಂಬರ 14ರಿಂದ ಜನವರಿ 13, ಮಾರ್ಚ 15ರಿಂದ ಮೇ 15 ಅಕ್ಟೋಬರ 18ರಿಂದ ವರುಷಾಂತ್ಯದ ವರೆಗಿನ ಈ ಆರು ತಿಂಗಳ ಕಾಲದಲ್ಲಿ ಉದ್ಯೋಗದಲ್ಲಿ ಲಾಭವಾಗಿ ಹೇರಳ ಹಣ ಸಂಪಾದನೆಯಾಗಿ ಹೊಸ ಉದ್ಯೋಗ ಪ್ರಾರಂಭಿಸುವ ಅಥವಾ ಇದ್ದ ಉದ್ಯೋಗದ ಹೊಸ ಶಾಖೆ ತೆರೆಯಬಹುದಾದಂಥ ಪ್ರಗತಿದಾಯಕ ಸಂಗತಿಗಳು ಜರುಗುವವು. ಈ ರಾಶಿಯ ಕೃಷಿಕ ವರ್ಗದವರಿಗೆ ಶನಿ-ರಾಹುದ್ವಯರು ಶುಭರಿರುವದರಿಂದ ಈ ವರುಷ ಅತ್ಯಂತ ಯಶೋದಾಯಕವಾಗಿದೆ. ನಿರೀಕ್ಷೆಗಿಂತಲೂ ಅಧಿಕ ಬೆಳೆ ಬರುವುದರಿಂದ ಹಿಂದಿನ ಸಾಲಗಳೆಲ್ಲವನ್ನು ಈ ವರುಷ ತೀರಿಸಿ ಹೊಸದಾಗಿ ಹೊಲ ಮನೆ, ಜಾಗೆ, ಬೇಸಾಯಕ್ಕೆ ಬೇಕಾದ ಉಪಕರಣ, ದನಕರುಗಳು, ಟ್ರಕ್, ಟ್ರ್ಯಾಕ್ಟರ್ ಪಂಪ ಸೆಟ್ಟು ಮೊದಲಾದವುಗಳನ್ನು ಕೊಳ್ಳುವ ಇಲ್ಲವೆ ನವೀಕರಣ ಮಾಡುವ ಸಾಮರ್ಥ್ಯ ಬರುತ್ತದೆ.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವುದು. ನವಂಬರ 14ರಿಂದ ಜನವರಿ 13, ಫೆಬ್ರುವರಿ 10ರಿಂದ ಮೇ 15, ಜೂನ 15ರಿಂದ ಜುಲೈ 15 ಹಾಗೂ ಅಕ್ಟೋಬರ 18ರಿಂದ ವರುಷಾಂತ್ಯದ ವರೆಗಿನ ಈ ಎಂಟು ತಿಂಗಳ ಕಾಲದಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮಕ್ಕೆ ಪದಾರ್ಪಣ ಮಾಡುವರು. ಈ ರಾಶಿಯ ವಿವಾಹಿತ ಪುರುಷ, ಗೃಹಿಣಿಯರಿಗೆ ಈ ವರುಷ ಪ್ರೋತ್ಸಾಹದಾಯಕವಾಗಿದ್ದು ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದಾಗುವುದಲ್ಲದೆ ಆಪ್ತೇಷ್ಟರಲ್ಲಿ ಉಂಟಾಗಿದ್ದ ತಪ್ಪು ತಿಳುವಳಿಕೆ ದೂರಾಗಿ ಮತ್ತೆ ಪ್ರೀತಿ ವಿಶ್ವಾಸ ಕುದುರುವುದು. ಈ ಸಂವತ್ಸರದ ಪ್ರಾರಂಭದಲ್ಲಿ ನಾಲ್ಕು ತಿಂಗಳ ಅಥವಾ ಕೊನೆಯ ಎರಡು ತಿಂಗಳಲ್ಲಿ ಬೆಲೆಯುಳ್ಳ ವಸ್ತು ಒಡವೆಗಳನ್ನು ಖರೀದಿಸುವ, ತೀರ್ಥಯಾತ್ರಾ ಸಂದರ್ಶನ, ವಾಹನ ಸೌಖ್ಯ, ನೂತನ ಗೃಹ ಪ್ರವೇಶ, ಮನೆಯಲ್ಲಿ ಮಂಗಲಕಾರ್ಯ ಜರುಗುವ ಮೊದಲಾದ ಶುಭಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭವತಿಯರಿಗೆ ಈ ವರುಷ ಶುಭದಾಯಕವಾಗಿದೆ. ಹೆರಿಗೆ ಸುಖಪ್ರದವಾಗುವುದು. ಜನವರಿ 14ರಿಂದ ಫೆಬ್ರುವರಿ 11, ಮೇ 15ರಿಂದ ಜೂನ 14, ಸಪ್ಟೆಂಬರ 16ರಿಂದ ಅಕ್ಟೋಬರ 17ರ ವರೆಗಿನ ಈ ಮೂರು ತಿಂಗಳ ಕಾಲದಲ್ಲಿ ಹೆರಿಗೆಯಾದರೆ ತೊಂದರೆಯಾಗುವ ಸಂಭವ. ಮಿಕ್ಕ ಒಂಭತ್ತು ತಿಂಗಳಲ್ಲಿ ಸುಲಭ ಪ್ರಸೂತಿಯಾಗುವುದು.

ಅನೇಕ ಗ್ರಹಗಳ ಬೆಂಬಲ ಪಡೆದ ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷವು ಅತ್ಯಂತ ಸ್ಮರಣೀಯವಾದುದು. ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಸಂಘಸಂಸ್ಥೆಗಳ ಪದಾಧಿಕಾರಿಗಳಾಗುವರಲ್ಲದೇ ಗೌರವಾನ್ವಿತ ಸ್ಥಾನಮಾನ, ಅಧಿಕಾರ, ಪಡೆದು, ರಾಜ್ಯಮಟ್ಟದ ಗಣ್ಯ ವ್ಯಕ್ತಿಗಳಾಗುವುದರಲ್ಲಿ ಸಂದೇಹವಿಲ್ಲ. ಶತ್ರುಗಳ ಮಿತ್ರರಾಗುವುದರಿಂದ ಈ ವರುಷದಲ್ಲಿ ಜರುಗಬಹುದಾದ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ಅವಿರೋಧ ಆಯ್ಕೆ ಸಂಭವ. ಅಥವಾ ಅತ್ಯಧಿಕ ಬಹುಮತದಿಂದ ಆಯ್ಕೆಯಾಗಬಹುದು.

ಈ ರಾಶಿಯ ವಿದ್ಯಾರ್ಥಿಗಳಿಗೆ ಮುಂಬರುವ ದ್ವಿತೀಯ ಗುರುವಿನ ಮೂಲಕ ಈ ವರುಷ ಪ್ರೋತ್ಸಾಹದಾಯಕವಿದ್ದು ಕಳೆದ ವರುಷ ಕುಂಠಿತವಾಗಿದ್ದ ಶಿಕ್ಷಣ

ವೃತ್ತಿ ಮುಂದುವರೆಯುವುದು. ಶಿಷ್ಯವೃತ್ತಿ ವಿದ್ಯಾರ್ಥಿವೇತನವನ್ನು ಈ ವರುಷ ಸಂಪಾದಿಸುವರು. ಹೆಚ್ಚಿನ ಶಿಕ್ಷಣಕ್ಕಾಗಿ ಅಥವಾ ಸಂಶೋಧನೆಗಾಗಿ ವಿದೇಶ ಯಾತ್ರೆಯನ್ನು ಕೈಕೊಳುವ ಸುಯೋಗವಿದೆ. ನವಂಬರ 14ರಿಂದ ಜನವರಿ 13, ಫೆಬ್ರುವರಿ 12ರಿಂದ ಮೇ 14 ಅಥವಾ ಅಕ್ಟೋಬರ 17ರಿಂದ ವರುಷಾಂತ್ಯದ ವರೆಗೆ ನಡೆಯುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ತೇರ್ಗಡೆಯಾಗಿ, ಪ್ರಶಸ್ತಿ, ಪದಕ ಪಡೆಯುವರು. ಪರೀಕ್ಷೆ ಜನವರಿ 14ರಿಂದ ಫೆಬ್ರುವರಿ 11,, ಮೇ 14 ರಿಂದ ಅಕ್ಟೋಬರ 17ರ ಅವಧಿಯಲ್ಲಾದರೆ ಸಾಮಾನ್ಯ ತರಗತಿಯಲ್ಲಿ ತೇರ್ಗಡೆಯಾಗುವರು.



ಮೀನ

ಈ ರಾಶಿಯವರಿಗೆ ಈ ವರುಷ ಮಿಶ್ರಫಲ ವಿ[illegible]ಾದರೂ ಕಳೆದ ವರುಷದ ತೊಂದರೆಗಳು ಕಡಿಮೆಯಾಗುವವು.

ಈ ರಾಶಿಯವರಿಗೆ ಕಳೆದ ವರುಷದಿಂದ ಅಶುಭ ಫಲದಾಯಕನಾಗಿದ್ದ ಹನ್ನೆರಡನೆಯ ಗುರುವು ಫೆಬ್ರುವರಿ 19ರಿಂದ ಜನ್ಮಸ್ಥನಾಗಿ ಬರುವುದರಿಂದ ಅಶುಭ ಫಲ ಕಡಿಮೆಯಾದರೂ ಶುಭಫಲವನ್ನು ಆತ ನೀಡದೆ ಮಧ್ಯಮದಾಯಕನಾಗಿರುವನು. ಅನಿಷ್ಟ ಫಲದಾಯಕನಾಗಿರುವ ನಾಲ್ಕನೆಯ ಶನಿಯು ವರ್ಷಾಂತ್ಯದಲ್ಲಿ ನಿರ್ಗಮಿಸಿ ಐದನೆಯವನಾಗುವುದರಿಂದ ಆತನ ಪ್ರಖರತೆಯ ಪ್ರಮಾಣ ಕಡಿಮೆಯಾಗುತ್ತದೆ. ವರುಷವಿಡೀ ನವಮನಾಗಿರುವ ರಾಹು ಆರ್ಥಿಕದೃಷ್ಟಿಯಿಂದ ಶುಭದಾಯಕನಾಗಿರುವನು. ಹೀಗಾಗಿ ಕಳೆದ ವರುಷದಷ್ಟು ಪ್ರತಿಕೂಲ ಸನ್ನಿವೇಶ ಇರಲಾರದು. ಆರೋಗ್ಯ ಕಳೆದ ವರುಷದಷ್ಟು ತೊಂದರೆಯದಾಗಿರದೆ ಸಾಧಾರಣವಾಗಿಯಾದರೂ ಫೆಬ್ರುವರಿ 12ರಿಂದ ಏಪ್ರಿಲ್ 12, ಜೂನ 15ರಿಂದ ಜುಲೈ 15, ಅಕ್ಟೋಬರ 18ರಿಂದ ವರುಷಾಂತ್ಯದ ವರೆಗಿನ ಈ ನಾಲ್ಕು ತಿಂಗಳ ಕಾಲದಲ್ಲಿ ಆರೋಗ್ಯ ಕೆಡುವುದಲ್ಲದೇ ಅಪಘಾತದ ಭಯವೂ ಉಂಟು, ಆದರೆ ವರುಷದ ಇನ್ನುಳಿದ ಎಂಟು ತಿಂಗಳ ಕಾಲ ಉತ್ತಮವಿರುವುದು. ಆರ್ಥಿಕ ಹೇಳಿಕೊಳುವಷ್ಟು ಉತ್ತಮವಿಲ್ಲವಾದರೂ ಕಳೆದ ವರುಷದಂತೆ ಸಾಲಗಾರರ ಕಾಟ, ಅಪಮಾನದ ಪ್ರಸಂಗ ಮೊದಲಾದ ಅಹಿತಕರ ಘಟನೆಗಳು ಜರಗುವುದಿಲ್ಲವಲ್ಲದೆ, ನವಂಬರ 14ರಿಂದ ಫೆಬ್ರುವರಿ 12, ಮೇ 15ರಿಂದ ಜೂನ 14, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಐದು ತಿಂಗಳ ಕಾಲದಲ್ಲ ನಿರೀಕ್ಷಿಸಿದ ಮೂಲದಿಂದ ಹಣ ಬರುವುದು. ಆಕಸ್ಮಿಕ ಧನಲಾಭವೂ ಆಗಿ ಆರ್ಥಿಕಸ್ಥಿತಿ ಹಿಡಿತದಲ್ಲಿರುವುದು. ಆದರೆ ಫೆಬ್ರುವರಿ 12ರಿಂದ ಏಪ್ರಿಲ್12, ಜೂನ 15ರಿಂದ ಆಗಸ್ಟ 14, ಅಕ್ಟೋಬರ 18ರಿಂದ ನವಂಬರ 10ರ ವರೆಗೆ ಆರ್ಥಿಕಸ್ಥಿತಿ ಗಂಭೀರ ಸ್ವರೂಪ ತಾಳಿ ಆದಾಯಕ್ಕಿಂತ ವೆಚ್ಚ ವಿಪರೀತ ಬೆಳೆದು ಸತ್ವಪರೀಕ್ಷೆಯಾದರೂ ಖಂಡಿತವಾಗಿ ಯಶಸ್ಸು ದೊರೆಯಬಹುದಾಗಿದೆ. ದಾವೆ, ಫಿರ್ಯಾದಿ, ಇತರ ಸ್ಪರ್ಧೆಯ ಕಾರ್ಯಗಳಿಗೆ ಈ ವರುಷ ಪ್ರಗತಿದಾಯಕವಿರುವುದಿಲ್ಲ. ರಾಜಿ ಸಂಧಾನ ಮನೋಭಾವನೆಯಿಂದ ವರ್ತಿಸಿದಲ್ಲಿ ಹೆಚ್ಚು ಪ್ರಯೋಜನ. ದಾವೆ ಫಿರ್ಯಾದಿಗಳು ಅನಿವಾರ್ಯವಿದ್ದಲ್ಲಿ ದಾಖಲೆ ಮಾಡಿ ಮುದ್ದತ ತೆಗೆದುಕೊಳುತ್ತ ಹೋಗುವುದೇ ಹಿತಕರವು. ನಿಖರವಾಗಿ ಹೇಳಬೇಕೆಂದರೆ ಫೌಜದಾರಿ ಮೊಕದ್ದಮೆಗಳಿಗೆ ಪೂರ್ವಾರ್ಧದಲ್ಲಿ ರಾಜಕೀಯ ಹಾಗೂ ನೌಕರೀ ಮೊಕದ್ದಮೆಗಳಿಗೆ ಮಧ್ಯದಲ್ಲಿ ದಿವಾಣಿ, ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿ ಅನುಕೂಲವಿರುವುದು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ ಬಹಳ ವಿಚಿತ್ರವಿದೆ. ಹನ್ನೆರಡು ವರುಷಕ್ಕೊಮ್ಮೆ ಬರುವ ಜನ್ಮಸ್ಥ ಗುರುವಿನಿಂದಾಗಿ ನೌಕರಿಯಲ್ಲಿ ಸ್ಥಿರತೆ ಇರದು. ಖಾತೆ, ಸಂಸ್ಥೆ, ದಫ್ತರಗಳು ಮೇಲಿಂದ ಮೇಲೆ ಬದಲಾಗುವವು. ಸಾಮಾನ್ಯವಾಗಿ ನೌಕರದಾರರಿಗೆ ಮೂರು ವರುಷಕ್ಕೊಮ್ಮೆ ಬದಲಿಯಾಗುವುದಾದರೆ ಈ ವರುಷ ಜನ್ಮಸ್ಥ ಗುರುವಿನಿಂದಾಗಿ ಮೂರು ಸಾರೆ ಬದಲಿ ಆಗುತ್ತದೆ. ಗಂಟುಮೂಟೆಕಟ್ಟಿಕೊಂಡು ಯಾವಾಗಲೂ ಸಿದ್ಧರಿರಬೇಕಾಗುತ್ತದೆ. ಅಥವಾ ವರುಷವಿಡೀ ಅಲೆಯಬೇಕಾಗುವುದು. ಈ ವರುಷ ಈ ರಾಶಿಯವರ ಇನ್ನೊಂದು ವೈಶಿಷ್ಟವೆಂದರೆ ಆಫೀಸಿಯೇಟಿಂಗ, ಇನ್‌ಚಾರ್ಜ ಆಗಿ ಹಂಗಾಮಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಪ್ರಸಂಗಗಳು ಬರುತ್ತವೆ. ಆದರೆ ಈ ವ್ಯವಸ್ಥೆಯು ಪೂರ್ವಾಭಾದ್ರಪದ ಹಾಗೂ ಉತ್ತರಾಭಾದ್ರಪದದ ಮೀನ ರಾಶಿಯವರಿಗೆ ಅನುಕೂಲವೂ ಶುಭವೂ ಆಗಿರುವುದು. ಅಂದರೆ ಅನುಕೂಲ ಜಾಗೆಗೆ ಬಡತಿಯೊಂದಿಗೆ ಬದಲಿಯಾಗುವ ಸಂಭವ. ಆದರೆ ರೇವತಿ ನಕ್ಷತ್ರದವರಿಗೆ ಪ್ರತಿಕೂಲ ಸ್ಥಳಕ್ಕೆ ಬದಲಿಯಾಗುವುದು. ನಿರುದ್ಯೋಗಿಗಳಿಗೆ ಈ ವರುಷ ಆಶಾದಾಯಕವಾಗಿದೆ. ಆದರೆ ಒಂದು ಸ್ವಾರಸ್ಯಕರ ವಿಷಯವೆಂದರೆ ಅನೇಕ ಕಡೆಗಳಿಂದ ಸಂದರ್ಶನಕ್ಕೆ ಕರೆ ಹಾಗು ನೇಮಣೂಕಿಯ ಆಜ್ಞೆ ಬರುತ್ತದೆ. ಯಾವ ನೌಕರಿ ಯಾವ ಹುದ್ದೆ ಯಾವ ಖಾತೆ ಹಿಡಿದರೆ ಸರಿ ಹೋದೀತು ಎಂಬ ಚಿಂತೆ ವರುಷಾಂತ್ಯದವರೆಗೂ ಇರುವುದು. ಹಂಗಾಮಿ ನೌಕರದಾರರಿಗೆ ಕೂಡ ಈ ವರ್ಷ ಸ್ಥಿರತೆ ಇರುವುದಿಲ್ಲ. ನವಂಬರ 15ರಿಂದ ಫೆಬ್ರುವರಿ 12, ಮೇ 15ರಿಂದ ಜೂನ 15, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಐದು ತಿಂಗಳ ಕಾಲ ಈ ರಾಶಿಯ ನೌಕರವರ್ಗದವರಿಗೆ ಅನುಕೂಲವಾಗಿದ್ದು, ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ನಿರುದ್ಯೋಗಿಗಳಿಗೆ ನೌಕರಿ ದೊರೆಯುವ ಮುಂತಾದ ಶುಭಘಟನೆಗಳು ಜರುಗುವವು. ಆದರೆ ಫೆಬ್ರುವರಿ 12ರಿಂದ ಏಪ್ರಿಲ್ 12, ಜೂನ್ 15ರಿಂದ ಆಗಸ್ಟ 15, ಅಕ್ಟೋಬರ 18 ರಿಂದ ವರುಷಾಂತ್ಯದ ವರೆಗಿನ ಈ ಆರು ತಿಂಗಳ ಕಾಲ ತೀರ ಪ್ರತಿಕೂಲವಿದ್ದು, ಈ ಕಾಲದಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿ-ವರಿಷ್ಠರ ಅಸಹಕಾರ ಮುಂತಾದ ಅಶುಭಘಟನೆಗಳು ಜರಗುವವು. ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಶ್ರಮಜೀವಿ, ಗಿರಣಿ ಕಾರಖಾನೆ, ಗಳ ಕಾರ್ಮಿಕರಿಗೆಲ್ಲ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಕಳೆದ ವರುಷಕ್ಕಿಂತ ಪ್ರಗತಿದಾಯಕವಿದೆ. ಎಲ್ಲ ಬೇಡಿಕೆಗಳಿಗಾಗಿ ಒತ್ತಾಯ ಮಾಡದೆ ರಾಜಿ, ಸಂಧಾನ ಮನೋಭಾವನೆಯಿಂದ ಅವರ ಕೆಲ ಬೇಡಿಕೆಗಳು ಈಡೇರುವವು. ಅವರಲ್ಲಿಯೂ ನವಂಬರ 15ರಿಂದ ಫೆಬ್ರುವರಿ 12, ಏಪ್ರಿಲ್ 12ರಿಂದ ಜೂನ 15ರ ಒಳಗೆ ಈ ಐದು ತಿಂಗಳ ಕಾಲ ಯಶೋದಾಯಕವಿದೆ.

ಈ ರಾಶಿಯ ಬುದ್ಧಿಜೀವಿ, ಸಾಹಿತಿ, ಕಲಾವಿದ ಶಿಕ್ಷಕ, ಪತ್ರಿಕೋದ್ಯಮಿ ಹಾಗು ಕಾರಕೂನ ವರ್ಗಕ್ಕೆ ಕಳೆದ ವರುಷಕ್ಕಿಂತ ಈ ವರುಷ ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದೆಯಾದರೆ ಉದ್ಯೋಗದಲ್ಲಿ ಸ್ಥಿರತೆ ಇರದು. ನವಂಬರ 15ರಿಂದ ಫೆಬ್ರುವರಿ 12, ಏಪ್ರಿಲ್ 12ರಿಂದ ಜೂನ 15, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಈ ಆರು ತಿಂಗಳ ಕಾಲ ಅನುಕೂಲವಿದ್ದು, ಉದ್ಯೋಗದಲ್ಲಿ ಪ್ರಗತಿ, ಮನ್ನಣೆ, ಪ್ರಶಸ್ತಿ ಪದಕಗಳು ಲಭಿಸುವವು. ವಾಹನಸೌಖ್ಯ, ವಿದೇಶ ಪರ್ಯಟನಗಳಂಥ ಶುಭಘಟನೆಗಳು ಜರುಗಬಹುದಾಗಿದೆ. ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷ ಮಿಶ್ರಫಲವಿದೆ. ಪೂರ್ವಾರ್ಧವು ಪ್ರಗತಿದಾಯಕವಿದ್ದು, ನಿರೀಕ್ಷೆಗಿಂತ ಅಧಿಕ ಬೆಳೆ ಬಂದು, ಹಿಂದಿನ ಸಾಲವೆಲ್ಲ ತೀರಿ ಹೊಸದಾಗಿ ಮನೆ-ಹೊಲ-ಜಾಗೆ ದನ-ಕರುಗಳು, ಪಂಪು ಸೆಟ್ಟು, ಮೊದಲಾದ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಖರೀದಿಸಬಹುದಾಗಿದೆ. ಆದರೆ ಉತ್ತರಾರ್ಧವು ತೀರ ಪ್ರತಿಕೂಲವಿದ್ದು, ಸಾಲಗಾರರ ಕಾಟ, ದನ-ಕರುಗಳಿಗೆ ಬೇನೆ ಬೇಸರ ಹೊಲ ಒತ್ತಿ ಹಾಕಬೇಕಾದ ಪ್ರಸಂಗ ಎದುರಾಗಬಹುದು. ಬೇಸಾಯವನ್ನು ಮುಂದುವರಿಸುವುದೇ ದುಸ್ಸಾಧ್ಯವಾಗುವುದು. ಗಿರಣಿ, ಕಾರಖಾನೆ, ಟಾಕೀಜ, ಚಾಳ, ಹೊಟೇಲು ಮಾಲಕ ವರ್ಗದವರಿಗೆ ಈ ವರುಷ ಮಿಶ್ರಫಲವಿದೆ. ಪೂರ್ವಾರ್ಧವು ಪ್ರಗತಿದಾಯಕವಾದರೆ ಉತ್ತರಾರ್ಧವು ಪ್ರತಿಕೂಲವಿದೆ. ಉದ್ಯೋಗ, ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದ್ದರೆ ನೌಕರರ ಸಮಸ್ಯೆಯನ್ನು ಸರಕಾರದ ನಿರ್ಬಂಧನೆಗಳನ್ನು ಎದುರಿಸಬೇಕಾಗುವುದು.

ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿರುವುದಲ್ಲದೆ ನವಂಬರ 14ರಿಂದ ಫೆಬ್ರುವರಿ 12, ಮಾರ್ಚ 15ರಿಂದ ಜೂನ 15, ಈ ಆರು ತಿಂಗಳ ಕಾಲದಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮವನ್ನು ಪ್ರವೇಶಿಸುವರು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷ ಹಾಗು ಗೃಹಿಣಿಯರಿಗೆ ಈ ವರುಷ ಪ್ರಗತಿದಾಯಕವಿದ್ದು, ತಪ್ಪು ತಿಳುವಳಿಕೆಯಿಂದ ಕಲುಷಿತಗೊಂಡಿದ್ದ ಮನೆಯ ವಾತಾವರಣ ತಿಳಿಗೊಂಡು ಪರಸ್ಪರರಲ್ಲಿ ಪ್ರೀತಿ ವಿಶ್ವಾಸಗಳು ಹೆಚ್ಚುವವು. ಒಡೆದು ಹೋದ ಕುಟುಂಬ ಒಂದುಗೂಡುವುದಲ್ಲದೆ ನವಂಬರ 15ರಿಂದ ಫೆಬ್ರುವರಿ 12, ಏಪ್ರಿಲ್ 12ರಿಂದ ಜೂನ 15ರ ವರೆಗಿನ ಈ ಐದು ತಿಂಗಳ ಕಾಲದಲ್ಲಿ ಬೆಲೆಯುಳ್ಳ ವಸ್ತು, ಒಡವೆಗಳನ್ನು ಖರೀದಿಸುವ, ನೂತನಗೃಹ ಪ್ರವೇಶ, ತೀರ್ಥಯಾತ್ರಾಸಂದರ್ಶನ, ಮೊದಲಾದ ಶುಭಘಟನೆಗಳು ಜರುಗುವವು. ಈ ರಾಶಿಯ ಗರ್ಭಿಣಿ ಸ್ತ್ರೀಯರ ಹೆರಿಗೆಯು ನವಂಬರ 15 ರಿಂದ ಫೆಬ್ರುವರಿ 11, ಮೇ 15ರಿಂದ ಜೂನ 15, ಆಗಸ್ಟ 15ರಿಂದ ಸಪ್ಟೆಂಬರ 16ರ ವರೆಗಿನ ಅವಧಿಯಲ್ಲಾದರೆ ಸುಲಭಪ್ರಸೂತಿಯಾಗುವುದಾದರೆ ಫೆಬ್ರುವರಿ 12ರಿಂದ ಮೇ 14, ಜೂನ 15 ರಿಂದ ಆಗಸ್ಟ 14, ಸಪ್ಟೆಂಬರ 16ರಿಂದ ವರುಷಾಂತ್ಯದ ಅವಧಿಯಲ್ಲಿ ಮಾತ್ರ ತೊಂದರೆಯಾಗಬಹುದಾಗಿದೆ.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ಪ್ರಗತಿದಾಯಕವಿಲ್ಲ. ಆದರೂ ಕಳೆದ ವರುಷದಷ್ಟು ತೊಂದರೆಯದಾಗಿಲ್ಲ. ಸಂಘ ಸಂಸ್ಥೆಗಳ ಪದಾಧಿಕಾರ ಹಾಗೂ ಅಧಿಕಾರ ಸ್ಥಾನ


ದೀಪಾವಳಿ ಬೆಳಗುತ್ತಿರುವುದು
ಕರೋನಾ
ಅವರ ಐದು
ಹೂ-ಬಾಣಗಳಿಂದ
ರಂಜನಾ
ಚಂದ್ರಾ
ಯುನಿವರ್ಸಲ್
ಕರೋನಾ ಸಾಹು ಕಂ. ಲಿ.
221, ದಾದಾಭಾಯಿ
400 001.
CHAITRA-CS-12 KAN

ಕ್ಕಾಗಿ ಹೋರಾಡಬೇಕಾಗುತ್ತದೆ. ಅತ್ಯಲ್ಪ ಮತದಿಂದ ಅಧಿಕಾರ ಪಡೆದರೂ ಅದನ್ನು ಉಳಿಸಿಕೊಳ್ಳಲು ಶ್ರಮಿಸಬೇಕಾಗುತ್ತದೆ. ಕಳೆದುಕೊಂಡ ಜನಪ್ರಿಯತೆ ಮತ್ತೆ ಈ ವರುಷ ಗಳಿಸಬಲ್ಲಿರಿ. ಶತ್ರುಗಳು ಮಿತ್ರರಂತೆ ತೋರಿದರೂ ಸಂಪೂರ್ಣ ಸಹಕಾರ ದೊರೆಯದು. ಈ ವರುಷ ಜರುಗಬಹುದಾದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಜಯ ದೊರೆಯುವುದು. ಆದರೆ ಚುನಾವಣೆಯಲ್ಲಿ ನಿಖರದ ಹೋರಾಟವನ್ನು ಎದುರಿಸಬೇಕಾಗುತ್ತದೆ. ಇನ್ನೊಂದು ವೈಶಿಷ್ಟ್ಯವೆಂದರೆ ತಮ್ಮ ಮತಕ್ಷೇತ್ರವನ್ನು ಬಿಟ್ಟು ಬೇರೆ ಕ್ಷೇತ್ರದಿಂದ ಸ್ಪರ್ಧಿಸಬೇಕಾಗುವುದು. ಪೂರ್ವಾರ್ಧವು ಹೆಚ್ಚು ಪ್ರೋತ್ಸಾಹದಾಯಕವಾದರೆ ಉತ್ತರಾರ್ಧವು ನಿರಾಶಾದಾಯಕವಾಗಿದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಈ ವರುಷ ಪ್ರಗತಿದಾಯಕವಿದೆ. ಕಳೆದ ವರುಷ ಅರ್ಧಕ್ಕೆ ನಿಂತ ಅಥವಾ ಕುಂಠಿತವಾಗಿದ್ದ ಶಿಕ್ಷಣ ಈ ವರುಷ ಮತ್ತೆ ಮುಂದುವರೆಯುವುದು. ಈ ರಾಶಿಯ ವಿದ್ಯಾರ್ಥಿಗಳ ಈ ವರುಷದ ವೈಶಿಷ್ಟ್ಯವೆಂದರೆ ಶಾಲೆ–ಕಾಲೇಜು, ಅಥವಾ ಕೋರ್ಸು ವಿಷಯಗಳನ್ನು ಈ ವರುಷ ಅನಿವಾರ್ಯವಾಗಿ ಬದಲಿಸಬೇಕಾಗುವ ಸನ್ನಿವೇಶ ಎದುರಾಗುವುದು. ಈ ರಾಶಿಯ ವಿದ್ಯಾರ್ಥಿಗಳ ತಪರೀಕ್ಷೆ ನವಂಬರ 15 ರಿಂದ ಫೆಬ್ರುವರಿ 11, ಮಾರ್ಚ್ 15ರಿಂದ ಜೂನ 14. ಆಗಸ್ಟ 15ರಿಂದ ಸಪ್ಟಂಬರ 16ರ ಅವಧಿಯಲ್ಲಾದರೆ ದರ್ಜೆ, ಶ್ರೇಣಿ ಪಡೆದು ತೇರ್ಗಡೆಯಾಗುವರು. ಪ್ರಶಸ್ತಿ, ಪದಕ, ಶಿಷ್ಯವೃತ್ತಿ, ವಿದ್ಯಾರ್ಥಿವೇತನವನ್ನು ಪಡೆದು ಸಂಶೋಧನೆಗಾಗಿ ಇಲ್ಲವೆ ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶ ಸಂಚಾರವನ್ನು ಕೈಕೊಳ್ಳುವ ಯೋಗವುಂಟು. ಅನಂತರ ಅಂದರೆ ಫೆಬ್ರುವರಿ 12ರಿಂದ ಮಾರ್ಚ್ 14 ಜೂನ 15ರಿಂದ ಆಗಸ್ಟ 14 ಸಪ್ಟಂಬರ 16ರಿಂದ ವರುಷಾಂತ್ಯದ ವರೆಗಿನ ಅವಧಿಯಲ್ಲಾದರೆ ತೇರ್ಗಡೆಯಾಗಲು ಹೆಣಗಾಡಬೇಕಾಗುತ್ತದೆ.

○

– ಶುಭಂ ಭವತು –



ದೀಪಾವಳಿಯು ಸರ್ವರಿಗೂ
ಶುಭದಾಯಕವಾಗಲಿ!

ಐತಿಹಾಸಿಕ ನಗರ ವಿಜಾಪುರದ ಹೆಮ್ಮೆ

ಶ್ರೀಕೃಷ್ಣ ಲಾಜಿಂಗ

ಮತ್ತು ಬೋರ್ಡಿಂಗ

ಫೋನ : *161*

ಮೇನರೋಡ, ವಿಜಾಪುರ

ಇಳಿದುಕೊಳ್ಳಲು ಉತ್ತಮ ವ್ಯವಸ್ಥೆ
ಶುಚಿ ರುಚಿಯಾದ ಊಟ ಮತ್ತು ವಿನಮ್ರ ಸೇವೆ

ಮಾಲಿಕರು : ಕೆ. ಕೃಷ್ಣರಾವ

ಮೈಸೂರ ಕೆಫೆ

ಫೋನ : *561*

ಮೇನರೋಡ, ವಿಜಾಪುರ

ಶುಚಿ ರುಚಿಯಾದ ತಿಂಡಿ ಮತ್ತು ಪಾನೀಯಗಳು
ಆದರ್ಶವಾದ ಫಲಹಾರ ಮಂದಿರ.

ಮಾಲಿಕರು : ಕೆ. ಬಾಬುರಾವ

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!!

ಎಕ್ಸೈಡ್ ಬ್ಯಾಟರಿ
ರಾಕೇಟ್
ಆಯಿಲ್ ಇಂಜಿನ್



murphy radio
Delights the home!

ಮರ್ಫಿ ರೇಡಿಓ
ಮತ್ತು
ಟ್ರಾನ್ಸಿಸ್ಟರಗಳು

ಮತ್ತು ಜಿ. ಇ. ಸಿ. ಕಂಪನಿಗಳ ಎಲ್ಲ ತಯಾರಿಕೆಗಳ ಬಿಜಾಪುರ ಜಿಲ್ಲೆಯ
ಏಕಮೇವ ವಿತರಕರು

★ ಉತ್ತಮವಾದ ಸರ್ವೀಸು ★ ಯೋಗ್ಯವಾದ ಮಾಲು ★ ವಿಶ್ವಾಸಾರ್ಹವಾದ ಬೆಲೆ;

ಇವು ನಮ್ಮ ವೈಶಿಷ್ಟ್ಯಗಳು

ಮೆ॥ **ಕಾಮಧೇನು** ಇಲೆಕ್ಟ್ರಿಕಲ್ & ಮೆಕ್ಯಾನಿಕಲ್ ಎಂಟರಪ್ರಾಯಿಸ್‌ಸ

ಅಝಾದ ರೋಡ್, ಬಿಜಾಪುರ ಫೋನ್ : **568**

ಪ್ರತಿಕ್ರಿಯೆ



— ಪಿ. ವಿ. ಶಾಸ್ತ್ರಿ, ಕಿಬ್ಬಳ್ಳಿ

-೧-

ಈ ಬಸ್ಸು-ಜಗತ್ತು, ನಾನು ಮತ್ತು ಕವಿತಾ ಹಾಗೂ ದೇವರು. ಈ ಜನ-ಆ ಜನ. ಮತ್ತು ಮದುವೆ! ಕುಳಿತು ಕೊಳೆಯುವ ಮನಸ್ಸು, ಸನ್ನ ಹೊತ್ತು, ಧೂಳೆಬ್ಬಿಸಿ ಹೊರಟ ಬಸ್ಸು. ಶಹನಾಯಿ, ಎದೆ ತುಂಬಿನಿಂತ ಬಿಸಿಕಣ್ಣೀರು, ಸುಗ್ರೀವ, ಥಳಥಳಿಸುವ ಮಂಗಳಸೂತ್ರ; ಬಸ್ಸು, ಧೂಳು, ಛೇ! ನಾನು-ಕವಿತಾ-ಬದುಕು!

ಡಬಲ್‌ಫಾಸ್ಟ್ ಬಸ್ಸಿನಲ್ಲಿ ಕುಳಿತಿದ್ದೆ- ಇವಳೂರಿನಿಂದ, ನನ್ನೂರಿಂದ ಎಲ್ಲಿಗಾದರೂ ಹೋದರಾಯ್ತೆಂದು

ಜೀವದಾಸೆ ಬಿಟ್ಟವರನ್ನೆಲ್ಲ ಅದರಲ್ಲಿ ತುಂಬಿ ಕಾಣದೂರಿಗೆ ಕಳಿಸುವದರ ಅನುಭವವಾಗುತ್ತಿತ್ತು. ನನ್ನಂತೆ ಸಾಯಲು ಯೋಗ್ಯರಾದವರೇ ಈ ಊರಲ್ಲಿ ಇಷ್ಟೆಲ್ಲ ಜನರಿದ್ದರಲ್ಲ ಎಂಬ ಸಮಾಧಾನ ಒಂದು ಕಡೆ; 'ಪಾಪ' ಎಂಬ–ನನ್ನನ್ನೂ ಸೇರಿಸಿ–ಅನುಕಂಪ ಇನ್ನೊಂದು ಕಡೆ. ಬಸ್ಸಿನ ಬಾಡಿ ಕಾಯ್ದು ಕೆಂಪಗಾದಂತೆ, ಪ್ಯಾಸೆಂಜರರ ಎದೆಯ ಉರಿಯೆಲ್ಲ ಬಸ್ಸಿನೊಳಗಡೆ ಬಿಸಿಉಸಿರಾಗಿ ಗಿಜಗಿಜ ತುಂಬಿ, ಬೆಂಕಿ ಹೊತ್ತಿಕೊಳ್ಳುವಂತೆ...ಬಿಸಿಲಿಗೆ ಬಾಡಿ ಬೆವರು ಸುರಿದು ಕಪ್ಪಾದ ಹೆಣಕಳೆಯ ಮುಖಗಳು ಧ್ವನಿಹೀನವಾಗಿ ಪ್ರಾಯಶ್ಚಿತ್ತವನ್ನು ಅನುಭವಿಸುವ ಕ್ರೈಸ್ತನ ಮಕ್ಕಳಂತಾಗಿದ್ದರು ಜೊತೆಯವರು! ಮನಸ್ಸಿನ ನರಳಿಕೆ ಮೈಯ ಬೇಗುದಿಯಲ್ಲಿ ಮಾಯವಾಗಿ ಮನಸ್ಸು ನಿರ್ವಿಕಾರ–ತಟಸ್ಥವಾಗಿ, ಸ್ತಬ್ಧವೇ ಆದಂತಾಗಿ–ನಾನು ನನಗೇ ಕೇಳುತ್ತಿರಲಿಲ್ಲ. ಸುಖೇ ದುಃಖೇ ಸಮೇಕೃತ್ವಾ... ನರಳಲೂ ನಗಲೂ ಜಾಗವಿಲ್ಲದಷ್ಟು ಇಕ್ಕಟ್ಟಾದ ಬಸ್ಸಿನಲ್ಲಿ ಎಲ ಅನುಭವಗಳು ಅನಿಸಿದಂತಾಗಿ ಅರ್ಥವಾಗುವ ಮೊದಲೇ ಶಬ್ದ ಕಳೆದುಕೊಳ್ಳುತ್ತಿದ್ದವು. ಮೈ ಕೈ ಒರೆಸಿ ಬೆವರು ಒರೆಸಿಕೊಳ್ಳುವದರೊಳಗೇ–'ಏನು ಅನಿಸಿತ್ತು?' ಎಂದು ನೆನೆಸಿಕೊಳ್ಳಲು ಪ್ರಾರಂಭಿಸಿದರೆ ಮತ್ತೇನೋ ಬೇರೆಯದರ ನೆನಪಾಗುತ್ತಿತ್ತು. ಪ್ಯಾಂಟಿನ ಕಿಸೆಯಲ್ಲಿನ ಕವಿತಾ ಕೊಟ್ಟ ಕರ್ಚೀಫ್ ತೆಗೆದು ಮುಖ ಉದ್ದಿಕೊಂಡಾಗ ಸಿಂಥಾಲ್ ಟ್ಯಾಲೆಟ್ ಪೌಡರ್ 'ಗಮ್' ಎಂದು ಮೂಗಿಗೆ ಹೊಡೆದು ಮೈಯೊಳಗೇ ತುಂಬುವಂತೆ... ಎಂಟು ದಿನಗಳ ಹಿಂದೆ ಮುನಿಸಿಪಲ್ ಗಾರ್ಡನ್ನಿನಲ್ಲಿ ಕವಿತಾಳ ತುಟಿಗೆ ತುಟಿ ಇಡಲು ಹೋದಾಗ, "ಛೇ! ಎಷ್ಟು ವಾಸನೆ ಸಿಗರೇಟಿನದು!" ಎಂದು ಅವಳು ಮುಖ ಹೊರಳಿಸಿ ತನ್ನ ಪರ್ಸಿನಿಂದ ಹೊಸದಾಗಿ ಖರೀದಿಸಿ ಇಟ್ಟುಕೊಂಡ ಕರ್ಚೀಫ್ ತೆಗೆದು ನನಗೆ ಕೊಟ್ಟಾಗ 'ಅಯ್ಯಪ್ಪ!' ಎಂದು ಅವಳ ಮುಖವನ್ನು ಅದರಿಂದ ಮುಚ್ಚಿ ಮೇಲೆ ಮುತ್ತಿಟ್ಟಿದ್ದೆ! ಆಗ ಹತ್ತಿದ ಪೌಡರು; ಅವಳು!–ನಿಂತು ಹತ್ತು ನಿಮಿಷವಾಗುವ ಮೊದಲೇ ಮೊಣಕಾಲ ಗಂಟು ನೋಯತೊಡಗಿದಾಗ "ಬನ್ನಿ ಹೇಗಾದರೂ ಕೂಡ್ರುವಾ–ಎಲ್ಲರೂ ಟಿಕೆಟ್ ತೆಗೆದುಕೊಂಡವರಲ್ಲವೆ?" ಎಂಬ ಸಾಮಾನ್ಯ ಒಣದನಿ; ಐವತ್ತರ ಗಡಿದಾಟಿದ, ಬೆಳೆದ ಮಗಳೊಂದಿಗಿನ ಪ್ರಯಾಣಿಕ, ಮಗಳಿಗೆ, ಸ್ವಲ್ಪ ಆ ಕಡೆ ಜರುಗ ಹೇಳಿ ಸ್ಥಳಮಾಡಿಕೊಟ್ಟು, ಪೃಷ್ಟದರ್ಧಭಾಗವನ್ನು ಸೀಟಿಗಿಟ್ಟು–ಬಸ್ಸಿನಲ್ಲಿ ತುಂಬಿದ ಬೆವರುವಾಸನೆ, ಆ ಮುದುಕಿ, ಆ ಕೊಳಕ ಮತ್ತೆ ಅವಳು–ಇವಳು–ನನ್ನ..."ಹೇಗೆ ತಡೆದುಕೊಳ್ಳುವದಪ್ಪ–ಹೇಗೆ ಬಸ್ಸು ಹೋಗುವಲ್ಲಿಗೆ ಹೋಗಿ ಮುಟ್ಟುವದು–ಬಿಸಿಲಾಗಿದ್ದರೂ ಅಡಿಯಿಲ್ಲ; ಬಸ್ಸಿನ ಮೇಲ್ಭಾಗ ಬದಿಭಾಗಗಳನ್ನೆಲ್ಲ ಕಿತ್ತು ಹಾಕಿದ್ದರಾಗುತ್ತಿತ್ತಲ್ಲ–ಎಂದುಕೊಳ್ಳುತ್ತಿರುವಂತೆ ಆ ಗೃಹಸ್ಥನ ಕಿಡಕಿಯ ಕಡೆ ಕುಳಿತ ಹುಡುಗಿ ಮುಡಿದ ಮಲ್ಲಿಗೆ ದಂಡೆಯ ಮೇಲಿನಿಂದ ಅಪ್ಯಾಯಮಾನವಾಗುವಂತೆ ಗಾಳಿಬೀಸಿ ಬಂದಿತು. "ಅವಳು ಕವಿತಾಳೇ!" ಎಂದು ತಿರುಗಿ ಮುಖನೋಡಿದೆ. ಅಲ್ಲ ಎನ್ನುವದು ನೂರಕ್ಕೆ ನೂರು ಸ್ಪಷ್ಟವಾದರೂ ಅವಳು ಕೊಟ್ಟ ತೃಪ್ತಿಗಾಗಿ, ಅವಳು ಕವಿತಾಳೇ ಇರಬೇಕು;ಅಲ್ಲದಿದ್ದರೆ ಮತ್ಯಾರು-ಎಂದುಕೊಂಡೆ.ಬಿಳೇ ಸೀರೆ. ಬಿಳೇ ಕುಪ್ಪಸ, ಅರ್ಧ ಅರಳಿದ ದುಂಡುಮಲ್ಲಿಗೆಯ ದಂಡೆ, ಬಿಳೇ ಕರ್ಚೀಫ್–ಇವು ಕವಿತಾ. ಬೆಳದಿಂಗಳ ನಗೆ, ಇಬ್ಬನಿಯ ಮೇಲುಂದದ ಒಳಗಡೆ ಅರಳಿದ ಕೆಂಪು ಗುಲಾಬಿ ತುಟಿ...ಛೂ ಸಾಧ್ಯವೇ ಇಲ್ಲ! ಕೆಟ್ಟ ವಾಸನೆ-"ನಾವು ಈ ಕಡೆ ಬಂದಿದ್ದು ಇದೇ ಮೊದಲ ಸಲ. ವಾದಿರಾಜ ಮಠದ ಶಿಷ್ಯರು ನಾವು!" ಎಂದ ಗೃಹಸ್ಥ, ಬೈಲು ಸೀಮೆಯ ವೈಷ್ಣವ ಆಚಾರ್ಯನಿರಬೇಕು–ಮಲೆನಾಡು ತನ್ನ ದೇಶದ ಹೊರಗಿದೆ ಎಂಬಂತೆ ಧ್ವನಿ ಮಾಡಿದ. ಬಾಯಿಚಪಲದ ಆಚಾರ್ಯ, ಏನೂ ಹೇಳಿದರೆ ಇಲ್ಲಿ ಏನು ತಿಳಿದುಕೊಳ್ಳುತ್ತಾರೋ ಎಂಬ ಸಂಶಯದಲ್ಲಿ ಮಾತು ತಡೆಯಲು ಪ್ರಯತ್ನಿಸುತ್ತಿದ್ದ.

"ನೀವು ಪ್ರೊಫೆಸರರೋ?" ಎಂದ,

ಎರಡು ಮಾತು

ಬದುಕು

ಆದರ್ಶ, ಪರಿವರ್ತನೆ, ಕ್ರಾಂತಿ, ಶಾಂತಿ, ಉದ್ಧಾರ, ನೀತಿ, ಚಾರಿತ್ರ್ಯ, ಧರ್ಮ, ದೇವರು, ಪ್ರಕೃತಿ, ಸಂಬಂಧ— ಎಂಬ ತತ್ವಗಳು ಅರ್ಥ ಉಳಿಸಿಕೊಂಡಿವೆಯೆ?

ಸೋಲು, ನೋವು, ನಿರಾಶೆ, ಆತ್ಮಹತ್ಯೆ, ದುಗುಡ, ಪ್ರತಿಕ್ರಿಯೆ, ಸೇಡು, ಗತಿ, ದೈವ, ಹಣೆಬರಹಗಳೆಲ್ಲ ಅರ್ಥಹೀನ ಸರದಾಟಗಳಲ್ಲವೆ?

ಬದುಕು ಸ್ವಯಂಭು.
ಅಸ್ತಿತ್ವ ಅದರ ಕ್ರಿಯೆ,
ಅದು ವ್ಯಕ್ತಿ, ಅದೊಂದು-ಸದ್ದಿಲ್ಲದ ಎಚ್ಚರ.

ಸಾಹಿತ್ಯ

ಸಮಾಜಶಾಸ್ತ್ರಕ್ಕೂ ಅದರದೇ ಸ್ಥಾನವಿರಬಲ್ಲುದಾದರೆ,

– ಸಾಹಿತ್ಯ ಅದಕ್ಕಿಂತ ಕೀಳೆಂದು ನಾವು ಬಗೆಯುವದಿಲ್ಲವಾದರೆ ಅದನ್ನು ಹುಡುಗಾಟದಲ್ಲಿ ಕಾಣುವದಿಲ್ಲವಾದರೆ, ಸಾಹಿತ್ಯಕ್ಕೆ ಪ್ರತ್ಯೇಕ ಅಸ್ತಿತ್ವವಿರಲೇಬೇಕು.
ಆಗ— ತುಲನೆ.

ಅಸಹನೀಯ ಮತ್ತು ಅಸಭ್ಯ.

– ಲೇಖಕ

"ಆಗಬೇಕೆಂದು ಮಾಡಿದ್ದೆ!" ಎಂದೆ. ಹಾಗೆಂದರೇನು ಎಂಬಂತೆ ಮುಖ ನೋಡಿದ. ತಂದೆಯ ಬಲತೋಳಿನ ನೆಹರೂಶರ್ಟಿನ ಅಂಚಿನ ಮೇಲೆ, ಮೇಲ್ಗಡೆಯಿಂದ ಆ ಹುಡುಗಿ ಮುಖ ತಿರುಗಿಸಿ ನೋಡಿದಳು. 'ವಿಪರೀತ ಧಗೆ' ಉಟ್ಟ ಧೋತರವನ್ನು ಎತ್ತಲು ಹೋದಾಗ ಅದು ಚಪ್ಪಲಿಯ ತುದಿಗೆ ಸಿಕ್ಕಿದ್ದನ್ನು ಕಂಡು, ಎಳೆದು, ಬಿಡಿಸಿ, ಬಲವಾಗಿ ಮುಖ ಉಜ್ಜಿಕೊಳ್ಳುತ್ತಿರುವಂತೆಯೇ 'ತಗೋ!' ಎಂದು ಮಗಳು ತಂದೆಗೆ ಕರ್ಚೀಫ್ ಕೊಡ ಹೋದಳು. 'ಅದೆಲ್ಲಿ ನಮಗೆ ಸಾಲುತ್ತದೆ? ಧೋತರವೇ ಇದೆ' ಎಂದು ಮತ್ತೊಮ್ಮೆ ಬೆವರು ಒರೆಸಿಕೊಳ್ಳುತ್ತಾ, 'ನಮ್ಮೂರು ನಮಗೆ ಚೆಂದ. ಏನಂತೀರಿ?' ಎಂದು ಹಲ್ಲುಕಿಸಿದರು. 'ಇರಬೇಕು' ಎಂದೆನಾದರೂ ಊರಿಗೆ ಹೆದರಿ ಓಡಿಹೋಗುತ್ತಿರುವ ನನಗೆ, 'ಸರಿ' ಎಂದು ತೋರಲಿಲ್ಲ. ಒಂದಿಷ್ಟು–ಒಂದು ಮುಷ್ಟಿ–ಸಾಮಾನ್ಯ ಹೇಳಿಕೆಗಳಿಂದ ಬದುಕಿದ ಆ ಗೃಹಸ್ಥನೊಂದಿಗೆ ಕ್ಷಣಕ್ಷಣಕ್ಕೂ ಅಪರಿಚಿತತೆ ಹೆಚ್ಚಾಗುತ್ತ ಹೋಗುತ್ತಿತ್ತು, ಮಾತನಾಡದ ಆ ಹುಡುಗಿ ಹೆಚ್ಚು ಪರಿಚಿತಳಾಗುತ್ತ ನಡೆದಿದ್ದಳು. ಅವಳು, ಕವಿತಾ ಇರಲಿಕ್ಕಿಲ್ಲ–ಇರಲು ಶಕ್ಯವೂ ಇಲ್ಲ– ಅಲ್ಲಿ ಅವಳ ಮದುವೆ ನಡೆದಿದೆ. ಆದರೆ 'ನೀನು ಕವಿತಳೇ?' ಎಂದು ಕೇಳಿದರೇನು? ಕೇಳಿ ಬಿಡಲೇ–ಕೈ ಹಿಡಿದು ಅಮುಕಿ, ಕಣ್ಣು ತುಟಿಗಳನ್ನು ನೋಡಿ ಸುಮ್ಮನಾಗಿ ಬಿಡಲೇ? ಊರಿನಲ್ಲಿ ಶಹನಾಯಿ ಕೂಗಿಕೊಳ್ಳುತ್ತಿದ್ದುದು ಇಷ್ಟು ದೂರವೂ ಸ್ಪಷ್ಟವಾಗಿ, ಕಿವಿಯ ಒಳಗಡೆ ಸೇರಿಕೊಂಡ ಹುಳುವಿನಂತೆ, ತಲೆ ಕುತ್ತಿಗೆಯಿಂದ ಕಿತ್ತುಹೋಗುವಂತೆ ಝಾಡಿಸಿದರೂ, ಕೇಳಿಸುತ್ತಿತ್ತು! ಎಂಬತ್ತೈದು ಕಿಲೋಮೀಟರ್ ಕಲ್ಲು ಕಣ್ಣಿಗೆ ಬಿದ್ದಂತೆ–"ಸೋದರಮಾವ ಸೊಸೆಯನ್ನು ಮಂಟಪಕ್ಕೆ ಕರೆದು ತಂದಿರಬೇಕು; ತಲೆ ತುಂಬ ಬಂಗಾರದ ಕೇದಿಗೆ ಮುಡಿದು, ಮುಖ ಕೆಳಗೆಮಾಡಿ ನಿಂತು ಲೆಕ್ಕ ಮಾಡಿ ಹೆಜ್ಜೆಯಿಡುತ್ತ ಪುರೋಹಿತರ ಬಲಗಡೆಗೆ ಬಂದು ಬಲ ಮೊಣಕಾಲ ಮೇಲೆ ತಲೆ ಹೇರಿ ಕುಳಿತಿರಬೇಕು!" "ಹಾಯ್ ಕಾಲು ಸ್ವಂತದ್ರೀ..." ಕುಳಿತಿದ್ದವರ ಕಾಲನು ನಿಂತ ಪ್ಯಾಸೆಂಜರರೊಬ್ಬರು ಬಲವಾಗಿ ತುಳಿದಿರಬೇಕು. ಅದು ಆಕಸ್ಮಿಕ: ನೋವು ಮಾತ್ರ ಖಂಡಿತ......! ಬಿಡ್ರೀ–ಹಾಗೆ ಎಲ್ಲರಿಗೂ ಆಗ್ತದೆ. ಆದರೂ ಸ್ವಲ್ಪ ನೋಡಿಕೊಂಡು ನಿಂತುಕೊಳ್ಳಿ ಎಂದು ಕುಳಿತವರೊಬ್ಬರ–ಇಬ್ಬರ–ಇದ್ದವರೆಲ್ಲರ ಅಭಿಪ್ರಾಯ;, ಕೂಗು– 'ನೆಂಟರಿಷ್ಟರು ಭರಪೂರ ಬಂದಿರಬೇಕು. ಯಾರಿಗೂ ಬಿಡುವಿಲ್ಲ: ಹಳೆಯ ಹೆಂಗಸರು ತಮ್ಮ ಹಳೇ ಅನುಭವವನ್ನು ಹೇಳಿಕೊಳ್ಳುತ್ತಿದ್ದಂತೆ ಕವಿತಾ!...ಕವಿತಾಳ ಕೊರಳಿಗೆ ಮಂಗಳಸೂತ್ರ ಕಟ್ಟುತ್ತಿರಬೇಕು..."ಶ್ವಾಸಕಟ್ಟಿದಂತಾಗಿದೇರೀ, ಸ್ವಲ್ಪ ಗ್ಲಾಸ್ ಸರಸ್ರೀ..." ಎಂದು ಪ್ಯಾಸೆಂಜರ ಒಬ್ಬ ಕೂಗಿದ. "ಬಿಸಿಲ್ಬರ್‍ತದ್ರೀ...!" ಎಂದು ತನ್ನ ಬದಿಯ ಗ್ಲಾಸ್ ತನ್ನ ಖರೀದಿ ಅನ್ನುವಂತೆ ಸೊಟ್ಟ ಮುಖಮಾಡಿದ ಅವರಷ್ಟೇ ದೊಡ್ಡ ದಾಗಿ ಒದರಿದ–"ಗ್ಲಾಸ್ ಹಾಕಿದರೆ ಬಿಸಿಲು ಬರುವದಿಲ್ಲೇನ್ರೀ?" ಎಂದು ಮೃದುವಾಗಿ ನುಡಿದು ಮೊದಲನೆಯವನ ಪಕ್ಷವಹಿಸಿದ ಮತ್ತೊಬ್ಬ 'ಅದು ಅವರಿಗೆ ತಿಳಿಯೋದಿಲ್ಲೇನ್ರಿ?' ಎಂದ ಮಂಗುದೊಬ್ಬ ಎರಡನೆಯವನ ವಕೀಲಕಿ ಮಾಡಿದ..."ಮಂಗಳಪಟ ಬದುಕಿನಿಂದ ವಿವಾಹದ ಗಾಳಿಗೆ ಹಾರಿ ವಧೂವರರನ್ನು ನಾಚಿಕೆಯ ಕೆಲಸಕ್ಕೆ ಬಿಟ್ಟು ಹೋಯಿತು: ಪನಿವಾರ ಪನ್ನೀರಿನಿಂದ ತೃಪ್ತರಾಗದ ಬಂಧುಗಳು ಊಟದ ಚಪ್ಪರದ ಬಳಿಗೆ ಸುಳಿಯತೊಡಗಿದಾಗ ಅಡಿಗೆಭಟ್ಟ ಕೂದಲು ಮುಸುಕಿದ ಎದೆಯ ಬೆವ

ರನ್ನು ಒರೆಸಿಕೊಳ್ಳುತ್ತ, ಬೆಂಕಿ, ಮುಂದೆ ಮಾಡುತ್ತಿದ್ದೆ. ಕವಳದ ಬಟ್ಟಲಲ್ಲಿದ್ದ ತಂಬಾಕು ಅಡಿಕೆಗಳು ಕ್ಷಣ ಕ್ಷಣಕ್ಕೆ ಗಾಯಬ್ ಆಗುತ್ತಿರುವದನ್ನು ಕಂಡು, ಮದುಮಗಳ ಚಿಕ್ಕಪ್ಪ, "ಹ್ವಾಯ್ ಭಟ್ರೇ ಇಲ್ಲೇ ಬೇಕಾದಷ್ಟು ತಿನ್ನಿ; ಗಂಟಿಗೆ ಸೇರಿಸ್ಬೇಡಿ"ಎಂದು ಗಂಟನ್ನು ಸವರಿಕೊಳ್ಳುವ ಗೋಕರ್ಣ ಭಟ್ಟರನ್ನು ತಡೆದು, ನಗೆಯಾಡಿ, ಮತ್ತೆರಡು ಎಸಳು ತಂಬಾಕು ಹತ್ತೆಂಟು ಅಡಿಕೆಗಳನ್ನು ಬಟ್ಟಲಿಗೆ ಚೆಲ್ಲಿ ಒಳಗೆ ಹೋಗುತ್ತಿದ್ದಂತೆ, ಅವಳ ಚಿಕ್ಕ ತಡೆದು, "ನಮ್ಮ ಕವೀ ರತಿ ಹಾಂಗೆ ಕಾಣ್ತಾಳಲ್ವೇ! ಮದುಮಗ ಥೇಟ್ ಮನ್ಮಥ!" ಎಂದು ಗಂಡನಿಗೆ ಹೇಳುತ್ತಿದ್ದಂತೆ

"ಹಾಗಾದ್ರೆ ಬೇಡ ಬಿಡು" ಎಂದು ಗಾಬರಿಯಿಂದ ನುಡಿದಿದ್ದಳು.

"ಇಲ್ಲ. ಸುಳೀ ಹೇಳ್ದೆ!" ಎಂದು ನಾನು ನಕ್ಕಾಗ, "ನನಗಿಂತ ನಿನಗೆ ಸಿಗರೇಟು ಹೆಚ್ಚೇ?" ಎಂದು ಸುಡುವ ನನ್ನ ಸಿಗರೇಟಿಗೆ ಕೈ ಹಾಕಿದ್ದಳು.

"ಅದೂ ಹೆಚ್ಚು, ನೀನೂ ಹೆಚ್ಚು. ಆದರೆ ನೀನು ನನ್ನ ಹಲ್ಲನ್ನು ನಿತ್ಯ ತಿಕ್ಕಿ ಕೊಡುವದಾದ್ರೆ...!" ಎಂದು ಅಜ್ಜನ ನೆನಪು-ಮಾಡಿಕೊಂಡೆ. "ಹೋ! ಬೇಕಾದ ಹಾಗೆ ಈ ಬಾಯಿ ನನ್ನದೇ ಅಲ್ಲವೇ?" ಎಂದು ತುಟಿಗೆ ಬೆರಳಿಟ್ಟು ನಕ್ಕು ಮುತ್ತಿಟ್ಟು ಎದೆಗೊರಗಿದಳು.

ಅಮವಾಸ್ಯೆಯ ಮೊದಲ ದಿನ-ಇಂದಿಗೆ ಸರಿಯಾಗಿ ಒಂದು ವರ್ಷದ ಹಿಂದೆ ಹೋದಾಗ... ಮುಳ್ಳು ಕಲ್ಲುಗಳಲ್ಲಿ ವನವಾಸದ ಸೀತೆಯಂತೆ ನನ್ನ ಕೈ ಹಿಡಿದು ನಡೆದಿದ್ದಳು. ಅಮ್ಮ 'ಕವೀ' ಎಂದು ಕೂಗಿದರೂ ಒಂದು ಕ್ಷಣ ನಿಲ್ಲದೇ ನನ್ನನ್ನು ಓಡಿಸಿಕೊಂಡು ಗುಡ್ಡ ತಗ್ಗೆಲ್ಲ ಗಮನಿಸದೇ ಮುಗ್ಗಿದಳು. 'ಇದೇನು, ಇದೇನು? "ಅಯ್ಯೋ? ಹುತ್ತ ಬೆಳೆದಿದೆಯಲ್ಲ! ಮುಳ್ಳು ಕಂಟಿ ಹೆದರಿಕೆ! ಅಮಂಗಳ!" "ನಾಲ್ಕು ನೂರು ವರ್ಷಗಳ ಹೆಣ ಇಲ್ಲಿ ಪ್ರೇತವಾಗಿರಲಿಕ್ಕಿಲ್ಲವೇ? ನನಗಂತೂ ಭಯ"ವೆಂದು ಗದ್ದಿಗೇಮಠದ ಒಣ ಕೋಣೆಯಲ್ಲಿ ನನ್ನನ್ನು ಹಿಡಿದುಕೊಂಡು ಕಂಗಾಲ ಆಗಿ ನಿಂತಿರ



ಭಟ್ಟರು ಕರೆದಾಗ ಮಂಟಪದ ಹತ್ತಿರ ಓಡಿ" ಮಂಗಳಾರತಿ ತಂದೂ ನೀವ್ ಬೆಳಗಿರೆ ಕಂದರ್ಪಜನಕ ಶ್ರೀರಂಗನಿಗೇ ಎಂದು ಹಾಡುತ್ತ ಆರತಿ ಬಟ್ಟಲಿಗೆ ಕೈ ಹಾಕಿದಳು... "ಎಷ್ಟು ಕವಳಾ ಹಾಕ್ತಿರ್ರೀ- ನುಂಗಿಯಾಡ್ರೂ ನುಂಗಿ... ಚರ್ರ್ ಎಂದು ಹಾಗೆ ಉಗಿದ್ರೆ ಹ್ಯಾಂಗರೀ!" ಎಂದು ತಮ್ಮ ಶರ್ಟಿನ ಮೇಲೆ, ಮುಂದಿನ ಸೀಟಿನಲ್ಲಿ ಕುಳಿತವನು ತಲೆ ಹೊರಗೆ ಹಾಕಿ ಉಗುಳಿದಾಗ ಬಿದ್ದ ಕೆಂಪುರಸವನ್ನು ಮಗಳ ಕೈಯ ಕರ್ಚೀಫ್ ತೆಗೆದು ಉದ್ದಿಕೊಳ್ಳುತ್ತ ಗೊಣ-ಗುಟ್ಟಿದ ಆ ಗೃಹಸ್ಥ. "ರಾಜಾ ಈ ಸಿಗರೇಟು ಬಿಟ್ಟು ಕವಳಾನಾದ್ರೂ ಹಾಕು" ಎಂದಿದ್ದಳು ಕವಿತಾ, ಎಷ್ಟೋ ಬಾರಿ.

"ನನ್ನಪ್ಪ ಅದರಿಂದಲೇ ಸತ್ರು." ಎಂದಿದ್ದೆ,

"ಈ ಬಸ್ಸಿಗೆ ಸ್ಟ್ಯಾಪ್ ಇದ್ದಾಂಗೆ ಕಾಣಸುವದಿಲ್ಲ." ಹಿಂದಿನ ಸೀಟಿನ ವೃದ್ಧನ ಮಾತು. 'ಎಕ್ಸ್‌ಪ್ರೆಸ್‌ರೀ' ಉತ್ತರ ನಾಲ್ಕು ಮಂದಿಯಿಂದ. "ಪಂಕ್ಚರ್ ಆದಲ್ಲಿ ನಿಲ್ತದ ಬಿಡ್ರೀ!" "ಅದೇ ಆಶ್ಚರ್ಯ. ನೂರು ಕಿಲೋ ಮೀಟರ ಶಾಬೀತ ಬಂತಲ್ಲ-ಗವರ್ನಮೆಂಟ್ ಬಸ್ಸು, ಅದು ಹೇಳ್ರೀ!" ನಗು-ನಾಲ್ಕು ಮಂದಿಯ ಕಡೆಯಿಂದ. "ಗುರು ಸಾರ್ವಭೌಮ ವಾದಿರಾಜರು!" ಎಂದ ಆ ಗೃಹಸ್ಥ..."ಎಷ್ಟೆಲ್ಲ ಹಾಳಾಗಿ ಹೋಗಿದೇರೀ ಆ ಗದ್ದಿಗೆ ಮಠ, ಮುತ್ತಿನ ಕೆರೆ, ಹುಣಸೇಹೊಂಡ-ಎಲ್ಲಾ ಅಡವಿ-ಮುರುಕಲು!" ಹುಶ್! ಎಂದು ನಿಟ್ಟುಸಿರೆಳೆದು ಮುಖ ಒರೆಸಿಕೊಂಡಾಗ ಆ ಮನುಷ್ಯ ಗಂಭೀರನಾಗಿದ್ದ... "ಮುತ್ತಿನ ಕೆರೆ!"-ನಾನು ಕವಿತಾ, ಅವರಮ್ಮ, ನೆರೆಮನೆ ಸುಶೀ- ಹೋದ ಬೇಸಿಗೇಲಿ ಕಾರ್ತೀಕ

ಲಿಲ್ಲವೇ... ಮುಚ್ಚಂಜೆ-ಮಬ್ಬು-ಭೂತದ ಭಯ-ಕರಾಳ ಇತಿಹಾಸ-ಬಾವಲ್ಕಿ ಕೆಟ್ಟ ವಾಸನೆ... "ರಾಜೂ, ಹೋಗುವ ಏಳು, ನಾನೆಂದಿಗೂ ಇಂಥಲ್ಲಿಗೆ ಬರುವದಿಲ್ಲ..." ಎಂದು ಕೈ ಹಿಡಿದು ಎಳೆದುಕೊಂಡು ಎಡವುತ್ತ ಗುಡ್ಡ ಇಳಿದು ಓಡಿ ಬಂದಿದ್ದಳು. ಹುಣಸೇ ಹೊಂಡದ ಮೇಲ್ಗಡೆ ವೇಣುಗೋಪಾಲ ದೇವಸ್ಥಾನದ ಮುರಿದು ಬಿದ್ದ ಕಟ್ಟೆಯ ಮೇಲೆ ಕುಳಿತಾಗ, ಬಲಗಡೆಯ ದಣವೆಯಿಂದ ಹಗಡೆಯೊಬ್ಬ ಜೋಲಿ ಹೊಡೆಯುತ್ತ ನಮ್ಮ ಬದಿಗೆ ಬಂದಾಗ ನನ್ನ ಕೈ ಹಿಡಿದು ಎಳೆದು ಓಡಿ ಕಾರಿನೊಳಕ್ಕೆ ಬಂದು ಕುಳಿತ ಕವಿತಾ... ಕವಿತಾ!... ಕುಳಿತ ಸೀಟಿನಿಂದ ಕೆಳಗೆ ಬಿದ್ದಂತಾದಾಗ "ಸ್ವಲ್ಪ ಈ ಕಡೆ ಸರಿದು ಕುಳಿತುಕೊಳ್ಳಿ -ಏನೂ ತಪ್ಪಿಲ್ಲ-ತಂಗೀ

ಸ್ವಲ್ಪ ಆ ಕಡೆಗೆ ಜರುಗಿಕೋ" ಎಂದ ಆ ಗೃಹಸ್ಥನ ಕಾಲುಗಳನ್ನು ಹಿಡಿದು ನಮಸ್ಕರಿಸಲೇ ಎಂದು ಕೊಳ್ಳುತ್ತಿರುವಾಗ, "ನಾವು ಮಠಕ್ಕೆ ಹೋಗಿದ್ದು–ಹಂಡೆ ಆಚಾರ್ಯರು ಯಾವುದೋ ಗಂಡಿನ ಪ್ರಸ್ತಾಪ ಮಾಡಿದ್ದಕ್ಕೆ" ಎನ್ನುತ್ತಲೇ "ತಮ್ಮ ಜಾತಿ ಕೇಳಬಹುದೇ?" ಎಂದು ಕೇಳಿಯೇ ಬಿಟ್ಟ. "ಕೇಳಿ ಹೇಳುವದೂ ಬಿಡುವದೂ ನನಗೆ ಬಿಟ್ಟಿಲ್ಲವೇ?" ಎಂದು ಸುಮ್ಮನಾದೆನಾದರೂ ಹೊಟ್ಟೆ ತಳಮಳಿಸಿ ವಾಕರಿಕೆ ಬರುವಂತೆ ಆಯಿತು. ಬಸ್ಸು ಒದರುತ್ತ–ಉರಿಬಿಸಿಲಿನಲ್ಲಿ ನಿರ್ಲಿಪ್ತ ಸಂನ್ಯಾಸಿಯಂತೆ ಸಾಗಿತ್ತು. ಈ ಜಗತ್ತನ್ನು ನಡೆಯಿಸುವವನೂ ಮೌನವಾಗಿರುವವನು ಎಂದು ತಿಳಿಯಲಾದ ಭಗವಂತನಂತೆ ಡ್ರೈವರ್ ಯಾರ ಹಂಗೂ ಇಲ್ಲದೇ ಎಕ್ಸಿಲೇಟರ್ ಒತ್ತುತ್ತಿದ್ದ– ಸ್ಪೀಡೋಮೀಟರ್ ಒಡೆದು ಬೀಳುವಷ್ಟು ಜೋರಾಗಿ ಗಾಡಿ ಸಾಗುತ್ತಿದ್ದಾಗಲೇ ಬೆವರು ಧಗೆ ಹಸಿವು ದಣಿವು... ಎಲ್ಲಾ ಪ್ಯಾಸೆಂಜರರೂ ತೂಕಡಿಸತೊಡಗಿದರು. ನಿಂತವರೂ ಕುಳಿತವರೂ ಎಲ್ಲ ಸೇರಿ ಜೀಕು ಹೊಡೆದರು. ನಿಶ್ಚಿಂತ ನಿರ್ಲಿಪ್ತವಾದ ಜಗತ್ತು... ನಾನೊಬ್ಬ–ನನ್ನೊಳಗೆ ಕವಿತಾ–ಅಪ್ಪಿ ಅಪ್ಪಿ ನೀರಾಗುವಂತೆ, ಕಾದು ಉಗಿಯಾಗುವಂತೆ, ಉಗಿಯಾಗಿ ಕಾಣೆಯಾಗುವಂತೆ... ಹೊಟ್ಟೆ ಚಪ್ಪಟೆಯಾಗಿ ಹಸಿವು ಹರಿದಾಡಿದಂತಾಗಿ ಬಸ್ಸು, ಕವಿತಾ ಎಲ್ಲಾ ಒಂದು ಕ್ಷಣ ಮರವೆಯಾಗಿ, ಆ ಗೃಹಸ್ಥನ ಕಾಲಬುಡದಲ್ಲಿರುವ ಚೀಲದಲ್ಲಿಯ ಮೋಸಂಬಿ ಹಣ್ಣು ನೋಡಿದೆ. ಇವರೆಲ್ಲ ಸುಖಿಗಳು. ಭಕ್ತಿ ಪರವಶರಾದ ರಾಸಕ್ರೀಡಾ ರಸಿಕರಂತೆ ಬಸ್ಸಿಗೆ ಬಸ್ಸೇ ಗುಂಗಿನಲ್ಲಿದ್ದರೂ ಆ ಹುಡುಗಿ ಮಾತ್ರ ಕಣ್ಣು ತೆರೆದೇ ಕುಳಿತಿದ್ದಳು. ಆ ಗೃಹಸ್ಥ ನನ್ನ ಭುಜದ ಮೇಲೆ ತಲೆಯಿಟ್ಟು ಗೊರಕೆ ಹೊಡೆಯುತ್ತಿದ್ದ. ಎಷ್ಟು ಬಾರಿ ಕರೆದರೂ ಎಚ್ಚರವಾಗದಂತೆ, ಅಲ್ಲಿ ನನ್ನನ್ನು ಕೂಡ್ರಿಸಿಕೊಂಡದ್ದು ಇದೇ ಉದ್ದೇಶಕ್ಕಾಗಿಯೇ ಎಂಬಂತೆ ಅಧಿಕಾರದಿಂದ ನನ್ನ ತೋಳನ್ನು ಸೋಫಾ ಮಾಡಿಕೊಂಡು ನಿದ್ದೆ ಹೊಡೆಯುತ್ತಿದ್ದ. ಒಮ್ಮೆ ಕೈ ಝಾಡಿಸಿ ಆ ಹಳೇ ತಲೆಯನ್ನು ಅತ್ತ ಬಿಸಾಕಲೇ ಎಂದುಕೊಂಡೆ. "ದರಿದ್ರ ಜನ' ಎಚ್ಚರವಿಲ್ಲದವರು; ಕಂಡಲ್ಲಿ ವಿಶ್ರಾಂತಿ ಪಡೆಯುವವರು!" ಎಂದೆನಿಸಿತು. "ಕ್ರೀ...ಕ್" ಡ್ರೈವರ್ ಬ್ರೇಕ್ ಹೊಡೆದಾಗ ಒಬ್ಬರ ಮೇಲೊಬ್ಬರು ಕವುಚಿ ಬಿದ್ದರು. ಎದುರು ಬಂದ ಕತ್ತೆಯನ್ನು ತಪ್ಪಿಸ ಹೋಗಿ ದಾರಿಹೋಕನ ಬದಿಗೆ ಸ್ಟೇರಿಂಗ್ ತಿರುಗಿಸಿದಾಗ ಆತ ಇನ್ನೇನು ಗಾಲಿಗೆ ಸಿಕ್ಕಿಬೀಳುವವನಿದ್ದ. "ಅವನಿಗಿಂತ ಈ ಕತ್ತೆ ದೊಡ್ಡದು ಈ ಬ್ರಹ್ಮನಿಗೆ," "ಅಪ್ಪಾ, ಪೆಟ್ಟಾಯ್ತಾ" ಎದುರಿನ ಸೀಟಿನ ಕಬ್ಬಿಣದಪಟ್ಟಿಗೆ ಮುಖ ಜಪ್ಪಿಸಿಕೊಂಡ ತಂದೆಯನ್ನು ವಿಚಾರಿಸಿದರೆ–"ಸ್ವಲ್ಪ ಮೇಲ್ಗಡೆ; ಮುಂದಿನ ಹಲ್ಲಿಗೇ ಪೆಟ್ಟು ಬಿತ್ತು!" ಎಂದ. "ಏನಾಯಿತು? ಹಾಗೇಕೆ ಬ್ರೇಕ್ ಹಾಕಿದ?" ಎಂದಿದ್ದು. ತನ್ನಂತೆ ಜಗತ್ತು ಮತ್ತು ಡ್ರೈವರ್ ನಿದ್ದೆ ಹೋಗಿದ್ದರು–ಬ್ರೇಕ್ ಹಾಕಿದ್ದು ಕೇವಲ ಆಧಿಕ ಪ್ರಸಂಗವೆಂದುಕೊಂಡಂತೆ ಕಂಡಿತು. ಎಚ್ಚರವಾದಾಗ ಒಂದಿಷ್ಟು ಮೂತ್ರ ಸುರಿದು ಬಂದರಾಗುತ್ತಿತ್ತೆಂದುಕೊಂಡು "ಏನು ಬಸ್ಸು ಎಲ್ಲೆಲ್ಲಿಯೂ ನಿಲ್ಲುವುದಿಲ್ಲವಲ್ಲ" ಎಂದ ತಂದೆಯನ್ನು "ಮೋಸಂಬಿ ಎಲ್ಲಿ?" ಎಂದು ವಿಚಾರಿಸಿದಾಗ, ಸೀಟಿನ ಕೆಳಗಡೆ ಸಿಕ್ಕಿಕೊಂಡ ಕಿಟ್ ಅನ್ನು ಜಗ್ಗಿ ಹೊರ ತೆಗೆದು ಅರ್ಧ ಒದ್ದೆ–ಒಂದಿಷ್ಟು ಮಣ್ಣಾಗಿರುವ ವಸ್ತ್ರಗಳೊಳಗಿಂದ ಒಂದೆರಡು ಹಣ್ಣನ್ನು ಆರಿಸಿ ಮಗಳ ಕೈಗಿತ್ತರು.ಸಿಪ್ಪೆಯ ಸೊನೆಯ ವಾಸನೆ ಹೊಸ ಅನುಭವವನ್ನು ಕೊಡುತ್ತಿತ್ತು; ಸುತ್ತಲಿದ್ದವರೆಲ್ಲ ಎಚ್ಚರವಾದುದು ನನಗೆ ಅಡಚಣೆಯಾಗಿತ್ತು. "ಇನ್ನೆಷ್ಟು ದೂರ? ಡ್ರೈವರ್ ಬಹಳ ಚುರುಕು–ಇಲ್ಲವಾದರೆ ಆ ಕತ್ತೆ ಅಥವಾ ಅಂವಾ ಸತ್ತು ಹೋಗ್ತಿದ್ರು!" ಎಂದು ಸರ್ಟಿಫಿಕೇಟ ಕೊಡುತ್ತ ಹೀಗೆಯೇ ಜೀವನದಲ್ಲಿ ತಮ್ಮನ್ನು ಸುರಕ್ಷಿತವಾಗಿ ಯಾರಾದರೂ ನಡೆಸಿಕೊಂಡು ಹೋದರಾಗದೇ? ತಾವೆಲ್ಲ ನಿಶ್ಚಿಂತೆಯಲ್ಲಿ ಗೊರಕೆ ಹೊಡೆಯುತ್ತಿದ್ದೆವಲ್ಲ ಎಂಬರ್ಥದಲ್ಲಿ ಮಾತನಾಡುತ್ತ ಇರುವ ಶಕ್ತಿಯನ್ನೆಲ್ಲ ಹಾಕಿದರೂ ತೆರೆಯಲು ಬಾರದ ಥರ್ಮಾಸದ ಮುಚ್ಚಳವನ್ನು ಬಿಳಿಯ ಧಾಂಡಿಗನೊಬ್ಬನ ಸಹಾಯ ತೆಗೆದುಕೊಂಡು ತೆಗೆಯಿಸಿ, ನೀರನ್ನು ಅವನಿಗೂ ಕೇಳದೇ ಗಂಟಲಿಗೆ ಗಟ–ಗಟನೇ ಎರೆಸಿ, ಸಾಬೀತ ಮುಚ್ಚಳ ಹಾಕಿ ಬದಿಗಿಟ್ಟು ಇದ್ದುದರಲ್ಲಿಯೇ ಸುಖಾಸೀನರಾಗಿ ಕಣ್ಣು ಮುಚ್ಚತೊಡಗಿದವರು...ಹಾಗೆಯೇ ಬಸ್ಸಿನ ಹೆಂಗಸರ ಗಂಡಸರ ಮಾತಿನ ಆಧಾರದ ಮೇಲೆ ಯಾವ ಅಪಘಾತವೂ ಸಂಭವಿಸಲಿಲ್ಲವೆಂಬುದನ್ನು ಖಾತ್ರಿ ಮಾಡಿಕೊಂಡು ಕಣ್ಣು ಮುಚ್ಚಿ ಆಗಲೇ ಗೊರಕೆ ಹೊಡೆಯತೊಡಗಿದರು... ಹೆಚ್ಚು ಸುಖಿಗಳು ಹೆಚ್ಚು ನಿಶ್ಚಿಂತರು ಹೆಚ್ಚು 'ಹೊಣೆರಹಿತರು'. ಬಿಳೀ ಚರ್ಮ, ಮೆತ್ತನ್ನ ಮೈ! ಚಂಚಲ ಕಣ್ಣುಗಳು ಮುಂಗುರುಳುರುಳುವ ಚಂದಿರವದನ ಒದ್ದೆಯಾದ ಕೆಂಪು ತುಟಿಗಳು! ಅವಳು ಕವಿತಾ ಕವಿತಾ! ಬಳಸಿಕೊಳು ವ ನೀಳದೋಳುಗಳು! ಸ್ವರ್ಗತುಂಬಿದ ಆ ಎರಡು ಎದೆಗಳು! ಅವಳು ಕವಿತಾ ಕವಿತಾ! ಕವಿತಾಽ ಕವಿತಾಽಽ ಕವಿತಾಃಽಽ...ಕೂಗಿ ಬಿಡಲೇ? ಕೂಗಿ ಬಿಡುತ್ತೇನೆ. ಬಸ್ಸು ಹಾರಿ ಓಡಿಹೋಗುತ್ತೇನೆ; ಮಂಟಪದಿಂದ ಎಳೆದು ತರುತ್ತೇನೆ; ಹೆಗಲ ಮೇಲೆ ಹೊತ್ತುಕೊಂಡು, ಕೆರೆ, ದರಿ, ಹಳ–ಕೊಳ ಗಳೆನ್ನದೇ ಓಡುತ್ತೇನೆ. ಹಸಿರು ಹುಲ್ಲಮೇಲೆ ಮರದ ಕೆಳಗೆ ತೊಡೆಯ ಮೇಲೆ ಕೂಡ್ರಿಸಿಕೊಂಡು ಮೆಲ್ಲಗೆ ಮುಖವೆತ್ತಿ ಮುತ್ತಿಡುತ್ತೇನೆ! ಏನು ಮಾಡಿ ಬಿಡುತ್ತಿದ್ದೆಯಲ್ಲ–ಇನ್ನೊಂದು ಕ್ಷಣಕ್ಕೆ ನನ್ನ ಬಿಟ್ಟು ಹೋಗಿ ಬಿಡುತ್ತಿದ್ದೆಯಲ್ಲ–ನೀನು ಮೋಸಗಾರ್ತಿ. ನೀನು ಪ್ರೇತ. ನೀನು ಕ್ರೂರಳು! ನಿನ್ನ ಗಂಟಲು ಒತ್ತುತ್ತೇನೆ. ನೀನು ಸಾಯುವವಳಿದ್ದರೂ, ಇಕೋ, ನನ್ನ ತೊಡೆ–ಅಲ್ಲೇ ಹೂವಾಗಿ ಬಿದ್ದಿರು! "........." ಅಯ್ಯೋ! ತೊಡೆಯ ಮೇಲೆ ಮಲಗಿಸಿಕೊಂಡು ನಿದ್ರೆ ಮಾಡಿದ್ದ ಮಗು ಸೀಟಿನ ಕೆಳಗೆ ಬಿದ್ದಾಗ ಕಿರುಚಿಕೊಂಡಿತು "ಥೋ... ಎಂಥ ಜನವೇ ನೀವು? ಅಷ್ಟೂ ಎಚ್ಚರಿಕೆ ಬೇಡವೇ?" ಗಂಡನು ಹೆಂಡತಿಗೆ ಬೈದ. ಮಗುವನ್ನು ಸಮಾಧಾನಪಡಿಸುವುದಕ್ಕಿಂತ ಉತ್ಸಾಹದಲ್ಲಿ ಹೆಂಡತಿಯನ್ನು ತರಾಟೆಗೆ ತೆಗೆದುಕೊಂಡ. ಮತ್ತೆಲ್ಲ ಶಾಂತ. ...ಮತ್ತೆ ನಿದ್ದೆ. ಬಸ್ಸು ಮಾತ್ರ ಮೊದಲಿನಂತೆ...ನಾನು ಹೇಡಿಯೇ ಇರಬೇಕು! ಇಲ್ಲವಾದರೆ ಓಡಿ ಏಕೆ ಬರುತ್ತಿದ್ದೆ? ಗಂಡಸಾದವನು ನಾಚಿಕೆ ಬಿಡಬೇಕು. ಬೇಡವಾದ ಬದುಕನ್ನು ಸಂಭ್ರಮದಲ್ಲಿ ಸ್ವಾಗತಿಸುತ್ತ ನಿಂತ...ಕವಿತಾ. ಕವಿತಾಃ ...ಗಟ್ಟಿಗಳು. ಮಂಗಳಾಭರಣದಲ್ಲಿ ಕಣ್ಣೀರು ಹನಿಸುವ ಕವಿತಾಃ...ಕವಿತಾ ಗಟ್ಟಿಗಳು. ಕಿಟಕಿಯ ಬಳಿ ನನ್ನ ಬಸ್ಸಿಗಿಂತ ಜೋರಾಗಿ ಬಂದು ನೋಡುತ್ತಿದ್ದಾಳೆ...ಅಲ್ಲಿ, ಆ ಗದ್ದೆ, ಆ ಮರದ ಸಾಲು, ಆಚೆ ಮೋಡದ ಬಳಿ ತೇಲಿ ಬಂದ ಮುಖ–ದೇಹವೇ ಇಲ್ಲ! ಕೈ ಹಾಕಿ ಒಳಗಡೆ ಎಳೆದು ಎದೆಯೊಳಗೆ ಹುಗಿಸಿಡುವಾ ಎಂದು ಕೈ...ಕೈ ಚಾಚಿದರೆ, ಕಿಟಕಿಯ ಬಳಿ ಆ ಹುಡುಗಿ ಕುಳಿತಿದ್ದಾಳೆ. ಬಿಸಿಲು ಕ್ಷಣ ಕ್ಷಣಕ್ಕೆ ತೀಕ್ಷ್ಣವಾಗುತ್ತಿದ್ದಂತೆ, ಸೂರ್ಯನನ್ನು ಕಿತ್ತು ಬಸ್ಸಿನೊಳಗೆ ತುರುಕಿ ಬಾಗಿಲು ಜಡಿದಂತೆ ಎದೆ ಮೈಯೆಲ್ಲ ಸುಟ್ಟುರಿಯುತ್ತಿತ್ತು; ದೇಹದ ತೇವಾಂಶವೆಲ್ಲ ಬೆವರಾಗಿ, ಆರಿ, ಚರ್ಮ ಶಿಥಿಲವಾಗಿ, ರಬ್ಬರಾಗಿ, ಒಣಗಿತ್ತು. ಮೈಯೋ! ಗಂಟಲೋ ಬದಿಯಲ್ಲಿ ಕುಳಿತ ಹುಡುಗಿ ಥರ್ಮಾಸನ್ನು ತೆಗೆದು ನಾಜೂಕಾಗಿ ನೀರು ಕುಡಿಯುವುದನ್ನು ಪಿಳಿ-ಪಿಳಿ ನೋಡುತ್ತ ಕುಳಿತು "ಕೇಳಲೇ? ಎಂದುಕೊಳು ತ್ತಿದ್ದಂತೆ ನಾಚಿಕೆಯಾಗಿ ಸಿಟ್ಟು ಬಂದು, "ಕೇಳುವದಿದ್ದರೆ ಕವಿತಾಳನ್ನೇ ಕೇಳಬಹುದಿತ್ತಲ್ಲ. ಎದ್ದೇಕೆ ಬಂದದ್ದು? ಈ ಬಸ್ಸನ್ನೇಕೆ ಏರಿದ್ದು? ನೀರಂತೆ ನೀರು! ದರಿದ್ರ! ಎನಿಸಿದಾಗ "ನೀರು ಬೇಕಾ?" ಎಂದು ಆ ಹುಡುಗಿ ಮೊದಲ ಮಾತಾಡಿದಳು. "ಬೇಡ" ಎಂದು ಒತ್ತಿ ಹೇಳಿ ಕಣ್ಣು ಕೆಕ್ಕರಿಸಿ ನೋಡಿದಾಗ ಗಾಬರಿಗೊಂಡವಳಂತೆ ತಲೆ ಕೆಳಗೆ ಮಾಡಿ, ಮುಚ್ಚಳವಿಕ್ಕಿ ಕೆಳಗಿಟ್ಟು ಕಿಟಕಿಯ ಹೊರಗಡೆ ದೇಹ ಒಗೆದವಳಂತೆ ಮುಖ ತಿರುಗಿಸಿದಳು.

ಬನಿಯನ್ನು ಹಾಕಿದ್ದೇ ತಪ್ಪಾಯಿತೆನ್ನುವಂತೆ ಎದೆಯ ಗುಂಡಿಗಳನ್ನೆಲ್ಲ ಬಿಚ್ಚಿ ಕುಳಿತರೂ ಗಾಳಿ ಎದೆಯನ್ನು ಸೋಂಕಲಿಲ್ಲ. ನನ ಎದೆಯನ್ನು ಕಂಡು ನನಗೇ ಪಶ್ಚಾತ್ತಾಪವೆನಿಸಿತು. ಹದಿನೆಂಟು ಮೊಳದ ನಿಸ್ತಾಂಬರ ಸೀರೆಯನ್ನುಟ್ಟು ಮೈಯನ್ನೆಲ್ಲ ಹೊದ್ದು ಎದೆಯಲ್ಲಿ ಉರಿ ಹೊಯ್ದುಕೊಂಡಂತೆ ಕವಿತಾ, ಕವಿತಾ ಬೆವರಿನಿಂದ ತೋಯ್ದಿರಬೇಕು. ಮನದ ಕಾಮವೆಲ್ಲ ಆರಿ, ಬಂದ ಬಂಧು–ಬಳಗದ ಗದ್ದಲ–ಗಡಬಡೆ, ಆರತಿ–ಆರೈಕೆಗಳನ್ನೆಲ್ಲ ತಲೆ ಒಡೆಯುವಂತೆ, ಬೆನ್ನೆಲುಬು ಮುರಿದು ಮುದ್ದೆಯಾಗುವಂತೆ ಭಾರವಾಗಿ ಹೇರಿಕೊಂಡಾಗ... ತಪ್ಪಿಸಿಕೊಂಡು ಕುಳಿತವರನ್ನೆಲ್ಲ ತುಳಿದು, ಬಸ್ಸಿನ ಸರಳು ಮುರಿದು ಗಾಜು, ಒಡೆದು ಓಡಲೇ ಈ ಬಸ್ಸಿಗಿಂತ ವೇಗವಾಗಿ–ಒತ್ತಿಬರುವ ಗಾಳಿಯನ್ನು ಒದೆದು... "ಆದರೂ ಸಾಧ್ಯವಿಲ್ಲ ನೋಡಿ. ಕರಾವಳಿ, ಮಲ್ನಾಡು ಬಸ್ಸಿನಲ್ಲಿ ಕುಳಿತವರಿಗಷ್ಟೇ" ಎಂದು ಹಿಂದಿನ ಸೀಟಿನಲ್ಲಿ ಆಶ್ಚರ್ಯಕರವಾಗಿ ಎಚ್ಚರವಿದ್ದ ಮುದಿಗೂಬೆಗಲ್ಲ ಗುಳಿಬಿದ್ದು ತಲೆಯಲ್ಲಿ ಒಣಹುಲ್ಲಿನ ಬಿಳಿಸಿವುಡು–ತುಂಬಿದವರು ಅಂದದ್ದೆಂದು ತೋರಿತು. "ಕವಳಕ್ಕಿದೆಯೇ? ನಾಲಗೆಯೆಲ್ಲ ಹಲಗೆಯಾಗಿದೆ" ಎಂದು ಬದಿಗಿದ್ದವರ ಸ್ನೇಹ ಬಯಸಿದಳು. ಬಸ್ಸು ನಿಂತಿತ್ತು. ಚಹ ಕುಡಿಯುವವರು ಕುಡಿದು ಬರಬಹುದೆಂದು ಕಂಡಕ್ಟರ್ ಪರ್ಮಿಶನ್ ಕೊಟ್ಟಾಗ ಎಚ್ಚರಗೊಂಡ ಪ್ಯಾಸೆಂಜರ್‌ರು ಒಬ್ಬೊಬ್ಬರಾಗಿ ಏಳತೊಡಗಿದರು. ಕುಳಿತಾಗ ಇದ್ದುದಕ್ಕಿಂತಲೂ ಅವರು ಏಳತೊಡಗಿದಾಗ ಕೆಟ್ಟ ಕೊಳಕು ವಾಸನೆ ಗಾಡಿಯೆಲ್ಲ ತುಂಬಿ ವಾಕರಿಕೆ... ಮದುವೆಯ ಚಪ್ಪರದಲ್ಲಿ ಗುಡಾರ ಮೇಲೆ ಬಂದ ಅತಿಥಿಗಳ ಚಪ್ಪಲಿ ಗುರುತು, ಸಕ್ಕರೆ ಬಟ್ಟಲ ಬಳಿ ಚೆಲ್ಲಿದ ನೀರು, ಎಲ್ಲೆಂದರಲ್ಲಿ ಹರಡಿಬಿದ್ದ ಎಲೆಯ ತುಂಡುಗಳು ಮಕ್ಕಳು ಉಚ್ಚೆ ಹೊಯ್ದು ತೋಯ್ದ ಜಮಖಾನದ ಮೇಲೆ ಬೀಗಿತ್ತಿ ಕುಳಿತು ತಣ್ಣಗೆನಿಸಿದಾಗ "ಛೇ!" ಎಂದು ಕುಕ್ಕರಗಾಲಿನಲ್ಲಿ ಕುಳಿತು, ಎಲೆಯ ಸೆರಗು ತೆಗೆದು, ನಾಲ್ಕು ಅಡಿಕೆಯ ಹೋಳು ಗಂಟಲಿಗೆ ಹೋಗುವಂತೆ ಬಾಯೊಳಗೆ ಒಗೆದುಕೊಂಡು "ಊಟಕ್ಕಾತು–ಈಗ ಆಗೇ ಹೋಯ್ತು–ಕೇಸರಿಭಾತಿನ ಹದ ಸ್ವಲ್ಪ ಹೆಚ್ಚು ಕಡಿಮೆ ಆಯಿತಂತೆ!" ಎಂದು ಊರ ಪಟೇಲರ ಮುಂದೆ ವಿಶ್ರಾಂತಿಯಲ್ಲಿ ಪ್ರಸ್ತಾಪ ಮಾಡಿ ಎದ್ದು, ಹೋಮ ಹಾಕಿದ ಮಧ್ಯದೊಳಗೆ ಹೋಗಿರಬೇಕು–ಕತ್ತಲೆ, ಹೊಗೆ; ಮಧ್ಯದಲ್ಲಿ ಕೆಂಪಗೆ ಉರಿಯುವ ಬೆಂಕಿ– ದೈತ್ಯನಂತೆ ಬೆಳೆದ ದುಂಡುಗಲ್ಲನಂತಿರುವ ಪುರೋಹಿತ ಮಧುಕೇಶ್ವರ

ಭಟ್ಟ, ಅಂಗೋಸ್ತ್ರ ಪಂಚೆ, ಒದ್ದೆಯಾಗುವಂತೆ ರೋಮ ಮಯ ಎದೆಯನ್ನು ಒರೆಸಿ ಹೊಗೆಗೆ ಸುರಿಯುವ ಸಿಂಬಳ ಉದ್ದಿ, ಬೆವರಿನ ಉಪ್ಪಿಗೆ ಬೆನ್ನು ತುರಿಸ ತೊಡಗಿದಾಗ ಬಗಲ ಕೂದಲು ಕಾಣುವಂತೆ ಎರಡೂ ಕೈಯೆತ್ತಿ ಅಂಗೋಸ್ತ್ರದಿಂದ ಬೆನ್ನನ್ನು ತಿಕ್ಕಿಕೊಳ್ಳು ತ್ತಾ, ಮಂತ್ರಹೇಳಿ ಕರ್ಮಾಂಗ ಸಾಂಗಗೊಳಿಸುತ್ತಿದ್ದಂತೆ ಬಲಗಾಲು ಮಡಚಿ, ಕೆನ್ನೆ ಹೇರಿಕೊಂಡು ಕುಳಿತ ಕವಿತಾಳ ಹಣೆಯಿಂದ ಬೆವರು ಸುರಿದು, ಉರಿಗೆ ಕಣ್ಣಿಂದ ನೀರು ಬಸಿದ– ಅದರಲ್ಲಿ ಹೊಗೆ ಹಾಯ್ದು ಅಗ್ನಿ ನಿರ್ಲಿಪ್ತವಾಗಿರುವಂತೆ–ಏಳಬೇಕೆಂದು ಅರ್ಧ ಎದ್ದಾಗ ಮರಗಟ್ಟಿ ಸ್ವಾಧೀನ ತಪ್ಪಿದ ಕಾಲನ್ನು ಚಿವುಟಿ ಅಲ್ಲಿಂದ ಒಮ್ಮೆ ಹೊರಬಿದ್ದರೆ ಸಾಕು ಎಂದು ಕೊಳ್ಳು ತ್ತಿರುವಾಗಲೇ... ಹೊರಬಿದ್ದು ಹೋದ ಪ್ಯಾಸೆಂಜರರು ಬಸ್ಸಿನ ಒಳ ನುಗ್ಗಿದ್ದನ್ನು ಕಂಡು–ನಿಶ್ಚಿಂತೆ ತಂದುಕೊಂಡು–ಕಾಲೆರಡನ್ನೂ ಕೈಯಿಂದ ಎತ್ತಿ ಬದಿಗಿಟ್ಟು, ಆಚೆ ಕುಳಿತುಕೊಳ್ಳುವ ಹುಡುಗಿ ಅವಳ ತಂದೆಗೆ ಸ್ಥಳ ಬಿಟ್ಟು–ಕೊಟ್ಟಾಗ, "ಓಹೋ! ನೀವು ಬರ್ಲೇ ಇಲ್ವೇ! ಬಂದ್ರೀ ಅಂತ ಮಾಡ್ದೆ!" ಎಂದ ಗೃಹಸ್ಥ ತೊಡೆ ಕಾಣುವಷ್ಟು ಎತ್ತರಕ್ಕೆ ಧೋತರ ಕೈಯಲ್ಲಿ ಹಿಡಿದು, ದಾಟಿ ತನ್ನ ಸ್ಥಳದಲ್ಲಿ ಕುಳಿತು, ತನ್ನ ಗಂಟುಗಳನ್ನೆಲ್ಲ ಸ್ವಾಭಾವಿಕವಾಗಿ ಒಮ್ಮೆ ಪರೀಕ್ಷಿಸಿ ".ಏನ್ ಉಪಯೋಗವಿಲ್ಲ ಚಾ! ಬಸ್ ಸ್ಟ್ಯಾಂಡ್–ಸ್ಟೇಶನ್ ಹೋಟೆಲುಗಳೆಲ್ಲ ಹಾಗೆಯೇ, ಹೇಗೂ ನಮಗೆ ಗಡಬಡೆ ಇರ್ತದಲ್ಲಾ, ಎಂಥದಾದರೂ ನಡೆಯುತ್ತದೆ ಎಂದುಕೊಳ್ಳು ತ್ತಾರೆ. ಬಿಲ್ಲೇನು ಕಡಿಮೆಯಿಲ್ಲ– ಇಪ್ಪತ್ತೈದು ಪೈಸೆ!" ಎಂದ, ಅದು ಗಂಟಲು ನೆನೆಸಿಕೊಂಡವರ ಮಾತು: ಒಣಗಿದವನಿಗೆ ಸಂಬಂಧವಿಲ್ಲ... ಮೌನಂ ಅರ್ಧ ಸಮ್ಮತಂ ಉಳಿದರ್ಧ ಸಮ್ಮತಿ ತಾವು ಕೊಡುತ್ತೇವೆ ಎಂದು ಕೊಳ್ಳು ತ್ತಾರೆ. ಅಪ್ಪಂದಿರು–ಅಮ್ಮಂದಿರು...ಕವಿತಾಳ ಅಭಿವ್ಯಕ್ತಿ ಅವಳ ಮೌನವೇ. ಅದೋ– ಕೇಳಿದವರ ಅರ್ಥ. ಅವಳ ಅರ್ಥ?– ಬಂಧು, ಬಳಗ, ಸಮಾಜ, ದರ್ಶನ ದೇವರು ನೀತಿ ಎಲ್ಲಾ ಆಕಾಶ ಪಾತಾಳದಷ್ಟು ಬಾಯಿ ಕಳೆದು ನುಂಗಿಬಿಡುತ್ತವೆ! ಅವಳಿಗೆ ಅರ್ಥವೇ ಇಲ್ಲವೆಂದು ನುಂಗಿ ನಾಲಗೆಯಿಂದ ತುಟಿ ಸವರಿಕೊಂಡು ನಕ್ಕು ಯೋಗ ಕ್ಷೇಮ ವಿಚಾರಿಸಿ ಆಶೀರ್ವದಿಸಿ ಬರುತ್ತೇವೆಯೆಂದು ಹೇಳಿ ಹೋಗಿ ಬಿಡುತ್ತಾರೆ... ಮದುವೆಗೆ ಆಶೀರ್ವದಿಸಿದ ಜನ, ಮಸಣದ ತಯಾರಿಗೆ 'ಶವಭೇಟಿ'ಗೆ ಹೇಳಿ ಕಳಿಸಿದಾಗ ಅನುಮಾನಿಸಿ ಬಂದು ವಿಮಾನ ಕಟ್ಟುತ್ತಾರೆ; ಚಟ್ಟ ಬಿಗಿಯುತ್ತಾರೆ... ಮುಂದೆ ವರ್ಷಾಂತಿಕ ಶ್ರಾದ್ಧಗಳ ಊಟ ಉಪಚಾರದ ವಿಮರ್ಶಕರಾಗಿ ಬರುತ್ತಲೇ ಇರುತ್ತಾರೆ. ಸಾವಿನಲ್ಲಿ ಜೀವನದ ಪೂರ್ಣಾಭಿವ್ಯಕ್ತಿಯನ್ನು ಪಡೆಯುವ ಕವಿತಾಳಿಗೆ ಬದುಕೇ ಇಲ್ಲ. ಅವಳು ಬದುಕಿಯೇ ಇಲ್ಲ. ಎದೆಯ ಮೇಲೆ ಬೆಳದಿಂಗಳ ಹಾಲಿನಂತೆ ಮಲಗಿಸಿಕೊಂಡು, ಶೃಂಗರಿಸಿ, ನೇವರಿಸಿ, ನೋಡಿ ತನಗೆ ಬದುಕನ್ನು ಕೊಡುತ್ತಿದ್ದ ನನ್ನನ್ನು ಕುರಿತು ಅವಳು ಹಟಮಾಡಬಾರದಿತ್ತೆ! ತನ್ನನ್ನು ಕೊಂದುಕೊಂಡು, ದೇಹಕ್ಕೆ ಮಂಗಳಸೂತ್ರದ, ತೋರಣ ಬಿಗಿಸಿಕೊಂಡು, 'ಸೌಭಾಗ್ಯವತಿ' ನಾಮಕರಣಕ್ಕೆ ಸಿದ್ಧಳಾಗಲಿಲ್ಲವಾದರೆ ಅವಳಿಗೇನು ಹಾನಿಯಾಗುತ್ತಿತ್ತು?' ಎಷ್ಟು ಮಂದಿ ಬಯಸಿ ಬದುಕಿ ಬಂದಿರುತ್ತಾರೆಂದೇ ತಿಳಿಯದಲ್ಲಾ–ಎಂದು ನೊಂದು ಕೊಳ್ಳು ತ್ತಿದ್ದಂತೆ... "ಮುಂದೆ ನೀವೆಲ್ಲಿ ಹೋಗುವವರು?" ಎಂದ ಗೃಹಸ್ಥ. ಬಹಳ ಹೊತ್ತು ಮಾತನಾಡದೇ ಕುಳಿತಿದ್ದುದರಿಂದ ಮಧ್ಯೆ ಅಪರಿಚಿತತೆ ಬೆಳೆಯುತ್ತಿದೆ ಎಂದುಕೊಂಡೆ. "ಅಂದರೆ? ನಾನು? ಮುಂದೆ?" ಎಂದೆ. "ಹೌದು ಯಾ ಊರಿಗೆ?" ಅವನಿಗೆ ತಾನು ಕೇಳುವದು ಮಂದಿಗೆ ತಿಳಿಯುತ್ತದೆ ಎಂಬ ವಿಶ್ವಾಸವಿಲ್ಲದವನಂತೆ. "ಮುಂದೆ ಹೋಗಬೇಕೋ ಬೇಡವೋ ಎಂದೆ– ಯಾವ ಊರು ಯಾರಿಗೆ ಗೊತ್ತು, ಎಂಬಂತೆ. ಹೌದು–ನಾನು ಯಾವ ಊರಿಗೆ? ಯಾರಿಗೆ ಬೇಕಾಗಿದೆ?" ಬೇಕಾಗಿದೆ ಎಂಬುದನ್ನೆಲ್ಲ ದೊಡ್ಡ ಕಸವನ್ನಾಗಿ ಕವಿತಾ ಬಿಟ್ಟು ಹೋಗಿದ್ದಳು. ನನ್ನನ್ನು ಅಷ್ಟೆಲ್ಲ ಬೇಕೆಂದು ಯಾರೂ ಕೇಳಿದ್ದೂ ಇಲ್ಲ ಹಚ್ಚಿಕೊಂಡದ್ದೂ ಇಲ್ಲ. ಕವಿತಾಳನ್ನು ಬಿಟ್ಟು... ಎಡಗಡೆಯ ಚಿಕ್ಕ ಸೀಟಿನಲ್ಲಿ ಕುಳಿತ ಧಡೂತಿ ಮಧ್ಯ ವಯಸ್ಸಿನ ಹೆಂಗಸು ಬೆವರಿನಿಂದ ತೋಯ್ದಿದ್ದರೂ ನಾಲ್ಕು ವರುಷದ ಮಗುವನ್ನು ಕೂಡ್ರಲು ಸ್ಥಳವಿಲ್ಲದಿದ್ದರೂ ಮಲಗಿಸಿಕೊಂಡಿದ್ದಳು. ಗಂಡ ತೂಕಡಿಸಿ ಹೆಂಡತಿಯ ಎದೆಯ ಮೇಲೆ ಬೀಳುತ್ತಿದ್ದ. ಆ ಮಗು ದೊಡ್ಡದಾದ ಮೇಲೆ ನಾನಾಗ ಬಹುದೆಂದುಕೊಂಡೆ. ಅವನಿಗೂ ಓರ್ವ ಕವಿತಾ ಸಿಗಬಹುದು; ಆಮೇಲೆ ಬಿಡಬಹುದು... ತಾಯ ತೊಡೆಯ ತರುಣನ ಅಜ್ಞಾತ ಅರಿವಿನ ಲೋಕದ ಕಪ್ಪು ತೊಲೆಯಾಗಿ ಕಾಣೆಯಾಗಬಹುದು. ಗದ್ದೆಗೆ ನುಗ್ಗಿದ ಒಂಟಿ ಸಲಗನಂತೆ... ತಿಂದದ್ದೇ ತಿಂದದ್ದು. ಅದನ್ನೇ ಬಿಟ್ಟದ್ದು. ಮತ್ತೆ ಅದೇ ತಿಂದದ್ದು–

ತಿರುಗಿದ್ದೇ ತಿರುಗಿದ್ದು, ತಿರುಗಿದಲ್ಲೇ ತಿರುಗಿದ್ದು: ಯಾರೂ ಇಲ್ಲದ ಅಡವಿ ಸಿಕ್ಕಷ್ಟು ತೃಪ್ತಿ–ಸ್ವಾತಂತ್ರ್ಯ, ಸುಖ. ಯಾಕೆ–ಎಲ್ಲಿಗೆ ಅಂತ ಹೇಳಬೇಕು? ಯಾವನೋ ಇಟ್ಟ–ಅದೇ ಹೆಸರಿನಿಂದ ಇವರು ಗುರುತಿಸುವ ಊರೇ ಜನರೇ ನನಗೆ ಬೇರೆಯೇ ಆಗಿರಬೇಕು– ಹೋಗುತ್ತಲೇ ಇದ್ದೇನೆ ಎಂಬ ಅರಿವಿಲ್ಲದ ನನಗೆ 'ಮುಂದೆ?' ಎಲ್ಲಿ ಯಾಕೆ?... "ಮುತ್ತಿನ ಕೆರೆ– ಅಪ್ಪಾ– ಎಲ್ಲ ಎಷ್ಟು ಹಾಳಾಗಿ ಹೋಗಿದೆಯಲ್ಲವೇ? ಮೇಲಿನ ದೇವಸಾನದ ಕಲ್ಲನ್ನೆಲ್ಲ ಕೆಡವಿ ಒಡೆದು ಮನೆ ಕಟ್ಟಿಸುತ್ತಿದ್ದಾರಂತಲ್ಲ!" ಎಂದಳು ಆ ಹುಡುಗಿ ಅಲ್ಲಿಂದ ಇಷ್ಟು ಹೊತ್ತು ಸುಧಾಮರದ ಗತವೈಭವವನ್ನೆಲ್ಲ ನೆನೆದು, ವರ್ತಮಾನದ ದುಸ್ಥಿತಿಯನ್ನು ಕಂಡು ಮರುಗುವಂತೆ! ಗತವೈಭವದಲ್ಲಿ ರತ್ನಖಚಿತ ಸಿಂಹಾಸನ ವಿರಾಜಮಾನ ದೊರೆ–ಚಾಮರ ಬೀಸುವ. ಎದೆತೆರೆದು ನಿಂತ ಸೇವಕಿಯರು–ಮುಸುಕಿನ ಭಾವಿ–ಸುತ್ತ ಗುಡಿಗಳು ರಾಜ ರಾಣಿಯರು ಸ್ನಾನಕ್ಕಾಗಿ.

ಹೆಜ್ಜೆ–ಗೀತ. ಗಂಗಾವನದಲ್ಲಿ... ಬೆಳದಿಂಗಳ ರಾತ್ರಿ ಗಂಧರ್ವಲೋಕದಿಂದ ಇಳಿದು ಬಂದ ಅಪ್ಸರೆ ಶುಭ್ರ ಸೀರೆ, ಗಮಗಮಿಸುವ ಮಲ್ಲಿಗೆದಂಡೆ– ಬೆಳದಿಂಗಳ ಹಾಲಿನಿಂದ ಒದ್ದೆಯಾದ ಕೆಂಪು ತುಟಿಗಳು ಹಾಗೆ–ಹಾಗೇ ತಂಗದಿರಗಾಳಿ ಮೆಲ್ಲನೆ ತೀಡಿ ಬಂದಂತೆ ಬಂದು ಎದೆಯ ತಡವಿ ಮೈಯನ್ನೆಲ್ಲ ಮೃದುವಾಗಿ ಆವರಿಸಿ–ತೊಡೆಯ ಮೇಲೆ ಕುಳಿತು 'ರಾಜಾ' ಎಂದ ಕವಿತಾ... ಅವಳು ಬೆಳದಿಂಗಳೇ? ಮಲ್ಲಿಗೆಯೇ? ಎದೆಗೆ ತಂಪನ್ನೀವ ಮೃದು ಗಂಧವೇ! ಗಾಳಿಯೇ?–ಆ ಹುಡುಗಿ ತುಂಬಾ ಚೆನ್ನಾಗಿದ್ದಳು. ಬಸ್ಸಿನ ಲೋಕವನ್ನೆಲ್ಲಾ ಎಚ್ಚರಿಕೆಯಿಂದ ನೋಡುತ್ತಾ, ಆದರೆ ಮಾತನಾಡದೇ ನನಗಿಂತಲೂ ಗಂಭೀರವಾಗಿದ್ದ ಆ ಹುಡುಗಿಗೆ ಈ ಅಪ್ಪ ನನ್ನ ವಿಮರ್ಶೆಗೆ ಮಣ್ಣು ಹಾಕ! ಅನುಕಂಪವೂ ಅಸ್ವಚ್ಛ. ಹೇಕರಿಸಿ, ಧೂಳೆಬ್ಬಿಸಿ, ರಸ್ತೆ ಗುಡ್ಡ ತುಳಿದು ಕಂದಕ ಹಾರಿ, ಸಾಗಿದ ಕುದುರೆಯ ಸಾಲು; ಸೊಂಡಿಲ ತುರುಕಿ, ಬೀಸಿ ತೆಕ್ಕೆಹಾಕಿ ಉರುಳಿಸಿ ಸೆಪಿ ತುಳಿದು ಮುಕಿ, ಸೊಕ್ಕಿ ನಡೆವ ಗಜ ಸಮೂಹ, ಅಂಬಾರಿ...ಛತ್ರ, ಕೇಳಿದಳು ಕವಿತಾ; "ರಾಜಾ ನಾನು ಆಕಸ್ಮಿಕ ಸತ್ತರೆ ನೀನೇನು–ಮಾಡುತ್ತೀ?" "ನಾನು ಇತಿಹಾಸವಾಗುತ್ತೇನೆ. ನೀನು ವರ್ತಮಾನವಾಗುತ್ತೀ. ನೀನು ಗಂಧರ್ವಳಾಗಿ ಬೆಳದಿಂಗಳಿನಲ್ಲಿ ಸಮುದ್ರ ತೀರಕ್ಕೆ ಬರುತ್ತೀ ನಾನು ಬಂಡೆಗಲ್ಲಾಗಿ ನಿಂತಿರುತ್ತೇನೆ. ನೀನು ಎದುರು: ಕುಳಿತು ಹಾಡುತ್ತೀ. ಕೊಳಲು ಊದುತ್ತೀ. ನಾನು ಅಲುಗಾಡದಂತೆ ನಿರ್ಜೀವಿವಾಗಿ ಕುಳಿತಿರುತ್ತೇನೆ. ನೀನು ಗಟ್ಟಿಯಾಗಿ ಹಿಡಿದು ಅಲುಗಾಡಿಸುವೆ. ನಾನು ಸತ್ತಿದ್ದೇನೆಂಬುದು ನಿನಗೆ ತಿಳಿಯುತ್ತದೆ." ಎನ್ನುತ್ತೇನೆ...ಟ್ರಾನ್ಸಿಸ್ಟರ್ ಯಾರೋ ತಿರುವಿದರು. ಅಮರ ಪ್ರೇಮದ ವ್ಯರ್ಥ ಗೀತ ಹಾಡಲ್ಪಡುತ್ತಿತ್ತು.

"ಎಲ್ಲಾ ಜಗತ್ತನ್ನು ಬಿಟ್ಟು ನಿನ್ನ ಕಡೆಗೆ ಬಂದೆ ನಾವೇನು ಕಳುವು ಮಾಡಲಿಲ್ಲ ಪ್ರೀತಿಸಿದ್ದೇವೆ." "ಸುಳುಸುಳುಗಳ ಮಾಲೆಗಳೇ ಬಾಳಿದವು" ಜೀವನವೆಂಬುದು ಒಂದೆರಡು ಕ್ಷಣದ ಸಂತೆ." ನನ್ನನ್ನು ಮರೆಯಬೇಡವೆಂದು ಅವಳೊಂದಿಗೆ ಹೇಳು..." ಮುಳುಗಳ ಹಾದಿಯಲ್ಲಿ ಕಣ್ಣೀರು ಹನಿಸುತ್ತ ಹೊರಟಿದ್ದೇನೆ. ನಂಬಿದ ಅವಳೂ ಕಣ್ಣೀರನ್ನು ಕಣ್ಣೀರೆಂದು ಗುರುತಿಸದಾದಳು– ಈಗ ನಾನು ತರುಣಿಯಾಗಿದ್ದೇನೆ. ನಿನ್ನೆದೆಯ ಬಡಿತಗಳನ್ನು ಕೇಳಬಲ್ಲೆ–ಎಂಬ ಚೊಳು



ಕವನಗಳು. ಸಂಬಂಧವಿಲ್ಲದ ಭ್ರಮಾಲೋಕಗಳು! ಆಕಾಶ ದಣಿದು ಬಾಡಿದಂತೆ, ಬೆಳಕು ದುಡಿದು ಕತ್ತಲೆಯ ಮೂಲೆಗೆ ತೆರಳಿದಂತೆ ಮಬ್ಬು, ಬಸ್ಸಿನ ಸುತ್ತುಗಟ್ಟಿತು. ಡ್ರೈವರ್ ಲ್ಯಾಟ್ ಸ್ವಿಚ್ ಹಾಕಿ. ಎಲ್ಲಾ ಸರಿಯಾಗಿದೆಯೆಂದುಕೊಂಡು ಆರಿಸಿದ. ಇಳಿಯುವ ಕತ್ತಲೆಯನ್ನು ಬರಮಾಡಿಕೊಳುವಳಂತೆ ಕಿಟಕಿಯ ಕಡೆ ಕುಳಿತ ಹುಡುಗಿ ಮುಗ್ಧ ಕಣ್ಣುಗಳಿಂದ ಅದನ್ನೇ ಆ ಕಡೆ ನೋಡುತ್ತಾ ಕುಳಿತ್ತಿದ್ದಳು. ಬದಿಯಿಂದ ಉಬ್ಬಿದ ಕೆನ್ನೆ ಅಲ್ಲಿ ನಾಲ್ಕಾರು ಸ್ವತಂತ್ರ ಕೂದಲುಗಳು ಸಣ್ಣದಾಗಿ ಉಬ್ಬಿ ಮೂಗಿನ ತುದಿ ... ಕವಿತಾ ನಸುಂದ ಮುಖ ತಿರುಗಿಸಿದಳು. ನಾನು ಮುತ್ತಿಟ್ಟ ಕೆನ್ನೆಗಳು ಮಾತ್ರ ಕಾಣಿಸಿ, ಮೌನಕ್ಕೆ ಅರ್ಥಹೇಳುವ ಕಣುಗಳನ್ನು ಕಾಣದಂತೆ ಮುಚ್ಚಿಕೊಂಡಳು, ಬಂದ ತರುಣರು ಹಗಲಿಗೆ ಧೋತರ ಚುಂಗನ್ನು ಬಿಗಿದು, ಗ್ಯಾಸ್‌ಲ್ಯಾಟಿಗೆ ಎಣ್ಣೆ ಹಾಕಿ ಮೆಂಟಲ್ ಕಟ್ಟಿ ಪಂಪು ಹೊಡೆದರು. ಕೆಂಪಗೆ ಸುಟ್ಟು ಬಿಳಿದಾಗಿ ಬೆಳಕಾಗಿ ಮೆಂಟಲ್ ಉರಿದಾಗ ಹರಟೆ ಕೊಚ್ಚುತ್ತ ಮಧ್ಯದ ಒಳದಲ್ಲಿ ಕುಳಿತ ಹೆಂಗಸರ ಬದಿಯಲ್ಲಿ ಮೊಣಕಾಲುಗಳನ್ನು ಮಡಚಿ, ಕೈ ಸುತ್ತಿ ಕವಿತಾ ಕುಳಿತಂತೆ ಬೆಳಗಿನಿಂದ ಸಂಜೆಯವರೆಗೆ ನಡೆದ ಮಾರಣ ಹೋಮದಿಂದ ತನ್ನ ಅನಿಸಿಕೆಗಳನ್ನೆಲ್ಲ ನೆನಪುಮಾಡಿಕೊಳಲೂ ಹೆದರಿ ಹತ್ತು ಮಂದಿಯ ಸಂಬಂಧವಿಲ್ಲದ ಮಾತುಗಳನ್ನು ಕೇಳುವದೇ ಸುಖವೆಂದುಕೊಂಡು ಕುಳಿತಿರಬೇಕು... "ಅಂತೂ ತಂಪಾತು!" ಎಂದು ಮಗಳನ್ನು ನೋಡಿ, ಹೊರಗೆ ನೋಡಿ, "ಕೊಲ್ಹಾಪುರ ಮುಟ್ಟುವಾಗ ರಾತ್ರಿ ಎಂಟು ಗಂಟೇನೇ ಆಗಬಹುದು!" ಏನೋ ಕೇಳಲೆಂದು ನನ್ನ ಕಡೆ ತಿರುಗಿ "ಒಂದು ದೃಷ್ಟಿಯಿಂದ

ರಾತ್ರಿ ಪ್ರಯಾಣ ಸುಖ!" ಎಂದರು. "ಹೌದು ಡ್ರೈವರ್ ನಿದ್ರೆ ಮಾಡಿದ್ರೆ!" ಎಂದು ಹಿಂದಿನ ಸೀಟಿನ ಜನ ಉತ್ತರ ಕೊಟ್ಟರು. "ಊಟಕ್ಕೆ ಹುಬ್ಬಳ್ಳಿಯಲ್ಲಿ ಒಂದು ಗಂಟೆ ನಿಲ್ಲಿಸಬಹುದೇನೋ!" ಎನ್ನುವಾಗ ಹಸಿವಿನ ನೆನಪಾಗಿ, ಬೆಳಿಗ್ಗೆ ಎದ್ದು ಹೊರಟಾಗ ರೂಮಿಗೆ ಕೀಲಿ ಹಾಕಿದ್ದೆನೋ ಎಂಬ ಸಂಶಯ ಬಂದಿತಾದರೂ ಬಸ್‌ಸ್ಟ್ಯಾಂಡಿನಲ್ಲಿ ಒಂದು ಕಪ್ ಚಹ ನಾನೇಕೆ ತೆಗೆದುಕೊಳ್ಳಲಿಲ್ಲ? ಸಾಂಗ್ಲಿ ಕೇಂದ್ರದಿಂದ ಬಿಸ್ಮಿಲ್ಲಾಖಾನ ಶಹನಾಯಿ ಕೇಳಿದಾಗ ಹೊಟ್ಟೆಯಲ್ಲೆಲ್ಲ ತಳಮಳವಾಗಿ ಎದೆ ಸುಟ್ಟು ಕಣ್ಣು ಮಂಕಾಗುವದರೊಳಗೆ ಪ್ರೇತ ಬೆನ್ನುಹತ್ತಿದವನಂತೆ ಹಾಸಿಗೆಯಿಂದೆದ್ದು ಸ್ಟ್ಯಾಂಡಿಗೆ ಓಡಿ ಬಂದದ್ದಷ್ಟೇ ನೆನಪು. ನಿನ್ನೆ ರಾತ್ರಿ ಮುನಸಿಪಲ್ ಗಾರ್ಡನ್ನಿನ ಕೆಂಡಸಂಪಿಗೆ ಗಿಡದಡಿ ಕೊನೆಯದಾಗಿ ಅವಳು ಬರುತ್ತಾಳೆಂದು ಕಾಯ್ದಾಗ–ಇಂದು ಗುರುವಾರ; ಅವಳು ಬರುವದು ಊರ ಹೊರಗಿನ ಗುಡ್ಡದ ಕೆಳಗೆ ಹರಿದ ರಸ್ತೆಯ ಬದಿಯ ಸಿಮೆಂಟ್ ಸೀಟಿಗೆ ಎಂಬುದು ನೆನಪಾಗಿ, ಅಲ್ಲಿಗೋಡಿಹೋಗಿ ರಾತ್ರಿ ಎಷ್ಟೋ ಹೊತ್ತಿನವರೆಗೆ ಕಾಯ್ದು–ಸಿಮೆಂಟ್ ಕಟ್ಟೆಯ ಮೇಲೆ ಬೆರಳಿನಿಂದ ಅವಳ ಹೆಸರು ಬರೆದೂ ಬರೆದೂ ಬೆರಳತುದಿ ಸುಲಿದಂತಾಗಿ ಉರಿದಾಗ, ಇನ್ನೂ ಬರಲಿಲ್ಲ–ಬರುವದಿಲ್ಲ... ನಾನು ಅವಳಿಲ್ಲದೇ ಬದುಕಿದವನೇ ಅಲ್ಲ; ಬದುಕಲೂ ಕೂಡದು. ಇನ್ನೂ ಸತ್ತಿಲ್ಲವೆಂದರೇನು?... ನಿನ್ನ ಬಿಟ್ಟು ನಾನು ಅರೆಕ್ಷಣ ಕೂಡ ಬದುಕಲಾರೆನೆಂದು ನಾನೇ ಎಷ್ಟು ಬಾರಿ ಹೇಳಿರಲಿಲ್ಲ! ನೀನಿಲ್ಲದಿದ್ದರೆ ಹುಚ್ಚು ಹಿಡಿಯುತ್ತದೆಂದು ಎಷ್ಟು ಬಾರಿ ಪ್ರಾರ್ಥಿಸಿಕೊಂಡಿಲ್ಲ? ನಾನು ಹುಚ್ಚನಾಗಿರಲೇಬೇಕು. ಹುಚ್ಚನೇ ಇರಬೇಕು. ಅವಳಿಗೆ ನನ್ನ ಗುರುತು ಸಿಗಲಿಕ್ಕೂ ಇಲ್ಲ; ನಾನು ಗುರುತಿಸಿದರೆ ಅದು ಸುಳ್ಳಾದೀತು. ಕೊನೆಯದಾಗಿ ಈ ಕಟ್ಟೆಯ ಮೇಲೆ ಅಥವಾ ಆ ಮರದ ಕೆಳಗೆ ಅಥವಾ ಆ ಹುಲ್ಲುರಾಶಿಯ ಮೇಲೆ ನನ್ನೊಡನೆ ಕುಳಿತು ಅತ್ತು– ಮುತ್ತಿಕ್ಕಿ ಹೋಗಿ ಮದುವೆಯಾಗಬಹುದಿತ್ತಲ್ಲ? ಅಥವಾ ತಾನು ಮದುವೆಯಾಗುವುದಿಲ್ಲವೆಂದು ಸುಳ್ಳಾದರೂ ಹೇಳಿ ಹೋಗಬಹುದಿತ್ತಲ್ಲ? ಅಥವಾ ಮರುದಿನ ಬಂದು ನನ್ನ ಮದುವೆಯ ಸುದ್ದಿ ಸುಳ್ಳೇ ಎನ್ನಬಹುದಿತ್ತಲ್ಲ" "ಇದೇನು ಹಾಗಾದರೆ?" ಎಂದು ನಾನು ಮಂಗಲಸೂತ್ರ ಮುಟ್ಟಿ ಕೇಳಿದರೆ "ಹೋಗು, ಈ ಲೋಕಕ್ಕೆ ಕಟ್ಟಿದ ವೇಷ" ಎಂದು ನನ್ನನ್ನು ಮುಟ್ಟಿ, ಸಾಂತ್ವನಪಡಿಸಿ ನಕ್ಕು, ನಗಿಸಿಹೋಗಬಹುದಿತ್ತಲ್ಲ! ಕವಿತಾ, "ಯಾಕಮ್ಮಾ, ನಿನಗೆ ನಾನೇ ಹೇಳಿರಲಿಲ್ಲವೇ, ಸುಳ್ಳಾದರೂ ಹೇಳು, ಮೋಸವಾದರೂ ಮಾಡು. ಆದರೆ ನಿನ್ನನ್ನು ಬಿಟ್ಟು ಹೋಗುತ್ತೇನೆನ್ನಬೇಡ–ಯಾಕೆ ಬೇಸರಮಾಡಿಕೊಂಡೆಯೇನಮ್ಮಾ, ನಮ್ಮ ಹಣೇಬರಹ! ಇನ್ನೂ ಎಷ್ಟು ದಿನ ಗಂಡಿನ ಬಾಗಿಲಿಗೆ ಅಲೆಯಬೇಕೋ ಏನೋ!" ಎಂದು. ಕಣ್ಣು ಬಿಟ್ಟೇ ಕುಳಿತ ಮಗಳನ್ನು ತಡವಿ ಎಚ್ಚರವಾದ ತಕ್ಷಣ ಕೇಳಿದ ಗೃಹಸ್ಥ, ಮತ್ತೆ ಕಣ್ಣು ಮುಚ್ಚಿದ. ಎಂಥೆಂಥ ಭಾವಸೂಕ್ಷ್ಮದ ಸಮಸ್ಯೆಗಳು ಎಷ್ಟೊಂದು ಸರಳವಾಗಿ ಬಿಟ್ಟವೆಯಲ್ಲಾ ಇವರಿಗೆ– ಎಂದು ನಾನು ಗೊಣಗಿಕೊಳ್ಳಬೇಕೆಂದುಕೊಂಡರೆ ಆತ, ಸೂಟುಬೂಟು ಧಾರಿವರಗಳು, ಕಾರು, ಬಂಗ್ಲೆ, ಸಿಪಾಯಿ ಮಾವನನ್ನು ಕಂಡರೆ ಗೌರವದಿಂದ ನಡೆದುಕೊಳ್ಳುವ ಅಳಿಯನ ಕನಸು ಕಾಣುತ್ತಿರಬೇಕು! ದಡ್ಡ–ಧಾಂಡಿಗ–ಶ್ರೀಮಂತ ಒಬ್ಬರನ್ನೊಬ್ಬರು ಹಿಡಿದುಕೊಂಡು–ಸುಧಾಪುರದಲ್ಲಿ ಕಾಡಿದ್ದು–ಸತ್ತ ಹೆಣದ ಕೊಳಕು ವಾಸನೆ; ಆತ ಬದಿಗೆ ಮಲಗಿರಲಿ, ಅವಳ ಎದೆಯ ಮೇಲೆ ಕೈ ಒಗೆದು-ಬೆರಳು ಮಡಚುತ್ತಿರಲಿ, ಕಣ್ಣು ರೆಪ್ಪೆಯ ಮೇಲೆ ತುಟಿಯನ್ನು ಕರಗುವಂತೆ ಒತ್ತಿರಲಿ ಅಲ್ಲಿ ಒಳಗಡೆ ರನ್ನದ ಸರೋವರದಲ್ಲಿ ನಾನೂ ಅವಳೂ ಜಲಕ್ರೀಡೆ ನೀರು ಚಿಮ್ಮಿ ಉಸಿರು ಕಟ್ಟಿದಂತಾದಾಗ ದಣಿವಾಗಿತ್ತು; ತಲೆ ಮಂಕಾಗಿತ್ತು. ಕಣ್ಣು ಸೋತಿತ್ತು. ಲೋಕವೆಲ್ಲ ಜೋಲಿ ಹೊಡೆದು ತಲೆಕೆಳಗಾಗಿ ಮೇಲಿದ್ದವರೆಲ್ಲ ಕೆಳ ಉದುರಿ ಗುಪ್ಪೆ–ಗುಪ್ಪೆಯಾಗಿ ಬಿದ್ದು ಮೇಲಿಷ್ಟು ದಪ್ಪ ದಪ್ಪ ಮಸಿ ಚೆಲ್ಲಿ ಸುರಂಗ ಕೊರೆದು ಒಳಗೆ ಪ್ರಾಣವಾಯು ಬಿಟ್ಟು ಉಸಿರಾಡುವಂತೆ ಮಾಡಿದಾಗ...... ಮಿಜಿ ಮಿಜಿ– ನಾನೂ ಕೇವಲ ಎದೆಯನ್ನು ಮೇಲೆ ಕೆಳಗೆ ಮಾಡುತ್ತ ಅಂಗಾತ ಮಲಗಿದ್ದೆ. ಬಸ್ಸು ಸ್ಟ್ಯಾಂಡು ಮುಟ್ಟಿತ್ತು. ಜನ ಎಚ್ಚರಾಗುವ ತಾಪತ್ರಯದಲ್ಲಿದ್ದರು. ಸುತ್ತೆಲ್ಲ ಕತ್ತಲೆ. ಮಳೆ ಸುರಿಯುತ್ತಿತ್ತು. ಅಂತರಾಳದಲ್ಲಿ ಮೂರು ಘಂಟೆ ಬಾರಿಸಿತ್ತು. ಒಟ್ಟಾಗಿ ಕುಳಿತದ್ದು ಪಕ್ಕಾಸುಳು ಎನ್ನುವಂತೆ ಒಬ್ಬರನ್ನೊಬ್ಬರು ತುಳಿಯುತ್ತ ಕೆಳಕ್ಕಿಳಿಯತೊಡಗಿದ್ದರು.

ನನ್ನದೇ ಚೀಲವಿರಬೇಕು; ಕೈಗೆ ತೆಗೆದುಕೊಂಡೆ. ಬಸ್ಸಿನಲ್ಲಿ ಉಳಿದದ್ದು ಅದೊಂದೇ ಆಗಿತ್ತು. ಸ್ಟ್ಯಾಂಡಿನ ಸಿಮೆಂಟ್ ಸೀಟಿನ ಮೇಲೆ ಭಿಕ್ಷುಕರು ಮುರುಟಿ ಮಲಗಿದ್ದರು. ಟ್ಯೂಬ್‌ಲೈಟ್ ನಿರರ್ಥಕವಾಗಿ ಬೆಳಗುತ್ತಿತ್ತು. ಯಾವ ಸೀಟೂ ನನಗೆ ಖಾಲಿ ಇರಲಿಲ್ಲ. ಬೆಳಕು ಕಡಿಮೆ ಇದ್ದ ಮೂಲೆಯಲ್ಲಿ ಯಾರೋ ಬೀಡಿಯೆಳೆಯುತ್ತ ತಲೆ ತುಂಬಾ ಚಾದರ ಎಳೆದು ಕೂತಿದ್ದರು. ಅಲ್ಲಷ್ಟೇ ಖಾಲಿ ಜಾಗ. ಹೋದೆ. ಕುಳಿತೆ. ಗೋಡೆಗೆ ಬೆನ್ನು ತಾಗಿಸಿದಂತೆ ಕಣ್ಣು ಮುಚ್ಚಿದೆ. ಮತ್ತೆ ರೆಪ್ಪೆ ತೆರೆದೆ. "ಸ್ಟೇಶನ್ ಎಷ್ಟು ದೂರ?" ಎಂದೆ. ಬೀಡಿ ನಂದಿದ್ದರೂ ಜಗ್ಗುತ್ತಿದ್ದವನು, "ಗೊತ್ತಿಲ್ಲ"ಎಂದ. ಮತ್ತೆ ಕಣ್ಣು ಮುಚ್ಚಿದೆ; ಮತ್ತೆ ತೆರೆದೆ. ಎಲ್ಲಾ ಮೊದಲಿನಂತೆ. ಆದರೆ ಮಂಜು ಭರಪೂರ ಬಿದ್ದಿತ್ತು. ರಸ್ತೆಯ ಲೈಟುಗಳೆಲ್ಲ ಕಳಾಹೀನವಾಗಿದ್ದವು. ಮನಸ್ಸು ಹೊಸಪದರೊಂದನ್ನು ತೆರೆಯುವಂತೆ. ಬೆಳಗಿನ ಗಾಳಿಗೆ, ಬೆಳಕಿಗೆ ಮತ್ತೂ ಅಂತೂ ಅಪರಿಚಿತ ಊರಿಗೆ ಬಂದು ಮುಟ್ಟಿದೆನಲ್ಲ ಎಂಬ ತುಂಬ ಸಮಾಧಾನ. ಅವಳ ಬಿಟ್ಟು ಒಂದು ಮಾರು, ಒಂದು ಮೊಳ, ಒಂದು ಗೇಣು ದೂರ ನಿಲ್ಲಲಾಗದ ನಾನು ಎಷ್ಟೋ ದೂರ ಬಂದು ಬಿಟ್ಟೆನಲ್ಲ–ಎಂಬ ಹೆಮ್ಮೆ. ಅವಳಿಗೆ ಬೇಡವಾದಾಗ ಒಂದು ಕ್ಷಣವನ್ನೂ ಆ ಊರಿನಲ್ಲಿ ಕಳೆಯಲಿಲ್ಲವಲ್ಲ–ಎಂಬ ದೊಡ್ಡ ಬಿಡುಗಡೆ. ಎದ್ದು ನಳದ ಹತ್ತಿರ ಹೋದೆ. ಕೊರಚರೂ ಭಿಕ್ಷುಕರೂ ಮುಖ ತೊಳೆಯುತ್ತಿದ್ದರು. ನನ್ನ ಪ್ಯಾಂಟು ನೋಡಿಯೂ ಅವರು ಸ್ಥಳ ಬಿಟ್ಟುಕೊಡಲಿಲ್ಲ. "ಪರವಾ ಇಲ್ಲ. ಜಗತ್ತು!" ಎಂದು ಸಂತೋಷಗೊಂಡೆ. ಮುಖಕ್ಕೆ ಬೊಗಸೆಯಿಂದ ನೀರು ತೋರಿಸಿಕೊಂಡಾಗ ಉರಿವ ಕಣ್ಣು ತಂಪಾಗಿ ಎದೆಯೆಲ್ಲ ಜಳಜಳವಾಯಿತು. ಎದೆಯಲ್ಲೆಲ್ಲ ಬೆಳದಿಂಗಳು ಸುರಿದಂತಾಗಿ, ನಗೆ ಹರಡಿದಂತಾಗಿ ಒಂದು ತರಹದ ವಿಮೋಚನಾಭಾವ, ಸ್ವಾತಂತ್ರ್ಯದ ಬೀಸು ಮೈಯ್ಯೆಲ್ಲ ತುಂಬಿ, ಕ್ಯಾಂಟೀನಿಗೆ ಹೋದೆ. ಬಾಗಿಲಲ್ಲಿ ಸಿಮೆಂಟ್ ಸೀಟಿನ ಕೆಳಗೆ ಆ ಕೊರಚರು ಹಳಸಿದ ಅನ್ನದ ಗಂಟು ಬಿಚ್ಚಿ ಮುಕ್ಕಲು ಶುರುಮಾಡಿದ್ದರು. "ಸ್ಟೇಶನ್ ಎಷ್ಟು ದೂರ?" ಎಂದು ಒಳಗೆ ಹೋಗಿ ಕ್ಯಾಂಟೀನ್ ಮಾಲಕರನ್ನು ಕೇಳಿ ಗಡದ್ದಾಗಿ ಒಂದಷ್ಟು ತಿಂದೆ, ಕುಡಿದೆ. "ಬೆಂಗಳೂರು ಪೂನಾ ಟ್ರೇನು ರಾತ್ರಿ ಹನ್ನೊಂದೂವರೆಗೆ" ಎಂದನಾತ. ಉತ್ತರ ಯಾವುದಾದರೂ ಸೈ.ಪ್ರಶ್ನೆಯೊಂದೇ ಅಲ್ಲ? ಎಂದು ಊರು ಸುತ್ತಲು ಹೊರಟೆ. ಖಾಂಡೀಕರನಿಗೆ ಒಂದು ಟೆಲಿಗ್ರಾಂ ಕೊಟ್ಟರೆ ಹೇಗೆ ಎಂದುಕೊಂಡೆನಾದರೂ ಹೋದಮೇಲೆ ಹೇಗೂ ಸಿಕ್ಕುತ್ತಾನಲ್ಲ ಎಂದುಕೊಂಡು ಸ್ಟ್ಯಾಂಡಿಗೆ ತಿರುಗಿ ಬಂದಾಗ ಮಧ್ಯಾಹ್ನವಾಗಿತ್ತು. ಮತ್ತೆ ಊಟವಾಯಿತು. ಎಲ್ಲಿ ನೋಡಿದಲ್ಲಿ ಜನಜಂಗುಳಿ ತುಂಬಿಕೊಂಡದ್ದನ್ನು ನೋಡಿ ಮನಸ್ಸಲ್ಲಿ ಗೊಂದಲಗೊಳ್ಳುವದನ್ನು ಗುರುತಿಸಿ ಅಲ್ಲಿಂದೆದ್ದು ಸ್ಟೇಶನ್‌ರೋಡ್ ಹಿಡಿದೆ. ಅಡ್ನಾಡಿ ಪೋಸ್ಟಿನ ಎದುರಿಗೇ ಹೋದಾಗ ಖಾಂಡೇಕರನಿಗೊಂದು ಟೆಲಿಗ್ರಾಂ ಕೊಟ್ಟು ಪ್ಲಾಟಫಾರ್ಮಿನ ಮೇಲೆ ಅಡ್ಡಾಡ ತೊಡಗಿದಾಗ 'ಧುಬು ಧುಬು ಜನ ಟ್ರೇನಿನಿಂದ ಇಳಿದು ಮತ್ತೆ ಹೊರಗಡೆಯಿಂದ ಬಂದ ಜನಜಂಗುಳಿ ಒಳ ನುಗ್ಗುವುದನ್ನೇ ನೋಡುತ್ತಿದ್ದಂತೆ ಲೈಟ್ ಹತ್ತಿಕೊಂಡವು. ಒಳಗಿನ ಮನಸ್ಸು ಎಲ್ಲಿಗೋ ಹೋದಂತೆ, ಇದ್ದ ಮನಸ್ಸು ಜಡವಾಗಿ ಉದ್ವಿಗ್ನವಾಗಿ ಮಂಕಾಗಿ ಮಸಕಾಗಿ ಏನೇನೋ ಆಗಿ, ಮತ್ತೆ ನೂರಾಎಂಟು ವಲ್ಲದ ಭಾವಗಳೂ ನೋವುಗಳೂ ಟ್ರೇನಿಗೆ ನುಗ್ಗಿದಂತೆ ನುಗ್ಗಿದವು. ಕತ್ತಲೆ ತಂದ ಸಂಪತ್ತಿಗಾಗಿ ನನ್ನ ತಳ ನಾನೇ ಹುಡುಕುವಂತಾವಾಗ "ರಾಜಾ, ನಾನೂ ನೀನು ಮದುವೆಯಾಗುವದು ಸಾಧ್ಯವಿಲ್ಲವೇ?" ಎಂದು ಕೇಳಿದ್ದು ನೆನಪಾಗಿ "ಆಗುವ. ಇಬ್ಬರಲ್ಲಿ ಒಬ್ಬರಿಗೆ ಸಂಶಯವಿದ್ದರೆ ಹೇಗೆ ಆಗಬಹುದು?" ಎಂದು ನಗೆಯಾಡಿದ್ದೆ. "ನನಗೊಬ್ಬ ನಿನಗೆ ಸೇರಿದವನನ್ನು ಹುಡುಕಿಕೊಡು" ಎಂದು ಮುಖಕ್ಕೆ ಮೋಡ ತುಂಬಿಕೊಂಡು ತಡವರಿಸಿ ಮಾತಿನ

ಸಗ್ಗಭಾಗ್ಯ



ಬೆಳುದಿಂಗಳ ನೈಯುವಳೇ
ನಿನ್ನ ಮುಟ್ಟುವುದೇ ಪರಮಭಾಗ್ಯ!
ನೀನೊಮ್ಮೆ ಒಲಿದು ಬಂದೆನ್ನನಪ್ಪಿ
ತುಟಗೆ ತುಟನೀಡೆ ಮತ್ತನ್ಯವುಂಟೆ
ಸಗ್ಗಭಾಗ್ಯ!

– ಪಂಚಾಕ್ಷರಿ ಹಿರೇಮಠ

ಬುಡೆ ಸಿಗದೇ ನಕ್ಕಾಗೆ ಹಾಸ್ಯ ಮಾಡಬೇಡ. ಕೆಲ ಗಾಂಭೀರ್ಯಕ್ಕಿಂತ ಹಾಸ್ಯವೇ ಸತ್ಯವಾಗುತ್ತದೆ" ಎಂದು ಗುಡುಗಿದ್ದೆ. ಹಾಸ್ಯವೇ ಸತ್ಯವಾದುದನ್ನು ಕಂಡು ಮನಸ್ಸು ಗುಂಗಿನ ಹುಳವಾದಾಗ "ಸ್ವಾಮೀ ಟ್ರೇನ ಬರೋ ಹೊತ್ತಾಯ್ತು! ಖಾಲೀ ಮಾಡಿ!" ಎಂದ. ಖಾಲೀ ಬೋಗಿ ಇಂಜನ್ನಿನಂತೆ ಹೊಗೆ ಉಗುಳುತ್ತ ಹೊರಗೆ ಬೀಳುವಂತೆ ಕೊನೆಗೂ ಅದೇ ಸತ್ಯವಾಗ ಬೇಕೇ?–ಸಿರಿಗೆರೆಯ ಸಿರಿವಂತ ಪದವೀಧರನನ್ನೇ ಅವಳು ಮದುವೆಯಾದಳು. ಅವನು ನನಗಿಂತ ಸಾವಿರ ಪಟ್ಟು ಶ್ರೀಮಂತ; ಹತ್ತುಪಟ್ಟು ಸುಂದರ–ಎಲ್ಲಕ್ಕಿಂತ ಹೆಚ್ಚಾಗಿ ಸದೃಢ. ರಕ್ತ ಉಕ್ಕುವಷ್ಟು ಕೆಂಪಾದ ಕೆನ್ನೆ. ನವಿರಾದ ಗುಂಗುರು ಕೂದಲು:– ಹೊಳೆವ ಮುಗ್ಧ ಕಣ್ಣುಗಳು!... ಟಿಕೆಟ್ ಕೊಡುವ ಕಿಟಕಿಯ ಹತ್ತಿರ ಜನ ಇರುವೆಯಂತೆ ನಿಂತಿದ್ದರು. ಅಂಗಿಯ ಹೊರಗಡೆ ತೋರುವ ರೋಮತುಂಬಿದ ಎದೆ ಧಾಂಡಿಗ, ನನ್ನ ನೂಕೇ ಮುಂದೆ ಹೋಗಿ ನಿಂತ. "ಏಯ್!" ಎಂದೆ. "ಸರಿಯೋ! ಏನ್ ನಿನ್ನಪ್ಪನ ಮನೆಯಾ?" ಎಂದೂ ಎಡಗೈಯಿಂದ ಎಳೆದು ಆಚೆಗೆ ಬಿಟ್ಟ. ಕಪ್ಪು ಗಡಿಗೆಯಲ್ಲಿ ಉರಿವ ಬೆಂಕಿಯಂತಿದ್ದ ಅವನ ಕಣ್ಣು ನೋಡಿ ಗಾಬರಿಯಾದೆ. ಮತ್ತೆ ಬಂದು ಸಾಲಿನಲ್ಲಿ ನಿಂತು ಹಿಂದೆ ನೋಡಿದರೆ "ದರಿದ್ರರು! ನಂಬಿಸಿನಂಬಿಸಿ ಕಾಯ್ದೆ ಕಟ್ಟಳೆ ಹೇಳಿ ಕುತ್ತಿಗೆ–ಕೊಯ್ದರು. ಹತ್ತಿರದ ಸಂಬಂಧವಂತೆ! ಸಾಧ್ಯವಿಲ್ಲವಂತೆ! ಇಲ್ಲವಾದರೆ ಧಾರೆ ಎರೆದುಕೊಡುತ್ತಿದ್ದರಂತೆ!" ಎಂದೆನಿಸಿತು. "ಎಲ್ಲಿಗೆ ಸ್ವಾಮೀ ಬರೀ ಕಂಡಿಯಲ್ಲಿ ಕೈ ಹಾಕಿ ನಿಂತರಾಯ್ತೇ?" ಎಂದು ಟಿಕೆಟ್ ಕೊಡುವವ ಕೂಗಿದಾಗ "ಪೂನಾ" ಎಂದೆ. "ದುಡ್ಡು!" ಹೌದು ಕೈ ಖಾಲಿ. ಜೇಬಿಗೆ ಕೈ ಹಾಕಿ ತೆಗೆದುಕೊಟ್ಟೆ, ಪ್ಲಾಟ ಫಾರ್ಮಿನಲ್ಲಿ ಅಲೆದಾಡಿದೆ. ಯಾವ ಟ್ರೇನಿನ ಮುಖ ಯಾವ ಕಡೆಗೆ ಎಂದೇ ತಿಳಿಯುತ್ತಿರಲಿಲ್ಲ. ಈ ಜನವೆಲ್ಲ ಎಷ್ಟು ಬುದ್ಧಿವಂತರು! ಕೂಲಿಗಳೂ ತಮ್ಮ ತಮ್ಮ ಡಬ್ಬಿಗಳನ್ನು ಸರಿಯಾಗಿಯೇ ಹತ್ತುತ್ತಿದ್ದರು. ಈ ಲೋಕದಲ್ಲಿ ನಾನೊಬ್ಬ ಅವ್ಯವಹಾರಿ, ಅಜ್ಞಾನಿ ಎಂದುಕೊಳ್ಳುವಂತಾಯಿತು. ಯಾರನ್ನಾದರೂ ಕೇಳಲೇಬೇಕು ಇಲ್ಲವಾದರೆ ಪೂನಾ ಬೆಂಗಳೂರಿಗೆ ಹೋಗಿ ಮುಟ್ಟೇನು! ಪ್ಲಾಟಫಾರ್ಮಿನ ದೂರದ ಲೈಟ್‌ಗಂಬದ ಹತ್ತಿರ ನಳ ನೀರುಹುಯ್ಯುಕೊಳ್ಳುತ್ತಿತ್ತು. ಚಳಿಗಾಳಿ ಮೈಕೊರೆಯಹತ್ತಿತು. ಟ್ರೇನು ತಪ್ಪಿದರೂ ಸರಿಯೇ. ಯಾರನ್ನಾದರೂ ಯಾಕೆ ಕೇಳಬೇಕು? ಅವರು ಹೇಳಿದರೆ ತಿಳಿಯುತ್ತದೆಯೆಂದು ಯಾವಖಾತ್ರಿ? ಅವರೇನು ಕೈ ಹಿಡಿದು ಡಬ್ಬಿ ಹತ್ತಿಸುತ್ತಾರೆಯೇ? ತಣ್ಣೀರನ್ನು ನೆತ್ತಿಗೆ ಬಡಿದುಕೊಂಡಾಗ ನಾನೇಕೆ ನರಳಬೇಕು? ಪ್ರೇಮವೆಂಬುದು ಪರಸ್ಪರ ಕಲ್ಯಾಣ ಕಲ್ಪನೆ. ಆ ತೋಳುಗಳಿಗೆ ಸಿಲುಕಿ, ಆ ಎದೆಗೆ ಒರಗಿ ಅವಳು ಬೆಚ್ಚಗೆ ಬದುಕುವದಾದರೆ ಈ ಚಳಿಯಲ್ಲಿ ನನ್ನೊಡನೆ ನಿಲ್ಲಲಿಲ್ಲವೆಂದು ದುಃಖಿಸಿದರೆ ಚಂದ ಕಾಣಲಿಕ್ಕಿಲ್ಲ. ಆಕೆ ಸುಖಿಯಾದರೆ ಸಾಕೆಂಬ ಭಾವನೆ ನನ್ನದಾದರೆ ನಾನೂ ಸುಖಿಯಾಗಲೇಬೇಕು" "ಹುಚ್ಚನಿರಬೇಕು! ಈ ಚಳಿಯಲ್ಲಿ ತಲೆಗೆ ತಣ್ಣೀರು ತಟ್ಟಿಕೊಳುತ್ತಿದ್ದಾನೆ!" ಎಂದು ಬದಿಗೆ ಹಾಯ್ದವರು ನೋಡಿ ನಿಂತು ನುಡಿದು ನಡೆದರು. "ಹುಚ್ಚನಲ್ಲೋ ಆಗುವವನಿದ್ದೇನೆ!" ಎಂದೂ ಅವರ ಕಾಲರ ಹಿಡಿದು ಚೀರಿಬಿಡಲೇ ಎಂದುಕೊಂಡರೆ ಉತ್ತರ ನಿರೀಕ್ಷಿಸಿ ಅವರು ಸಂಶಯ ವ್ಯಕ್ತಪಡಿಸಿದ್ದಲ್ಲವೆಂಬುದನ್ನು ತಿಳಿದುಕೊಳ್ಳುವ ಪ್ರಯತ್ನಮಾಡಿದೆ. ಸಾವಿರಾರು ವರ್ಷಗಳಿಂದ ಅಂತರಿಕ್ಷದಲ್ಲಿ ನೇತಾಡುವ ಸ್ವಗತ ಪ್ರಶ್ನೆಗಳಿಂದ! ಉತ್ತರಗಳನ್ನು ಸಮಾಂತರ ರೇಖೆಗಳಿಂದ! "ರಾಜಾ!" ಎಂದು ಯಾರಿಗೂ ಅಂಜದೇ ಕಾಲೇಜ ರೋಡಿನಲ್ಲಿ ಓಡಿ ಬಂದು ಕೈ ಹಿಡಿದು ನಡೆದಿದ್ದಳು. ಮುಸು–ಮುಸು ಎಂದು ಬಂದವರು ಬಾಯಿ ಹಿಡಿದು ನಕ್ಕಾಗ ಬಾಯಿ ಸೊಟ್ಟಮಾಡಿ ಚಾಳಿಸಿ, ಕತೆ ಹೊಡೆದಿದ್ದಳು. ಕಾಲೇಜ ಟ್ರಿಪ್ ಜೋಗಕ್ಕೆ ಹೋದಾಗ ಕೆಳಗಿಳಿದು ಬಂಡೆಗಲ್ಲ ಮೇಲೆ ಕುಳಿತಾಗ ನೀರು ಸಿಡಿದು, ಬ್ಲೌಜ ಒದ್ದೆಯಾದಾಗ "ನಿನ್ನ ಬುಶ್‌ಶರ್ಟ್ ಕೊಡು" ಎಂದವಳು. "ನಕ್ಕಾರು!" ಎಂದಿದ್ದೆ. "ನಗಲಿ!" ಎಂದಿದ್ದಳು. ಅಲ್ಲಿ–ಇಲ್ಲಿ ಎಲ್ಲೆಲ್ಲೋ ಡಬ್ಬಿ ಹುಡುಕುತ್ತ ತಿರುಗುವಾಗ ಒಬ್ಬಿಬ್ಬರು– Probably the gentleman knows not his bogi ಎಂದು ನಡೆದಿದ್ದರು. Most indisciplined world! ಬರೇ ನೂಕು ನುಗ್ಗಲು. ಕೇಳುವದೂ ಬೇಡ, ಹೇಳುವದೂ ಬೇಡ. ಎಲ್ಲರೂ ಹುಶಾರು! ನನಗೇ ಏಕೆ ತಿಳಿಯುವದಿಲ್ಲ? ನಾನೇ ಎಲ್ಲರಿಗಿಂತ ಪೆದ್ದನೇ ಒಪ್ಪಿಕೊಳ್ಳಲೂ ಸಿದ್ಧನಿಲ್ಲ. "ನಿನ್ನಷ್ಟು ಪೆದ್ದನನ್ನು ನಾನು ನೋಡೇ ಇಲ್ಲ" ಹೇಳಿದ್ದ ಸ್ನೇಹಿತನೊಬ್ಬ. "ಯಾಕೆ?" ಎಂದು ಕೇಳುವಷ್ಟು ಪೆದ್ದತನವನ್ನಂತೂ ತೋರಿಸಿದ್ದೆ. "ಅಲ್ಲಪ್ಪಾ ಅಷ್ಟು ಚಂದ ಹುಡುಗಿಯ ಹತ್ತಿರ ಬರೇ ಮಾತಾಡ್ತೀಯಲ್ಲೋ!" ಎಂದು ಬೆನ್ನು ಚಪ್ಪರಿಸಿದಾಗ

"ರ್‍ಯಾಸ್ಕಲ್" ಎಂದು ಬೈದೂ ನಕ್ಕಿದ್ದೆ: ಮನೆಯುವರೆಲ್ಲ ಎಲ್ಲಿಗೋ ಹೋದಾಗ ರಾತ್ರಿ ನಡುಮನೆಯ ಅಗಲದ ಹಾಸಿಗೆಯಲ್ಲಿ ನನ್ನ ಬದಿಗೆ ನಿಶ್ಚಿಂತವಾಗಿ ಮೈ ಚೆಲ್ಲಿ ಬಿದ್ದುಕೊಂಡಿದ್ದಾಗ ಎಲ್ಲೆಲ್ಲೋ ಅಲವರಿಕೆಯಾಗಿ ಮೈ ಕಾವು, ನರಗಳ ಸಿವುಡು, ವ್ಯಾಪಿಸಿ ಮಿಸುಕಾಡಿದಾಗ "ಬೇಡ! ಖಂಡಿತ ಬೇಡ! ಬೇಡ ರಾಜೂ, ನನಗೆ ಹೆದರಿಕೆ!" ಎಂದು ಎರಡೂ ಕೈ ಹಿಡಿದು ಕಾಲಿಗೆ ಬಿದ್ದಿದ್ದಳು. ಅಪರಿಚಿತ ಲೋಕದ ಅಸಹ್ಯ ಅನುಭವಕ್ಕೆ ಹೆದರಿ... ಯಾವ ಅಡವಿಯೋ... ಎಂಥ ಅಗ್ನಿ ಕುಂಡವೋ... ವಾಮಾಚಾರದ ಮಹಾಕಾಳಿ ಪೂಜೆ! ನಗಾರಿ ಒಡೆದೂ ಹೋಗುವ ಕುಣಿತ! ಝಾಗಟೆ, ಶಂಖ ಗದ್ದಲವೇ ಗದ್ದಲ! ಕಪ್ಪು ಗುಹೆಯಲ್ಲಿ ಹರಿದೂ ಹೊರಟ ಹಾಲ ಹೊಳೆ! ಭಯಗೊಂದಲ! ಅಸಹ್ಯ! ಹಗಲು ದರೋಡೆ. ಬೆವರು, ರಕ್ತ ಮೂಗು ಕರಗಿ ಹೋಗುವ ದುರ್ನಾತ! ಕೊನೆಯ ಸಿಳು ಹೊಡೆದಾಗಲಂತೂ ನನ್ನ ಗಾಡಿಯನ್ನೇ ಹತ್ತಿದ್ದೆ. ಆಗಲೂ ಸೀಟಿಗೊಬ್ಬರಂತೆ ಮಲಗಿ ಕಮ್ಮ ಅಪ್ಪನ ಆಸ್ತಿಮಾಡಿಕೊಳ್ಳುತ್ತಿದ್ದರು.. ಮುದುಕ ಕಾಲು ನೀಡಲು ಪ್ರಯತ್ನಿಸುತ್ತಿದ್ದ. ಅಷ್ಟರಲ್ಲಿಯೇ ಅಲ್ಲಿ ಕುಳಿತೆ. ಟಿಕೆಟ್ಟಗಾಗಿ ಕಿಸೆಯಲ್ಲ ತಡಕಾಡಿದೆ. ಮತ್ತೆ ನಿಶ್ಚಿಂತೆ! ಇನ್ನೇನು ಇದೆಯೋ ಇಲ್ಲವೋ ನೋಡಿಕೊಳ್ಳಬೇಕಾದುದಿಲ್ಲ. ಇಂಜಿನ್ನು ನುಗ್ಗಿತು. ಹೊಗೆ ಉಗುಳಿ ಹೊರಟಿತು. ಹೆಣ ಹೊತ್ತು. "ನಿನ್ನ ಕುಟಿ ಎಷ್ಟು ಮೃದು! ಹೆಣ್ಣು ನಾಚಬೇಕು. ನಿನ್ನ ಮುಟ್ಟಿದರೆ" ಎಂಥ ಹೊಗಳಿಕೆ. ಮೆಯ್ಯೆಲ್ಲ ಬೆವರು ವಾಸನೆಯಿಂದ ತುಂಬಿದೆ. ವಸ್ತ್ರವೆಲ್ಲ ಧೂಳು! ಈತ ಗೊರಕೆ ಹೊಡೆಯುತ್ತಿದ್ದಾನೆ. ಚಂದ ದೊಡ್ಡ ಜರಿ ಟೊಪ್ಪಿಗೆ! ಹೊರಗೆ: ಕೆಟ್ಟ ಕತ್ತಲೆ. ನಾನು ಜಗತ್ತು. ಟ್ರೇನು ಎಲ್ಲಾ ಕತ್ತಲೆ! ಪ್ರಕೃತಿ ಮೂಕ. ಅಮಂಗಳ ಕಳೆ! ಶವದ ಮೆರವಣಿಗೆ! ಮೂಳೆ ಜಡಿದಂತೆ ನಕ್ಷತ್ರ ಲೋಕ ಸ್ತಬ್ಧ. ಅಸಹನೀಯ ಲೋಕದಿಂದ ತಪ್ಪಿಸಿಕೊಳ್ಳುವ ವ್ಯರ್ಥ ತಿರುಗಾಟ! ಮುದುಕ ಕಾಲು ನೀಡಿದ, ಒದ್ದ, ಮತ್ತೆ ಮುದುಡಿಕೊಂಡ. ಜಾಗ ಕೊಟ್ಟು ಮುಣ್ಣ ಕಟ್ಟಿಕೊಂಡ. ಗಾಡಿ ನುಗ್ಗಿತು. ಎಲ್ಲೋ ನಿಂತಿತು. ಜನ ನುಗ್ಗಿದರು. ಮಲಗಿದವರನ್ನು ಎಬ್ಬಿಸುವ ಕಿರುಚಾಟ. ನಿದ್ರೆಯಲ್ಲಿಯೇ ಯುದ್ಧ. ಹತ್ತು ನಿಮಿಷದ ಪ್ರಯಾಣಕ್ಕೆ ಹತ್ತು ವರುಷದ ಹಗೆತನ...ಗಾಡಿ ಹೊರಟಿತು. "ಈ ಅನಿರುದ್ಧನಿಗೆ ಮನುಷ್ಯ ಕುಲಕ್ಕೇ ಇಲ್ಲದ ಗುರಿಯಿಲ್ಲ. ಒಂದೆರಡು ಕೇಜಿ ರಕ್ತ ಮಾಂಸ ಹೆಚ್ಚಿರಬಹುದು; ಕಡಿಮೆ ಇರಬಹುದು. ಕತ್ತಲೆಯಲ್ಲಿ ಕುಳಿತ. ಇತಿಹಾಸಕಾರ ಓದಲಾಗದ ಅಕ್ಷರದಲ್ಲಿ ಪಕ್ಷಪಾತದ ಚರಿತ್ರೆ ಬರೆಯುತ್ತಿದ್ದಾನೆ.

ಆತ ನಿದ್ರೆ ಮಾಡಬಹುದಿತ್ತು. ತನ್ನದು ಕೇವಲ ಛ್ಯಾಕ್ಟು ಕಟ್ಟಿಗೆ ಇದ್ದಲು ಉಮಿ ತುಂಬಿದ ಚೀಲಗಳು. ನಾನೂ ಕಳೆದು ಹೋಗಿದ್ದೇನೆ. ನನ್ನ ಪರಿಚಯವೇ ಮರೆತು ಹೋಗಿದೆ. ರೈಲು ಸಿಳ್ಳು ಹಾಕಿತು. ಸ್ಟೇಶನ್. ಒಂದೋ ಎರಡೋ ಕ್ಷಣ. ಮತ್ತೆ ಝುಗ್ಗ್ ಝುಗ್ಗ್ss...ಲಾಲಿಯಿಲ್ಲವಾದರೂ ತೂಕಡಿಸುವ ಜಗತ್ತು. ಮುದುಕರ ಮಿನಿಟ್ರೇನು! ಡಬ್ಬಿಯಲ್ಲಿ ಎಲ್ಲೋ ಒಂದು ದೀಪ. ಎದುರಿನ ಸೀಟಿನಲ್ಲಿ ಓರ್ವ ಫಾದರ್... ಪರರ ಪಾಪವನ್ನು ಕೇಳಿ ಕೇಳಿ ಹೊಟ್ಟೆ ಎದೆ ತುಂಬಿಕೊಂಡಂತಿತ್ತು. ಎಲ್ಲ ಮುಚ್ಚುವ ನಿಲುವಂಗಿ. ಒಳಗಡೆ... ಮಾಯಾ! ಜಾದು! ಫಾದರ್ ಮುಖದಲ್ಲಿ ಸೃಜನಕ್ರಿಯೆಯ ಸ್ಪಷ್ಟ ಚಿಹ್ನಗಳು! ಹಲ್ಲು ಮುರಿದು

ಸೂರ್ಯಾಡಾವ



ನಿನ್ನ ನೆನಪಿನ ವಸಂತ ಬಂದು
ನನ್ನ ಹೃದಯ ತಟ್ಟದಾಗಲೆಲ್ಲ
ನನ್ನ ತೃಷಿತ ನೇತ್ರಗಳಿಂದ
ವಿರಹದ ಕಿಡಿ ಸೂರ್ಯಾಡಾವ ಗೆಳತಿ!

– ಪಂಚಾಕ್ಷರಿ ಹಿರೇಮಠ

ಹುಡಿ ಆಗುವ ಹಾಗೆ ಮುಖ ಕೆಂಪಾಗಿ, ಕಪ್ಪಾಗುತ್ತ ಹೊರಟಿತ್ತು. ನೋಡಿದವನು, ನಾನು: ಕನ್‌ಫೆಸ್ ಮಾಡಲೇಬೇಕು! ಒಡೆದು ಬಿದ್ದ ಕನ್ನಡಿಯ ತುಣುಕುಗಳಲ್ಲಿ ಪ್ರತಿಬಿಂಬಗಳು; ದ್ರೋಹ, ವಂಚನೆ, ಮೋಸಗಾರಿಕೆ–ವೇಷಗಾರಿಕೆ. ಮರೆವಿಲ್ಲದೇ ಕ್ಷಮೆಯಿಲ್ಲ. ಅವಳು ನನ್ನ ದೇವತೆಯೆನ್ನುವದರಲ್ಲಿ ಸುಳ್ಳಿಲ್ಲ. ಲೆಕ್ಕಾಚಾರವಿಲ್ಲ; ತೂಕವಿಲ್ಲ. ಹೇಳಿದರೆ ಅರ್ಥವಿಲ್ಲ. ಇರುವದೂ ಸುಳ್ಳಲ್ಲ. ಪಂಜಾಬಿ ಡ್ರೆಸ್ಸಿನಲ್ಲಿದ್ದ ಹುಡುಗಿಯೊಬ್ಬಳು ಮಲಗಿದ್ದಳು. ಮುಖದಮೇಲೆ ಬೆಳಕುಚೆಲ್ಲಿತ್ತು. ಮುದ್ದು ಮುದ್ದು; ಒಳಗೆಲ್ಲ ಮಲ್ಲಿಗೆ ಅರಳಿದ ಕನಸುಗಳು; ಪನ್ನೀರು ಚುಮುಕಿಸಿದ ಸುಂಗಧ. ಮೆಲ್ಲಗೆ ಚಿಕ್ಕದಾಗಿ ನಕ್ಕಳು. ಕಣ್ಣು ಮುಚ್ಚಿದೆ. ನಿದ್ರೆ ಬರಲೊಲ್ಲದು. ಎಲ್ಲರೂ ನಿದ್ರೆ ಮಾಡುತ್ತಿದ್ದಾರೆ. ಊಟ ಬಿಡಬೇಕು; ಚಹಬಿಡಬೇಕು. ದೇಹ ದಣಿಯಬೇಕು. ಸಾಕೋ ಸಾಕೋ ಆಗಬೇಕು. "ರಾಜಾ..." ಆ ಹುಡುಗಿ ಕನಸಿನಲ್ಲಿ ಕರೆದಿದ್ದಳು. ಆತ, ಶಿಲುಬೆಗೇರಿದ ಕ್ರೈಸ್ತನಂತೆ ಕಣ್ಣು ಮುಚ್ಚಿ ಕುಳಿತಿದ್ದ. ಥಂಡಿಗಾಳಿ ಮೂಗ ಮುರುಟಿಸುವಂತೆ ಬೀಸಿ ಬಂದಿತು. ನಿದ್ರೆ ಮಾಡುವವರ ಲೋಕದಲ್ಲಿ ಎಚ್ಚತ್ತಿದ್ದವನು ಶಾಪಗ್ರಸ್ತ! ಕತ್ತಲೆ ಬೈಲು ಬೋಳು ಬೋಳು! ಒಂದೇ ರೀತಿಯ ಆವಾಜು ದಪ್ಪ ಹೊಗೆಯ ಸಿವುಡಿನಲ್ಲಿ ಹೊತ್ತಿಕೊಂಡ ಇದ್ದಿಲು ತುಣುಕುಗಳು! ಪಿರಾಮಿಡ್ಡಿನಂತಹ ಗುಡ್ಡಗಳು. ಒಳಗಡೆ ಕುಳಿತ ಮೈ ಮಮ್ಮಿಗಳು! ರೇಲು ವೇಗ ಹೆಚ್ಚಿಸಿಕೊಳುತ್ತಿತ್ತು. ಹೊಳೆಗೆ ಹಾರುವ ತಯಾರಿಯಲ್ಲಿ ಗುಡ್ಡದ ಕೆಳಗೆ ಉರುಳುವ ಅಬ್ಬರದಲ್ಲಿ ನುಗ್ಗುವ ರೈಲು. ಸಾವಿರ ತಲೆಗಳ ಚಿಂತೆಗಳು ಒಮ್ಮೆಗೇ ಕೊನೆಗೊಳ್ಳುವ ಅವಕಾಶ. ಪ್ರೀತಿಸುವ ಬಿಡುವ ಬಿಡಲಾರದೇ ಪ್ರೀತಿಸುವ ಬಿಸಿನೆಸ್ ದಿವಾಳಿ ತೆಗೆಯಬೇಕು! ಜಾಮೀನಿಗೂ ಗತಿಯಿಲ್ಲ. ಜೈಲೇ ಗುರಿ. ನಾನು ಮಾಡಿದ ತಪ್ಪನ್ನೇ ಇವರು ಮಾಡುತ್ತಿದ್ದಾರೆ. ಅವನಿಗೆ ಅವಳಷ್ಟು ಪ್ರೀತಿಯವಳು ಇನ್ನಿಲ್ಲ. ಹೃದಯಕ್ಕೂ ನಾಲಿಗೆಗೂ ಗಾವುದ–ಗಾವುದ ದೂರ. ಬರುವ ಬಿರುಗಾಳಿಗೆ ಮಳೆಗೆ ತಂತಿ ಕತ್ತರಿಸಿ ಬಿದ್ದು ಸಂಪರ್ಕವೇ ಇಲ್ಲ. ಒಂದುದಿನ ಅವಳ ಮದುವೆಯಾಗುತ್ತದೆ ಅವನು ಸಾಯುತ್ತಾನೆ. ಜನ್ಮ–ಜನ್ಮಾಂತರದ ಅಮರ ಪ್ರೇಮ ಐದು ನಿಮಿಷದ ಕಣ್ಣೀರಿನಲ್ಲಿ, ತೊಳೆದು ಸಾಫ್ ಆಗಿ ಬಿಡುತ್ತದೆ. "ಅಮರಾ ಮಧುರಾ ಪ್ರೇಮಾ..." ಅವನೊಬ್ಬ ಪೆದ್ದ. ಅವಳೋ ಮೂಕಿ: ಉಳಿದವರ ಯಜಮಾನಿಕೆಯ ಸಂಸಾರ: ಅವರದೇ ಸೊಡರು, ನಗಾರಿ ಶಂಖ ವಾದ್ಯ ಜೈಜಗತ್! ಮೊಹಬ್ಬತ್ ಮುರ್ದಾಬಾದ್! ಎಲ್ಲ ತಣ್ಣಗೆ; ಇರುವ ಒಂದೆರಡು ದೀಪಗಳೂ ನಂದಿದವು. ಒಂದರ ಮೇಲೊಂದು ಹಲಗೆಯ ಮೇಲೆ ದಾಂಪತ್ಯ: ಸಿಕ್ಕವರು ಸಿಕ್ಕಷ್ಟು ಸಾಕು. ಎರಡನೆಯ ಹಲಗೆಯ ಮೇಲೆ ಮಲಗಿದೆ. ಜಗಳಕ್ಕೆ ನಾನು ಆಳಲ್ಲ. ಒರಟು, ಒರಟು! ಮಲ್ಲಿಗೆ ಹಾರಗಳಿಂದ ಮುಚ್ಚಿದ ಮಂಚ ಮೆತ್ತನ ಗಾದಿ: ಕಸೂತಿ ಹಾಕಿದ ದಿಂಬು... ತಲೆಯ ನರ ಸಿಡಿದಂತಾಗಿ ಏಳಲುಪಕ್ರಮಿಸಿ ನೆನಪಾಗಿ ಮಲಗಿದ. ಕಿಟಕಿಯಿಂದ ಗಾಳಿ ತೂರಿಬಂದಾಗ ಶರಟಿನ ಬಟನ್ ಕಳಚಿ ಕುತ್ತಿಗೆಯವರೆಗೆ ಎತ್ತಿ ಹಿಡಿದು ಕಿವಿಯನ್ನು ಮುಚ್ಚಿಕೊಂಡೆ.

ಅವಳು ದೇವತೆಯೆಂದು ನಂಬಿದ ನಾವಾರೂ ಮೂರ್ಖರಲ್ಲ. ಅಲ್ಲಿ ನಾವು ಲೆಕ್ಕ ಹಾಕಿರಲಿಲ್ಲ. ರೇಲು ಗುರಿಯಿಲ್ಲದಂತೆ ಓಡುತ್ತಿತ್ತು. ಕೇವಲ ಗತಿಶೀಲ ಜಗತ್ತಿನಲ್ಲಿ ಗುರಿಯಿದ್ದವನು ಮೂರ್ಖ. ದೂರದಲ್ಲಿ ದೀಪಗಳು ರಾಶಿಯಾಗಿ ಕಾಣತೊಡಗಿದ್ದವು. "ಪೂನಾ ಬಂತಾ?" ಮಲಗಿದವನೊಬ್ಬ ಅರ್ಧ ಎದ್ದು ಕೇಳಿ ಮತ್ತೆ ಮಲಗಿದ. ಬಂದರೇನು ಬಿಟ್ಟರೇನು? ಎಂಬಂತಿತ್ತು ಅವನ ಪ್ರಶ್ನೆ. ಇಷ್ಟರಲ್ಲೇ ಮಗ್ಗಲು ಹೊರಳಿಸಿ ತಲೆ ಎತ್ತಿ ಹೊರಗೆ ನೋಡಿ "ಬೆಳಗಾತಾ?" ಎಂದು ಕೇಳಿ ಮುರುಟಿಕೊಂಡನೊಬ್ಬ..."ತಮಸೋಮಾ...ಜ್ಯೋತಿರ್ಗಮಯ..." ಎಂಬ ಪುರೋಹಿತರ ತಮಸ್ ಯಾವುದೋ, ಜ್ಯೋತಿ ಯಾವುದೋ...ನಡೆದದ್ದೇ ಬೆಳಕಿನ ದಾರಿ ಎಂದುಕೊಂಡಿದ್ದ ಬ್ರಾಹ್ಮಣ ಕುಲ. ವಟಸಾವಿತ್ರಿ ಹುಣ್ಣಿವೆ ಮಾಡುವ ಸೊಸೆಯಂದಿರ ಖಾಲಿ ತೆರೆದ ಎದೆ ನೋಡಿದ್ದೇ ನೋಡಿದ್ದು: ರೈಲಿನ ವೇಗ ಕಡಿಮೆಯಾಗುತ್ತ ಹೊರಟಿತು. ಕತ್ತಲೆಯ ಗುಪ್ಪೆಗಳಂತೆ ಮನೆಗಳು ತೋರುತ್ತಿದ್ದವು. ಥಂಡಿ! ಎಲುವುಗಳೂ ಗದಗದವೆಂದುಕೊಂಡವು! ಹಲ್ಲು ಕಟ–ಕಟ. ಎಲ್ಲೆಲ್ಲೂ ಮಲಗಿದವರೇ. ದೊಡ್ಡ ದೊಡ್ಡ ಬಂಗ್ಲೆಗಳು, ಒಂದೆರಡು ಕಾರುಗಳ ಭಾರೀ ಶ್ರೀಮಂತರು, ನೂರಾರು ಸುಂದರ ಹುಡುಗಿಯರು ನೈಟ್ ಗೌನುಗಳಲ್ಲಿ ತೊಡೆ ತೋರಿಸುತ್ತ ಮಲಗಿದವರು. ಅವರಲ್ಲಿ ಯಾರ್‍ಯಾರೋ ಯಾರ್‍ಯಾರನ್ನೋ ಪ್ರೀತಿಸಿಯೂ ಮನೆಗೆ ಬಂದು ಮಲಗಿರಬೇಕು. ಹೂದೋಟದ ತಿರುಗಾಟಗಳು; ಬೀಳ್ಕೊಡುವ ಚುಂಬನಗಳು. ವಿರಹದ ಹನಿಗಳು, ವಚನ–ಭಂಗ. ಸಾಹಸ ಆವೇಶ–ನಿರಾಶೆ ಆತ್ಮಹತ್ಯೆ. ಮತ್ತೆ ಹೊಸ ಕಥೆ ಹೊಸ ವ್ಯಥೆ. ಕೋಟಿ ಕಥೆಗಳು. ಒಂದೇ ವ್ಯಥೆ. ಅಯ್ಯೋ! ಅಂದ್ದಾಗೆ "ಸಾಕೂ... ..." ಅಂದ್ದಾಗೆ ಚೀನೆ ಎಳೆಯುತ್ತಾ ರೇಲು ನಿಂತಿತು. ಭೂಕಂಪವಾದಂತೆ ಹುಟ್ಟುವಾಗಿನ ಗೌಜು, ಗಡಿಬಿಡಿ, ಇಳಿಯುವಾಗಲೂ


"ಅಮ್ಮಾ, ಸ್ವಾಮಿ, ಕೂಲಿ" "ಅಯ್ಯೋ ನನ್ನ ಕಾಲು!" "ಏಳೋ! ಏಳೋ!" "ದಾಪುಗಾಲು. "ಅದೇ ಅವನು ಏಳೆದುಕೋ. ಅವರ ಕೈ ಗಂಟು ಇಲ್ಲಿ ತಾ. ಅದು ಹಾಗೇ ಇರಲಿ. ಕಡೆಗಿಲ್ಲಾ..." ಎಂದ ಧಡೂತಿ ಆದ್ಮಿ. ಆ ಸಿಪಾಯಿ ಹೆಂಡತಿ. ಮುಗ ನಗಾರಿ ಡೋಲು. ಮುದ್ದೆಯಾದ ಸೀರೆ ಸರಿಪಡಿಸಿಕೊಳುತ್ತ ಧೀಲಾದ ಪಟ್ಟಿಚ್ಚೆ ಬಿಗಿದುಕೊಳ್ಳುತ್ತ ಯಾರ್ಯಾರ ಹಿಂದೂ ನುಗ್ಗುವ ಮಕ್ಕಳೆಲ್ಲವನ್ನೂ ಕೂಡಿ ಹಾಕಿಕೊಂಡು, ಅರ್ಧ ಓಡುವಂತೆ ಅರ್ಧ ನಡೆವಂತೆ...ಕಾಣೆಯಾದರು. ಉಳಿದವರು ಹೋಗುವುದನ್ನು ಕಾಲಿಗೆ ಮೊಳೆ ಹೊಡೆದವನಂತೆ ಕ್ಯಾಕಿಕ್ಕಿಯಾಗಿ ಛೇ, ..ಖಾಂಡೇಕರನನ್ನು ಹುಡುಕಬೇಕು. ಬಂದ್ದಾಗೆ ಕಾಣುವುದಿಲ್ಲ. ಭಾಳ ಟೈಂಶೀರ. ಪೋಲೀಸ ಡಿಪಾರ್ಟಮೆಂಟು ಬೇಗ ಬೇಗ ಪ್ರಮೋಶನ್ directly proportional to curruption ಕೊಲೆ ಪತ್ತೆ! ಇಲ್ಲವೇ ಕೊಲೆಮಾಡಿ ಪತ್ತೆ. ನಾಯಿ ಹಿಂದೆ ಓಡಾಟ. ಕೆಂಪು ಮರದಡಿ ಸಿಮೆಂಟ್ ಸೀಟಿನ ಬಳಿ ನಲ್ಲಿಯ ಕಾಕ್ ಕಳಚಿ, ನೀರು "ಧಬ-ಧಬ" ಹಾಳು ಮುಖಕ್ಕೆ ಅಷ್ಟು ನೀರು ಉಗ್ಗಿಕೊಂಡೆ. ಕಣ್ಣು ತಂಪಾಯಿತು. ಸ್ಟೇಶನ್ ಕ್ಲಬ್‌ಗೆ ಹೋದೆ. ಕಾಫಿ ಎಂದು ಕಾಳಾಪಾನಿ ತರಿಸಿಕೊಂಡೆ. ರಕ್ತ ಅಪರಿಚಿತವಾಯಿತು. ಉತ್ಸಾಹ ಬಂದಿತು. ಎಲ್ಲಾದರೂ ಯಾರಾದರೂ ಕಾಯ್ತಾ ಇದ್ದಾರೋ ಎಂದು ನೋಡಿದೆ. "ಕಾಯುತ್ತ ..." ನಗೆ ಬಂದಿತು. ಕಾಯುವ ಬದುಕು ಕೊನೆಗೊಂಡಿತು. ಹೋದರಾಯ್ತು ಬೇಕಾದ ಹಾಗೆ. ನಡೆದದ್ದೇ ದಾರಿ, ತಿಂದದ್ದೇ ಬದುಕು. ಎರಡು ದಿನದಲ್ಲಿ ಒಂದು ಬದುಕೇ ಕಳೆದಂತೆ. ಬೆಳಗಾದ ತಕ್ಷಣ ಎಬ್ಬಿಸಿದ್ದಳೆಷ್ಟೋ ಬಾರಿ. ಮುಂಸುಕೆಳೆದು, ಮುತ್ತಿಟ್ಟು, ಹಾಳು ಮುಖಕ್ಕೆ ಪ್ರೀತಿಯ ದೀಕ್ಷೆ. ಅನಾಥ ಬದುಕು ನಿಜಕ್ಕೂ ಸುಖಿ. ನನ್ನ ಮನಸ್ಸಿನಷ್ಟು ನನ್ನ ಜಗತ್ತು.

ಹಲ್ಲುಕಿಸಿದ. ಪ್ರಸವ. ತಲೆ ಚಾಚಿ ಕುಳಿತ. ಕಟ್ಟೆಯ ಅಂಚಿಗೆ ಕಾಗೆ ಪಿಷ್ಟಿ. ಹಸಿಯಾಗಿಸಲು ಇಬ್ಬನಿ. ಕೆಂಪು ಮರದಲ್ಲಿ ಕಾಗೆಗಳ ಸಂತೆ. ಖಾಂಡೇಕರ ಬರಲೇಬೇಕು. ಅವನೇ ಬರಲು ಹೇಳಿದ್ದನು. ವರ್ಷಗಳಿಂದ ಮೂಲೆಗಿದ್ದ ಆಮಂತ್ರಣ. ಕಾಲೇಜು ದಿನಗಳಿಂದಲೂ ಆತ ಶೋಕಿಯುವ. ಅವನಿಗೆ ಮನಸ್ಸೆಂಬುದು ಉಂಟೇ ಎಂದು ಕೆಲವರ ಸಂಶಯ. ಆದರೆ ನನಗೂ ಅವನಿಗೂ ಬಲು ಸಂಬಂಧ. ಅವನದು ಲೋಕ ವ್ಯವಹಾರ. ನನ್ನದು ಅಭ್ಯಾಸ. ಒಂದಕ್ಕೊಂದು ಪೂರಕ. ನನ್ನ ಬಡದಿನಗಳಲ್ಲಿ ಊಟ ಹಾಕಿ ಸಿನೇಮಾ ತೋರಿಸಿದ ಸ್ನೇಹಿತ. ಪುಸ್ತಕ ತೆಗೆಸಿಕೊಟ್ಟು ಕಟ್ಟು ನಿಟ್ಟಾಗಿ ಅಭ್ಯಾಸ ಮಾಡಿಸಿದ ಗುರು. ಹತ್ತು ಮಂದಿಯ ಮುಂದೆ ನಾನು ದೊಡ್ಡವನೆಂದು ಹೊಗಳಿ, ಡಿಬೇಟಿಗೆ ನಿಲ್ಲಿಸಿ, ಚಪ್ಪಾಳೆ ತಟ್ಟಿ, ನನ್ನದೇ ಹೈಕ್ಲಾಸ್ ಪರ್‌ಫಾರ್ಮನ್ಸ್ ಎಂದು ತೀರ್ಮಾನಿಸಿ, ಸೆಕ್ರೆಟರಿ ಮಾಡಿ, ತಾನು ಏನೂ ಅಂಟಿಸಿಕೊಳ್ಳದೇ ಒಂದು ಕ್ಷಣವೂ ಓದದೇ ಪಾಸಾಗಿ, ಏನೋ, ಲಂಚ ಕೊಟ್ಟು P.S.I. ಗೆ ಸೆಲೆಕ್ಟಾಗಿ ಭರ್ಜರಿ ಹೊಡದು ಪ್ರಮೋಶನ್ ಗಿಟ್ಟಿಸಿಕೊಂಡ ಸಮರ್ಥ ಮತ್ತು ಶ್ರೀಮಂತ. ಪ್ಲಾಟಫಾರ್ಮಿಗೆ ಮತ್ತೆ ನೂಕು ನುಗ್ಗಲು. ಹೊರಭಾಗದ ಸರಂಜಾಮುಗಳನ್ನು ಹೊತ್ತುಕೊಂಡು ಡಬ್ಬಿಗಳನ್ನು ಹುಡುಕುತ್ತ ಧಾವತಿ ಬಾಗಿಲು ತೆರೆದಿದ್ದ ಕಂಪಾರ್ಟಮೆಂಟಿಗೆ ನುಗ್ಗಿ ಹೊರ ಬಿದ್ದು ಮತ್ತೆ ನುಗ್ಗಿ ಇಳಿದು ಓಡಿ...ಗಡಿಬಡಿಯೋ ಗಡಿಬಡಿ! "ಹಲ್ಲೋ ..." ಯುನಿಫಾರ್ಮಿನಲ್ಲಿದ್ದ ಕಪ್ಪು ಧಾಂಡಿಗ ಬೆನ್ನು ಚಪ್ಪರಿಸಿ ಸ್ವಾಗತಿಸಿದಾಗ, ಭುಜ ಮುರಿದು ಇಳಿ ಬಿದ್ದಂತಾಗಿ ತಿರುಗಿ ನೋಡಿದರೆ ಖಾಂಡೇಕರ ನಗುತ್ತಿದ್ದ. ತಂತಿಗೆ ಹುರಿ ಹೊಸೆದಂತೆ ತಿರುಚಿದ ಮೀಸೆ, ಕಪೋಲ ಕೇಶ, ಉರಿವ ಕಣ್ಣುಗಳು; "ಎಲ್ಲಿ? ಯಾರಿಗೆ?" ವೆರಿ, ವೆರಿ ಗ್ಲ್ಯಾಡ್!" ಅಂತೂ ಬಂದೆಯಲ್ಲ! ಎಲ್ಲೆಲ್ಲೋ ಹುಡುಕಿದೆ. ತೋಳಿಗೆ ತೋಳು ಹಾಕಿ; ಜೀಪಿಗೇರಿಸಿದ. ಕಾಲೇಜಿನ ಎಲ್ಲ ಹುಡುಗಿಯರೊಡನೆ ಮಲಗುವೆನೆಂದು ಪ್ರತಿಜ್ಞೆ ಮಾಡಿದ ಧೀರ. ಎಳೆದೇಹ. ಬಿಳಿದೋಳು. ಕಪ್ಪು ತೊಡೆ, ಗುಂಡುಕಣ್ಣು. ಮೀನಾಕ್ಷಿ...ಖಾಂಡೇಕರ ಎಂದರೆ ಹೆದರಿಕೆ ಮತ್ತು ಆಕರ್ಷಣೆ. ಒಳ್ಳೇ ಡಿಪಾರ್ಟಮೆಂಟ್ ಸಿಕ್ಕಿದೆ. ಮೊದಲಿನಿಂದಲೂ ನನ್ನ ಕಂಡರೆ "ಯಾವುದಕ್ಕೂ ಆಗದ ದೊಡ್ಡವನು" ಎಂಬ ಅನುಕಂಪ. ಅದಕ್ಕಾಗಿ ಬಿಡದ ಸಂರಕ್ಷಕ ಪ್ರೇಮ; ಡಬ್ಬಲ್ ಫಾಸ್ಟ್ ಬಟ್ಟೆಯೆಲ್ಲ ಕೊಳಕು ಕೊಳಕು. ಚೌಕಿ ಪೋಲೀಸ ಬದಿಯಲ್ಲಿ ಡಿ. ವೈ. ಎಸ್. ಪಿ. ಮೆರವಣಿಗೆ. ಕಾರು, ಸುಗಂಧಿಯ ಮಾಲೆ. ವಾದ್ಯ. ತನ್ನ ತಾನೇ ಮರೆತ ಸ್ವರೂಪ. ಬಂಗಾರದ ಸರ ಆರುತೊಲೆ. ಸೊಕ್ಕಿಗೆ ಇನ್ನೊಂದು ಮಾಡಿಸಬೇಕು. ಬಂಗ್ಲೆ-ಬಾಡಿಗೆಯದಿರಬೇಕು. ಕಬ್ಬಿಣದ ಗೇಟು, ಕಾಜಿನ ಚೂರು ಹುಗಿದ ಕಂಪೌಂಡು. ಬಾಯಿಕಳೆದು ನಿಂತ ವಿಚಿತ್ರ ಜಾತಿಯ ನಾಯಿ. ಬಾಗಿಲಿಗೆ ಬಂದವಳು ಅವನ ಹೆಂಡತಿ-ಹಾಗೆಂದುಕೊಂಡೆ. ಅವಳ ಹಿಂದೆ ಹಣಿಕಿ ನೋಡುವ ಚಲುವೆ. ಕಾಲು ಸುತ್ತುತ್ತ ನಿಂತ ಎರಡು ಕರಿ ಬೆಕ್ಕುಗಳು. ಎರಡು ಬಿಳಿ ಬಿಳಿ ಮಕ್ಕಳು-ಕಪ್ಪ ಖಾಂಡೇಕರ. (ಕ್ರಾಸ್ ಬ್ರಿಡ್?) ಕೈಯಲ್ಲಿ ಚೀಲ. ಬಗಲಲ್ಲಿ ಟೊಪ್ಪಿಗೆ. ಸೆಲ್ಯೂಟ್ ಹೊಡೆಯಲು ಕೈ ಹುಡುಕುತ್ತ ನಿಂತ ಕಾನ್‌ಸ್ಟೇಬಲ್. ಹೊರಬಳದಲ್ಲಿ ಸಿಗರೇಟ ಹೋಮ-ಧೂಮ. ಭಾರೀ ಧೋತರದ ಬಾಪ್ಟಾ ಸಿಲ್ಕಿನ ಜುಬ್ಬದ ರಾಜಾ-ರಾಣಿಗಳು. ಕೊಳವೇ ಪ್ಯಾಂಟು ಮೇಲೆ ನೆಹರೂ ಶರ್ಟಿನ ತರುಣ. ಹಸ್ತಿದಂತದ ನುಣ್ಣನ್ನ ಮುಖ ಚಹ ತೆಗೆದುಕೊಳ್ಳಬೇಕೆಂದು ಅವರ ಒತ್ತಾಯ. "ಹೌದು. ಹೌದು" ಗಂಡನ ಅನುಮೋದನೆ. ಕೊನೆಗೆ, ಬಂದದ್ದಕ್ಕಾಗಿ ಆಭಾರ ಮನ್ನಣೆ. ಮನೆ ಮನೆಯೂ ಒಳೆಯ ಸಭೆ ಸಮ್ಮೇಲನ. ಹೊಗೆ ಉಗುಳಿ ಸಾಂಪ್ರದಾಯಿಕವಾಗಿ ಚಹ ಟೀಪಾಯಿ ಒಳ್ಳೆಯದು. ತೆಗೆದುಕೊಳ್ಳಿ, ಪರವಾ ಇಲ್ಲ' Intiroducton ಇಲ್ಲದವರು ಆ ಹುಡುಗಿಯ ಬಳಿ ಮಾತನಾಡ ಬಯಸಿದಂತೆ ಎದ್ದು ಎಲ್ಲರಿಗೂ ಹೋಗದೇ ಕುಳಿತು, "ನಾನು ಇಂಗ್ಲೀಷ್ ಪ್ರೊಫೆಸರ್. ರೊಟೇರಿಯನ್ ಇಂಟಡ್ರಕ್ಷನ್ ಮುಗಿಸಿ ಕುಳಿತ. "ಗ್ಲಾಡ್ ಟು ಮೀಟ್..." ಸಾಧ್ಯವಾಗಲಿಲ್ಲ. ಅದಕ್ಕೆ ಅವನಿಗೆ ದುಃಖವಾದಂತಿಲ್ಲ. ಅವನಷ್ಟಕ್ಕೆ ಅವನು ಜೇಬಿಗೆ ಕೈ ಹಾಕಿದ. ಸಿಗರೇಟಿಗೆ. ಅವು ತಮ್ಮಷ್ಟಕ್ಕೆ ಪಾಲಿಬದ್ದವು. ಅವರಷ್ಟಕ್ಕೆ ಅವರು. ಖಾಂಡೇಕರ ಒಳಗೆ ಹೋಗಿ ಚಹ ತರುವವರೆಗೆ ಎಲ್ಲವೂ ಸ್ತಬ್ಧ.- ಅವರವರ ಕೆಲಸ ಅಥವಾ ಕೆಲಸವಿಲ್ಲದೇ ನನ್ನ ಬಾಸಮ್ ಫ್ರೆಂಡ್ ಫ್ಲೇರ್‌ಫಾರ್ ಲಿಟರೇಚರ ಎಂದು ಚಾ ಮಾಡಲು ಹೋಗಿ ಶೃಂಗರಿಸಿಕೊಂಡು ಹೊರ ಬಂದ ಹೆಂಡತಿಯ ಕೈಯಿಂದ ಚಹ ತೆಗೆದುಕೊಳ್ಳುತ್ತ ಹೇಳಿದ. ಕಪ್ಪು ಕಾಣಲಿಲ್ಲ. ಬಳೀ ಕೈ ಕಂಡಿತು. ಎಲ್ಲ ಹೆಂಗಸರ ಕೈಯೂ ಅಷ್ಟೇ. ಕವಿತಾಳ ನೆನಪಾಯಿತು. ರೋಮ ತುಂಬಿದ ತೋಳುಗಳಲ್ಲಿ ಸಿಲುಕಿಕೊಂಡ ಕೆಂಪು ಮುಖದ, ತೋಯ್ದ ತುಟಿಯ ನೆನಪಾಯಿತು. "ನನಗೆ ಹೋಗಬೇಕು. ಸಂಕೋಚ ಬೇಡ. ನಾನು ಹೋಗು ಎನ್ನುವವರೆಗೂ ಟಿಚ್ ಎನ್ನಕೂಡದು" "ಕಮಾಂಡ್. ಬೂಟಿನ ಸಪ್ಪಳ. ಹೋದ ಎಷ್ಟೋ ಹೊತ್ತಿನವರೆಗೆ ಸಪ್ಪಳ ಕೇಳುತ್ತಲೇ ಇತ್ತು. ಪುರೋಹಿತರ ಕಂಠ ಶೋಷಣೆ. ಗುಳದಾಳಿ ಕರಿಮಣಿ. ಎಂದೂ ಮುಗಿಯದ ಮದುವೆ. ಸೋಫಾದ ಮತ್ತೊಂದು ತುದಿಗೆ ಅವನ ಹೆಂಡತಿ ಕುಳಿತಳು. ವಿವಿಧ ಭಾರತಿ ಪಂಚರಂಗಿ ಪ್ರೋಗ್ರಾಂನಲ್ಲಿ ಶಹನಾಯಿ ಮೊಳಗುತ್ತಿತ್ತು. ರೇಡಿಯೋ ತಿರುಗಿಸುತ್ತ ನಿಂತ ಹುಡುಗಿಯನ್ನು ತೋರಿಸಿ "ಅವಳು ನನ್ನ ತಂಗಿ, ಇಲ್ಲೇ ಇರುತ್ತಾಳೆ!" ಬೆರಳು ಸುಡುವ ಸಿಗರೇಟನ್ನು ನೆಲಕ್ಕೆ ಕುಕ್ಕಿ ಬಾಪ್ಟಾ ಸಿಲ್ಕಿನ ಜನ ಎದ್ದರು. ಅವರಷ್ಟಕ್ಕೆ ಅವರು ಹೋದರೆ ಇವಳು ಅವರ ಕಡೆಗೂ

ನೋಡದೇ ನನ್ನೊಡನೆ ಮಾತನಾಡುತ್ತಿದ್ದಳು. ಗೋಡೆಗೆ ನೇತುಹಾಕಿದ ವಾಲ್‌ಕ್ಲಾಕ್ ಹನ್ನೆರಡು ಹೊಡೆಯಿತು. ಒಳಗಡೆ ಅನ್ನಕ್ಕಾಗಿ ಹಪಹಪ. ನೆಹರೂ ಜುಬ್ಬದ ತರುಣನ ಹುಡುಕಾಟ. ಮತ್ತೆ ಎದ್ದು ಮತ್ತೆ ಕುಳಿತ. ಅವಳ ತಂಗಿಯು ನೆರಳಿಗಾಗಿ ಹಣಿಕಿ ಹಾಕಿದ. ಅವನಿಗೂ ಹಸಿವು. ಒಳಗಡೆ ಚಟ ಚಟ, ಪಟಪಟ. "ಹೊತ್ತಾಯ್ತು. ಹೋಗಬಹುದಲ್ಲ ಪೆದ್ದ ಪೆದ್ದನ ಹಾಗೆ ಬಡಬಡಿಸಿದ. ಕಲಿತವರಿಗೆ ಹೆಚ್ಚು ಹೇಳಬೇಕಾದುದಿಲ್ಲ; ಎಷ್ಟು ಹೇಳಿದರೂ ಅಷ್ಟೇ" "ನಾನು M. A. ಪಾಸು ಮಾಡಿದ್ದು ನೌಕರಿಗಾಗಿ ಯಲ್ಲ. ಲವ್ ಫಾರ್ ಲಿಟರೇಚರ್. ರೋಮ್ಯಾಂಟಿಕ್ ಯುಗ ಹೋಯಿತು. ರಿಯಲಿಸ್ಟಿಕ್ ಹಳತೇ. ಹೆಗಲ್ ಎಬ್ಸಲ್ಯೂಟ್ ಐಡಿಯಲಿಸಂ ಹೇಳಿ ಸಂಪ್ರದಾಯಕ್ಕೆ ಕಾಯಕಲ್ಪ ಮಾಡಬಯಸಿದ್ದ. ಅವನೊಬ್ಬ ಇಂಟಲೆಕ್ಚುಯಲ್ ಹಿಪಾಕ್ರಟ್. ಎ ರ್‍ಯಾಸ್ಕಲ್ ಆಫ್ ಫಸ್ಟ್ ವಾಟರ್. ಎಕ್ಸಿಸ್ಟನ್ಸಲಿಸಂ. ಕೇವಲ ಸ್ಕೂಲಲ್ಲಿ ಅದು ಲೈಫ್! ನಾನು ನ್ಯೂ ಕ್ರಿಟಿಕ್" ಎಂದು ಹೇಳುತ್ತಾನೆ. ಮತ್ತೆ ಹಣಿಕಿ ಹಾಕುತ್ತಾನೆ. ಕೂಡ್ರ ಬಯಸುತ್ತಾನೆ. ಪರವಾಗಿಲ್ಲ, ಮತ್ತೆ ಬಂದರಾಯ್ತು." ಒಂದು ಜೇಡವು ...ತನ್ನ ಗೂಡನು..." ಅಜ್ಜಿ ಕಾಲದ್ದು. "ಇವರದೇನ್ ರಿಯಲಿಸ್ಟಿಕ್ ಮತ್ತು ಲೈಫ್. ನಾವು ಊಟ ಮಾಡುವಾ. ಅವರು ಯಾವಾಗಾದ್ರೂ ಬರುವವರು. ಉಣ್ಣುವಾಗ ತೂಕಡಿಕೆ. ನಾನು ಸಾಯುತ್ತಿರಬೇಕೆಂದು ಅನಿಸುತ್ತದೆ. ತುತ್ತು ಗಂಟಲಲ್ಲಿ ಬೆಣ್ಣೆಯಂತೆ ಇಳಿಯುತ್ತದೆ. ನೀರು ಸುರಿದಾಗ ಸಾವಕಾಶ ತೆವಳಿಕೆ. ಮಂಗ ಮಾಯ. ಕೈ ತೊಳೆದು ಹೊರ ಬರುವಾಗ ತಲೆಗೊಂದು ದಿಂಬು ಸಿಕ್ಕರಾಗುತ್ತಿತ್ತೆಂದು ರಭಸ. ಉರಿ. ಒಳಗಿಲ್ಲ ಗದ್ದಲ ಏಳುವುದಕ್ಕೆ ಮೊದಲೇ ನಿದ್ರೆ ಮುಗಿಯಬೇಕು. ಒಣ ಒಣ...ಬಣ-ಬಣ. ಬಿಸಿಲಿನ ಗಾಳಿ. ಅದೂ ಔಪಚಾರಿಕ-ಬರಲಿ ಬೀಸಿ. ಗಾಜಿನ ಕದ ಚೂರು ಮಾಡಿ. "ಮಲಗಿ, ಮೇಲಿನ ಕೋಣೆ ಗೆಸ್ಟಿಗೆ" ಹಸಿದ ದೇಹ ಒರಗಲಾರದು. ರೆಪ್ಪೆ ಬಹಳ ಹಗುರ ಹಗುರಾಗಿ ಒಂದರ ಮೇಲೊಂದು ಕೂಡ್ರಲಾಗದಷ್ಟು ಹಗುರು. ಹಣೆ ತುಂಬಾ ಜಡತೆ. ಕಾಟಿನ ತಲೆಯ ಮೇಲ್ಗಡೆ ಪಬ್ಲಿಕ್ ಲ್ಯಾಟ್ರಿನ್. ದುರ್ಗಂಧ. ಗಾಳಿ ಗುಂಯ್...ಎನ್ನುತ್ತದೆ. ಮುಚ್ಚಿದರೆ ಬೇಯಬೇಕು. ಬಿಳಿ-ಬಿಳೀ ಹುಡುಗರು ಅಟ್ಟ ಹತ್ತಿದರು. ಕೋಣೆಯ ಕದ ಮೆಲ್ಲನೆ ನೂಕಿ ಹಣಿಕಿ ಹಾಕಿದರು.

ಹಿಂದೆ ಅವರ ತಂಗಿ. "ನಿದ್ರೆ ಬಂದಿಲ್ವೇನು? ಕಣ್ಣೆಲ್ಲ ಕೆಂಪು-ಕೆಂಪು? ನನ್ನ ಭಾವಯ್ಯನವರಿಗೆ ಅತಿಥಿ ಸತ್ಕಾರ ಭರ್ಜರಿ ಆಗಬೇಕು. ಇಲ್ಲವಾದರೆ ಕೋಪ. ಎಲ್ಲಾ ಬೈಗುಳ ನನಗೆ. ಹುಡುಗರು ಅಮ್ಮ ಎನ್ನುವದು ನನಗೆ. ತಾಯಿಯ ಹತ್ತಿರ ಹೋಗೇ ಗೊತ್ತಿಲ್ಲ." ತಲೆ ಬಿರುಕು ಬಿಡುವಂತಾಯಿತು. ಒಳಗಡೆ ಸುಡು ಧೂಳು, ಬಿಸಿಗಾಳಿಗೆ ರಸ್ತೆಯ ಧೂಳು, ಬುಸ್ಸ್ ಎಂದು ಕಿಟಕಿಯ ಒಳಗಡೆ ನುಗ್ಗಿತು. ಬಿಸಿ ಬಿಸಿ ಅನುಭವ. ಕವಿತಾ ಹೀಗೆಯೇ ಇದ್ದಳು. ಅವಳು ದೇವತೆ. ಆಗ ಪ್ರತ್ಯಕ್ಷ, ಈಗ ಅಂತರ್ಧಾನ. "ಇವು ನನ್ನ ಹತ್ತಿರವೇ ಮಲಗುತ್ತವೆ..." ನಿಷ್ಪಾಪ ಪಾರಿಜಾತ. ...ಮದುವೆ ಕಾಲಕ್ಕೆ ಅಲ್ಲಿಯೇ ಇರಬೇಕಿತ್ತು. ಕಣ್ತುಂಬ ಆ ಅನುಭವ ನೋಡಿ "ಸುಮಂಗಲೀಭವ" ಎನ್ನೆ... "ಅಕ್ಕ ತವರಿಗೆ ಹಡೆಯಲು ಹೋದಾಗ ಭಾವನನ್ನು ನೋಡಿಕೊಳ್ಳಲು ಬಂದೆ." ಆ ಮೇಲೆ ಗದ್ದಲ. "ಭೋಳೀ ಮಗ್ನೇ, ನಿನ್ನ ತಂಗಿಯ ಮಿಂಡಂದಿರ ಹೆಸರನ್ನೆಲ್ಲ ಹೇಳಿಯೇನು!" ನಿಮ್ಮವ್ವ ಬೇವಾರ್ಸಿ ಸೂಳೆ!" ಧಡಾರನೆ ಎದ್ದು ಕಿಡಕಿಯಲ್ಲಿ ಹಣಿಕಿ ನೋಡಿದರೆ ತೆಕ್ಕಾ ಮುಕ್ಕಿ ನೂಕಿ, ।ಭಟಾರ್". "ಅಯ್ಯೋ" ಹಲ್ಲು, ರಕ್ತ.! "ಅಕ್ಕನಷ್ಟೇ ನಾನು ಈ ಮನೆಗೆ ಯಜಮಾನತಿ. ಅಕ್ಕನದು ಫ್ರೀ ಲವ್!"... ಬೆಳದಿಂಗಳ ಹೂವೇ, ನಕ್ಷತ್ರವೇ, ಪ್ರೀತಿಯೇ, ಅಪ್ಸರೆಯೆ ಹೂವೇ, ನಕ್ಷತ್ರವೇ, ಪ್ರೀತಿಯೋ, ಅಪ್ಸರೆಯೇ, ಪಲ್ಲವಿ, ಪಾರಿಜಾತ,... ಎಂದು ಪ್ರೇಮಕ್ಕಾಗಿ ಬದುಕಿಕೊಂಡವರು... ಸುಳ್ಳು; ಮೋಸ; ಜೀವನ-ಆದರ್ಶ. ದೇವರು-ದಿಂಡರು, ನಾನು ಅವರು, ಎಲ್ಲಾ. ರಾಮಭಜನೆ, ರಾಮಗೀತ, ಎದೆ ತುಂಬ ಉಸಿರು ಕಟ್ಟುತ್ತಿದೆ. ಹೆಣ... ಅಕಸ್ಮಾತ್ ಉಸಿರಾಡದಂತಾಗುತ್ತದೆ... ಸೆರಗು ಜಾರಿತು. ಹಿಡಿಯಲಾರದಷ್ಟು ಭಾವ. ನೆತ್ತಿಯ ಒಳಗಡೆ ಸರ್ಪ ಹೆಡೆ ತೆಗೆದು ಹೊಡೆದಂತೆ! "ಹೆಂಡತೀನಾ ಯಾರ ಬುಡದಾಗ ಮಲಗ್ಸಿ ಬಂದೆಯೊ ಲೌಡಿ ಮಗನೆ!..."ಫಟ್... ಫಟ್. D.Y.S.P. ಮನೆ ಮಾನಹಾನಿ ಕಳವು ವ್ಯಭಿಚಾರ! "ನಿಮಗೆ ಕಾಫಿನೋ ಚಹವೋ?" ನಿದ್ರೆ ನನ್ನನ್ನು ಹುಡುಕುತ್ತಿತ್ತು. ನಾನು ಮುಗುಚಿಕೊಂಡೆ. ಎದುರಿನ ಹುಡುಗಿ ನೆತ್ತಿಗೆ ಹತ್ತಿದ ಚಿತ್ತ ಇಳಿಸಿದ್ದಳು. ಮಕ್ಕಳು ಮತ್ತೆ ಜಗ್ಗಿದರು. ದೂಡಿದರು. "ನಿದ್ರೆ ಕಡೆಗೆ ಮಾಡುವಿರಂತೆ. ಚಹ ತರಲೇ?" ಅವಳು ಕೆಳಗೆ ಹೋದಳು. ಮಕ್ಕಳು ಅವಳನ್ನು ಹಿಂಬಾಲಿಸಿದಳು... ಇನ್ನೇನು, ಐದು ನಿಮಿಷ ಮಲಗ

ಹೇಳು



ನಡೆಂತ ಬರಲಿ ಬಿಡಲಿ
ಹೂಮೊಟ್ಟೆ ನಗಲಿ ಬಿಡಲಿ
ಈ ಬದುಕಿನ ಹಾದಿಯೊಳಗಿನ
ಪಯಣಿಗನೇ
ಬಯಲಿನ ನಿನ್ನ ಜೀವನ
ಕಥೆಯ ಹೇಳು!

- ಸಂಜ್ಯೋತಿ ಹಿರೇಮಠ



ಶ್ಯರ್‌ಬಾಕ್ ಹೊಡ್ತು... ಅಂತ ಹೇಳಿ ಹೋಗಿಬಿಡುತ್ತಾಳೆ. ಆತ ಹೇಳುವುದು Existentionalism ಪ್ರ್ಯಾಕ್ಟೀಸ್ ಮಾಡುವುದು Platonism ಬದುಕುವುದು Romanticism ಅದಾವುದ ಮೋಡಕ್ಕೆ ಕಾಣಿಗ ಸಹ ಬಿಡದೆ. ಮಾಡುವುದಾಗಿ ದಾಗ ಏನೆ ರಬ್ಬರ್ ಏರಿತು. ಊಹಿಸುವುದು ಹಿಡಿಸಲ್ಲ. ಕಾಲೂ ಇಲ್ಲ. ಕೂಡ ಇಲ್ಲ. ಹಾಗೆ ಏನೂ ತಿಳಿಯುತ್ತಿದ್ದಿಲ್ಲ. ಮನುಷ್ಯನ ಜೊತೆಗೆ ಬದುಕುವುದನ್ನೇ ಕಲಿತಿಲ್ಲ. ನಾನು ಕಾಣುವುದು ಕತ್ತಲೆಯೂ ಆಗಿಲ್ಲ. ಆಗಿದವರು ಕೊಡುವುದಕ್ಕೆ ಬೇಕು ಆಗಲಿಲ್ಲ. ಐವತ್ತೈದರ ಗೇಟಿನ ಬಳಿ ಸಿಗರೇಟಿನ ಮಾರುವಂಥಾ ಬಾಲ ಅಡಿಸಿತು. ಏನದು ಹೊಡ್ದು ಕೂಡಿದ ಗಿಡ. ಕಾಡುಕೋಡುಕಟ್ಟು. ಬೆಳದಿಂಗಳ ಕದವು ತೆರೆದ ನಮೋಃತ. ದೇವತೆ. ಜುಟ್ಟುಗಳಿಗೆ ಉಬ್ಬು ಸೆರಗು ಅದಕ್ಕೆ ಹೊಡೆದಿದ್ದಾಗ. ಹಾಯಿ, ದೋಣಿ, ಗಲ್ಲಕ್ಕೆ ಗಲ್ಲ... ದೂರ ತೀರಕೆ ಹೋಗಲಿ ಅಳ್ಳದ ಸ್ಥಳದ ಏದ್ ಅದರೂ ದಿಟ್ಟಿಸಿನೋಡಿಗೆ ಸರಿ. ಧ್ರುವ ನಕ್ಷತ್ರ, ಬಳಿಗೆ ಓಡಿದ ಹುಡುಗಿ, ಹರಟೆ ಹಲ್ಲು ಬಾಣ ಮರೆತು. ಬೇಟೆಗೆ ಹೊರಟಿದ ವ್ಯಾಧ. "Sorry Excuse me" ಏನು ಸಾರಿ! ಏನು ಎಕ್ಸ್‌ಕ್ಯೂಸ್! ಸ್ಟುಪಿಡ್ ಪ್ಲಾಟಾನಿಕ್ ದುಃಖ ಫೂಲ್ಸ್, 'ಆಲ್ ಡ್ರೀಮ್ಸ್, ಸೊ ಲೈಫ್'!

...ಜಾವರ್‌ಕ್ಷಾಕ್ ಜನ್ಮರವು ಬಡಿದುಕೊಂಡಿತು. ಗಡಿಯಾರ ಸ್ಯವಿಲ್ಲ. ಊರಿಗೆ ಬೇಕು ಟ್ರ್ಯಾಂ, ಹಾಗೆ, ಕಾವಲಿ. ಉರಿಉರಿ. ಬೇಯುವುದಕ್ಕೆ ಅವರೆ ಸಾಯುದಂತೆ! ನಿದ್ರೆಯೂ ಬರಲಿಲ್ಲ. ಬರಲಿಕ್ಕೇ ಇಲ್ಲ. ಏನು ವಿಶ್ವಾಸವಿಲ್ಲ. ದಪ್ಪನ್ನ ಎದೆಯ ಮೇಲೆ ಮಿದುವಾದ ಕೈ, ಬಂದಂತಾಗಿ ಬರದಂತಾಗಿ, ಕೈ ಹಣೆಯ ಮೇಲೆ ಸವಿದಂತಾಗಿ ಸುಸ್ತಾಗಿ ಪಾಕೆಟು ಕುಳಿತು ಬಾಯಿ ಬಿಟ್ಟಂತಾಗಿ ಮಾತಿನಲ್ಲಿ ನಿದ್ದೆಗೆ ಜಾರಿದಂತಾಗಿ ಹೊರಗಡೆ ರಸ್ತೆಯಲ್ಲಿ ಹಾಡು. ನಿಶ್ಶಬ್ದ ದೊಡ್ಡನೆ ಬಿದ್ದಂತಾಗಿ ವಣೆನ. ಗಾಬರಿ. ಊರೆಲ್ಲ ಗಬ್ಬು ಹೊಡೆದಂತಾಗಿ ಪಕ್ಕೆಗೆ ಕುಸುಮ ಬಿಡಿದಂತಾಗಿ ಮತ್ತೆ ಮೆಟ್ಟಿಲು ಹತ್ತಿದಂತಾಗಿ ಕೆಮ್ಮಿದಂತಾಗಿ ಸುಳಿದಂತಾಗಿ ಮಾಯವಾದಂತಾಗಿ ಸೋಫಾದ ಮೇಲೆ ಹಾಸಿಗೆಯಲ್ಲಿ ಗದ್ದಲವೇ ಗದ್ದಲ. ಕೊನೆಗೆ ಅಂಗಾತ ಮಲಗಿ ತಲೆಯ ಹಿಂದೆ ಕೈ ಸೇರಿಸಿದೆ. ಒಂದು ತರಹದ ದೊಡ್ಡಸ್ತಿಕೆ. ಕಣ್ಣಿಯ ಹೊಟ್ಟೆ ಉಬ್ಬಿ ಉಬ್ಬಿ ಕುತ್ತಿಗೆಯೇ ಮರೆಯಾಗಿ. ಸ್ಲ್ಯಾ ಏವ ಹಾರಿದ್ದು ಮತ್ತೆ ಬಿದ್ದದ್ದು ನಾನೇ ಕೇಳಿದ. ಅಲ್ಲಲ್ಲಿ ಸರಗಳನ್ನೇ ತುಂಡು ಮಾಡಿ ಒಂದಕ್ಕೊಂದು ಸಂಬಂಧಿಸಿದಂತೆ ಕೈ ಎತ್ತಿದರೆ ಕಾಣದವರೆ. ಕಾಲು ತುಂಡುತುಂಡಾಗಿ ಉದುರಿದರೆ ಧಮ. ಮಿಸುಕಾಡಲಿಲ್ಲ. ಹಾಗೆಗಿಂತ ರಾತ್ರಿ, ದೊಡ್ಡದು. ಉಸಿರಿಗೆ ಬೇಕು. ಸ್ಮಶಾನದ ಇದ್ದಂತಿಲ್ಲ. ಸತ್ತವನು ನಾನೊಬ್ಬನೇ. ಉಳಿದವರೆಲ್ಲ ಮತ್ತೆ ನಾಳೆ ಏಳುತ್ತಾರೆ. ನನ್ನ ಉಸಿರನ್ನು ಕೊನೆಯವರಾಗಿ ನಾನೇ ಎಳೆಯುತ್ತಿರುವ ಸಾಹಸ. ಒಂದು ಮಜು ಕರೆದಾಯ ಹಾಳಾಗಿರಲಿಲ್ಲ. ರಸ್ತೆ, ಮೋಟಾರ್ ಬೂಟು. ಟಕ್ ಟಕ್....ಗೊರಕೆ. ಮೊರಳಾಟ. ಸತ್ತು ಬದುಕು. ಎಚ್ಚರವಿದ್ದವನು ನಾನೊಬ್ಬನೇ. ಊರವರೆಲ್ಲ ಸಿಗಿದು ಬಿದ್ದಿದ್ದಾರೆ. "ಹಾಗೆ ಕೇಳಿದರೆ ಸಾಡೇ, ಮಾವ ಇಪತ್ತು ಸಾವಿರ ಕೊಟ್ಟಿದ್ದಾರೆ. ತಂಗಿ ಮದುವೆ ಬಳುವಳಿ ಕೊಟ್ಟಿದ್ದಾನೆ. ದೊಡ್ಡ ಫೋಟೋ ಕೊಡೋದೂ ಇಲ್ಲ. ದೇವತೆಯಂತವಳು ಹೊಟ್ಟೆ ಹೊತ್ತು ನಿಂತಿರುವ ಮಲಗಿರುವ ಹೆಂಗಸು. "ಮಲ್ಲಿ ಬೊಂಬೆ ಬೊಂಬೆ. ಹಾಗೆಯೇ ದಿಂಬಿನ ಬಳಿ ಬಿಟ್ಟು,

ಮೇ, ಮಾರು ತೆಂಗಿನಕಾಯಿ. ಗುಡಿಗಾಡಿ ಜನಜಾತ್ರೆ ಬಿದ್ದನೆಲ. ಸ್ನೇಹಿತನ್ನ. ನಡಿ ಗಾಡಿಗಾ ಬಟ್ಟೆ. ಪೆಗ್ಗಿಗ ಇಂಗ ಹಾಕಿ ಕಟ್ಟಿದಾಗ ಬೇಡವನ್ನು. ಕೋಟು ಕಲ್ಲಿಗೆ ತಾಗಿದ್ದು ನವಿದ ಮುದುಕ ಕಾರುತ. ಕ್ಲಾಸು ಜೇಬಿ, ಫ್ರೆಶ್‌ಬಾಯ್ ಸೇವೆ. ಗಾರ್ಡನ್–ಮುದುಕ:- ತೋಳಿನ ಇಡುಕ್ಕಿನ ಮೇಲಿರುವ ಭರ–ಭರಾಟ–ಇತ್ಯ... ಮತ್ತೆ ಅಂಗಡಿ ತೆರೆಯಬೇಕು. ಮಾನವ ವ್ಯವಹಾರದಲ್ಲಿ ಸಂತೆಯಿಲ್ಲ. ವಿಚಾರ ಮಾಡುವುದು ಪಾಪ. ಅವತಾರವೆತ್ತಿ ಬರುವನು. ಈ ಲೋಕ ಕಿಟ್ಟಿ ಬಟ್ಟಲೆ ದೇವರ ಗಂಧ–ಗಾಳಿಯ ಭಾಗೀರಥಿಯ ಅವತರಣ–ಚೀಡವನ್ನು. ಕವಿತಾ ಕವಿಸು ಮತ್ತೆ ಬಾಳು ಪಕ್ವವಾಗಿಲ್ಲ. ಬೇಕಾದರೆ ಬಾ. ವಸ್ತ್ರದ ಜಳಿಗಲ್ಲ ಮೇಲೆ ದಬದಬ ಏಳಿ. ರಕ್ತ ಚರ್ಮ ಎಲಾ ಪಿರ್ಯಾಗಿ ಒಳೇ ವಿಲಾಸಿನ ಗೂಡ ಕೊಲೆಮಾಡು. ಅಥವಾ ಪೂಜೆಮಾಡು. ಅವನಿಗೆ ನೇಗಿಲ್ಲೇನೆ. ಸಮಾಜ. ಧರ್ಮ. ಆದರ್ಶ ಗರಿ ವಿಂದೆಲ್ಲ ಕಡೆಗೆ ಹಚ್ಚಿಕೊಳ್ಳಬೇಡ. ಒಬ್ಬನನ್ನು ಹತ್ತು ಭಾಗ ಮಾಡಿ ಹತ್ತುದನ್ನು ಪಡೆದು ಸುಖವಾಗಿರುವ ಕಾಲವಿದು. ಈ ಪರ್ಸನಲ್ Private ವ್ಯವಹಾರಕ್ಕಾಗಿ

ಸುಳಿಯುತ್ತದೆ. ಮೂಗಿನ ಮೇಲೆ ಏನೋ ಅಡೆ ಚಣೆ. ಪಕ್ಕಕ್ಕೆ ಮುಷ್ಟಿ ಮಾಡಿ ಗುದ್ದಿಂದತೆ. ಸಿಗರೇಟ ಹಚ್ಚಿ ಹೊಗೆ ಉಗುಳಿದೆ. ನಾನೂ ಕೋಣೆ ಸಮೇತ ಮುಬ್ಬು-ಮುಬ್ಬು. ಸುಳ್ಳು, ಸತ್ಯ. ಬಲಾತ್ಕಾರದಿಂದ ಪಾರು ಮಾಡುವ ಸೈನಿಕ - ಹೆಣ್ಣಿನ ಮೇಲೆ ರೇಡ್ ಮಾಡಕೂಡದು. ಪ್ರಕೃತಿ. ಭಂಡ ವಳಶಾಹಿ "ಹಲ್ಲಿ ಲೊಚ ಲೊಚ. ಹಲಗೆಯ ಮೇಲೆ ಇಲಿಯ ಬೇಟೆ. ಎದೆಯಲೊಂದು Ice Candy. ಕಣ್ಣು ಉರಿಯುತ್ತಿದೆ. ಬಿಚ್ಚಿದರೆ ಹುಣ್ಣು ಸುಲಿದಂತೆ. ರಸ್ತೆಯಲ್ಲಿ ತಿರುಗಾಟ. ಬೆಳಗಾಗಿರಬೇಕು. ದುಡಿತ. ಬೆವರು. ಒಂದು ನವಟಾಕು ಹೆಂಡ. ಎದೆ ತಣ್ಣಗೆ. "ಒಂದು ಕ್ಷಣದ ದೇಹ ಸಂಬಂಧಕ್ಕಾಗಿ ಒಂದು ಜೀವನವಿಡೀ ನರಳುವದನ್ನು ನಾನು ಒಪ್ಪುವದಿಲ್ಲ." "ಮನಸ್ಸೊಂದು ದೇಹಕ್ಕೆ ಹಬ್ಬಿದ ಬತ್ತಳಿಕೆ; ರುಚಿಯೊಂದು ಭ್ರಷ್ಟಾಚಾರ." ದೊಡ್ಡ ಬೆಳಗಾಗಿತ್ತು. ಗೋಡೆಯ ಮೇಲೆ ಹಲ್ಲಿ ಫಳಾಹಾರಕ್ಕೆ ಹಾತೆ ಹುಡುಕುತ್ತಿತ್ತು. ಕುತ್ತಿಗೆ ಬಾಯಿಗೆ ಆನಿಸಿಕೊಂಡ ಹಾತೆ, ರೆಕ್ಕೆ ಪಟ-ಪಟ-"ಬದುಕು ಘಟನೆಗಳ' ಸರಪಳಿ. ವ್ಯಕ್ತಿ ಅಲ್ಲಿ ರೇಸು ಮಾಡಬೇಕು. ತರ್ಕ ಭಾವನೆಗಳೆರಡೂ ಬದುಕಿಗೆ ಜೋತು ಬಿದ್ದ ಆಡಿನ ಮೊಲೆ." ಕವಿತಾ ಸತ್ತು ಹೋದಳು. ಆ ಬದುಕಿಗೂ ಈ ಬದುಕಿಗೂ ನಂಟು ಬೀಳದ ಅಂಟು. ಹರಿದ ಹವಾಯಿ ಚಪ್ಪಲ್ಲು. ಅಷ್ಟು ಗಟ್ಟಿಯಾಗಿ ನಕ್ಕಿದ್ದು ಅಷ್ಟು ಭಾರವಾಗಿ ಎದೆಯ ಮೇಲೆ ಒರಗಿದ್ದು. ನೆನಪು ಶಾಪ. ಪ್ರೀತಿ. ಪ್ರೇತ.. ಥಕ್‌ಥಕ್. ಥಕ್‌ಥಕ್ ಥೈ! ಎದೆಯೊಳಗಡೆ ಕೈತೂರಿ ಪ್ರೀತಿ ಶವವನ್ನೂ ಎಳೆದು ತೆಗೆಸಿ ಕವಿತಾ ನಕ್ಕಳು. ಬಿಳೀ ಮೋಡದ ಪಡಕಿನಿಂದ ಪಾರಿಜಾತದ ವೃಷ್ಟಿ! ದುನಿಯಾಕಾ ದೂಸರಾನಾಮ ಹೈ-ಧೋಖಾ! ವ್ವಾ! ಕಾಲಡಿಯ ಮಣ್ಣು ಹುಡಿಯಾಗಿ ಹೂತು ಹೋದೆ. ಬಾಗಿಲು ಕಿಟಕಿ, ಕಾಟು. ರಾಜು, ರಸ್ತೆ, ನಾಯಿ, ಬೆಕ್ಕು; ನಾನು, ಅವಳು; ಖಾಂಡೇಕರ, ಧೋತರದವರು, ಜುಬ್ಬಾ ಭದ್ರಾವತಿ ಕಾಗದ ಕಾರಖಾನೆಯ ಕಲಸು ಮೇಲೋಗರ. ಕೆಟ್ಟ ನಾತ. ಮಿದುಳು ಕೊಳೆತಿದೆ. ಬಿಳಿಹುಳು ಬುಡು ಬುಡು ಹೊರಬೀಳುತ್ತಿದೆ. ನಾನು ಕವಿತಾ ಪ್ರೀತಿ, ಗಟಾರ. ಇಲ್ಲಿ ನಾನು ಅಲ್ಲಿ ಅವಳು. ನಿಜಕ್ಕೂ ಮಧ್ಯ ನ್ಯಾಶನಲ್ ಹೈವೇ. ಇಲ್ಲಿ ಸಾಮಾನುಗಳು ಮಧ್ಯ ನಾನು. ನನ್ನ ನಗು ನನ್ನ ಕಣ್ಣೀರು-ನನ್ನ ಕಾಲವರೆಗೆ ಮಾತ್ರ. ಹಗ್ಗ ಹುರಿ ಸರಪಳಿ ಎಳೆತ; ಕಡಿತ; ಬೀಳುವದು, ಕ್ಲಬ್ ಕ್ಯಾಬರೇ ಕಾಕ್‌ಟೇಲ್- ಏನು ಸಂಬಂಧ? ಎಲ್ಲ ಕಾಣುತ್ತದೆ. ಅನಿಸುವ ಮೊದಲೇ ಮುಗಿದಿರುತ್ತದೆ. "ಈ ಹೊತ್ತೇ ಆಫೀಸರ್ಸ್ ಕ್ಲಬ್ಬಿಗೆ ಹೋಗಬೇಕು. ರೆಡಿಯಾಗಿರು!" ಕಮಾಂಡ್-ರಿಕ್ವೆಸ್ಟ್ ಕವಿತಾ ರೆಡಿಯಾಗೆಂದು ಹೇಳುವ ಪ್ರಮೇಯವೇ ಇರಲಿಲ್ಲ. ಇರುವ ಅವಶ್ಯಕತೆಯೇ ಸಿದ್ಧತೆ. ಎಲ್ಲಿಗೆಂದರಲ್ಲಿ ಎಷ್ಟಾದರಷ್ಟೊತ್ತಿಗೆ. ಎಪ್ಪಾಂಟಮೆಂಟಿಗೆ ಪೆನ್ಸಿಲ್, ಡೈರಿ; "ನಮ್ಮದೆಲ್ಲ ನಿಮಗೆ ಸೇರಲಿಕ್ಕಿಲ್ಲ. ನಮ್ಮದು ಒತ್ತಾಯವಿಲ್ಲ. ನಾವು ಭಕ್ತಿಯನ್ನುಪಯೋಗಿಸುತ್ತೇವೆ. ಮತ್ತೆಲ್ಲ ಲಕ್ಷ್ಯವಿಲ್ಲ. ಕ್ಷಮೆಯಿರಲಿ" ನನ್ನ ಹೆಗಲಿಗೆ ಕೈಹಾಕಿ ಬದಿಯಲ್ಲಿ ಕೊಡಿಸ್ಸಿ. ತುಟಿ ನಿದ್ರಸ್ತವಾದ ಕಣ್ಣಿನಲ್ಲಿ ಗುಂಗಿನ ನಗು. ನರ ಜಗ್ಗಿದಂತಾಗಿ ರಕ್ತ ಕಾದು ಸೆಟೆದು ಮೈ ಮುರಿದು ಮುದ್ದೆ. ಬಾಂಬುಗಳನ್ನು ಕೊಳೆಸಿ ರಾಶಿ-ರಾಶಿ. ರಾಡಿ, ರಾಡಿ. ಮೈಯೆಲ್ಲ ಮೈಲಿಗೆ. ಮನಸ್ಸು ಬಕಪಕ್ಷಿ. ಮತ್ತೆ ಬೆಳದಿಂಗಳು. ಮಲ್ಲಿಗೆ ಸುಗಂಧ. ತಿಳಿಗಾಳಿ, "ಕವಿತಾ ನಾನು ಸತ್ತು ಹೋದೆ" ಪುನರ್ಜನ್ಮ ಅಸಾಧ್ಯ ಕಲ್ಪನೆ. ಬೆಂಕಿ ಹತ್ತಿ ಉರಿಯುವ ಅಡವಿಯ ಮೇಲೆ ದಪ್ಪಗೆ ಬೆಳದಿಂಗಳು. ಚಿಗುರಿಲ್ಲದ ಬರಡು ಮಾವು. ಬೇಸರವೇ. ನಿಮಗಾಗಿ ಮತ್ತೆ ಎಲ್ಲಾ ಹೇಳಿದ್ದೇನೆ. "ಬರುವ ಹೊತ್ತಾಯಿತು!" "ಆಫೀಸರ್ಸ್‌ಕ್ಲಬ್. ಜೇಮು ಹಂದಿಯಂತೆ. ಮೈ ಕೊರೆವ ಚಳಿ. ಗಾಳಿ ಹರಿದು ಚಿಂದಿ-ಚಿಂದಿ. ಮರಗಳೆಲ್ಲ ತಲೆಕೆಳಗೆ. D. Y. S. P. ಗೆ ಟ್ರಾಫಿಕ್ ರೂಲ್ಸು. ಜನ ಸುತ್ತಲೂ ಎದ್ದು ಓಡಿ ಹೋಗಿ ಗಟಾರದಲ್ಲಿ ಬಿದ್ದಿರಬೇಕು. ಹೆಂಡತಿ; ಪೆಟ್ರೋಲ್, ಗಂಡ; ಎಕ್ಸಲೇಟರ್. ಚಪ್ಪಟೆ. ಉಸಾ ಗಡಿ ಓಣಿಯ ಮುತ್ತೈದೆ. ಕೆಂಪುದೀಪದ ಕೆಳಗೆ. ಕೆಂಪು ಹೂವಿನ ಮರಗಳು. ಏಕಾಂಗಿ ಬಿಲ್ಡಿಂಗ್, ಕಬ್ಬಿಣದ ಗೇಟು ಜೇಬಿಗೆ ತಾಗಿ ಇಬ್ಭಾಗ. ಮುಣ್ಯ ಗೋಡೆ. ಬಚಾವ್," "ಹಲ್ಲೋ. We are bored waiting for you. Time is the fourth Dimension. He a tool" ಹೊಸೆದ ಮೀಸೆಗಳು. ಎಣ್ಣೆ ಬಡಿಯುವ ಧಡೂತಿ ತೊಳೆ, ಮಲ್ಲಕಂಬ; ನೂರು ಕ್ಯಾಂಡಲ್ಸ್. ಮಂದ ಕೆಂಪು ಲ್ಯಾಟು. ನೀಲಿ ಡಿಮ್ ಲ್ಯಾಟ್. ಕೆಳಗಡೆ

ಹಸಿದ ಪ್ಲಾಸ್ಟಿಕ್‌ಡಬ್ಬ. ಜಿವ್ ಜಿಮ್ ಜಿಮ್ ಜರ್ರ್... ಕಟಕಟ... ಕಟಕಟ...ಎಲುವುಗಳು ಕಳಚಿ... ಚೀಲದ ತುಂಬ ಸಾಮಾನುಗಳು. ಲೊಳಲೊಳ ನೀರು ಕರಿ ನೀರು ಲೋಳೆ. ಕೆಂಪು ದಪ್ಪ ಬಲ್ಬು. ಬಾಯಿ ಕಳೆದ ಪ್ಲ್ಯಾಸ್ಟಿಕ್‌ಡಬ್ಬಿ. ತೂಕ್ಕಳುಗಳು, ಬರಿ ತೋಳು. ಎತ್ತಿ ಕಟ್ಟಿದ ಕೇಶರಾಶಿ. ಗಿರಕಿರಾಟಿ. ತೋರ ತೊಡೆಗಳು. ಹೊ. ಹ್ಯೊ. ಹೋಽಽ. ಖೊಳ್! ಖೊಳ್! ಥುತ್. ಹಿಡಾನಿಸ್ಟ್! ಸರ್ರಿಯಾಲಿಸ್ಟ್ ಐಡಲಿಸ್ಟ್... ದೊಡ್ಡ ಲಿಸ್ಟು. ಮತ್ತೆ ದೊಡ್ಡ ಹೋಲು! ಅದಕ್ಕೂ ದೊಡ್ಡ ಘೂಲು. Concrete manifestat ons of Abstractions. Love. platonic, a big hoax non ಎಕ್ಸಿಸ್ಟೆಂಟ್. ಮತ್ತೆ ಮ್ಯೂಚ್ಯುವಲ್-ಕೋ ಎಕ್ಸಿಸ್ಟೆನ್ಸ್ – ಎಕ್ಸಿಸ್ಟೆನ್ಸಿಗಿಂತ ಮೇಲು. Peace. Comfort. Heaven! that's Exchange of sex! ಹೀಪ್ ಹೀಪ್ ಹುರ್ರಾ! ಬ್ಯಾಕ್‌ಲೆಸ್, ಸ್ಲೀವ್‌ಲೆಸ್; ಬ್ಯಾಕ್ ಬ್ಯಾ.ಸ್ನ್ಯಾಪ್ ಬಟನ್; ಟಾಪ್‌ಲೆಸ್. ಡಿಮ್ ಬ್ರ್ಯಾಟ್ ಸ್ವಿಚ್. ಆಫ್ ಆನ್, ಆಫ್ ಆನ್... ಆಫ್‌ಫಿಟ್, ಫಟ್! ಬಟನ್. ಪ್ಲ್ಯಾಸ್ಟಿಕ್ ಬಕೆಟ್. ಆನ್. ಚೂಸ್. ಬೀಹೇವ್ ಆಫ್. ಫಟ್. ಬಿಸೌಟ ರೊಸೆಟ್–ನ್ಯೂಲುಕ್; ಮೋನಾಲೀಸ್ ಪಾಪೆಡ್, ಫಾರ್ಚೂನ್, ಎಲೈಟ್ ಚಾರ್ಮಿನ್, ಕಂಫೋರ್ಟಗ್ರೇಸ್! ಆನ್ ಆಫ್. ಡಿವ್‌ಬ್ರ್ಯಾಟ್. Choose your's and take thy Angel. ಸಂಗೀತ ಸರಸ್ವತಿ. ಆಫ್ ಕರಿ ಮುದ್ದೆಯು, ಆನ್! ಬಿಳಿ ಮುದ್ದೆಯ ಆನ್! ಬಿಳಿಮುದ್ದೆ! Choose! venus Beauty. ಏಂಜಲ್, ಡೊಂಟ್ ಬೀ". Jealous come and be Under the green wood tree" ಆಫ್. ಕಾಜಿ. ಬ್ಲೂಜೀನ್ಸ್, ಜೀನ್ಸ್ ಬೆಲ್ ಬಾಟಂ, ಲುಂಗಿ ಮಿನಿ ಮಿಡಿ– ಲಂಡನ್ ಬ್ರಿಜ್ ಈಸ್ ಫಾಲಿಂಗ್ ಡೌನ್–ದ್ಯಾಟ್ಸ್ ನ್ಯೂಡ್ ಕಲ್ಚರ್– ನ್ಯಾಚುರಾಲಿಸಂ. ಡ್ಯಾಮ್‌ಲಾರೆನ್ಸ್ ನೋ ಶೇವ್ when same. ತಿಳೀತದೆ ಬಿಡತದೆ. ನೋ ಪಾರ್ಟನರ್. ಅನಾಥ ಪ್ರಜ್ಞೆ. ಅನಾಥ ಪ್ರಜೆ. ಕತ್ತಲೆ. ಕಾಣ್ತದೆ. ದುಂಡು ದುಂಡು. ಮೆತ್ತ ಮೆತ್ತಗೆ. ಮಾಂಸ ರಾಶಿ ರಾಶಿ. ಜೊರ್ರ್ಽಽ ರಸಿಗೆ. ನೀರು ಬೆವರು. ಸುಂಬಳ. ಜೈಕಾಳಿ! ಹೊರಳಾಡುವ ತುಟಿಗಳು. ತೆರೆದುಬಿದ್ದ ತೊಡೆಗಳು. ಆಳವರಿಯದ ಕಪ್ಪು ಸಮುದ್ರ. ಬಿಳೀ ಮಳೆ. ಕಾಡ್ಲಿವರ್, ಶಾರ್ಕ್,– ತಿಮಿಂಗಲು. ಡೊಳು ನಗಾರಿ. ಹಡಗಿಗೆ ಹಡಗೇ ಧುಡುಮ್, ಒದ್ದೆ ಬಟ್ಟೆ ಉಪ್ಪು ಅಮೃತ. ಹಾಲಾಹಲ. ಪರವಾಗಿಲ್ಲ; ನಡೀತದೆ, ಮಬ್ಬು. ತಲೆ ಗಿರಕ್. ಕಣ್ಣು ಹರಳು ಪುಡಿ ಪುಡಿ. ಖಾಂಡೇಕರ. ಅವನ ಬಿಳೀ ಹೆಂಡತಿ. ಅಯ್ಯೋ! ಸರಿ ನಡೀತದೆ. ಕವುಚಿ ಬಿದ್ದ ಮೂಗು ಒಡೀತು. ಉಸಿರು ಎಳೆಯಲಾಗದ ಒದ್ದಾಟ. ಝಾಡಿಸಿದಾಗ ಕುರ್ಚಿ ಟೇಬಲ್ಲಿಗೆ ಬಡಿಯಿತು. ಗ್ಲಾಸು ಉರುಳಿ ಪಳಪಳ. ಗೋಡೆ ಹಣೆ ಜಪ್ಪಿ ಗೋಳಾಟ, ಹುಚ್ಚು, ಓಡಿ ಹೋಗಬೇಕು. ಈ ಜಗತ್ತಿನಿಂದ. ಕಿಟಕಿ, ಹೊರಗಡೆ ಬೈಲು. ಕತ್ತಲೆ ಓಡಬೇಕು. ಬೀಳಬೇಕು. ಉಸಿರು ಕಟ್ಟುತ್ತದೆ. ಮೈಬೆವರುತ್ತದೆ. ಎದೆ ಹೊಡೆದುಕೊಳುತ್ತದೆ. ತಲೆ ತಿರುಗುತ್ತದೆ. ವಾಂತಿ ಬರುತ್ತಿದೆ. ತೆಗೆದು ಒದೆಯಬೇಕು. ಒದೆದು ಕೆಡವಬೇಕು. ಕೆಡವಿ ತುಳಿಯ ಬೇಕು. ತುಳಿದು ರಕ್ತಕಾರಿಸಬೇಕು. ಟೇಬಲ್, ಕುರ್ಚಿ ಗ್ಲಾಸು ಮಾನಗೇಡಿ ಲ್ಯಾಟು, ಎಲ್ಲಾ ಮೋರೆಯಾ ಗಣಪತಿ. ಗಣಪತಿ: ಮೋರೆಯಾ!" Tie him to the table. Rascal! ... manner less!

ಸ್ಪಷ್ಟ



ಕತ್ತಲು ಸಖಿ ಬರೀ ಕತ್ತಲು
ನೀನು ಈಗ ಬಂದೆಯೋ
ನಿನ್ನ ಕುಡಿಮಿಂಚಿನಲಿ
ಎಲ್ಲವೂ ಸ್ಪಷ್ಟ ಸುಸ್ಪಷ್ಟ !

– ಪಂಚಾಕ್ಷರಿ ಹಿರೇಮಠ

ಮ್ಯೂಗಲೋಮ್ಯೂನಿಕ್ ಸ್ಯಾಡಿಸ್ಟ್" ಜೋತು ಬಿದ್ದಿದ್ದೇನೆ. ನನಗೆ ನಾನೇ ನೇತಾಡಿ ಜೀಕು ಹಾಕುತ್ತೇನೆ. ನಾನು ಕುರುಡನಾಗಿದ್ದೇನೆ. ನನಗೆ ಹುಚ್ಚು ಹಿಡಿದಿರುತ್ತದೆ. ತಲೆಗೂದಲಿಗೆ ಮುಷ್ಟಿ ಹಾಕಿ ಜಗ್ಗಿ ಕೊಳ್ಳುತ್ತೇನೆ. ಎದೆಗೆ ಉಗುರು ನಾಟಿಸಿ ರಕ್ತ ತೆಗೆಯುತ್ತೇನೆ. ಲೊಚಲೊಚ. ಪಚಪಚ. ಕಪ್ಪು ಕೆಂಪು. ನೀಲಿ...ಭಯ ಗಾಬರಿಗೆ ಊದಲ. ನರಳಾಟ ಗುಲಾಮಗಿರಿ. ಓಡಿದೆ. ಆಗದು. ಜಗ್ಗಿದೆ–ಆಗದು. Aristocratic–ಬೂರ್ಜ್ವಾಸ್. Exploiters. ರ್‍ಯಾಸ್ಕಲ್ಸ್. ಮರ್ಡರ್ಸ್. Blood Suckers you bugs! ಬ್ಯೂರಾಕ್ರಟ್ಸ್ ಸ್ಲವ್ಸ್ ಆಫ್ ಕರಪ್ಶನ್... ಹಗ್ಗ ಹರಿದು ಎದ್ದಾಗ. ಮಾನವನ ಆದರ್ಶ ಗುರಿಗಳೆಲ್ಲ ಮುಗಿದಿದ್ದವು. ಖಾಂಡೇಕರ–ಕರೇ ಮೈ. ಬಸವಣ್ಣನ ಮೇಲೆ ತೈಲಾಭಿಷೇಕ. ತೊಡೆ ಅದಗದ. 'ಕಾಂಟ್ ಹೆಲ್' ಎತ್ತಿ ಖುರ್ಚಿಗೆ ಒಗೆದ. ಲಂಚದ ಗಂಧ ಗವ್ ಗವ್! ಮೂಗು ಕಟ್ಟಿತು. ರಕ್ತ ಒಸರುವ ಕೈ. ಕೊಲೆಗಡುಕ ಮ್ಯಾಕ್‌ಬೆತ್, ಮಹಾರಾಯನ ಪೂರ್ವ ಚರಿತ್ರೆ. ಚರಿತ್ರೆಯೇ ಇಲ್ಲನವರಿಗೆ. ಪೂರ್ವ ಎಲ್ಲ ಬಾತು. ಎರಡೂ ಕಾಲೆತ್ತಿ ಒದ್ದೆ. ಓಡಬೇಕೆಂದಾಗ ಧಾಂಡಿಗ ಕಟ್ಟಿ ಮುದ್ದೆಮಾಡಿ ಜೇಬಿಗೆ ಒಗೆದ" Big Idiot, Never thought of you! Insulted me Hospitality! Mistaken! You've gone mad! ನಿನಗೆ ಹುಚ್ಚು, ಸೆಕ್ಸ್ ಪರ್ವರ್ಟ್! ಹಿಸ್ಟೀರಿಯಾ. ಆ್ಯಂಕ್ಸಿಟಿ ನ್ಯೂರೋಸಿಸ್. ಕೃಪಾಮಯಿ ನರ್ಸಿಂಗ್ ಹೋಮ್‌ಗೆ ನಾಳೇನೇ ಎಡ್ಮಿಟ್" ಇಬ್ಬರೂ ತೃಪ್ತರು; ಕೂಳೂ ಹಾಕಲಿಲ್ಲ. ಕುಳಿತ ಸೋಫಾದ ಮೇಲೆ ತೂಕಡಿಸಿದಾಗ ನಾನು ಹುಚ್ಚ ಎಂಬ ಸಂಶಯ ಬಂದಿತು. ಅವರನ್ನೆಲ್ಲ ಖೂನಿ ಮಾಡಲಿಲ್ಲವೆಂದು ಖಾತ್ರಿಯಾದಾಗ ನಾನೂ ಹುಚ್ಚ ಎಂದು ಒಪ್ಪಿಕೊಂಡೆ... ಅಲ್ಲಿ ಊದಿದ ಶಹನಾಯಿ ಕೇಳುತ್ತಿರಲಿಲ್ಲ. ಊರೂ ಬಿಟ್ಟೆಬ್ಬಿಸಿದ ಪ್ರೀತಿ ಕೊಳೆತು ನಾರುತ್ತಿತ್ತು. ಹುಳು ಬಿದ್ದ ಹೆಣದ ಮೇಲೆ ಹಾರಿ ಕುಪ್ಪಳಿಸಿ ಕುಕ್ಕುವ ರಣಹದ್ದು. ಬಟಾ ಬಯಲು. ಬೋಳುಮರ. ಸೇಡಿ ಎಳೆಯುವ ರವರವದ ಕಾಗೆಗಳ ಕಾವಾಯಿತ್ತು. ಬಿರುಪು ಬಿದ್ದ ಗದ್ದೆ. ಒಣಗಾಳಿ, ಪಶ್ಚಿಮದ ಬೆಂಕಿ. ರಣರಣ. ಅಮಂಗಲ! ಕೃಪಾಮಯಿ ನರ್ಸಿಂಗ್ ಹೋಂ. ನಾನು ಹುಚ್ಚನಲ್ಲ–ಸಾಯಲೂ ಸಿದ್ಧನಿಲ್ಲ. ಬದುಕನ್ನು ಗ್ಯಾರೇಜಿಗೆ ಒಗೆದಾಗಿದೆ. ಬೇರೆ ಅಷ್ಟಲ್ಲ ವ್ಯವಸ್ಥೆ. ಇದೇ ಸಾಕು. ಬೆಳಗಿನ ಗಾಳಿ. ನಸುಕುನಸುಕು ಜೇಪು ನುಗ್ಗುತ್ತಿತ್ತು. ಜವಾಬ್ದಾರಿಯನ್ನು ಇಳಿಸಿಕೊಳ್ಳುವ ಆನಂದ. ಪರೋಪಕಾರದ ಮಹಾಪೂರ. ದೊಡ್ಡ ದೊಡ್ಡ ಗೇಟುಗಳು. ದ್ರಾಕ್ಷಿಯ ಚಪ್ಪರಗಳು. ಬೀಸಾಗಿ ಬೆಳೆದ ಮರಗಳು. ತಿಳಿನೀಲಿಯ ಸುಂದರ ಗೋಡೆಗಳು... ಕೃಪಾಮಯಿ ನರ್ಸಿಂಗ್ ಹೋಮ್... ಮೇಲೆ ಕೆಳಗೆ ಕಿಟಕಿಯ ಸರಳ ಹಿಂದುಗಡೆ, ಬಾಗಿಲ ಸಂದಿನಿಂದ ಗೇಟಿನ ಬದಿಯಲ್ಲಿ ಎಲ್ಲಾ ಬಂಧು ಭಗಿನಿಯರೇ! ಒಂದೇ ದೇಟಿನ ಎಲೆಗಳು!' ಮಾನವ ಕುಲಂ ಒಂದೇ ವಲಂ..." ಆಡಲು ಪೋಗೋಣ ಬಾರೋ ರಂಗ! ಕೋಲೂ ಕೋಲಣ್ಣ ಕೋಲೆ... ಮೈ ಆ...ವಾ...ರಾ ಹ್ಹೂಂ! ಪಬ್ಲಿಕ್‌ನ್ಯೂಸನ್ಸ್. ಇನ್‌ಸ್ಕೇನ್... ಡೇಂಜರ್. Disappoinetd in Love. ಎಗ್ರೆಸಿವ್ ಬೀಟ್ಸ್ ಬಯ್ಯಲಾರೆ. ಇವರನ್ನು ಬಯ್ಯುವ ಶಬ್ದಗಳನ್ನು ಇನ್ನೂ ಸೃಷ್ಟಿಸಬೇಕಾಗಿದೆ. ಆಕೆಯನ್ನು ಕೊಲ್ಲುವ ಅಸ್ತ್ರ ಇನ್ನೂ ಶೋಧವಾಗಬೇಕಾಗಿದೆ. ಹೊಡೆದರೇನು, ಕೊಂದರೇನು? ಕುತ್ತಿಗೆ ಹಿಡಿದು ಒಳ ನೂಕಿ ಕಾಲು ಕಟ್ಟಿ ಮಂಚಕ್ಕೆ ಬಿಗಿದು... ಇಂಟ್ರಾವೆನಸ್... ಕಣ್ಣು ಗುಡ್ಡೆಗಳು. ಕುಗ್ಗಿ ಮೈಕರಗಿ ಮಂಚದ ಮೇಲಿಂದ ಹರಿದು–ನೆಲಕ್ಕೆ ಹರಡಿದಾಗ... ಮತ್ತೂ ಹೆಚ್ಚು ಬದುಕಿದೆ. ಟಾಫ್ರಾನಲ್... ಲಾರ್ಗ್ಯಾಕ್ಟಿಲ್ ಒನ್ ಥೂಸಂಡ ಫೈ ಹಂಡ್ರೆಡ್ ಎಮ್.ಜಿ. ಉಲ್ಲಾಸ ಹಾರಾಟ–ಮುಳುಗಿ ಮುಳುಗಿ, ಜಿಗಿದು ಜಿಗಿದು: ಕುಪ್ಪಳಿಸಿ ಕೇಕೆಹಾಕಿ; ಕಿರುಚಿ ಒದ್ದು ನಕು. ಜೈ ಶಂಕರ್! ಜೈ ಖಾಂಡೇಕರ್! ಜೈ! ಮಂಚದ ತುಣುಕನ್ನು ಹಿಡಿದು ತೂಗಾಡಿದಂತೆ ಹಲ್ಲು ಕಿಸಿದು. ಎಲ್ಲಾ ಸಂತೋಷ. ಮತ್ತೆ ಮಂಪರು. ಮಬ್ಬು. ಬೂದಿ ಸುಡುಧೂಳು. ಹೊಗೆ world is one ...No racial Conflict, No Speck. No Section, No Class struggles! All is well with the world. causes of madness. ಸಾಯ್ಕೊ ಎನೆಲಿಸಿಸ್. ಡಾಕ್ಟರ್ ಡಿವೈನ್. ಫ್ರಾಯ್ಡ್ ಗಾನ್ ಮ್ಯಾಡ್. ಕಮಿಟೆಡ್ ಸೂಸೈಡ್. ನೀನು ಪ್ರೀತಿಸಿದ್ದೆಯಾ? ಇಲ್ಲ. ಹೌದು. ಎರಡೂ ಸಂಶಯ. ಉತ್ತರವಿಲ್ಲ. I am your man. an Inti mate of you. ಹೇಗಿದ್ದಳು. ಬೆಳದಿಂಗಳಂತೆ; ಹಾಲಿಗೆ ಕೇಸರಿ ಬೆರೆಸಿದಂತೆ. ಗಟಾರದ ನೀರ ಡಾಂಬರದ ಪಿಪಾಯಿಗೆ ತುಂಬಿದಂತೆ. ಆದುದರಿಂದ ಏನೂ ಹೇಳಲಿಲ್ಲ. ಅವಳು ಮೋಸ ಮಾಡಿದಳೇ–ಮೋಸ ಮಾಡುವ ವಿಷಯವಲ್ಲ. ಮಾಡಿಸಿಕೊಳ್ಳುವ ಮಾತು. ಅವಳಪ್ಪ –ನೀನೂ ವಯಸ್ಸಾದವ, ಕೆನ್ನೆಗೆ ಬಿಗಿವರೆ ಕಟ್ಟಿಸಿದ ಹಲ್ಲೆಲ್ಲ ನೆಲದ ಪಾಲಾದೀತು,

ಅವಳೇ ಮೋಸ ಮಾಡಿದಳೇ? ಅರ್ಥವಾಗದ ಜಗತ್ತಿನಲ್ಲಿ ತಿಳಿದುಕೊಳ್ಳುವುದು ಹೆಚ್ಚಾಗುತ್ತದೆ. ಹೂವಿನ ಮರ. ಮಲ್ಲಿಗೆಯಬಳಿ, ಬೆಳದಿಂಗಳು. ಕೆಂಪು ಚುಂಚಿನ ಗಿಳಿ. ಆಯ್ತು. ಗುಲಾಬಿ ಹೂವು. ಮುಂಜಾವು ಇಬ್ಬನಿ. ಅವಳು ಮೋಸ ಮಾಡಿದಳೇ–ತುಂಬ ದುಃಖಿತನಾಗಿ ಕೇಳಿದೆ. ಬಾಸಿಂಗ, ತೋರಣ. ಮಂಗಲ. ಮಂಗಲ ವಾದ್ಯ. ಗುಳಿದಾಳಿ ಕರಿಮಣಿ. ಮಂತ್ರ ಘೋಷ. ಪಕ್ವಾನ್ನ. ಶೋಭನ. ಮಂಚ ಬೆಳಗು. ಆಯ್ತು. ನಕ್ಕು ಬಿಟ್ಟೆ. ಹಳದಿ ದಪ್ಪ ಕೀವು. "ವಿಶ್ರಾಂತಿ ತೆಗೆದುಕೊಳ್ಳಿ," ಉಪಕಾರ. ಇವರಪ್ಪನ ಸೊತ್ತು. ನಾನು ಕಿರುಚುತ್ತೇನೆ. ಬಾಗಿಲು ಒಡೆದು ಓಡುತ್ತೇನೆ. ನೋಡುವ, ಇವ ಇವರಪ್ಪ ಏನು ಮಾಡುತ್ತಾರೆ?

Irresponsible sexual pleasure ಸಮಾಜ ಸ್ವಾಸ್ಥ್ಯಕ್ಕೆ ಬೇಕೇ ಬೇಕು. ಹುಚ್ಚರಾಸ್ಪತ್ರೆ ಒಳಗಿನಪ್ರಪಂಚ. Too sensitive to sex ಸಿನ್ and ಸೆಕ್ಸ್ over Emphasis ಸೆವೆಂಟಿ ಎಂಡ್ ಮೋರ್ ಗೋ ಮ್ಯಾಡ್. ರಿಲೀಜಿಯಸ್ ಟ್ಯಾಬೂಸ್. ಪೊವರ್ಟಿ ಡಿಫಿಡೆನ್ಸ ಆ್ಯಂಡ ಡಿಪ್ರೆಶನ್ ಪರ್ವರ್ಶನ್, ರೇಪ, ಇನ್‌ಸೆಸ್ಟ. ಸೋಡೋಮಿ. ಬೀಸ್ಟಿಲಿಟಿ, ಟ್ರೈ ಬ್ಯಾಡಿಸಂ ಯಾವುದೂ ಸಾಧ್ಯವಾಗದ ಷಂಢ. ದರಿದ್ರ. ಪ್ಯೇಟಿ ಚೀಸ್ಟ. ತೊಡೆ ಹರಿದು ಬರುವ ಹಾಗೆ ಲಿಂಗ ಗುಂಡಗೆ ಕಾಣುವ ಹಾಗೆ ಟೈಟ್ ಪ್ಯಾಂಟು. ಎಕ್ಸಿಬಿಶನಿಸ್ಟ ಎವರ್ಡ. ಖಾಂಡೇಕರ ಯಾವುದೋ ಹುಡುಗಿ ಕರೆದುಕೊಂಡು ಬಂದಿದ್ದ. ಯಾವುದೋ ಹುಡುಗಿ ಎಂಬುದೇ ಕಥೆ. Wondering of the point Circum stantiality-That's method ಈಗೋಡೆಬಿದ್ದು ನನ್ನಾಡಿ ಗುದ್ದಿ ಅವನ ಕುತ್ತಿಗೆ ಹಿಚುಕಿ ಹುಚ್ಚರನ್ನೆಲ್ಲ ಕೊಚ್ಚಿ ಹೊರಬಿದ್ದು ಹೋಗುತ್ತೇನೆ. You docors, most irresponsible creatures, criminals! ಏನೋ ಗಾಯತ್ರಿ. ಗೋಡೆ ಗೋಡೆಗೂ ಅದೇ ಮಾರ್ದನಿ. ಸ್ಕಿಝೋಫ್ರೇನಿಯಾ–ಹಿಸ್ಟೀರಿಯಾ. ಫ್ರಸ್ಟ್ರೇಶನ್ ಸಿಟ್ಟಿ ಟನ್. ಎಬಿಲೆಟ್ಸಿ. Suppress'd emotional out burst ಕಾಲು ಕಟ್ಟಿ ಮಂಚಕ್ಕೆ ಬಿಗಿಯಿರಿ. ಖಾಂಡೇಕರನ ಕೂಗಾಟ. ಮಾರ್ಫಿನ್! ಸೆಡೇಟಿವ್ಸ ಇಲೆಕ್ಟ್ರೋ ಕನ್‌ವಲ್ಸಿನ್…ನೂರು ಮಾತು. ನಾಲ್ಕು ಗೋಡೆ ಒಂದು ಕಿಟಕಿ. ಬುದ್ಧಿವಂತರು. ವೇದಾಂತಿಗಳು. ಇವರ ಮೇಲೆಲ್ಲ ಡಾಕ್ಟರರು. ಪ್ರಿಸಿಪಿಟೇಟಿವ್ಹ ಕಾಸಸ್ Can't help ಇಂಡಿಯನ್ ಸೊಸಾಯಿಟಿ. ಓವರ ಪ್ರೊಟೆಕ್ಶನ್. ಓವರ್ ಸ್ಟ್ರಿಕ್ಟ್‌ನೆಸ್. ಅನ್‌ಡ್ಯೂ ಇಮೋಶನಲ್ ಫಿಕ್ಸೇಶನ್. ಹಾವಾಡಿಗನ ಹಾವು. ಬುಟ್ಟಿಯಲ್ಲಿ ಬುಸ್. ಲೇಡೀಸ್ ಹಾಸ್ಟೆಲ್. ಗೇಟಿನಲ್ಲಿ ಭಿಕ್ಷುಕರು. ಗಡಬಡೆ. ರಿಕ್ಷಾ. ಫಸ್ಟ ಶೋ. ಸೆಕೆಂಡ್ ಶೋ. ಲಕ್ಷುರಿ ಹೋಟೆಲ್. ಬೀರು ಬಿರ್‍ಯಾನಿ. ಲೇಡೀಸ್ ಡ್ರಿಂಕ್ಸ–ಥುತ್! ಲೇಟ ಪಾಸ್. ಮೆಡಿಕಲ್ ಜೂರ್ರಿಸ್ಪ್ರುಡೆನ್ಸ ಅಭ್ಯಾಸ. ಮತ್ತೆ ಅಪ್ಪನ ಪತ್ರ. ಮ್ಯಾರೇಜು, ವರದಕ್ಷಿಣೆ, ಮಕ್ಕಳು, ಮರಿ, ಮನೆ ಮುದುಕಿ…ಸಾವು. ಕೋರ್ಟ್‌ಶಿಪ್ ಎ ರಿಲೀಫ್‌ಸೀನ್ ಇನ್ ದಿ ಟ್ರಾಜಡಿ ಆಫ್ ಲೈಫ್. ಮೆಲಂಕಲಿಯಾ ಆ್ಯಂಡ್ ಮಾನಿಯಾ ಫೋಬಿಯಾ… ಸೋಶಲ್ ರಿಸ್ಪೆಕ್ಟಬಲಿ. ಕರೇ ಬಂಡೆ ಖಾಂಡೇಕರ ಮಹಾ ವಿಜ್ಞಾನಿ. ಸಾಯ್ಕೋಪಥ್ ಸಾಯ್ಕೋ ಟಿಕ್. ಬಂಧುಗಳು, ಎಡಗೈ ಜಗ್ಗಿದ–ಅವನಪ್ಪನದೆಂಬಂತೆ. Is not ಯೂಫೋರಿಯಾ Insanity ಹೆಂಡ್ತಿ. ನೌಕರಿ ಮನೆ ಇದ್ದ ಮಾತ್ರಕ್ಕೆ ತಲೆ ಸರಿ ಇದ್ದಂತೇನು. ಇನ್ಶೂರನ್ಸ ಸೇವಿಂಗ್ಸ ಎಲ್ಲಾ ಥಥ್ ಸರ್ಟಿಫಿಕೇಟಲ್ಲವೇನು? ಲೈಫ್! ಎ ಚಾರ್ಮಿಂಗ್ ಡಿಲೀರಿಯಂ. ಡ್ರೇನೇಜ ಸಿಸ್ಟಂ. ಕುಂಡೆತೊಳೆದ ಪಾನಕ ಸಾವಿರ ಸಾವಿರ ನಿರ್ವಸ್ತ್ರರ ಕೊಲೆ. ರಾಡಿ ರಾಡಿ. ಕರೀ ನೀರು. ಇಳಿದ್ದಾಂಗೆ. ತೇಲಿದ್ದಾಂಗೆ. ಮುಳುಗಿದ್ದಾಂಗೆ. ಗಟಾರದ ಆಳಕ್ಕೆ ತಳದಲ್ಲಿ ಮಾಲೆ–ಮಾಲೆ ಗುಪ್ಪೆ ಗುಪ್ಪೆ ಹುಳಗಳು. ಮಿಕ್ರೋ ಸೆಫಿಲಿಕ್, ಇಂಬಿಸೈಲ್ಸ ಹಿಪ್ನೋಯಾನಿಸ್ಟ, ಸ್ಯಾಡಿಸ್ಟ, ಮ್ಯಾಸೋಟಿಸ್ಟ ನುಗ್ಗಿ ನುಗ್ಗಿ ಕಳಮೋರೆ ಮಾಡಿ ನಕ್ಕು ಸಾಗುವ ಸಹಸ್ರನಾಮಗಳು.

ಮಂಚ ಲಟ ಲಟ. ಛಾದರ ಸರಿಸಿ ಎದ್ದು ಕುಳಿತು ಕತ್ತಲಲ್ಲಿ ಕಾಮಿಯಂತೆ ಕಣ್ಣು ಪಿಳಿಪಿಳಿ. ಖಾಂಡೇಕರನ ಮೈ ಬೆವರಿನ…ಹುಡುಗಿ ಸರಸ್ವತಿ–ಬ್ರಹ್ಮವೀರ್ಯದ ಹೊಳೆ. ಕಣ್ಣು ಅದುರಿ ಕಿವಿ ಉದ್ದವಾಗಿ. ಆ ತೋಳು ಈ ಬರಿದಾದ ಎದೆಗಳ ಪಿಕ್ಯಾಟಿ, ಘರ್ಷಣೆಗೆ ಝುಗ್ ಎನ್ನುವ ರೋಮ ಸ್ರೋಮ. ಒಲಿದ ಮದುವೆ. ರಕ್ತ ಮಾಂಸದ ಬಿಸಿಯ ಸೋಂಕಿನ ಪಂಜರ. ಎಳೆ ಎಳೆದು ಒತ್ತಿ ಬಿಗಿದುವೂಲೆ ಚಪ್ಪಟೆ. ತೊಡೆಯ ಎಲುವು ಲಟಕ್. ಪ್ರೀತಿ, ಕಾಮ, ಬೆಳಕು. ಮಬ್ಬು ಕತ್ತಲೆ ಕೆಂಪು. ಹಸಿದು ಹರಿದು ಚೆಲ್ಲಿ ಒಂದಕ್ಕೊಂದು ತೆಕ್ಕೆ ಬಿದ್ದು ಉಸಿರು ಅಂಗಾತ. ಗುಡ್ಡ ಬುಡದಲ್ಲಿ ಹಸಿರ ಬೈಲು. ಹುಚ್ಚರಾಸ್ಪತ್ರೆಯ ದ್ರಾಕ್ಷಿಯ ಚಪ್ಪರ. ಹಲ್ಲು ಕಿಸಿದ ಮುಳು ಮೂರ್ಖರು. ಜೊಲ್ಲು ಸುರಿದು, ಬಗ್ಗಿ ಬಾಗಿಸಿ ತುಳಿದದ್ದು ಎಷ್ಟೋ ಎಷ್ಟೋ. ಪಾಪ, ಚುದನ್ನ ಹುಡುಗಿ. ಬಾಬ್ ಕಟ್. ಕೆಂಪುಗುಳುವ ತೋರುವ ತೊಡೆಗಳು. ಸ್ಕರ್ಟನ್ನೆತ್ತಿ …ಇಂಡಿಯನ್ ಪೀನಲ್ ಕೋಡ್ 294ರ ಅಪರಾಧ: ಕರ್ರಗೆ ದಪ್ಪ ದಪ್ಪ ಕಣವೆ, ದಿಬ್ಬ. ಒಣ ಕರಡದ ಮೇಲೆ ಮಸಿ ಚೆಲ್ಲಿದಂತೆ. ಸಿಗರೇಟು ತುಂಡು. ಬೆಂಕಿ ಭುಗಿಲ್ ಎಂದು ಜ್ವಾಲೆ. ಕೋಲಾ ನುಗಿಸಿದಾಗ ಸುಟ್ಟು ಭಸ್ಮ. ಕಾಮ ದಹನ–ಸಿಂಬಳದ ಕುಳಿಯೊಳಗೆ ಗುಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ. ಇನ್ನು ಬಹಳ ದಿನ ಇರಬೇಕಾದ್ದಿಲ್ಲ. ಒಂದು ವಾರದೊಳಗೆ ಡಿಸ್ ಚಾರ್ಜ್. ಖಾಂಡೇಕರ ಬರುವುದನ್ನೇ ಬಿಟ್ಟ. ನನಗೆ ಹುಶಾರಾಗಿರಬೇಕು. ಒಂದು ದಿನದ ಸಂಜೆ ದಿನದ ಬೆಳಗಿನಂತೆ ಬಂದಾಗ, ದಿನದಂತೆ ಕೋಣೆಯ ಸರಳ ಬಾಗಿಲು ತೆರೆದಾಗ, ಭಯವಿಲ್ಲದೇ ಅಡ್ಡಾಡಲು ಆ ಹುಡುಗಿಯರೊಂದಿಗೆ ಡಾ॥ ಡಿವೈನ್ ಕಳಿಸಿದಾಗ ಮೊಟ್ಟ ಮೊದಲಿಗೆ ಹುಚ್ಚರಾಸ್ಪತ್ರೆಯ ಕಂಪೌಂಡ ದಾಟಿ ಡಾಂಬರ ರಸ್ತೆಗಿಳಿದಾಗ, ಹಾಗೆಯೇ ಬಿಸಿಲಲ್ಲಿ ಮೈ ಒಣಗಿಸಿಕೊಂಡು ಬಿದ್ದ ಗದ್ದೆಯನ್ನು ತುಳಿದಾಗ ಮೆಲ್ಲನೆ, "ನನ್ನ ಕಂಡು ನಿಮಗೇನೆನಿಸುತ್ತದೆ?"ಎಂದಳು. "ಹುಚ್ಚನನ್ನು ಕುರಿತು ಯಾರೂ ಈ ಪ್ರಶ್ನೆ ಕೇಳುವುದಿಲ್ಲ" ಎಂದೆ. ಹುಚ್ಚನೆಂದು ನಾನು ನಿಮಗೆ ಎಂದಾದರೂ ಹೇಳಿದ್ದೇನೆಯೇ? ಎಂದು ತಾನು ಉಳಿದವರಿಗಿಂತ ಬೇರೆಯೆಂಬುದನ್ನು ತೋರಿಸಿಕೊಡಲು ಪ್ರಾರಂಭಿಸಿದಾಗ "ನೀನು ಸಿಕ್ಕಿದ್ದು ಇಂದೇ" ಎಂದೆ. ಧೂಳು ತಟ್ಟುವ ಸೀರೆ ಝಾಡಿಸಿಕೊಂಡು ಒಳಗೆ ಬಂದು ನನ್ನ ತೋಳು ಮೆಲ್ಲನೆ ಹಿಡಿದು ಕೆನ್ನೆ ಮುಟ್ಟಿ "ನೀವು ಏನು ಹೇಳಿದರೂ ಒಳ್ಳೆಯವರು. ಹುಚ್ಚು ಎಂದಾದರೂ ಹಿಡಿದಿದ್ದರೆ ಅದು ಒಳ್ಳೆಯವರಿಗೇ!" ಕೆಂಪಾದ ಮುಗಿಲಿಗೆ ಪೆಟ್ರೋಲ್ ತೋರಿ ಕಡ್ಡಿ ಗೀರಿ ಭುಗಿಲ್ ಎಂದು ಹತ್ತಿಕೊಂಡಾಗ "ಖೊಳ್ ಖೊಳ್" ಎಂದು ನಕ್ಕು ಅವಳನ್ನನುಸರಿಸಿದೆ. ಎದುರಿನ ಗುಡ್ಡದ ಮೇಲೆ ರಾತ್ರಿ ಧುಡುಂ ಎಂದು ಬಿದ್ದು ಕತ್ತಲೆಯ ಗವಿಯೊಳಗಿಂದ ಅಕರಾಳ ವಿಕರಾಳ ಕಿರುಚಾಟ. ತಲೆಯೊಳಗೆ ದಪ್ಪನ್ನ ಬೇಸರ ಸುರಿದು ಹಣ್ಣುಭಾರವಾಗಿ "ನೀನು ಈ ಕತ್ತಲೆಯೊಳಗೆ ಕಾಣುವುದಿಲ್ಲ. ಬಹಳ ಚಂದ" ಎಂದು ಎದೆಗವಚಿ ಹಿಡಿದುಕೊಂಡಾಗ ಸೆರೆಮನೆಯ ಕದ ಒಡೆದು, ಆಕಾಶದೆತ್ತರದ ಗೋಡೆಯನ್ನು ಎಡುವಿ ನಿಂತ ತೆವಳಿ ಹಾರಿ ಹೊರ ಬೀಳುವಂತೆ ಕುಪ್ಪಳಿಸಿ ಕೇಕೆ ಹಾಕಿದಾಗ ಯಾರೋ ಎರಡೂ ತೋಳು ಹಿಡಿದು ಎಳೆದು ತಂದರು. ಹುಚ್ಚರ ಕೂಗಾಟ, ಕುಣಿತ. ಗದ್ದಲ. ಸಾವರಿಸೊಳ್ಳುವ ಶಕ್ತಿಯೇ ಬುದ್ಧಿಗೆ ಇಲ್ಲವಾದಂತೆ: ಹುಚ್ಚರ ಮಧ್ಯ ಮಾತ್ರ ಶಾಭೀತ ಇದ್ದವನಂತೆ ನನ್ನ ಪಾಡಾಗಿ ಹುಚ್ಚರು, ಹುಡುಗಿ, ಕೋಣೆ,ಡಾಕ್ಟರರ ಮಧ್ಯದಲ್ಲಿ ನನ್ನ



ಬಗ್ಗೆ ಏನು ಹೇಳಿಕೊಳ್ಳಬೇಕೆಂದು ತಿಳಿಯದವನಾಗಿ ನನ್ನನ್ನು ಹುದುಗಿಕೊಳ್ಳುವ ಚಿಂತೆಯಲ್ಲಿ ಸಿಲುಕಿ ಬಿದ್ದೆ. ಏನೋ ಒಜ್ಜೆ. ಜರ್‍ss… ನೆಲಕ್ಕಿಳಿದು ಹೋದಂತಾಗಿ ರಾತ್ರಿ ಮಂಚಕ್ಕೆ ಹುಶಾರಾಗಿ ಬಂದು ಬಿದ್ದಾಗ ಬಾಗಿಲು ತೆಗೆದಂತಾಗಿ "ಏನು ದೊರೆ!" ಎಂದು ಕತ್ತಲೆಯಲ್ಲಿ ಪಿಸು ನುಡಿದಾಗ ಮಂಚದಿಂದ ಇಳಿದು ಕೈ ಹಿಡಿದು ಎತ್ತಿ ಮುತ್ತಿಟ್ಟು ಮಂಚಕ್ಕೆ ಒಗಾಯಿಸಿದೆ. Adam-Eve! ಈಚೆಗೆ ಎಷ್ಟೋ ದಿನವಾದರೂ ಏನೂ ಸಾಧಿತವಾಗಲಿಲ್ಲವೆಂಬ ಗೋಣಗಾಟಕ್ಕೆ ಅನರ್ಹರಿಂದಲೇ ಇಲ್ಲಿಯ ವರೆಗೆ ಹುಚ್ಚಾತ್ಮರೆಂಬ ಸರ್ಟಿಫಿಕೇಟ್ ಪಡೆದು ಬಂದದ್ದೆಂದು ಗದ್ದರಿಸಿದೆ. ಹಗಲು ರಾತ್ರಿಗಳು ಕೈಕೈ ಮಿಲಾಯಿಸಿ ಒಂದರ ಮೇಲೊಂದುರುಳಿ ಏನೇನೋ ಹಡೆದಾಗ ಈ ಕೇಳಿ, ಗೋಣಗಾಟವೆಂದು ನನ್ನ ಪ್ರಶ್ನೆ. ಬೆಳಗಾದ ಮೇಲೆ "ನೀವು ಹುಶಾರಾಗಿದ್ದೀರಿ. ಸಂಜೆ ಹೊರಡಬಹುದುದೆಂದು "ಎಲ್ಲೆಲ್ಲೂ ನನ್ನ ಸಹಿ ತೆಗೆದುಕೊಂಡ ಡಾ॥ ಡಿವೈನ್ ಅವರ ಧೈರ್ಯಕ್ಕೆ ಶಬ್ದಗಳನ್ನು ತಡಕಾಡಿ ಕೋಣೆಯ ಕಿಟಕಿಯ ಹತ್ತಿರ ಬಂದಾಗ ಕಾಗದ ಮೆಲ್ಲುತ್ತಿದ್ದ ಕತ್ತೆ ಒದರಿತು. ನನ್ನಲ್ಲಿ ಅದರಲ್ಲಿ ಏನೋ ತಾದಾತ್ಮ್ಯದ ಅಂಶ ಕಂಡಂತಾಗಿ ದಿಗ್ಭ್ರಾಂತನಾದರೂ ಅದನ್ನು ನೋಡುವುದೇ ಹಿತವೆನಿಸಿತು. ಎಲ್ಲಿ ಕಾಲು ಊರಿದರೂ ನೆಲವೇ ಸಿಗದೇ ಯಾರ ಕೇಳಿದರೂ ನನ್ನ ಗುರುತು ಹೇಳದೇ ಇರುವಾಗ ತಾನೇ ತಾನಾಗಿ ಹುಡುಗಾಟದಲ್ಲಿ ತೊಡಗಿರುವ ಕತ್ತೆಯ "ಕ್ಷಣದರ್ಶನ" ನನ್ನ ತೂಕವನ್ನೇ ಹೆಚ್ಚಿಸಿತು. ಆತ್ಮ ಅನಾದಿ, ಅನಂತವೆಂದ ವೇದಾಂತ ವ್ಯಕ್ತಿಯನ್ನು ಹಾಳು ದೇವಸ್ಥಾನವನ್ನಾಗಿ ಬಿಟ್ಟಿದೆ. "ನಾಳೆ ನೀವು ಹೋಗುತ್ತೀರಂತೆ. ನಾನೂ ನಿಮ್ಮೊಂದಿಗೆ ಬರುತ್ತೇನೆ." ಇವಳೊಬ್ಬಳು ಸುಳು ಸುಳ್ಳೇ ಗುರುತಿದ್ದವರಂತೆ ಮಾತನಾಡುತ್ತಾಳೆ–ತನಗೆ ಏನು ಬೇಕೋ ಅದನ್ನು ತೆಗೆದುಕೊಳ್ಳದೇ. ಈಕೆಗೆ ಸದ್ಯ ಹುಚ್ಚು ಹಿಡಿಯುವುದಿರಬೇಕು. ಕತ್ತಲೆ ಆದಂತೆ, ನಾಳೆ ಹೋಗುವುದೆಲ್ಲಿಗೆ ಎಂಬ ಚಿಂತೆ ಕಾಡತೊಡಗಿತು. ಸರಳಾಚೆಯ ಲೋಕ ಅಪರಿಚಿತವಾಗಿ ತೋರಿತು. ಕವಿತಾ, ಅವಳ ತಂದೆ, ತಾಯಿ, ಅವಳ ಗಂಡ, ಅತ್ತೆಯ ಲೋಕದಲ್ಲಿ ಎಂತು ಬದುಕುವುದೆಂಬುದು ಅರ್ಥವಾಗದೇ ತಲೆ ಮದಡಾಯಿತು. ದೇವರು ದೇವಸ್ಥಾನ ನೀತಿ, ನಿಯಮ ಕಾಯ್ದೆ ಹಿರಿಯರು ಕುಟುಂಬ ಸರಕಾರಗಳು ನಾಗರಿಕ ಲೋಕದಲ್ಲಿ ಹೇಗೆ ನನ್ನ ಅನುಭವವನ್ನು ನನ್ನದಾಗಿಸಿಕೊಂಡು ಬಾಳಬೇಕೆಂಬುದು ಮಹತ್ವದ ಸಮಸ್ಯೆಯಾಯಿತು. ಹಾಲು, ಬ್ರೆಡ್. ಹಣ್ಣು, ಏನೇನೋ ಬಂದಿತು. ತಿಂದೆ. "ದೊರೆ ನಾಳೆ ಹೋಗಿ ಬಿಡ್ತೀರಾ?" "ಆ ಬೆಳಗಿನ ಚಂದ ಹುಡುಗಿ ಕೇಳಿದಾಗ ಏನೆಂದು ಉತ್ತರಿಸಲಿ ಎಂದು ತಿಳಿಯದೇ ಸುಮ್ಮನೇ ಕುಳಿತೆ. ಅವಳು ಕೊಟ್ಟ ಕಾಣಿಕೆಗಳನ್ನೆಲ್ಲ ತೆಗೆದುಕೊಂಡೆ. ಟ್ಯೂಬ್‌ಲೈಟಿನ ಬೆಳಕಿನಲ್ಲಿ ಅವಳ ಕಣ್ಣಿನಿಂದ ಉದುರಿದ ಕಣ್ಣೀರ ಹನಿಯನ್ನು ಕಂಡನಾದರೂ ಸಾಂತ್ವನಗೊಳಿಸುವ ಮನಸ್ಸಾಗದೇ ಕುಳಿತೇ ಇದ್ದೆ. ರಾತ್ರಿ ಇಡೀ ನಿದ್ರೆ ಬರಲಿಲ್ಲ. ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ನಡೆಯಬೇಕಾದ ನನ್ನ ಸ್ಥಿತಿಯನ್ನು ಕುರಿತು ಜಗತ್ತನ್ನು ಕುರಿತು, ನನ್ನನು ಕುರಿತು ಯೋಚಿಸುತ್ತಿದ್ದೆ.

ಬೆಳಗಾಗಿತ್ತು. ಮನಸ್ಸಿನಲ್ಲಿ ಮಬ್ಬು ಕವಿದಿತ್ತು. 'ನೀವು ಹುಬ್ಬಳಿಗೆ ಹೋಗಬಹುದು ಟ್ರೇಸಿಗೆ. ನಿಮ್ಮನ್ನು ಡಿಸ್‌ಚಾರ್ಜ್ ಮಾಡಲಾಗಿದೆ. ಖಾಂಡೇಕರ ಸಾಹೇಬರು ನಿಮಗಾಗಿ 50 ರೂ. ಗಳನ್ನು ಕಳಿಸಿದ್ದಾರೆ!" ಡಾ॥ ಡಿವೈನ್ ನುಡಿದು ಕೈ ಕುಲುಕಿ ಬೆನ್ನು ಚಪ್ಪರಿಸಿ ನಕ್ಕರು. "So my madness ends! Thanks!" ಹೊರ ಬಿದ್ದೆ.

- ೨ -

"ನಿನ್ನ ಕಥೆ ಗೊತ್ತು!" ಟೊಂಕಕ್ಕೆ ಕೈ ಸುತ್ತಿ ನಿರಿಗೆ ಸಡಿಲಿಸುತ್ತ ಇವರಾಡಿದ ಮಾತು ಹೊರಗಡೆಯ ಮೃಗಶಿರದ ಮಳೆಯೊಂದಿಗೆ ಸೇರಿ ಹೋಗಲಿಲ್ಲ. ಮೈ ಬೆವತಿತು. ಮೈ ಏರುವ ಗಂಡಸಿಗೆ ಮನಸ್ಸಿನ ಪರಿವೆಯಿರುವುದಿಲ್ಲವೆಂಬ ಮಾತು ವಿಚಿತ್ರವೆನಿಸಿ ನಡುಗಿದೆ. ಒಂದು ಮುತ್ತಿಗಾಗಿ, ಒಮ್ಮೆ ಅಂಗೈಯಲ್ಲಿ ಅಂಗೈಯಿಟ್ಟು ಕೊಳ್ಳುವುದಕ್ಕಾಗಿ ಅನಿರುದ್ಧ ಪಟ್ಟ ಕಷ್ಟ ನೆನಪಾಗಿ ಭಯವೆನಿಸಿತಾದರೂ ಅನಿವಾರ್ಯವಾಯಿತು. ರೋಮ ತುಂಬಿದ ಹಾವಿನಂತಹ ಕೈ ತೊಡೆಯ ಸಂದಿಗೆ ನೂಕಿದಾಗ ಅಸಹ್ಯವೆನಿಸಿತಾದರೂ ಅದೇಕೆ ತಡೆಯಲು ಮನಸ್ಸು ಮಾಡಲಿಲ್ಲ. 'ನನ್ನ ಕಥೆ ಏನು ಗೊತ್ತು?" ಎಂದು ಮೈ ಉರಿದು ಬಾಯ್ತೆರೆದಾಗ ಆಚೆಯ ಬಳದಲ್ಲಿ ಅತ್ತೆ ಮುದುಕಿ ಎದ್ದು ಸ್ವಿಚ್ ಹಾಕಿ ಬಚ್ಚಲಿಗೆ ಹೋಗಿ ಅಸಹ್ಯ ಸಪ್ಪಳು ಮಾಡಿದಾಗ ಎಡಗೈ ಮುಂಗೈಯನ್ನು ಬಾಯಿಗಿಟ್ಟು "ಹುಶ್" ಎಂದರು. ಉಸಿರು ಕಟ್ಟಿ ಮೈ ಉರುಳಾಡಿಸಿದರೆ ಅನುಕೂಲ ಕೋನವನ್ನು ಗುರುತಿಸಿ ಕೊಯ್ಲು ನಡೆಸಿದರು. "ನಾಳೆ ಹೇಳುತ್ತೇನೆ" ಎಂದು ಮುಖ ತಗ್ಗಿಸಿ ಮುತ್ತೊತ್ತಲು ಬಂದಾಗ ಹಣೆಯ ಬೆವರು ಹಣೆಬೆ ತಾಕಿ ಎದೆಗೆ ಕಂಬಳಿ

ಹಾಕಿ ಉಜಿದಂತಾಯಿತು. ನೀರೂ ಬೆಂಕಿ ಒಟ್ಟಾಗಿ ಬಿದ್ದು ಒಮ್ಮೇ ತಣ್ಣಗಾದಾಗ ಪೂರ್ವ ವ್ಯಾಪಾರವೆಲ್ಲ ನಾಚಿಕೆಗೇಡಿನದಷ್ಟೇ ಅಲ್ಲ. ದೇಹದ ಸರ್ವಸ್ವನು ಮಹಾಬೋರು ಎಂದು ತಿಳಿದುಕೊಳುವಂತಾಗಿ ಇವರ ಕಡೆ ಬೆನ್ನು ಮಾಡಿ ಮಲಗಿದೆ. ದುಃಸ್ವಪ್ನಗಳಲ್ಲಿ ನಿದ್ರೆ ತಾಪದಾಯಕವಾಗಿತ್ತು. ಬೆಳಿಗ್ಗೆ ಎದ್ದಾಗ ಮೈ ನರಗಳೆಲ್ಲ ಮುಟ್ಟಿದ ಅಲಬರಿಕೆಯಿಂದ ತುಂಬಿತ್ತು. ತಲೆ ತುಂಬ ಕೂದಲು ಹರಡಿ ಮುಖವೂ ವಿಕಾರವಾಗಿರಬೇಕೆಂದೆನಿಸುತ್ತಿತ್ತು. ಇವರು ಎದ್ದವರೇ ರಾತ್ರಿ ಏನೂ ನಡೆಯಲಿಲ್ಲವೆಂಬಂತೆ ನಡೆದುಕೊಂಡಾಗ ತೀರಾ ಅಪರಿಚಿತರಾಗಿ ಕಂಡರು. "ಹೇಳಿ ಹೋಗಿ" ಎಂದು ಆಫೀಸಿಗೆ ಹೊರಟು ಟೈಟಾಗಿ ನಿಂತವರನ್ನು ಕೇಳುವುದು ಹೇಗೆಂದು ಸರಿಯಾಗಿ ತಿಳಿಯಲಿಲ್ಲವಾದರೂ ಒತ್ತಾಯಿಸಿದಾಗ ನನ್ನ ಧ್ವನಿಯೇ ಕುಗ್ಗಿದಂತೆ ಅನಿಸಿತು. ಇವರು ಫಕ್! ಎಂದು ನಕ್ಕಾಗ ನನ್ನ ಅಸ್ತಿತ್ವವೇ ಶೂನ್ಯಕ್ಕಿಳಿದು ಬಿಟ್ಟಿತಾದರೂ ಎದೆಯ ಹಳದಿ ಕೀವು ಮೈ ಮೇಲೆಲ್ಲ ಸುರುವಿದಂತಾಯಿತು. ಕಿಸೆಯಿಂದ ಕವರೊಂದನ್ನು ತೆಗೆದು ನನ್ನ ಮುಖದ ಮೇಲೆ ಎಸೆದಾಗ ಕೋಟಿನ ಮೇಲೇನೋ ಕಸ ಕುಳಿತದ್ದನ್ನು ಒರೆಸಿದೆ.

ಅಟ್ಟವಿಳಿದು ಇವರು ಶೆಡ್ಡಿನಿಂದ ಕಾರು ಸ್ಟಾರ್ಟ ಮಾಡಿದ ಸಪ್ಪಳಕ್ಕೆ ಕಿಟಕಿಯಿಂದ ನೋಡಿದರೆ ಬೊಡ್ಡೆ ಬೊಡ್ಡೆಯಾಗಿ ಬಿಳಲು ಬಿಟ್ಟ ಆಲದ ಮರದ ಕೆಳಗೆ ಕಾರು ವೇಗವಾಗಿ ಓಡಿ ಮಾಯವಾಯಿತು. ರಾತ್ರಿ ತೆಕ್ಕೆ ಹಾಕಿ ಮಲಗಿದವರಿವರೇ ಎಂಬಷ್ಟು ಸಂಶಯ ತಲೆಗೆ ತುಂಬುವುದರೊಳಗೆ ತೀರಾ ನಿಶ್ಯಕ್ತಿ ಎನ್ನಿಸಿ ಬಿಟ್ಟಿತು. ಮುದ್ದೆಯಾಗಿ ಬಿದ್ದ ಕವರನ್ನು ಕೈಗೆತ್ತಿಕೊಂಡೆನಾದರೂ ಓದುವ ಕುತೂಹಲವೇ ಇಲ್ಲದಂತಾಗಲು ಎಲ್ಲಿ ಇಟ್ಟುಕೊಳ್ಳಬೇಕೆಂಬುದು ತಿಳಿಯದೆ ಕೈ ಕವರಿನೊಂದಿಗೆ ನಡುಗತೊಡಗಿತು. ಎದೆಯ ಒಳಗಡೆ ಮಂಕ್ರಿ ಬಿಸಿ ಮರಳನ್ನು ಚೆಲ್ಲಿದಂತಾಗಿ ಕಣ್ಣಿನಲ್ಲಿ ಹೊಗೆ ಹಾಯ್ದುಂತೆನಿಸಿತು. ಎಲ್ಲಾ ಮಬ್ಬು-ಮಬ್ಬು. ಏನು ಕಥೆಯಿರಬಹುದು! ಬರೆದವನಾರು? ಯಾವ ತಂತ್ರದ ಕಥೆ? ಎಲ್ಲಾ ಪ್ರಶ್ನೆಗಳು ನೂರಾರಾಗಿ ಎದ್ದವಾದರೂ ಒಟ್ಟಿನಲ್ಲಿ ಅದರಿಂದೇನಾಗಬೇಕಾಗಿದೆ ಎಂಬುವುದೇ ತಿಳಿಯದೆ ಕುಳಿತೆ. ಮೈ ಒರಟಾಗಿ ಬರಡಾಗಿ, ಕಣ್ಣು ಮಂಕಾಗಿ ಮನೆ ಬೈಲಾಗಿ ಅಲ್ಲೆಲ್ಲ ಕತ್ತಲೆ ತುಂಬಿದಂತಾಗಿ ನಾನೇ ಕಾಣುವುದು ನನಗೆ ಕಷ್ಟವಾಯಿತು. ಕರಗಿ ಹೋಗುವ ನನ್ನನ್ನು ಕೂಡಿಸಿಕೊಳ್ಳಲೆಂಬಂತೆ ಮಂಚದ ಮೇಲೆ ಗಕ್ಕನೇ ಕುಳಿತೆ. ಆಲದ ಗಿಡದ ಕೆಳಗಡೆ ನಿಂತ ಗೂಳಿ ಗುಟುರ್ರು ಹಾಕಿತು. ಎದೆ ಝುಂಮ್ ಎಂದಿತು. ಮಾರುತಿ ದೇವಸ್ಥಾನದ ಘಂಟೆ ಬೆಳಗಿನಿಂದ ಹೊಡೆದುಕೊಳುತ್ತಿದ್ದುದು ಕೇಳಿಸುತ್ತಿತ್ತು. ಮಾವ ಅಸ್ತ್ರಮದಿಂದ ಶ್ವಾಸ ಸತ್ತು ಬಿದ್ದು ಏಳಿಯುತ್ತಿದ್ದುದು ಕೇಳಿಸುತ್ತಿತ್ತು. ಕ್ಷಣ ಕ್ಷಣಕ್ಕೂ ಫಕ್ ಫಕ್ ಪಂಪು ಬಾಯಿಗಿಟ್ಟು ಜೀವ ಹಿಡಿದಿದ್ದರು. ಸದಾ ಮುತ್ತೈದೆತನ ಕರುಣಿಸೆಂದು ಅತ್ತೆ ವ್ರತ ಮಾಡುತ್ತಿದ್ದರೆ ಮಾವ ನೆಲ ಕಚ್ಚಿ ಉಸಿರೆಳೆಯುತ್ತಿದ್ದಾರೆ. ಕಫದ ಬಟ್ಟಲೂ ತುಂಬಿರಬೇಕು. ಬಂಗಾರದಲ್ಲಿ ಕಡ್ಡಿ.

ಮಂಗಲ ಸೂತ್ರ ಎದೆಗೆ, ಪೊಲೆಗೆ ತಡೆಯಿತು. ಇದೆಲ್ಲ ನಾನೇ ಎಂದು ಒಂದು ಕ್ಷಣ ಅನಿಸಿ ನೋಡಿದರೆ ಥಕ್ಕನೇ ಹೊಳೆಯಿತು ಗುಳದಾಳಿ. ಬೇಗನಾಗಿ ಎಷ್ಟು ಹೊತ್ತಾದರೂ ಇನ್ನೂ ಕೋಣೆಯ ಕಸ ಗುಡಿಸದಿದ್ದುದು ನೆನಪಾಗಿ ಕಸಬರಿಗೆ ತೆಗೆದುಕೊಂಡೆ. ಗೋಡೆ ಗುಡಿಸದೇ ಎಷ್ಟೋ ದಿನವಾಗಿತ್ತು. ಮುಖವೆತ್ತಿ ನೋಡಿದರೆ ಮೂಲೆ ಮೂಲೆಗೂ ಜೇಡರ ಬಲೆ. ಚೆನ್ನಾಗಿ ಝಾಡಿಸಿ ಗುಡಿಸಿದೆ. ಮನಸ್ಸಿಗೆ ಕೊಂಚ ನೆಮ್ಮದಿಯಾಯಿತು. ಒಂದು ದಿನ ಗುಡಿಸಲಿಲ್ಲವಾದರೆ ಮೂಲೆಯಿಂದ ಮೂಲೆಗೆ ಜೇಡರ ಬಲೆಗಳ ಸಾಲು . ಕಸ ಝಾಡಿಸಿಯಾದ ಮೇಲೆ ಕೆಲಸದ ಹೆಂಗಸಿಗಾಗಿ ಕಾಯದೆ ನಾನೇ ಕೋಣೆ ಉದ್ದಿದೆ. ತುಂಬಾ ಸ್ವಚ್ಛವಾಗಿ ಕಂಡು ನೆಲದೊಡನೆ ಒಂದು ಆತ್ಮೀಯತೆ ಉಂಟಾಯಿತು. ಹಾಸಿಗೆಯನ್ನೆಲ್ಲ ತುಡುಗಿ ಹೊಸ ಬೆಡ್‌ಶೀಟ್ ಹಾಸಿದಾಗ ಮನಸ್ಸು ಹಗುರಾಗುವುದರೊಳಗೆ "ಲಕ್ಷ್ಮೀ" ಎಂದು ಕೆಳಗಡೆಯಿಂದ ಅತ್ತೆ ಕೂಗಿದರು. ಬೇಡಾದ ಕರೆಯೆನಿಸಿ "ಕರೆ" ಕರೆಯಾದರೂ ಕೆಳಗಿಳಿದು ಹೋಗಬೇಕಾದ ಪರಿಸ್ಥಿತಿಯ ಅರಿವಾಗಿ ನನಗೆ ನಾನೇ ಚಿಕ್ಕವಳಾಗಿ ಕಂಡೆ.

ಅಡಿಗೆ ಮನೆಯಲ್ಲಿ ಕೆಲಸಕ್ಕಾಗಿ ತಡಕಾಡುವ ಅತ್ತೆಗೆ ಕೆಲಸದವರನ್ನು ಸರಿ ರೇಬಂತೆ ಆದರ್‍ಕಳೆಯುವ ಹವ್ಯಾಸ. ಮನೆ ತುಂಬುವಳೆಂಬ ಕಾರಣಕ್ಕಾಗಿ ಲಕ್ಷ್ಮೀ ಎಂಬ ನಾಮಕರಣ "ನಿನ್ನಿಂದಲೇ ಆ ಮನೆಯ ಭಾಗ್ಯ ಹೆಚ್ಚಾಗಬೇಕೆಂದು" ಅಕ್ಕಿ ಕಾಯಿಗಂಟು ಕಟ್ಟಿ ಊರಿಗೆ ಹೋದ ಪುರೋಹಿತನ ಅಧಿಕಪ್ರಸಂಗ. ನಾಚಿಕೆ ಬಿಟ್ಟು ದಕ್ಷಿಣೆಯನ್ನು ಎಲ್ಲರೆದುರೇ ಲೆಕ್ಕ ಮಾಡುವ ಬ್ರಾಹ್ಮಣನ ಚಾಪಲ್ಯಕ್ಕೆ ಒಂದು ತರಹವೆನಿಸಿತ್ತು. "ಯಾಕೆ? ಕಣ್ಣೆಲ್ಲ ಕೆಂಪಾದದ್ದು?" ಎಂಬ ಪ್ರಶ್ನೆ ಅತ್ತೆ ಕೇಳಿದಾಗ ನಿಂತಲ್ಲೇ ನಾನು ಅಪರಾಧಿಯಾಗಿಬಿಟ್ಟೆ. ಮಗ-ಸೊಸೆ ಮಲಗಿ ಮಾತನಾಡುವುದನ್ನು ಕೇಳುವ ಸ್ವಭಾವ ದೊಡ್ಡಸ್ತಿಕೆಯಲ್ಲವೆನಿಸಿತು. ಶಾಲೆಗೆ ಹೋಗುವಾಗ ಊರ ಬೇಕಾದಲ್ಲಿ ರಣಹದ್ದುಗಳು ಕುತ್ತಿಗೆ ಉದ್ದ ಮಾಡಿ ರೆಕ್ಕೆ ಅಪ್ಪಳಿಸಿ ಪಿಡೆ ಚಪ್ಪರಿಸಿ ತಿನ್ನುವುದನ್ನು ನೋಡಿದ್ದ ನನಗೆ ಆಚೆ ಈಚೆ ಮನೆಯ ಮುದುಕಿಯರು ಕಿವಿ ಕಚ್ಚಿಕೊಳ್ಳುವುದನ್ನು ನೋಡಿದ್ದ ನನಗೆ ಕೇಳಿದಾಗಲೂ ಹಾಗೆಯೇ ಅನಿಸುತ್ತಿತ್ತು. ನೆರೆಮನೆಯ ಬೋಳಮ್ಮ ಮಂಥರೆಯಂತೆ ಯಾವುದೋ ಹುಡುಗಿ ಯಾರನ್ನೋ ಕಟ್ಟಿಕೊಂಡು ಹೋದಳಂತೆ. ಎಂದು ಮೂಗು ಉದ್ದ ಉದ್ದ ಮಾಡಿ ದೇಹದ ಚಾಪಲ್ಯ ತೀರಿಸಿಕೊಳ್ಳುವುದನ್ನು ಕಂಡಾಗ ನನ್ನ ಅಮ್ಮ ಮಾತ್ರ ಲೋಕಾರೂಢಿ ಎರಡು ಮಾತನಾಡಿ ತನ್ನ ಕೆಲಸದಲ್ಲಿ ತಾನಾಗಿರುವುದು ನೆನಪಾಗಿ ಹೆಮ್ಮೆಯೆನಿಸಿತು. 'ಶಬ್ದವನ್ನೇ ಅಲ್ಲ'-ಸದ್ದನ್ನು' ಆಲಿಸುವ ಮುದುಕಿಯ ರುಚಿಗೆ ಮನಸ್ಸು ರೋಸಿ ಹೋಗಿ ಅತ್ತೆಯ ಪ್ರಶ್ನೆಯನ್ನು ಅಲ್ಲಿಯೇ ಬಿಟ್ಟೆ. "ಪತ್ರದ ಸುದ್ದಿ ಏನಾದ್ರೂ ಹೇಳಿದ್ನಾ?" ಎಂದ ಮಾತಿನ ಅರ್ಥವಾಗಲಿಲ್ಲವಾದರೂ ಗಾಬರಿ ಮಾಡಿಕೊಳದೇ ಸುಮ್ಮನೇ ನಿಂತೆ. "ಅದೇ ನಮ್ಮಾ ನಿಮ್ಮ ಕಡೆಯವ್ರು ರೀತಿ! ಗಂಡನ ಮನೆಗೆ ಹೋದ ಮಕ್ಕಳಿಗೆ ಬೇಕು ಬೇಕೆಂದಾಗ ಬರಲು ಬರೆದು ಬಿಡುವುದೇ?" ಎಂದು ಟೊಂಕ ನೆಟ್ಟಗೆ ಮಾಡಿ ನಿಂತು ಮುಖ ನೋಡಿ ತಮ್ಮ ಸಂಸ್ಕೃತಿಯನ್ನು ಹಾಡಿದರು. "ಏನು! ಅಮ್ಮನಿಗೆ ಹುಶಾರಿಲ್ಲವೇ?!" ಎಂದರೆ "ಯಾವಾಗ ಆ ಮಾರಾಯ್ತಿ ಹುಶಾರಿದ್ದದ್ದು" ಎಂದು ಬೀಗಿತ್ತಿಯ ಮೇಲಿನ ಸೇಡು ತೀರಿಸುವಂತೆ ಶಕ್ಷಣ ಉತ್ತರವಿತ್ತರು. ಆಮೇಲೆ ಶಾಗವಾಗಿ "ನನಗೇಕಮ್ಮ, ನೀನುಂಟು, ನಿನ್ನ ಗಂಡ ಉಂಟು" ಎಂದು ವೈರಾಗ್ಯ ನುಡಿದರು. ಏನೋ ಸ್ಪಷ್ಟವಾಗಿ ತಿಳಿಯದೇ ಅವರು ಈ ಪತ್ರದ ಸುದ್ದಿಯನ್ನೇ ಹೇಳಲಿಲ್ಲವಲ್ಲ ಎಂದು ಕೋಪಿಸಿಕೊಳ್ಳುವಂತಾಗಿ ಮುಖ ಗಂಟಿಕ್ಕಿದರೆ "ಹಾಗೇಕೆ ಮುಖ ಮಾಡ್ತೀಯೋ? ನಿಮ್ಮಪ್ಪನೇನು ಇಪ್ಪತ್ಸಾವಿರ ವರದಕ್ಷಿಣೆ ಕೊಟ್ಟಾಂತ ಮಾಡಿದ್ದಿಯಾ?" ಎಂದು ಜರಿಯುವಂತೆ ಮುಖ ತಿವಿಯುವ ರೀತಿಯಲ್ಲಿ ಎದುರು ಎದುರಿಗೇ ಬಂದಾಗ ಮೂಕಿಯಾಗಿ ಬಿಟ್ಟ ನನ್ನನ್ನು ಏನೆಂದು ಕರೆದುಕೊಳಬೇಕೆಂಬುದೇ ತೋಚದೆ ಅತ್ತೇ ಬಿಟ್ಟೆ! ಪುಣ್ಯಾತ್ಗಿತ್ತಿ! ಸಾಕೋ ಸಾಕೋ ನಿಮ್ಮ ಸಂಗ್ತಿ!" ಎಂದು ಅತ್ತೆ ಕೂಗಿಕೊಂಡಾಗ ಕಂಗಾಲಾಗಿ ಅಟ್ಟ ಹತ್ತಿ ಓಡಿ ಹೋಗಿ ಮಂಚಕ್ಕೆ ಬಿದ್ದೆ. ನಾಲ್ಕು ಕಣ್ಣಹನಿ ಬಿದ್ದಿರಬೇಕು. ಆಗಲೆ ನಾನಿದ್ದ ಮನೆ ಮರೆತು ಹೋಗಿತ್ತು. ಅಮ್ಮನಿಗೆ ಎಷ್ಟು ದಿನವಾಯ್ತೋ, ಈಕೆ ಹೇಗಿದ್ದಾರೋ ಎಂಬ ಚಿಂತೆ ದೊಡ್ಡದಾಗಿ ನಾನು ಈಗಲೇ ಹೋಗಿ ಬಿಡಲೇ ಎಂದುಕೊಂಡೆ. ಅಂಗಾತ ಮಲಗಿ ಮೇಲೆ ನೋಡಿದರೆ ಆಗಲೇ ಬೇಡ ಒಂದು ಎಳೆ ನೇಯ್ದಿದ್ದಿತು. ಆಫೀಸಿನಿಂದ ಅವರು ಬರುವಾಗ ಕಣ್ಣು ಕೆಂಪಗೆ ಮಾಡಿಕೊಂಡೇ ಬಂದರು. ನನಗೂ ಮೊದಲಿನದೆಲ್ಲ ಮರೆತು ಹೋಗಿತ್ತು. ಕೋಟು ಕೈಗೆ ತೆಗೆದುಕೊಳ್ಳುತ್ತ "ಅಮ್ಮನಿಗೆ ಹುಶಾರಿಲ್ಲವಂತಲ್ಲ, ಪತ್ರದಲ್ಲಿ ಮತ್ತೇನು ಬರೆದಿದ್ದಾರೆ!" ಎಂದು ಮೆಲ್ಲಗೆ ಕೇಳಿದೆ. ಕಿಡಿ ಹಾರುವ ಚಕ್ಕೆಯನ್ನು ಕೆದರಿದಂತಾಗಿ "ಎಲ್ಲರಿಗೂ ಜ್ವರ ಭರುತ್ತೆ" ಎಂದರು. "ಹೇಗಿದ್ದಾರೆ?" ಎಂದು ಮತ್ತೆ ಕೇಳಿದರೆ "ಸತ್ತರೆ ಟೆಲಿಗ್ರಾಂ' ಬರುತ್ತದೆ"! ಎಂದರೂ ಕಿಸೆಯಿಂದ ಸಿಗರೇಟು ತೆಗೆದು ಬಾಯಿಗಿಟ್ಟು ಕಡ್ಡಿ ಗೀರಿ ಎಳೆದು 'ಉಫ್'! ಎಂದು ನನ್ನ ಕಡೆ ತಿರುಗಿ "ನಿನ್ನ ಕಥೆ ಏನಾಯ್ತು?" ಎಂದು ನಕ್ಕರು. ಆ ನಗೆ, ಆ ಹೊಗೆ ಇವರು ನೆಗೆಟಿವ್ವಿನಂತೆ, ಕಟ್ಟಾಗಿ ಮೋರೆ ಕೆಳಗಾಗಿ ಬಾವಲಿಯಂತೆ ಜೋತು ಬಿದ್ದಿದ್ದಾರೆ. "ಏನು ಕಥೆ" ಎಂದು ಕೇಳಿದಾಗ ಮುಖ ವಿಕಾರವಾಗಿರಬೇಕು. ಮುಷ್ಟಿಯಲ್ಲಿ ಕಲ್ಲು ಹಿಚುಕಿ ಪುಡಿ ಮಾಡಿದಂತಾಯಿತು. "ಏನು ಕಥೆಯೆಂದು ನನ್ನನ್ನೇ ಕೇಳ್ತೀಯಾ? ಎಂದು ಮೋಡ ಒಡೆದು ಮಿಂಚಾಗಿ ಸಿಡಿಲು ಗುಟುರು ಹಾಕಿ ಗದ್ದರಿಸಿತು. "ಆ ಪತ್ರ ಹೇಳುವ ಕಥೆ ಸುಳ್ಳು" ಎಂದೆ. ಆಮೇಲೆ ನೆನಪಾಯಿತು. ಆ ಪತ್ರ ಓದಲಿಲ್ಲವೆಂದು. "ಬುಡದಲ್ಲಿ ಬಟ್ಟೆಯಿಟ್ಟುಕೊಂಡು ಮೇಲೆ ಹೂದೋಟ ಮಾಡುವವರು" ಎನ್ನುತ್ತ ಅಟ್ಟದಿಂದ ಕೆಳಗಿಳಿದು ಹೋಗಿ ಕಾಫಿ ಹೀರಿದರು. ರಾತ್ರಿ ಮಲಗುವಾಗ ಹೇಳಿದೆ "ನಾನು ಊರಿಗೆ ಹೋಗಬೇಕು" ಛಾದರವನ್ನು ಹೊದ್ದು ಮಗ್ಗುಲಾಗಿ ಗಡದ್ದಾಗಿ ಮಲಗಿದವರು ನನ್ನ ಮಾತು ಕೇಳಿಸದವರಂತಿದ್ದರು. "ನಾನು ಅಮ್ಮನನ್ನು ನೋಡಬೇಕು." ಇವರು ಪಿಟಕ್ ಎನ್ನಲಿಲ್ಲ. ತೋಳು ಹಿಡಿದು ಬೆನ್ನಿಗೆ ಒರಗಿ ಹೇಳಿದೆ. "ಅಮ್ಮನಿಗೆ ನಾನು ಎಂದರಾಯ್ತು." ಇನ್ನೂ ಇವರು ನನ್ನ ಮಾತು ಕಿವಿಗೆ ಹಾಕಿಕೊಳಲು ಸಿದ್ಧರಿರಲ್ಲದವರಂತೆ ಹಟ ಮಾಡಿ ಮಲಗಿದ್ದರು. "ನಾನು ನಾಳೆ ಹೋಗ್ತೇನೆ"" ಎನ್ನುವುದರೊಳಗೆ ಮುಖ ಹೊರಳಿಸಿ "ಇದು ನಿನ್ನ ಅಪ್ಪನ ಮಳೆಯಲ್ಲ. ನಾನು ಹೂಂ ಎಂದರೆ ಮಾತ್ರ ನೀನು ಹೋಗಬಹುದು" ಎಂದವರೇ "ಓ! ನಿನ್ನ ಕಥೆ ಹೇಳಲೇ ಇಲ್ಲವಲ್ಲ" ಎಂದು ವಿಕಾರವಾಗಿ ನಕ್ಕರು. "ನಿನ್ನ ಕಥೆ ಹೇಳುವುದಕ್ಕೆ ನಾಚಿಕೆಯಾಗುತ್ತದೆಯೇ !" ಎಂದು ಕನಿಕರದಿಂದ ನುಡಿದು ದವಡೆ ಕರಟ ಹೋಗುವಂತೆ ಕೆನ್ನೆ ತಿರುವಿದರು. ಆ ಕೈಯೇ ಹೇಸಿಗೆಯಾಯಿತು, ಎಲ್ಲರ ಸಮಕ್ಷಮ ಹಿಡಿದುಕೊಂಡು ತಿರುಗಿದ

ತ್ತೈ. ಅದೆಯೋ ಎಂಬ ಸಂಶಯ ಬಂದಿತು. ಬೆಡ್ ಲ್ಯಾಂಪ್ ... ಬೀಳುತ್ತಿದ್ದರೆ ಇವರು ಪಶುವಿನಂತೆ ಮೈ ತಾರಿದರು. ಸೀರೆ ಹರಿದು ಚಿಂದಿಯಾಗುವಂತೆ ಗಡಬಡೆಯಲ್ಲಿ ಬಿಚ್ಚೊಗೆದು ಸರ್ವಾಧಿಕಾರದಿಂದ ಮೈ ನುಚ್ಚು ನೂರು ಮಾಡಿದರು. ಕಣ್ಣಿನಲ್ಲಿ ನೀರು ಹೇಳದೇ ಕೇಳದೇ ಧಾರಾಕಾರವಾಗಿ ಸುರಿಯ ತೊಡಗಿತ್ತು. ಅವರಿಗೆ ನಿದ್ರೆ ಬಂದಿರಬೇಕು. ಗೊರಕೆ ಹೊಡೆಯತೊಡಗಿದರು. ಮನುಷ್ಯನೆಂದರೆ ದೇಹ ಮಾತ್ರವೆಂಬ ವಿಶೇಷ ವಿಚಾರವೊಂದು ವಿಚಾರ ಮಾಡಲರಿಯದ ನನ್ನ ತಲೆಗೆ ಪ್ರಪ್ರಥಮವಾಗಿ ಪ್ರವೇಶಿಸಿತು. ಅಷ್ಟು ದಿನಗಳ ಬದುಕಿನನುಭವವೇ ಸುಳ್ಳೆಂಬಂತಾಗಿ ಹೊಸದೊಂದು ನರಕದ ಲೋಕದಲ್ಲಿ ಸಂಚಾರಕ್ಕೆ ಹೊರಟಂತಾಯಿತು. ಅಮ್ಮನನ್ನು ನೋಡಬೇಕು. ಅನಿರುದ್ಧನನ್ನು ಮಾತಾಡಿಸಬೇಕು. 'ಬಹಳ ಬೇಸರಪಟ್ಟುಕೊಂಡೆಯಾ?' ಎಂದು ಅವನನ್ನು ಕೇಳಲೇಬೇಕು. ಹಾಸಿಗೆಯ ದಿಂಬಿನಡಿಯಿಂದ ಹೆಗ್ಗಣವೊಂದು ಓಡಿತು. ಬಚ್ಚಲ ಮನೆಯ ಓರಿಗೆ ಕಲ್ಲು ಜಡಿದು ಬರಲು ಮರೆತೇ ಹೋಗಿತ್ತು. ಪಂಜರವೊಂದು ತರುತ್ತೇನೆ ಎಂದಿದ್ದಾರೆ. ಸಣ್ಣ ತಮ್ಮ ಮನೆಯಲ್ಲಿ ಪಂಜರದೊಳಗೆ ಇಲಿ ಹಿಡಿದುಕೊಂಡು ರಸ್ತೆಯಲ್ಲಿ ಮುಚ್ಚಳ ತೆಗೆಯುವ ತಯಾರಿಯಲ್ಲಿದ್ದಾಗ ಎದುರಿನಲ್ಲಿ ತಪಸ್ಸಿಗೆ ಕುಳಿತ ಬೆಕ್ಕು ಜಿಗಿದು ಕುತ್ತಿಗೆ ಹಿಡಿದದ್ದು ನೆನಪಾಗಿ ಗಾಬರಿಗೊಂಡೆ. ಇವರು ಎಂದಿಗಿಂತ ಜೋರಾಗಿ ಗೊರಕೆ ಹೊಡೆಯುತ್ತಿದ್ದರು. ಸೀರೆ ಧೋತರಕ್ಕೆ ಗಂಟು ಕಟ್ಟಿ ಮಂಟಪ ಸುತ್ತು ಹಾಕುವ ಇಂಥ ಬದುಕಿಗೆ ಪ್ರವೇಶ ಮಾಡಿರುವೆನೆಂಬ ಸಂಶಯವನ್ನು ತಂದಿರಲಿಲ್ಲ. ತಲೆ ಬಗ್ಗಿಸಿ ಮಾಲೆಯನ್ನು ಹಾಕಿಸಿಕೊಂಡಾಗ ಈ ಮನೆ ಸೆರೆಮನೆಯಾಗಿರಬಹುದೆಂದು ಕನಸು ಕಂಡಿರಲಿಲ್ಲ. ಅಷ್ಟೆಲ್ಲ ಜನ ಬಂದು ನಕ್ಕು ಮಾತಾಡಿ, ಆಶೀರ್ವದಿಸಿ, ಉಂಡುತೇಗಿ ಹೋದಾಗ ಈ ಬದುಕಿನ ರಿಪೇರಿಗೆ ಯಾರು ಬರಲಿಕ್ಕಿಲ್ಲವೆಂದೆನಿಸಲಿಲ್ಲ. ಅನಿರುದ್ಧ ನನ್ನು ಬಿಟ್ಟು ಇದಕ್ಕೆ ಸಮ್ಮತಿಸಿದಾಗ ಎಷ್ಟೊಂದು ಜನ ನನಗಿದ್ದಾರಲ್ಲ ಎಂಬ ಯಾವುದೋ ಒಂದು ಸಂತೋಷ ಎದೆಯೊಳಗೆ ಮಿಸುಕಾಡಿ ಎಲ್ಲವನ್ನೂ ಸಹಿಸಿಕೊಳ್ಳುವಂತೆ ಮಾಡಿತ್ತು. ಮಚ್ಚರದಾನಿಯ ಹೊರಗಡೆ ಕೈಯೂರಿ ಮಲಗಿದ್ದ ಇವರು ಮೂಗುಕಟ್ಟಿ ಮಿಸುಕಾಡಿದರು. ಒಂದೆರಡು ಮಚ್ಚರದಾನಿಯೊಳಗೂ ಸೇರಿರಬೇಕು. ಅವು ಕಾಡುವದಿಲ್ಲವಂತೆ. ಅವರ ಬದುಕೇ ಗದ್ದಲವೆಂದು ಯಾರೋ ಹೇಳಿದ್ದು ನೆನಪಾಯಿತು. ಕಿಡಕಿಯ ಹೊರಗೆ ಆಕಾಶ ಬೆಳಗುಗುತ್ತ ನಡೆದಿತ್ತು. ಎದ್ದು ಒಂದಿಷ್ಟು ಚಹ ಮಾಡಿ ಕುಡಿದರೆ ಇಲ್ಲಿದ್ದವರನ್ನೆಲ್ಲ ಮರೆತುಬಿಡಬಹುದೆಂದುಕೊಂಡೆ. ಯಾಕೆ ಬೇಕು ಈ ಬೇಡಾದ ನನ್ನ ಜಗತ್ತು. ಮನಸ್ಸನ್ನೆಲ್ಲ ತುಂಬುವ ಅಂದಿನ ಭಾವನೆಗಳನ್ನೆಲ್ಲ ಮೆಲಕಾಡಿಸುತ್ತ ಎಲ್ಲದಕ್ಕೂ ಹೂಂ ಎಂದು ಬದುಕಿದರೆ ಇಲ್ಲಿ ಎಲ್ಲ ಸಹ್ಯವಾದೀತೆಂದುಕೊಂಡು ಎದ್ದು ಬಿಟ್ಟೆ. ಇವರು ಇನ್ನೂ ಗೊರಕೆ ಹೊಡೆಯುತ್ತಿದ್ದರು. ಅತ್ತೆ ಎದ್ದಿರಲಿಲ್ಲ. ಅಡಿಗೆ ಮನೆಗೆ ಹೋಗಿ ಸಪ್ಪಳವಿಲ್ಲದೇ ಸ್ಟೋವ್ ಹಚ್ಚಿದೆ. ಬಹುತೇಕ ನನ್ನ ಮನೆಯಲ್ಲಿ ನಾನು ಕದಿಯುವ ಅನುಭವ. ಒಂದು ತಟ್ಟೆ ನೀರಿಟ್ಟು ಸಕ್ಕರೆ ಹಾಕಿ ಬಚ್ಚಲಿಗೆ ಹೋಗಿ ಬಾಯಿಗಿಷ್ಟು ನೀರು ಹಾಕಿ ಒಳಬಂದರೆ ನೀರು ಇನ್ನೂ ಕುದ್ದಿರಲಿಲ್ಲ. ಆದಕ್ಕೆ ಚಹಪುಡಿ ಸುರಿದು ಗಡಬಡೆಯಲ್ಲಿ ಗಾಳಿಸಿ ಕಪ್ಪಿಗೆ ಸುರುವಿಕೊಂಡು ಕಳುವಿನ ಅವಶೇಷವೇನೂ ತಿಳಿಯದಂತೆ ಪಾತ್ರೆ ಅರಸೇಹುಟ್ಟು ಚಹ ತುಂಬಿದ ಕಪ್ಪಿನೊಡನೆ ಬಚ್ಚಲಿಗೆ ಹೋಗಿ ಚಹ ಕುಡಿದು ಬಿಟ್ಟೆ. ಪಾತ್ರೆ ತೊಳೆದುಬಿಡಬೇಕೆಂದುಕೊಳ್ಳುವಷ್ಟರಲ್ಲಿ ಅತ್ತೆ ಬಚ್ಚಲಿಗೆ ನುಗ್ಗಿ ರಾದ್ಧಾಂತವೇ ಆಯಿತು. ಗಂಡನಿಗೂ ಕೊಡದೆ ಚಹ ಕುಡಿಯುವ ಹೆಂಡತಿಯ ಪಾತಿವ್ರತ್ಯವನ್ನೇ ಪ್ರಶ್ನಿಸುವಷ್ಟರವರೆಗೆ ಹೋದಾಗ ಕೆಳಗಿಳಿದು ಬಂದ ಇವರು "ಅವರೆಲ್ಲ ಮನುಷ್ಯರೊಳಗೇ ಬರುವದಿಲ್ಲ!" ಎಂಬ ಒಂದೇ ಮಾತಿನಲ್ಲಿ ತಮ್ಮ ಖಂಡಿತ ಅಭಿಪ್ರಾಯ ತಿಳಿಸಿ ಹೇಳಿ ಮುಖ ತೊಳೆದು ಅಟ್ಟ ಹತ್ತಿ ಹೋಗಿಬಿಟ್ಟರು. ನನ್ನ ಅಪರಾಧದ ನಿಜವಾದ ಅರಿವು ನನಗಾಗದೇ ಅಥವಾ ಅವರು ಆರೋಪಿಸಿದ್ದಷ್ಟು ನಾನು ಅಮಾನುಷಳಲ್ಲವೆಂಬ ಭಾವನೆಯಿಂದ ಕ್ಷಮಾಪಣೆಯ ಗೋಜಿಗೆ ಹೋಗದೇ ನನ್ನಷ್ಟಕೆ ನಾನಿದ್ದು ಬಿಟ್ಟೆ. ಆಗಾಗ ಈ ಗೂರಲು ಹಿಡಿದು ಕೆಮ್ಮಿಕೊಳ್ಳುವ ಮಾವನವರೊಬ್ಬರನ್ನು ಸಾಕ್ಷಿಯಾಗಿ ತೆಗೆದುಕೊಳ್ಳುವಂತಾದರೂ ಅವರೂ ಏನು ಮಾತಾಡದೆ ದಮ್ಮಿನ ವೇದನೆಯಿಂದ ಕಣ್ಣು ಹೊರಬೀಳುವಂತೆ ನೋಡುವದನ್ನು ಬಿಟ್ಟು ಇನ್ನೇನೂ ಆಡುತ್ತಲೂ ಇರಲಿಲ್ಲ. ಮಾತಾಡುತ್ತಿರಲೂ ಇಲ್ಲ. ಮನೆಯ ಇಡೀ ವಾತಾವರಣ ದಮ್ಮು ಹಿಡಿದಂತೆ ಇತ್ತು. ಉಸಿರುಕಟ್ಟಿದಂತಾಗಿ ಅಗೊಮ್ಮೆ ಈಗೊಮ್ಮೆ ಅಚೆ ಈಚೆ ತಿರುಗಾಡುತ್ತಿದೆ. ಹಿತ್ತಲ ಬಾಗಿಲಲ್ಲಿ ನಿಂತು ಹಿಂದೆ ಹೂದೋಟ ನೋಡಿದಾಗಲೂ ಮನಸು ಹರ್ಷಗೊಳ್ಳಲಿಲ್ಲ. ಯಾರೋ ಬಲಾತ್ಕಾರವಾಗಿ ಪಕಳೆಯನ್ನು ಸೆಳೆದು ಅರಳಿಸಿಟ್ಟ ಹಾಗೆ ಹೂಗಳು ನಿಂತಿದ್ದರೆ ಗತಿ ಗೋತ್ರವಿಲ್ಲದ ಅನಾಥರಂತೆ ಪಕ್ಷಿಗಳು ಕಿರುಚಿಕೊಳ್ಳುತ್ತ ಎಲೆಲ್ಲೊ ಹಾರಾಡುತ್ತ ಕೂಡುತ್ತ ಮತ್ತೆ ಎದ್ದು ಹಾರಿಹೋಗುತ್ತಿದ್ದವು. ಸಂಜೆಯ ಮಬ್ಬು ಮರಮರದ ಸಂದಿಗಳಲ್ಲಿ ಇಳಿದು ತುಂಬುತ್ತಿದ್ದಂತೆ ಮತ್ತೊಂದು ದಿನ ಮುಗಿಯಿತೆಂಬ ಸಮಾಧಾನ ಬರುವಂತಾದಾಗ ಅಮ್ಮ ಮನೆಯಲ್ಲಿ ಎಷ್ಟು ನರಳುತ್ತಿದ್ದಾಳೋ ಹೇಗೆ ಹೋಗುವದು ಎಂಬ ನಿರರ್ಥಕ ಚಿಂತೆ ಕಾಡತೊಡಗಿತ್ತು. ಅನಿರುದ್ಧನಿಗಾದರೂ ಒಂದು ಪತ್ರ ಬರೆದು ಅಮ್ಮನ ಸಮಾಚಾರ ತಿಳಿದುಕೊಳ್ಳೋಣವೆಂದೆನಿಸಿತಾದರೂ ಆತ ಉತ್ತರಿಸುವ ಸ್ಥಿತಿಯಲ್ಲಿರಬಹುದೇ ಎಂಬ ಸಂಶಯ ಬಂದಿತು. ಕವಿತಾ: ನಿನ್ನ ಬಿಟ್ಟು ನನಗೆ ಬದುಕಿಲ್ಲ, ನೀನೆಂದೂ ನನ್ನೊಂದಿಗಿರುವಿ ತಾನೇ!" ಎಂದು ಕನಸವರಿ ಕಣ್ಣು ತುಂಬಿಕೊಳ್ಳುತ್ತಿರುವಂತೆ ನುಡಿದ. ಆತನ ಗತಿಯೇನಾಯಿತೋ ತಿಳಿಯದು. ಆ ಪತ್ರದಲ್ಲಾದರೂ ಏನು ಏನು–ಯಾರು ಬರೆದಿರಬಹುದು ಎಂಬುದನ್ನು ತಿಳಿದುಕೊಳ್ಳುವ ಮನಸ್ಸಾಗಿ ಅಟ್ಟ ಹತ್ತಿ ಪತ್ರ ಹುಡುಕಿ ಒಡೆದರೆ ನಾವೆಂದಿಗೂ ನೋಡದ ಅಕ್ಷರಗಳೆಂದು ಪತ್ತೆಯಾಗಿ ಮುಂದುವರಿದರೆ ನನ್ನ–ಅನಿರುದ್ಧನ ಕಥೆ–ತನ್ನ ಗಂಡ ಷಂಡನೇ ಇರಬೇಕೆಂಬ ಆರೋಪ ಇಲ್ಲವಾದರೆ ಅವಳನ್ನು ಮನೆಯಲ್ಲಿಟ್ಟುಕೊಂಡೆ ಹೇಗೆ– ಎಂಬ ನೂರೆಂಟು ಕುತೂಹಲಕಾರ ಪ್ರಶ್ನೆಗಳು. ನನ್ನ ಕೈ ನಡುಗತ್ತೆಯೆಂದು ನಾನು ಭಾವಿಸಿದ್ದರೆ ಸುಳ್ಳಾಗಿ ಇಡೀ ಮೈ ಕಲ್ಲಾಗಿ ಅಲುಗಾಡದೆ ನಿಂತು, ವಿಚಾರ ಮಾಡುವ ಯಾವ ಶಕ್ತಿಯೂ, ಸ್ಪಂದಿಸುವ ಯಾವ ನೋವು ಇಲ್ಲದಂತಾಗಿ ಬಿಟ್ಟೆ. ಏನೂ ಮಾಡಲಾಗದ ಏನೋ ಅನಿಸಿಕೊಳ್ಳಲಾಗದ ನಿಶ್ಶಬ್ದ ಸ್ಥಿತಿಯಲ್ಲಿ ನಿಂತಾಗ ಒಂದು ತರಹದ ಅಪರಿಚಿತ, ಒರಟುತನ, ಧೈರ್ಯ ಎಲ್ಲ ಜಮಾಯಿಸಿದಂತಾಗಿ ಪತ್ರವನ್ನು ಹರಿದು ಚೂರುಮಾಡಿ ಮೂಲೆಗೆ ಬೀಸಾಕಿ ಬಿಟ್ಟೆ. ಉಪಯೋಗವಿಲ್ಲದ ಕೇವಲ ಘಟನಾವಳಿಗಳು ಒಂದರ ಹಿಂದೆ ಒಂದರಂತೆ ಕಣ್ಣೆದುರು ಸರಿದು ಹೋದವಾದರೂ ನನ್ನನು ತಟ್ಟದೇ ಖರ್ಚಾಗಿದ್ದವು. ಹೇಳಿ, ರಾತ್ರಿಯಾದರೂ ಇವರು ಮನೆಗೆ ಬರಲಿಲ್ಲ. ಕತ್ತಲಲ್ಲಿಯೇ ಕಣ್ತೆರೆದು ಮೇಲೆ ನೋಡುತ್ತಿದ್ದೆ. ಹಲ್ಲಿ ಹತ್ತೆಂಟು ಹರಿದಾಡುತ್ತಿದ್ದವಾದರೂ ಏನು ಮಾಡುತ್ತಿವೆ ಎನ್ನುವದೇ ತಿಳಿಯುತ್ತಿರಲಿಲ್ಲ. ಕೆಲಸ ಮಾಡದೆ ಬಿದ್ದ ನನ್ನ ತಲೆಗೆ ಸರಿಯೆಂಬಂತೆ ಆಗೊಮ್ಮೆ ಈಗೊಮ್ಮೆ ಲೊಚಗುಡುತ್ತಿದ್ದವಾದರೂ ನನಗೂ ಅವುಗಳಿಗೂ ಮತ್ತೆ ಇವರಿಗೂ ಏನೂ ಸಂಬಂಧವಿದ್ದಂತೆ ತೋರುತ್ತಿರಲಿಲ್ಲ. ಎಷ್ಟೋ ಹೊತ್ತಿನ ಮೇಲೆ ನಾನೇಕೆ ಇಲ್ಲಿ ಬಿದ್ದುಕೊಂಡಿರುವದು ಎಂಬುದೇ ತಿಳಿಯದಂತಾಗಿ ನೇರವಾಗಿ ಅಮ್ಮನಿದ್ದಲ್ಲಿಗೆ ಹೋಗಿ ಬಿಡಬಹುದಲ್ಲ ಎಂದುಕೊಳ್ಳುವಂತಾಗುತ್ತಿತ್ತಾದರೂ ಆಗ ಮಾತ್ರ ಅತ್ತೆ ಗೊರಕೆ ಹೊಡೆಯುತ್ತಿದುದೂ ಮಾವ ಕೆಮ್ಮಿ ಕಫ ತುಪ್ಪುತ್ತಿದ್ದುದೂ ಕೇಳಿಸಿ, ಇವರು ಇನ್ನೂ ಏಕೆ ಬರಲಿಲ್ಲವೆಂಬ ನೆಪಮಾತ್ರದ ನೆನಪೂ ಬಂದು ನಾನಿಲ್ಲಿ ಇದ್ದುದಂತು ಖರೇ ಎನಿಸಿ ಸುಮ್ಮನಾಗಿ ಬಿಡುತ್ತಿದ್ದೆ. ಬೂಟು ಸಪ್ಪಳ ಕೇಳಿಸಿತಾದರೂ ಇವರೇ ಇರಬೇಕೆಂದು ಅನಿಸಿತಾದರೂ ಹಾಸಿಗೆಯಿಂದೇಳದೇ ಮುಖ ತಿರುಗಿಸದೇ ಬಿದ್ದಾಗ 'ಗವ್' ಎಂದು ಬೆವರಿನ ವಾಸನೆ ಬಡಿದು ಕಂಗಾಲಾಗಿ ಎದ್ದು ಲೈಟು ಹಾಕಿದರೆ ಇವರ ಕಣ್ಣು ಕೆಂಪಗೆ ಉರಿಯುತ್ತಿತ್ತು. ಹತ್ತಿರ ಸಿಕಿದರೆ ಮೇಲೆ ಬೀಳುವಂತೆ ಆಯಾಸದಲ್ಲಿ ತೇಲಾಡುವದನ್ನು ಕಂಡು ಹಾಸಿಗೆಯ ಮೇಲೆ ಕೂಡ್ರಿಸ ಹೋದರೆ "ನೀವೆಲ್ಲ ಸೂಳೆಯರು" ಎಂದು ಉಗುಳಿಬಿಟ್ಟರು. ಎಲ್ಲೆಲ್ಲೋ ನೂರಾರುಬಾರಿ ಕೇಳಿದ ಶಬ್ದ ಅದೆಂದೆನಿಸಿ ಅಷ್ಟೇನೂ ದುಃಖಿತಳಾಗದೇ "ಊಟಕ್ಕೆ ಬಡಿಸಲೇ?" ಎಂದು ಕೇಳಿದರೆ "ಇನ್ನು ಮೇಲೆ ನಿನ್ನ ಕೈಯ ಅನ್ನ ಮುಟ್ಟುವದಿಲ್ಲ!" ಎಂಬ ಶಪಥ ಕಿವಿಗೆ ಬಿದ್ದಿತು. ಆ ಪತ್ರ ಓದಿದವರಿಗೆ ಇಷ್ಟು ಸಿಟ್ಟುಬಂದರೆ ಹೆಚ್ಚಲ್ಲವೆಂದು ಕಂಡಿತಾದರೂ ಪ್ರೀತಿಯಿಂದ ವಿಷಯ ಕೇಳಬಹುದಿತ್ತಲ್ಲ ಎಂದು ಕಂಡಿತು. ಹೇಗೆ ಕೇಳಿದರೂ ವಿಷಯ ಸ್ವಲ್ಪ ಹೆಚ್ಚು ಕಡಿಮೆ ಒಂದೆಯೆಂಬ ಮಾರನೆಯ ವಿಚಾರ ಬಂದಿತಾದರೂ ಭಾವನೆಯ ಬದುಕು ಕಥೆಯಾಗುವದೆಂದರೇನು ಎಂದು ತಿಳಿಯದೆ ಮಂದೇನೂ ಮಾತನಾಡದೆ ಸುಮ್ಮನಾಗಿ ಬಿಟ್ಟೆ. ಮಾತುಕತೆಯಿಲ್ಲದೆ ಒಂದೆರಡು ವಾರ ಕಳೆದಿರಬಹುದು. ಸುಜಿ ಎಂದು ಟೆಲಿಗ್ರಾಂ ಒಂದು ಬಂದಾಗ ಇವರಿಲ್ಲದ್ದರಿಂದ ನಾನೇ ಸಹಿಹಾಕಿ ತೆಗೆದುಕೊಂಡು ಒಡೆದು ನೋಡಿದರೆ ಅಮ್ಮನಿಗೆ…ಎಂಬ ವಿಷಯ ಕೇಳುತ್ತಲೇ ಕೈ ನಡುಗಿ ತಲೆ ತಿರುಗಿ ಕುಸಿದುಬಿದೆ. ಇವರು ಬರುವದು ಎಂದಿನಂತೆ ಮಧ್ಯರಾತ್ರಿಯಾಯಿತಾದರೂ ಕಾದು ಕುಳಿತವಳು ಇವರನ್ನು ಕಂಡು "ಅಮ್ಮ ಕಾಯಿಲೆ ಬಿದ್ದಿದ್ದಾಳಂತೆ ಏಳಿ ಹೋಗುವಾ ಕಾರಿನಲ್ಲಿ" ಎಂದೆ "ನಿನ್ನ ಅಮ್ಮ ಸತ್ತರೆ ನನಗೇನೇ, ನೀನು ಸತ್ತರೂ ಅಷ್ಟೇ" ಎಂದು ಎದುರುಬೀಳುವಂತೆ ನುಡಿದು ಯಥಾಪ್ರಕಾರ ನಿದ್ರೆ ಹೊಡೆದರು. ಬೆಳಗಿನವರೆಗೂ ಖುರ್ಚಿಯಲ್ಲಿ ಕುಳಿತ ನನಗೆ ಕತ್ತಲೆಯಲ್ಲಿ ಮಾನವ ಸಂಬಂಧಗಳನ್ನೆಲ್ಲ ಕುರಿತು ಯೋಚಿಸಿ, ದುಃಖಿಸಿ, ಕಣ್ಣೀರು ಹರಿಸಿ, ಮತ್ತೆ ಒರೆಸಿಕೊಂಡು ಮತ್ತೆ ಸಮಾಧಾನ ಮಾಡಿಕೊಂಡು ಎದುರು ಮಲಗಿಕೊಂಡ ಇವರನ್ನು ಸಿಟ್ಟಿನಿಂದ, ಮತ್ತೆ ಸಮಾಧಾನದಿಂದ ಮತ್ತೆ 'ಪಾಪ' ಎನುವಂತೆಲ್ಲ ನೋಡುತ್ತ ಬೆಳಗು ಹರಿದಿದೆ. ಅಮ್ಮ ಇನ್ನು ಬದುಕಿರಲಿಕ್ಕಿಲ್ಲವೆಂಬ ವಿಚಾರ ಹುರುಕಳಿಸಿದಂತೆಲ್ಲ ಅಪ್ಪ ಪಾಪ ತಲೆಗೆ ಕೈ ಹಚ್ಚಿಕೊಂಡು ಕುಳಿತ ಚಿತ್ರ ಕಣ್ಣಿಗೆ ಕಟ್ಟಿದಂತಾಗಿ ತಡೆಯಲಾರದೆ

ಅತು ಬಿಡುತ್ತಿದೆ. ಎಂಟೂ ಗಂಟೆಯ ಹೊತ್ತಿಗೆ ಕಾರೊಂದು ಬಂದು ಮನೆಯ ಎದುರು ನಿಂತಾಗ ಆಚೆ ಮನೆಯ ವೆಂಕಟು ಕಾರಿನಿಂದಿಳಿದದ್ದನ್ನು ಕಂಡು ಗಡ ಬಡಿಸಿ ಓಡಿ ಹೋಗಿ ಏನು ಯಾಕೆ 'ಹತ್ತು, ಹತ್ತು' ಎಂದ ಮಾತ್ರ. ಒಳಗೆ ಬಂದು ಹೇಳಿದವಳಿಗೆ "ನೀ ಬೇಕಾದ್ದು ಮಾಡಿಕೋ. ನಾ ಬರುವದಿಲ್ಲ!" ಎಂದದ್ದೂ ನಿಜಕ್ಕೂ ನನಗೆ ಸಾಕಾಯ್ತು. ಹಾಗೆ ಕಾರು ಹತ್ತಿ ಮನೆಗೆ ಬಂದರೆ ಅಷ್ಟರಲ್ಲಿ ಅಮ್ಮನ ಹೆಣವನ್ನು ಶಿದ್ದಿಗೆಗೆ ಕಟ್ಟಿದರು.

ಮತ್ತೊಮ್ಮೆ ನನ್ನ ಮದುವೆಗೆ ಬಂದ ಬಹಳಷ್ಟು ಸಂಬಂಧಿಕರು ಅಮ್ಮನ ಹದಿನಾಲ್ಕನೆಯ ದಿನಕ್ಕೂ ಬಂದಿದ್ದರು. ಹುಟ್ಟು ಸಾವುಗಳ ಮಧ್ಯದ ಬದುಕು ಅಷ್ಟೇನು ಗಮನಾರ್ಹವಲ್ಲವೆಂಬ ಸಾಮಾನ್ಯ ಧೋರಣೆಯ ಕ್ರೌರ್ಯ ಅವರ ಪ್ರತಿಯೊಂದು ನಡೆ ಮಾತುಗಳಲಿ ಸ್ಪಷ್ಟವಾಗಿ ತೋರಿ ಎದೆ ಕಲ್ಲಾಗುತ್ತ ನಡೆದ್ದಿತ್ತು.

ಮನೆಯಿಂದ ಯಾವ ಸುದ್ದಿಯೂ ಬರಲಿಲ್ಲ. ಬನ್ನಿ ಎಂದರೆ ಉತ್ತರವಿಲ್ಲ. 'ಬರಲೇ' ಎಂದರೆ ಉತ್ತರವಿಲ್ಲ. ತಂದೆಯವರಿಗೆ ಅಮ್ಮನ ಸಾವಿನ ಕೊರತೆ ಮರೆಯಾಗುವಷ್ಟರಲ್ಲಿ ಮಗಳ ಗಂಡನ ಮನೆಯ ಚಿಂತೆ ದೊಡ್ಡದಾಯಿತು. ನಾನೇ ಹೋದೆ. ಅಲ್ಲಿ ಯಾರ್ಯಾರೋ ಸತ್ತ ಭಣ–ಭಣ. ಮಾವ ಕಷ್ಟಪಟ್ಟು ಉಸಿರಾಡಿಸುತ್ತಿದ್ದರು. ಅಸ್ತಮ ಬದುಕನ್ನು ಬೆಳಸುತ್ತದೆ. ಸಾವಿನ ಭಯವಿಲ್ಲ. ಇವರು ಅತ್ತೆ, ನನ್ನ ಅಸ್ತಿತ್ವವನ್ನು ಗುರುತಿಸಲ ಸಿದ್ಧರಿದ್ದಂತಿದ್ದಿಲ್ಲ. ಅಮ್ಮನ ಮಾಸಿಕಕ್ಕೆ ಪತ್ರಬಂದಿತು. ಹೋದೆ. ಮತ್ತೆ ತಿರುಗಿ ಬಂದೆ. ನನಗೆ ತಿಂದು ಬಿದ್ದಿರಲು ಅಲ್ಲೇನೂ ಅಡ್ಡಿಯಿದ್ದುತಿರಲಿಲ್ಲ. ಯಾರ್ಯಾರೋ ಊರಿನ ಸುಧಾರಿತ 'ಇನ್ನರ್‌ವ್ಹೀಲ್' ಸದಸ್ಯರೂ ಅಧ್ಯಕ್ಷರೂ ಕಾರ್ಯದರ್ಶಿಗಳೋ ಬರುತ್ತಿದ್ದರು. ನಮ್ಮ ಮಲಗುವ ಕೋಣೆಯಲ್ಲಿ ಅವರೆಲ್ಲ ಕುಳಿತು ಪಟ್ಟಾಂಗ–ಮತ್ತೆ ಅಪ್ಪನ ಪತ್ರ. ಹೋಗಿ ಮತ್ತೆ ಮರಳಿ ಬಂದೆ. ಊಟ, ಸ್ನಾನ, ಬೇಗು, ರಾತ್ರಿ, ನಿದ್ದೆ, ಸ್ವಪ್ನ, ಹಾಸಿಗೆ, ಕೋಣೆ, ಮಾವನ ಕೆಮ್ಮು, ಕಫ, ಕೆಲಸದ ಹೆಂಗಸೂ, ಮೌನ, ಅತ್ತೆಗೆ ನೆರೆಮನೆಯ ಮುದುಕಿಯ ಸಹವಾಸ, ಇವರು 'ಇನ್ನರ್‌ವ್ಹೀಲ್' ಕಾರ್ಯದರ್ಶಿ, ಪಟ್ಟಾಂಗ, ಸಿನೇಮಾ, ಒಂದೇ ಕಾರು, ತಿರುಗಾಟ, ನಗೆ, ಥ್ಯಾಂಕ್ಸ್, ವೇಟ್, ಸಾರಿ, ಡಾರ್ಲಿಂಗು ಸಹ–ಉಪ್ಪು, ತಂಪು, ನಾನ ಮೆಜ್ಜು ಕಾಟು, ಟೇಬಲ್, ಬೆಡ್‌ಶೀಟ್, ಛಾದರ್, ಡೈನಿಂಗ್ ಟೇಬಲ್. ತಾಟು, ಲೋಟ, ಕಪ್ಪು ಕೆಳಗೆ. ಅಟ್ಟ ಇಷ್ಟೇ ಕೊನೆಗೊಮ್ಮೆ 'ನೀವು ಹೀಗೆ ಮಾಡಿದರೆ ನಾನೇನು ಮಾಡಬೇಕು'–ಎಂದು ಗಟ್ಟಿಯಾಗಿ ಕೇಳಿದೆ, ನಾನಿರುವದು ಅಷ್ಟು ದಿನವೂ ಅವರಿಗೆ ಗೊತ್ತಿಲ್ಲವೆಂಬವರಂತೆ ಮುಖನೋಡಿ ಹೊರ ಹೊರಡಲು ಎದ್ದರು. "ನಾನೇನು ಮಾಡಬೇಕು ಈ ಮನೆಯಲ್ಲಿ" ಎಂಬ ಪ್ರಶ್ನೆಗೆ ಬಾಗಲಿಗೆ ಬಂದ ಆಲ್ಸೇಶಿಯನ್ ನಾಯಿಯ ಕಡೆಗೆ ಬೆರಳು ತೋರಿಸಿದರು. "ಅಪ್ಪ ಬಹಳ ಹಚ್ಚಿಕೊಂಡಿದ್ದಾರೆ. ಒಮ್ಮೆ ಹೋಗಿ ಬರುವಾ–ಅಥವಾ ಹೋಗಿ ಬನ್ನಿ" ಎಂದು ಬೇಡುವ ಸ್ವರದಲ್ಲಿ ಮಾತನಾಡಿದಾಗ "ಯಾರಾರೊಂದಿಗೋ ನನಗೆ ಸರಿ ಬರುವದಿಲ್ಲ!" "ಅವರು ಮಾವನವರಲ್ಲವೇ?" ಎಂದುದಕ್ಕೆ "ಅವನು ನಿನ್ನಪ್ಪನೋ–ಮೊದಲು ಪರೀಕ್ಷಿಸಿಕೋ!" ಎಂದರು. ಕೆಳಗೆ ಮಾವ ಕೆಮ್ಮಿ ಕಫ ಉಗಳಿದರು. ಎಷ್ಟೋ ದಿನಗಳಿಂದ ಅವರು ಅಲ್ಲಿ ಸಾವಿನ ಬರವನ್ನು ಕಾದುಕೊಂಡಿದ್ದಾರೊ ಎಂದೆನಿಸುವಂತಿತ್ತು. ಅತ್ತೆ ಕೆಲಸ ಮುಗಿದರೆ ಆಚೆಯ ಮನೆಗೆ ಹೋಗುತ್ತಿದ್ದಳು. ತಪ್ಪಿದರೆ ಕೀರ್ತನೆಗೆ–ಮಾವ ತಮ್ಮೆಲ್ಲ ಮಾತಿನ ಶಕ್ತಿಯನ್ನು ಕಳೆದುಕೊಂಡು ಘಟೋತ್ಕಚರಂತೆ... "ಏನು ಈ ಮನೆಯಲ್ಲಿ ನಾನು ಇರಬೇಕೋ ಬೇಡವೊ!" ಎಂದು ಕೂಗಿಕೊಂಡಾಗ "ಕತ್ತೆ, ಬಾಯ್ಮುಚ್ಚು! ಬೂಟು ಬಾಯಿ ಸೀಳು ಬಿಡುವಂತೆ ಒದ್ದು ಕಿರುಚಿದರು." "ಆ ಹೆಂಗಸಿನೊಂದಿಗೆ ನಿಮಗೇನು ಅಷ್ಟು ಕೆಲ್ಸ!" ಎಂದು ನಾನು ಕೈ ಎತ್ತಿ, ಒದರಿಕೊಂಡರೆ ಕೆನ್ನೆಗೆರಡು ಬಿಟ್ಟು "ಅನಿರುದ್ಧನೊಂದಿಗೆ ಎಷ್ಟು ಸಾರಿ ಮಲಗಿ ಬಂದೆ?" ಎಂದು ನಕು ಕಣ್ಣು ಕಿಸೆದರು. "ಮಲಗಲು ಇಲ್ಲಿ ಬಂದಿದ್ದೇನೆ. ಆ ಕೆಲ್ಸ ಇಲ್ಲ!" ಎಂದು ಅವಡುಗಚ್ಚಿ, ಅಳು ತಡೆದರೆ "ಆತ ದೇವರು, ಅವನನ್ನು ಏನೆಂದೂ ಬಯ್ಯಬೇಡಿ ಆವನ ಪರಿಚಯ ನಿಮಗಿಲ್ಲ!" ಎಂದು ಆದಲೂ ಬರಲಾಗದೆ ಅತ್ತು ಬಿಟ್ಟೆ. "ನಿನ್ನ ಅಪ್ಪ ನಿನ್ನನ್ನು ಮಾರಿ ಎಷ್ಟು ಗಳಿಸಿದ?" ಎಂಬ ಅವರ ವ್ಯಾಪಾರಿ ಪ್ರಶ್ನೆ ಅರ್ಥವಾಗದೆ ಕಳವಳಪಟ್ಟುಕೊಂಡಾಗ "ಇನ್ನೂ ಎಷ್ಟು ಜನರೊಂದಿಗೆ ಮಜ ಹೊಡೆದಿದ್ದಿ?" ಎಂದು ಸ್ಪಷ್ಟೀಕರಣ ನೀಡಿದಾಗ "ಹಾಗೆ ನಿಜವಾಗಿಯೂ ನಿಮಗೆ ಅನಿಸಿತೇ?" ಎಂದು ಯಾಚಕ ಪ್ರಶ್ನೆ ಕೇಳಿದಾಗ "ನನನ್ನು ಕೆಣಕಬೇಡ, ಕೇಳಬೇಡ, ನೀನು ನಿನ್ನ ಮನಸ್ಸಿಗೆ ಕಂಡಂತೆ ಮಾಡಬಹುದು!" ಎಂದು ಸಮಾಧಾನದಲ್ಲಿ ಉತ್ತರಿಸಿದ್ದನು ನಂಬಲಾಗದೇ "ನಾನು ಅಂಥ ಪಾಪ ಮಾಡಲಿಲ್ಲ. ಅನಿರುದ್ಧನನು ನಾನು ಪ್ರೀತಿಸಿದ್ದೆ; ಆತ ನನ್ನನ್ನು ಪ್ರೀತಿಸುತ್ತಿದ್ದ. ಮದುವೆಯಾಗಬೇಕೆಂದು ಬಯಸುತ್ತಿದ್ದೆವು. ಆದರೆ ಆಗಲಿಲ್ಲ. ಹಿರಿಯರು ಹೇಳಿದರು, ಗುರುಗಳು ಆಶೀರ್ವದಿಸಿದರು. ದೇವರು ಪ್ರಸಾದ ನೀಡಿದರು ಜಾತಕ ಕೂಡಿ ಬಂತು. ನಿಮ್ಮನ್ನು ಮದುವೆಯಾದೆ ಆತ ಬದುಕಿದ್ದಾನೋ ಇಲ್ಲವೋ ಎಂಬುದನ್ನು ನಾನು ಈ ಮನೆಗೆ ಬಂದ ಮೇಲೆ ಯೋಚಿಸಲಿಲ್ಲ! ಇದಿಷ್ಟೇ ಇದಿಷ್ಟೇ ಸತ್ಯ. ನನ್ನದೊಂದೇ ಹೊಸ ಕಥೆಯೆಂದು ನಾನು ಭಾವಿಸುವದಿಲ್ಲ. ಸಾವಿರದಲ್ಲೊಂದು ಈಗ ತೀರಾ ಹಳೆಯದು, ಈ ವಿಷಯ ತಿಳಿದರೂ ನಾವು ಮಾಡುವದೇನಿದೆ?" ಎಂದು ಕಣ್ಣೀರು, ಮಾತು ಒಟ್ಟಿಗೆ ಉಗುಳುತ್ತಿರಾಗ–"ಸಾಕು, ನನಗೆ ಕೇಳುವ ಶಕ್ತಿಯೂ ಇಲ್ಲ. ನನ್ನನ್ನು ಕೆಣಕಬೇಡ, ಪ್ರೀತಿಯೊಂದು ಕಡೆ; ಮದುವೆ ಮತ್ತೊಂದು ಕಡೆ. ನಾನೇನೂ ತಪು ಮಾಡಲಿಲ್ಲ! ಸಾಕು. ಮತ್ತೇ ಮಾತನಾಡಬೇಡ. ನಿನಗೆ ಕೊಡುವ ಸ್ಪಷ್ಟೀಕರಣ ನನಗೇನೂ ಇಲ್ಲ. ನಿನ್ನ ಬದುಕಿನ ರಿಪೇರಿ ನನಗೆ ಸಾಧ್ಯವೂ ಇಲ್ಲ. ನನ ಕಣ್ಣೆದುರು ನೀನು ಬರಬೇಡ. ನಿನ್ನನ್ನು ಕಂಡರೆ ನನಗೆ ವಾಂತಿ ಬರುತ್ತದೆ. ನಿನ್ನನ್ನು ಕಂಡರೆ ಒಮ್ಮೆ ಕೊಚ್ಚಿಕೊಂದು ಬಿಡಲೇ ಎಂದು ಅನಿಸಿಬಿಡುತ್ತದೆ. ಇಷ್ಟು ಸತ್ಯ. ಇಷ್ಟೆ ಪ್ರತಿಕ್ರಿಯೆ!" ಇವರು ಸಾಧುಗಳಂತೆ ಹೇಳಿದರು. ಮಂಚಕ್ಕೆ ಬಿದ್ದು ಕಣ್ಣು ಮುಚ್ಚಿದರು. ಹಣೆಯ ಮೇಲೆ ಕೈಯಿಡಲು ಹೋದರೆ ಕೈ ಎತ್ತಿ ಒಗೆದು ಮಂಚದಿಂದೆದ್ದು ಹೊರಟು ಹೋದರು. ಅಷ್ಟೊತ್ತು ಬರುತ್ತಿದ್ದ ಕಣ್ಣೀರು ಬತ್ತಿತು. ಬದುಕು ಮತ್ತೊಮ್ಮೆ ಹೆಪ್ಪುಗಟ್ಟಿತು. ಶಬ್ದಗಳಾಚೆ, ಘಟನೆಗಳಾಚೆ, ಇರುವ ಸತ್ಯವನ್ನು ತಿಳಿಪಡಿಸುವದು ನನ್ನಂತೆ ಇವರಿಗೂ ಕಷ್ಟವಾಗಿರಬಹುದು. ಅನಿರುದ್ಧನ ಪ್ರೀತಿಯ ಮಾತುಗಳಲ್ಲಿ ಇಲ್ಲದನೆಲ್ಲ ತಿಳಿದುಕೊಂಡ ನನಗೆ ಶಬಗಳು ಅರ್ಥಹೀನವಾಗಿರ... ನಾನು ಆಡಿದ ಮಾತು ಹೆಚ್ಚೇ ಆಗಿರಬಹುದು. ನನ್ನ ದನಿ ಮೀರಿ ದೊಡ್ಡದೇ ಆಗಿರಬೇಕು. ಆದರೆ ನಾನು ಹೇಳಬಾರದ್ದನು ಹೇಳಿಲ್ಲ. ಇಂದು ಹೇಳಲು ಎಂದೂ ಆಗಲಾರದೆಂದೂ ಅನಿಸಿಬಿಟ್ಟಿತು. ಮಾವ ದಮ್ಮು ಒಳಗೆ ಎಳೆದುಕೊಳ್ಳುವಂತೆ ಬದುಕನ್ನು ನಿಶ್ವಾಸವಾಗಿ ಬದುಕುತ್ತಿದ್ದಂತೆ ನೆಲ ಕಟಿ ಉಸಿರೆಳೆಯುತ್ತಿದ್ದರು. ಆ ಮನೆಯ ಒಂದೇ ಒಂದು ಸಪ್ಪಳ ಅವರು. ಉಳಿದವರಾರೂ ನನಗೆ ತಿಳಿಯುತ್ತಿರಲಿಲ್ಲ. "ಏಕೆ ತಮ್ಮಾ, ಆಕೆಯನ್ನೇಕೆ ಹಾಗೆ ನಡೆಯಿಸಿಕೊಳ್ಳುತ್ತಿ!" ಎಂದು ಮಾವ ಕೇಳಿದರೆಂದು ತೋರುತ್ತದೆ. "ನಿನ್ನ ಕೆಲ್ಸ ನೋಡಿಕೊಂಡು ಬಿದ್ದಿರು!" ಎಂಬ ಮಗನ ಆಶೀರ್ವಚನ ಸಿಕ್ಕ ಮೇಲೆ ಅವರು ಹೆಚ್ಚು ಹೆಚ್ಚಾಗಿ ಉಸಿರಾಟ ಪ್ರಾರಂಭಿಸಿದರು. ಕೆಲವೊಮ್ಮೆ ಎದ್ದು ಹೊರಗೆ ಹೋಗಲು ಪ್ರಯತ್ನಿಸಿ ಮಾರೆಗೊಂದು ಬಾರಿ ಮೊಣಕಾಲ ಮೇಲೆ ಕೈ ಊರಿ ಬಗ್ಗಿ ಕೆಮ್ಮಿ ಅಲ್ಲೇ ಕುಕ್ಕರಿಸಿ ಮತ್ತೆ ತಮ್ಮ ಪೂರ್ವ ಸ್ಥಳಕ್ಕೆ ಬಂದು ಬಿಡುತ್ತಿದ್ದರು. ಮದುವೆಯ ಹಣೆಬರಹವನ್ನು ಕುರಿತು ಕೆಲವೊಮ್ಮೆ ಚಿಂತಿಸಿದ್ದೆ. ತಾಯಿ–ತಂದೆಯ ಸದ್ಭಾವನೆಗಳನ್ನು ಪ್ರಶ್ನಿಸಿದ್ದೆ. ಅಥವಾ ನನ್ನಂತವಳು ನಾನೊಬ್ಬಳೇ ಎಂದು ಯೋಚಿಸಿದ್ದೆ. ಹಾಗಿದ್ದರೆ ಆತ್ಮಹತೆ ಮಾಡಿಕೊಂಡರೇನಂತೆ ಎಂದು ವಿಚಾರ ಮಾಡಿದ್ದೆನಾದರೂ ಆ ನಿರ್ಧಾರ ಪೂರ್ಣಮಾಡಲು ಆಗುತ್ತಿರಲಿಲ್ಲ. ನನೊಬ್ಬಳೇ ಸಂಪೂರ್ಣ ದೋಷಿಯಾಗಿ ತೆಗೆದುಕೊಳ್ಳಲು ಮನಸ್ಸು ಸಿದ್ಧವಾಗುತ್ತಿರಲಿಲ್ಲವಷ್ಟೇ ಅಲ್ಲ ಎಲ್ಲರ ಕಥೆಯೂ ಸ್ವಲ್ಪ ಹೆಚ್ಚುಕಡಿಮೆ ಇಷ್ಟೇ ಆದಾಗ ನನ ಪ್ರಶ್ನೆ ನನದೊಂದೇ ಅಲ್ಲವೆನು ವಷ್ಟು ವಿಚಾರ ಮಾಡಲು ಅನಿರುದ್ಧ ಕಲಿಸಿದ್ದೆ. ಮನಸ್ಸು ತುಂಬ ನಿರಾಶವಾದಾಗಲೂ ಬದುಕುವ ಆಶೆಯನ್ನು ಬಿಟ್ಟುಬಿಡುವಷ್ಟರ ಮಟ್ಟಿಗೆ ಹೋಗದಂತೆ ಹೃದಯದ ಒಂದಂಶ ತಡೆಯುತ್ತಿತ್ತು. "ನೀನಿಂಥವಳೆಂದು ಮೊದಲೇ ಯಾರಾದರೂ ಹೇಳಿದ್ದರೆ ಮದುವೆಯೇ ಆಗುತ್ತಿರಲಿಲ್ಲ"ವೆಂದು ಹೇಳಿದ್ದರು ಒಮ್ಮೆ, ಅವರ ಅಂಥ ಮಾತನ್ನು ಕೇಳಿದಾಗ ಈಗೇನು ಮಾಡುತ್ತೀರಿ ಎಂದು ಕೇಳುವಂತಾಗುತ್ತಿತ್ತು. ಬದುಕಿನ ಒಂದು ಭಾವವನ್ನು ಸಂಪೂರ್ಣ ಮರೆಯುವ ನಿರ್ಧಾರ ಮಾಡಿಕೊಂಡತಿತ್ತು. ಹೇಗಾದರೂ ಮಾಡಿ ಎಲ್ಲರೂ ನನ್ನ ಪೂರ್ವವನ್ನು ಮರೆತರಾಗುತ್ತಿತ್ತು ಎಂಬ ಅಂತರಂಗದ ಕಳಕಳಿಯ ಬೇಡಿಕೆಯೊಂದಿತ್ತು. ನಾನೇ ಮರೆತಾಗ ಉಳಿದವರೂ ಏಕೆ ಮರೆಯಬಾರದೆಂಬ ಸಿಟ್ಟೂ ಹಟಮಾರಿತನವೂ ಒಮ್ಮೊಮ್ಮೆ ಬರುತ್ತಿತ್ತು. ವೈವಾಹಿಕ ಜೀವನಕ್ಕೆ ಪೂರ್ವಾಪರಗಳಿರುವದಿಲ್ಲ. ಇರಕೂಡದು ಇರದು ಎಂಬ ಸಿದ್ಧಾಂತವೂ ರೂಪುಗೊಳ್ಳುತ್ತಿತ್ತು. ಯಾರ ಅಂತರಂಗವನ್ನೂ ಕೈಹಾಕಿ, ಕೆದಕಿ ಬದುಕುವದು ಇಂದು ಸಾಧ್ಯವಾಗಲಾರದೇನೋ ಎಂದುಕೊಂಡೆ ಹಲವಾರು ಬಾರಿ. ಕೋಣೆಯ ಮೂಲೆಮೂಲೆಗೂ ಜೇಡರ ಬಲಿ ನೇಯ್ದುಕೊಳ್ಳುತ್ತಿತ್ತು. ಕೆಲಸದವಳು ನೆಲಮಾತ್ರಗುಡಿಸಿ ಉದ್ದಿಹೋಗುತ್ತಿದ್ದಳೇ ವಿನಾ ಕಣ್ಣೆತ್ತಿ ಸುತ್ತಲೂ ನೋಡುತ್ತಲೇ ಇರಲಿಲ್ಲ. ಒಂದು ರೀತಿಯಿಂದ ವಾಸಿ, ಕಸಬರಿಗೆ ತೆಗೆದುಕೊಂಡು ಎಲ್ಲಾ ಝಾಡಿಸಿಬಿಡಲೇ ಎಂದುಕೊಂಡರೆ ನೋಡಲು ಅವಾದರೂ ಇದ್ದಾವಲ್ಲಾ–ಎಂಬ ಒಂದು ಸಮಾಧಾನವೂ ಬರುತ್ತಿತ್ತು. ಆಲ್ಸೇಶಿಯನ್ ನಾಯಿ ಎಷ್ಟು ಪುಷ್ಟವಾಗಿ ಬೆಳೆದುಕೊಂಡಿದೆಯಲ್ಲ– ಎಂಬುದನ್ನು ನೋಡಿದಾಗ ಅಸಹ್ಯವಾಗುತ್ತಿತ್ತು. ಮೌನದಲ್ಲಿ ಅದರ ಬದುಕು ಎಷ್ಟು ಸರಾಗವಾಗಿದೆಯಲ್ಲ– ಎಂದರೆ ದುಃಖವೂ ಸುಖವೂ ಒಟ್ಟಿಗೆ ಬರುತ್ತಿತ್ತು. ವರುಷ ಕಳೆದರೂ ಮನೆಯ ಸ್ಥಿತಿಯಲ್ಲಿ ಯಾವ ಬದಲಾವ

🪔 ದೀಪಾವಳಿಯು ಸರ್ವರಿಗೂ ಸುಖ-ಸಮೃದ್ಧಿ ನೀಡಲಿ!! 🪔

೧೦೦% ನೈಸರ್ಗಿಕ

ಹದಿನೆಂಟು
ಅಮೂಲ್ಯ ಗಿಡಮೂಲಿಕೆಗಳಿಂದ
ತಯಾರಿಸಲಾದ

ವಿಕ್ಕೊ
ವಜ್ರದಂತಿ

ಪ್ರಾಮುಖ್ಯ ಆಯುರ್ವೇದೀಯ ಟೂತ್ ಪೇಸ್ಟ್ ಮತ್ತು ದಂತಮಂಜನಗಳಾಗಿರುವ ವಿಕ್ಕೊ ವಜ್ರದಂತಿಯನ್ನು ತಯಾರಿಸಲು 18 ಬೇರೆಬೇರೆ ಅಮೂಲ್ಯ ಗಿಡಮೂಲಿಕೆಗಳನ್ನು ಉಪಯೋಗಿಸಲಾಗಿದೆ. ಪ್ರತ್ಯಪತ್ಯೇಕವಾಗಿ ಅವುಗಳಲ್ಲಿರುವ ಸತ್ವಗಳ ಅರಿವು ಇದಾಗಲೇ ಎಲ್ಲರಿಗೂ ಇದೆ. ಆದರೆ ಅವುಗಳನ್ನು ಒಂದು ನಿಶ್ಚಿತ ಪ್ರಮಾಣದಲ್ಲಿ ಮಿಶ್ರಿಸಿದಾಗ ಅತಿಸೂಕ್ಷ್ಮವಾಗಿ ಅವು ಹೆಚ್ಚು ಪರಿಣಾಮಕಾರಿಯಾಗಿವೆ. ಇಂದಿನ ಈ ಫಾರ್ಮ್ಯುಲವು ಹಲವಾರು ವರ್ಷಗಳ ಸಂಶೋಧನೆಯ ಫಲವಾಗಿದೆ.

ವಿಕ್ಕೊ ವಜ್ರದಂತಿಯಿಂದ ನಿಯಮಿತವಾಗಿ ಹಲ್ಲುಜ್ಜುವುದರಿಂದ ಹಲ್ಲಿನಹುಳುಕು, ಪೈಯೋರಿಯಾ, ಒಸಡಿನಲ್ಲಿ ಕೀವು ಮತ್ತು ನೆತ್ತರು ಬರುವ ರೋಗ ಹಾಗೂ ದುರ್ವಾಸನೆಯ ಉಪದ್ರವನ್ನು ತಡೆಯುವುದರಲ್ಲಿ ಸಹಕಾರಿಯಾಗುತ್ತದೆ.

ಒಮ್ಮೆ ಉಪಯೋಗಿಸಿ ಖಾತರಿಪಡಿಸಿಕೊಳ್ಳಿ.

ಆಯುರ್ವೇದಿಕ್
ಟೂತ್ ಪೇಸ್ಟ್
ಮತ್ತು ಪೌಡರ್




ವಿಕ್ಕೊ ಲ್ಯಾಬೊರೇಟರೀಸ್.

ಣೆಯೂ ಕಾಣಲಿಲ್ಲ. ಇನ್ಸ್ಪೆಕ್ಟರಿನ್ನಿಲ್ ಅಪ್ಪರೆ ಮನೆಯ ಯಜಮಾನತಿಯೇ ಆಗಿಬಿಟ್ಟಿದ್ದಳು. "ಇವಳಿಗೆರಡು ಸೀರೆ ತಂದುಕೊಡಿರಲ್ಲ!" ಎಂದು ಇವರಿಗೆ ನನ್ನೆದುರೇ ಹೇಳಿದಳು. ಜಗಳವಾಡಲು ಪಾಕರಿಕೆ ಬಂದಿತು. ಬದುಕು-ಹೋರಾಟ, ಜಗಳವಾಡುವದು ಅಸಹ್ಯವೆನಿಸಿತು. "ಪಾಪ, ಊರಿಗಾದರೂ ಕಳಿಸಿಕೊಡಿರಿ! ಎಷ್ಟು ಇಳಿದು ಹೋಗಿದ್ದಾಳೆ,!" ಎಂದಳು. ದಯವಿಟ್ಟು ನೀವು ಇಲ್ಲಿಗೆ ಬರುವ ಕಾರಣ?" ಎಂದು ಕೇಳಿದೆ. "ನೀನು ಈ ಮನೆಯಲ್ಲಿ ಅಂಥ ಪ್ರಶ್ನೆ ಕೇಳಲಾರೆ!" ಎಂದರು. ಇಂಥಾ ನೂರಾ ಎಂಟು ಒಟ್ಟಿನಲ್ಲಿ ವಿಚಾರ ಮಾಡಿ ಮಾಡಿ ಸಾಕಾಯಿತು. ಅಥವಾ ವಿಚಾರ ಮಾಡುವದೇ ಬರುವದಿಲ್ಲವೆಂದೆನಿಸಿತು. ಅಥವಾ ವಿಚಾರದಿಂದ ಬದುಕಿಗೆ ವಿಶೇಷ ಪ್ರಯೋಜನವೂ ಇಲ್ಲವೇನೋ ಎಂಬ ಸಂಶಯವೂ ಬಂದಿತು. ತಿಂಗಳಿಗೊಮ್ಮೆ ಮುಟ್ಟು, ಹೊರ ಕೂಡುವದು. ಮೀಯುವದು. ಮತ್ತೆ ಒಳಗೆ. ಮತ್ತೆ ಹೊರಗೆ, ಮತ್ತೆ ಸ್ನಾನ, ಮತ್ತೆ ಮುಟ್ಟು. 'She is a nuisance in the house' ಎಂದು ಅವಳು. ಇವರ ಬಳಿ ಹೇಳುವದು ಕೇಳಿತ್ತು. 'Certainly true' ಎಂದು ಇವರು ಅವಳ ಕೆನೆ ತಟ್ಟಿದ್ದನ್ನು ಕಣ್ಣುಮುಚ್ಚಿ ನೋಡಿದ ಮೇಲೆ ಒಂದುದಿನ ಅತ್ತೆಗೆ "ನಾನು ಅಪ್ಪನ ಮನೆಗೆ ಹೋಗುತ್ತೇನೆ" ಎಂದೆ "ನಾನಾರು, ನಿನ್ನನ್ನು ಕಳಿಸಲು" ಎಂದರು. ಮಾವನವರ ಬಳಿ ಕೇಳಿದರೆ ಗೂರಲು ಶ್ವಾಸನೆಳೆದು ಕಣ್ಣುಬೇರ ಹೊರಬರುವಂತೆ ನೋಡಿ ಕೆಮ್ಮತೊಡಗಿದರು. ಕೋಣೆಗೆ ಬಂದು ನೋಡಿದರೆ ಬಾಗಿಲು ಹಾಕಿತ್ತು. ಇವರು ಹೇಳಿ ಕಳಿಸಿದಾಗ ಬರುತ್ತೇನೆ ಎಂದು ಹೇಳಿ ಹೊರಟುಬಿಟ್ಟೆ. ಅಪ್ಪನಿಗೆ ವಿಶೇಷ ಹೇಳಲಿಲ್ಲ. ಎರಡುದಿನವಲ್ಲ, ನಾಲ್ಕು ದಿನದ ಮೇಲಾದರೂ ಮಗಳು ಗಂಡನ ಮನೆಗೆ ಹೋಗುತ್ತಾಳೆಂದಂತೆ ನಡೆದುಕೊಳುವ ರೀತಿಯಲ್ಲಿ ಅವರು ನೋಡಿಕೊಳ್ಳುತ್ತಾರೆನ್ನುವದು ಮಾತ್ರ ಖಾತ್ರಿಯಾಗಿತ್ತು. ಈ ಸಾರೆ ಬಂದಾಗ ಕಣೆ ತ್ತಿ ಎದುರು ಮನೆಯ ಅಟ್ಟದ ಕೋಣೆಯನ್ನು ನೋಡದೆ ಅನಿರುದ್ಧನಿಗಾಗಿ. ಓರ್ವ ಸುಂದರ ಗಂಡಸು ನಿಂತಿದ್ದ. ನಾಲ್ಕು ಬಾರಿ ನೋಡಿದೆ. ಆತ ಸಿಗರೇಟು ಹಚ್ಚಿ ಹೊಗೆಬಿಟ್ಟ. ಹತ್ತಿರದ ಅಂತರದಿಂದ ನೋಡಿದೆ. ಸರಿಯಾಗಿ ಗುರತು ಹತ್ತಲಿಲ್ಲ. ಆತ ಕೈಮಾಡಿ ಕರೆದ. ಆಗ ಪರಿಚಯ ಹತ್ತಿತು. ಅನಿರುದ್ಧ ಆ ಖೋಲಿ ಬಿಟ್ಟ ವರುಷವೇ ಕಳೆದು ಹೋಯಿತೆಂದು. ಮನೆಯಲ್ಲಿ ಅಪ್ಪನೋ ಆತನ ಸುದ್ದಿಯನ್ನು ಒಮ್ಮೆಯೂ ಎತ್ತಲಿಲ್ಲ. ಅಚೆ ಈಚೆಯವರೂ ಅವನನ್ನು ಕುರಿತು ಏನೂ ಹೇಳಲಿಲ್ಲ. ಅವನು ಊರಲ್ಲಿ ಇರಲಿಕ್ಕಾಗದೇ–ಎಲ್ಲಿಯಾದರೂ ಓಡಿಹೋದನೇ– ಅಥವಾ ಸತ್ತು– ನನ್ನ ಹತ್ತಿರ ಹೇಳಿದಂತೆ ಎಂದು ನೆನೆದುಕೊಂಡಾಗ ಒಳಗೆಲ್ಲ ಅಲುಗಾಡಿಸಿದಂತಾಯಿತು. ಆತ ಸತ್ತಿರಲಿಕ್ಕಿಲ್ಲವೆಂದು. ಇಲ್ಲೇ ಊರಲೆಲ್ಲೋ ಇದ್ದಿರಬೇಕೆಂದೂ ಸಮಾಧಾನ ಮಾಡಿಕೊಂಡೆ. ತಂದೆಯ ಹತ್ತಿರ ಮಾತು. ಈ ಮಾತು ಆದ ಮಧ್ಯ ಅವನ ವಿಷಯ ತೆಗೆದೆ. ಅವರು "ಇನ್ನೂ ನಿನಗೆ ಬುದ್ಧಿ ಬರಲಿಲ್ಲವೇ? ಅವನು ಸತ್ತುಹೋಗಿದ್ದಾನೆ ಎಂದೇ ತಿಳಿದುಕೋ" ಎಂದು ಬೇಸರ–ಸಿಟ್ಟಿನಿಂದ ಆಡಿದರು. ಸತ್ತಿದ್ದ ಆ ಮಾತು ಬೇರೆ; ಸತ್ತನೆಂದಿಟ್ಟುಕೊಳ್ಳುವದು ಹೇಗೆ ಹಾಗೆ ಇರುವದು ಸಾಧ್ಯವಾದೀತೆ– ಅವನು ಇದ್ದರೆ ಈ ಊರಲ್ಲೆಲ್ಲೋ ಇದ್ದಾನೆ. ನನಗಾಗಿ ಹುಡುಕುತ್ತಲೆ ಇದ್ದಾನೆ. ಸಿಕ್ಕರೆ ಓಡಿಬಂದು ಒಂದು ಮಾತನಾಡಿಸಿದರೂ ಆಡಿಸಿದ. 'ಕವಿತಾss' ಎಂದು ಕೂಗಿಕೊಂಡು ಕಣ್ಣೀರ ಉದುರಿಸಿದರೂ ಉದುರಿಸಿದ ಅಥವಾ ಮೋಸ ಮಾಡಿದವಳೆಂದು–ಕಂಡರೂ ಮಾತನಾಡಿಸದೇ, ನೋಡದೆ ನಡದರೂ ನಡೆದ. ಅಪ್ಪ, "ಕವಿತಾ–, ಬಂದು ಹದಿನೈದು ದಿನವಾಯಿತಲ್ಲ!" "ಹೌದು" ಎಂದೆ. ಅವರು ಮುಂದೇನೂ ಹೇಳಲಿಲ್ಲವಾದರೂ ನನ್ನ ಅಷ್ಟೇ ಉತ್ತರದಿಂದ ಅವರಿಗೆ ತೃಪ್ತಿಯಾಗಲಿಲ್ಲವಷ್ಟೇ ಅಲ್ಲ. ಮುಂದೆ ಹೆಚ್ಚು ಮಾತಾಡಿಸುವದನ್ನೇ ಬಿಟ್ಟರು. "ನಿಮಗೆ ಅಡಿಗೆ ಮಾಡಲು ಯಾರಿದ್ದಾರೆ?" ಎಂದು ಆ ಮನೆಯ ಕಥೆ ಗೊತ್ತಿಲ್ಲದವಳಂತೆ ಕೇಳಬೇಕಾದ ಪ್ರಸಂಗ ಬಂತು. "ನಾನೂ ಊಟಮಾಡಲೇಬೇಕೆಂದೆಲ್ಲಿದೆ?" ಎಂದವರು ಸ್ಪಷ್ಟವಾಗಿಯೇ ಹೇಳಬೇಕಾದ ನನ್ನ ಪ್ರಶ್ನೆಗೆ ಕಾಯುತ್ತಿದ್ದರು. ಅಂಥ ಪ್ರಶ್ನೆ ಕೇಳಲು ನಾನು ಧೈರ್ಯಮಾಡಿರಲಿಲ್ಲ. ಒಂದು ತರಹದ ಭಯ ನನ್ನ ಬಗೆಗೆ ಕೀಳು ಭಾವನೆ ಬೆಳೆಯತೊಡಗಿತ್ತು. ಗಂಡನ ಮನೆಯ ಸಂಬಂಧ ತಪ್ಪಿಯೇ ಹೋಯಿತೇ ಎಂದು



ಎಮ್ಮೊಮ್ಮೆ ಅನಿಸಿದರೂ ಆ ಸಂಬಂಧ ಇದೇ ಅದರ ಏನು ಸು ಎಂದೂ ಅನಿಸಿ, ಅಪ್ಪನ ಗಂಟುಮೋರೆ ಸಿನಪಾಗಿ, ಅನಿರುದ್ಧ ಇದೇ ಊರಲ್ಲಿ ಇದ್ದಾನೋ ಇಲ್ಲವೋ ಅಥವಾ ಅವನು ಎಂದಾದರೊಂದು ದಿನ ಈ ಊರಿಗೆ ಬಂದಾನೋ ಇಲ್ಲವೋ ಎಂಬಂಥ ಅನೇಕ ಪ್ರಶ್ನೆಗಳು ಎದುರುಗೊಳ್ಳುತ್ತಿದ್ದವು. ಒಂದು, ತಿಂಗಳಿಗೆ ಬಂತು! ಎಂದು ಎಲೆಡಕೆ ಉಗುಳಿ ಬಂದ ಅಪ್ಪ ತಮ್ಮ ಪಕ್ಕೆ ಹೇಳಿಕೊಂಡಾಗ–ಸಂಜೆ ಉಪವಾಸವೋ ಊಟವೋ ಎಂದು ನಾನು ಕೇಳಿದೆ. ದೇವಸ್ಥಾನದ ನಾಣಭಟ್ಟ ಅಪ್ಪರಲೇ ಎಂಟು ಹತ್ತು ಸಾರೆ ಬಂದು ಹೋಗಿದ್ದ. "ಕವಿತಾ ಗಂಡನ ಮನೆಗೆ ಯಾವಾಗ ಹೋಗುತ್ತಾಳೆ?" ಎಂಬ ಮುಗ್ಧ ಪ್ರಶ್ನೆಯನ್ನು ಅಪ್ಪನ ಹತ್ತಿರ ಕೇಳಿದ್ದ ಅನೇಕ ಬಾರಿ ಉತ್ತರಿಸಲಾರದೆ ಅಪ್ಪ ಒಂದೂವರೆ ತಿಂಗಳಾಯಿತು ಎಂದೆನ್ನುತ್ತಿದ್ದರ ತಮ್ಮಪಕ್ಕೆ ದರ್ಭೆ ಅಂಗೋಸ್ತ್ರ. ಪಂಜೆ ಒಂದು ಕಲಶಕ್ಕೆ ಒಂದು ಹಿತ್ತಾಳೆ ತಂಬಿಗೆ ತಟ್ಟೆ, ಸಿದ್ದೆ ಅಕ್ಕಿ ಎಂದೆಲ್ಲ ಬರೆದ ಚೀಟಿಯೊಂದನು ಅಪ್ಪನ ಕೈಗೆ ನಾಣಭಟ್ಟ ಕೊಟ್ಟಾಗ ಏನು ಧರ್ಮಕಾರ್ಯ ಮಾಡಿಸುವ ತಯಾರಿ ಅಪ್ಪನದು ಎಂಬ ವಿಚಾರ ಮಾಡುವಷ್ಟರಲ್ಲಿಯೇ ಆ ಅಕ್ಷರ ಎಲ್ಲೋ ಕಂಡಂತೆ ಗಾಬರಿಯಾದಂತೆ ಬೆವತು ಮೈ ತಣ್ಣಗಾದಂತೆನಿಸಿತು. ಶೇರುಗಾರ್ತಿಯ ಕೈ ಹಿಡಿಯ ಹೋಗಿ ಊರೆಲ್ಲ ಸುದ್ದಿಯಾಗಿ ನಾಲ್ಕು ದಿನ ಊರು ಬಿಟ್ಟು ಓಡಿ ಹೋದ ನಾಣಭಟ್ಟನ ಸಾಹಸಕ್ಕೆ ಹೇಸಿ ಕುತ್ತಿಗೆಗೆ ಕೈಹಾಕಿ ಹಿಚುಕಿ ಬಿಡುವ ಸಿಟ್ಟು ಬಂದರೂ ನಾಣಗೊಂದು ಕಪ್ಪು ಚಹ ಮಾಡು ಎಂದ. ಅಪ್ಪನ ಮಾತಿಗೆ ಎರಡೆನ್ನದೇ ಅಡಿಗೆ ಮನೆಗೆ ಹೋದೆ "ಗಂಡ ಬಿಟ್ ಬಿಟ್ಟಾನೆ ಎಂಬ ಗುಸು ಗುಸು ಊರಲ್ಲೆಲ್ಲ ಎಂಬ ಧ್ವನಿ ನಾಣೆಯುದಂತೆನಿಸಿದರೂ ಅಪ್ಪನ ಮಾತು ಕೇಳಲು ಕಿವಿ ನೆಟ್ಟಗೆ ಮಾಡಿಕೊಂಡೆ. ನಿನ್ನ ಬಗ್ಗೂ ಎಂತೆಂತಹದೋ ಹೇಳಲಿಲ್ಲವೇನೋ ಈ ಜನ!" ಎಂದ ಅಪ್ಪ ತುಂಬ ಕಲಬರಿಕೆ ಮಾಡಿಕೊಂಡರೆಂಬುದು ತಿಳಿದು ಕಸವಿಸಿಯಾದರು ಮುಂದೆ ಅವರು ನನ್ನ ಹತ್ತಿರ ಏನೂ ಹೇಳುವರು ಎಂಬುದು ಮುಖ್ಯವಾಗಿ ಚಹ ಇಳಿಸಿ ನಾಣಭಟ್ಟನೆದುರು ಕಪ್ಪು ಅಡಬರಿದು ಬಂದೆ. ಅಂತರಾಳದಲ್ಲಿ ಚಡಪಡಿಸುತ ಮುಳ ಕಂಗಾಲಾಗಿ ಕಣ್ಣೆಲ್ಲ ಭಯದಿಂದ ಮಂಜಾಗಿ ಅನಿರುದ್ಧನನ್ನು ಎಲ್ಲಿ ಹುಡುಕುವದೆಂದು ಗಡಬಡೆಗೊಂಡೆ. ಆತ ಈ ಊರಲೇ ಇದ್ದರೆ ನನಗೆಲ್ಲಾದರೂ ಕಾಣಿಸಿಕೊಳ್ಳಲೇಬೇಕಿತ್ತು. ಸುಮ್ಮನೇ ಮಾತನಾಡಿಸದೆ ಈ ಮನೆಯ ಹಿಂದೋ ಮುಂದೋ ಆತನು ಹಾದು ಹೋಗಬೇಕಿತ್ತು. ಅಥವಾ ಅವನು ಸತ್ತುಗಿತ್ತು ಹೋಗಿದ್ದಾನೋ ಜನ ಅವನನ್ನು ಸಂಪೂರ್ಣ ಮರೆತಂತೆ ಅಷ್ಟೇ ದಿನಗಳೇ ಆಗಿರಬಹುದೇ? ಸಂಜೆ ಬೆಳಗು, ಹೊಸ್ತಲು ಸಂತೆ ರಂಗೋಲಿ ಊಟ ಮಧ್ಯಾಹ್ನದ ಕೆಲಸವಿಲ್ಲದ ಭಣಭಣ ಮಬ್ಬಂಚೆ ಪೇಟೆ ಓಲೆಗೆ ಬೆಂಕಿ. ಊಟ, ಹಾಸಿಗೆ, ಬೆಂಕಿ, ಕಾಂಗಿ ತಲೆಯೆಲ್ಲ ಹಾಳು ಅಪ್ಪನೂ ಮೌನ. ಮನೆ ಮಕ್ಕೂ ಮೌನ. ಅಚೆ ಈಚೆ ಮೊದಲೇ ಮೌನ. ಬೆರಳು ಮಾಡುವಂತೆ ಕುತ್ತಿಗೆ ಅವಚಿ ಹಿಡಿದಂತಾಗಿ ಕಾಲು–ಕೈ ಒಡೆದುಕೊಳ್ಳುವಂತಾಗುತ್ತಿತ್ತು. ಮನೆ ತುಂಬ ಓಡಾಡಿದರೂ ಒಂದು ಹೆಜ್ಜೆ ಮುಂದೆ ಹೋಗದಂತೆನಿಸಿ ಏನೇನೋ ಹರಿದುಕೊಂಡು ಓಡುವಂತಾಗಿ ಮುಖವೆಲ್ಲ ಕಂಗಾಲಾಗುತ್ತದೆ. "ಕವಿತಾ! ನೀನು ಗಂಡನ ಮನೆಗೆ ಹೋಗಬೇಕು!" ಎಂದರು ಅಪ್ಪ ಇದ್ದಕ್ಕಿದ್ದಂತೆ ಹೊರ ಒಳದ ಹಳೇ ಕಂಬಕ್ಕ ಒರಗಿಕೊಂಡು, ಅಂಗಳದ ಮಬ್ಬನ್ನೇ

ಇಂಡಿಯನ್ ಆಯಿಲ್—ಸೇನೆಗಳಿಗೆ ಸೇವೆ







ಭಾರತದ ರಕ್ಷಣಾ ಸೇನೆಗಳು ನಿಸ್ಸಂದೇಹವಾಗಿಯೂ ನಮ್ಮ ಅಮೂಲ್ಯ ಗ್ರಾಹಕರು. ಆದರೆ ನಾವು ಆ ರೀತಿಯಿಂದ ನೋಡುವುದಿಲ್ಲ. ಒಂದು ಪ್ರಮುಖ ಸಾರ್ವಜನಿಕ ಉದ್ಯಮವಾಗಿರುವ ನಾವು, ನಮ್ಮ ಸೇನೆಗಳೊಡನೆ ಸಹಕರಿಸಿ, ಕಷ್ಟದ ಗಳಿಗೆಗಳಲ್ಲಿ ರಾತ್ರಿ-ಹಗಲು ಎಚ್ಚರಿಕೆಯಿಂದ ಸೇವೆ ಮಾಡುವುದರಲ್ಲಿ ಅವರಿಗೆ ಸಹಾಯವನ್ನೀಯುವುದು ನಮ್ಮ ಮುಖ್ಯ ಜವಾಬ್ದಾರಿ ಮತ್ತು ನಮ್ಮ ಕರ್ತವ್ಯ ಎಂದು ತಿಳಿದಿದ್ದೇವೆ.

ಭೂ ಸೇನೆ, ನೌಕಾ ಸೇನೆ ಮತ್ತು ವಾಯು ಸೇನೆ—ಇವುಗಳಿಗೆ ಬೇಕಾಗುವ, ಸರಿಯಾದ ನಿರ್ದೇಶನಗಳಿಗನುಗುಣವಾದ ಎಲ್ಲಾ ಪೆಟ್ರೋಲಿಯಂ ಉತ್ಪಾದನೆಗಳನ್ನು, ಆವಶ್ಯಕತೆ ಇರುವಲ್ಲಿ ಒದಗಿಸಲು ಇಂಡಿಯನ್ ಆಯಿಲ್ ಸದಾ ಸಿದ್ಧವಾಗಿದೆ.

ಇತ್ತೀಚಿನ ಭಾರತ-ಪಾಕಿಸ್ತಾನಗಳೊಳಗೆ ನಡೆದ ಯುದ್ಧವು ಸೈನಿಕ ದಳಗಳ ಸಾಗಣೆಗೆ ಸಹಾಯ ನೀಡುವ ವಿಷಯದಲ್ಲಿ ಒಂದು ಅಹ್ವಾನವೇ ಆಗಿತ್ತು. ಅದರಲ್ಲಿ ಕಷ್ಟಗಳು, ಅಪಾಯಗಳು ಮತ್ತು ಪೆಟ್ಟುಗಳು ಎಷ್ಟೇ ಇದ್ದರೂ ಇಂಡಿಯನ್ ಆಯಿಲ್‌ನವರು ಆ ಆಹ್ವಾನವನ್ನು ಸ್ವೀಕರಿಸಿದರು ಮತ್ತು ಯಶಸ್ವಿಯಾಗಿ ನೆರವೇರಿಸಿದರು. ಈ ರೀತಿಯಲ್ಲಿ ಅವರು ಯುದ್ಧಕಾಲಗಳಲ್ಲಿ ಮತ್ತು ಹಾಗೆಯೇ ಶಾಂತಿಯ ಕಾಲಗಳಲ್ಲಿ, ತಮ್ಮ ಕಾರ್ಯಗಳಿಂದ ರಾಷ್ಟ್ರದ ಕೃತಜ್ಞತೆಯನ್ನು ಗಳಿಸುತ್ತಾರೆ.

INDIANOIL

—[illegible]
ರಾಷ್ಟ್ರೀಯ ಸಂಸ್ಥೆ

ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್

ನೋಡಿಕೊಳ್ಳುತ್ತ "ಅಲ್ಲಿ ಹೋಗಿ ಏನು ಮಾಡಬೇಕು ಅಪಾ ನಾನು ಅಲ್ಲಿ ಯಾರಿಗೂ ಬೇಡವಾಗಿದ್ದೇನೆ!" ಎನ್ನುತ್ತಿರುವಾಗಲೇ ಕಣ್ಣೀರು ತನಿಂದ ತಾನೇ ಬಂದರೆ ಅಳಕೂಡದೆಂದು ಠರಾಯಿಸಿ ಸೆರಗಿನಿಂದ ಒರೆಸಿಕೊಂಡರ ಹಾಗೆಂದರೆ ಹ್ಯಾಗೆ ಕವಿತಾ ಕೊಟ್ಟ ಮನೆಯಲ್ಲಿ ಇರಬೇಡವೇ?" ಎನ್ನುತ್ತಾರೆ. ಒಬ್ಬಳೇ ಮಗಳೆಂದು ಕವಿ ಕವಿ ಕವಿ ಕವಿ ಎಂದು ಮನೆ ತುಂಬ ಕರೆದುಕೊಳ್ಳುತ್ತಿದ್ದ ಅಪ್ಪನ ಅಂತಃಕರಣವನ್ನು ಸುಟ್ಟವರಾರು? ಹೇಗೆ? ಎಂದು ದಂಗುಬಡಿದಂತಾಗಿ "ಹಾಗಾದರೆ ನಾಳೆ ಹೋಗುತ್ತೇನೆ!" ಎಂದು ಗೊತ್ತಿಲ್ಲದೇ ಹೇಳಿಬಿಟ್ಟೆ. ಇವರ ಮನೆಗೆ ಬಂದರೆ ಮನೆತುಂಬ ಮಾವನ ಗೂರಲು ನಾದ. ಸಾವಿನೊಂದಿಗೆ ಅಗಾಧ ಸ್ನೇಹ ಬೆಳೆಸಿದಂತೆ ಬದುಕುತ್ತಿದ್ದ ಮಾವ ಇನ್ನೂ ಸಾಯಲಿಲ್ಲವೆಂಬ ಅನಾವಶ್ಯಕ ಭಾವನೆ ತಿರುತಿರುಗಿ ಕಾಡಿಸಿತು. ಅತ್ತೆ ಮುಖ ಎತ್ತುವದನ್ನು ನೋಡಲಾಗದೇ, ನಾನು ಆಯಾಸ ಪಡುವದು ವಿಚಿತ್ರವೆನಿಸಿ ಮನೆಯಲ್ಲೆಲ್ಲ ಕಡೆ ಓಡಾಡಿದರೂ ನನ್ನ ಕೋಣೆಗೆ ಹೋಗಲಾರದಂತೆ ಬೀಗ ತೂಗುಬಿದ್ದದನ್ನು ಕಂಡು ಮಾತ್ರ ಯರ್ವೆನಿಸದಿದ್ದರೂ, ಅಡಚಣೆಯಾಗಿ, ಅವರು ಬರುವದೂ ಹೋಗುವದೂ, ಹೋಗುವದೂ, ಬರುವದು ನನಗೆ ಗೊತ್ತಾಗದಂತಾಗಿ ಇಲ್ಲಿದ್ದೇನು ಮಾಡುವದು ಎಂದೇ ತಿಳಿಯದಂತಾದರೂ, ನನ್ನದೇ ಮನೆ. ಇದಲ್ಲವೇನು ಎಂಬ ಸಾಮಾನ ಒರಟು ಭಾವನೆಯಿಂದ, ಬೆಳಗು, ಸಂಜೆ, ಮಧ್ಯಾಹ್ನ, ಕಟ್ಟೆ, ಕೊಟ್ಗೆ, ಹಿತ್ತಲು, ಅಂಗಳ ಎಲ್ಲಾ ಓಡಾಡಿ ಆಯಸ್ಸೆಲ್ಲ ಸವೆದಂತಾಗಿ, ಏನೋ ಹಾಳಾಗುತ್ತದೆ. ಹಾಳಾಗುತ್ತಿದೆ ಎನಿಸಿ, ಯಾಕೆ ಈ ಸುತ್ತು-ಕಟ್ಟು ಎಂದು ಕನವರಿಸಿ 'ಗುಳದಾಳಿ ಎಲ್ಲಾ ಜೊಳ್ಳು, ಶೋ, ನಾಚಿಕೆಗೇಡೆನಿಸಿ ಸೀರೆ ಹರಿದು ಬಿಸಾಕಲೇ ಎಂದು ನಿರ್ಧಾರ ಮಾಡಿ, ವಿಚಾರಿಸಿ, ಅಪ್ಪನಿದ್ದಲ್ಲಿ ಬಂದರೆ ಅವರ ಮುಖ ನೋಡುವಂತಿರಲಿಲ್ಲ. "ನೀನು ಬರಲೇ ಬಾರದಿತ್ತು!" ಎಂದು ಅವರು ಖಡಾ ಖಂಡಿತ ಹೇಳಿದ್ದು ಅನಿರೀಕ್ಷಿತವಾಗಿ ಕಾಣದೆ ನನ್ನಷ್ಟಕ್ಕೆ ಮನೆಯ ಕೆಲಸದಲ್ಲಿ ತಲ್ಲೀನಳಾದರೆ ನನ್ನ ಬಗೆಗೇ ತುಂಬಾ ಪಶ್ಚಾತ್ತಾಪವೆನಿಸಿತು. "ನಾನು ಹೇಳಿದ್ದು ನಿನಗೆ ಕೇಳಲೇ ಇಲ್ಲವೇನೋ? ಸಾಯಲಿ, ಬದುಕಲಿ, ಅಲ್ಲೇ ಇರಬೇಕಾದ್ದು ನಿನ್ನ ಧರ್ಮ!" ಎಂಬ ಬಹು ದೊಡ್ಡ ಶಬ್ದ ಉಪಯೋಗಿಸಿ ಒದರಿಕೊಂಡಾಗ ತೀರಾ ಅಪರಿಚಿತ ಮನೆಗೆ ಬಂದಂತಾಗಿ, ಅನಿರುದ್ಧ ಈ ಊರಲ್ಲೆಲ್ಲೊ ಇರಲಿಕ್ಕಿಲ್ಲವೇ ಎಂದು ನರಳುವಂತಾಯಿತು. ನಾಣ ಭಟ್ಟ ಅಪ್ಪನಿಲ್ಲದಾಗ ಬಚ್ಚಲ ಮನೆಗೇ ಬಂದು ಬಹು ಮಧುರವಾದಗಿ ಕವಿ' ಎಂದು ಸಂಬೋಧಿಸಿ. ಅನಿರೀಕ್ಷಿತ ಆಕರ್ಷಕ ಮುಖಮಾಡಿ, ಬದಿಯಲ್ಲಿ ಬಂದು ನಿಂತು ಹುಚ್ಚಪ್ಪನಂತೆ ಚಡಪಡಿಸುತ್ತಿದ್ದಾ "ಅನಿರುದ್ಧ ಸತ್ತೇ ಹೋದನಾ?" ಎಂದು ಕೇಳಿದೆ ತುಂಬಾ ಉಪಕಾರ ಮಾಡುವವನಂತೆ ಉತ್ತರಕ್ಕಾ/ ನಿರುಪಯುಕ್ತ ಶಬ್ದಗಳನ್ನು ಹುಡುಕಾಟದಲ್ಲಿ ಹಲಬಿದಾಗ ಹೊರಗೆ ಅಪ್ಪನ ಚಪ್ಪಲಿ ಶಬ್ದ ಕೇಳಿ, ಧಡಾರನೇ ಓಡಿ ಹೋಗಿ ಎದುರಾಗಿ ಸಂಜೆ ಕಡೆ ಅಡ್ಡಾಡುತ್ತ ಶಂಕರ ಭಟ್ಟರು ತಮ್ಮ ಮನೆ ಕಡೆ ಬರ ಹೇಳಿದ್ದಾರೆ" ಎಂಬ ಅತ್ಯಂತ ಸಾಮಾನ್ಯ ಹೇಳಿಕೆಯೊಂದರಿಂದ ಗೆದ್ದುಕೊಂಡ ಮನೋಭಾವದಷ್ಟೈಟಾಗಿ ಖುರ್ಚಿಯೊಂದರಲ್ಲಿ ಕುಳಿತಾಗ "ಚಹ ಕುಡಿವೆಯಾ?" ಎಂದು ಅಪ್ಪ ಕೇಳಿದ್ದರಿಂದ ಚಹ ಮಾಡಿ ಒಂದು ಕಪ್ಪು ಅವನೆದುರು ಅಡಬರಿದೆ.

ಶಂಕರ ಭಟ್ಟ, ನಾಣಭಟ್ಟ, ನನ್ನಪ್ಪ, ಒಟ್ಟಿನಲ್ಲಿ ಎಲ್ಲಾ ಹೇಳಿದ್ದೂ ನಾನು ಗಂಡನ ಮನೆಗೆ ಹೋಗಬೇಕು. ಅವರೇನೆಂದರೂ ಅನ್ನಿಸಿಕೊಂಡಿರುವದು ಶೋಭಾಯಮಾನವಾದದ್ದು-ಎಂಬುದನ್ನು ನೂರೆಂಟು ವಿಧಾನದಲ್ಲಿ ತಿಳಿದು ಇವರ ಮನೆಗೆ ಹೋಗಿ ಮುಟ್ಟಿದರೆ ಅದೇ ಹಣೆಬರಹ ಅನುಭವಿಸಿ ಸಾಕಾಗಿ ಇವರನ್ನು ಎದುರುಗಟ್ಟಿ ಕೇಳಿಯೇ ಬಿಟ್ಟೆ. ಯಾಕೋ ಇವರೂ ತೀರಾ ಗಂಭೀರವಾಗಿದ್ದಾರೆಂದೆನಿಸಿ "ಇಲ್ಲ ನಾನು ಇರುವವಳೇ. ಇಲ್ಲಿ ನನಗೆ ಹಕ್ಕುಗಳುಂಟು..." ಎಂದೆಲ್ಲೆ ಗಡಬಡಿಸಿದರೆ "ಈ ಮಾತೆಲ್ಲ ಕೋರ್ಟಿನಲ್ಲಿ ಸಿದ್ಧವಾಗಬೇಕು-" ಎಂದು ಬಿಟ್ಟರು. ಎಂಥ ಸಂಬಂಧ ಎಷ್ಟೊಂದು ತೆಳುವಾಗಿಬಿಟ್ಟದೆಯೆಂದುಕೊಂಡು ಅಲ್ಲಿಂದ ಹೊರಟುಹೋಗಬೇಕು ಎಂಬ ಕೊನೆಯ ಮಾತನ್ನು ಕೇಳಿ, ಅಲ್ಲಿದ್ದಾದರೂ ಏನಾಗಬೇಕೆಂದು ಮತ್ತೆ ಅಪ್ಪನ ಮನೆಗೆ ಬಂದರೆ ಇಲ್ಲೂ ಅದೇ ಹಣೆ ಬರಹವನ್ನು ಕಂಡು ಒಟ್ಟಿನಲ್ಲಿ ನನಗೆ ಹೊಸದಾಗಿ ಏನಾದ್ರೂ ವಿಚಾರ ಮಾಡಬೇಕೆಂದೆನಿಸಿ ಅನಿರುದ್ಧನನ್ನು ಈ ಊರಲ್ಲೆಲ್ಲ ಹುಡುಕಿ, ಮಾತನಾಡಿಸಲೇ ಬೇಕೆಂದು ಕೊನೆಯದಾಗಿ ನಿರ್ಧರಿಸಿಬಿಟ್ಟೆ. ಅದೇ ಮನೆಯ ಕೋಣದಂತೆ ತಿರುಗಿ ತಿರುಗಿ ವರ್ತುಲ ಗುರುತಿಸುವದನ್ನು ಬಿಟ್ಟು ಮತ್ತೇನಾದರೂ ಮಾಡಲಿಕ್ಕೆ ಬಂದರೆ ಅಷ್ಟೇ ಸಾಕು, ಬದುಕಿಕೊಂಡೇನೆಂದುಕೊಂಡು ಎಂದೆಂದೂ ತಿರುಗಾಡದ ಊರಿನ ರಸ್ತೆಗಳಲ್ಲಿ ಬೆಳಿಗ್ಗೆ, ಮಧ್ಯಾಹ್ನ ಸಂಜೆ, ಕತ್ತಲೆಯಲ್ಲೆಲ್ಲ ನನಗೇನು ಹುಚ್ಚು ಹಿಡಿಯಲಿಲ್ಲವೆಂದು ಖಾತ್ರಿ ಮಾಡಿಕೊಳ್ಳುತ್ತಾ ತಿರುಗಾಡಿದೆ. ಇವರ ಮನೆಯಲ್ಲಿ ಕ್ಷಣಕ್ಷಣಕ್ಕೂ ಬಲೆ ನೇಯುತ್ತ ಬಿದ್ದುಕೊಂಡ ಜೇಡರ ಹುಳದ ನೆನಪಾಗಿ ನನ್ನ ಬಗ್ಗೆ ನಾಚಿಕೆಯೆನಿಸಿದರೂ ಸುಮ್ಮನೇ ಥಲಕ್ಕಾಗಿ ತಿರುಗಿಯಾದರೂ ಬದುಕನ್ನು ಅನಿಸಿಕೊಳು ವಾ ಎಂದು. ಕಾಲೇಜ ರಸ್ತೆಯ ಸಿಮೆಂಟ್ ಕಟ್ಟೆಯ ಮೇಲೆ ಈ ಸಂಜೆ ಕುಳಿತಾಗ ನಾಣ ಭಟ್ಟ ಫಸ್ಟ್‌ಕ್ಲಾಸ್ ಮುಂಡಸುತ್ತಿ ಮೇಲೆ ಎದೆ ಕಾಣುವ ಟೆರಿಲಿನ್ ಹಾಕಿ "ಕವಿ"! ಎಂದು ಮೋಹಕವಾಗಿ ಕರೆದು ವೈಯಾರ ಮಾಡಿದಾಗ 'ಕೂಡ್ರು' ಎಂದು ಬಳಿಯಲ್ಲೇ ಸ್ಥಳತೋರಿಸಿದಾಗ ಸಂಜೆಯಾಗುತ್ತ ಬಂದಿತ್ತು. "ಕವೀ" ಎಂದು ಮತ್ತೂ ನರಳಿದಾಗ ಮುಖವೆತ್ತಿ ಆಕಾಶ ನೋಡಿದೆ. ಅಂದು ಕೋಣೆಯ ಜೇಡರ ಬಲೆಗಳನ್ನೆಲ್ಲ ಝಾಡಿಸಿ ಸ್ವಚ್ಛ ಮಾಡಿದಾಗ ಆ ನೆಲದೊಂದಿಗೆ ಆತ್ಮೀಯತೆ ಬೆಳೆದದ್ದು ಸಂತೋಷಕೊಟ್ಟು ಬದಿಗೆ ಸರಿದು ಬರುತ್ತಿದ್ದ ಅವನ ಕೈಯನ್ನು ಮೆತ್ತಗೆ ಹಿಡಿದುಕೊಂಡೆ. "ನೀನೆಷ್ಟು ಚಂದ!" ಎಂದು ಮತ್ತೂ ಮತ್ತೂ ಪ್ರಸ್ತಾಪಿಸುವುದನ್ನು ಕೇಳಿ ರಸ್ತೆಯ ಉದ್ದವನ್ನು. ನೋಡಿದಾಗ, ಎಷ್ಟು ನೇರವಾಗಿದೆ ರಸ್ತೆಯೆನಿಸಿ ಸಮಾಧಾನ ಮೈ ತುಂಬಿ ತಣ್ಣಗೆ ಅಂದರೆ ತಣ್ಣಗಾಗಿ ಅವನನ್ನು ನೋಡಿದೆ. ಆತ ಶಬ್ದ ಎಲ್ಲಾ ಖರ್ಚಾದವನಂತೆ ನಿಷ್ಕ್ರಿಯನಾಗಿ ಕುಳಿತದ್ದನ್ನು ನೋಡಿ. 'ಆ ಊರಿಗೆ ಪತ್ರ ಬರೆದವನು ನೀನೆಯಾ?" ಎಂದು ಕೇಳಿದೆ. "ಅಲ್ಲಾ... ಹೌದು" ಎಂದು ಚಡಪಡಿಸಿ ತೊದಲಿದಾಗ 'ಹೋಗಲಿ' ಎನಿಸಿ ಅವನನ್ನು ಕರೆದುಕೊಂಡು ಮನೆಯ ಕಡೆ ಹೊರಟೆ. ಎಂದೋ ಗುರುತ್ತಿದ್ದವನಂತೆ ಅನಿರುದ್ಧ ಎದುರಿಗೆ ಬಂದ. ಕಂಡನೇ ಕವಿತಾss" ಎಂದು ನಿಂತ.

"ಅನಿ, ನಿನಗಾಗಿ ಬಹಳ ಹುಡುಕಿದೆ!"

"ಹೌದಾ?"

"ಇಲ್ಲೇ, ಇದೇ ಊರಲ್ಲಿಯೇ ಇದ್ದೀಯಾ?"

"ಹೌದು-ಕವಿ"

"ನಾನು ಬಂದದ್ದು ಗೊತ್ತಾಗಲಿಲ್ಲವೇ?"

"ಇಲ್ಲವಲ್ಲ!"

"ನನಗಾಗಿ ಹುಡುಕಿದ್ದೀಯಾ ಅನಿ!"

"ಇಲ್ಲ!"

"ನನ್ನ ಮದುವೆ ಆದ ಮೇಲೆ ಒಮ್ಮೆಯಾದರೂ ಮುಂದೇನು ಅನಿಸಲಿಲ್ಲವಾ?"

"ಹಾಗೆ ನಾನು ವಿಚಾರವೇನು ಮಾಡಲಿಲ್ಲ!"

"ಕತ್ತಲೆ ಆಯ್ತು!"

"..............."

"ಇಲ್ಲಿ, ಎಲ್ಲಿ ಮನೆ ಮಾಡಿದ್ದಿ?"

"ಮನೆ ಮಾಡಿಲ್ಲ, ರೂಂ ಇದೆ."

"ರೂಂ ಎಲ್ಲಿ?"

ನಡೆದು ಬಂದ ದಾರಿಗೆ ಮುಖ ತಿರುವಿ... "ಅಲ್ಲಿ, ಆ ಗುಡದ ಕೆಳಗಡೆ. ಟಾರ್ಸಿ ಬಿಲ್ಡಿಂಗ್ ಉಂಟಲ್ಲ. ಅದರಲ್ಲಿ ಅಟ್ಟದ ಮೇಲೆ ಕೊನೆಯ ರೂಂ?"

"ನಾಳೆ ನಾನು ನಿನಗೆ ಸಿಗಬೇಕಲ್ಲ-ಎಲ್ಲಿ?"

"ಹೀಗೇ ಬಂದಿರುತ್ತೀಯಲ್ಲ!"

"ಅಲ್ಲ, ಒಂದು ಮಾತು ಅನಿ. ನನ್ನ ಕಂಡು ನಿನಗೆ ಸಂತೋಷವಾಗಿಲ್ಲವೇ?"

"ಏನು ಹೇಳಲಿ, ಕವಿ! ಒಟ್ಟಿಗೆ ಬದುಕನ್ನೇ ಜೀವಿಸುತ್ತಿರುವ ನನಗೆ ನಿನ್ನ ಪ್ರಶ್ನೆಗಳು ಸರಿಯಾಗಿ ತಿಳಿಯುವದಿಲ್ಲ!"

ನಾನು ಹೊರಟು ಬಿಟ್ಟೆ. ಅವನು ನಿಂತೇ ಇದ್ದ ನಾನು ಹೊರಟಿದ್ದನ್ನು ಕಂಡು ಅವನು ನಡೆದೇ ಬಿಟ್ಟ ನಾಣಭಟ್ಟ ಮಧ್ಯದಲ್ಲೇ ಎಲ್ಲೋ ಉಳುಚಿಕೊಂಡಿದ್ದ ಅನಿರುದ್ಧ ದುಃಖಿತನಾಗಿರಲಿಲ್ಲ. ಅನಿರುದ್ಧ ಸುಖಿಯಾಗಿರಲಿಲ್ಲ. ಅನಿರುದ್ಧ ಪ್ರಶ್ನೆ ಕೇಳಲಿಲ್ಲ. ಉತ್ತರ ಹೇಳಲಿಲ್ಲ ಉದ್ವೇಗಗೊಳ್ಳಲಿಲ್ಲ. ಅಲಕ್ಷ ಮಾಡಲಿಲ್ಲ. ಓಡಿಹೋಗಲಿಲ್ಲ. ಆತ್ಮಹತ್ಯೆ ಮಾಡಿಕೊಂಡಿಲ್ಲ. ಮದುವೆಯಾಗಿಲ್ಲ. ಮಾತನಾಡುವುದನ್ನು ಬಿಡಲಿಲ್ಲ. ಕಣ್ಣಿನಲ್ಲಿ ನೀರು ತುಂಬಲಿಲ್ಲ ತುಟಿಯಲ್ಲಿ ನಗೆ ಮಿಂಚಲಿಲ್ಲ. ನನ್ನ ಮನಸ್ಸು ಹಗುರಾಗಿತ್ತು; ಸ್ವತಂತ್ರವಾಗಿತ್ತು. ಆದರೂ ಒಳಗೆಲ್ಲ ದಪ್ಪ ದಪ್ಪ ಬೇಸರ ನುಗ್ಗುತ್ತಿದ್ದಂತೆ. ಹಾಗೆಲ್ಲ ನಿಶ್ಚಿಂತೆ ಮಾಡಿಕೊಳ್ಳಲಾರದೆಂಬಂತೆ ಬದುಕು ಇಷ್ಟೇ ಸರಳವಲ್ಲವೆಂಬಂತೆ ಏನೇನೊ, ಕರಕರೆ ಅನಿಸತೊಡಗಿತ್ತು. ಅನಿರುದ್ಧನನ್ನು ಕಂಡು ಆದ ಅನುಭವವೇ ಭಯವಾಗಿ, ಬೇಡವಾಗಿ, ಅಪನಂಬಿಕೆಯಾಗಿ, ಬಿಡದಾಗಿ, ಬಿಡಿಸಿಕೊಳ ಬೇಕೆಂದೆನಿಸಿದಾಗ, ಆದರೂ ಅಡಚಣೆಯಾಗಿ, ಇಬ್ಬರ ಮಧ್ಯದಲ್ಲಿಯೇ ಬದುಕು ಉಳಿದು, ಬೆಳೆದು, ಅಂತ್ಯವಾಗುವದೇ ಅಸಾಧ್ಯವಾಗಿ, ಗಾಬರಿಯಾಗಿ, ಹಾಗಾಗಿ ಹೀಗಾಗಿ ಒಟ್ಟು ಒಂದು ನಮೂನೆಯಾಗಿ, ಯಾರಾದರೂ ತಕ್ಷಣ ಆಗಲೇ ಕೇಳಿದ್ದರೆ "ಯಾಕೋ-ಏನೋ! ಅಂತೂ, ಹಾಗೆ... ಹೀಗೆ" ಎಂದೆಲ್ಲ ಹಲುಗಿ ಬೀಳುತ್ತಿದ್ದೆಯೆಂದೆನಿಸಿತು ಆದರೂ ನನಗೆ ಅನಿಸಿದ್ದನ್ನು ಹೇಳುತ್ತಿದ್ದೆ ಎಂದೆನಿಸಲಿಲ್ಲ.

೩

ಐದು ಹೊಡೆಯುತ್ತದೆ. ಆಫೀಸು ಬಿಡುತ್ತದೆ. ಬಿಸಿಲು ಕಣ್ಣಿಗೆ ಹೊಡೆಯುವುದಿಲ್ಲವಾದರೂ ಸುಡು

ತ್ತಿದೆ. ಕಣ್ಣೆತ್ತಿ ನೋಡಿದರೆ ಕರಿ ಮೋಡಗಳು ಬಿಗಿ ದುಹಿ .... ಕಾಣುತ್ತದೆ. ರೂಮಿನ ಹತ್ತಿರ ಬರುತ್ತೇನೆ. ಅಟ್ಟ ಹತ್ತಿ ರೇಸಿನ ಮೇಲೆ ನಿಲ್ಲುತ್ತೇನೆ. ಒಮ್ಮೆ ಫ್ರೀಯಾಗಿ ಎಲ್ಲಾ ನೋಡುತ್ತೇನೆ. ಗಡಿಯಿಲ್ಲದೆ ದೃಷ್ಟಿ ದೂರದವರಗೆ ಹರಿಯುತ್ತದೆ. ಬಲಗಡೆಯ ಬೈಲು. ಬಿಲ್ಡಿಂಗಿನ ಹಿಂದಿನ ಗುಡ್ಡದ ಕೆಲವು ಭಾಗ ಅನಾಯಾಸವಾಗಿ ಕಣ್ಣಿಗೆ ಬೀಳುತ್ತದೆ. ಒಮ್ಮಿಂದೊಮ್ಮೆಲೇ ಬಿರುಸಾಗಿ ಗಾಳಿ ಬೀಸಿ ಬರುತ್ತದೆ. ಮೇಲೆ ನೋಡುತ್ತೇನೆ. ಮೋಡಗಳು ಹರಿದು ಚಿಂದಿಚಿಂದಿಯಾಗಿ ಹರಡತೊಡಗುತ್ತವೆ. ಮೇಲೆ ನೋಡುತ್ತಿದ್ದಂತೆ ಟೆರೇಸಿಗೆ ಟೆರೇಸೇ ಕಾಲ ಕೆಳಗೆ ಅಲುಗಾಡಿದ ಹಾಗೆ, ಮತ್ತೆ ನಾನೂ ಜೋಲಿ ತಪ್ಪಿದ ಹಾಗೆ ಅನಿಸಿ ಕೆಳಗೆ ನೋಡುತ್ತೇನೆ. ಕಪ್ಪಾಗುತ್ತದೆ. ಚಂದ್ರ ಮೂಡುತ್ತಾನೆ. ಮೋಡಗಳು ಸಾಲಾಗಿ ಅವನ ಕೆಳಗಡೆ ಹಾದು ಹೋಗುತ್ತವೆ. ಈಗ ಮೋಡಗಳು ಬೆಳ್ಳಗಾಗಿವೆ. ತುಂಡು ತುಂಡಾಗಿ ಆಕಾಶದ ತುಂಬ ಹರಡಿವೆ. ಆಕಾಶದ ಆಳತೆ ವಿಪರೀತವಾದಂತೆನಿಸುತ್ತದೆ. ಬೈಲಿನ ಅಗಲಕ್ಕೂ ಮೋಡದ ನೆರಳುಗಳು ಓಡಿಯಾಡುತ್ತವೆ. ಮೇಲೆ ನೋಡಿದರೆ ಚಂದ್ರ ರೇಸಿಗೆ ನಿಂತಂತೆ ತೋರುತ್ತದೆ. ಯಾವ ಹಕ್ಕಿಯೊ ಒಂದು ತರಹ ಕೂಗುತ್ತದೆ. ಅದರ ಧ್ವನಿ ಅಲ್ಲೆಲ್ಲೂ ಹೊಂದದ ಹಾಗೆ ನಾಶವಾಗುತ್ತದೆ. ಕೆಳಗೆ, ಮೇಲೆ ಎಲ್ಲ ನೋಡಿದರೂ ಬೆಳದಿಂಗಳಲ್ಲಿ ಎಲ್ಲಾ ಬಹು ವಿಸ್ತಾರವಾಗಿ ತೋರುತ್ತದ.

ಕೋಣೆಯ ಕೀಲಿ ತೆಗೆಯುತ್ತೇನೆ. ಒಳಗೆ ಹೋಗುತ್ತೇನೆ. ಕತ್ತಲೆ ಬಿಮ್ಮಗೆ ತುಂಬಿರುತ್ತದೆ. ಉಸಿರು ಬಿಸಿ ಎಲ್ಲಾ ಕಟ್ಟಿ ಬಿದ್ದಿದೆ. ಸ್ವಿಚ್‌ಗಾಗಿ ತಡಕಾಡುತ್ತೇನೆ. ಕುರುಡನಂತೆ ನಡೆಯುತ್ತೇನೆ. ಮಂಚ ಕಾಲಿಗೆ ತಡೆಯುತ್ತದೆ. ..ದಿಗೆ ಸರಿದರೆ ಕುರ್ಚಿ ಎಡವುತ್ತದೆ. ಕೈ ಮುಂದೆ ಮಾಡಿ ಗೋಡೆಯನ್ನು ಹುಡುಕಿದರೆ ಟೇಬಲ್ ಮೇಲಿನ ಪುಸ್ತಕಗಳು ಧಡ ಧಡ ಎಂದು ನೆಲಕ್ಕೆ ಬೀಳುತ್ತವೆ. ಪಾದವನ್ನು ನೆಲಕ್ಕೆ ಸವರುತ್ತ ಮುಂದೆ ಮುಂದೆ ಹೋಗುತ್ತೇನೆ. ಕಿಡಕಿಯ ಬಳಿ ಬಂದಿರುತ್ತೇನೆ. ಬಾಗಿಲು ತೆರೆಯುತ್ತೇನೆ. ಹೊರಗಿನ ಬೆಳುದಿಂಗಳು ಒಳಗೆ ಬೀಳುತ್ತದೆ. ಕಿಡಕಿಯ ಸರಳ ನೆರಳುಗಳು ಕೋಣೆಯ ಕೆಂಪು ನೆಲದ ಮೇಲೆ ಮೂಡುತ್ತವೆ. ನನ್ನ ನೆರಳೂ ಅವುಗಳ ಸಂದಿ ಸಂದಿಗಳಲ್ಲಿ ಸಿಕ್ಕು ಮೂಡಿರುತ್ತದೆ. ಗಾಳಿ ತಂಪಾಗಿ ಬೀಸುತ್ತದೆ. ಹೊರಗೆ ನೋಡಿದರೆ ಅಪ್ಪುಟದ್ದ ರಸ್ತೆ ಕಾಣುತ್ತದೆ. ಆಚೆ–ಈಚೆಯ ಮರಗಳು ಸಾಲ್ಹಿಡಿದು ಸಾಗಿರುವುದರಿಂದ ಅಲ್ಲಿ ರಸ್ತೆ ಹೋಗಿರುವುದನ್ನು ಗುರುತಿಸುತ್ತೇನೆ. ಯಾರ್‍ಯಾರೋ ಮಾತನಾಡದೆ ಅಲ್ಲಲ್ಲಿ ಹೋಗುವುದು ಬರುವುದು ಕಾಣುತ್ತಿದೆ. ಜೋರಿನಿಂದ ಯಾರೋ ಈ ಕಡೆ ಬರುವಂತಿದೆ. ರೂಮಿನ ಕಡೆ ತಿರುಗುತ್ತಾಳೆ. ಅಟ್ಟ ಹತ್ತುವ ಸಪ್ಪಳ ಕೇಳಿಸುತ್ತದೆ. ರೂಮಿನ ಬಾಗಿಲಲ್ಲಿ ನಿಂತು ಕತ್ತಲಲ್ಲಿ ಹಣಿಕಿ ಹಾಕುತ್ತಾಳೆ.

"ಯಾರಿದ್ದೀರಿ? ಎನುತ್ತಾಳೆ?" ರೀಟಾ.

"ನಾನು " ಎನುತ್ತೇನೆ.

"ಲೈಟ ಹಾಕಲೇಯಿಲ್ಲ" ಎಂದು ಒಳಗೆ ಬರುತ್ತಾಳೆ. ಲೈಟ ಹಾಕುತ್ತೇನೆ.

'ರೆಬೆಲ್ಲೊ ಎಲ್ಲಿ?" ಎಂಬ ಕೇಳುವಾಗ ಅವಳ ಮುಖ ಚಪ್ಪೆಯಾಗಿರುತ್ತವೆ.



"ರೂಮಿನಲ್ಲಿ ನೋಡಲಿಲ್ವಾ?"

'ರೂಮಿನಲ್ಲಿಲ್ಲ?

"ಇನೂ ಪೇಟೆಯಿಂದ ಬಂದಿರಲಿಕ್ಕಿಲ್ಲ. ಕೂತುಕೊ" ಎನ್ನುತ್ತೇನೆ. ಕೂಡ್ರುತ್ತಾಳೆ. ಮರುಕ್ಷಣದಲ್ಲಿ ಏಳುತ್ತಾಳೆ. "ಏನು ಸೆಕೆಯೋ!" ಎಂದು ಅಂಗೈ ಅಗಲದ ಕರ್ಚೀಫಿನಿಂದ ಅಪ್ಪಗಲದ ಮುಖ ಒರೆಸಿಕೊಳ್ಳುತ್ತಾಳೆ. ಈಗ ಮುಖ ಕೆಂಪಗಾಗುತ್ತದೆ.

"ಹತ್ತು ಗಂಟೆಗಲ್ವಾ ಅವನು ರೂಮಿಗೆ ಬರಲು ಹೇಳಿದ್ದು ?" ಎಂದು ನನ್ನ ಕಡೆ ನೋಡಿ "ಆಗ ನೀನು ಇದ್ದೆಯಲ್ಲ" ಎಂದು ಸಾಕ್ಷಿ ತೆಗೆದುಕೊಳ್ಳುತ್ತಾಳೆ.

"ಈಗೆಷ್ಟು ಗಂಟೆ?" ಎಂದು ತನ್ನ ವಾಚು ನೋಡುತ್ತ ನನನು ಕೇಳುತ್ತಾಳೆ. "ಹತ್ತೂವರೆಗೆ ಬಂದಿತು" ಎಂದು ಮತ್ತೊಮ್ಮೆ ಮುಖ ಕುತ್ತಿಗೆಯನ್ನೆಲ್ಲ ಒರೆಸಿಕೊಳುತ್ತಾಳೆ. "ಸಾಧ ವಿಲ್ಲ..." "ಹೊರಗೆ ಟೆರೇಸಿಗೆ ಹೋಗುವಾ" ಎಂದು ಒಂದು ದಿಂಬನೂ ಚಾಪೆಯನ್ನೂ ಕೈಗೆತ್ತಿಕೊಳ್ಳುತ್ತಾಳೆ. "ಹೊರಗೆ ಗಾಳಿಯೂ ಉಂಟು. ಬೆಳುದಿಂಗಳು ಉಂಟು" ಎಂದು ಹಾಡಿದ ಹಾಗೆ ಮಾತನಾಡುತ್ತಾಳೆ. ಚಾಪೆ ಹಾಸಿ ಅದರ ಮೇಲೆ ಕುಳಿತಾಗ ಎಣ್ಣೆ ಹಾಕದ ಅವಳ ಕೂದಲು ರಾಶಿ-ರಾ... ...ಹಾರಾಡುತ್ತವೆ. ಒಪ್ಪೆಯಾದ ತುಟಿಗಳ ಮೇಲ ಬೆಳದಿಂಗಳು ಮಿಂಚುತ್ತದೆ. ತಕ್ಷಣ ಎದ್ದು ಟೆರೇಸಿನ ತುಂಬಾ ಅಡ್ಡಾಡುತ್ತಾಳೆ. ನನ್ನ ಕಡೆ ಬೆನ್ನು ಮಾಡಿದಾಗ, ಬೆನ್ನು ಕುಂಡೆಯ ಕಾಲುಭಾಗವೆಲ್ಲ ಕಾಣುತ್ತದೆ. ಟೆರೇಸಿನ ಮೋಟುಗೋಡೆಯನ್ನು ಹಿಡಿದು ಕೆಳಗಿನ ರಸ್ತೆಯನ್ನು ನೋಡುತ್ತಾಳೆ. ರೆಬೆಲ್ಲೋ ಹೆಂಡ ಗಿಂಡ ಕುಡೀತಾನಾ?" ಎಂದು ಸಟ ಸಟ ನನ್ನ ಬಳಿ ಬಂದು ಕೇಳುತ್ತಾಳೆ.

"ಏನೋ!" ಎನ್ನುತ್ತೇನೆ.

"ಕ್ಯಾಬರೆ ಕಾಕ್‌ಟೇಲ್‌ಗೆ ಹೋಗುತ್ತಾನೊ?" ಬಳಿ ಬಂದು ಕುಳಿತು ಮುಖ ನೋಡುತ್ತಾಳೆ.

"ನನಗೆ ಸರಿ ಗೊತ್ತಿಲ್ಲ. ಹೋಗಬಹುದು. ಅಥವಾ ಬಿಡಬಹುದು." ಅವಳಿಗೆ ನನ್ನ ಮೇಲೆ ಸಿಟ್ಟು ಬರುತ್ತದೆ. ಸ್ನೇಹಿತನ ವಿಷಯದಲ್ಲಿ ಇನ್‌ಡಿಫರೆನ್ಸ್ ಇರ ಕೂಡದೆಂದು ಜೋರು ಮಾಡುತ್ತಾಳೆ. ಬೆಳುದಿಂಗಳು ಸ್ವಚ್ಛವಾಗಿ ಬಿದ್ದಿದೆ. ಅವಳು ಆಯಾಸವಾದವಳಂತೆ ತಲೆಯ ಹಿಂದುಗಡೆ ಕೈ ಎರಡನ್ನೂ ಸೇರಿಸಿಕೊಂಡು ದಿಂಬಿನ ಮೇಲೆ ತಲೆಯಿಟ್ಟು ಅಂಗಾತ ಮಲಗುತ್ತಾಳೆ. ಮೇಲೆ ನೋಡುತ್ತಾ ಸುಮ್ಮನೆ ಕಣ್ಣು ಬಿಡುತ್ತಾಳೆ. ಎದೆ ಮೇಲೆ ಕೆಳಗೆ ಆಗುತ್ತಿರುತ್ತದೆ. ಆಕಾಶ ತೀರಾ ಸ್ವಚ್ಛವಾಗಿದೆ. ಮೈ ಮೇಲೆಲ್ಲ ಬೆಳುದಿಂಗಳು ಬಿದ್ದಿದೆ. ಅವಳ ಹೊಕ್ಕುಳಲ್ಲಿ


ಬೆಡಗಿನಿಂದ ಮೆರೆಯಿರಿ
ಝುಗಝುಗಿಸುತಲಿ
ಬಂದಿದೆ ದೀಪಾವಳಿ
ದೀಪಾವಳಿ ಉತ್ಸವ. ಎಲ್ಲರಲ್ಲೂ ಉತ್ಸಾಹ.
ಹೊಸ ಸಾಮಾನು, ಹೊಸ ಪಾತ್ರೆಗಳು,
ಹೊಸ ಬಟ್ಟೆಬರೆ, ಹೊಸ ಪಾದರಕ್ಷೆಗಳ ಸಮಾಗಮ.
ಬಾಟಾರವರ ಹಾರ್ದಿಕ ಶುಭಾಶಯಗಳನ್ನು
ಸ್ವೀಕರಿಸಿರಿ. ಹರ್ಷಭರಿತ ದೀಪಾವಳಿಗಾಗಿ
ಪರಿವಾರ ಸಮೇತರಾಗಿ ಬಾಟಾ ಅಂಗಡಿಯಿಂದ
ಪಾದರಕ್ಷೆ ಅರಿಸಿರಿ.
41
ಸ್ಯಾಜ್ 4-8
16
ಸ್ಯಾಜ್ 9-11
12-1, 2-5
73
ಸ್ಯಾಜ್ 9-11
12-1, 2-5
ಸನ್‌ಡೇ 37
ಸ್ಯಾಜ್ 5-10
ಸ್ಯಾಜ್ 2-6
ಸ್ಯಾಜ್ S,M,L
03
ಸ್ಯಾಜ್ 2-7
Bata
Bata
Bata
Bata

ಬೆಳುದಿಂಗಳು ತುಂಬಿದೆ. ಕಿಬ್ಬೊಟ್ಟೆಯ ವರೆಗೂ ಸರಿದು ಹೋದ ಸೀರೆ ತೊಡೆಯ ಅಚೆ-ಈಚೆ ಹರಡಿ ಬಿದ್ದಿದೆ. ಗಾಳಿ ರುಮ್ ಎಂದು ಬೀಸಿದಾಗ ಅವಳು ಎದ್ದು ಕುಳಿತು "ರೆಬೆಲ್ಲೊ ಹೀಗೆ ಮಾಡುವುದು ಸರಿಯೇ?" ಎಂದು ಎದ್ದು ಕುಳಿತು ನನ್ನ ಕೈ ಹಿಡಿದುಕೊಳ್ಳುತ್ತಾಳೆ. "ಅವನಿಗಾಗಿ ನಾನು ಇಷ್ಟು ರಾತ್ರಿ ಬರಲಿಲ್ಲವೆ?" ಎನ್ನುತ್ತ ನನ್ನ ತೊಡೆಯ ಮೇಲೆ ಮುಖ ಕವಚಿ ಅಳುತ್ತಾಳೆ. ಅವಳ ತಲೆಯ ಮೇಲೆ ಕೈಯಾಡಿಸುತ್ತೇನೆ. ಬೆನ್ನು ತುಂಬಾ ಸುಂದರವಾಗಿ ತೋರುತ್ತದೆ. ತೆಳ್ಳನ ಬ್ಲೌಸಿನ ಒಳಗಡೆಯ ಎವರ್‌ಫಿಟ್ ಕೈಗೆ ತಗಲುತ್ತದೆ. ಅವಳು ಮುಖವೆತ್ತಿ "ರೆಬೆಲ್ಲೋ ಒಳ್ಳೆಯವನಲ್ಲವೆ?" ಎಂದು ಸಮಾಧಾನ ಮಾಡಿಕೊಳ್ಳುವಂತೆ ಕೇಳುತ್ತಾಳೆ. ಸುಮ್ಮನೆ ಕೂಡುತ್ತಾಳೆ. "ಇನ್ನೂ ಅವನು ಬರಲಿಲ್ಲ. ಬರ್‍ತಾನಲ್ಲವೆ?" ಎಂದು ಮತ್ತೆ ಅಳತೊಡಗುತ್ತಾಳೆ. ಗಾಳಿ ಬೀಸಿ ಬಂದಾಗ ಚಳಿಯಾಗುತ್ತದೆ. "ಒಳಗೆ ಹೋಗೋಣವೆ?" ಎಂದು ಚಾಪೆ ಸುತ್ತುತ್ತಾಳೆ. ಒಳಗೆ ಹೋಗುತ್ತೇವೆ. ಮಂಚದ ಮೇಲೆ ಕುಳಿತು ಕೈ ಹಿಡಿದುಕೊಂಡು "ರೆಬೆಲ್ಲೋ ಆಫೀಸಿನಿಂದ ರೂಮಿಗೆ ಬರಲಿಲ್ಲವೆ?" ಎಂದು ಮುಂದುವರಿದು, "ಬಂದಿರಲಿಕ್ಕಿಲ್ಲ. ಅವನು ತುಂಬಾ ಗಾಬರಿಯಾಗಿದ್ದಾನೆ. ನಾನು ಅವನ ಹತ್ತಿರ ಆ ವಿಷಯ ಹೇಳಿದಂದಿನಿಂದ ಹಾಗೆಯೇ ಮಾಡುತ್ತಾನೆ" ಮಾತು ಮುಗಿದಾಗ ಮುಖ ಕೆಂಪಗಾಗುತ್ತದೆ. ನಾಚಿಕೆಯಿಂದ ಮುಖ ತಗ್ಗಿಸುತ್ತಾಳೆ. ಆಗ ಬೆವರ ಹನಿಗಳು ಮೂಡುತ್ತವೆ. ಹೀಗೆಯೇ ಕುಳಿತಿರುತ್ತಾಳೆ. "ನಾನೇನು ಮಾಡಬೇಕು. ಹೇಳು. ಹನ್ನೆರಡು ಆಗಿ ಹೋಯ್ತು...." ನಿಂತ, ತಕ್ಷಣ, "ಮೂರು ತಿಂಗಳಾದರೂ ಎಬಾರ್ಷನ್ ಮಾಡಿಸಲಿಕ್ಕೆ ಬರುತ್ತದೆಯಲ್ಲವೇ?" ಎಂದು ಕೇಳಿ ಎಚ್ಚರ ತಪ್ಪಿದವಳಂತೆ ಮಂಚದ ಮೇಲೆ ಎರಡೂ ಕೈಯಿಂದ ಕಣ್ಣು ಮುಚ್ಚಿ ಮಲಗುತ್ತಾಳೆ. ಈಗ ಎದ್ದು "ಅವನೂ ಬರಲಿಕ್ಕಿಲ್ಲ. ಅವನು ಬರುವ ವರೆಗೆ ನಾನಿಲ್ಲಿ ಮಲಗುತ್ತೇನೆ. ನಿನಗೆ ಟೆರೇಸಿನ ಮೇಲೆ ಥಂಡಿಯಾಗಲಿಕ್ಕಿಲ್ಲವೆ?" ಎಂದು ನನ್ನ ಹಾಸಿಗೆಯನ್ನು ಟೆರೇಸಿನ ಮೇಲೆ ತಂದು ಬಿಚ್ಚುತ್ತಾಳೆ. "ಅವನು ಬಂದರೆ ನಾನಿಲ್ಲೇ ಮಲಗಿದ್ದೇನೆಂದು ಹೇಳು" ಎಂದು ಕೋಣೆಯ ಒಳಗೆ ಹೋಗಿ ಬಾಗಿಲು ಮುಂದೆ ಮಾಡಿಕೊಳ್ಳುತ್ತಾಳೆ.

ಹಾಸಿಗೆಯ ಮೇಲೆ ಅಂಗಾತ ಮಲಗುತ್ತೇನೆ. ಅಗಲದ ಆಕಾಶ ನಾನು ಚಿಕ್ಕವನಾಗಿ ಕಾಣುತ್ತೇನೆ. ಚಾದರ ತಲೆ ತುಂಬ ಹೊದ್ದು ಉಸಿರು ಕಟ್ಟಿದಂತಾಗಿ ಮುಸುಕು ತೆಗೆಯುತ್ತೇನೆ. ಟೆರೇಸಿನ ಗಿಡ ಗೋಡೆಗಳು ತುಂಬಾ ಮೋಟಕಾಗಿ ಕಾಣುತ್ತವೆ. ನಾನೂ, ನನ್ನ ಹಾಸಿಗೆ ಎಲ್ಲಾ ಅಂಗೈ ಅಗಲವೆಂದು ಅನಿಸುತ್ತದೆ. ಕಾಲು ಅಗಲ ಮಾಡಿ ಕೈ ಅಗಲಿಸಿ ದೊಡ್ಡವನಾಗಬಯಸುತ್ತೇನೆ. ಮತ್ತೂ ಸಣ್ಣವನಾಗಿ ಕಂಡು ಎದ್ದು ನಿಲ್ಲುತ್ತೇನೆ. ಆಕಾಶ ಬಹು ವಿಸ್ತಾರವಾಗಿ ತೋರಿದಾಗ ಮಲಗಿ ಮಗ್ಗಲು ಮಾಡಿಕೊಂಡಾಗ ಒಳಗಿನಿಂದ ಗೊರಕೆ ಕೇಳುತ್ತದೆ. ಕಣ್ಣು ಬಿಚ್ಚಿದೆ. ಬೆಳಗಾಗಿರುತ್ತದೆ. ಹಾಸಿಗೆ ಸುತ್ತಿ ಕೋಣೆಯ ಬಾಗಿಲು ದೂಡುತ್ತೇನೆ. ತೆರೆಯುತ್ತದೆ. ಮಂಚದ ಮೇಲೆ ಹಾಸಿಗೆ ಇಟ್ಟು ವಾಶ್ ಬೇಸಿನ್‌ಗೆ ಹೋಗಿ, ಬಿನಾಕಾ ಒತ್ತಿ, ಬ್ರಶ್‌ಗೆ ಹಚ್ಚಿ ಹಲ್ಲುಜ್ಜುತ್ತೇನೆ. ಮುಖ ತೊಳೆಯುವಾಗ ಕೈಗೆ ಮೊಂಡು ಗಡ್ಡ ಚುಚ್ಚುತ್ತದೆ. ರೇಜರ್ ಸೆಟ್ ಹುಡುಕಿಕೊಳ್ಳುತ್ತೇನೆ. ಶೇವ್



ಬೀರು-ಬಾರು

ನಿನ್ನ ನಗೆ ಶೀರೆ, ಬುರುಗು ಬುರುಗಿನ
ಕಿಂಗ್ ಫಿಶರ್ ಬೀರು
ನಿನ್ನಪ್ಪುಗೆ — ಉನ್ಮಾದಕೆ ಕರೆವ
ವಿಸ್ಕಿ ಬ್ರ್ಯಾಂಡಿಯ ಬಾರು

— ಶ್ರೀನಿವಾಸ ಕುಲಕರ್ಣಿ

ಮುಗಿಸಿ ತಣ್ಣೀರ ಸ್ನಾನ ಮಾಡುತ್ತೇನೆ. ಒಂಭತ್ತು ಹೊಡೆಯುತ್ತದೆ. ಸ್ವಲ್ಪ ಹಸಿವೂ ಅನ್ನಿಸುತ್ತದೆ. ಹ್ಯಾಂಗರಿಗೆ ತೂಗು ಬಿದ್ದ ಪ್ಯಾಂಟೊಂದನು ಹಾಕಿಕೊಳ್ಳುತ್ತೇನೆ. 'ಗುರು' ಒಂದನ್ನು ಹಾಕಿಕೊಂಡು ಪುಸ್ತಕದ ಕಪಾಟಿನ ಹತ್ತಿರ ಹೋಗುತ್ತೇನೆ. ಒಂದೊಂದೇ ತೆಗೆದು ನೋಡುತ್ತೇನೆ. ಎಲ್ಲಾ ನೋಡಿದರೂ ಮತ್ತೆ ಅದೇ ಪುಸ್ತಕವನ್ನು ಕೈಗೆತ್ತಿಕೊಂಡು ಕೋಣೆಯ ಹೊರಬೀಳುತ್ತೇನೆ. ರಸ್ತೆಯಲ್ಲಿ ಜನ ಒಳ್ಳೇ ಫ್ರೆಶ್ ಆಗಿ ಓಡಾಡುತ್ತಿದ್ದಾರೆ. ಆಫೀಸಿನ ರಸ್ತೆಯಲ್ಲಿ ಮುಕ್ಕಾಲು ಮೈಲು ಹೋಗುತ್ತೇನೆ. ಎಡಗಡೆಯ ಸಿಟಿ ಇಲೈಟಿಗೆ ನುಗ್ಗುತ್ತೇನೆ. ಟೋಸ್ಟಿಗೆ ಆರ್ಡರ್ ಕೊಟ್ಟು ಸಿಗರೇಟು ಹಚ್ಚುತ್ತೇನೆ. ಎದುರಿರುವ ದಿನಪತ್ರಿಕೆಯನ್ನು ಎತ್ತಿಕೊಂಡು ಕಣ್ಣು ಹಾಯಿಸುತ್ತೇನೆ. ಕ್ರಿಸ್‌ಮಸ್‌ದಂದೂ ವ್ಹಿಟ್‌ನಾಮ್‌ದ ಮೇಲೆ ಅಮೇರಿಕೆಯ ದಾಳಿ. ಬಾಂಬುಗಳ ಸುರಿಮಳೆ. ಫೋರ್ಕ್ ಎಡಗೈಗೆ ಸಿಗಿಸಿ ಟೋಸ್ಟು ತುಂಡು ಮಾಡಿ ಬಾಯಿಗಿಡುತ್ತೇನೆ. ಅಷ್ಟೊತ್ತಿಗೆ ಪೇಪರಿನ ಎಲ್ಲಾ ಪುಟ ತಿರುವಿಯಾಗಿರುತ್ತದೆ. ಕಾಫಿಯ ವಾಸನೆ ಬರುತ್ತದೆ. ಕುಡಿದು ಖಾಲಿ ಮಾಡಿ ಸಪ್ಪಳವಾಗುವಂತೆ ಬಸಿಯ ಮೇಲಿಟ್ಟಾಗ ಬಿಲ್ ತಂದು ಎದುರಿಗಿಡುತ್ತಾನೆ. ಎದುರಿನ ವಾಲ್‌ಕ್ಲಾಕ್ ಇನ್ನೂ ಹತ್ತರ ಹತ್ತಿರವಿರುತ್ತದೆ. ವಿಲ್ಸ್‌ಗೆ ಕಡ್ಡಿಗೀರಿ ಬಾಯಿಗಿಡುತ್ತೇನೆ. ಟೇಬಲ್ ಎದುರಿಗೆ ಈಗ ಯಾರೋ ಬಂದು ಕುಳಿತಿರುತ್ತಾರೆ. ಹೊಗೆ ಮುಖಕ್ಕೆ ಬಡಿದಾಗ ಒಂದು ತರಹ ಮುಖ ಮಾಡುತ್ತೇನೆ. ನಾನು ಏಳುತ್ತೇನೆ. ಕೌಂಟರಿನಲ್ಲಿ ಬಿಲ್ ಪೇ ಮಾಡಿ ರಸ್ತೆಗಿಳಿಯುತ್ತೇನೆ.

ಆಫೀಸಿಗೆ ಬಂದು ಮುಟ್ಟುತ್ತೇನೆ. ವಿಶೇಷ ತಯಾರಿ ಏನೋ ನಡೆದಿರುತ್ತದೆ. ನ್ಯೂ ಬಾಸ್ ಬಂದಿದ್ದಾರೆ. ವೆಲ್‌ಕಮ್‌ನ ತಯಾರಿ ಎಂದು ಹತ್ತಿರದ ಟೇಬಲ್ಲಿನ ರಾಜೇಶ ಹೇಳುತ್ತಾನೆ. ಹನ್ನೊಂದಕ್ಕೆ ಲೈಟ್ ರೆಫ್ರೆಶ್‌ಮೆಂಟ್ ಬಾಸ್‌ಗೆ ಇನ್‌ಟ್ರೊಡಕ್ಶನ್ ಎಂದು ಅವನು ಉತ್ಸಾಹದಿಂದ ಮಾತಾಡುತ್ತಾನೆ. ಎಲ್ಲರ ಮುಖದ ಮೇಲೂ ಗೆಲುವು ಮೂಡಿದಂತಿರುತ್ತದೆ. That person ಎಂದು ಮಾತಾಡಿದಾಗ ಹಿಂದಿನ ಬಾಸ್ ಎಂದು ಅರ್ಥ ಮಾಡಿಕೊಳ್ಳುತ್ತೇನೆ. That Person had an eye on Rita ಎನ್ನುತ್ತಾನೆ. ರಾಜೇಶ್ ಕಿವಿಯಲ್ಲಿ, ಆ ದಿನ you were on Leave ನಿಮಗೆ ಗೊತ್ತಿಲ್ಲ. ಸಣ್ಣ ಗದ್ದಲವೇ ಆಯಿತು. besides ಅವನು ಫಸ್ಟ್ ರೇಟ ಕರಪ್ಟ ಇದ್ದ-ಎಂದು ಮುಂದುವರಿಸುತ್ತಾನೆ. How is it that your friend is on Leave? ಎನ್ನುತ್ತಾನೆ. for three months ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾನೆ. But Rita has come that's wonder ಎಂದು ಮುಗುಳು ನಗುತ್ತಾನೆ. ಏನೋ ಗೋಟಾಳಿಯಂತೆ ಎಂದು ಬಡ ಬಡ ಮಾತು ಮುಗಿಸುತ್ತಾನೆ. ರೀಟಾ ಟೈಪ್ ಮಾಡುತ್ತಿದ್ದಾಳೆ. ಡ್ರಾಫ್ಟನ್ನು ತದೇಕಚಿತ್ತದಿಂದ ನೋಡುತ್ತಾಳೆ. ಕಾರಿನ ಸಪ್ಪಳ ಕೇಳುತ್ತದೆ. ಎಲ್ಲರೂ ಗಡಿಬಿಡಿಯಿಂದ ಆಫೀಸಿನ ಹೊರಗೆ ಬೀಳುತ್ತಾರೆ. ಕಾರಿನಿಂದ ಇಳಿದವನು ತುಂಬಾ ಸ್ಮಾರ್ಟ್ ಇದ್ದಾನೆ ಎನ್ನುತ್ತಾರೆ. Direct recruit ಎಂದು ಅಭಿಮಾನ ತೋರುತ್ತಾರೆ. He is quick in motion and speech ಎಂದು ಮಾತಾಡತೊಡಗುತ್ತಾರೆ. Meeting Hall ನಲ್ಲಿ ಎಲ್ಲ ಸೇರುತ್ತಾರೆ. ಫರ್ಸ್ಟ್ ಅಸಿಸ್ಟಂಟ ಯಾಕೋ ಅಷ್ಟು ಗೆಲುವಿನಲ್ಲಿ ಇರುವುದಿಲ್ಲ. ಮಾಲೆ, ಹೂಗುಚ್ಛ ಎಲ್ಲಾ ಮುಗಿದ ಮೇಲೆ ಎರಡು ಮಾತಾಡಬೇಕೆಂದು ರಿಕ್ವೆಸ್ಟ ಮಾಡುತ್ತಾರೆ. ಎಲ್ಲರೂ ಚಪ್ಪಾಳೆ ತಟ್ಟುತ್ತಾರೆ. ಮೈ ಫ್ರೆಂಡ್ ಎಂದು ಆತ ಸಂಬೋಧಿಸಿ ಎರಡು ನಿಮಿಷ ಟ್ರಿಮ್ ಆಗಿ ನಿಂತು ನಾವೆಲ್ಲಾ ಪ್ರಾಮಾಣಿಕವಾಗಿ ದುಡಿಬೇಕು. ಬ್ಯೂರಾಕ್ರಸಿಯ ಮೇಲಿನ ಚಾರ್ಜುಗಳನ್ನು ತೆಗೆದು ಹಾಕಬೇಕು. ಇಂಡಿಯ ಪ್ರಗತಿ ಹೊಂದಬೇಕಾದರೆ ಆಫೀಸರ್ಸ ನಾವೆಲ್ಲ ಸಿನ್ಸಿಯರಾಗಿ, ನಾನ್‌ಕರಪ್ಟ ಆಗಿ, ಕೆಲಸ ಮಾಡಬೇಕು. I believe you all ಎಂದು ಮುಂತಾಗಿ ಮಾತಾಡಿ ಮುಗಿಸುತ್ತಾನೆ. ಪರವಾಗಿಲ್ಲ, ಬಾಸ್ ಎಂದುಕೊಳ್ಳುತ್ತಾರೆ. ತಮ್ಮ ತಮ್ಮ ಟೇಬಲ್ಲಿಗೆ ಬಂದು ಅಂಟಿಕೊಳ್ಳುತ್ತಾರೆ. ಒಳೆ ಬೀಸಿಯಾಯಿತು. ತಲೆ ತಗ್ಗಿಸಿ ವರ್ಕ ಮಾಡುತ್ತಾರೆ. ಬೆಲ್ ಆದ ತಕ್ಷಣ ಬಾಸ್ ತಮಗೆ ಹೇಳಿ ಕಳಿಸಿದನೆಂದು ಏಳುವ ತಯಾರಿಯಲ್ಲಿರುತ್ತಾರೆ. ಟೇಬಲ್ಲಿಂದ ಟೇಬಲ್ಲಿಗೆ ಪ್ಯೂನ್ ಫೈಲು ಹೊತ್ತು ಓಡಾಡುತ್ತಾನೆ. ಅವನು ಹೋಗುತ್ತಾನೆ. ಇವನು ಹೋಗುತ್ತಾನೆ. How understanding and kind ಎಂದು ತಿರುಗಿ ಬಂದವರೆಲ್ಲ ಬಾಸ್‌ನನ್ನು ಹೊಗಳುತ್ತಾರೆ. ಹಳೆ ಫೈಲುಗಳನ್ನೆಲ್ಲ within a week ಡಿಸ್ಪರ್ಸ ಮಾಡಬೇಕಂತೆ-ಎನ್ನುತ್ತಾನೆ. ಒಂದು ಹೊಡೆಯುತ್ತದೆ. ರೀಟಾ ನನ್ನ ಟೇಬಲ್ ಬಳಿ ಬಂದು 'ಏಳಿ' ಎನ್ನುತ್ತಾಳೆ. ಮುನ್ಸಿಪಲ್ ಗಾರ್ಡನ್ ಕಡೆ ನಾವು ಹೋಗುತ್ತೇವೆ. ಟ್ಯಾಂಕಿಗೆ ಸ್ವಲ್ಪ ದೂರದಲ್ಲಿ ಹಸಿರು ಹುಲ್ಲುಗಳ ಮೇಲೆ ಕೂಡುತ್ತೇವೆ. ಮರದ ನೆರಳು ದಟ್ಟವಾಗಿ ಬಿದ್ದಿದೆ.

ತಂಪೆನ್ನಿಸುತ್ತದೆ. ಅವಳು ಟಿಫಿನ್ ಕ್ಯಾರಿಯರ್ ತೆಗೆದು ಬ್ರೆಡ್ ಸ್ಲೈಸಿಗೆ ಜ್ಯಾಮ್ ಹಚ್ಚಿ ನನ್ನ ಕೈಗೆ ಕೊಡುತ್ತಾಳೆ. "ರೆಬೆಲ್ಲೋ ಲೀವಿನ ಮೇಲೆ ಹೋಗಿದ್ದಾನಂತೆ. ಥ್ಯಾಂಕ್‌ಗಾಡ್ ರಿಸೈನ್ ಮಾಡಲಿಲ್ಲ!" ಎನ್ನುತ್ತ ತಾನು ಒಂದು ತುಂಡನ್ನು ತಿನ್ನತೊಡಗುತ್ತಾಳೆ. ತಿನ್ನುತ್ತಿದ್ದರೂ ಅವಳ ಮುಖ ಬಾಡಿದೆ. ತುಂಬಾ ಅಸಹಾಯಕಳ ಹಾಗೆ ತೋರುತ್ತಾಳೆ. ತೋಟದ ತುಂಬಾ ಗಾಳಿ ಬೀಸಿ ಬರುತ್ತದೆ. ಸಣ್ಣ ಪುಟ್ಟ ಹೂವು ಹೊತ್ತು ನಿಂತ ಗಿಡಗಳು ಅಲುಗಾಡುತ್ತವೆ. ನಮ್ಮ ಸುತ್ತ ಆಚೆ–ಈಚೆ ಎಲ್ಲ ಪೇಟೆಗೆ ಬಂದ ಹಳ್ಳಿಯ ಜನ ಗಂಟು ಬಿಚ್ಚಿ ಹಂಚಿಕೊಂಡು ತಿನ್ನುತ್ತಿದ್ದಾರೆ. ರೀಟಾ ಎದ್ದು ಬಳಿಯ ಟ್ಯಾಪಿನ ಹತ್ತಿರ ಹೋಗಿ ಡಬ್ಬಗಳನ್ನು ತೊಳೆದು ತರುತ್ತಾಳೆ. ಸರಿಯಾಗಿ ಜೋಡಿಸಿಡುತ್ತಾಳೆ. ಮರದ ಬೊಡ್ಡೆಗೆ ಆತು ಕಣ್ಣು ಮುಚ್ಚಿಕೊಳ್ಳುತ್ತಾಳೆ. ನಾನು ವಿಲ್ಸನ್ನು ಹಚ್ಚುತ್ತೇನೆ. ಈಗ ಕಣ್ಣು ಬಿಚ್ಚಿ ನಗೆಯಾಡುತ್ತಾಳೆ. "ಹೋಗೋಣವೊ" ಎಂದು ಏಳುತ್ತಾಳೆ.

ಐದು ಹೊಡೆದರೂ ಆಫೀಸಿನಿಂದ ಯಾರೂ ಎದ್ದು ಹೊರಡುವುದಿಲ್ಲ. ಎಲ್ಲ ಕಡೆಯೂ ಕಾಗದಗಳ ಜರ ಜರ ಸಪ್ಪಳ. ತುಂಬಾ ವೇಗ, ಏಕಾಗ್ರತೆ, ಪ್ರಾಮಾಣಿಕತೆ, ನಿಷ್ಠೆ, ಸಂಭಾವಿತತನ. ಬೆಲ್ಲು ಕಿಣರ್ರ್ ಎಂದು ಕಿರುಚಿದಾಗ ಆಫೀಸ ಕೋಣೆಗೆ ಪ್ಯೂನ್ ನುಗ್ಗಿದ. ಮೆಮೊ ಒಂದನ್ನು ಹೊತ್ತು ಸರ್ಕ್ಯುಲೇಟ್ ಮಾಡುತ್ತಾನೆ. ಇನ್ನು ಒಂದು ವಾರ ಆರರ ವರೆಗೆ ಎಲ್ಲರೂ ದಯವಿಟ್ಟು ಕೆಲಸ ಮಾಡಲು ಒಪ್ಪಬೇಕು. ಒಬ್ಬರ ಮುಖ ಒಬ್ಬರು ನೋಡುತ್ತಾರೆ. "ಬೆಳಗಿನಿಂದ ಪ್ರಾಮಾಣಿಕತೆ ಸಾಕಾಗಿ ಹೋಯಿತು" ಎನ್ನುತ್ತಾನೆ. ರಾಖೇಶ್. ನಾನು ನಗೆಯಾಡುತ್ತೇನೆ. I know you are a devil ಎನ್ನುತ್ತಾನೆ. "ಇವರ ರಿಜೀಮಿನಲ್ಲಿ ನೀವು ಪ್ರಮೋಶನ್ ಗಿಟ್ಟಿಸುತ್ತೀರಿ" ಎಂದು ಕಾಗದ ಪತ್ರಗಳಲ್ಲಿ ತಲೆ ಹಾಕುತ್ತೇನೆ. ಆರು ಹೊಡೆದಾಗ ಮತ್ತೂ ಬಾಸ್‌ನ ಒಪ್ಪಿಗೆಗಾಗಿ ಕೆಲಸ ಬಿಟ್ಟು ದಾರಿ ಕಾಯುತ್ತಿದ್ದಾರೆ. ಅವನು ಎದ್ದು ಆಫೀಸ್ ರೂಮಿನ ಹೊರಗೆ ಬಂದು ನಮ್ಮನ್ನೆಲ್ಲ ನೋಡಿ still you are working ಎಂದು ನಕ್ಕು ಹೊರಬಿದ್ದು ಕಾರು ಹತ್ತುತ್ತಾನೆ. Very difficult ಎನ್ನುತ್ತಾರೆ. ಏಳುತ್ತಾರೆ. ಜಿಂಜರಿಕೆ ಹತ್ತಿದ ಕಾಲು ಝಾಡಿಸಿಕೊಂಡು ಆಫೀಸ ಹೊರಬೀಳುತ್ತಾರೆ.

ಸಿಟಿ–ಇಲ್ಲೈಟ ಕಾಣುತ್ತಿತ್ತು. ಸಂಜೆಯಾಗುತ್ತಿತ್ತು. ಸ್ವಲ್ಪ ದೊಡ್ಡ ಹೆಜ್ಜೆ ಇಡುತ್ತಿದ್ದೆ. ಹಿಂದಿನಿಂದ 'ಅನಿ' ಎಂದು ಕೂಗುತ್ತಾರೆ. ಕವಿತಾ ಜೋರಾಗಿ ಬರುತ್ತಿದ್ದಾಳೆ. "ರೂಮಿಗೆ ಹೊರಟೆಯಲ್ಲಾ. ತಡವಾಗಿ ಹೋಯ್ತು, ಕಾಯ್ತಾ ಇದ್ದೆ" ಎಂದು ನನ್ನನ್ನು ಕೂಡಿಕೊಳ್ಳುತ್ತಾಳೆ. "ಸ್ವಲ್ಪ ಮನಸ್ಸು ನೆಮ್ಮದಿಯಾಗಿದೆ" ಎನ್ನುತ್ತಾಳೆ. Come on. ಇಲ್ಲೈಟಿಗೆ ಹೋಗೋಣ ಎನ್ನುತ್ತೇನೆ. ಫ್ಯಾಮಿಲಿ ರೂಮಿಗೆ ಹೋಗುತ್ತೇವೆ. ಮಾಣಿ ಒದರಿಕೊಳ್ಳುತ್ತಾನೆ. "ಏನು ಬೇಕು ಕವಿತಾ?" ಎಂದು ಕೇಳುತ್ತೇನೆ. "ನಿನಗೆ ಬೇಕಾದ್ದು," ಎಂದಾಗ ಟೋಸ್ಟಿಗೆ ಆರ್ಡರ ಮಾಡುತ್ತೇನೆ. ಸಿಗರೇಟು ಹಚ್ಚಿ ಹೊಗೆ ಬಿಟ್ಟಾಗ "ಅರೆ ನೀನು ಸಿಗರೇಟು ಬಿಡಲೇ" ಇಲ್ವೇ ಎನ್ನುತ್ತಾಳೆ. "ಓಹೋ ನೀನು ಹಳೇ ಕವಿತಾ!" ಎಂದು ನಕ್ಕಾಗ "ನೀನು ಹೊಸಬನೇನೊ ನೋಡಿದರೆ ಹಾಗೆ ಕಾಣ್ತ. ಆಗಿನಗಿಂತಲೂ ಈಗ ಕೆಂಪಾಗಿದ್ದಿ. ಕೆನ್ನೆ ಮೈ ಎಲ್ಲಾ ತುಂಬಿದೆ. ಸ್ಮಾರ್ಟ್ ಆಗಿದ್ದಿ!

"ಸಾಕು. ಸಾಕು. ಟೋಸ್ಟ್ ಬಂತು." ಎಂದು ಸಪ್ಲಾಯರನನ್ನು ತೋರಿಸಿ ಸುಮ್ಮನಿರಿಸುತ್ತೇನೆ. ಕವಿತಾ ತುಂಬಿ ಕೊಂಡಿದ್ದಾಳೆ. ಮುಖ ದುಂಡಗಾಗಿದೆ. ಕಣ್ಣುಗಳು ಜೋರಾಗಿ ಹೊಳೆಯುತ್ತಿವೆ. ಗಟ್ಟಿ ಹುಡುಗಿಯ ಹಾಗೆ ಕಾಣುತ್ತಾಳೆ.

"ನೀನು ವಿಷಯ ಅಲ್ಲಿಗೆ ನಿಲ್ಲಿಸಿದೆ. ಈಗ ಕೊಂಚ ಆರಾಂ ಅನ್ನಿಸಿದೆ. ಸುಮಾರು ಎರಡು ತಿಂಗಳಾಗಿ ಹೋಯ್ತೇನೊ ನಿನ್ನ ಭೇಟಿಯಾಗಿ! ಮಧ್ಯದಲ್ಲಿ ಮಸ್ತಾಗಿ ಹೋಯ್ತು" ಎಂದು ಸಪ್ಲಾಯರನ್ನು ಕರೆದು ಪೇಪರ್ ದೋಸೆಗೆ ಆರ್ಡರ ಕೊಡುತ್ತಾಳೆ" ನಾನೊಂದು ನೌಕರಿ ಹಿಡಿದಿದ್ದೇನೆ; ಮಿಶನ್ ಸ್ಕೂಲಿನಲ್ಲಿ ಈಗ ಮನೆನೋ ರೂಮೋ ಹುಡುಕಬೇಕಾಗಿದೆ. ಮನೆ ಬಿಟ್ಟು ಬಿಟ್ಟಿದ್ದೇನೆ."ಅಷ್ಟು ದೊಡ್ಡ ಕೂಗುವುದು ಸಾಲದೆ ಗಿರಾಕಿಗಳು ಸಪ್ಲಾಯರಿಗೆ ಜೋರು ಮಾಡುತ್ತಿದ್ದಾರೆ. ಎರಡಾಣೆ ದೋಸೆ ಕೊಟ್ಟು ನಲ್ವತ್ತು ಪೈಸೆ ಇಸಕೊಂಡರೆ ಅಂಗಡಿ ಮುಚ್ಚಬೇಕಾಗುತ್ತದೆ ಎಂದು ಕಾಲೇಜ್ ಸ್ಟೂಡೆಂಟ್ಸ ವಾರ್‌ನಿಂಗ್ ಕೊಡುತ್ತಿದ್ದಾರೆ. ಚಹಕ್ಕೆ ಸ್ಕ್ರೀನ್ ಹಾಕಿರಲೇಬೇಕು. ಇಲ್ಲವಾದರೆ ಗಂಟಲೇಕೆ ಕಹಿ ಎಂದು ವಾದ ಮಾಡುತ್ತಿದ್ದಾರೆ. ಕಾಫಿ ಕುಡಿದು ನಾವು ಏಳುತ್ತೇವೆ. ಕವಿತಾ ತುಂಬಾ ಗೆಲುವಾಗಿದ್ದಾಳೆ. ನನಗಿಂತ ಒಂದು ಹೆಜ್ಜೆ ಮುಂದಿಟ್ಟು ಮುಖ ತಿರುವಿ ತಿರುವಿ ಮಾತಾಡುತ್ತಾಳೆ. ಮಿಷನರಿ ಸ್ಕೂಲಿನಲ್ಲಿ ಪರ್ಸನಲ್ ಅಫೇರ್ಸ್‌ನಲ್ಲಿ ಕೈ ಹಾಕುವುದಿಲ್ಲ. ಎಬಿಲಿಟಿ ನೋಡುತ್ತಾರೆ. ಸೀದಾ ರೂಂಗೆ ಹೋಗುವುದೆ? ಗಾರ್ಡನ್ನಿಗೇಕೆ ಹೋಗಬಾರದು?" ಎಂದು ದಾರಿ ಬದಲಾಯಿಸುತ್ತಾಳೆ. ತೋಟದಲ್ಲಿ ಕಾಲಿಟ್ಟ ತಕ್ಷಣ "ಬೇಡ ಅನಿ" ಎನ್ನುತ್ತಾಳೆ. "ಯಾಕೆ? ಇಲ್ಲೇ ಒಂದ್ಹೊತ್ತು ಕೂಡ್ರೋಣ" ಎನ್ನುತ್ತೇನೆ. ಕಾರಂಜಿಯ ನೀರು ಚಿಮ್ಮಿ ಒದ್ದೆಯಾದ ಸ್ಥಳಕ್ಕಿಂತ ದೂರ ಕೂಡುತ್ತೇವೆ. "ನನಗೆ ಇಲ್ಲಿ ಬಂದ ತಕ್ಷಣ ಹಿಂದಿನದೆಲ್ಲ ನೆನಪಾಗಿ ಬಿಡ್ತು. ಆಗ ನಾವು ಕಾಲೇಜಿನಲ್ಲಿ........."

"ನಿಮ್ಮ ಸ್ಕೂಲಿನ ಹೆಡ್‌ಮಿಸ್ಟ್ರೆಸ್ ಯಾರು?" ಎಂದು ಕೇಳುತ್ತೇನೆ. ಎಷ್ಟು ಸ್ಟಾಫ್, ಸ್ಟೂಡೆಂಟ್ಸ್ ಎಂದು ವಿಚಾರಿಸುತ್ತೇನೆ. ಟೀಚರ್ಸ ಜಾಬು ಖುಶಿಯ ಕೆಲಸ ಎನ್ನುತ್ತೇನೆ. ದೀಪಗಳು ಹತ್ತಿಕೊಳ್ಳುತ್ತವೆ. ಸೇಂಗಾದ ಹುಡುಗ ಬಳಿ ಬರುತ್ತಾನೆ. ಹತ್ತು ಪೈಸೆಯ ಎರಡು ಪೊಟ್ಟಣ ಖರೀದಿ ಮಾಡಿ ಅವಳಿಗೊಂದು ಕೊಡುತ್ತೇನೆ. ತಿನ್ನುತ್ತ 'ಒಂದು ಮಾತು" ಎನ್ನುತ್ತಾಳೆ,

"ಏನು?" ಎಂದಾಗ

"ಅನಿ, ನೀನು ನನ್ನನ್ನು ಇನ್ನೂ ಪ್ರೀತಿಸುತ್ತೀಯಾ?" ಎಂದು ಒಡೆದ ಸೇಂಗಾದ ಸಿಪ್ಪೆ ಚೆಲ್ಲಿ ಬೀಜಗಳನ್ನು ಕೈಯಲ್ಲ ಸರಿಪಡಿಸಿಕೊಳ್ಳುತ್ತಾಳೆ


"ನಿನ್ನನ್ನು ಕಂಡರೆ..." "ಏನು ಅನ್ನಿಸುತ್ತದೆ ಅನಿ?"

"ನೀನು ಪ್ರೀತಿಸುವ ಹಾಗೆ ನನಗೆ ಬರಲಾರದೆಂದು" ಎಂದು ಸೇಂಗಾವನ್ನು ಒಡೆದು ಬಾಯಿಗೆ ಹಾಕಿಕೊಳ್ಳುತ್ತೇನೆ. "ಅನಿ, ನಾನು ಈಗ ಎಲ್ಲವನ್ನೂ ಬಿಟ್ಟು ಬಂದಿದ್ದೇನೆ. ಆ ಜಗತ್ತೇ, ನನಗೆ ಬೇಡವಾಗಿದೆ. ಧರ್ಮ, ನೀತಿ, ಹಿರಿಯರು ಎಂದರೆ ತಲೆ ಚಿಟ್ಟು ಹಿಡಿಯುತ್ತದೆ."

"ಹೋಗೋಣವೇ?" ಎಂದು ಅವಳನ್ನು ಏಳಿಸುತ್ತೇನೆ. ರೂಮಿನ ಬಳಿ ಬರುತ್ತೇವೆ. ಬೆಳದಿಂಗಳು ಚೆನ್ನಾಗಿ ಬಿದ್ದಿರುತ್ತದೆ. ಬಿಲ್ಡಿಂಗ್ ಹಿಂದಿನ ಗುಡ್ಡ ತುಂಬಾ ಎತ್ತರವಾಗಿ ಕಾಣುತ್ತದೆ. "ನಾನು ಗಂಡನ ಮನೆಯಿಂದ ಬಂದು ಬಿಟ್ಟೆ. ಅವನಿಗೆ ನನ್ನ ಅವಶ್ಯಕತೆಯಿಲ್ಲ ಎಂಬುದು ಖಾತ್ರಿಯಾದ ಮೇಲೆ..." "ಅವನು ಇಂಟರ್‌ವ್ಹೀಲ್ ಸೆಕ್ರೆಟರಿಯನ್ನು ಕಟ್ಟಿಕೊಂಡು ಅಲೆಯುಲು ಶುರು ಮಾಡಿದ ಮೇಲೆ ನನಗೆ ಸಹಿಸಿಕೊಳಲಾಗಲಿಲ್ಲ. ಬಂದುಬಿಟ್ಟೆ, ಗುಳದಾಳಿ ಕರಿಮಣಿ ಕಟ್ಟಿ ಹೊಸ ಸೀರೆ, ಬಂಗ್ಲೇ, ಕಾರು ತೋರಿಸಿ ನನ್ನನ್ನು ಮೆಚ್ಚಿಸುವುದಕ್ಕೆ ನಾನೇನು ಸೂಳೆಯೇ? ಅನಿ" ಆವೇಶದಿಂದ ನುಡಿಯುತ್ತಿದ್ದಾಳೆ. ಅವಳಿಗೆ ಉಸಿರು ಕಟ್ಟುತ್ತಿತ್ತು. "ಅವನಿಗೆ ಪ್ರೀತಿ ಎಂದರೇ ಗೊತ್ತಿಲ್ಲ. ಅಂಥವನನ್ನು ಯಾರು ಏನು ಅಂದರೂ ಪ್ರೀತಿಸುವದು ನನಗೆ ಸಾಧ್ಯವಾಗಲಿಲ್ಲ!" ಎನ್ನುತ್ತ ಟೆರೇಸಿಗೆ ಬರುತ್ತಾಳೆ. ಈಗ ಅವಳಿಗೆ ಪಕ್ಕಾ ಉಸಿರು ಕಟ್ಟುತ್ತಿದೆ. ಆದರೆ ಮಾತು ನಿಲ್ಲಿಸುತ್ತಿಲ್ಲ. "ಅಪ್ಪ, ನೀನು ಇಲ್ಲಿ ಇರಕೂಡದು ಎಂದರು. ಸತ್ತರೂ ಅಲ್ಲೇ ಸಾಯಿ ಎಂದರು. ಅಪ್ಪನ ಮಾತು ಮೊದ ಮೊದಲು ಅವನದಲ್ಲ ಎಂದುಕೊಂಡಿದ್ದೆ, ಯಾರೋ ಅವನ ಕುತ್ತಿಗೆ ಒತ್ತಿ, ಹೇಳಿಸುತ್ತಿದ್ದಾರೆ ಎಂದುಕೊಂಡೆ. ಈಗ ತಂದೆಗೂ ಸಮಾಜ, ನೀತಿ, ನಿಯಮಗಳ ಎದುರಿನಲ್ಲಿ ಮಗಳು ಮರೆತು ಹೋಗುತ್ತಾಳೆ ಎನ್ನುವುದು ಖಾತ್ರಿಯಾಗಿದೆ." ನಾನು ಟೆರೇಸಿನ ಮೋಟು ಗೋಡೆಗೆ ಕೈ ಆನಿಸಿ ನಿಲ್ಲುತ್ತೇನೆ. ಅವಳು ನನ್ನ ಹೆಗಲ ಮೇಲೆ ತಲೆಯಿಟ್ಟು ಸ್ವಲ್ಪ ಆಧರಿಸಿಕೊಳ್ಳುತ್ತಾಳೆ. "ಕವಿ" ಎಂದು ನೆತ್ತಿಯನ್ನು ನೇವರಿಸುತ್ತೇನೆ. ಮತ್ತೆ ಅವಳು 'ಅನಿ, ನೀನು ನನ್ನನ್ನು ಪ್ರೀತಿಸುತ್ತಿ ತಾನೆ ಅನಿ, ನಿನಗೆ ನನ್ನ ಅವಶ್ಯಕತೆ ಉಂಟು ತಾನೆ?" ಎಂದು ಕೇಳುತ್ತಾಳೆ. ನಾನು ಅವಳ ಕೈ ಹಿಡಿದು "ನೀನು ಇಷ್ಟೆಲ್ಲ ನೆನಪಿಟ್ಟುಕೊಂಡರೆ ಏನನ್ನೂ ಪ್ರೀತಿಸಲಾರೆ ಕವಿ. ಪ್ರೀತಿ. ಅವಶ್ಯಕತೆ ಎಂಬ ಮಾತು ಅಷ್ಟು ಸ್ಪಷ್ಟವಲ್ಲ. ನಾವು ಬದುಕಿನಲ್ಲಿ ಸಿಲುಕಿಕೊಂಡವರು. ಪ್ರೀತಿ ಯಾರನ್ನೂ ಅನುಸರಿಸುವುದಿಲ್ಲ" ಎಂದಾಗ ನನ್ನ ಮುಖ ನೋಡುತ್ತಾಳೆ. ಅವಳಿಗೆ ಬಹಳ ದಣಿವಾಗಿದೆ. ಸ್ವತಂತ್ರವಾಗಿ ನಿಲ್ಲಲಾರದಷ್ಟು ಅಶಕ್ತಳ ಹಾಗೆ ಅನ್ನಿಸುತ್ತಾಳೆ. "ಕೋಣೆಗೆ ಹೋಗುವಾ" ಎಂದು ಕೈ ಹಿಡಿದು ಒಳಗೆ ಕರೆದೊಯ್ಯುತ್ತೇನೆ. ಒಳಗೆ ಕಾಲಿಟ್ಟವಳೇ ಕಣ್ಣು ದೊಡ್ಡದಾಗಿ ಬಿಟ್ಟು ಸುತ್ತೆಲ್ಲ ನೋಡಿ "ನಿನ್ನ ರೂಮು ಸ್ವರ್ಗ!" ಎನ್ನುತ್ತಾಳೆ. ನನ್ನ ಕೈ ಬಿಡಿಸಿಕೊಂಡು ಕುರ್ಚಿ, ಕಿಟಕಿಯ ಕಟ್ಟೆ, ಮಂಚದ ಮೇಲೆಲ್ಲ ಕುಳಿತು ಏಳುತ್ತಾಳೆ. 'ಸ್ವರ್ಗ ಸ್ವರ್ಗ' ಎಂದು ಹತ್ತೆಂಟು ಬಾರಿ ಉಚ್ಚರಿಸುತ್ತಾಳೆ. "ನೀನು ಸ್ವರ್ಗ ನೋಡಿದ್ದೀಯಾ?" ಎಂದು ನಕ್ಕು ಕೇಳಿದರೆ "ಇಲ, ನರಕ ನೋಡಿದ್ದೇನೆ!" ಎಂದು ದೊಡ್ಡದಾಗಿ ನಗುತ್ತಾಳೆ. "ನಾನು ಸ್ವರ್ಗ ಅಂದಾಗ ಈ ರೂಮಿನಲ್ಲಿ ಬಂಧನ ಇಲ್ಲ. ಒಂದು ತರಹದ ದೊಡ್ಡಸ್ತಿಕೆಯಿದೆ ಅನ್ನಿಸಿತು. "ಲೈಟು ಹಾಕುತ್ತೇನೆ. ಬೇಡ, ಬಿಡು. ಕತ್ತಲೆಯಲ್ಲಿ ತಂಪಿರುತ್ತದೆ" ಎಂದು ಆಫ್ ಮಾಡುತ್ತಾಳೆ. ಕಿಡಕಿಯ ಹತ್ತಿರ ಕುರ್ಚಿ ಎಳೆದುಕೊಂಡು ಕುಳಿತು ಸಿಗರೇಟು ಹಚ್ಚುತ್ತೇನೆ ಕವಿತಾಳಿಗೆ ಸಿಟ್ಟು. ಹತ್ತಿರ ಬಂದು ಸಿಗರೇಟು ಕಸಿದು ಒಗೆಯುತ್ತಾಳೆ. "ನೀವು



ಗಂಡಸರು: ಹೊಗೆಯಲ್ಲಿ ಎಲ್ಲವನ್ನೂ ಮರೆತು ಬಿಡುತ್ತೀರಿ." ಎಂದು ಮಂಚಕ್ಕೆ ಹಿಡಿದು ಕರೆದೊಯ್ಯುತ್ತಾಳೆ. "ಸ್ಟೊ ಹಚ್ಚಲಾ" ಎಂದು ಕೇಳುತ್ತಾಳೆ. "ಏನು, ನಾವು ಪಾರ್ಟಿಯಲ್ಲಿ ಸಿಕ್ಕವರೆ ಅನಿ?" ಎಂದು ಗುಮ್ಮನೇ ಕೂಡುತ್ತಾಳೆ. "ನಾನು ನಿನ್ನನ್ನು ಬಿಟ್ಟು ಹೋಗಬಾರದಿತ್ತು. ಅಪ್ಪನ ಮನಸ್ಸಿಗೆ ನೋವಾಗುತ್ತದೆ" ಎಂದು ಏನೆಲ್ಲ ಮಾಡಿಬಿಟ್ಟೆ" ಎಂದು ಒಮ್ಮಿಂದೊಮ್ಮೆಲೇ ಅಳತೊಡಗುತ್ತಾಳೆ. "ನನ್ನನ್ನು ಗಟ್ಟಿಯಾಗಿ ಹಿಡಿದುಕೊ ಅನಿ" ಎಂದು ಒದರುತ್ತಾಳೆ. ಕವಿತಾ ತುಂಬಾ ನಿರ್ವಿಣ್ಣಳಾಗಿದ್ದಾಳೆ. ನನ್ನ ಎದೆಯ ಮೇಲೆ ಅವಳ ತಲೆ ಇಟ್ಟುಕೊಂಡು ಕೆನ್ನೆಗಳೆರಡನ್ನು ಗಟ್ಟಿಯಾಗಿ ಅಂಗೈಯಲ್ಲಿ ಹಿಡಿದುಕೊಳುತ್ತೇನೆ. "ಈ ದೇಹದ ಸಂಪತ್ತೆಲ್ಲ ವ್ಯರ್ಥವಾಗಿ ಹಾಳಾಗಿ ಹೋಯ್ತು! ನಾನು ಚಂದಿಲ್ಲವೆ ಅನಿ?" ಎಂದು ಮಂಚದಿಂದ ಎದ್ದು ಕುರ್ಚಿಯ ಕಡೆ ಹೋಗುತ್ತಾಳೆ. ನಾನು ಹಾಸಿಗೆಯ ದಿಂಬಿಗೆ ತಲೆಯಿಟ್ಟು ಅಂಗಾತ ಮಲಗುತ್ತೇನೆ. "ನಾನು ಹೇಳಿದ್ದು ನಿನಗೆ ತಿಳಿಯುತ್ತದೆಯಾ?" ಎಂದು ಗರ್ಜಿಸುತ್ತಾಳೆ. "ತಿಳಿಯದೆ ಏನು ಕವಿ, ಆದರೆ ಏನು ಮಾಡಿದರೆ ಈ ದೇಹ ಸಾರ್ಥಕವಾಗುತ್ತದೆ?" ಎಂದು ಎದ್ದು ಕುಳಿತು ಕೇಳುತ್ತೇನೆ. "ಹಾಗಲ್ಲ, ಅನಿ, ಇದೊಂದು ವೈಭವವೆಂದು ಗುರುತಿಸುವುದು ಬೇಡವೇ?" ಎಂದು ಮರು ಸವಾಲು ಹಾಕುತ್ತಾಳೆ. "ಯಾರು ಗುರುತಿಸುವವರು? ಯಾಕೆ?" ಎಂದು ನಾನು ಕೇಳಿದಾಗ ಬ್ಯಾಲನ್ಸ ಕಳೆದುಕೊಂಡವಳಂತೆ ಕುರ್ಚಿಯಿಂದೆದ್ದು "ಈ ತುಟಿ ಈ ಮೊಲೆ, ಈ ತೊಡೆ, ಈ ಕುಂಡೆ, ಈ ಇದು..." ಎಂದು ಒಂದೊಂದಾಗಿ ವಸ್ತ್ರವನ್ನೆಲ್ಲ ಕಳಚಿ ನಿಲ್ಲುತ್ತಾಳೆ. ಅವನ್ನೆಲ್ಲ ಮುದ್ದೆ ಮಾಡಿ ಎದೆಗವಚಿ ಕತ್ತಲೆಯ ಕಡೆ ಓಡುತ್ತಾಳೆ. "ನಾನು ಸ್ನಾನ ಮಾಡುವಾಗ ನೋಡಿಕೊಂಡಿದ್ದೆ. ಅನಿ. ಇವುಗಳ ಬಗ್ಗೆ ಹೆಮ್ಮೆ ಅನಿಸಿತ್ತು." ಎಂದು ಕತ್ತಲೆಯ ಮೂಲೆಯಿಂದ ಅಳುತ್ತ ಹೇಳುತ್ತಾಳೆ. ಅಲ್ಲೇ ನಿಂತವಳು "ಅನಿ, ಒಂದು ಮುತ್ತಿಡುವುದಕ್ಕಾಗಿ ನೀನು ಎಷ್ಟೆಲ್ಲ ಕಷ್ಟ ಪಟ್ಟಿದ್ದಿ ಗೊತ್ತೇ?" ಎಂದು ಕೇಳುತ್ತಾಳೆ. "ಅನಿ, ಇವನ್ನೆಲ್ಲ ನಾನು ಕತ್ತರಿಸಿ ಒಗೆದು ಬಿಡಲಾ?" ಎಂದು ಓಡಿ ಬಂದು ಎದೆಯ ಮೇಲೆ ಬಿದ್ದು ತಡೆಯಲಾರದಂತೆ ಅಳುತ್ತಾಳೆ. 'ಕವಿ' ಎಂದ ಮೈಯೆಲ್ಲ ತಡವಿ ಸಮಾಧಾನಮಾಡುತ್ತೇನೆ. "ನೀನು ತುಂಬಾ Concrete, Positive" ಎಂದು ಕಣ್ಣೀರು ಒರೆಸುತ್ತೇನೆ. 'ಇವುಗಳನ್ನೆಲ್ಲ ಬಳಸಿಕೊಂಡರೆ ಸಾಕೆ? ಇವುಗಳ ಬಗೆಗೆ ಕೃತಜ್ಞತೆ, ಗೌರವ ಏನೂ ಬೇಡವೆ?" ಎಂದು ಸಮಾಧಾನದ ಮಾರ್ಗದಲ್ಲಿ ಕೇಳುತ್ತಾಳೆ,



"ಕವಿ ಹೀಗೆ ವಿಚಾರ ಮಾಡುವುದೇ ಗೊತ್ತಿಲ್ಲ. ಯಾವುದೋ ಜಗತ್ತಿನಲ್ಲಿ ಬದುಕನ್ನು ಪ್ರಾಕ್ಟೀಸ್ ಮಾಡಿ ಇಲ್ಲಿ ಬದುಕುವುದು ಸರಿಯಾಗಲಾರದು." ಎಂದು ಎದ್ದು ಹೋಗಿ ಲೈಟು ಹಾಕುತ್ತೇನೆ. ಅವಳ ಮುಖ ಬೆಂದು ಹೋಗಿದೆ. ನನ್ನನ್ನು ನೋಡಿ ನಗೆಯಾಡುತ್ತಾಳೆ. "ನನ್ನನ್ನು ಹುಚ್ಚಿ ಎಂದು ತಿಳಿದುಕೊಂಡಿಲ್ಲವಷ್ಟೇ" ಎಂದು ಹಣೆಯ ಮೇಲಿನ ಕೂದಲನ್ನು ಸರಿಪಡಿಸಿಕೊಳ್ಳುತ್ತಾಳೆ. ಬೇಸಿನ್‌ಗೆ ಬಂದು ಮುಖ ತೊಳೆದುಕೊಳ್ಳುತ್ತಾಳೆ. ತಲೆ ಬಾಚಿಕೊಳುಳ್ತಾಳೆ. ನಾನು ಸ್ಟೋ ಹಚ್ಚಿ ಕಾಫಿಗಿಡುತ್ತೇನೆ. "ನನಗಾಗಿ ಒಂದು ರೂಂ ಎಲ್ಲಾದರೂ ಸಿಕ್ಕೀತು?" ಎಂದು ವ್ಯಾನಿಟಿ ಬ್ಯಾಗಿನಿಂದ ಕಾಸ್ಮೆಟಿಕ್ಸ್ ತೆಗೆಯುತ್ತಾಳೆ. "ನಿನ್ನ ಅಟ್ಟದ ಮೇಲೆ, ಇಲ್ಲಿ ಸುತ್ತ ಮುತ್ತ ಎಲ್ಲಾದರೂ ಖಾಲಿ ರೂಮು, ಮನೆಯಿದ್ದರೆ ಹುಡುಕುತ್ತೀಯಾ?" ಎಂದು ಕಾಫಿಯ ಕಪ್ಪನ್ನು ಕೈಗೆತ್ತಿಕೊಳುತ್ತಾಳೆ. "ನೋಡುತ್ತೇನೆ" ಎನ್ನುತ್ತೇನೆ ಆಕೆ ಕಪ್ಪುಗಳೆರಡನ್ನೂ ತೊಳೆದಿಟ್ಟು "ಅನಿ, ನೀನು ಬಹಳ ಬದಲಾಗಿದ್ದಿ" ಎನ್ನುತ್ತಾಳೆ. "ಹೌದಾ?"

"ಯಾಕೆ ಆಶ್ಚರ್ಯ. ಮೊದಲಾಗಿದ್ದರೆ ಹೀಗೆ ಮಾಡುತ್ತಿರಲಿಲ್ಲ. ನಾನು ಹೋಗಲಾ?" ಎಂದು ಹೊರಡಲು ತಯಾರಾಗುತ್ತಾಳೆ. ನಾನು ಅವಳೊಂದಿಗೆ ಕೋಣೆಯ ಹೊರ ಬರುತ್ತೇನೆ. ಅವಳು ಮೆಲ್ಲಗೆಮೆಟ್ಟಲು ಇಳಿದು ಹೋಗುವುದು ಕೇಳುತ್ತದೆ. ಒಳಗೆ ಬಂದು ಕಿಟಕಿಯ ಬಳಿ ಕುರ್ಚಿಯಲ್ಲಿ ಕೂಡುತ್ತೇನೆ. ಗುಡ್ಡದ ಮೇಲ್ಗಡೆ ಬಿಳಿ ಮೋಡದ ತುಣುಕೊಂದು ಮಿಸುಕದೆ ನಿಂತಿದೆ. ಗಾಳಿ ತಣ್ಣಗಾಗಿದೆ. ಗಿಡಗಳು ಅಲುಗಾಡುವುದಿಲ್ಲ. ಬೈಲಿನಲ್ಲಿ ಚಿಕ್ಕ ಪುಟ್ಟ ಗಿಡಗಳು, ಸಣ್ಣ ದೊಡ್ಡ ನೆರಳುಗಳು ತುಂಬಿವೆ. ಆಕಾಶ ನೋಡುತ್ತೇನೆ. ಗುಡ್ಡವೂ ಚಿಕ್ಕದಾಗಿ ತೋರುತ್ತದೆ, ಘಂಟೆ ಹತ್ತು ಹೊಡೆದಾಗ ಸಿನೇಮಾ ಥಿಯೇಟರಿನ ಬಳಿ ಹೋಗುತ್ತೇನೆ. ಅರ್ಧ ಡಝನ್ ಬಾಳೆ ಹಣ್ಣು ಖರೀದಿಸಿ ಅಲ್ಲೆ ಎಲ್ಲೋ ನಿಂತು ತಿಂದು ರೂಮಿಗೆ ಬರುತ್ತೇನೆ. ಆಚೆಯ ಕೋಣೆಯಲ್ಲಿ ಹೊಸಬರಾರೋ ಮಾತನಾಡಿದ ಹಾಗೆ ಕೇಳುತ್ತದೆ. ರೆಬೆಲ್ಲೊ ಬಂದುಗಿಂದನೋ ಎಂದು ಕೊಳುತ್ತೇನೆ; ಅಥವಾ ಹೊಸಬರಾರೋ ರೂಮನ್ನು ಹಿಡಿದಿರಬೇಕು ಎಂದುಕೊಂಡು ಬೆಡ್‌ಶೀಟ್ ಝಾಡಿಸಿ ಹಾಸಿ ಮಲಗುತ್ತೇನೆ. ಎದ್ದು ಹೋಗಿ ಕಿಟಕಿ ಹಾಕಿ ಬರುತ್ತೇನೆ.

ರಾಕೇಶ್ ಸ್ವಾಗತಿಸಿದ. Boss is greatly impressed ಎನ್ನುತ್ತಾನೆ. ನಿನ್ನೆ ಮನೆಗೆ ಹೋಗಿದ್ದೆ. ನಿಮ್ಮನ್ನು ಕುರಿತು ವಿಶೇಷ ಮಾತಾಡಿದರು. ನಿಮ್ಮಂತಹ Workers ಇದ್ದರೆ ಒಂದು Empire ಕಟ್ಟಬಹುದು ಎಂದರು. "ಬಸ್" ಎಂದೆ.

"ನಾಳೆ ರೆಬೆಲ್ಲೊ ಹಾಜರಾಗಬಹುದು. ಲೀವ್

ಏಕಾ ಸ್ಟ್ ಅಂದ್ರೆಲ್ಲ!" ಏನುತ್ತಾನೆ. ರೀಟಾಳ ಕಡೆಗೆ ನೋಡುತ್ತಾನೆ. To be very briet ರೀಟಾ ನನ್ನು ಈ ಫೆಲೋ ಪಾಕೆಟ್ ಮಾಡಬಹುದು ಎಂದು ಬಹಳ ಸಣ್ಣಗೆ ಕಿವಿಯ ಹತ್ತಿರ ಒಳಗೆ ಮಾತನಾಡಿದ. "All right let us do our... ..." ಎನ್ನುತ್ತೇನೆ. 'ಡಿವ್ಹೋಟೆಡ್' ಎಂದು ಹಾಸ್ಯ ಮಾಡುತ್ತಾನೆ. ಕೆಲಸದಲ್ಲಿ ತೊಡಗುತ್ತಾನೆ. "ನಾನ್‌ಸೆನ್ಸ್" ಎಂದು ಫರ್ಸ್ಟ್ ಅಸಿಸ್ಟಂಟ ಫೈಲು ಜಪ್ಪಿ ಪ್ಯೂನಿಗೆ ಗುಡುಗುತ್ತಾನೆ. ಆತ ಕದ್ದವರಂತೆ ನಿಂತಿರುತ್ತಾನೆ. "ನಿಮಗೆ ಪಗಾರು ಬೇಕು, ರಜೆ ಬೇಕು. ಎಲ್ಲಾ ಫೆಸಿಲಿಟಿ ಬೇಕು. ಗವರ್ನಮೆಂಟ ನಿಮ್ಮದೊ ಎಲ್ಲಾ ನಿಮಗಾಗಿ ಇದ್ದಾರೊ ಎಂದು ಅಸಹ್ಯವಾಗಿ ಗುಡುಗುತ್ತಾನೆ. ಆತ ಥರ ಥರ ನಡುಗುತ್ತಾನೆ. "ಹೋಗು ಆ ಹಸಿರು ಟೇಪ ಕಟ್ಟಿಟ್ಟ ಫೈಲು ತಾ" ಎಂದಾಗ ಹೊರಟು ನಿಲ್ಲುತ್ತಾನೆ. ಮತ್ತೆ ಬೆಲ್ಲು ಬಾರಿಸಿದಾಗ ಸೆಲ್ಯೂಟ ಹೊಡೆದು ನಿಲ್ಲುತ್ತಾ . "ಏನೋ ಹೊಸವೇಷ ಇದ್ದಕ್ಕಿದ್ದಂತೆ " ಎಂದು ನಗೆಯಾಡಿ ಇದನ್ನು ಸಾಹೇಬರ ಹತ್ತಿರ ಕೊಡೆಂದು ತೃಪ್ತಿಯಿಂದ ಕಳಿಸುತ್ತಾನೆ.

ಆಫೀಸು ಬಿಟ್ಟು ನಾನು ಹೊರಟಾಗ ರೀಟಾ Five minutes please ಎಂದು ಕೊನೆಯ ಸಾಲನ್ನು ಟೈಪಮಾಡಿ ತೆಗೆದು ಪಿನ್ ಮಾಡಿ ಪ್ಯೂನನ್ನು ಕರೆದು ಅವನ ಕೈಗೆ ಕೊಟ್ಟು ಏಳುತ್ತಾಳೆ. "ನಮ್ಮ ಮನೆಗೆ ಕರೆದುಕೊಂಡು ಹೋಗುವಾ ಎಂದು ನಿಲ್ಲಿಸಿದೆ. ಎಂದು ಮಾತು ಪ್ರಾರಂಭಿಸುತ್ತಾಳೆ. ಸಂಜೆ ಆಫೀಸ ಬಿಟ್ಟ. ಜನವೆಲ್ಲಾ ರಸ್ತೆ ತುಂಬಾ ನಡೆಯುತ್ತಾರೆ. ಒಂದು ಪ್ರೈವೇಟ್ ವಿಷಯ ನಿನ್ನ ಕೇಳಬೇಕೆಂದಿರುವೆ. ನಿನಗೆ ಬೇಸರವಿಲ್ಲ ತಾನೆ?" ಎಂದು ಪ್ರಸ್ತಾಪ ಮಾಡುತ್ತಾಳೆ.

No, No, ನನಗೆ Personal, private, public, Material, Spiritual, Ideal, Morality, Sanity ಯಾವುದೂ ಇಲ್ಲ ಸಾಕಾ?" ಎಂದು ನಗುತ್ತೇನೆ ಅವಳ ಮುಖ ನೋಡಿ. "ವಿಚಿತ್ರ ಜನ" ಎಂದು ಉದ್ಗಾರ ತೆಗೆಯುತ್ತಾಳೆ. What is your opinion about our boss? ಎಂದು ಮುಖ ನೋಡದೆ ಕೇಳಿದಾಗ

"No opinion!" ಎಂದೆ.

"ನಾಳೆ ರೆಬೆಲ್ಲೋ Join ಆಗಬಹುದೆ?" ಎನ್ನುತ್ತಾಳೆ.

"Probably" ಎಂದಾಗ "ಅವನದೊಂದು ಪತ್ರವಿತ್ತು," ಎನ್ನುತ್ತಾಳೆ. Good fellow ಎಂದು ಸಂತೋಷ ವ್ಯಕಮಾಡಿದಾಗ What? do you know what he has written! ಎಂದು ಹುಬ್ಬು ಗಂಟಿಕ್ಕುತ್ತಾಳೆ. Unless you resingn and go out of the office..."

"ಹೌದು" ಎಂದೆ. "You say good fellow, say a rascal" ಎಂದು ಗುಡುಗುತ್ತಾಳೆ.

ಮನೆ ಅರ್ಥಾತ್ ರೂಮು ಬರುತ್ತದೆ ಒಳಗ ಹೋಗಿ ಸ್ವಿಚ್ ಹಾಕುತ್ತಾಳೆ. ಸೋಫಾ ತೋರಿಸಿ ಕೂಡ್ರಲು ಹೇಳುತ್ತಾಳೆ. ಇದರ ಓನರ್ ಬಹಳ ಒಳ್ಳೆಯ ಮನುಷ್ಯ ಎನ್ನುತ್ತಾಳೆ. ತುಂಬಾ ಸೇಫಾದ ಲೊಕಾಲಿಟಿ ಎನ್ನುತ್ತ ಒಳಗೆ ಹೋಗಿ ಸ್ಟೊವ್ ಹಚ್ಚಿ ನೀರಿಟ್ಟು ಹೊರಗೆ ಬರುತ್ತಾಳೆ. ಸೋಫಾದ ತುದಿಯಲ್ಲಿ "ಕುಳಿತು ನನಗೆ ವಿಚಾರ ಮಾಡಿ ಮಾಡಿ ಸಾಕಾಗಿದೆ. ಇದಕ್ಕೊಂದು ಪರಿಹಾರ ಕಾಣದಾಗಿದೆ" ಎನ್ನುತ್ತಾಳೆ. "ಆ ದಿನ ಸಿಕ್ಕ ಮೇಲೆ ನಿನ್ನ ಹತ್ತಿರ ನಾನು ಹೆಚ್ಚು ಮಾತನಾಡಲಿಲ್ಲ. ಎಬಾರ್ಶನ್ ಮಾಡಿಸಿಕೊಂಡೆ. ಹತ್ತು ದಿನ ರಜೆಯ ಮೇಲಿದ್ದೆನಲ್ಲ" ಎನ್ನುತ್ತಾಳೆ. "ಊರಿಗೆ ಬರಲು ಪತ್ರ ಹಾಕುತ್ತಿದ್ದಾರೆ. ಮನಸ್ಸೇ ಆಗುತ್ತಿಲ್ಲ. ಅವರಿಗೆಲ್ಲ ಈ ವಿಷಯ ಗೊತ್ತಾಗಿದೆಯೇನೊ ಎಂಬ ಸಂಶಯ. ಈಗ ಮತ್ತೆ ಕಾಂಪ್ಲಿಕೇಶನ್." ಎಂದು ಸುಮ್ಮನಾಗುತ್ತಾಳೆ. ಒಳಗೆ ಹೋಗಿ ಬೋರ್ನವಿಟಾ ಮಾಡಿ ತರುತ್ತಾಳೆ. "ಸಕ್ಕರೆ ಸಾಕೊ?" ಎಂದು ಕೇಳಿ "ರೆಬೆಲ್ಲೊ ಕೈ ಬಿಟ್ಟ ಹಾಗೆ ಇನ್ನು ಅವನು ನನ್ನನ್ನು ಮಾತನಾಡಿಸಲಿಕ್ಕೂ ಇಲ್ಲ. ಮಧ್ಯ ಬಾಸ್ ಆರು ಸಾರೆ ಮನೆಗೆ ಕರೆಯಿಸಿದ್ದ. ಅವನು ಮಿಶನರಿ ಬೇರೆ. ಕಡಿಮೆ ಹೇಳಿದಷ್ಟೂ ಒಳ್ಳೆಯದೇ" ಎಂದು "ನನಗೆ ತಲೆಯೇ ಕೆಟ್ಟು ಹೋಗಿದೆ. ಆತ್ಮಹತ್ಯೆ ಮಾಡಿಕೊಳ ಬೇಕೆಂದು ಕೊನೆಯದಾಗಿ ನಿರ್ಧರಿಸಿದ್ದೇನೆ" ಎಂದು ಎದ್ದು ಹೋಗಿ ಎದುರಿಗೆ ಮಾಡಿನಲ್ಲಿದ್ದ ಕ್ರೈಸ್ತನಿಗೆ ಮೇಣ ಬತ್ತಿ ಹಚ್ಚಿ ಬಂದು ಕೂಡುತ್ತಾಳೆ "ನನ್ನ ತಂದೆ ಹೇಳುತ್ತಿದ್ದರು..." ಎಂದು ಕ್ರೈಸ್ತನ ಪೋಟೋ ನೋಡುತ್ತ "Christianity has idealized suffering" ಅದನ್ನು ಶಿಲುಬೆಗೇರಿಸಿ ಪೂಜಿಸುತ್ತಿದೆ..." ಮೇಣಬತ್ತಿ ಉರಿದು ಬಿಳಿಯ ಮೇಣ ಆಚೆ ಈಚೆ ಬೀಳಲಿನಂತೆ ಜೋತು ಬಿದ್ದಿರುತ್ತದೆ. "ಪ್ರೇಮ, ದುಃಖದ ಸಹೋದರಿಯಲ್ಲವೆ?" ಎಂದು ನನ್ನ ಕೇಳುತ್ತಾಳೆ. "ಮಿಸ್ ರೀಟಾ To be very frank that is how religion exploits the mass!" ಎನ್ನುತ್ತೇನೆ. ಕುಡಿದಿಟ್ಟ ಕಪ್ಪನ್ನು / ಒಳಗೊಯ್ದು ಇಟ್ಟು ಬರುತ್ತಾಳೆ. ಕೂಡುತ್ತಾಳೆ. ಕಸವಿಸಿಗೊಂಡು ಕೋಣೆಯನ್ನೆಲ್ಲ ತಿರುಗಿ "ನೀನು ಅವನಷ್ಟು ದ್ರೋಹಿ ಇರಲಿಕ್ಕಿಲ್ಲ. ಹೇಡಿ ಇರಲಿಕ್ಕಿಲ್ಲ. ಅವನಷ್ಟು ನೀಚನಿರಲಿಕ್ಕಿಲ್ಲ" ಎಂದು ನನ್ನ ಮುಖದೆದುರು ನಿಂತು ಹೇಳುತ್ತಾಳೆ. "Boss" ಪ್ರೀತಿ ಮಾಡಿದನೆಂದು ರೆಬೆಲ್ಲೋನನ್ನು ಮರೆಯಲಿಕ್ಕಾಗುತ್ತದೆಯೆಂದು ಕೊಂಡೆಯಾ? Love is not an episode" ಎಂದು ಬಳಿ ಕುಳಿತು ಮತ್ತೆ ದೂರ ಹೋಗಿ ನಿಲ್ಲುತ್ತಾಳೆ. "ನಿನಗೆ ಹೇಳುವದೇನೂ ಇಲ್ಲವೇ?" ಎಂದು ಕಿರುಚುತ್ತಾಳೆ. "ಇಲ್ಲ!" ಎಂದಾಗ "ನಾನು ಆತ್ಮಹತ್ಯೆ ಮಾಡಿಕೊಳ್ಳುವದೇ ಸರಿಯೇ?" ಎಂದು ಮುಖ ಬಿಗಿದು ಕೊಳುತ್ತಾಳೆ. ಕಂಬದಂತೆ ನಿಲ್ಲುತ್ತಾಳೆ. "ಇಂಥ ಧ್ವನಿ ನನ್ನ ಬಳಿ ಉತ್ತರವಿಲ್ಲ. ಬೇರೆಯವರಿಗೆ ಪ್ರತಿಕ್ರಿಯೆಯಾಗಿ ಸಾಯುವದನ್ನಾಗಲಿ ಬದುಕುವದನ್ನಾಗಲಿ ನಾನು ಬಯಸುವದಿಲ್ಲ. ನೀನು ಬದುಕಬೇಕು. ಆದರೆ ನಾನು ಹೇಳಿದೆನೆಂದಲ್ಲ." ಎಂದು ಅವಳ ಕೈ ಹಿಡಿದು ಕೂಡಿಸುತ್ತೇನೆ. ಅವಳು ಮರಗಟ್ಟಿದವಳಂತೆ ಕೂಡುತ್ತಾಳೆ. ಗಂಟೆ ಎಂಟು ಹೊಡೆಯುತ್ತದೆ. ಸಾವಕಾಶವಾಗಿ ಏಳುತ್ತಾಳೆ. "ನಿನಗೇನು ತಡವಾಗುವದಿಲ್ಲವಲ್ಲ. ಇಲ್ಲೇ ಎರಡು ಚಪಾತಿ ಮಾಡುತ್ತೇನೆ." ಎಂದು ಅಡಿಗೆಯ ಮನೆಗೆ ಹೋಗುತ್ತಾಳೆ ತಿರುಗಿ ಬಂದು "ಒಳಗೆ ಬಾರಲ್ಲ" ಎಂದು ಡೈನಿಂಗ್‌ಟೇಬಲ್ ಬಳಿ ಕೂಡುತ್ತಾಳೆ. ಚಪಾತಿ ಒರೆಯುತ್ತಾಳೆ. ಕಾವಲಿಗೆ ಹಾಕುತ್ತಾಳೆ. ತುಪ್ಪ ಸುರುವುತ್ತಾಳೆ. ಕಮ್ಮನೆ ವಾಸನೆ ಬರುತ್ತದೆ. ಸ್ಟೋವಿನ ಬೆಂಕಿಯ ಬೆಳಕು ಅವಳ ಮುಖದ ಮೇಲೆ ಬಿದ್ದಿರುತ್ತದೆ. ಮುಖ ಬಾಡಿ ಸೋತು ಹೋಗಿದೆ. "ರೆಬೆಲ್ಲೊ ಮತ್ತು ನಾನು ಇರುವ ಇಂಥದೊಂದು ಚಿಕ್ಕ ಮನೆಯ ಕನಸು ಕಂಡಿದ್ದೆ." ಎನ್ನುತ್ತ ಚಪಾತಿ ತಿರುವಿ ಹಾಕುತ್ತಾಳೆ. ಪ್ಲೇಟು ಸಜ್ಜುಗೊಳಿಸಿ ನನ್ನೆದುರು ಇಡುತ್ತಾಳೆ. "ತಗೋ ಬಿಸಿ ಇದೆ." ಎಂದವಳೇ "ನಾವೇ ನಾವಾಗಿರುವಾಗ ಲೋಕ ಎಷ್ಟು ಸುಂದರ!" ಎಂದು ಉದ್ಗರಿಸುತ್ತಾಳೆ. ಚಪಾತಿಗೆ ತುಪ್ಪ-ಸಕ್ಕರೆ ಹಾಕುತ್ತಾಳೆ. "ರೆಬೆಲ್ಲೊನ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?" ಎನ್ನುತ್ತಾಳೆ. "ನನಗೆ ಅಭಿಪ್ರಾಯ ವಿಲ್ಲ ರೀಟಾ" ಎಂದು ಚಪಾತಿ ತುಂಡನ್ನು ಬಾಯಿಗಿಡುತ್ತ ಅವಳ್ಳ ಮುಖ ನೋಡಿ ನಗುತ್ತೇನೆ. ನಾನು ಆ ದಿನ ರಾತ್ರಿ ನಿನ್ನ ರೂಮಿನಲ್ಲಿದ್ದೆನಲ್ಲ ಯಾರಾದರೂ ಏನಾದರೂ ಹೇಳಿದರೆ?" ಎಂದು ಕೆಲಸ ನಿಲ್ಲಿಸಿ ಪ್ರಶ್ನೆ ಕೇಳುತ್ತಾಳೆ. "ನಾನು ಕೇಳುವದಿಲ್ಲ." ಎನ್ನುತ್ತೇನೆ. ರೀಟಾಳ ಚಪಾತಿ, ತುಪ್ಪ, ಸಕ್ಕರೆ, ಭಾಜಿ ಎಲ್ಲ ಚೆನ್ನಾಗಿರುತ್ತದೆ "ನೀನು ಚನ್ನಾಗಿ ಅಡಿಗೆ ಮಾಡುತ್ತಿ." ಎನ್ನುತ್ತೇನೆ. "ಇದು ಅಭಿಪ್ರಾಯ ಅಲ್ಲವೋ!" ಎಂದು ರಾಗವಾಗಿ ನಗುತ್ತಾಳೆ. "ನಾನು ಅಭಿಪ್ರಾಯವೆನ್ನುವದು ಸಿದ್ಧಾಂತಕ್ಕೆ." ಎಂದು ಕಾಫಿ ಕಪ್ಪಿಗೆ ತುಟಿ ತಗಲಿಸುತ್ತೇನೆ. ಅವಳೂ ಉಪಹಾರ ಮುಗಿಸುತ್ತಾಳೆ. ಇಬ್ಬರೂ ಹೊರ ಬಂದು ಸೋಫಾದ ಮೇಲೆ ಕೂಡುತ್ತೇವೆ. ಅಂಗಡಿಯಿಂದ ತಂದ ಬೀಡಾವೊಂದನ್ನು ಕೊಡುತ್ತಾಳೆ. ಹತ್ತು ಹೊಡೆಯುತ್ತದೆ. ಕಳಿಸಲು ಹೊರಬರುತ್ತಾಳೆ. ಆಚೆ ಈಚೆ ನೋಡುತ್ತಾಳೆ. ಗುಡ್ ಬಾಯ್ ಎನ್ನುತ್ತಾಳೆ. ರಸ್ತೆಗಿಳಿಯುತ್ತೇನೆ. ನಿರ್ಜನವಾಗಿದೆ. ಆದರೆ ಆಗೊಂದು ಈಗೊಂದು ಕತ್ತೆ, ದನ, ಕಾರು, ಸೈಕಲ್, ರಿಕ್ಷಾ, ಲಾರಿಗಳು ಹಾದು ಹೋಗುತ್ತವೆ. ಊರು ಕಳೆಯುತ್ತದೆ. ರೂಮು ಬರುತ್ತವೆ. ಕತ್ತಲೆ ಮುಸುಕಿರುತ್ತದೆ. ಆಕಾಶದ ನಕ್ಷತ್ರಗಳ ಬೆಳಕು ಬಿದ್ದಿರುತ್ತದೆ. ಗಾಳಿ ಬೀಸುತ್ತದೆ. ಬಿಲ್ಡಿಂಗ ಚಿಕ್ಕದು ಕಾಣುತ್ತದೆ. ಆದರ ಹಿಂದಿನ ಗುಡ್ಡ ಕಪ್ಪು ಗುಡ್ಡೆಯಂತೆ ಕಾಣುತ್ತದೆ. ಅಟ್ಟ ಹತ್ತಿ ಟೆರೇಸಿಗೆ ಬರುತ್ತೇನೆ. ರೂಮಿನ ಒಳ ಬಂದು ಲೈಟು ಹಾಕುತ್ತೇನೆ. ಮುಖ ತೊಳೆದು ಮಂಚದ ಮೇಲೆ ಮಲಗುತ್ತೇನೆ. ಪುಸ್ತಕವೊಂದನ್ನು ಕೈಗೆತ್ತಿಕೊಂಡು ಓದತೊಡಗುತ್ತೇನೆ.

"ನಿಮ್ಮ ಸ್ನೇಹಿತ ಏನನ್ನುತ್ತಾನೆ?" ಎಂದು ರಾಜೇಶ ಪ್ರಶ್ನಿಸುತ್ತಾರೆ. bit improved in health ಎಂದು ವ್ಯಂಗ್ಯ ಮಾಡುತ್ತಾನೆ. "ನೋಡಿ, ಈಗ ಈತ ಅವಳ ಕಡೆಗೆ ನೋಡುವದೂಯಿಲ್ಲ. ಅವಳಿಗೂ ಅಷ್ಟೇ ಈಗ ಬಾಸ್ ಸಿಕ್ಕಿದ್ದಾರೆ" ಎಂದು ಪೇಪರೊಂದರ ಮಾರ್ಜಿನ್‌ನಲ್ಲಿ ರಿಮಾರ್ಕ ಬರೆದು ಬೆಲ್ ಒತ್ತಿ ಪ್ಯೂನನ್ನು ಕರೆಯುತ್ತಾನೆ. "ಗೆಳೆತನ, ಪ್ರಾಮಾಣಿಕತೆ ಉಪದೇಶ ಮಂದಿಗೆ ಮಾತ್ರ. ಇಂಡಿಯಾಕ್ಕೆ' ಭವಿಷ್ಯವೇ ಇಲ್ಲ" ಎಂದು ಗೊಣಗುತ್ತಾನೆ.

"ಕಾಫಿ ತೆಗೆದುಕೊಳ್ಳುವಾ, ತಲೆಯೆಲ್ಲ ಗಿವ್ ಎನ್ನುತ್ತದೆ. ಎಂದು ಆಫೀಸ್ ಕ್ಯಾಂಟಿನ್‌ಗೆ ಕರೆದೊಯ್ಯುತ್ತಾನೆ. ಕಾಫಿ ಕುಡಿಯುತ್ತಿದ್ದಂತೆ "ಒಂದು Rumour ಹರಡಿದೆ" ಎನ್ನುತ್ತಾನೆ. "I told him to mind his business. ಎಂದು ಲಗಾಯಿಸಿ ಬಿಟ್ಟೆ. ಎನ್ನುತ್ತ ಮುಖ ನೋಡುತ್ತಾನೆ. 'ಬೇರೆಯವರ affair ನಲ್ಲಿ intervene ಮಾಡುವದು ನನಗೆ ಸೇರುವದಿಲ್ಲ." ಎಂದು ಸಿಗರೇಟು ಹಚ್ಚುತ್ತಾನೆ. "Nothing wrong in love and war – ಹೋಗಲಿ ಬಿಡಿ", ಎಂದಾಗ ಇಬ್ಬರೂ ಎದ್ದು ಆಫೀಸಿಗೆ ಬರುತ್ತೇವೆ.

ರೂಮಿನ ಹತ್ತಿರ ಬಂದಾಗ ಇನ್ನೂ ಹೊತ್ತಿರುತ್ತದೆ. ಹಾಗಯೇ ಬಿಲ್ಡಿಂಗಿನ ಹಿಂದಿನ ಗುಡ್ಡದ

ಬುಡದ ಕಡೆಗೆ ನಡೆಯುತ್ತೇನೆ. ದನಗಳು ಚೆನ್ನಾಗಿ ಮೇಂದು ಆದರೂ ಅಲ್ಲೊಂದು ಇಲ್ಲೊಂದು ಇರುವ ಹುಲ್ಲಿನ ಗುಪ್ಪೆಗೆ ಬಾಯಿ ಹಾಕುತ್ತ ಮನೆಯ ಕಡೆ ಹೊರಟಿರುತ್ತವೆ. ದನಗಾಹಿ ಏನೋ ಲೆಕ್ಕ ಹಾಕುತ್ತ ಬಹಳ ಹಿಂದೆ ಬರುತ್ತಿದ್ದಾನೆ. ಕಲ್ಲು ಬಂಡೆಯೊಂದರ ಮೇಲೆ ಕೂಡುತ್ತೇನೆ. ಗಾಳಿ–ಹಗುರಾಗಿ ಮೆಲ್ಲಗೆ ಬೀಸುತ್ತದೆ. ಬಿಸಿಲು ಮಾಯುತ್ತ ಬರುತ್ತದೆ. ಕಾಗೆಗಳು ಹಾರುತ್ತಿವೆ. ಕತ್ತಲೆಯಾಗುತ್ತಿದೆ. ರೂಮಿಗೆ ಬರುತ್ತೇನೆ. ರಿಬೆಲ್ಲೊ ರೂಮಿನಲ್ಲಿ ಓದುತ್ತಾ ಕುಳಿತಿರುತ್ತಾನೆ. "Finished your walk ?" ಎಂದು ಪುಸ್ತಕದಲ್ಲಿ ಮಗ್ನನಾಗುತ್ತಾನೆ. ಮಂಚದ ಮೇಲೆ ಕುಳಿತು ರೇಡಿಯೊ ಹಚ್ಚುತ್ತೇನೆ. ದಿನಪತ್ರಿಕೆಯನ್ನು ಕೈಗೆ ತೆಗೆದುಕೊಳ್ಳುತ್ತೇನೆ. ಏಳೂವರೆ ಹೊಡೆಯುತ್ತದೆ. ಕಾಫಿಗೆಂದು ಸ್ಟೋ ಹಚ್ಚಿ ನೀರಿಗಿಡುತ್ತೇನೆ. ಬಾಗಿಲು ತೆರೆಯುತ್ತದೆ. ಕವಿತಾ ಬರುತ್ತಾಳೆ. ಕೈಯ್ಯಲ್ಲೊಂದು ಕಿಟ್ ತರುತ್ತಾಳೆ. "ಗೆಳತಿಯ ಮನೆಯಲ್ಲಿ ಉಳಿದು ಬೇಸರ ಬಂತು. ಎದ್ದು ಬಂದು ಬಿಟ್ಟೆ. ಬೇಸರವಿಲ್ಲ ತಾನೆ?" ಎಂದು ಪ್ರಸ್ತಾಪ ಮಾಡಿ ಖುರ್ಚಿಯಲ್ಲಿ ಕೂಡುತ್ತಾಳೆ. "ಇಲ್ಲ ಕವಿತಾ" ಎನ್ನುತ್ತ ಮತ್ತೊಂದು ಕಪ್ಪು ನೀರನ್ನು ಪಾತ್ರೆಗೆ ಹಾಕುತ್ತೇನೆ... ರಿಬೆಲ್ಲೊ "ಬರುತ್ತೇನೆ" ಎಂದು ಎದ್ದು ಹೋಗುತ್ತಾನೆ. ಕವಿತಾ ಪೇಪರ ಓದ ತೊಡಗುತ್ತಾಳೆ. ಕಾಫಿಯನ್ನು ಅವಳಿಗೆ ಕೊಡುತ್ತೇನೆ. ಕುಡಿಯುತ್ತ ಊಟ ಎಲ್ಲಿ ಮಾಡುತ್ತಿ" ಎಂದು ಕೇಳುತ್ತಾಳೆ. "ಸಿಟಿ ಇಲ್ಟೈಟನಲ್ಲಿ" ಎನ್ನುತ್ತೇನೆ. ಪೇಪರು ಕೆಳಗಿಟ್ಟು ಸುಮ್ಮನೆ ಕೂಡುತ್ತಾಳೆ. "ಒಂದರೆಡು ವರ್ಷಗಳಲ್ಲಿ ಏನೆಲ್ಲಾ ಆಗಿ ಹೋಯಿತು" ತಾನು ತಂದೆ ಹೇಳಿದಂತೆ ಕೇಳಿದರೂ ಸರಿಯಾಗಿತ್ತೆಂದು ಮುಖ ಗಂಭೀರಮಾಡಿ ಕೇಳುತ್ತಾಳೆ. "ನಿನ್ನ ಅಭಿಪ್ರಾಯವೇನು ಅನಿ?" ಎಂದು ಒತ್ತಾಯಿಸುತ್ತಾಳೆ. "ಇದಕ್ಕೂ ಅಭಿಪ್ರಾಯದ ಬೆಂಬಲ ಬೇಕಾಗುತ್ತದೆಯೇ?" ಎಂದು ಉತ್ತರಿಸುತ್ತೇನೆ "ಭಾರತದ ಲಕ್ಷಾಂತರ ಮಹಿಳೆಯರು ಗಂಡ ಏನು ಮಾಡಿದರೂ ದೇವರೆಂದು ಭಾವಿಸಿ ಸಹಿಸಿಕೊಂಡಿಲ್ಲವೆ?" ಎಂದು ತನ್ನನ್ನು ವಿಶ್ಲೇಷಿಸಿಕೊಳ್ಳುತ್ತಾಳೆ. "ಇದ್ದಾರೆ ಕವಿತಾ, ಇದ್ದಾರೆ." ಎಂದು ಒತ್ತಿ ಹೇಳುತ್ತೇನೆ. "ನಿನಗೆ ಹೀಗೆ ಹೆಂಗಸರು ಗುಲಾಮರಂತೆ ಬಾಳುವದು ಸೇರುತ್ತದೆಯೇ?" ಎಂದು ಕೇಳುತ್ತಾಳೆ. "ಖಂಡಿತ ಇಲ್ಲ" ಎಂದಾಗ "ಹಾಗಾದರೆ ಅವರೇನು ಮಾಡಬೇಕು? ಮನೆ ಬಿಟ್ಟು ಬರಬೇಕೆ?" ಎಂದು ಅವಳ ಪ್ರಶ್ನೆ. "ಕವಿತಾ, ಲೋಕದ ಉದಾಹರಣೆಗಳಿಂದ ನಮ್ಮನ್ನು ಆಧರಿಸಿಕೊಳ್ಳುವ ಅವಶ್ಯಕತೆಯಾದರೂ ಏನು? ನಿನ್ನನ್ನು ನಿನಗೆ ಅನ್ನಿಸಿಕೊಳ್ಳಲು ಬರುವದಿಲ್ಲವೆ?" ಎಂದು ಮರುಪ್ರಶ್ನೆ ಹಾಕಿದಾಗ "ಹಸಿವಾಗುತ್ತಿದೆ. ಊಟಕ್ಕೆ ಹೋಗೋಣ" ಎನ್ನುತ್ತಾಳೆ. ಬ್ಯಾಟರಿ ತೆಗೆದುಕೊಳ್ಳುತ್ತೇನೆ. ಕತ್ತಲೆಯ ರಸ್ತೆಯಿಂದ... ಮರಗಳ ಸಂದಿಗಳಿಂದ ಬಿದ್ದ ಬೆಳಕಿನಲ್ಲಿ "ಅನಿ, ನನಗೆ ತುಂಬಾ ಸಮಾಧಾನವಾಗಿದೆ. ನಾವೇ ನಾವಾಗಿ ಯಾರೂ ಪ್ರಶ್ನಿಸದಂತಿರುವ ಬದುಕಿನಲ್ಲಿ ಹೇಗೆ ನಡೆಯುತ್ತೇವಲ್ಲ" "ಹೌದು ಕವಿ." ಎನ್ನುತ್ತೇನೆ. "ಬಹಳ ದಿನಗಳ ನನ್ನ ಕನಸು ನನಸಾಗಿದೆ." ಎಂದು ತಡೆದು ನನ್ನ ತೋಳಿನ ಮೇಲೆ ಒರಗುತ್ತಾಳೆ. "ಕವಿ. ಕನಸು ಕಾಣುವ ಅಭ್ಯಾಸವೇ ನನಗಿಲ್ಲ" ಎಂದು ಅವಳ ಕೆನ್ನೆ ಮುಟ್ಟುತ್ತೇನೆ. ಊಟವಾದ ಮೇಲೆ ಸಿನೇಮಾಕ್ಕೆ ಹೋಗೋಣ ಎನ್ನುತ್ತಾಳೆ. ಹೋಗುತ್ತೇವೆ. ಕವಿತಾ ಕುಳಿತಲ್ಲಿಯೇ ಬಿಕ್ಕುತ್ತಾಳೆ. ಒರೆಸಿಕೊಳ್ಳುತ್ತಾಳೆ. ಕಥೆ ಚೆನ್ನಾಗಿದೆ ಎನ್ನುತ್ತಾಳೆ. ಹೀರೋಗಿಂತ ಹೀರೋಯಿನ್ ಪರಿಣಾಮಕಾರಿಯಾಗಿ ಆಕ್ಟಿಂಗ್ ಮಾಡಿದ್ದಾಳೆ... ಎನ್ನುತ್ತಾಳೆ. ಡೈರೆಕ್ಷನ್ ಎಕ್ಸಲೆಂಟ್ ಎನ್ನುತ್ತಾಳೆ. ರೂಮಿಗೆ ಬಂದ ಮೇಲೆ ತುಂಬಾ ಸೆಖೆ ಎನ್ನುತ್ತಾಳೆ. ಟೆರೇಸಿನ ಮೇಲೆ ಮಲಗೋಣ ಎಂದು ಹಾಸಿಗೆಯನ್ನು ಹುಡುಕುತ್ತಾಳೆ. ಬೇಡ ಬಿಡು ಕಿಡಕಿ ತೆರೆದಿಟ್ಟರೆ ಗಾಳಿ ಬರುತ್ತೆಂದು ತಂದ ಸೇಬು ಹಣ್ಣನ್ನು ಹೋಳು ಮಾಡುತ್ತಾಳೆ. ಬಾಯಿಗಿಡುತ್ತಾಳೆ. "ಅನಿ, ನೀನೊಮ್ಮೆ ನನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗು" ಎನ್ನುತ್ತ ಕ್ರಾಫಿನಲ್ಲಿ ಬೆರಳು ತೂರುತ್ತಾಳೆ. ಮನೆಯ ಕಥೆ, ಅಪ್ಪನ ಕಥೆ, ಸಮಾಜದ ಕಥೆ, ಆಚೆ–ಈಚೆಯವರ ಕಥೆ, ನಾಣಭಟ್ಟನ ದುಷ್ಟತನವನ್ನೆಲ್ಲ ಕುರಿತು ತುಂಡು–ತುಂಡಾಗಿ ಮಾತನಾಡುತ್ತಾಳೆ. ರಾತ್ರಿಯ ಒಂದು ಘಂಟೆ ಹೊಡೆಯುತ್ತದೆ 'ರಾಜಾ' ಎಂದು ಎಡಗಡೆಯಿಂದ ಕರೆಯುತ್ತಾಳೆ. "ನಮ್ಮ ಮಧ್ಯದಲ್ಲಿ ಏನಿದೆ?" ಎಂದು ಮಗ್ಗಲು ಮಾಡುತ್ತಾಳೆ. ತನಗೆ ಮದುವೆಯಾಗಿದೆಯಾ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾಳೆ. "ನೀನೇಕೆ ಮದುವೆಯಾಗಲಿಲ್ಲ?" ಎಂದು ಪ್ರಸ್ತಾಪಿಸುತ್ತಾಳೆ. "ಆಗಲಿಲ್ಲವಷ್ಟೆ" ಎನ್ನುತ್ತೇನೆ. "ಹೆಂಗಸರ ಸಹವಾಸ ಬೇಕೆಂದು ಕಾಣುವದಿಲ್ಲವೆ?" ಎಂದು ಕೆನ್ನೆಯ ಮೇಲಿನ ಕೈಯನ್ನು ಎದೆಯ ಮೇಲೆ ತರುತ್ತಾಳೆ. "ಅದಕ್ಕೆ ನನ್ನ ವಿರೋಧವಿಲ್ಲ" ಎನ್ನುತ್ತೇನೆ. "ಕತ್ತಲೆಯಲ್ಲಿ ಜಗತ್ತು ಒಂದು ತರಹವಿರುತ್ತದೆ ಅಲ್ಲವೆ?" ಎನ್ನುತ್ತಾಳೆ. "ಹೌದು ಎನ್ನಲಾಗುವದಿಲ್ಲ" ಎಂದಾಗ "ನೀನು ಹಾಗೆಲ್ಲ ಮಾತಾಡಬೇಡ" ಎಂದು ತುಟಿಯ ಮೇಲೆ ಬೆರಳಿಡುತ್ತಾಳೆ. ಬಲಗೈ ಹಾಸಿಗೆಯ ಮೇಲೆ ಊರಿ ಮುಖದ ಮೇಲೆ ಒರಗಿ 'ರಾಜಾ' ಎನ್ನುತ್ತಾಳೆ. "ನೀನು ನನ್ನನ್ನು ಪ್ರೀತಿಸುವದಿಲ್ಲವೇ." ಎಂದು ತುಟಿಗೆ ತುಟಿಯಿಟ್ಟಾಗ ಅವಳನ್ನು ಹಿಡಿದುಕೊಳ್ಳುತ್ತೇನೆ. ಬಿಗಿಯಾಗಿ ಅವಳು ಅಂಗಾತ ಹಾಸಿಗೆಯ ಮೇಲೆ ಮಲಗುತ್ತಾಳೆ, "ರಾಜಾ, ನನ್ನ ಎದೆಯ ಮೇಲೆ ಕೈಯಿಡುವದಿಲ್ಲ?" ಎಂದು ಕೈ ಹಿಂಡುತ್ತಾಳೆ. ದುಂಡನ್ನ ಅವಳ ಮೊಲೆಗಳ ಮೇಲೆ ಗಟ್ಟಿಯಾಗಿ ಅವುಚಿ ಹಿಡಿದುಕೊಳ್ಳುತ್ತಾಳೆ. 'ರಾಜಾ" ಎನ್ನುತ್ತಾಳೆ. "ಪ್ರೀತಿ ಎಂದರೇನು?" ಎಂದು ಸಂಬಂಧವಿಲ್ಲದವಳಂತೆ ಪ್ರಶ್ನೆ ಕೇಲಿ ಬಿಡುತ್ತಾಳೆ. "ವ್ಯಾಖ್ಯಾನಕ್ಕೂ ಬದುಕಿಗೂ ಏನು ಸಂಬಂಧ ಕವಿತಾ" ಎಂದು ನಾನು ಅವಳೆದೆಯ ಮೇಲೆ ತಲೆಯಿಡುತ್ತೇನೆ. ಎರಡೂ ಕೈಗಳಿಂದ ಕೆನ್ನೆ ಹಿಡಿದು ಮುತ್ತಿಡುತ್ತೇನೆ. ನಾನು ಹಾಸಿಗೆಯಲ್ಲಿ ಅಂಗಾತ ಮಲಗುತ್ತೇನೆ. "ಪ್ರೀತಿ ಇಬ್ಬರ ಮಧ್ಯದ ಅಮರ ಸಂಬಂಧ ಅಲ್ಲವೇ?" ಎನ್ನುತ್ತಾಳೆ. "ಖಂಡಿತ ಅಲ್ಲ ಕವಿತಾ. ಅದು ಒಬ್ಬನೊಳಗಿನ ಮನಃಸ್ಥಿತಿ" ಎನ್ನುತ್ತೇನೆ. "ನಿನಗೆ ನಾಳೆ ಆಫೀಸಿಗೆ ಹೋಗಬೇಕು. ನಿದ್ದೆ ಮಾಡು" ಎಂದು ಮೆಲ್ಲಗೆ ತಲೆ ತಟ್ಟುತ್ತಾಳೆ. ತಾನು ಎಡ ಮಗ್ಗುಲಾಗಿ ಮಲಗಿ ನಿದ್ದೆ ಮಾಡುತ್ತಾಳೆ.

ಆಫೀಸು ಮುಗಿಸಿ ರೂಮಿನ ಕಡೆ ಬರುತ್ತೇನೆ. ಇನ್ನೂ ಹೊತ್ತು ಇರುತ್ತದೆ. ರಿಬೆಲ್ಲೊ ಹಿಂದಿನಿಂದ ಬಂದು 'ಹಲೊ' ಎನ್ನುತ್ತಾನೆ. ತನಗೂ ಓದಿ–ಓದಿ ಬೇಸರ ಬಂದಿದೆ ಎನ್ನುತ್ತಾನೆ. "ಬೈಲಿಗೆ ಹೋಗಿ ಕೂಡ್ರುವಾ" ಎನ್ನುತ್ತಾನೆ. ಹೊರಡುತ್ತೇವೆ. ಹತ್ತಿರದ ಎರಡು ಬಂಡೆಗಳ ಮೇಲೆ ಕೂಡುತ್ತೇವೆ. "ಸಂಜೆ. ತುಂಬಾ ಸುಂದರವಾಗಿದೆ" ಎಂದು ಉದ್ಗರಿಸುತ್ತಾನೆ. ಪ್ರಕೃತಿ ಸನ್ನಿಧಿಯಲ್ಲಿರುವ ಶಾಂತಿ ಮನುಷ್ಯಲೋಕದಲ್ಲಿ ಇಲ್ಲವೆಂದು. "ಕೈಗಳೆರಡರ ಮೇಲೆ ಕೆನ್ನೆ ಚೂಪಾಗಿಟ್ಟು ಹೇಳಿಕೊಳ್ಳುತ್ತಾನೆ." ಮನುಷ್ಯನ ಸಂಬಂಧ ಕ್ಷಣಿಕ Once for all I have realized. I am almost a saint. ಎಂದು ನಗುತ್ತಾನೆ. "Have you mistaken me?" ಎಂದು ಕೇಳಿದಾಗ "Neve friend" ಎಂದು ಕೈ ಚಾಚುತ್ತೇನೆ. 'ತಾನು ಈಗ ಲಾ ಓದುತ್ತಿದ್ದುದಾಗಿಯೂ, ಟರ್ಮ್ ಕಟ್ಟಿದ್ದಾಗಿಯೂ It is a both absorbing and usefull ಎಂದು ವರ್ಣಿಸುತ್ತಾನೆ. "ಯಾರಯ್ಯ, ಆ ಹೆಂಗಸು ನಿನ್ನ ಸಂಗಡ ಇದ್ದಾಳಲ್ಲ?" ಎಂದು ಪ್ರಶ್ನಾರ್ಥಕವಾಗಿ ನೋಡುತ್ತಾನೆ. "ನನ್ನ ರೂಮ್ ಮೇಟ್" ಎನ್ನುತ್ತೇನೆ. "ಅಷ್ಟೇನಾ? "ಎಂದಾಗ, "A friend of mine" ಎನ್ನುತ್ತೇನೆ "ಹಾಗೇನು ಎಂದು ಉದ್ಗರಿಸುತ್ತಾನೆ. "ಅವಳು ಮದುವೆಯಾದವಳು" ಎಂದು ವಾಕ್ಯವೊಂದನ್ನು ಹೇಳಿ ಕೋಲೊಂದನ್ನು ತೆಗೆದುಕೊಂಡು ನೆಲವನ್ನು ಕೆದರುತ್ತಾನೆ. ಕೋಲನ್ನು ಅಲುಗಾಡಿಸುತ್ತ "ಮನುಷ್ಯನಾದವನು ತನ್ನ ಅನುಭವದಿಂದ ಕಲಿಯಬೇಕಾಗು

ರೇಷನ್ನ ಪ್ರಣಯ

ಎದೆಯು ಎಡಗಡೆಯು
ಬ್ಯಾಕಲ್ ಹುಂಚ
ಇದೆ; ರೇಷನ್ನ ಪ್ರಣಯು
ಜನುಮ ಎಗ್ಗೆ
'ಕ್ಯೂ' ನಿಂತ ಲಲನೆಗೆ
ಲಿಮಿಟೆಡ್ ವಿತರಣೆ
ಕಳ್ಳ ಕನ್ನೆಗೆ ಕಳ್ಳ ಸಂತೆಯು
ಸಮಾರಾಧನೆ

– ಶ್ರೀನಿವಾಸ ಕುಲಕರ್ಣಿ



ತ್ತದೆ. ಏನು ಹೇಳುತ್ತಿ?" ಎಂದು ಕೋಲನ್ನು ಮೇಲೆ ಹಿಡಿದುಕೊಂಡು ಕೇಳುತ್ತಾನೆ. "ನಾನು ಏನಾದರೂ ಹೇಳಬೇಕೇನು...?"ಎಂದಾಗ "ನಿಜವಾಗಿಯೂ" ಎಂದು ಕೋಲನ್ನು ಬೆರಳುಗಳ ಮಧ್ಯೆ ಹಿಡಿದು ತಿರುಗಿಸುತ್ತಾನೆ. "ನೀನು ಪ್ರೀತಿಯನ್ನು ಕುರಿತು ಹೇಳುತ್ತೀ ತಾನೇ?" "ಹೌದು" ಎಂದು ಕೋಲನ್ನು ನೆಲಕ್ಕೆ ಊರುತ್ತಾನೆ. "ಪ್ರೀತಿ ಎಂದರೆ ಸದಾ ನವೀನವಾದ, ಜಾಗ್ರುತ್ತವಾದ, ಜೀವಂತ ಭಾವ. ಅದಕ್ಕೆ ಕಾಲದ ಗಡಿಯಿಲ್ಲ. ಆದುದರಿಂದ ಅಲ್ಲಿ ಅನುಭವದ ಪ್ರಶ್ನೆಯೇ ಏಳುವದಿಲ್ಲ. "ಆತ ಹುಬ್ಬು ಗಂಟಿಕ್ಕುತ್ತಾನೆ. ಕೋಲನ್ನು ಬಂಡೆಗೆ ಬಡಿದು "ಅನುಭವ ಮರುಕಳಿಸಿದರೆ ದುಃಖ ಅನುಭವಿಸುವವನು ನೀನು!" ಎಂದು ಗಂಭೀರವಾಗಿ ನುಡಿಯುತ್ತಾನೆ. "ಥ್ಯಾಂಕ್ಸ್, ಆದರೆ ರೆಬೆಲ್ಲೋ ದುಃಖ ನಮ್ಮದೇ ನಿರ್ಮಾಣ. ಚಿಂತನೆಯ ಅಸಹಾಯಕ ಮಗು ಅದು ಚಿಂತನೆ... ಅಂದರೆ ವಿಚಾರ ಪರತೆ ಕಾಲಕ್ಕೆ ಸಂಬಂಧಪಟ್ಟುದು" ಎನ್ನುತ್ತೇನೆ. "ನಾನು ಸಂಪೂರ್ಣವಾಗಿ ನಿನ್ನನ್ನು ವಿರೋಧಿಸುತ್ತೇನೆ. Please mind" ಎನ್ನುತ್ತ ಕೋಲನ್ನು ಬೀಸಾಕುತ್ತಾನೆ. ಧಡ-ಧಡ ಹೊರಟು ಹೋಗುತ್ತಾನೆ. ಆಕಾಶ ವಿಪರೀತ ಶಾಂತವಾಗಿರುತ್ತದೆ. ಒಂದೊಂದು ಮೋಡವೂ ಇಲ್ಲದೆ ಕಪ್ಪು, ನೀಲಿಯಾಗಿ ಎಲ್ಲ ಕಡೆಗೆ ಹರಡಿಕೊಂಡಿರುತ್ತದೆ. ಹೌದೋ ಅಲ್ಲವೋ ಅನ್ನುವ ಹಾಗೆ ಬೆಳಕು ತೋರುತ್ತದೆ. ಏಳುತ್ತೇನೆ. ಟಾವರ ಕ್ಲಾಕಿನಿಂದ ಎಂಟು ಹೊಡೆಯುತ್ತದೆ. ಕೋಣೆಗೆ ಹೋಗುತ್ತೇನೆ. ಕವಿತಾ ಕಾಯುತ್ತಿರುತ್ತಾಳೆ. "ನೀನು ಬರಲೇಯಿಲ್ಲ ಬೇಸರ ಬಂದು ಹೋಯ್ತು. ಊಟಕ್ಕೆ ಹೋಗೋಣವೇ?" ಎಂದು ತಯಾರಾಗುತ್ತಾಳೆ. ಹೊರಡುತ್ತೇವೆ. ಊಟ ಮಾಡುತ್ತೇವೆ. ಹೀಗೆ ಸುತ್ತು ಹಾಕಿ ಹೋಗುವಾ ಎನ್ನುತ್ತಾಳೆ. ರಸ್ತೆಯ ದೀಪಗಳ ಮಧ್ಯ ನಿರ್ಜನ ರಸ್ತೆಗಳಲ್ಲಿ ನಾನೂ ಅವಳೂ ಸುತ್ತುತ್ತೇವೆ. ರೂಮಿಗೆ ಬಂದಾಗ ಹತ್ತು ಹೊಡೆಯುತ್ತದೆ. ಅವಳು ಹಾಲು ಕಾಸುತ್ತಾಳೆ. ನಾನು ಖುರ್ಚಿಯಲ್ಲಿ ಕುಳಿತು ಪುಸ್ತಕವೊಂದನ್ನೆತ್ತಿ ಓದಲು ಆರಂಭಿಸುತ್ತೇನೆ. ಅವಳು ರೇಡಿಯೋ ಹಚ್ಚುತ್ತಾಳೆ. ಹನ್ನೊಂದಕ್ಕೆ ಕಾರ್ಯಕ್ರಮ ಮುಗಿದಾಗ "ಮಲಗೋಣವೋ" ಎಂದಾಗ ಮಲಗುತ್ತೇವೆ. "ರಾಜಾ" ಎನ್ನುತ್ತಾಳೆ. ಮುತ್ತಿಡುತ್ತಾಳೆ. ತಬ್ಬಿಕೊಳ್ಳುತ್ತಾಳೆ. "ರಾಜಾ ಈ ಜನ್ಮವೆಲ್ಲ ಹೀಗೇ ನಡೇದೀತಲ್ಲವೇ...?" ಎಂದು ಚಿಕ್ಕ ಧ್ವನಿಯಲ್ಲಿ ಕೇಳುತ್ತಾಳೆ. "ನಾನು ಹಾಗೆ ವಿಚಾರ ಮಾಡುವದಿಲ್ಲ." "ಅಂದರೆ?" ಎಂದು ಎದ್ದು ಲೈಟು ಹಾಕುತ್ತಾಳೆ. ನಾನು ಸಿಗರೇಟು ಹಚ್ಚುತ್ತೇನೆ. "ಏನು, ಅನಿ ನಮ್ಮ ಬದುಕು ಹೀಗೇ ನಡೆಯಲಿಕ್ಕಿಲ್ಲವೆ?" "ಕವಿತಾ, ಅಷ್ಟೇಕೆ ಗಾಬರಿ ಮಾಡಿಕೊಳುತ್ತಿ? ಪ್ರೇಮಕ್ಕೆ ಕೇಂದ್ರವೆಂಬುದೇಯಿಲ್ಲ. ಆದ್ದರಿಂದ ಅದಕ್ಕೆ ಹಿಂದೂ ಇಲ್ಲ. ಮುಂದೂ ಇಲ್ಲ. ಪ್ರೀತಿಸಬೇಕು. ಇರಬೇಕು ಅಷ್ಟೆ. "ಅವಳು ನನ್ನ ಹೆಗಲಮೇಲೆ ಕೈ ಹಾಕಿ, "ಅನಿ, ಸಿಗರೇಟು ಒಗೆದು ಬಿಡು" ಎಂದು ಕಸಿದು ಆಚೆ ಒಗೆದು ಲೈಟು ಆರಿಸುತ್ತಾಳೆ.

ಆಫೀಸಿಗೆ ಹೋದಾಗ ರಾಜೇಶ ಮೌನವಾಗಿ ಸ್ವಾಗತಿಸುತ್ತಾನೆ. ತನ್ನ ಕೆಲಸದಲ್ಲಿಯೇ ವಿಶೇಷ ಮಗ್ನನಾಗಿದ್ದಾನೆ. ಒಂದರ ನಂತರ ಒಂದು ಕಾಗದವನ್ನು ಓದಿ, ಬರೆದು ಬದಿಯ ಪೆಟ್ಟಿಗೆಯಲ್ಲಿ ಒಗೆಯುತ್ತಾನೆ. ಬೆಲ್ ಹೊಡೆದಾಗ ಪ್ಯೂನ್ ಹೋಗಿ ಬಂದು 'ಬಾಸ್ ಕರೆಯುತ್ತಾರೆ' ಎನ್ನುತ್ತಾನೆ ನಾನು ಒಳಗೆ ಹೋಗುತ್ತೇನೆ. "ಕೂಡ್ರಿ" ಎನ್ನುತ್ತಾರೆ.

ಅದ್ವೈತ



ಕಣ್ತುಂಬ ಕಂಡರೂ
ಗುರುತಿಸದೆ ಹೋದದ್ದು
ಹತ್ತು ವರುಷದ ನಿನ್ನ
ವಿರಹಕ್ಕಲ್ಲ ನೀರೆ
ಹತ್ತು ನಿಮಿಷದಲಿ
ಲಿಂಗಭೇದವ ನಳಿಸಿದ
ನಿನ್ನ ಉಡುಪಿನ
ಅದ್ವೈತ ವೇಷಾಂತಕೆ

– ಶ್ರೀನಿವಾಸ ಕುಲಕರ್ಣಿ

ಲೋಕಲ್ ಪೇಪರುಗಳೆರಡನ್ನು ನನ್ನ ಕೈಗೆ ಕೊಡುತ್ತಾರೆ. ಕೆಂಪು ಗೀಟುಹೊಡೆದ ಕಾಲಂ ಎತ್ತಿ ಓದುತ್ತೇನೆ. ನನ್ನ ಮತ್ತು ಕವಿತೆಯ ಕಥೆಯನ್ನಿ ಹೆಸರೆತ್ತಿ ಬರೆದಿರುತ್ತಾರೆ. "ಏನು ಹೇಳುತ್ತೀರಿ" ಎಂದು ಕೇಳುತ್ತಾನೆ. "A fact" ಎನ್ನುತ್ತೇನೆ. ಅವನು ನನ್ನ ಮುಖವನ್ನು ಬಿಟ್ಟು ಬಿಡದೇ ನೋಡತೊಡಗುತ್ತಾನೆ. "ಅದರಲ್ಲಿ ಯಾವುದನ್ನೂ ನೀವು ಅಲ್ಲಗಳೆಯುವದಿಲ್ಲವೇ...?" ಎಂದು ಮರು ಪ್ರಶ್ನೆ ಹಾಕಿದಾಗ "No sir" ಎಂದಾಗ "ಸ್ವಾಮಿ, ಯಾವ ಜಗತ್ತಿನಲ್ಲಿ ಇದ್ದೀರಿ ಎಂಬುದು ಗೊತ್ತೆ?." ಎಂದು ಜೋರಾಗಿ ಕೇಳುತ್ತಾನೆ. "ಏನು ಸರ್. ನಾವೆಲ್ಲ ಇರುವದು ಒಂದೇ ಜಗತ್ತಿನಲ್ಲಲ್ಲವೆ ನಮ್ಮ ಜಗತ್ತು" ಎಂದಾಗ "ನಿಮ್ಮ ವಿಷಯ ಪಬ್ಲಿಕ್ ಸ್ಕ್ಯಾಂಡಲ್ ಆಗುತ್ತದೆ. Better on your guard" ಎಂದು ತಲೆ ತಗ್ಗಿಸಿ ತನ್ನ ಜಗತ್ತಿನಲ್ಲಿ ಲೀನವಾಗುತ್ತಾನೆ.

ಆಫೀಸ ಬಿಡುತ್ತದೆ. ಹಿಂದಿನಿಂದ ರೆಬೆಲ್ಲೊ ಕೈ ತಟ್ಟಿ ಕರೆದು ನಿಲ್ಲಿಸುತ್ತಾನೆ. "ಹದಿನೈದು ದಿನವಾಗಿ ಹೋಯ್ತು. ನಿನ್ನ ಹತ್ತಿರ ಮಾತಾಡದೆ" ಎಂದು ಲೆಕ್ಕ ಹಾಕುತ್ತಾನೆ. "ನನ್ನ ಮೇಲೆ ಕೋಪಿಸಿ ಕೊಂಡೆಯಾ" ಎಂದು ನಗೆಯಾಡುತ್ತಾನೆ."ಇಲ್ಲ, ಮಾರಾಯ." ಎಂದು ನಕ್ಕು ಉತ್ತರಿಸುತ್ತೇನೆ. "ಗೆಳೆಯನ ದೌರ್ಬಲ್ಯಕ್ಕಿಂತ ಹೆಚ್ಚಾಗಿ ಗೆಳೆಯನಿಗೆ ನಾನು ಹೆಚ್ಚು ಬೆಲೆ ಕೊಡುತ್ತೇನೆ." ಎನ್ನುತ್ತಾನೆ "ಏಷ್ಟು ಒಳೆಯವನು ನೀನು."ಎಂದು ಕೈ ಕುಲುಕಿದಾಗ, "ಇಲ್ಲೇ ಕಾಫಿ ಕುಡಿದು ಲಾ ಕಾಲೇಜ ಲೈಬ್ರರಿಗೆ ಹೋಗಿ ರೂಮಿಗೆ ಹೋಗುವಾ' ಎನ್ನುತ್ತಾನೆ. ಇಬ್ಬರೂ ಕಾಫಿ ಕುಡಿಯುತ್ತೇವೆ. ರೆಬೆಲ್ಲೊನ ಮುಖ ಗಂಭೀರವಾಗುತ್ತ ಹೋಗುತ್ತಿದೆ. ನಾನು ಸಿಗರೇಟೊಂದನು ಅವನ ಕೈಗೆ ಕೊಟ್ಟಾಗ "ಥ್ಯಾಂಕ್ಸ" ಎಂದು ಹಿಂದಿರುಗಿಸಿ "ನಾಲ್ಕು ತಿಂಗಳಾಯಿತು ಸಿಗರೇಟನ್ನು ಬಿಟ್ಟು" ಎಂದು ಒಂದು ರೀತಿಯ ಅನುಮಾನದಿಂದ ಹೇಳುತ್ತಾನೆ. "ನಿನಗೀಗ ವಿಷಯ ಗೊತ್ತಾಗಿರಬಹುದೆಂದು ಭಾವಿಸುತ್ತೇನೆ." ಎಂದು ಬಿಲ್ಲನ್ನು ತೆಗೆದುಕೊಂಡು ಏಳುತ್ತಾನೆ. ಲಾ ಕಾಲೇಜಿನ ಲೈಬ್ರರಿಗೆ ಹೋಗುತ್ತೇವೆ. ರೆಬೆಲ್ಲೊ ಕಪಾಟೊಂದರ ಮುಂದೆ ನಿಂತು ದೊಡ್ಡ ಪುಸ್ತಕ ಒಂದನ್ನು ಕೈಯ್ಯಲ್ಲಿ ತೆಗೆದುಕೊಂಡು. issue ರಜಿಸ್ಟರಿನಲ್ಲಿ ಬರೆದು ನನ ಕರೆದು ಓದುವ ಟೇಬಲ್ಲಿಗೆ ಕರೆದೊಯ್ಯುತ್ತಾನೆ. ಇಂಡೆಕ ತೆಗೆದು ಏನೋ ಹುಡುಕಿ ಅಲ್ಲಿ ಬೆಟ್ಟಿಟ್ಟುಕೊಂಡು ಪುಟ ತಿರುವಿ "ಇಲ್ಲಿ ನೋಡು," ಎಂದು ಮೆತ್ತಗೆ ಹೇಳುತ್ತಾನೆ. ನನಗೆ ತೋರಿಸುತಾನೆ. ಅದು, ಐ.ಪಿ.ಸಿ. ಸೆಕ್ಷನ್ 498. ಓದಿ ಮುಗಿಸಿ ಅವನಿಗೆ ಪುಸ್ತಕವನು ಕೊಡುತ್ತೇನೆ. "ಈಗ ಹೋಗುವಾ" ಎಂದು ಪುಸ್ತಕವನು ಬಗಲಿಗಿಟ್ಟುಕೊಂಡು ಹೊರಡುತ್ತಾನೆ. ರೂಮಿಗೆ ಬಂದು ಮುಟ್ಟುತ್ತೇನೆ. ಆತ ತನ್ನ ರೂಮಿಗೆ ಹೋಗಿ ಬಾಗಿಲು ಹಾಕಿಕೊಳುತ್ತಾನೆ. ಕವಿತಾ ರೂಮಿಗೆ ಬಂದು ಮಂಚದ ಮೇಲೆ ಮಲಗಿದ್ದಾಳೆ. ಪೇಪರು ಓದುತ್ತಾ, ಅನಿ, ಎಷ್ಟೊತ್ತಾಯ್ತು?" ಎಂದಾಗ ರೆಬೆಲ್ಲೊನ ಸಂಗಡ ಹೋಗಿದ್ದೆ" ಎನ್ನುತ್ತೇನೆ. "ಥರೋ ಜಂಟ್ಲಮನ್ ಅಲ್ಲವೇ?" ಎಂದು ರೆಬೆಲ್ಲೊನ ಕುರಿತು ಹೇಳುತ್ತಾಳೆ. ನಾಳೆ ತನ್ನ ಸ್ಕೂಲಲ್ಲಿ ಹಂಪೆಗೆ ಟ್ರಿಪ್ ಇದೆ ಎನ್ನುತ್ತಾಳೆ. ಹೊಸತಾಗಿ ಜ್ವಾಯಿನ ಆದ ಮಹೇಂದ್ರ ಎನ್ನುವವರು ತುಂಬಾ ಚನ್ನಾಗಿದ್ದಾರೆ ಎನ್ನುತ್ತಾಳೆ. ಸ್ಕೂಲಿಗೆ ಹೋದ ಮೇಲೆ ಮನಸ್ಸಿನ ಗೊಂದಲ, ಕಳವಳಗಳೆಲ್ಲ ಮರೆತು ಹೋಗುತ್ತವೆ. ಮಕ್ಕಳು, ಕಲೀಗ್ಸ ಎಲ್ಲ ಪುಣ್ಯದಿಂದ ಬಹಳ hearty ಇದ್ದಾರೆ. ಅದೇ ಒಂದು ಬೇರೆ ಜಗತ್ತು ಎನ್ನುತ್ತಾಳೆ. ತಾನು ಸ್ಕೂಲಲಿದ್ದಾಗ ಎಥ್ಲೆಟ್ ಆಗಿದ್ದ ವಿಷಯ ನನಗೆ ಗೊತ್ತಿರ ಬಹುದೆಂದು ನೆನಪಿಸುತ್ತಾಳೆ. ಊಟಕ್ಕೆ ಹೊರಡುತ್ತೇವೆ. ವಾಕಿಂಗ್ ಮುಗಿಸಿ ಬರುತ್ತೇವೆ. ಮಂಚಕ್ಕೆ ಬೀಳುತ್ತೇವೆ. "ಅನಿ if I become pregnant?"ಎಂದು ಪ್ರಶ್ನೆ ಇಡುತ್ತಾಳೆ. "ಹಡೆಯಬೇಕಾಗುತ್ತದೆ." ಎಂದು ನಗುತ್ತೇನೆ. "ಸಮಾಜದಲ್ಲಿ ಆ ಮಗುವಿನ ಗತಿ ಏನು?" ಎಂದು ಕೇಳುತ್ತಾಳೆ. ನಾನು ಸಿಗರೇಟು ಹಚ್ಚುತ್ತೇನೆ. "ಸುಮ್ಮನಿದ್ದರೆ ಆಗುವದಿಲ್ಲ ಎಲ್ಲ ವಿಚಾರ ಮಾಡಬೇಕಾಗುತ್ತವೆ." ಎಂದು ಒತ್ತಾಯಿಸುತ್ತಾಳೆ. "ಅವಶ್ಯವಿಲ್ಲ" ಎಂದು ನಾನು ಹೇಳುತ್ತೇನೆ. "ನೀನು ಪಲಾಯನ ವಾದಿಯ ಹಾಗೆ ಮಾಡುತ್ತಿ. ವಿಚಾರ ಮಾಡಲೇ ತಯಾರಿಲ್ಲ." ಎಂದು ಆರೋಪಿಸಿ ಬಿಗಿಯಾಗಿ ಅಪ್ಪಿಕೊಳುತ್ತಾಳೆ. "ಕವಿತಾ," ಎಂದು ಕರೆಯುತ್ತೇನೆ. "ವಿಚಾರ ಮಾಡುವಾಗ ನಾವು ವಿಚಾರವನ್ನು ಕುರಿತೇ ಮಾಡುತ್ತೇವೆ. ಸತ್ಯವನ್ನಲ್ಲ" ಎನ್ನುತ್ತೇನೆ" "ಹಾಗೆಂದರೆ ಅನಿ, ಬದುಕಿಗೆ ತನ್ನದೇ ಆದ ಸಮಸ್ಯೆಗಳಿಲ್ಲವೆ?" ಎಂದು ನನ್ನ ಬೆನ್ನು ಸವರುತ್ತಾಳೆ. "ಬದುಕಿಗಿಲ್ಲ, ಕವಿತಾ ಆದರೆ ಬದುಕಿನಲ್ಲುಂಟು. ಒಂದು ವಿಷಯ ನಡೆಸುವವರೂ, ಕಲಿಸುವವರೂ ಇಲ್ಲಾರೂ ಇಲ್ಲ. ಪ್ರತಿಯೊಬ್ಬನೂ ಇಲ್ಲಿ ಏಕಾಂಗಿ" ಎಂದು ಅವಳ ಕೆನ್ನೆ ಹಿಡಿದು ಮುತ್ತಿಡುತ್ತೇನೆ. ನಿದ್ರೆ ಬರುತ್ತದೆ.

ಆಫೀಸಿನಲ್ಲಿ ತುಂಬಾ ಏಕಾಗ್ರತೆ. ಎಲ್ಲರೂ ಮೌನ. "ಇದು ಆಫೀಸಿನ ವಾತಾವರಣವೆಂದರೆ." ಎನ್ನುತ್ತಾನೆ ರಾಜೇಶ. ಆಫೀಸು ಮುಗಿಸಿ ನೇರವಾಗಿ ಮನೆಗೆ ಬಂದ್ರು

ಪುಸ್ತಕ ಓದಿದು ಕೊಡುತ್ತೇನೆ. ರೇಡಿಯೋ ದುಃಖಿ ಗೀತೆ ಹಾಡುತ್ತದೆ. ರಾಷ್ಟ್ರೀಯ ಸೂತಕ ದಿನಾಚರಣೆ ರೆಬೆಲ್ಲೊ ರೂಮಿಗೆ ಬರುತ್ತಾನೆ. "ಏನಯ್ಯಾ ಈ ಹೊತ್ತಿಗೆ ಓದುತ್ತ ಕುಳಿತಿದ್ದಿ. ಗಾರ್ಡನ್ನಿಗೆ ಹೋಗುವಾ" ಎಂದು ಏಳಿಸುತ್ತಾನೆ. ರಸ್ತೆಗಿಳಿಯುತ್ತೇನೆ. ಸಂಜೆಯ ಬಿಸಿಲಿನಲ್ಲಿ ಕಾಗೆಗಳು ಹಾರುತ್ತವೆ. ಜನ ಬಹಳ ಗಡಿಬಿಡಿಯಿಂದ ಹೋಗುತ್ತಿದ್ದಾರೆ. ಮಾತನಾಡದೆ ವಿಶ್ ಮಾಡುತ್ತಾರೆ. ಸ್ಮೈಲ್ ಕೊಡುತ್ತಾರೆ. ಟೆಲಿಫೋನ್ ಕಂಬಗಳು ಗುಂಯ್ ಎಂದು ಸದ್ದು ಮಾಡುತ್ತವೆ. ಸಿಟಿ-ಇಲೈಟಿಗೆ ನುಗ್ಗುತ್ತೇವೆ. ಕಾಫಿಗೆ ಸಕ್ಕರೆ ಜಾಸ್ತಿಯಾಯಿತೆಂದು' ದೂರುತ್ತಾನೆ. ಮುನ್ಸಿಪಲ್‌ಗಾರ್ಡನ್ನಿನಲ್ಲಿ ಜನ ಗಿಜಿಗಿಜಿ. ರುಮಾಲಿನವರು ಧೋತರದವರು, ಪ್ಯಾಂಟಿನವರು, ಪಾಯ್ಜಾಮಾದವರೂ ಗುಂಪು ಗುಂಪಾಗಿ ಕುಳಿತು ಕಡ್ಲೆ, ಸೇಂಗಾ ತಿನ್ನುತ್ತಾರೆ, ಎಳೆ ಸವತೆಯನ್ನು ಹೋಳು ಮಾಡಿ, ಮಸಾಲೆ ಹಚ್ಚಿ ಗಾಡಿ ಉರುಳಿಸಿಕೊಂಡು ಬರ್‍ತಾ ಇದ್ದಾನೆ. ರೆಬೆಲ್ಲೊ ನಾಲ್ಕಾಣೆಯನ್ನು ಒಗೆದು ಖರೀದಿಸುತ್ತಾನೆ." ಕೆಳಗಿನ ಮನೆಯ ಮನುಷ್ಯನ ಮೇಲೆ ನನಗೇಕೊ ಸಂಶಯ." ಎಂದು ರೂಮಿನ ಕೆಳಗಿರುವವನ್ನು ಕುರಿತು ಹೇಳುತ್ತಾನೆ. "ಅವನೇ ಅಲ್ಲವೆ ಜಾಂಬುವಂತಿ ಸ್ಟುಡಿಯೋದ ಮಾಲಕ" ಎನ್ನುತ್ತಾನೆ. ಸೆಕ್ಷನ್ 498 ಓದಿದ ಮೇಲೂ ಏನೂ ನಿರ್ಣಯ ತೆಗೆದುಕೊಂಡಂತೆ ಕಾಣುವದಿಲ್ಲವಲ್ಲ!" ಎಂದು ಆಶ್ಚರ್ಯದ ಚಿಹ್ನ ಇಡುತ್ತಾನೆ. "ಆ ಹೆಂಗಸನ್ನು ಬಿಟ್ಟು ಬಿಡು. I doubt her fidelity" ಎನ್ನುತ್ತಾನೆ. "ನಾನು ನಿನ್ನ ನಂಬಿಗೆಯ ಗೆಳೆಯನಲ್ಲವೇ?" ಎಂದು ಪ್ರಶ್ನೆ ಹಾಕುತ್ತೇನೆ. "ರೂಮು ಬದಲು ಮಾಡಿ ಬಿಡುವಾ ಒಂದು chit ಬರೆದು ರೂಮಿನಲ್ಲಿಟ್ಟು ಬಿಡು." "ಯಾಕಯ್ಯಾ ಮೂಕನ ಹಾಗೆ ಕುಳಿತಿದ್ದಿ?" ಎಂದು ಚುಡಾಯಿಸುತ್ತಾನೆ. ನನ್ನ ಕೈ ಹಿಡಿದು ಪ್ರೀತಿಯಿಂದ "My friend you are risking your life for bitch" ಎಂದು ಒಪ್ಪಿಸಲು ಪ್ರಯತ್ನ ಮಾಡುತ್ತಾನೆ. "ನನ್ನನ್ನು ಕ್ಷಮಿಸು ರೆಬೆಲ್ಲೊ. ನನಗೆ ನಿನ್ನನ್ನು ತಿಳಿದುಕೊಳ್ಳುವದು ಸಾಧ್ಯವಿಲ್ಲ. ಬಹಳ ತುಚ್ಛನೆಂದು ಅಳತೆಮಾಡುತ್ತಿದ್ದಿ. ಆದ್ದರಿಂದ..." ಎಂದು ನಿಲ್ಲಸುತ್ತಾನೆ..." ಆದರೆ ನನ್ನನ್ನು ಹೇಡಿ ಎಂದು ತಿಳಿಯಬೇಡ. ನಾವು ತಪ್ಪು ಮಾಡುತ್ತೇವೆ. ಆದರೆ ತಿದ್ದಿಕೊಳ್ಳುವದು ಬೇಡವೆ? She was all to me. ಆದರೆ ನನಗೆ ತಿಳುವಳಿಕೆ ಮೂಡಿದಾಗ ತಪ್ಪಿನ ಅರಿವಾಯಿತು. ಅದನ್ನು ಸರಿಪಡಿಸಿಕೊಂಡೆ." ಎಂದು ಆವೇಶದಿಂದ ಮಾತಾಡುತ್ತಾನೆ. "ಡಿಯರ್ ರೆಬೆಲ್ಲೊ ಖಂಡಿತಾ ನಿನ್ನನ್ನು ನಾನು ಏನೂ ತಿಳಿದುಕೊಳ್ಳಲಿಲ್ಲ. ಬೇಸರ ಮಾಡಿಕೊಳ್ಳಬೇಡ." ಎಂದು ಹೇಳಿದಾಗ "ನೀನು ನನ್ನ ಸ್ನೇಹಿತ, ಆಫೀಸಿನಲಿ, ಊರಿನಲ್ಲಿ, ಎಷ್ಟು ಗದ್ದಲವಿದೆ ಗೊತ್ತಾ? ನಾ ಹೇಳಿದ ಹಾಗೆ ಕೇಳು ಇಲ್ಲವಾದರೆ ಜಾಬು ಕಳೆದುಕೊಳ್ಳುತ್ತಿ. ಜೀವನ ಹಾಳು ಮಾಡಿಕೊಳ್ಳುತ್ತಿ. ಕೊನೆಗೆ ಜೈಲಿಗೆ ಹೋಗುತ್ತಿ!" ಎಂದು ಕೈಯ್ಯಲ್ಲಿಯ ಸವತೆಯ ಕಾಯಿಯ ಚೂರನ್ನು ದೂರ ಒಗೆಯುತ್ತಾನೆ. "ನನ್ನ ಕೊನೆಯ ಮಾತನ್ನು ಹೇಳುತ್ತಿದ್ದೇನೆ." ಎಂದು ಏಳುತ್ತಾನೆ. ಇಬ್ಬರೂ ಹೋಗಿ ಊಟ ಮಾಡಿ ರೂಮಿಗೆ ಬರುತ್ತೇವೆ. ಕೋಣೆಯ ಬಾಗಿಲು ತೆರೆದು ಲೈಟು ಹಾಕುತ್ತೇನೆ. ಎದುರಿನ ಹ್ಯಾಂಗರಿಗೆ ನನ್ನ ಪ್ಯಾಂಟು... ಶರ್ಟು ತೂಗಾಡುತ್ತಿರುವೆ. ಅದರ ಹತ್ತಿರ ಹಗ್ಗಕ್ಕೆ ಅವಳ ಸೀರೆ ಬ್ಲೌಜ, ಎವರ್‌ಫಿಟ್ ನೇತಾಡುತ್ತಿರುತ್ತವೆ. ಅದರ ಪಕ್ಕದಲ್ಲಿ ನನ್ನ ಕಾಟು. ಅಂಡರ್‌ವೇರ್... ನಿಲುವುಗನ್ನಡಿಯ ಎದುರಿನ ಟೇಬಲ್ ಮೇಲೆ ಸಿಂಥಾಲ್ ಪೌಡರ್, ಶಾಂಪೊ, ಸಿಲ್ವಿಕ್ರೀನ್, ಹೇರಪಿನ್‌ಗಳೆಲ್ಲ ಹರಡಿಕೊಂಡಿವೆ. "ಮುಖ ತೊಳೆದು ಹರಡಿದ ಕ್ರಾಪನ್ನು ಬಾಚಿಕೊಂಡು ಲೈಟು ಆರಿಸುತ್ತೇನೆ. ಕಿಟಕಿಯ ಬಳಿಯ ಖುರ್ಚಿಯಲ್ಲಿ ಕೂಡುತ್ತೇನೆ. ನಕ್ಷತ್ರ, ಹೊಳಿತಾ ಇವೆ. ನೀಲಿಯ ಆಕಾಶ ಅಂತ್ಯವಿಲ್ಲದಂತೆ ಹಬ್ಬಿದೆ. ನನ ರೂಮು ಈ ನೆಲದ ಮೇಲೆ ಚಿಕ್ಕ ಗುಡಿಸಲಂತೆ ಕಾಣುತ್ತದೆ. ಒಂದು ತೂತಿನಿಂದ ನಾನು ಆಕಾಶವನ್ನು ನೋಡುತ್ತಿದ್ದೇನೆಂದುಕೊಳ್ಳುತ್ತೇನೆ. ಗಾಳಿ ಬೀಸಿ ಬರುತ್ತದೆ. ಥಂಡಿ ಅನ್ನಿಸುತ್ತದೆ. ಕಾಲರಿಂದ ಕುತ್ತಿಗೆ ಮುಚ್ಚಿಕೊಳ್ಳುತ್ತೇನೆ. ಗುಡ್ಡದ ಕೆಳಗಡೆ ಬೈಲಿನಲ್ಲಿ ದೊಡ್ಡ ಬಂಡೆಯೊಂದು ಕಾಣುತ್ತದೆ. ಸುತ್ತೆಲ್ಲ ಕತ್ತಲೆ. ವೇಂಚಿಕೆ ಬಂದು ರೇಡಿಯೋ ಹಾಕುತ್ತೇನೆ. ನಿದ್ರೆ ಸೊಂಪಾಗಿ ಬರುತ್ತದೆ.

ಆಫೀಸು ಬಹಳ ತಣ್ಣಗಾಗಿದೆ. ಅವರವರ ಕೆಲಸದಲ್ಲಿ ಅವರು ಮಗ್ನರಾಗಿದ್ದಾರೆ. ರಾಕೇಶ ತುಂಬಾ ಬೀಜಿ.

ಆದಪ್ಪ-ಈವಮ್ಮ

ಶೀಲದ ಚೀಲಕ್ಕ ಎಷ್ಟೊಂದು ತ್ಯಾಪಿ
ಕಳದ ಒಗದ್ರಾಕು ಕೂರಿಹಕ್ತಿದ ಅರವಿ
ನಾವು ಫೋಟೋದ ನೆಗೆಟಿವ್ ಕಾಪಿ
ತ್ರಿಕೋಣದ ತ್ಯಾಕ್ಯಾಗ
ಅದಪ್ಪ-ಈವಮ್ಮ ಅಕ್ಕೀವಿ.

— ಶ್ರೀನಿವಾಸ ಕುಲಕರ್ಣಿ

ರೂಮಿನ ಒಳಬಂದಾಗ ಕವಿತಾ ತಲೆ ಹರಡಿಕೊಂಡು ಮಂಚದ ಮೇಲೆ ಬಿದ್ದುಕೊಂಡಿದ್ದಾಳೆ. ನನ್ನ ಕಂಡು ಎದ್ದು ಕುಳಿತುಕೊಳ್ಳುತ್ತಾಳೆ. ಮುಖದಲ್ಲಿ ದಣಿವಿನ ಕಳೆಯಿದೆ. ಕಣ್ಣೆಲ್ಲ ಕೆಂಪಾಗಿದೆ. ವಸ್ತ್ರವೆಲ್ಲ ಮುದ್ದೆ ಮುದ್ದೆ, ರಾತ್ರಿಯಿಡೀ ಪ್ರವಾಸವಾಯ್ತು. ಬೆಳಿಗ್ಗೆ ಪ್ರವಾಸಿ ಮಂದಿರದಲ್ಲಿ ಮಲಗಿ ಬಂದೆವು'. ಅವನು ತುಂಬಾ ಚೆನ್ನಾಗಿ ಕಂಪನಿ ಕೊಟ್ಟ ಎಂದು ಮಹೇಂದ್ರನ ಬಗ್ಗೆ ಕೃತಜ್ಞತೆ ಸಲ್ಲಿಸುತ್ತಾಳೆ. "ನೀನು ಕಾಫಿ ಕುಡಿದು ಬಂದೆಯಾ? ನೀನು ಬರಲಿ ಎಂದು ಕಾದಿದ್ದೆ." ಎಂದು ಸ್ಟೋ ಹಚ್ಚಿ ನೀರಿಡುತ್ತಾಳೆ. ಶಾಲಿಮಾರ್ ಬಿಸ್ಕೀಟ್ ಪ್ಯಾಕೇಟ್ ಬಿಚ್ಚುತ್ತಾಳೆ. ಹಂಪೆಯ ಆಲ್ಬಂ ನನ್ನ ಕೈಗೆ ಕೊಡುತ್ತಾಳೆ. "ಕಲೆ ಅಮರವಂತೆ ಅನಿ, ಹಂಪೆಯನ್ನು ನೋಡಿದಾಗ ನಿಜವೆನ್ನಿಸಿತು." ಎಂದು ಕುದಿದ ನೀರಿಗೆ ಸಕ್ಕರೆ ಹಾಕುತ್ತಾಳೆ. ನಾನು ಆಲ್ಬಂ ನೋಡುತ್ತ ಕೂಡುತ್ತೇನೆ. "ಹೇಗೆ ಅನಿಸಿತು ಅನಿ," ಎಂದು ಕಾಫಿಯನ್ನು ಸೋಸಿ ಕಪ್ಪಿಗೆ ಹಾಕುತ್ತಾಳೆ. ಆಲ್ಬಂನ್ನು ಕೆಳಗಿಟ್ಟು "ಸೌಂದರ್ಯದಂತೆ ಕಲೆಗೂ ವಸ್ತುವಿನ ಆಶ್ರಯ ಬೇಕಿಲ್ಲ. ಸ್ತಬ್ಧವಾಗಿ ನಿಂತ ಪ್ರಕೃತಿಯಲಿ ಮುಳುಗಿ ಹೋದ ವ್ಯಕ್ತಿ ಏನು ನೋಡುತ್ತಿದ್ದೇನೆಂದು ವಿಚಾರಿಸುವದಿಲ್ಲ ಅಲ್ಲವೆ ಕವಿತಾ? ಅನಿಸಿಕೆಯನ್ನು ವಿಚಾರದ ಕೈಯಲ್ಲಿ ಕೊಟ್ಟರೆ ಕುಲಗೆಡಿಸುತ್ತದೆ" ಎಂದು ಕಾಫಿ ಕುಡಿಯುತ್ತೇನೆ. ಅವಳು ಬಿಸ್ಕೀಟೊಂದನ್ನು ಅರ್ಧ ನನ್ನ ಬಾಯಿಗಿಡುತ್ತಾಳೆ. ಟೆರೇಸಿನ ಮೇಲೆ ಎರಡು ಖುರ್ಚಿಗಳನ್ನು ಹಾಕಿಕೊಂಡು ಕೂಡುತ್ತೇವೆ. ಎತ್ತರದಿಂದ ಕೆಳಗೆಲ್ಲ ಜನ ಓಡಾಡುವದು ಕಾಣಿಸುತ್ತದೆ. ಬಯಲಿನಲ್ಲಿ ದನಗಳು ಮೇಯುತ್ತ ಹೊರಟಿವೆ. ದನಗಾಹಿ ಸಂಬಂಧವಿಲ್ಲದವನಂತೆ ಬಡಿಗೆ ಹೆಗಲ ಮೇಲೆ ಹೇರಿಕೊಂಡು ಹೆಜ್ಜೆಯನ್ನು ಲೆಕ್ಕ ಮಾಡುತ್ತ ಇಡುತ್ತಿದ್ದಾನೆ. "ಪ್ರವಾಸಕ್ಕೆ ಹೋಗಿ ಬಂದ ಮೇಲೆ ಒಂದು ತರಹದ ಆಯಾಸ, ಹೊಸತನ, ಉತ್ಸಾಹವೆಲ್ಲ ಒಟ್ಟಿಗೆ ಬಂದು ಬಿಡುತ್ತವೆ." ಎನ್ನುತ್ತ ಎದ್ದು ಹೋಗುತ್ತಾಳೆ ಒಳಗೆ. ತಾನು ಊಟ ಮಾಡುವದಿಲ್ಲವೆಂದು ನನ್ನನ್ನು ಊಟಕ್ಕೆ ಕಳಿಸುತ್ತಾಳೆ. ನಾನು ಊಟ ಮುಗಿಸಿ ಒಳ ಬಂದಾಗ 'ಬಂದೆಯಾ" ಎಂದು ಕತ್ತಲೆಯಲ್ಲಿಯೇ ಕೇಳುತ್ತಾಳೆ. ನಾನು ರೇಡಿಯೋ ಟ್ಯೂನ್ ಮಾಡಿ ಖುರ್ಚಿಯಲ್ಲಿ ಕೂಡುತ್ತೇನೆ. "ಯಾಕೆ ಕವಿತಾ, ಆರಾಮ ಇಲ್ಲವೆ ಎಂದು. ವಿಚಾರಿಸುತ್ತೇನೆ. "ವಿಚಾರಿಸುವವರು ಅಷ್ಟು ದೂರ ಕುಳಿತು ಕೇಳುತ್ತಾರೆಯೆ?" ಎಂದು ಮಗ್ಗಲು ಬದಲಿಸುತ್ತಾಳೆ." ಮಂಚವನ್ನು ಕಿಡಕಿಯ ಹತ್ತಿರ ಹಾಕಿಕೊಳುವಾ. ತುಂಬಾ ಸೆಕೆ" ಎನ್ನುತ್ತಾಳೆ. ಇಬ್ಬರೂ ಸೇರಿ ಕಿಡಕಿಯ ಬಳಿ ಮಂಚವನ್ನು ಹಾಕುತ್ತೇವೆ. "ನಿದ್ರೆ ಬರಲಿಲ್ಲವಾದರೆ ಆಕಾಶ ನೋಡುತ್ತ ಮಲಗಬಹುದಲ್ಲವೆ-" ಎಂದು ಕೇಳುತ್ತಾಳೆ. "ನಿದ್ರೆ ಬರಲಿಲ್ಲವಾದರೆ ಅಲ್ಲ; ಯಾವಾಗಲೂ ಆಕಾಶವನ್ನು ವ್ಯಕ್ತಿಗಳು ನೋಡಲೇಬೇಕು. ವ್ಯಕ್ತಿಗೆ ಗತಿ ಎಳೆಯುವ ಏಕಮೇವ ಸ್ಥಿತಿಯದು" ಎಂದು ಸಿಗರೇಟಿಗೆ ಕಡ್ಡಿಗೀರಿ ಹಚ್ಚುತ್ತೇನೆ. "ಗಾಳಿಯೇ ಇಲ್ಲವಲ್ಲ. ಏನು ಸೆಕೆ?!" ಎಂದು ಒಂದೊಂದೇ ವಸ್ತ್ರ ಕಳಚಿ ಮಂಚದ ಕೆಳಗೆ ಒಗೆಯುತ್ತಾಳೆ. ಆಕಾಶದಲ್ಲಿ ಮೋಡ ಮುಸುಕಿರುತ್ತದೆ. ಸಣ್ಣ ಪಡಕೂ ಬಿದ್ದಿಲ್ಲ. ಗಟ್ಟಿಯಾಗಿ ಬಿಗಿದುಕೊಂಡಿದೆ. "ನನಗೆ ಒಂದು ತರಹ ಮೈ ಮನಗಳೆಲ್ಲ ಮರವೆಯಾಗಿದೆ." ಎಂದು ನನ್ನ ಕಡೆಗೆ ಹೊರಳಿ ಮೈ ಮೇಲೆ ಕೈ ಹಾಕುತ್ತಾಳೆ. "ಓಹೋ! ಎಷ್ಟು ಮೋಡ ಮಳೆ ಬರಬಹುದೊ?" ಎಂದು ತಲೆಯೆತ್ತಿ ನೋಡುತ್ತಾಳೆ. 'ಟಪ ಟಪ! ಎಂದು ಹನಿಗಳು ಉದುರುತ್ತವೆ. "ರಾಜಾ ಚಾದರ" ಎಂದು ಇಬ್ಬರನ್ನೂ ಅದರಲ್ಲಿ ಮುಚ್ಚಿಕೊಳ್ಳುತ್ತಾಳೆ. ಚಕ್" ಎಂದು ಬೆಳಕು ಮೂಡಿದಾಗ "ಮಿಂಚಾ?" ಎಂದು ಕೇಳುತ್ತಾಳೆ. 'ಅಲ್ಲ' ಎನ್ನುತ್ತೇನೆ. "ಏನೋ ಬೆಳಕಾದಂತಾಯಿತಲ್ಲ!" ಎಂದು ಕೇಳುತ್ತಾಳೆ. "ಹೌದು" ಅವಳು ಚಾದರವನ್ನು ಮುಚಿಕೊಂಡು ನನ್ನ ಹಿಡಿದುಕೊಂಡು ಮಲಗುತ್ತಾಳೆ ಜೋರಿನಿಂದ ಗಾಳಿ ಬೀಸಿ ಕಿಟಕಿಯಿಂದ ಬರುತ್ತದೆ. ಬಾಗಿಲು ಹಾಕುವಾ ಎಂದು ಏಳುತ್ತೇನೆ. ಅವಳು ಮೇಲೆ ಸರಿದಾಗ ನನ್ನ ತೊಡೆಗಳ ಮಧ್ಯ ತಲೆ ಸೇರಿಸಿ ಎರಡು ಕೈಗಳಿಂದ ಹಿಡಿದು ಕೊಳ್ಳುತ್ತಾಳೆ. ಕಿಟಕಿಯ ಹೊರಗಡೆ ಸುಂಟರಗಾಳಿ ಬೈಲಿನಲ್ಲೆ ಗಿಂವ್" ಎಂದು ಸುತ್ತುತ್ತಿರುತ್ತದೆ. ಸುತ್ತೆಲ್ಲ ಹರಡಿ, ಮೇಲೆದ್ದು ಕಿಟಕಿಯಲ್ಲಿ ಧುಮುಕುತ್ತದೆ. ಎಲೆ ಕಸಕಡ್ಡಿಗಳು ಕೋಣೆಯನ್ನು ತುಂಬುತ್ತವೆ. ಸಾವಕಾಶ ಮೋಡಗಳು ಸರಿಯುತ್ತವೆ. ಎಡಗೈ ಮೊಣ ಕೈಗೆ ಕವಿತಾಳ ಮೊಲೆ ತಾಗುತ್ತದೆ. ಕವಿತಾ ಈಗ ಅಂಗಾತ ಮಲಗಿರುತ್ತಾಳೆ. ಗೊರಕೆ ಹೊಡೆಯುತ್ತಿದ್ದಾಳೆ. ನಕ್ಷತ್ರದ ಬೆಳಕು ಕೊಂಚ ಒಳಗೂ ಬಿದ್ದಿದೆ. ಎಡಕ್ಕೆ ಮಗ್ಗಲು ಮಾಡಿ ಅವಳೆದೆಯ ಮೇಲೆ ಕೈಯಿಟ್ಟುಕೊಂಡು ಕಣ್ಣು ಮುಚ್ಚುತ್ತೇನೆ.

ಇಂದು ಆಫೀಸಿಗೆ ಹೋದಾಗ ಎಲ್ಲ ಗಂಭೀರವಾಗಿರುತ್ತಾರೆ. ಬಾಗಿಲಲ್ಲೇ ಸಿಕ್ಕ ರೆಬೆಲ್ಲೊ "ಹಲೋ ಗುಡ್ ಮಾರ್ನಿಂಗ್" ಎಂದು ವಿಶ್ ಮಾಡುತ್ತಾನೆ. "ಎಷ್ಟು ದಿನವಾಯ್ತು ನಾವು ಭೇಟಿಯಾಗಿ ಸುಮಾರು ಒಂದು ತಿಂಗಳಾಯಿತು ಅಂತ ಕಾಣಿಸುತ್ತದೆ. ಸರಿಯಾಗಿ

ಮಾತಾಡದೆ" ಎನ್ನುತ್ತ ತನ್ನ ಟೇಬಲ್ಲಿಗೆ ಹೋಗುತ್ತಾನೆ. ಮಧ್ಯಾಹ್ನ ಹನ್ನೆರಡು ಹೊಡೆಯುತ್ತದೆ. ಪ್ಯೂನ ಬಂದು ಸಾಹೇಬರು ಕರೆಯುತ್ತಾರೆ ಎನ್ನುತ್ತಾನೆ. ಒಳಗೆ ಹೋದಾಗ ಸಾಹೇಬರು 'ಕೂಡ್ರಿ' ಎನ್ನುತ್ತಾರೆ. ಪಿ. ಎಸ್. ಐನಿಂದ ಫೋನ್ ಬಂದಿತ್ತು. ನೀವು ಇದೇ ಆಫೀಸಿನವರೋ ಎಂದು ಕೇಳಿದರು. ನಿಮಗೆ ಸಮನ್ಸ ಮುಟ್ಟಿಸಬೇಕಾಗಿದೆಯಂತೆ" ಎಂದು ನನ್ನ ಮುಖ ನೋಡುತ್ತಾರೆ. "ಮುಟ್ಟಿದೆ ಸರ್" ಎನ್ನುತ್ತೇನೆ. In Connection? ಎಂದು ಹುಬ್ಬು ಏರಿಸುತ್ತಾನೆ. "ಇಂಡಿಯನ್ ಪೀನಲ್ ಕೋಡಿನ 488 Section ನಲ್ಲಿಯ ಒಂದು ಅಪರಾಧ" ಎಂದಾಗ "ನೀವೇಕೆ ಮೂರು ತಿಂಗಳು ಲೀವ್ಹ ಹಾಕಬಾರದು?" ಎಂದು ಕೇಳುತ್ತಾನೆ. "Foriced leave you mean? ಎಂದು ನಾನು ಕೇಳುತ್ತೇನೆ. "ಹೌದು" ಎಂದಾಗ ಹೊರ ಬರುತ್ತೇನೆ. ಲೀವ್ಹ ನೋಟೀಸ ಕೊಟ್ಟು, ಹೊರ ಬಂದಾಗ ರಾಜೇಶ ಮುಖವೆತ್ತಿ ನೋಡುತ್ತಾನೆ. ಸಿಟಿ ಇಲ್ಲೈಟಿಗೆ ಹೋಗುತ್ತೇನೆ. "ಇವತ್ತಿನ ಸ್ಪೆಶಲ್ ಜಹಾಂಗೀರ್" ಎಂದಿರುತ್ತದೆ. ಬಂದಾಗ ಅದಕ್ಕೆ ಆರ್ಡರ್ ಮಾಡಿ ಪೇಪರನ್ನು ಓದುತ್ತೇನೆ. ಕಾಫಿ ಕುಡಿದು ರೂಮಿಗೆ ಬರುತ್ತೇನೆ. ಮಂಚದ ಮೇಲೆ ಕುಳಿತು ಓದುತ್ತೇನೆ. ಎಂಟು ಹೊಡೆಯುತ್ತದೆ. ವಿವಿಧ ಭಾರತಿಯನ್ನು ಹಚ್ಚುತ್ತೇನೆ. ನಿದ್ರೆ ಬರುತ್ತದೆ. ಎದ್ದು ಇನ್ನೊಂದಿಷ್ಟು ಕಾಫಿ ಕುಡಿದು ಬಿಲ್ಡಿಂಗಿನ ಹಿಂದಿನ ಗುಡ್ಡಕ್ಕೆ ಹೋಗುತ್ತೇನೆ. ಬುಡದಲ್ಲಿರುವ ದೊಡ್ಡ ಕರಿ ಬಂಡೆಯ ಮೇಲೆ ಕೂಡ್ರುತ್ತೇನೆ. ಹಿಂಬದಿಯಿಂದ ಮುಳುಗುವ ಸೂರ್ಯನ ಕೆಂಬಣ್ಣ ಬಿದ್ದಿರುತ್ತದೆ. ನನ್ನ ನೆರಳು ಬೈಲಿನುದ್ದಕ್ಕೂ ಹರಡಿರುತ್ತದೆ. ದನಗಳ ಗೋತಿ ಬೈಲ ತುಂಬಾ ಹರಡಿಕೊಂಡಿದೆ. ಬಲಗಡೆಯ ಮೂಲೆಯೊಂದರ ದಿನ್ನೆಯ ಮೇಲೆ ಕರಿ ವಸ್ತ್ರದ ರುಮಾಲು ಕಟ್ಟಿ



ಕೋಲೊಂದನ್ನು ಆಡಿಸುತ್ತ ದನಗಾಹಿ ಕುಳಿತಿದ್ದಾನೆ. ಗುಡ್ಡ, ಬೈಲು, ದನ, ದನಗಾಹಿ, ಅವನ ಕೋಲು ಕರಿ ನೆರಳು, ಗಾಳಿಗೆ ತಲೆ ಹಾಕುತ್ತ ನಿಂತ ಚಿಕ್ಕ ಪುಟ್ಟ ಗಿಡಗಳು ಹಾರಿ ಹಾರಿ ಅಡಗಿ ತೋರುವ ಕಾಗೆಗಳು. ಮೆಲುಕಾಡಿಸದೆ, ಬರಿ ನುಂಗುವ ಎಮ್ಮೆಗಳು ಬಡ ಹುಲ್ಲು ಅಲ್ಲೊಂದು ಇಲ್ಲೊಂದು ನಿಮಿರಿ ನಿಂತಿದೆ. ಕಪ್ಪಾಗುತ್ತ ಬರುತ್ತಿದೆ. ಯಾರೋ ಬರುತ್ತಿದ್ದುದು ಕಾಣುತ್ತದೆ. ಸಣ್ಣ ಕಂಡವರು ಹತ್ತಿರ ಬಂದಾಗ ಹಾಗೆ ದೊಡ್ಡದಾಗಿ ಕಾಣುತ್ತಾರೆ. ರಬೆಲ್ಲೊ ಬಳಿ ಬಂದು ನಾನು ಕುಳಿತ ಕಲ್ಲಿನ ಮೇಲೆ ಕೂಡ್ರುತ್ತಾನೆ. "ಸಮನ್ಸ ಬಗ್ಗೆ ಏನು ವಿಚಾರ ಮಾಡಿದೆ?" ಎಂದು ಮಾತು ಪ್ರಾರಂಭಿಸುತ್ತಾನೆ. "ಏನು ಮಾಡಲು ಮನಸ್ಸು ಮಾಡಿಲ್ಲ" ಎಂದಾಗ ಆತ ಧ್ವನಿ ಏರಿಸಿ, "ಕೇಸನ್ನು ಸುಮ್ಮನೆ ಒಪ್ಪಿಕೊಂಡು ಬಿಡುತ್ತೀಯಾ?" ಎನ್ನುತ್ತಾನೆ. "ವಕೀಲರನ್ನು ಭೆಟ್ಟಿಯಾಗೋಣ" ಎಂದು ಸಲಹೆ ಕೊಡುತ್ತಾನೆ. "ಲಾಯರಿಗೇನು ಸಂಬಂಧ!" ಎಂದರೆ "ಮಗುವಿನಂತೆ ಮಾತನಾಡಬೇಡ" ವೆಂದು ಗದರಿಸುತ್ತಾನೆ. "ಒಂದು ಫಾರ್ಮಿಗೆ ಸಹಿಹಾಕು. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ. ಎಂದು ಕತ್ತಲೆಯಲ್ಲಿಯ ಪುಸ್ತಕವೊಂದರ ಫಾರ್ಮನಿಟ್ಟು ಪೆನ್ನು ಕೊಡುತ್ತಾನೆ. "ನನ್ನನ್ನು ಒತ್ತಾಯಿಸಬೇಡ. ಅವೆಲ್ಲ ನನಗೆ ಬೇಕಾಗಿಲ್ಲ" ಎಂದರೆ "ನಿನಗೆ ಗೊತ್ತಿಲ್ಲ. ಸುಮ್ಮನೆ ಸಹಿ ಹಾಕು" ಎನ್ನುತ್ತಾನೆ. ಸಹಿ ಹಾಕಿಸಿಕೊಂಡು ಎದ್ದು ಹೊರಟವನು "ನಿನಗೆ ನಿನ್ನ ವಕೀಲರಿಲ್ಲದಿದ್ದರೆ ಕೋರ್ಟು ನಿನಗೆ ವಕೀಲರನ್ನು ಕೊಡುತ್ತದೆ. ಡಿಫೆನ್ಸ ಕೋರ್ಟಿನ ಪ್ರೊಸಿಜರಿಗೆ ಅವಶ್ಯಕವಾದುದು" ಎನ್ನುತ್ತ ಹೋಗಿ ಬಿಡುತ್ತಾನೆ.

ನಾನು ರೂಮಿಗೆ ಬರುವಷ್ಟರಲ್ಲಿ ಕವಿತಾ ಬಂದಿರುತ್ತಾಳೆ. ಇಬ್ಬರೂ ಒಟ್ಟಾಗಿ ರೂಮಿನ ಒಳಗೆ ಹೋಗುತ್ತೇವೆ. ಒಳ ಹೋದವಳೇ ಮಂಚದ ಮೇಲೆ ಕುಸಿದು ಕೂಡುತ್ತಾಳೆ. "ರಾಜಾ" ಎಂದು ಕರೆಯುತ್ತಾಳೆ. ಕೊರಳಿಗೆ ಜೋತು ಬೀಳುತ್ತಾಳೆ. ಕಣ್ಣೀರು ಸುರಿಸುತ್ತಾಳೆ. ನಿಟ್ಟುಸಿರುಗರೆಯುತ್ತಾಳೆ. ಅವಳ ಗಲ್ಲ ಹಿಡಿದು ಕೇಳುತ್ತೇನೆ. ಉತ್ತರದಿಂದ ಏನು ಪ್ರಯೋಜನ ಎನ್ನುತ್ತಾಳೆ. ಮೆಲ್ಲಗೆ ಹಿಡಿದು ಮುತ್ತಿಡುತ್ತೇನೆ. ತಲೆ ನೇವರಿಸುತ್ತೇನೆ. ಕಣ್ಣು ಮುಚ್ಚುತ್ತಾಳೆ. 'ರಾಜಾ, ಸುಮ್ಮನೆ ಅಳುವಾ ಅನ್ನಿಸುತ್ತದೆ. ಯಾಕೆ ಅಂತ ತಿಳಿಯುವುದಿಲ್ಲ." ಎಂದು ಅಳುತ್ತಾಳೆ. ಕೈ ಮೇಲೆ ಒರಗುತ್ತಾಳೆ. ತೊಡೆಯ ಮೇಲೆ ಮಲಗುತ್ತಾಳೆ. ಅವಳು ಕಣ್ಣು ಮುಚ್ಚಿ ಸಮಾಧಾನ ಮಾಡಿಕೊಳ್ಳುವಂತಿದೆ. 'ರಾಜಾ' ಎಂದು ಕಣ್ಣು ತೆರೆದು ಮುಖ ನೋಡುತ್ತಾಳೆ: "ಸ್ಕೂಲ ಹತ್ತಿರವೇ ಒಂದು ಮನೆ ಸಿಕ್ಕಿದೆ. ಮಹೇಂದ್ರ ಹುಡುಕಿ ಕೊಟ್ಟಿದ್ದಾನೆ. ನಾಳೆ ನಾನು ಅಲ್ಲಿಗೆ ಹೋಗುತ್ತೇನೆ" ಎಂದು ದಿಂಬಿನ ಮೇಲೆ ಕವಚಿ ಮಲಗಿಕೊಳ್ಳುತ್ತಾಳೆ. ನಾನು ಕವಿತಾಳನ್ನು ಅವಳು ಮಲಗಿದಂತೆ ನೋಡುತ್ತೇನೆ. ನೋಡುತ್ತ ಕುಳಿತಿರುತ್ತೇನೆ. ಅವಳೆದ್ದು ಕೂಡ್ರುತ್ತಾಳೆ. "ನೀನು ಮೊದಲಿನ ಅನಿಯಲ್ಲ" ಎಂದು ಕುರ್ಚಿಯ ಹತ್ತಿರ ಹೋಗುತ್ತಾಳೆ. "ಎಂಟು ವರ್ಷವಾಯಿತು ನಿನ್ನ ಬಳಿಯಿದ್ದು. ಒಮ್ಮೆಯಾದರೂ ಕವಿತಾ, ನಿನ್ನಿಂದ ನನಗೆ ಸಂತೋಷವಾಗಿದೆ ಎನ್ನಲಿಲ್ಲ" ಎನ್ನುತ್ತ ಕೂಡ್ರುತ್ತಾಳೆ. How smart and express ve that Ani wasl ಎಂದುಕಿಟಕಿಯ ಹೊರ ನೋಡುತ್ತ ಉದ್ಗರಿಸುತ್ತಾಳೆ. "ನೀನು ನಕ್ಕರೆ ನಕ್ಕಂತೆ ಇರುವುದಿಲ್ಲ" ಎಂದು ಎದು ಬಳಿ ಬರುತ್ತಾಳೆ. "ನಾನು ನಿನಗೆ ಹೊರೆಯಾಗಿದ್ದೇನೆಯೇ?" ಎಂದು ನನ ಗದ್ದ ಹಿಡಿದು ಮುಖ ಮೇಲೆತ್ತಿ ನೋಡುತ್ತಾಳೆ. "ನಿನ್ನ ಗೆಳೆಯ ನನ್ನ ಸ್ಕೂಲಿಗೆ ಬಂದಿದ್ದ" ಎನ್ನುತ್ತಾಳೆ. ಅವಳ ಮುಖ ನೋಡುತ್ತೇನೆ. "ನಾನು ರೂಮು ಬಿಟ್ಟು ಹೋಗುತ್ತೇನೆ ಎಂದು ನಿನಗೆ ಬೇಸರವಿಲ್ಲವೇ?" ಎಂದು ಕಣ್ಣಲ್ಲಿ


ಹೊಸ ವರ್ಷದ
ಶುಭಾಶಯಗಳು
ಫೋನ್:
23730
ಗ್ರಾಂ:
ಲಂಗರ್ ಛಾಪ ಬೀಡಿ

ಕಣ್ಣ್ಣಟ್ಟು ಕೇಳುತ್ತಾಳೆ. "ನೀನು ಹೇಳುವುದನ್ನೆಲ್ಲಾ ಕೇಳುತ್ತಿದ್ದೇನೆ ಕವಿತಾ" ಎನ್ನುತ್ತೇನೆ. "ಅಂದರೆ ಉತ್ತರ ಹೇಳಿದಂತಾಯಿತೆ?" ಎಂದು ಕ್ರಾಪಿನಲ್ಲಿ ಬೆರಳುಗಳನ್ನು ತೂರುತ್ತಾಳೆ. "ಹೇಳು ಅನಿ" ಎಂದು ಒತ್ತಾಯ ಮಾಡುತ್ತಾಳೆ. "ಕವಿತಾ, ನನ್ನ ಬದುಕು ನಾನು, ನನ್ನ ಸಣ್ಣತನ, ನನ್ನ ತಪ್ಪು ನನ್ನ ಆಸೆ, ನನ್ನ ದುಃಖಗಳನ್ನೆಲ್ಲ ತಾನು ತಿಳಿದುಕೊಳ್ಳಬೇಕು. ನನ್ನ ಅನಂತವಾದ ದುಃಖದ ಬದುಕಿಗೆ ಈ ಲೋಕದಲ್ಲಾಗಲೀ, ಆ ಲೋಕದಲ್ಲಾಗಲೀ ಪರಿಹಾರವನ್ನು ಬೇರೆಯವರು ಕೊಡಲಾರರು" ಎಂದು ಅವಳಿಗೆ ಮುತ್ತಿಡುತ್ತೇನೆ. ನನ್ನನ್ನು ತಬ್ಬಿಕೊಳುತ್ತಾಳೆ. ಕಣ್ಣನ್ನು ಒರೆಸಿಕೊಂಡು ನಿಲ್ಲುತ್ತಾಳೆ. ಸ್ಟೋ ಹಚ್ಚಿ ಕಾಫಿ ಮಾಡುತ್ತಾಳೆ. ಬ್ರೆಡ್ ಸ್ಲೈಸ್ ಮಾಡುತ್ತಾಳೆ. ಸೇಬು ಹಣ್ಣನ್ನು ಹೆಚ್ಚುತ್ತಾಳೆ. ಪ್ಲೇಟಿಗೆ ಹಾಕಿ ತಂದಿಡುತ್ತಾಳೆ. ಇಬ್ಬರೂ ಕುಡಿಯುತ್ತೀವೆ. ಮಂಚದ ಮೇಲೆ ಮಲಗಿ ಕುತ್ತಿಗೆಯ ವರೆಗೆ ಚಾದರ ಹೊದೆದು ಮಲಗಿ ಕಣ್ಣು ಬಿಟ್ಟು ಮೇಲೆ ನೋಡುತ್ತ ಇದ್ದೇನೆ.

ಬೆಳಗಾದ ಮೇಲೆ ತನ್ನದನ್ನುವ ಸಾಮಾನು ಕಟ್ಟುತ್ತಾಳೆ. "ನನ್ನದಾಗಿ ನಿನ್ನ ಬಳಿ ಯಾವ ಸಾಮಾನು ಬಿಟ್ಟು ಹೋಗಲಿ?" ಎಂದು ಸೂಟಕೇಸಿನ ಮುಚ್ಚಳ ಹಾಕದೆ ಕೈಯಲ್ಲಿ ಹಿಡಿದುಕೊಂಡು ಕೇಳುತ್ತಾಳೆ.

"I am not so particular" ಎಂದಾಗ ಧಡಾರ್ ಎಂದು ಮುಚ್ಚಿ ಕೀಲಿ ಹಾಕುತ್ತಾಳೆ. "ನನ್ನದೆನ್ನುವುದೆಲ್ಲ ಇಷ್ಟರಲ್ಲಿ ಮುಗಿದು ಹೋಯ್ತು." ಎಂದು ಸೂಟಕೇಸನ್ನು ಗುದ್ದಿ ಹೇಳುತ್ತಾಳೆ. "ನಾನು ನೀನು ಭೇಟಿಯಾಗುವುದು ಎಂದು?" ಸೂಟಕೇಸನ್ನು ಕೈಯಲ್ಲಿ ಹಿಡಿದುಕೊಂಡು ನಿಲ್ಲುತ್ತಾಳೆ. "ನೀನು ಇಷ್ಟಪಟ್ಟಾಗಲೆಲ್ಲ" ಎನ್ನುತ್ತೇನೆ. "ನನ್ನಿಂದಾಗಿ ನಿನಗಿಷ್ಟೆಲ್ಲ ತೊಂದರೆಯಾಯ್ತು. ಕ್ಷಮಿಸುತ್ತಿ ತಾನೆ?" ಎಂದು ಮುಖ ಕೆಂಪಗೆ ಮಾಡಿಕೊಂಡು ಕೇಳುತ್ತಾಳೆ. "ಕವಿತಾ, ಯಾರೂ ಮತ್ತೊಬ್ಬರಿಗೆ ತ್ರಾಸು ಕೊಡುವುದಿಲ್ಲ. ನೀನೇಕೆ ಹಾಗನ್ನಿಸಿಕೊಳುತ್ತಿ?" ಕೂಡ್ರು. ಏನೇನೋ ಗೊಂದಲ ಮಾಡಿಕೊಂಡಿದ್ದಿ" ಎಂದು ಎದ್ದು ಹೋಗಿ ಅವಳ ಕೈ ಹಿಡಿದು ಮಂಚದ ಬಳಿ ಕರೆದುಕೊಂಡು ಬರುತ್ತೇನೆ ನೋಡು ಕವಿ, ನಮ್ಮನ್ನು ನಾವು ಸರಿಯಾಗಿ ಅನ್ನಿಸಿಕೊಳ ಬೇಕು. ನೀನು ನನ್ನನ್ನೇಕೆ ಅಷ್ಟೆಲ್ಲ ದೊಡ್ಡವನೆಂದು ತಿಳಿದುಕೊಂಡಿದ್ದಿ?" ಎಂದು ಅವಳ ಅಂಗೈಯನ್ನು ಮೆಲ್ಲಗೆ ಸವರುತ್ತೇನೆ. ಅವಳು ಕೊರಳ ಸುತ್ತ ತೋಳು ಹಾಕಿ "ಅನಿ" ಎನ್ನುತ್ತ ಮುಖದ ತುಂಬಾ ಮುತ್ತಿಡುತ್ತಾಳೆ. "ನಾನಿನ್ನು ಬರಲೆ?" ಎಂದು ಸೂಟಕೇಸನ್ನೆತ್ತಿಕೊಂಡು ಹಿಡಿದು ಬೀಳ್ಕೊಳುವಾಗ ಕೇಳುತ್ತಾಳೆ. ನಾನು ಅವಳ ಜೊತೆ ಕೆಳಗಿಳಿದು ಹೋಗಿ ರಿಕ್ಷಾದಲ್ಲಿ ಅವಳನ್ನು ಕೂಡ್ರಿಸಿ ಬರುತ್ತೇನೆ.

ರೆಬೆಲ್ಲೊ ಈ ದಿನ ಬಂದವನು 'ಸಿಟಿ ಇಲೈಟಿಗೆ ಹೋಗುವಾ' ಎಂದು ಕರೆದುಕೊಂಡು ಹೋಗುತ್ತಾನೆ. ದಾರಿಯುಲ್ಲಿ ತನಗೆ ತಿಳಿದ ಕಾಯ್ದೆಯ ಸೂಕ್ಷ್ಮವನ್ನು ವಿವರಿಸುತ್ತಾನೆ. ಕೋರ್ಟು ವ್ಯಕ್ತಿಗಳ ಸಿದ್ಧಾಂತವನ್ನೆಲ್ಲ ಎತ್ತಿ ಹಿಡಿಯುವದಿಲ್ಲವೆಂದು "ಗಂಭೀರವಾಗಿ ನುಡಿಯುತ್ತಾನೆ. "ಅದು ಘಟನೆ, ಹೆಚ್ಚೆಂದರೆ ಅದರ ಹಿಂದಿನ ಉದ್ದೇಶವನ್ನು ಗಣನೆಗೆ ತಂದುಕೊಳುತ್ತದೆ. ಕೋರ್ಟು ಯಾವ ಸತ್ಯವನ್ನೂ ಹೇಳುವುದಿಲ್ಲ, ಆದ್ದರಿಂದ ಯಾರೂ ಸತ್ಯವನ್ನು ಹೇಳಬೇಕಾಗಿಲ್ಲ" ಎಂದು ನನ್ನನ್ನು ನೋಡುತ್ತಾನೆ. "ಎಲ್ಲರೂ ಸಾಮಾಜಿಕ ಸ್ಥಾನ-ಮಾನಕ್ಕಾಗಿ ಮರ್ಯಾದೆಗಾಗಿ ಹೋರಾಡುತ್ತಾರೆ. ಸತ್ಯವನ್ನು ಸಾಧಿಸ ಹೊರಟರೆ ಸಮಾಜದ ಅಡಿಗಲ್ಲನ್ನೇ ಅಲುಗಾಡಿಸಿದಂತಾಗುತ್ತದೆ" ಎಂದು ಆಳವಾಗಿ ಮಾತಾಡುತ್ತಾನೆ. "ಜ್ಞಾನ ಗಳಿಸುವುದು ಮುಖ್ಯವಲ್ಲ. ಅದರ ಪ್ರಾಕ್ಟಿಕಲ್ ಉಪಯೋಗ ತೆಗೆದುಕೊಳಲುಬರಬೇಕು" ಎನ್ನುತ್ತಾನೆ. ಲೈಟ ಟಿಫಿನ್ ಮುಗಿಸಿ, ಎಲ್ಲೆಲ್ಲೊ ಕರೆದುಕೊಂಡು ಹೋಗುತ್ತಾನೆ. ಒಂದು ಕ್ಷಣವೂ ಬಾಯಿ ಮುಚ್ಚದೆ ಆತ ಮಾತಾಡುತ್ತಾನೆ. "ನನ್ನ ಗೆಳೆಯನ ಮನೆಗೆ ಕರೆದುಕೊಂಡು ಹೋಗುತ್ತಿದ್ದೇನೆ. He is a pleader ಎಂದು ಯಾರದೋ ಮನೆಯ ಎದುರು ನಿಲ್ಲಿಸುತ್ತಾನೆ. ಒಳಗೆ ಕರೆದುಕೊಂಡು ಹೋಗುತ್ತಾನೆ. ಹೊರಲಾರದ ಪುಸ್ತಕಗಳ ಹಿಂದೆ ಬೋಳು ತಲೆಯ ಹಳೆಯ ವಕೀಲ ಕುಳಿತಿರುತ್ತಾನೆ. ಕೇಸಿನ ಕಟ್ಟುಗಳನ್ನು ಓರಣವಾಗಿಟ್ಟ ಕಪಾಟುಗಳು, ಅವುಗಳ ಮೇಲೆ ಗಾಂಧಿ, ವಿವೇಕಾನಂದ, ಮೋತಿಲಾಲರ ಫೋಟೋಗಳು. ರೆಬೆಲ್ಲೊ ಪರಿಚಯ ಮಾಡಿ ಕೊಡುತ್ತಾನೆ. ವಿನಮ್ರವಾಗಿ ಕೂಡ್ರುತ್ತಾನೆ. ವಕೀಲ ಒಮ್ಮೆ ನೋಡಿ ನಕ್ಕು ಪುರುಸೊತ್ತಿಲ್ಲದಂತೆ ಕೇಸ ಸ್ಟಡಿ ಮಾಡುತ್ತಿದ್ದಾನೆ. "ಬಹಳ ಕಷ್ಟ" ಎಂದು ಮುಖ ಎತ್ತದೆ ನುಡಿಯುತ್ತಾನೆ. "ಸರ್ ಏನಾದ್ರೂ ಮಾಡಬೇಕು, ನೀವು ಮನಸ್ಸು ಮಾಡಿದರೆ ಗೆಲ್ಲಲಿಕ್ಕೆ ಸಾಧ್ಯ" ಎಂದು ರೆಬೆಲ್ಲೊ ವಿನಂತಿಸಿಕೊಳುತ್ತಾನೆ. "ಇನ್ನೊಂದು ವಿಷಯ ಸರ್. ಇವರು ನಾಲ್ಕು ತಿಂಗಳ ಮೆಂಟಲ್ ಹಾಸ್ಪಿಟಲ್‌ನಲ್ಲಿದ್ದರು. ಅದೇನಾದರೂ ಕೇಸಿಗೆ ಸಹಾಯಕವಾಗಬಹುದೆ?" ಎಂದು ಆಸೆಯಿಂದ ನೋಡುತ್ತಾನೆ. "ಈಗೇನಾದರೂ ಇದ್ದಾರಾ?" ಎಂದು ವಕೀಲ ತಲೆಯೆತ್ತಿ ನೋಡುತ್ತ ಕೇಳುತ್ತಾನೆ. "ಈ ಕೇಸನ್ನು ತೆಗೆದುಕೊಳುವುದೆಂದರೆ Risk ಏಕೆ ಗೊತ್ತೆ? ನೀಮ ನನ್ನ ಗೆಳೆಯನ ಮಗ" ಎಂದು ನಮ್ಮಿಬ್ಬರ ಮುಖ ನೋಡುತ್ತಾನೆ. "ಕೇಸಿದ್ದ ದಿನ ಮಾತ್ರ ತಪ್ಪಿಸದೆ ಕೋರ್ಟಿಗೆ ಹಾಜರಪಡಿಸು" ಎಂದು ನಮ್ಮನ್ನು ಕಳಿಸಿ ಕೊಡುತ್ತಾನೆ. ಹಾದಿಯಲ್ಲಿ ಹೋಟೆಲ್ಲೊಂದರಲ್ಲಿ ಕಾಫಿ ಕುಡಿಯುತ್ತೇವೆ. "ನಾನು ಮುಖ್ಯ Witness ಎಂಬ ವಿಷಯ ನಿನಗೆ ಗೊತ್ತಿರಬಹುದು" ಎಂದು ಖಾಲಿಯಾದ ಕಪ್ಪನ್ನು ಟೇಬಲ್ ಮೇಲೆ ಇಡುತ್ತಾನೆ. In the case of an adultry woman is exempted ಎಂದು ಏಳುತ್ತೇನೆ. ಬಿಲ್ ಕೊಟ್ಟು ಹೋಗುತ್ತೇವೆ. "ಅವಳು ರೂಮು ಬಿಟ್ಟು ಹದಿನೈದು ದಿನವಾಯ್ತಾ" ಎಂದು ನನ್ನನ್ನು ಕೇಳುತ್ತಾನೆ.

ಸಂಜೆ ಆರು ಹೊಡೆದಾಗ ನಾನು ಬಿಲ್ಡಿಂಗಿನ ಹಿಂದಿನ ಗುಡ್ಡವನ್ನು ಹತ್ತುತ್ತಿರುತ್ತೇನೆ. ಉರುಟುರುಟಾದ ಬಂಡೆಗಳು ಒಂದನ್ನೊಂದು ಆಧರಿಸಿ ರಾಶಿಯಾಗಿ ನಿಂತಿವೆ. ಕಲ್ಲುಗಳ ಸಂದಿಯಲ್ಲಿ ಸಣ್ಣ ಪುಟ್ಟ ಗಿಡಗಳು ಇಣುಕಿ ನೋಡುತ್ತಿವೆ. ಕಲ್ಲುಗಳ ಮೇಲೆ ಮಣ್ಣು ಕೂಡಿ ಬಿದ್ದಲ್ಲಿ ಕೊರೆದ ಹತ್ತೆಂಟು ಮರುಕುಗಳು ಕಾಣುತ್ತವೆ. ಕ್ಷಿತಿಜದಂಚಿನಲ್ಲಿ ಸೂರ್ಯ ಮುಳುಗುವ ತಯಾರಿಯಲ್ಲಿದ್ದಾನೆ. ಬಯಲಿನಲ್ಲಿ ಯಾರೋ ಕರೆದಂತಾಗುತ್ತದೆ. "ಅನಿ" ಎಂದು ಕೈ ಮಾಡಿ, ಕೂಗಿ ಕರೆಯುವವಳು ಕವಿತಾ ಎಂದು ತಿರುಗಿ ನೋಡಿದಾಗ ತಿಳಿಯುತ್ತದೆ. ತೇಕುತ್ತ ಗುಡ್ಡ ಹತ್ತಿ ಬರುತ್ತಿದ್ದಾಳೆ. ನಾನು ನಿಲ್ಲುತ್ತೇನೆ. ಅವಳು ಹತ್ತಿರ ಬರುತ್ತಾಳೆ. ಎದೆ ಹಾರಿ ಕೊಳುತ್ತದೆ.'ಕೂತುಕೊ' ಎಂದು ಬಂಡೆಯನ್ನು ತೋರಿಸುತ್ತೇನೆ, ಮೊಣಕಾಲ ಮೇಲೆ ಕೈ ಊರಿ "ಹುಶ್ಶಪ್ಪ" ಎಂದು ಕುಳಿತುಕೊಳುತ್ತಾಳೆ.

ಉಬ್ಬಸ ಬಂದದ್ದರಿಂದ ಮಾತನಾಡಲಾಗದೇ ಬರೇ ಪ್ರಯತ್ನ ಮಾಡುತ್ತಾಳೆ. "ಏನು ಗಡಬಡೆ ಸ್ವಲ್ಪ ತಾಳಿಕೊ" ಎನ್ನುತ್ತೇನೆ. ಅನಿ, ಏನೆಲ್ಲಾ ಆಗಿ ಹೋಯ್ತಲ್ಲ" ಎಂದು ಹಣೆ ಒರೆಸಿಕೊಂಡು ಅಂತೂ ಸರ್ವನಾಶವಾಗಿ ಹೋಯ್ತಲ್ಲ. ಆ ನೀಚನಿಗೆ ತನಗೆ ಬೇಡವಾದಾಗ ಮತ್ತೆಲ್ಲಾದರೂ ಸುಖವಾಗಿದ್ದರೇನಾಯ್ತು" ಎನ್ನುತ್ತ ಗಂಡ ನನ್ನು ಬಯ್ಯುತ್ತಾಳೆ. "ಅವನ ಬೈಯ್ಯುವುದಾಗಲೀ, ಇವರಿಂದ ತಲೆ ಕೆಡಿಸಿಕೊಳ್ಳುವುದಾಗಲೀ ಏನೂ ಇಲ್ಲ ಕವಿತಾ" ಎಂದು ಹೇಳುತ್ತೇನೆ. "ಹಾಗಂದರೇನು ಅನಿ? ನಾನು ಈ ಗುಡ್ಡದ ಕೆಳಗೆ ಹಾರಿ ಸತ್ತು ಹೋಗುತ್ತೇನೆ. ನನ್ನಿಂದಾಗಿ ನಿನಗೂ ಈ ಗತಿ ಬಂತಲ್ಲ?" ಎಂದಾಗ "ನನಗೇನೂ ಆಗಲಿಲ್ಲ" ಎನ್ನುತ್ತೇನೆ. ಮುಖ, ಮೈಯೆಲ್ಲ ಬೆವರಿನಿಂದ ತುಂಬಿ ಹೋಗಿದೆ. "ಕೋರ್ಟು, ಜೈಲು, ವಾಸ, ಮಾನಹಾನಿಯೆಲ್ಲ ನೆನಪಾಗಿ ಏನೂ ಅನಿಸುವುದಿಲ್ಲವೆ ನಿನಗೆ? ಎಂದು ಸಮಾಧಾನ ಮಾಡಿಕೊಂಡು ಆಶ್ಚರ್ಯದಿಂದ ಮುಖ ನೋಡುತ್ತಾಳೆ. "ಇಲ್ಲ ಕವಿತಾ ನಾನು ಯಾವುದಕ್ಕೂ ಪ್ರತಿಕ್ರಿಯೆ ಮಾಡ ಬಯಸುವುದಿಲ್ಲ" ಅಡಲ್ಟರಿ ಮಹಾ ಕ್ರಿಮಿನಲ್ ಅಫೆನ್ಸ್ ಅನಿ" ಎಚ್ಚರಿಸುವ ಧ್ವನಿಯಲ್ಲಿ ದೊಡ್ಡದಾಗಿ ಹೇಳುತ್ತಾಳೆ. "ಅದು ದೊಡ್ಡ ಅಪರಾಧವಾದರೆ ಅದನ್ನು ನೀವು ಮಾಡಿಯಾಗಿದೆ" "ಅದೇನೂ ಹೌದು. ಆದರೆ ಬಚಾವಾಗುವ ಮಾರ್ಗವೊಂದನ್ನು ಹುಡುಕಬೇಡವೆ?" ಎನ್ನುತ್ತಾಳೆ ಅಶಕ್ತ ಧ್ವನಿಯಲ್ಲಿ. "ಖಂಡಿತ ಬೇಡ. ಬಚಾವಾಗುವುದೆಂಬುದೇ ಅರ್ಥವಿಲ್ಲದ್ದು" ಕತ್ತಲೆಯಾಗುತ್ತಿದೆ. ಆದರೆ ಅನಿ 16ರಂದು hearing ಇದೆಯಂತಲ್ಲ. ಅನಿ ಮಹೇಂದ್ರರು ಯಾರೋ ಒಬ್ಬ ಲಾಯರರ ಹತ್ತಿರ ಕರೆದುಕೊಂಡು ಹೋಗಿದ್ದರು. ಎಲ್ಲವನ್ನೂ Ceny ಮಾಡಲು ಹೇಳಿದ್ದಾರೆ. ಎನ್ನುತ್ತ ಏಳುತ್ತಾಳೆ. ಸಾವಕಾಶವಾಗಿ ಇಳಿಯುತ್ತೇವೆ. ಬಂಡೆ ಒಂದರ ಮೇಲೊಂದು ಹೇರಿಕೊಂಡು ದೊಡ್ಡ ಗುಡ್ಡವೇ ಆಗಿದೆ.

ಇಂದು ಕೋರ್ಟಿಗೆ ಹಾಜರಾಗುತ್ತೇನೆ. ಕರಿ ವಸ್ತ್ರದಲ್ಲಿ ಎತ್ತರದ ಪ್ಲಾಟಫಾರ್ಮಿನ ಮೇಲೆ ಗಂಭೀರ ಮುಖಭಾವದಲ್ಲಿ ಜಡ್ಜ ಕುಳಿತಿದ್ದಾನೆ. ಆಚೆ-ಈಚೆ ಕೆಳಗಡೆ ಎರಡು ಎದ್ದ ಟೇಬಲ್ಲುಗಳ ಹಿಂದೆ ವಕೀಲರು ಕುಳಿತಿರುತ್ತಾರೆ. ಮೇಲ್ಗಡೆ ಫ್ಯಾನು ನಿಧಾನವಾಗಿ ತಿರುಗುತ್ತಿದೆ. ರೆಬೆಲ್ಲೊ ನನ್ನ ಬಳಿಯೇ ಕೋರ್ಟಿನ ಹೊರಗಡೆ ಒಳಗಡೆ ತಿರುಗುತ್ತಿದ್ದಾನೆ. ಬಿಳೀ ವಸ್ತ್ರದ ಕೆಂಪು ಪಟ್ಟಿಯ ಕೋರ್ಟ ಜವಾನ ನನ್ನ ಹೆಸರನ್ನು ಮೂರು ಬಾರಿ ಕರೆಯುತ್ತಾರೆ. ಗಂಭೀರವಾಗಿ ಪಂಜರದಲ್ಲಿ ನಿಂತ ನನಗೆ ನನ್ನ ಮೇಲಿನ ಚಾರ್ಜನ್ನು ಓದಿ ಹೇಳಲಾಗುತ್ತದೆ.

I here by charge you as follows that you took away smt: Kavita Belliyappa of Mandya, whom you had reason to believe to be the wife of Shri Belliyappa with the intent that the said women night have illicit intercourse with you and that you hereby committed an offence punishable here under section 498 of the by Indian penal Code and within my

cognizance and I here by direct that you be tried on the said charge. Preliminary Enquiries ಶುರುವಾಗುತ್ತದೆ. ಕ್ಲರ್ಕ ಆಫ್ ದಿ ಕೋರ್ಟ್ ಪೆನ್ನನ್ನು ಕೊಡವಿ ಹಾಳೆಯೊಂದನ್ನು ಸರಿಯಾಗಿ ಮಾರ್ಜಿನ್ನಿಗೆ ಮಡಚಿ ಸಿದ್ಧಪಡಿಸಿಕೊಳುತ್ತಾನೆ. ನಿಬ್ಬಿನ ಆಚೆ–ಈಚೆ ಬದಿಯನ್ನು ಹರಕು ಕಾಗದವೊಂದಕ್ಕೆ ಒರೆಸುತ್ತಾನೆ. ಅದನ್ನು ಮುದ್ದೆ ಮಾಡಿ ಕಾಲಕೆಳಗಿನ ಬುಟ್ಟಿಗೆ ಒಗೆಯುತ್ತಾನೆ. "ಕವಿತಾ ಎಂಬ ಹೆಸರಿನ ಹೆಂಗಸಿನ ಗುರುತುಂಟಾ?" ಎಂದು ಪ್ರಾರಂಭಿಸುತ್ತಾನೆ.

"ಗೊತ್ತು" ಎನ್ನುತ್ತೇನೆ.

"ಇವಳ ಮದುವೆಯಾಗಿದೆಯೆಂಬುದು ನಿನಗೆ ಗೊತ್ತು ತಾನೆ?"

"ಹೌದು."

"ಇವಳು ಮತ್ತೊಬ್ಬನ ಹೆಂಡತಿಯೆಂಬುದು ತಿಳಿದಿದೆಯೂ?"

"ತಿಳಿದಿದೆ."

"ಇವಳ ಗಂಡನಿಗೆ ನಿಮ್ಮ ಸಂಬಂಧ ಒಪ್ಪಿಗೆಯಿತ್ತಾ?"

"ಗೊತ್ತಿಲ್ಲ"

"ನಿಮ್ಮಿಬ್ಬರ ಮಧ್ಯದಲ್ಲಿ ಲೈಂಗಿಕ ಸಂಬಂಧವಿತ್ತೇ?"

"ಹೌದು" ನನ್ನ ವಕೀಲ ಕಿಸೆಗೆ ಕೈ ಹಾಕಿ ಕರ್ಚೀಫ್ ಹೊರ ತೆಗೆಯುತ್ತಾನೆ.

ಕ್ಲಾರ್ಕ ಬರೆದುಕೊಳುವುದು ನಿಧಾನವಾಗುತ್ತದೆ. ಮ್ಯಾಜಿಸ್ಟ್ರೇಟ ಕ್ಲಾರ್ಕನ ಮುಖ ನೋಡುತ್ತಾನೆ.

"ನೀವಿಬ್ಬರೂ ಒಂದೇ ಮನೆಯಲ್ಲಿ ಒಂದು ವರುಷದಿಂದ ಇರುತ್ತಿದ್ದಿರಿ ಅಲ್ಲವೆ?"

"ಹೌದು" ಎನ್ನುತ್ತೇನೆ.

"ಇವಳು ಗಂಡನ ಮನೆಯನ್ನು ಬಿಟ್ಟು ಬಂದದ್ದು ನಿನಗೆ ಗೊತ್ತು ತಾನೆ?"

"ಹೌದು."

ಕ್ಲರ್ಕ ಆಫ್ ದಿ ಕೋರ್ಟ ಎಲ್ಲಾ ಓದಿ ಹೇಳುತ್ತಾನೆ. ಅವನ ಧ್ವನಿ ತೀರಾ ಒಣ ಮತ್ತು ಬಡವಾಗಿರುತ್ತದೆ.

ಜಡ್ಜ ನನ್ನ ಕಡೆ ತಿರುಗಿ "ಎಲ್ಲಾ ಚೆನ್ನಾಗಿ ತಿಳಿಯಿತೆ?" ಎಂದು ಕೇಳುತ್ತಾನೆ.

"ಹೌದು" ಎನ್ನುತ್ತೇನೆ.

"ಕವಿತಾ ಬೆಳಿಯಪ್ಪನೆಂಬ ಮಂಡ್ಯದ ಸಾವುಕಾರನ ಹೆಂಡತಿ. ಆಕೆ ನಿನ್ನೊಡನೆ ಒಂದು ವರುಷದಿಂದ ಒಂದೇ ಮನೆಯಲ್ಲಿ, ಒಂದೇ ಕೋಣೆಯಲ್ಲಿ ಒಂದೇ ಹಾಸಿಗೆಯಲ್ಲಿ ಬಾಳ್ವೆ ನಡೆಸಿದ್ದಾಳೆ. ಅವಳೊಂದಿಗೆ ನಿನಗೆ ಲೈಂಗಿಕ ಸಂಬಂಧವಿತ್ತು" ಎಂದು ತಿಳಿಸಿ ಹೇಳಲಾಗುತ್ತದೆ. "ಹೌದು" ಎನ್ನುತ್ತೇನೆ. "ಇದು ಐ. ಪಿ.ಟಿಸಿ. ಸೆಕ್ಷನ್ 498ರ ಪ್ರಕಾರ ಅಡಲ್ಟರಿ ಕೇಸಾಗುತ್ತದೆ. ತಿಳಿಯಿತಾ?" ಎಂದು ಕೇಳುತ್ತಾನೆ.

"ತಿಳಿಯಿತು" ಎನ್ನುತ್ತೇನೆ.

ಆ ಕಡೆಯ ವಕೀಲ ಎದ್ದು ನಿಂತು ಮ್ಯಾಜಿಸ್ಟ್ರೇಟರನ್ನು ನೋಡಿ, "Your honour, the accusd pleads guilty of his own accord" ಎನ್ನುತ್ತಾನೆ. ಕುರ್ಚಿ ಸಪ್ಪಳವಾಗುವಂತೆ ಎದ್ದು ನಿಂತು ನನ್ನ ಕಡೆಯ ವಕೀಲ But your honour ಎಂದು ತಡೆದು, "the accused, your honour has not Pleaded guilty" ಎಂದು ಧ್ವನಿ ಎತ್ತರಿಸಿ "The intent your honour, was not to have illicit intercourse with her, besides your honour, she was not detained by the accused your honour" ಎಂದು ಧ್ವನಿತಗ್ಗಿಸಿ,ಟಿಪ್ಪಣಿ ಕಾಗದ ನೋಡಿ ಮುಖ ಎತ್ತಿ "No doubt your honour under Section271 but the plea is not expressed in unmistakable terms, with full appriciation of the, your honour, essential ingredients of the offence" ಎಂದು ಕರ್ಚೀಫಿನಿಂದ ಬಾಯಿ ಉಜ್ಜಿಕೊಳುತ್ತಾನೆ. The Statement your honur, does not prima facie amount to an admisson, your honour That he is guilty of the offence charged so, your honour I appeal to court under section 272 to proceed to by the case. — ಎಂದು ದಣಿದು, ತನ್ನ ಕುರ್ಚಿಯಲ್ಲಿ ಕೂಡ್ರುತ್ತಾನೆ. ಮ್ಯಾಜಿಸ್ಟ್ರೇಟ ವಕೀಲನ ವಾದ ಸರಣಿಯಿಂದ ತೃಪ್ತನಾದಂತೆ ತೋರುತ್ತದೆ. ಕ್ಲಾರ್ಕನ ಕಡೆ ತಿರುಗಿ ಏನೇನೋ ಡಿಕ್ಟೇಟು ಮಾಡುತ್ತಾನೆ. ರೂಮಿಗೆ ಬಂದಾಗ ನಾಲ್ಕು ಗಂಟೆ ಹೊಡೆಯುತ್ತದೆ. ಮೇಲಿನ ಹಂಚು ಕಾಯ್ದು ಒಳಗಿನ ಹವೆ ಬಿಸಿಯಾಗಿರುತ್ತದೆ. ರೂಮಿನ ಹಿಂದಿನ ಬೈಲಿನಲ್ಲಿ ದನಗಳು ಬಿಸಿಲಿನಲ್ಲಿ ಮೇಯುತ್ತಿವೆ. ದನಗಾಹಿ ಸಣ್ಣ ಗಿಡದ ಕೆಳಗಡೆ ಬಂಡೆಯೊಂದರ ಮೇಲೆ ಪೈಟಾಗಿ ಕೋಲು ಹೆಗಲ ಮೇಲೆ ಹಾಕಿಕೊಂಡು ಕುಳಿತದ್ದು ಕಿಟಕಿಯಿಂದ ಕಾಣುತ್ತದೆ. ಸ್ಟೋ ಹಚ್ಚುತ್ತೇನೆ. ಚಹ ಮಾಡುತ್ತೇನೆ. ಸೋಸಿ ಕಪ್ಪಿಗೆ ಹಾಕುತ್ತಿದ್ದಾಗ ರೆಬೆಲ್ಲೊ ಕೋಣೆಗೆ ನುಗ್ಗುತ್ತಾನೆ. "ಕೇಸು ಮುಗಿದು ಹೋಗಿತ್ತು. ಪುಣ್ಯ, ವಕೀಲ ಬಚಾವ ಮಾಡಿದ" ಎಂದು ಕುರ್ಚಿಯಲ್ಲಿ ಕುಸಿದು ಕೂಡ್ರುತ್ತಾನೆ. You must obey the Pleader or ನಾವು ನನ್ನ ಬಚಾವಿಗಾಗಿ ಬೇರೆ ದಾರಿ ಹುಡುಕಿಕೊಳಬೇಕಾಗುತ್ತದೆ. "ಯೆಂದು ಹೇಳುತ್ತೇನೆ. ನಾನು ಕೂಡ್ರಿಸುತ್ತೇನೆ. ಚಹ ಕೊಡುತ್ತೇನೆ. ಕುಡಿದು ಕಪ್ಪಿಟ್ಟವನೇ ಹೊರಟು ಹೋಗುತ್ತಾನೆ,

ವಕೀಲನ ಕಾರಕೂನ ಬಂದು ಕರೆದುಕೊಂಡು ಹೋಗುತ್ತಾನೆ. ವಕೀಲ ಪುಸ್ತಕದಲ್ಲಿ ಏನನ್ನೋ ಹುಡುಕುತ್ತಿದ್ದಾನೆ. ನಾನು ಹೋದ ತಕ್ಷಣ ಮುಖ ಎತ್ತಿ She is an intelligent lady ಎಂದು ಕವಿತಾಳನ್ನು ಕುರಿತು ಹೇಳುತ್ತಾನೆ.

She denied all the charges of the prosecutioner ಎಂದು ನೀವು ಓದಿದವರು. "You must know how touse your knowledge gainfully." ಎಂದು Instruction ಕೊಡುತ್ತಾನೆ. All Philosophers are personal ಎನ್ನುತ್ತಾನೆ. ಕೋರ್ಟು ಸತ್ಯವನ್ನು ಎತ್ತಿ ಹಿಡಿಯುತ್ತದೆಯೆಂದು ಯಾವ ಮೂರ್ಖ ತಿಳಿದುಕೊಂಡಿದ್ದಾನೆ. ಎನ್ನುತ್ತಾನೆ. ಆದರೆThat s the only way to defend ಎನ್ನುತ್ತಾನೆ. ಹದಿನೆಂಟಕ್ಕೆ Hearing ಇದೆ Cross Examination ಎನುತ್ತಾನೆ. I dont want to defend, my Pleader. You may take your fees and free me please" ಎನ್ನುತ್ತೇನೆ. ಆತ ಸ್ಪೆಕ್ಸ್ ತಗೆದುನೋಡುತ್ತಾನೆ. ಹಾಗೆಯೇ ನೋಡುತ್ತ ಕೂಡ್ರುತ್ತಾನೆ. I think you have become desperate. ಎಂದು ಗದ್ದಕ್ಕೆ ಅಂಟಿಸಿದ ಕೈತೆಗೆದು ಹೇಳುತ್ತಾನೆ "ನೀವು ಹೋಗಿ. ತಲೆ ಸ್ವಲ್ಪ ಕೂಲಾಗಿ ಇಟ್ಟುಕೊಳಿ"" ಎಂದು ತನ್ನ ಕೆಲಸದಲ್ಲಿ ತೊಡಗುತ್ತಾನೆ. ಇಂದು ಕೋರ್ಟಿನ ಹಾಲು ಜನರಿಂದ ತುಂಬಿದೆ. ಹಳೆಯ ಫ್ಯಾನು ಸಪ್ಪಳ ಮಾಡುತ್ತ ತಿರುಗುತ್ತದೆ. ಪಂಜರದಲ್ಲಿ ನನ್ನನ್ನು ನಿಲ್ಲಿಸುತ್ತಾರೆ. ಕ್ಲರ್ಕ ಆಫ್ ದಿ ಕೋರ್ಟ್ "ದೇವರಾಣೆಯಾಗಿ"...ಯೆಂದು ಶುರು ಮಾಡುತ್ತಾನೆ. ಸುಮ್ಮನಿರುವ ನನ್ನನ್ನು ನೋಡಿ 'ಹೇಳು ಎನ್ನುತ್ತಾನೆ. "ನನಗೆ ದೇವರಿಲ್ಲ ಸ್ವಾಮಿ," ಎನ್ನುತ್ತೇನೆ. "ಆತ್ಮ ಸಾಕ್ಷಿಯಾಗಿ ಇಂಗ್ಲೀಷ ಬರುತ್ತದೆಯಲ್ಲ. In the name of coscience ಅನ್ನು" ಎನ್ನುತ್ತಾನೆ.

"ನನಗೆ Conscience ಎನುವುದೇ ಗೊತ್ತಿಲ್ಲ"ವೆನ್ನುತ್ತೇನೆ. ವಕೀಲರು ದುರುಗುಟ್ಟಿ ನೋಡುತ್ತಾರೆ. ಕ್ಲಾರ್ಕ ಕಣ್ಣು ಕೆಂಪಗೆ ಮಾಡಿ "ನಾನು ಹೇಳಿದಂತೆ ಹೇಳು" ಎಂದು ಆಜ್ಞಾಪಿಸುತ್ತಾನೆ. ಮ್ಯಾಜಿಸ್ಟ್ರೇಟ ಸ್ಪೆಕ್ಸ ಒರೆಸಿಕೊಂಡು ನೋಡುತ್ತಾನೆ. "ನಿನಗೆ ಸತ್ಯವೆಂದರೇನು ಎನ್ನುವುದು ಗೊತ್ತಿದೆಯಾ?" ಎಂದು ಕೇಳುತ್ತಾನೆ. "ಇಲ್ಲ ಸ್ವಾಮಿ," ಎಂದಾಗ ಕುರ್ಚಿಯಲ್ಲಿ ಆತ ಕುಂಡೆ ಹೊರಳಿಸುತ್ತಾನೆ. ವಕೀಲರಲ್ಲಿ ವಾದ ಶುರುವಾಗುತ್ತದೆ. ನನ್ನ ಕಡೆಯ ವಕೀಲ ದೇವರು, ಆತ್ಮ ಸಾಕ್ಷಿಯಿಲ್ಲದವನು ಸತ್ಯವನ್ನು ಹೇಳುವುದಿಲ್ಲವೆಂಬುದಕ್ಕೆ ಸಾಕ್ಷಿಯಿದೆಯೇನು ಎಂದು ಪ್ರಶ್ನಿಸುತ್ತಾನೆ. ತನ್ನ ಕ್ಲೈಂಟನ ಹತ್ತಿರ ಕೋರ್ಟಿನ ಸಾಂಪ್ರದಾಯಿಕ ಭಾಷೆ, ಪದ್ಧತಿಯನ್ನು ಬಿಟ್ಟು ಮಾತನಾಡಬೇಕು ಎನ್ನುತ್ತಾನೆ ಆತ. ತುಂಬ ಓದಿಕೊಂಡ ಸೇಂಟ ಟೈಪ ಮನುಷ್ಯನೆನ್ನುತ್ತಾನೆ. ಮ್ಯಾಜಿಸ್ಟ್ರೇಟ ಹ್ಯಾಮರ್ ಬಡಿಯುತ್ತಾನೆ The Pleader has forgotten that is in court ಎಂದು ಆತ ನಗೆಯಾಡಿ, ನನ್ನ ನೋಡಿ, ನೀನು ಈಗ ಸತ್ಯವನ್ನೇ ಹೇಳಬೇಕು. ಯಾವುದರ ಸಾಕ್ಷಿಯಾಗಿ ಹೇಳುತ್ತಿ?" ಎಂದು ನನ್ನನ್ನು ಕೇಳುತ್ತಾನೆ. "ಸಾಕ್ಷಿಯಿಲ್ಲದೆ ನಡೆದದ್ದನ್ನು ಹೇಳುತ್ತೇನೆ" ಎನ್ನುತ್ತೇನೆ.

ಜಂಕ್ಶನ್

ನಾನೊಂದು ಜಂಕ್ಶನ್
ನಿಂತಲ್ಲೆ ನಿಂತಿರುವೆ
ಹಸಿರು ನಿಶಾನೆ ಹಿಡಿದು
ಲೈನಕ್ಲಿಯರ್ ಕೊಡುವೆ
ಗಾಡಿಗಳು ಹುಡುಗಿಯರು
ಓಡಾಡಿದಂತೆಲ್ಲ
ಹಳಿಯು ಬದಲಾಯಿಸುತ್ತಾ
ದಾರಿಬಿಡುವೆ.

— ಶ್ರೀನಿವಾಸ ಕುಲಕರ್ಣಿ

"ಸಾಕ್ಷಿಯಿಲ್ಲವಾದರೆ ಕೇಸನ್ನು ಹ್ಯಾಂಡಲ್ ಮಾಡಲು ಬರುವುದಿಲ್ಲ"

"ಹಾಗಿದ್ದರೆ ನೀನು Confession ಮಾಡು ತ್ತೀಯಾ?" ಎಂದು ಅವನ ಕಡೆಯ ವಕೀಲ ಕೇಳು ತ್ತಾನೆ. He is forcing your honour ಎಂದು ನನ್ನ ಕಡೆಯ ವಕೀಲ ಹೇಳುತ್ತಾನೆ. ನಾನು ನಿಂತ ಪಂಜರ ಅಲುಗಾಡುತ್ತದೆ. ಕಟ್ಟಿಗೆಯ ಪಟ್ಟಿ ಗಳು ಅಷ್ಟೇನೂ ಗಟ್ಟಿಯಿಲ್ಲ. ಬಾಗಿಲು ಬಳ ಬಳ ಅಲುಗಾಡುತ್ತಿದೆ. ಪಂಜರದ ಪಟ್ಟಿಯ ಮೇಲೆ ಮೊಣ ಕೈ ಊರಿ ನಿಲ್ಲುತ್ತೇನೆ. "ಸರಿಯಾಗಿ ನಿಲ್ಲು" ಎಂದು ಕ್ಲಾರ್ಕ ಗದ್ದರಿಸುತ್ತಾನೆ. ಕೇಸನ್ನು ಮುಂದು ವರಿಸುವುದು ಹೇಗೆ ಎಂದು ಮ್ಯಾಜಿಸ್ಟ್ರೇಟ ಪ್ರಶ್ನಿ ಸುತ್ತಾನೆ. "ನಿನ್ನದು ಯಾವ Philosophy ಎಂದು ಕೇಳುತ್ತಾನೆ.

"ನನಗೆ Philosophy ಯಿಲ್ಲ" ಎನ್ನುತ್ತೇನೆ.

"ನಿನಗೆ ಧರ್ಮ ಜಾತಿಗಳುಂಟೊ?"

"ಎರಡೂ ಇಲ್ಲ ಸರ್."

"ನೀನು ಯಾವ ದೇಶದವನು?" ಎಂದು ಹುಬ್ಬು ಗಂಟಿಕ್ಕುತ್ತಾನೆ.

"ನನಗೆ ದೇಶವಿಲ್ಲ ಸರ್." ಎಂದಾಗ

"Your honour a Criminal through and thiough' ಎಂದು ಆ ಕಡೆಯ ವಕೀಲ ಎದ್ದು ನಿಲ್ಲತ್ತಾನೆ.

"No your honour a saint perfect" ಎಂದು ನನ್ನ ಕಡೆಯ ವಕೀಲ ಧ್ವನಿ ಮಾಡುತ್ತಾನೆ.

"No your honour ಅವನಿಗೆ ದೇವರಿಲ್ಲ ಧರ್ಮವಿಲ್ಲ, ರಾಷ್ಟ್ರವಿಲ್ಲ, ಆತ್ಮವಿಲ್ಲ, ಆದರ್ಶವಿಲ್ಲ."

"A Criminal and cynic" ಎಂದು ಆತ ಮೇಜು ಗುದ್ದುತ್ತಾನೆ.

"No your honour ಆತ ಈ ಜಗತ್ತನ್ನು ಯಾವ ಸಿದ್ಧಾಂತದ ಮುಖಾಂತರವೂ ನೋಡ ಬಯಸು ವುದಿಲ್ಲ. ಶಬ್ದಜಾಲವನ್ನು ನೇಯ್ದು ಸತ್ಯವನ್ನು ಮರೆಮಾಚ ಬಯಸುವುದಿಲ್ಲ. ಆಸೆಯಿಂದಾಗಲೀ, ಭಯ ದಿಂದಾಗಲೀ ತನ್ನ ಬದುಕನ್ನು ಬದಲಿಸಬಯಸುವುದಿಲ್ಲ ಆತ ಜೀವನವನ್ನು ತಾನು ನಂಬಿದಂತೆ ಬದುಕ ಬಯ ಸಿದ್ದಾನೆ. Your honour, a perfect existentialist of an oriental type your honour ಎಂದು ಬಾಯಿ ಒರೆಸಿಕೊಳ್ಳು ತ್ತಾನೆ.

ಮ್ಯಾಜಿಸ್ಟ್ರೇಟ ಮೇಜಿನ ಮೇಲೆ ಹ್ಯಾಮರ ಬಡಿ ಯುತ್ತಾನೆ. "Are you an existentialist?" ಎಂದು ನನ್ನನ್ನು ಕೇಳುತ್ತಾನೆ.

"ನನಗೆ ಯಾವ ತತ್ವವೂ ಇಲ್ಲ ಸರ್. ನನಗೆ ಗುರು ವಿಲ್ಲ. ನನಗೆ ಮಾರ್ಗದರ್ಶಿಯಿಲ್ಲ. ನಾನು ಚಿಂತಿ ಸುವಂತೆ ಅನಿಸಿಕೊಂಡಂತೆ ಮಾಡಿದಂತೆ ಬದುಕಿದ್ದೇನೆ."

ಫುಲ್ ಕಾಲರ ಕರಿ ಕೋಟಿನ ವಕೀಲನ ಹಿಂದು ಗಡೆ ಬಗಲ ತುಂಬಾ ಫೈಲು ಹಿಡಿದು ಕೊಂಡ ಅವನ ಕಾರಕೂನ ನಿಂತಿರುತ್ತಾನೆ. ಬಲಗಾಲು ಸ್ವಲ್ಪ ಎತ್ತಿ ಬಟಗಚ್ಚೆ ಬಿಗಿದು ಕೊಳ್ಳುತ್ತಾನೆ. ಕರಿ ಟೊಪ್ಪಿಗೆಯನ್ನು ತೆಗೆದು ನೆತ್ತಿಯನ್ನು ಕರ್ಚೀಫಿನಿಂದ ಒರೆಸಿಕೊಂಡು ಪಂಜರದ ಹತ್ತಿರ ಸ್ಟ್ಯಾಂಡಿನ ಬಳಿ ನಿಂತು ಎಕ್ಸಾಮಿನೇಶನ್ ಇನ್ ಚೀಫ್ ರೆಬೆಲ್ಲೊ approver ಆಗಲು ಒಪ್ಪಿ ಅರ್ಜಿ ಕೊಟ್ಟಿದ್ದಾನೆ: ಆದರೆ This is a case worth trying ಎಂದೆಲ್ಲ ವಕೀಲ ಹೇಳುತ್ತಾನೆ. "ನೀವೇನು ಹೆದರಿ ಕೊಳ್ಳುವುದು ಬೇಡ. "I am confident of winning the case" ಎನ್ನುತ್ತಾನೆ. My dear pleader ಭಯ ಅಥವಾ ಶಿಕ್ಷೆಯ ಪ್ರಶ್ನೆಯೇ ಇಲ್ಲ ಸರ್. ನನಗೆ ನನ್ನನ್ನು ರಕ್ಷಿಸಿಕೊಳ ಬೇಕಾಗಿಲ್ಲ. ನಾನು ಮಾಡುವ ಯಾವ ಕೆಲಸಕ್ಕೂ ಯಾರನ್ನೂ ಹೊಣೆಗಾರರೆಂದು ತಿಳಿಯುವುದಿಲ್ಲ" ಎಂದರೆ "ನಾನು ನಿನ್ನನ್ನು ತಿಳಿದುಕೊಳ ಬಲ್ಲೆ. But it is useless ಇದ್ದುದನ್ನು ಹೇಳಿ ಕೋರ್ಟಿನಲ್ಲಿ ಗೆದ್ದು ಬಂದವರೇ ಇಲ್ಲ."

"ಜಯವೋ, ಅಪಜಯವೋ ಅದರಲ್ಲಿ ನನಗೆ ಆಸಕ್ತಿಯಿಲ್ಲ ಸರ್. ನಾನು ನನ್ನ ಕೊರತೆ ಮತ್ತು ಶಕ್ತತೆಯನ್ನು ಮಾತ್ರ ಕುರಿತು ವಿಚಾರಿಸುತ್ತೇನೆ."

"ನಿಮ್ಮ ಹತ್ತಿರ ಮಾತನಾಡುವುದು ಅಂದರೆ ನನಗೆ ತೃಪ್ತಿ.

"I may loose the case but I am happy in gaiuing a friend" ಎಂದು ಬೀಳ್ಕೊಡುತ್ತಾನೆ.

ಜವಾನ ಕರೆಯುತ್ತಾನೆ. ರೆಬೆಲ್ಲೊ ಪಂಜರದಲ್ಲಿ ನಿಂತಿರುತ್ತಾನೆ. ಹ್ಯಾಮರಿನ ಸಪ್ಪಳವಾದಾಗ ಎಲ್ಲರೂ ಮೌನರಾಗುತ್ತಾರೆ. clerk of the court ಪ್ರತಿಜ್ಞೆ ಮಾಡಿಸುತ್ತಾನೆ. ತಾನು ಹೇಳುತ್ತಿರುವುದು ಸತ್ಯ ವೆನ್ನುತ್ತಾನೆ. ನಾನೂ ಕವಿತಾ ಒಂದೇ ಹಾಸಿಗೆಯಲ್ಲಿ ಮಲಗಿದ್ದನ್ನು ನೋಡಿದ್ದೇನೆ ಎನ್ನುತ್ತಾನೆ. ನನ್ನ ವ್ಯವಹಾರ ಸೇರದೇ ರೂಮು ಬದಲಿಸಿದೆ ಎನ್ನುತ್ತಾನೆ ನಾನು ಸೆಕ್ಸುಅಲ್ ಪರ್ವಟ ಎನ್ನುತ್ತಾನೆ. ಅದರಿಂದಾಗಿಯೇ ನನಗೆ ಹುಚ್ಚು ಹಿಡಿದಿತ್ತು ಎನ್ನುತ್ತಾನೆ. ಕರಿ ಟೋಪಿಯ ವಕೀಲ ಕುತ್ತಿಗೆಯ ಹತ್ತಿರದ ಎರಡು ಬಟನ್ ಬಿಚ್ಚುತ್ತಾನೆ. ಒಳ ಕಿಸೆಗೆ ಕೈ ತುರುಕಿ ಫೋಟೋಗಳನ್ನು ತೆಗೆದು ಮ್ಯಾಜಿಸ್ಟ್ರೇಟರ ಎದುರಿಗಿಡುತ್ತಾನೆ. ಫೋಟೋಗ್ರಾಫರನನ್ನು ಸಾಕ್ಷಿಗೆ ಕರೆಯುತ್ತೇನೆ ಎನ್ನುತ್ತಾನೆ.

"ಈ ಸ್ಟೇಜಿನಲ್ಲಿ I willn't allow it your honour ಎಂದು ನನ್ನ ವಕೀಲ ಬಾಯಿ ಮಾಡುತ್ತಾನೆ. With an intent to have illicit intercourse only he had detained here, your honour "ಎಂದು Other wise how is it that he did not persuade her to go back to her husband's house?" ಎಂದು ಪ್ರಶ್ನೆ ಯಿಡುತ್ತಾನೆ.

"ಅವಳ ಮನ ಒಲಿಸಿ ಮನೆಗೇಕೆ ಕಳಿಸಲಿಲ್ಲ"ವೆಂದು ಮ್ಯಾಜಿಸ್ಟ್ರೇಟ ನನ್ನ ಕಡೆ ತಿರುಗಿ ಕೇಳುತ್ತಾನೆ.

"ಅವಳು ಸ್ವತಂತ್ರಳು. ಸರ್. ನಾನು ಯಾವ ವಹಾರವನ್ನೂ ಪ್ರಶ್ನಿಸುವುದಿಲ್ಲ" ಎನ್ನುತ್ತೇನೆ.

"ನೀನು ಅವಳಿಗೆ ಮನೆಗೆ ಹೋಗೆಂದು ಉಪದೇಶ ಮಾಡಿದ್ದೀರಾ, ಎಂದು ಕೇಳುತ್ತಾನೆ.

"ಇಲ್ಲ"ವೆನ್ನುತ್ತೇನೆ.

"ದುರುದ್ದೇಶವಿಲ್ಲವಾದರೆ ನೀನು ಒಂದು ಮಾತನ್ನಾದರೂ ಹೇಳಬಹುದಿತ್ತಲ್ಲ?" ಎನ್ನುತ್ತಾನೆ.

"ನಾನು ಅವಳಿಗಿಂತ ದೊಡ್ಡವನೆಂದು ತಿಳಿದು ಕೊಳಲಿಲ್ಲ ಸರ್." ಎನ್ನುತ್ತೇನೆ.

"ನೀನು ಮಾಡಿದ್ದು ತಪ್ಪು ಎಂದು ನಿನಗೆ ಅನಿಸು ವುದಿಲ್ಲವೆ?"

"ಇಲ್ಲ"

"Then what do you say of your act"

"An act sir!"

"ನಿನಗೆ ನೀನು ಮಾಡಿದ್ದು ಪಾಪದ ಕೃತಿಯೆಂದು ಅನಿಸಲೇ ಇಲ್ಲವೇ?" ಎಂದು ಮತ್ತೆ ಕುರ್ಚಿಯಲ್ಲಿ ಸಪ್ಪಳವಾಗುವಂತೆ ಹೊರಳಿ ಕೇಳುತ್ತಾನೆ.

"No sir, ನಾನೆಂದಿಗೂ ಆ ಶಬ್ದಗಳಲ್ಲಿ ಯೋಚಿಸುವುದಿಲ್ಲ" ಮ್ಯಾಜಿಸ್ಟ್ರೇಟ wild ಆಗುತ್ತಾನೆ.

"Then what would be your reaction to the people who do the same thing?" ದೊಡ್ಡ ಧ್ವನಿಯಲ್ಲಿ ಕೂಗುತ್ತಾನೆ.

ಸಪ್ಪಳ ಮಾಡುತ್ತಾ ಫ್ಯಾನು ತಿರುಗುತ್ತದೆ. ವಕೀಲರಿಬ್ಬರೂ ಕೆನ್ನೆಗೆ ಕೈಕೊಟ್ಟು ನ್ಯಾಯಾಧೀಶ ನನ್ನೇ ನೋಡುತ್ತಿದ್ದಾರೆ.

"ನಾನು ಪ್ರತಿಕ್ರಿಯೆ ಮಾಡಬಯಸುವುದಿಲ್ಲ ಸರ್ ನಾನು ಕೇವಲ ಬದುಕುತ್ತಿದ್ದೇನೆ. ಬದುಕನ್ನು ನೋಡುತ್ತಿದ್ದೇನೆ" ಎಂದಾಗ ನನಗೆ ಪಂಜರದಿಂದ ಹೊರ ಬರಲು ಹೇಳುತ್ತಾರೆ. ಮ್ಯಾಜಿಸ್ಟ್ರೇಟ ವಕೀಲರಿಬ್ಬರೂ ಮಾತಾಡಿಕೊಳ್ಳುತ್ತಾರೆ. ಮ್ಯಾಜಿಸ್ಟ್ರೇಟ ಏಳುತ್ತಾನೆ.

ಮಾಜಿಸ್ಟ್ರೇಟ್ ಏಳುತ್ತಾನೆ. ಎಲ್ಲರೂ ನಿಲ್ಲುತ್ತಾರೆ. ಕೆಂಪು ಪಟ್ಟಿಯ ಬಿಳಿಯ ಯೂನಿಫಾರ್ಮಿನ ಜವಾನ ಅವನ ಹಿಂದೆ ಹೋಗುತ್ತಾನೆ. ರೆಬೆಲ್ಲೊ ಹೋಗುತ್ತಾನೆ. ಕವಿತಾ ಹೋಗುತ್ತಾಳೆ. ವಕೀಲರು ಹೊರ ಬಿದ್ದು ನಗೆಯಾಡಿಕೊಳ್ಳುತ್ತ ಕೋರ್ಟಿನ ಹೊರ ಬೀಳುತ್ತಾರೆ.

ರಸ್ತೆಗಿಳಿಯುತ್ತೇವೆ. ಜನ ಗಿಜಿ ಗಿಜಿ ತುಂಬಿದ್ದಾರೆ. ಬರುತ್ತಿದ್ದಾರೆ. ಹೋಗುತ್ತಿದ್ದಾರೆ. ನಿಲ್ಲುತ್ತಿದ್ದಾರೆ. ಕೈ ಕುಲುಕುತ್ತಿದ್ದಾರೆ. ನಗೆಯಾಡುತ್ತಿದ್ದಾರೆ ಗಂಭೀರವಾಗಿ ತಲೆ ತಗ್ಗಿಸಿ ನಡೆಯುತ್ತಿದ್ದಾರೆ. "ಹಲೊ ಜೋಸೆಫ್" ಗ್ಲಾಡ್ ಟು ಮೀಟ್"

"Had you been to film". How is your grand mummy?" "ಥ್ಯಾಂಕ್ಸ" ವೆರಿ ಗುಡ್" "ಎಕ್ಸಕ್ಯೂಜ್" "ಆಲ್‌ರೈಟ್" "ದ್ಯಾಟ್ ಡಸ್ ನೋಟ್ ಮ್ಯಾಟರ್" "ಸಮ್ ಹಾ ನಡಿತದ" "God should save" ಎಂದೆಲ್ಲ ಮಾತುಗಳು ತುಂಬಿವೆ. ರೂಮಿನ ಹತ್ತಿರ ಬರುತ್ತೇನೆ. ಆಕಾಶದಿಂದ ಕೆಂಪು ಬೆಳಕು, ಬಿಲ್ಡಿಂಗ.-ಬಯಲಿನ ಮೇಲೆಲ್ಲ ಬಿದ್ದಿದೆ. ●

- ಮುಗಿದುದು -

ಅಳಿಯ: 1974

ಎಂ ವಿ ಶರ್ಮಾ ತದ್ದಲಸೆ

ದಿಲ್ಲಿಯಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಅನಂತಯ್ಯನವರ ಅಳಿಯ, ಅಲ್ಲಲ್ಲ "ಅಳಿಯ ದೇವರು"— ಶುದ್ಧ ಮಾಡರ್ನ! ಅವನ ಅಳಿಯತನದ್ದೇ ಒಂದು ರೀತಿ.

ನಮ್ಮ ಅನಂತಯ್ಯನವರ ಅಳಿಯ ಇತ್ತ ಶುದ್ಧ ದೇಶೀಯವು ಅಲ್ಲ, ಅತ್ತ ಅಶುದ್ಧ ವಿದೇಶಿಯವೂ ಅಲ್ಲ, ಹಾಗೆಂದು ಪರದೇಶಿಯೆಂದು ತಿಳಿಯಲಾಗದು. ದೂರದ ದಿಲ್ಲಿಯಲ್ಲಿ ದಂಧೆಯಲ್ಲಿರುವ ಕಪೋಲಕೇಶಿ. ಈ ವ್ಯವಸ್ಥೆಗೆ ಅವನ ತಪ್ಪು ಅಲ್ಪವೂ ಇಲ್ಲ. ಗುರು ಶರ್ಟು, ಕೊಳವೆ ಪ್ಯಾಂಟು ಹಾಕಿ ತಾನು ಮೇಡ್ ಇನ್ ಯು. ಎಸ್. ಎ. ಆದದ್ದು ಅವನಿಗೂ ತಿಳಿಯದ್ದು. ಇದ್ದಕ್ಕಿದ್ದ ಹಾಗೆ ಅಭಿವ್ಯಕ್ತಿಗೊಂಡ ಒಂದು ಹೊಸ ಯುವ ಅವಸ್ಥೆ. ಇದರ ಪ್ರಭಾವ ಎಷ್ಟು ಅದ್ಭುತವಾಗಿದೆಯೆಂದರೆ ನಾಳೆ ನೇಣುಹಾಕಿಕೊಂಡು ಸಾಯಬೇಕೆಂದೆನಿಸಿ ಅವನಿಗೆ ಹಗ್ಗ ಬೇಕಾದರೂ ಅದು ವಿದೇಶಿಯದೇ ಆಗಬೇಕು. ಮೇಡ್ ಇನ್ ಇಂಗ್ಲಂಡೋ, ಮೇಡ್ ಇನ್ ಜಪಾನೋ, ಸಿಂಗಾಪುರೋ ಆಗಿರಬೇಕು! ಅಷ್ಟು ವಿದೇಶಿಗೀಳು. ಇಲ್ಲಿ ದೇಶೀಯ ಸರಕಿನ ತಿರಸ್ಕಾರವಿಲ್ಲ ಖಂಡಿತ. ನಮ್ಮಲ್ಲಿಲ್ಲದ ಗುಣಶ್ರೇಷ್ಠತೆಯನ್ನು ಇನ್ನೊಬ್ಬರಲ್ಲಿ ಕಂಡುಕೊಂಡು ಒಪ್ಪಿಕೊಳ್ಳುವುದು ಸಣ್ಣ ಸಂಗತಿಯಲ್ಲ! ಭಾಯಿ ಭಾಯಿ ಎಂದು ದ್ರೋಹ ವೆಸಗಿದ ಮೇಡ್ ಇನ್ ಚೀನಾ ಬಟ್ಟೆಯಾದರೂ ಸರಿ ಬ್ಲೇಡಾದರೂ ಸರಿ, ಅಂತೂ ಸ್ವದೇಶಿ ಬೇಡ. ಇಂಥ ಮನುಷ್ಯ ಶುದ್ಧ ಆಚಾರಬದ್ಧ ಅನಂತಯ್ಯನವರ ಮಗಳು ಮಂಜುಳೆಯನ್ನು ಮದುವೆಯಾದದ್ದು ಮಾತ್ರ ಘನಘೋರ ದಾಖಲೆ, ದೀಪಾವಳಿ ಹೊಸ ಹಬ್ಬದಲ್ಲಿ ನಗೆ ದಾಂಧಲೆ. ಅವನದು ಅಸಾಮಾನ್ಯ ಬುದ್ಧಿಮತ್ತೆಯೆಂದೇ ಹೇಳಬೇಕು. ಕೇವಲ ಸಂಗಾತಿ ಆಯ್ಕೆಯಲ್ಲಷ್ಟೇ ಮೇಡ್ ಇನ್ ಇಂಡಿಯಾ ಆದದ್ದು ಎಂಥ ಸೋಜಿಗ. ಇಷ್ಟಲ್ಲದೆ ಮದುವೆಯ ಮರುದಿನದ ದೀಪಾವಳಿ ಹೊಸ ಹಬ್ಬಕ್ಕೆ ಹಾಜರಾಗಿ ಭಾಗವಹಿಸಿದ್ದುದು ಭಾರತದ ಪೂರ್ವಪುಣ್ಯ ಪವಾಡವೇ ಎನ್ನಬೇಕು ಅಥವಾ ಕುಲದೇವತಾ ಪ್ರಸನ್ನವೋ ತಿಳಿಯದು.

ಸ್ವಾಗತ ಸಡಗರ

ಅಷ್ಟೇ ಸ್ನಾನ ಮಾಡಿ ಮಡಿಯುಟ್ಟಿರುತ್ತೈದೆಯಂತೆ ಮನೋಹರವಾದ ದೀಪಾವಳಿ ಬೆಳಗು, ಎಳೆ ಬಿಸಿಲಿನ ಗಾಳಿ ಬಹಳ ಹಿತವಾಗಿ ಅಪ್ಯಾಯಮಾನವಾದ ಆನಂದವನ್ನು ಉಕ್ಕಿಸುತ್ತಿದೆ. ದನಕರುಗಳ "ಓಂಯ್" ಕೂಗು, ಹೆಂಗಸರು ಮಕ್ಕಳ ಮಾತು ನಗುಗಳ ಅಲೆ, ಮನಸ್ಸು ಹಗುರವಾಗಿ ಉಲ್ಲಾಸಯುಕ್ತ ವಾತಾವರಣ. ಅನಂತಯ್ಯನವರು ಅಳಿಯನನ್ನು ಎದುರುಗೊಳ್ಳಲು ಒಂದು ಬೆಳ್ಳಿ ಹರಿವಾಣದಲ್ಲಿ ಸೂರ್ಯಕಾಂತಿ ಹೂವಿನ ಹಾರ, ಒಂದು ಭರ್ಜರಿ ರಸಬಾಳೆ ಹಣ್ಣಿಗೆ, ಹಾಲು, ದ್ರಾಕ್ಷೆ, ಸೇಬು, ಕಿತ್ತಳೆ ಇತ್ಯಾದಿ ಇತ್ಯಾದಿಗಳನ್ನು ಇಟ್ಟುಕೊಂಡು ಆಗಮನವನ್ನೇ ಎದುರು ನೋಡುತ್ತಿದ್ದರು. ಅನಂತಯ್ಯನವರ ಸ್ವಾಗತ ಸಂಪ್ರದಾಯದ ಹಿಂದೆಯೇ ಅವರ ಸಕುಟುಂಬವೂ ಸಪರಿವಾರವೂ ಇತ್ತು. ಪತಿಯ ಮುಖದರ್ಶನಕ್ಕೆ ಹಾತೊರೆದು ನಿಂತಿದ್ದಳು ಮಂಜುಳೆ. ಅಳಿಯನ ಹಣೆಗೆ ಕುಂಕುಮ ಹಚ್ಚಿ ಆರತಿ ಎತ್ತಿ ಬರಮಾಡಿಕೊಳ್ಳಲು ತುಂಬಾ ಸಂಭ್ರಮದಿಂದ ಮುತ್ತೈದೆಯರೊಡಗೂಡಿ ನಿಂತಿದ್ದರು ಅನಂತಯ್ಯನವರ ಅದ್ವಿತೀಯ ಅಧಿಕೃತ ಧರ್ಮಪತ್ನಿ ಗಂಗಮ್ಮ. ನಾಗಪೇರಿ ಪಂಚೆ ಬೇರೆ ಧರಿಸಿದ್ದರು. (ಆಧುನಿಕ ಪಂಚೆಯಲ್ಲ ಮತ್ತೆ!) ದೃಷ್ಟಿ ತೆಗೆಯಲು ತೆಂಗಿನಕಾಯಿ, ಪರಕೆ, ಸಾಸಿವೆ ಕರ್ಪೂರ ಸಿದ್ಧವಾಗಿತ್ತು. ಇನ್ನೇನು ಅಳಿಯ ಬರುವುದಷ್ಟೇ ತಡ. ಅಷ್ಟರಲ್ಲೇ ಅಳಿಯ ಮಹಾಶಯನ ಜೆಟ್ ಕಾರು ಬಂದೇ ಬಿಟ್ಟಿತು. ಹುಬ್ಬು ಕಣ್ಣು ತಿದ್ದಿಕೊಂಡು ಘಂ ಪರಿಮಳ ಸೂಸುವ ಪೌಡರ ಪರಿಮಳ ಪಸರಿಸಿ ಸಿನೇಮಾ ಹೀರೋನ ಹಾಗೆ ಕುಡಿ ಮೀಸೆ ಕುಣಿಸಿ ನಕ್ಕು ಅಳಿಯ ಕಾರಿನಿಂದ ಹೊರಬಂದು ನಿಂತ. ಅನಂತಯ್ಯನವರ ಕುಟುಂಬದ ಮಂದಿಯೆಲ್ಲ ತುದಿಗಾಲಲ್ಲಿ ನಿಂತು ಸ್ವಾಗತ ನೀಡಿ ಬಾಗಿಲಿನಿಂದ ಮನೆಯ ಒಳಗೆ ಕರೆದುಕೊಂಡು ಬಂದರು. ಭೂಪ ಅಳಿಯನಿಗೆ ಮೊದಲ ಚಿಕಿತ್ಸೆಯೆಂದರೆ ಕೊಳವೆ ಪ್ಯಾಂಟು ಕಳಚಿ ಹತ್ತು



ಮೊಳದ ದೊಡ್ಡ ಪಂಚೆಯನ್ನು ನಾಲ್ಕೈದು ಜನ ವಿಶ್ವ ಪ್ರಯತ್ನಮಾಡಿ ಉಡಿಸಿದರು. ಅದು ಜಾರಿ ಕೆಳಗೆ ಬಿದ್ದು ಹೋಗಬಾರದೆಂದೂ ಬೆಳ್ಳಿ ದಾರವನ್ನು ಟೊಂಕಕ್ಕೆ ಬಿಗಿದರು.

ಮನಸೋತ

ಬೊಂಬೆಗೆ ಅಲಂಕಾರ ಮಾಡಿ ನವರಾತ್ರಿಯಲ್ಲಿ ಪಟ್ಟಕ್ಕೆ ಕೂರಿಸುವಂತೆ ಅಳಿಯ–ಮಂಜುಳೆ ಇಬ್ಬರನ್ನು ಅಲಂಕರಿಸಿ ಹಸೆಯ ಮೇಲೆ ಕೂರಿಸಿದರು. "ಅರರೆ! ಇದೇನು ನನ್ನನ್ನು ವಿದೂಷಕನನ್ನಾಗಿ ಮಾಡುವರೋ ಅಥವಾ ಚೌಲದ ಎತ್ತನ್ನು ಮಾಡುತ್ತಿರುವರೋ ಎಂದುಕೊಂಡ ಅಳಿಯ. ಏನು ಬೇಕಾದರಾಗಲಿ, ಇವತ್ತು ಇವರು ಹೇಳಿದ ಹಾಗೆ ಕೇಳಿ ಮೇಡ್ ಇನ್ ಇಂಡಿಯಾ ಆದರಾಯಿತು ಎಂದು

ಸಮೃದ್ಧ ಬದುಕಿಗೆ ನೆರವಾಗುವ ದೀಪ — ಉಳಿತಾಯ.
ಕತ್ತಲು ದಿನಗಳಲ್ಲಿ ಬೆಳಕು ತೋರುವ ಹಣತೆ — ಕೂಡಿಟ್ಟ ಸಂಪತ್ತು.
ನಾಳಿನ ಅನಿಶ್ಚಿತತೆಯನ್ನು ನೀಗಿಸುವ ಜ್ಯೋತಿ — ಇಂದು ಉಳಿಸಿದ ಹಣ.

ಕ್ರಮವಾಗಿ ಕೂಡಿಟ್ಟ ಸಂಪತ್ತು ಹಣತೆಯಲ್ಲಿ ಉರಿಸಿದ ದೀಪದಂತೆ
ಕತ್ತಲು ನಮ್ಮ ಮಾರ್ಗದಿಂದ ದೂರ ಸರಿಯುವುದು,
ಉಳಿತಾಯದ ದೀಪದ ಬೆಳಕಿನಲ್ಲಿ
ಬದುಕಿನ ದೀಪಾವಳಿಯನ್ನು ಸದಾಕಾಲ ಆಚರಿಸಬಹುದು.



* ಉಳಿತಾಯದ ದೀಪ *

ಸಿಂಡಿಕೇಟ್ ಬ್ಯಾಂಕ್

ಸೇವೆಯೇ ನಮ್ಮ ಧ್ಯೇಯ

ಪ್ರಧಾನ ಕಚೇರಿ : ಮಣಿಪಾಲ
(ಕರ್ನಾಟಕ ರಾಜ್ಯ)


ಕೆ. ಕೆ. ಪೈ
ಮೇನೆಜಿಂಗ್ ಡೈರೆಕ್ಟರ್

ಸ್ಥಾಪನೆ : 1935

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ, ಹಿತೈಷಿಗಳಿಗೂ ಸುಖಪ್ರದವಾಗಲಿ !



Soehnle



- ಪುಟ್ಟ್ರಕ್ ತೂಕದ ಕಾಟಾ ಕಲ್ಲು, ಮಾಪುಗಳು ಮತ್ತು
- ಹಾರ್ಡವೇರ ಸಾಮಾನುಗಳ.
- ಡಾಯಮಂಡ ಆಟೋರಿಕ್ಷಾ ಮೀಟರಗಳ ಮತ್ತು ಅಂಬಾಸಿಡರ್, ಫಿಯಾಟ ಕಾರುಗಳ ಮೀಟರಗಳ ಹಂಚಿಕೆಗಾರರು ಹಾಗೂ ರಿಪೇರಿ ಮಾಡುವವರು
- " ಸೋನ್ಲೆ ಕಂಪನಿ ಜರ್ಮನ್ " ಇವರ ಟೇಬಲ್ ಕಾಟಾಗಳ ಮತ್ತು " ಎಲ್.ಬಿ.ಡಿ.ಕಂಪನಿಯ " ಟೇಬಲ್ ಕಾಟಾಗಳ ಅಧಿಕೃತ ಮಾರಾಟಗಾರರು.

ಡಾಯಮಂಡ ಕ್ಲಾಕ ಮ್ಯಾ. ಕಂ. ಪ್ರಾ. ಲಿ., ಪುಣೆ

ಇವರ ಡಾಯಮಂಡ ಆಟೋರಿಕ್ಷಾ ಮೀಟರಗಳ ಅಧಿಕೃತ ಹಂಚಿಕೆಗಾರರು—

ಮೆ॥ ಎಸ್. ಎಮ್. ಖೋದಾನಪೂರ

ಹತ್ತಿಕಾಳ ಸಾಲ, ಹುಬ್ಬಳ್ಳಿ.

ಡಾಯಮಂಡ ಆಟೋರಿಕ್ಷಾ ಮೀಟರಗಳು ಪ್ರೊಪ್ರಾಯಿಟರ - ಆರ್. ಎಸ್. ಖೋದಾನಪೂರ

ಟೆಲಿಫೋನ 2026

ಸಿ. ಸೂ. :— ನಕಲಿ ಮತ್ತು ಕೆಳದರ್ಜೆಯ ಮೀಟರಗಳಿಂದ ಮೋಸ ಹೋಗಬೇಡಿರಿ

ಯೋಚಿಸಿದ. ಕೂತಲ್ಲಿಯೆ ಕಾಫಿ ಉಪ್ಪಿಟ್ಟು ಉಪ್ಪಿನಕಾಯಿ ಉಪಚಾರ ಒಂದೇ ಎರಡೇ ಮೂರು ಬಗೆಯಲ್ಲಿ ನೂರು ಮುಖದಲ್ಲಿ ಷೋಡಶೋಪಚಾರ ಗಳಾದವು. ಕಾಲ ಬಹಳ ನಿಧಾನವಾಗಿ ಉರುಳು ತ್ತಿತ್ತು. ಎಲ್ಲರ ಕೈಗೆ ಗಡಿಯಾರವಿದ್ದರೂ ಯಾರಿಗೂ ಅದರ ಕ್ರಿಯೆಯ ಬಗೆಗೆ ಲಕ್ಷ್ಯವೇ ಇದ್ದಂತಿರಲಿಲ್ಲ.

"ಮಂಜುಳಾ, ಗಂಡನ ತಲೆಯ ಮೇಲೆ ಎಣ್ಣೆ ಹನಿಸು" ಎಂದು ಗಂಗಮ್ಮ ಅಜ್ಞಾಪಿಸಿದಾಗ ಲಜ್ಜೆ ಯಿಂದ ಕೆಂಪೇರಿದ ಮುಖದಲ್ಲಿ ನಗು ಬಂಧಿಯಾ ಗಿತ್ತು. ನಡುಗುವ ಕೈಗಳಿಂದಾಗಿ ಅವನ ಮುಖದ ಮೇಲೆಲ್ಲ ಎಣ್ಣೆಯ ಹನಿಗಳು ಬಳಿದವು. ಕಣ್ಣಲ್ಲಿ ಎಣ್ಣೆ ಹೋದಂತಾಗಿ ಅಳಿಯ ತೊಂದರೆಪಟ್ಟ. ಆದರೂ ಬೇಸರಗೊಳ್ಳದೆ ಮಡದಿಯ ರಂಗೇರಿದ ಮುಖವನ್ನು ನೋಡುತ್ತ ಮೈ ಮರೆಯುವುದರಲ್ಲಿದ್ದ. ಅಷ್ಟಕ್ಕೆ ಅನಂತಯ್ಯನವರು "ಏ, ಅಲ್ಲೇನು ನೋಡ್ತಿ ದಿ? ಪುರಾಣ ಕಾಲದವರ ಹಾಗೆ ಹೆಂಡತಿಯನ್ನು ಹೊತ್ತುಕೊಂಡೇ ಹೋಗಬಹುದು. ಒಬ್ಬ ದೇವರು ದೇಹದ ಅರ್ಧವನ್ನೇ ಹೆಂಡತಿಗೆ ಕೊಟ್ಟ, ಮತ್ತೊಬ್ಬ ಹೆಂಡತಿಯನ್ನು ನಾಲಿಗೆಯ ಮೇಲೆ ಕೂರಿಸಿಕೊಂಡ, ಇನ್ನೊಬ್ಬ ಕಮಲದ ಹೂವಿನ ಮೇಲೆ ಕುಳಿತಿದ್ದವ ಳನ್ನು ಎತ್ತಿ, ತನ್ನ ವಕ್ಷಸ್ಥಳದಲ್ಲಿ ಇಟ್ಟುಕೊಂಡು ಬಿಟ್ಟ! ನೀನೂ ಇನ್ನೇನಾದರೂ ಮಾಡಬಹುದಂತೆ. ಈಗ ಅವಳಿಗೆ ಹೂ ಮುಡಿಸಿ ಕುಂಕುಮ ಇಡು" ಎಂದರು. ಅಲ್ಲಿದ್ದವರೆಲ್ಲ ಘೊಳ್ಳೆಂದು ನಕ್ಕರು. ಆ ನಗುವಿಗೆ ಹಚ್ಚಿಟ್ಟ ಹಣತೆಯ ದೀಪಗಳೆಲ್ಲ ಅಲ್ಲಾಡಿ ದವು. ಅಥವಾ ಅವು ನಕ್ಕವೇನೋ! ಅಳಿಯ ಮಹಾ ಶಯ ಎಚ್ಚರಾದವನಂತೆ ಅಲುಗಾಡಿ ಎದುರಿಗಿದ್ದ ಕುಂಕುಮವನ್ನು ಗಾಬರಿಯಿಂದ ಪತ್ನಿಯ ಮೂಗು ಹಣೆಗೆಲ್ಲ ಬಳಿದುಬಿಟ್ಟ!

ಬಿ. ಎಸ್. ಸಿ.



ಬಿ ಎಸ್. ಸಿ.
ಎಂದರೇನೆಂದೊಬ್ಬರ ಕೇಳೆ
ಹೀಗೆಂದು ಹೇಳಿದರು
ನಸುನಗುನಗುತ
'ಬಾಟಾ ಷೂ ಕಂಪೆನಿ'
ಎಂಬುದಕೆ ಸಂಕ್ಷಿಪ್ತ
ಬಿ ಎಸ್ ಸಿ. ಎಂದೊದರಿ
ಹುಬ್ಬು ಹಾರಿಸುತ!

– ಗುಂಡ್ಮಿ, ಚಂದ್ರಶೇಖರ ಐತಾಳ

ಹೆಸರಿನ ಮೋಜು

ಅಳಿಯನಿಗೆ ಯಾರೋ ತಮಾಷೆಗೆ "ನಿನ್ನ ಹೆಂ ಡತಿ ಪಾಯಸ ಬಡಿಸಲು ಬರುತ್ತಾಳೆ. ಬಂದಾಗ ಭದ್ರವಾಗಿ ಕೈ ಹಿಡಿದುಕೋ. ಗಂಡನ ಹೆಸರು ಹೇಳು ಎಂದು ಹೇಳಿಸಿ ಆ ಮೇಲೆ ಕೈ ಬಿಡು" ಎಂದು ಹೇಳಿ ದ್ದರು. ಚೆಂಡು ಬ್ಯಾಟು ಹಿಡಿದ ಅವನ ಕೈ ಒರಟಾಗಿ ಬಲವಾಗಿಯೇ ಇತ್ತು. ತನ್ನ ಒಂದು ಸಾಹಸ ತೋರಿಸಲೇಬೇಕೆಂದು ಉತ್ಸಾಹಿತನಾದ. ತಲೆ ಬಗ್ಗಿ ಕೊಂಡೇ ಕುಳಿತಿದ್ದ. ಯಾವಾಗ ಬಾಳೆಗೆ ಪಾಯಸ ಬಿತ್ತೋ ತಕ್ಷಣ ಆ ಸೌಟು ಹಿಡಿದಿದ್ದ ಕೈಯನ್ನು ಬಲವಾಗಿ ಹಿಡಿದು, "ಹೆಸರು ಹೇಳು, ಯಜಮಾನನ ಹೆಸರು ಹೇಳು" ಎಂದ ಮುಖ ಮೇಲು ಮಾಡದೇ.

"ಸಕ್ಕರೆ, ಸಿಮೆಂಟು, ಕಾಗದ ಕಬ್ಬಿಣ ಕಾರ್ಖಾನೆ ಒಡೆಯರಾಗಿ, ದಿನವೊಂದು ಪಾರ್ಟಿಯ ಮುಖಂಡ ರಾಗಿ ಬೆಳಿ ಬಟ್ಟಲಲ್ಲಿ ಬೋಂಡಾ ಬಾದಾಮಿ ಹಲ್ವ ತಿಂದು ಮೆರೆಯುವ ಅನಂತಯ್ಯನವರು" ಎಂದು ಒಗಟು ಹೇಳಿದಾಗ ಮುಖವೆತ್ತಿ ನೋಡುತ್ತಾನೆ. ಅತ್ತೆ ಗಂಗಮ್ಮನವರ ಕೈ ಹಿಡಿದು ಪಂಕ್ತಿಯಲ್ಲಿ ಕುಳಿತ ಎಲ್ಲರನ್ನು ನಗೆಗಡಲಿನಲ್ಲಿ ಮುಳುಗಿಸಿದ ಭೂಪ. ಸ್ವಂತ ಮುಖ ಪೆಚ್ಚಾಗಿ ಮಾವನವರ ಮುಖ ನೋಡಿದ. ಮಾವನವರು ಹೆಂಡತಿಯಿಂದ ತಮ್ಮ ವೃತ್ತಿ ಸಂಬಂಧವಾಗಿ ಬಂದ ಸಂದೇಶ ಒಗಟು ಹೆಸರಿನಿಂದ ಹೆಮ್ಮೆಗೊಂಡಿದ್ದರು. ತನ್ನ ಪೆಚ್ಚುತನದ ಅರಿವಾಗಿ ದ್ದರೂ ತನ್ನ ಸೋಲನ್ನು ಮರೆತು ಎಲ್ಲರೊಡನೆ ಒಂದಾಗಿ ನಗುವುದೇ ಆಯಿತು. ತನ್ನ ತಪ್ಪನ್ನು ತಿಳಿದೂ ನಗುವ ವಯಸ್ಸು ಅದು. ಆ ನಗುವಿನಲ್ಲಿ ಸೋಲು ಹಿಂದೋಡಿತ್ತು.

"ಸೋತು ಬಿಟ್ಟೆಯಲ್ಲೋ ಮಹರಾಯಾ" ಕೈ ಹಿಡಿ ಯಲು ಸಲಹೆ ಮಾಡಿದ್ದಾತ ಪ್ರಶ್ನಿಸಿದ.

ಅಷ್ಟಕ್ಕೆ ಹೊಸ ಸೀರೆ ಉಟ್ಟು ಲಕಲಕನೆ ಹೊಳೆ ಯುತ್ತ ಪಾಯಸ ಬಡಿಸುತ್ತ ಬಂದ ಮಂಜುಳೆಯ ಕೈಯನ್ನು ಹಿಡಿದೇ ಬಿಟ್ಟ! "ನನ್ನ ಹೆಸರು ಹೇಳಿ ಬಿಡು" ಎಂದ. ಅವಳು ಮೂಕಿಯಂತೆ ನಿಂತು ಬಿಟ್ಟಳು. ಗಂಡನ ಕಪಿಮುಷ್ಟಿಯಲ್ಲಿ ಅವಳ ಕೈ ಕೆಂಪಾಗಿ ಬೆವರಿ ನೀರು ಒಸರುತ್ತಿತ್ತು. ಕೈ ಕೊಸರಿಕೊಂಡಳು. ನಾಲಿಗೆ ಮಾತ್ರ ಮುಷ್ಕರ ಹೂಡಿತ್ತು. ಮತ್ತೆ "ನನ್ನ ಹೆಸರು ಹೇಳಿ ಬಿಡು" ಎಂದ ಅವನು ನಗು ತ್ತಲೇ ಹೇಳಿದ್ದರೂ ಆ ನಗುವಿನ ಹಿಂದಿದ್ದ ಬೇಸರದ ಕಾವು ಅವಳಿಗೆ ತಗುಲಿತು. ಆ ಶಾಖಕ್ಕೆ ಬಾಯಿಗೆ ಬಿಗಿದಿದ್ದ ಮುದ್ರೆ ಕರಗಿದಂತಾಗಿ ತುಟಿ ಅಲುಗಾ ಡಿತು. "ಕಣ್ಣು ಕುಕ್ಕುವ ಮೋಡಿ, ಹುಣ್ಣಿಮೆ ಚಂದಿರ ನೋಡಿ. ದೀಪಾವಳಿ ಹಾಡು ಹಾಡಿ. ನನ್ನ ಗಂಡ ವಿಶ್ವಾಮಿತ್ರ ಮಹಾರಾಜ" ಎಂದು ಜೋರಾಗಿಯೇ ಹೇಳಿ ಓಡಿದಳು. ಊಟ ಮಾಡುತ್ತಿದ್ದವರ ನಗು ಅಲೆ ಅಲೆಯಾಗಿ ನಲಿದಾಡಿತು.

ಪಟ್ಗಚ್ಚೆ ಬಿತ್ತು !

ಮಧ್ಯಾಹ್ನದ ಮೇಲೆ ಕುಟುಂಬದ ಹಿರಿಯರಿಗೆಲ್ಲ ವೀಳ್ಯ ಕೊಟ್ಟು ನಮಸ್ಕರಿಸುವ ಕ್ರಮಕ್ಕೆ ಅಳಿಯ ಒಳಗಾದ. ಅತ್ತೆ ಮಾವರಿಬ್ಬರಿಗೇ ನಮಸ್ಕರಿಸಿ ಮುಗಿ ಸಿದಾಗ ಸುಸ್ತಾದ. ಆದರೂ ಹೆಂಡತಿಯ ಚಟು ವಟಿಕೆಯ ಎದುರು ತಣ್ಣಗಾಗಲು ಆಗದೇ ವೃದ್ಧೆ ಯೊಬ್ಬಳ ಎದುರಿಗೆ ಬಗ್ಗಿದ. ಕಾಲು ಮುಟ್ಟಿ ನೆಟ್ಟ ಗಾಗುತ್ತಿರುವಂತೆ ಎಷ್ಟೋ ಭದ್ರವಾಗಿ ಪಂಚೆ ಸುತ್ತಿ ಕೊಂಡಿದ್ದರೂ ಬೆಳ್ಳಿಯ ದಾರವನ್ನು ಮೀರಿ ಹಿಂಬ ದಿಯ ಪಟ್ಗಚ್ಚೆ ಜರಿದು ಹೋಗಬೇಕೇ...? "ತೋ ತೋಥೋ ಲಾಭ" ಎಂದರು ಯಾರೋ. ಅಷ್ಟಕ್ಕೆ ಅನಂತಯ್ಯನವರ ಕಿರಿಯ ಅಪರಾಧ ಕಟ್ಟಿ ಬಂದು ಪಟ್ಗಚ್ಚೆ ಹಿಡಿದು ಸಿಕ್ಕಿಸಿದ. ಯಾವ ದುಶ್ಶಾಸನನೂ ಪುಣ್ಯಕ್ಕೆ ಅಲ್ಲಿರಲಿಲ್ಲ. ಆ ವೃದ್ಧೆಗೆ ಅಳಿಯನ ಕೆನ್ನೆಯ ಮೇಲೆ ಜೇನುನೊಣವೊಂದು ಕುಳಿತುಕೊಂಡ ಹಾಗೆ ಕಂಡು "ಇದೇನು, ಮಗು?" ಕೇಳಿದರು. "ಓಹೋ, ಅದು ಸೈಡ್ ಕಟ್" ಎಂದೂ ತನ್ನ ಫ್ಯಾಷ ನ್ನಿಗೆ ತಾನೇ ನಾಚಿಕೆಪಟ್ಟ.

ಆಗ-ಈಗ

ಹಾಗೆ ಅಜ್ಜರೊಬ್ಬರಿಗೆ ವಂದಿಸಿ ಕುಶಲವಾಗಿ, "ನಿಮ್ಮ ದೀಪಾವಳಿ ಹೊಸ ಹಬ್ಬದ ನೆನಪುಂಟೇ ಅಜ್ಜಾ" ಎಂದು ಅಳಿಯ ಕುತೂಹಲದಿಂದ ಪ್ರಶ್ನಿಸಿದ.

"ಓ! ಅದಕ್ಕೇನು, ನಮ್ಮ ಮದುವೆ, ದೀಪಾವಳಿ ಹೊಸ ಹಬ್ಬದ ಸಡಗರ ಎಂದೆಂದೂ ಮರೆಯ ಲಾಗದ ಸಂಗತಿಗಳು. ಈಗ ಅದೆಲ್ಲಾ ಹೇಳಲು ಹೊತ್ತಿಲ್ಲ, ನಾಳೆ ನಿಧಾನವಾಗಿ ಹೇಳುತ್ತೇನೆ" ಎಂದ.

"ನಾಳೆ ಈ ವೇಳೆಗೆ ನಾನು ಹೊರಟಿರಬೇಕು. ಎರಡು ದಿನದ ರಜೆಯ ಮೇಲೆ ಬಂದಿದ್ದೇನೆ" ಅಳಿಯ ಎಂದಾಗ.

"ಹೂಂ. ಒಂದು ದಿನದಲ್ಲಿ ಹಬ್ಬ ಮುಗಿಯೋದಿಲ್ಲ. ನಮ್ಮ ಕಾಲದಲ್ಲಿ ಐದು ದಿನ ಹೊಸ ಹಬ್ಬದ ಸಂಭ್ರಮ ನಡೆಯುತ್ತಿತ್ತು. ತುಂಬ ಸಮೃದ್ಧಿಯಾಗಿದ್ದ ಕಾಲ ಅದು. ಮೆರವಣಿಗೆಯಲ್ಲಿ ಅಳಿಯನನ್ನು ಸ್ವಾಗತಿಸಿ ಕೊಂಡು ಬರುತ್ತಿದ್ದರು. ಆಗೆಲ್ಲ ನಮ್ಮ ಉತ್ಸಾಹ ಮುಗಿಲು ಮುಟ್ಟುವಷ್ಟು. ಓಲಗ ಊದಿ ಊದಿ ಓಲಗದವರಿಗೆ ಹೊಟ್ಟೆ ನೋವು ಬರದಿದ್ದುದೇ ಆಶ್ಚ ರ್ಯ! ಅವರಿಗಂತೂ ಬೇಸರವಿಲ್ಲ. ಕೇಳುವವರಿಗೂ ಅಷ್ಟೆ. ಊಟ ತಿಂಡಿಗಳ ಪರಿವೆಯಿಲ್ಲದೆ ಹಾಡು ಹಸೆ ಎಂದುಕೊಂಡು ಗಂಟೆಗಟ್ಟಲೆ ಕೂತು ಬಿಡ್ತಿ ದ್ದರು ಜನ. ಅಡಿಗೆಯವರಿಗೆ ದಿನವಿಡೀ ರಾತ್ರಿ ಯಿಡೀ ಅಡಿಗೆ ಮಾಡುತ್ತಿರುವುದೇ ಕೆಲಸ. ಈಗೇನು ಒಂದು ಹಾಡಿಲ್ಲ...ಹಸೆ ಇಲ್ಲ...ಇವತ್ತು ಹಬ್ಬ ನಾಳೆ ಹೋಗೋದು!" ಅಜ್ಜ ಕ್ಷೀಣವಾಗಿ ನಕ್ಕು ನುಡಿದ.

"ಒಂದು ದಿನಕ್ಕೆ ಇಷ್ಟೊಂದು ಸುಸ್ತಾದೆ. ಇನ್ನು ಐದು ದಿನವಾಗಿದ್ದರೆ ನನ್ನ ಉಸಿರು ನಿಂತು ಹೋಗು ತ್ತಿತ್ತೇನೋ. ನೀವು ಹಳಬರು. ಬಲು ಗಟ್ಟಿಗರಪ್ಪ" ಎಂದು ಅಳಿಯ ಎಂದುಕೊಳ್ಳುತ್ತಿದ್ದಂತೆ ಯಾರೋ ಆರತಿಗೆ ಆಯಿತಂತೆ, ಬರಬೇಕಂತೆ, ಎಂದು ಕೂಗು ತ್ತಿದ್ದರು, ಅಳಿಯನನ್ನು. ಅರೆ! ಇನ್ಯಾವ ಮಂಗ ಳಾರತಿ ಬೇರೆ ಆಗುವದಿದೆಯೋ ಎಂದು ಕರೆದತ್ತ ನಡೆದ ನಮ್ಮ ಅನಂತಯ್ಯನವರ ಮೇಡ್ ಇನ್ ಯು ಎಸ್ ಎ 1974ರ ಅಳಿಯ ಮಹಾಶಯ. ●

ಪ್ರಕೃತಿ ಗಾನ

-೧-

ಎರಡು ನೋಡಿದ್ದಿದೇ ಕಣ್ಣು ಬೀಳು ಏಳಾದ ಏಳು
ಬೀಳಾವ ಮೇರೆ ಮೀರುವಲ್ಲೇ ಮರಣವುಂಟೆಂಬ
ಕೊಡತುಂಬಲು ಸುಮ್ಮನಿರುವದೆಂಬ ಜಗದ ನುಡಿ
ಅರ್ಥಕ್ಕನರ್ಥಿಸೆ ತುಳಿದ ಹೆಜ್ಜೆ ಹಾವು ಕೃತಿ ಕೊಡಲಿ ಕಾವು
ಬೇಸರಕೆ ಬಲಿತೂಗುವ ವಾತಾವರಣವು
ಅನೂಹ್ಯ ಅಮೂರ್ತ ಶಕ್ತಿ ಜಮಾಖರ್ಚಿಟ್ಟು
ಹಾಲು ನೀರು ಮಾಡಿ ತೂಗಿ ತೂಗಿಸಿ ಕಲ್ಲು ನಿಲ್ಲಲ್ಲಿಗೆ
ನಿಲ್ಲಿಸುವ ಪ್ರಕೃತಿ, ಮೀಸೆ ಬಂದವ ದೇಶ ಮೊಲೆ ಬಂದವಳು ನೆಲ
ಕಾಣದ ಕೋಟೆ ಕೊತ್ತಳ ಕಟ್ಟಿ ಕತ್ತೆತ್ತಿ ಮೆರೆದವರ ದುರ್ಗತಿ
ಊದಿ ಊದಿ ರಬ್ಬರು ಬ್ಬಿ ಕುಂತಂತೆಲ್ಲ ಟಬ್ಬಂತ

ಒಡೆಯುವುದು ಪುಗ್ಗ
ಸಿಕ್ಕವನಾಗುವನು ನುಗ್ಗ
ಸಾ ಅಂದವನೊಮ್ಮೆ ಅಗ್ಗ

ಕೆತ್ತಿ ತಿನ್ನುವ ಹೊತ್ತು ನಿಧಿ ಕೈಗೆ ಹತ್ತಿದರೆ ಮುಗಿಲತ್ತ ದಾರಿ
ಯಾರು ಹಿಡಿದರೂ ನಿಲದೆ ಹರಕೊಂಡು ಓಡುವ ಕಾರುಣ್ಯ ಹೋರಿ
ಅರ್ಥದರ್ಥವ ಚೆನ್ನ ತಿಳಿಯದಕೆ ಬನ್ನ ಕಟ್ಟಿದ್ದು
ಬಿತ್ತಿದು ಬೆಳೆ ಮಾಡಿದ್ದುಣ್ಣು ಹುಟ್ಟಿದ ದಿನದಲ್ಲೇ
ಊರ್ಧ್ವಣ್ಣು ಹಣ್ಣಣ್ಣು ಮಾಡುವ ಜೋಕುಮಾರ ಚಪಲ
ಪುಣ್ಯ ತೀರಿದ ಹೊತ್ತು ನೂರೊಂದು ಅಪಘಾತ
ಪೂರ್ವ ಮುಯ್ಯಿಗೆ ಸಿದ್ಧ ತನ್ನ ರಕ್ತ
ಗೂಳಿಬಿದ್ದಾಗ ಆಳಿಗೊಂದು ಕಲ್ಲು ಸತ್ತ ಹಾವಿಗುಂಟು ಸಹಸ್ರ ಇರುವೆ
ವಿಧಿಗೆ ದುರ್ವೆಗ ಹುಟ್ಟಿ ದಿವಾಳಿ ತೆಗೆದಾಗ ತಿಪ್ಪೆ ಉಪ್ಪರಿಗೆ
ಉಪ್ಪರಿಗೆ ತಿಪ್ಪೆಯಾದ ಹೊಡು ತೆಗ್ಗುಗಳ

ಸಿಕ್ಕುಗೆ ನಡೆದುದರ ಸಾಕ್ಷಿ ಚಿತ್ರ

ಅಯ್ಯ ಮಾಡಿದ್ದು ಕೈಯ್ಯ ಮೇಲೆ ಕಾಣುವ ಫಲ ಹುಳು ದುರ್ನಾತ
ಈಗಲೋ ಆಗಲೋ ಯಮಪಟ್ಟಣದ ಹಾದಿ
ಚಿತ್ರಗುಪ್ತ ಸವಾರಿ
ಗಂಡ ಸತ್ತ ಬಳಿಕ ಅಮ್ಮ ಜಾಣೆ
ಇದ್ದೆಮ್ಮೆಗೆ ಸೇರುತುಪ್ಪ ಕಾಣೆ

-೨-

ಮುನ್ನುಜದ ರಾವಣವಿಧಿಯಾದರೂ ಇದಕೆ ರಾಕ್ಷಸ ಬಯಕೆ
ಪ್ರಬುದ್ಧತೆ ಗೋಲಿ ನರಕ ತಿಂದಿರುವುದಕೆ ಪ್ರಸೂತಿ ವೈರಾಗ್ಯ
ಪುಸ್ತಕದ ಮಾತುಗಳು ಎಷ್ಟಿದ್ದರೇನು ಫಲ
ಸ್ವಾಂತಕ್ಕೆ ಬಂದಾಗ ಸ್ವಲ್ಪ ಲಾಭ? ಆಚಾರಿ ಮನೆಯಲ್ಲಿ
ಅರ್ಮಂದಿ ಬಿಡಿಕೆಯುರು ಎಷ್ಟು ಅಸಂಬದ್ಧೀ ಮನುಷ್ಯ ಜಾತಿ
ತನ್ನ ರಕ್ತವ ನೆಕ್ಕೊ ಸೊಣಗ ಬುದ್ಧಿ ಬಿಟ್ಟಿ ಇದೋ ದಿ
ತಿಳಿದು ತಳದಲಿ ರಾಡಿ ಹಗಲೊತ್ತು ಕಥೆ ಶಾಸ್ತ್ರ [illegible]

ಭಾರತವು ಕತ್ತಲಾದಂತೆಲ್ಲ ರಾಕ್ಷಸೆ ಮೋಡಿ
ಪ್ರತಿಯೊಂದಕೂ ಲೆಕ್ಕ ತೂಕ ತಪ್ಪ ಸಿದ್ಧ ಭೈರವ ನೃತ್ಯ
ಇದಕೆ ಹಾಡಿರಬೇಕು: ದಾಸ ಶ್ರೇಷ್ಠ

ನಗೆಯು ಬರುತಿದೆ ನನಗೆ ನಗೆಯು ಬರುತಿದೆ ಈ
ಜಗದ ಜನರು ಮಾಡ್ವ ಹಗರಣವ ಕಂಡು
ಕೇಳಿ ಕೇಳಿಯೂ ಗೋಳುಗರೆವ ದುರಂತ
ತನರಕ್ಷೆ ಪಹರೆಗೆ ತಾನೆ ಕೊಲುವಂಥ
ಜನರಿದ್ದರೇನು ಫಲ ಬುವಿಗೆ ಇಂಥ
ಈಗಿಲ್ಲ ಕುರುಪೆ ಕೋಡು ಮೂಡುವ ಮನುಷ್ಯ ವಿಶ್ವೆ
ದಿತಿಹಾಸಪುಟದಲ್ಲೆಲ್ಲೋ ಅವ ಮಾಯು ನ್ಯಾಯು ಕಚೇರಿ ಸ್ಥಳಿ
ಊರ್ಜನ ಕುಳಿತೀಗ ಮೂತ್ರಮಾಡುವ ಜಾಗ
ರೋಷ ರೊಚ್ಚು ಕ್ಷರ ಕೊನೆಗೊಳಿಯುವದು ಬಾಲವಿಲ್ಲದ ಯುಲ
ಕಳವು ಕೊಲೆ ಕೊಳ್ಳೆ ಕುಡಿತ ಕುಣಿತದ ಸಂಗೀತ ಕಚೇರಿ
ಅಮರಾವತಿಯಲಿಂದು ಕತ್ತೆಗಳ ಮೇಳ
ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ ಎಲ್ಲಿ ಈಗ?
ಮಗ ಮಣ್ಣಾಗಿ ಮಗಳೂರಬಸವಿಯಾದ ಭೀಭತ್ಸ ಭಯಾನಕ
ಭೂವ್ಯೋಮ ನಡುಗಿಸುವ ಋತುಮಾನ ಚಕ್ರಕ್ಕೆ

ಬಕ್ಕಬಾಯಿ

ಅಸಂಖ್ಯ ಗುಡ್ಡಬೆಟ್ಟ ಹೊಳೆಹಳ್ಳ ಸಾಗರ ಮರಗಿಡಬಳ್ಳಿ
ತಾರಾಂಬರದ ಈ ಪ್ರಕೃತಿ ಎದುರಿಗೆ ಮನುಷ್ಯ ಯಾವ

ಲೆಕ್ಕ

ಮೂರ್ಮೊಳಾ ತೋಟಕ್ಕೆ ಆರ್ಮೊಳಾ ಕಾಯ್ಬಯಸಲು

ಕತ್ತೆದುಃಖ

ಅವರಿವರಿಂದ ಉಳಿಯುವ ಹೊತ್ತು
ನಿಸರ್ಗ ಅಳಿಸುವದು
ಸದ್ಯಕೆ ಗೆದ್ದರೂ ಕೊನೆಗಿದ್ದ ಇದೇ
ಬಿದ್ದಲಿ ಸಾಯುವದು
ಪುಣ್ಯದ ಫಲ ತಡ
ಪಾಪದ ಫಲ ಗಡ

ಪ್ರಕೃತಿ ಪುಸ್ತಕದಲ್ಲಿ ಪ್ರತಿ ಲೆಕ್ಕ ಪತ್ರಗಳು
ಪಾರಾಗಬಹುದೆ ನಾವಿಲ್ಲಿ
ಈ ಪದವಿ ಪೀಠಗಳು ಧನಕನಕ ಲೋಹಗಳು
ಕಿಮ್ಮತ್ತಿಲ್ಲದವೆಂದು ತಿಳಿ

-೩-

ಎಲ್ಲ ಕಾಲಕ್ಕೊಂದೇ, ರೂಪಗಳು ಬೇರೆ ಬೇರೆ ಈಗಿಲ್ಲ ದುರ್ಗಿಮುರ್ಗಿ
ಯರ ಹಾವಳಿ ಪಿಲಾಕಿ ಸಪಾಟೆ ಡೋಗಿ ಬರಬಿದ್ದು ಹೈತಿಗೆ ಎದ್ದು
ಮೈತುಂಬ ಗಡ್ಡೆ ಬಂದು ಸಾಯುವ, ಹುಲಿ ಹಾವು ಹಿಂಸ್ರ
ಮೃಗಗಳಿಗೆ ಬಲಿಯಾಗುವ ಕಳ್ಳಕಾಕರ ಕೈಗೆ ಕೊಳ್ಳೆ ಹೋಗುವ

ಅತಿವೃಷ್ಟಿ ಅನಾವೃಷ್ಟಿಗಳ ದಾಳಿಗೆ ಹುಳವಾಗುವ
ಭೂಕಂಪ ಜ್ವಾಲಾಮುಖಿ ದಾವಾನಲ ಲಾವಾರಸಗಳೆದ್ದು
ಪ್ರವಾಹ ಬಂದು ಮರ್ತ್ಯ ಮುಳುಗಿ ಮತ್ತೆ ಮನುಷ್ಯನಿಂದಲೇ
ಆರಂಭಾಗುವ
ಯಂತ್ರ ತಂತ್ರಗಳಡಿಯಲ್ಲಿ ಬಿದ್ದು ಮುರಿದು ಡಿಕ್ಕಿ ಹೊಡೆದು
ಮದ್ಯ ಕುಡಿತಕ್ಕೆ ಮಣ್ಣು ಸೇರುವ ಹಕ್ಕು:
ಬೈಬಲ್ಲದಲೊಂದು ಟೀಕು
ಒಂಟೆ ಪಾರಾಗುವುದು ಸೂಜಿಕಿವಿಯಿಂದ
ಶ್ರೀಮಂತಗಸದಳವು ಸ್ವರ್ಗ ಬಾಗಿಲಿಂದ
ನೆನೆಸಿಕೊಂಡರೆ ತಲೆ ಕೋಟಿ ಅಣು ಸ್ಫೋಟ
ನಮ್ಮೊಳಗೆ ಹೊರಗೆ ಗೊತ್ತಾಗದ ಹಾಗೆ ವೈರಿ ಕುಳಿತಿದ್ದಾನೆ
ರೂಪ ತಾಳುತ್ತಾನೆ ನೂರೆಂಟು ರೋಗಗಳು
ಗನೋರಿಯಾ ಸಿಫಿಲಿಸ್ ಮಾರಿಜಾನ್ ಜಾಂಡಿಸ್
ಅಸ್ತಮಾ ಅಪಸ್ಮಾರ ಹಾರ್ಟಟ್ಯಾಕ ಹಾರ್ಟಫೇಲ್
ಕ್ಯಾನ್ಸರ್ ಕ್ಷಯಗಳು
ರೆಪ್ಪೆ ಬಡಿತಕ್ಕೊಂದೊಂದು ಬೇನೆಗಳು

ತಾರೆ ಬಲದಲಿ ನಾವು ಹುಟ್ಟಿ ಬಂದುದಕ್ಕೆ
ಅವುಗಳಿಗೆ ಮೋಸಿಸುವಂತಿಲ್ಲ
ಮಳೆಗಾಳಿ ಬೆಳಕಿನಲಿ ಬೆಳೆದು ಬಂದಿರುವಾಗ
ಮಾಡುವುದು ನಮ ನ್ಯಾಯವಲ್ಲ

ಬಾಹ್ಯ ಭಾಗವ ಬಲದಿ ಬದಲಿಸುವ ಸಾಧ್ಯತೆಯು
ಒಳಗಿನದು ನಕ್ಷತ್ರ ಲೋಕ
ಭೂಮಿ ಗುಣವೇ ತೂಕ ಭೂತಕಾಲದ ಲೆಕ್ಕ
ಒಮ್ಮಿಲ್ಲ ಒಮ್ಮುಂಟು ಪಕ್ಕ
ಪಾಪವಿದ್ದರೆ ಇಲ್ಲೆ ಸೋಸಿ ಹೋಗಲೇ ಬೇಕು
ಪುಣ್ಯಕ್ಕೆ ತಕ್ಕ ಪ್ರತಿಫಲವು
ಯಾವುದೇನಿದ್ದರೂ ಎಲ್ಲ ಈ ಮಣ್ಣಲ್ಲೆ
ಅನುದಿನವು ನೋಡಿ ನಡೆ ನೆಲವು

– ಚನ್ನಣ್ಣ ವಾಲೀಕಾರ

ಶ್ರೀ ಗುರುದೇವದತ್ತ ದ್ವಾದಶಕ

೧

ಓಂ ಗುರುದೇವಾ, ದೇವದತ್ತ, ಸಿರಿ
ತೋರಲು ಬಾ, ಬಾರೋ ಬಾ ಬಾ
ಹಣ್ಣು ಆಗಿ ರಸದುಂಬಿ ಒಣಗಿ ಬೀ-
–ಜದಲಿ ಹುದುಗಿದನ ನೋಡಲು ಬಾ.

೨

ದತ್ತ ಜೀವನ ವಸಂತ ಗ್ರೀಷ್ಮಗಳ
ಚಿಗುರೆಲೆ ಹೂ ಕಂಡವ ನೀನು
ಹೂಬಳ್ಳಿಯು ಮೈತುಂಬಾ ಹೂ ಹೂ
ಪದ್ಮ ಪದ್ಮರಾಗದ ಜೇನು

೩

ವರ್ಷಾ ಶರದದ ಮಹಾಪೂರ ಹೂ–
ವಾಡಿಪ ತೆನೆ ಬೆಳೆ ಭರಪೂರ
ಸುಳಿಗಾಳಿಯು ತಿಳಿದರೆಗೂ ನೆಲ ಹೌ–
ದೆನ್ನುತ ಗೋಣಾಡಿ ಪಸಾರ

೪

ಇಂತು ಬಾಲ್ಯ-ಯೌವನಗಳು ಕಳೆದುವು
ಅರೆಶತಮಾನದ ಕಾಲದಲಿ
ಹೇಮಂತವು ಶಿಶಿರವು ಮೂಡುತ್ತಿದೆ
ಉತ್ತರಾರ್ಧದೀ ಬದುಕಿನಲಿ

೫

ನಡುನಡುಗಿಪ ಚಳಿ ಒಳಗೊಳಗೆ ಕಾ–
ಳಿಗೆ ಹಾಲನು ತುಂಬುತ್ತಲಿದೆ.
ಕಾಳು ಒಣಗಿ ನೆಲಕಿಳಿದು ಹೂಳಿ ಹೊಸ
ಸಸಿಯು ಹಮ್ಮು ಚಿಮ್ಮುತ್ತಲಿದೆ.

೬

ಹೊಸ ಸಸಿ ನನೆಕೊನೆ ಹೊಸಹೊಸ ಗರಿಗಳು
ಹಳೆಯು ಕಾಳು ಯಾರಿಗೆ ಬೇಕು?
ಹಳೆಯು ಹೂಳಿನಾ ಹಾಳಿನ ಮೇಲೇ
ಹೊಸ ಸಸಿ! ಇದನರಿಯಲು ಬೇಕು

೭

ಇದು ಬದುಕಿನ ಕತೆ; ಇನ್ನು ಜೀವನದ
ಪರಿ ಪರಿ ಪರಿ ಹೇಳುವೆ ಕೇಳು.
ತನ್ನದೆಂಬುದೇನೇನೂ ಇಲ್ಲವೊ
ತನ್ನನುಳಿದು; ಅರಿವಿನ ಬಾಳು.

೮

ನಾನೆ ಎಂಬುದೇ ತಾನೊ? ತತ್ತ್ವ ಇದು.
ತ್ವಂ ನೀನೋ ಇರುವಿಕೆಯೆ ಅಸಿ
ನಾ–ನೀ ನಿನ ಈ ತಿರುಳೇ ತತ್ತ್ವಂ
ಅರಿತಿರುವುದೇ ಅಸಿ; ತತ್ತ್ವಮಸಿ

೯

ಏನಿದು ತತ್ತ್ವ? ಎಲ್ಲಿಯದೀಮಸಿ?
ಎನೆ ತತ್ತ್ವವೆ ಮಸಿ ಮಸೀಮಸಿ
ನಿಜದ ನೆಲೆಯು ಕಾಣಬನಕ ಮಾತು–ಕತೆ.
ತರ್ಕ ಎಲ್ಲವೂ ಹುಸೀ ಹುಸಿ!

೧೦

ನಿಜವ ಕಂಡವನು ಅಜನಾಗುವನ್ನೈ
ವಾದ–ವಿವಾದಕೆ ಮೂಕನವ
ಸಂವಾದದ ಶಬ್ದದ ನಾದದ ಹ್ರೀಂ–
–ಕಾರದುಂಬಿ ಓಂಕಾರನವ!

೧೧

ಅಡಿಯಲಿ, ಉಡಿಯಲಿ, ಮುಡಿಯಲಿ ಏಕಾ-
-ಕಾರವು ನಾದದ ಸಾಕಾರ
ಅನನ್ಯ ಭಕುತಿಯು ಒಳಗಣ್ಣಿಗೆ ಮಾ–
–ತ್ರವೆ ಕಾಂಬುವುದದು ತಾ ಪೂರಾ

೧೨

ಅಡಿಯಲಿ ಅಕಾರ, ಉಡಿಯಲಿ ಉಕಾರ
ಮುಡಿಯಲಿ ಮಕಾರ ಓಂಕಾರ!
ಮಿಡಿ ಮಿಡಿಯುತ ಕುಡಿ ಕುಡಿ ಬಿಡುತಿರೆ ಓಂ
ದೇವದತ್ತ, ಶ್ರೀ ಹ್ರೀಂಕಾರ!

– ಶ್ರೀದೇವದತ್ತ

ಹಣ್ಣುಹಣ್ಣಾದ ಮುದುಕ—
ಗಂಡಸರನ್ನು, ಹೆಂಗಸರನ್ನು ಮಕ್ಕಳನ್ನು,
ಸೈನಿಕರನ್ನು, ಗಾಯಾಳುಗಳನ್ನು ಕೇಳಿಯೇ
ಕೇಳಿದ: "ನಾನು ಕಳೆದುಕೊಂಡ ವಸ್ತುವನ್ನೇನಾದರೂ
ನೀವು ಕಂಡಿದ್ದೀರಾ?" ಆದರೆ ....

ಮುಕ್ತಿ

ಶಾಂತಾರಾಮ ಸೋಮಯಾಜಿ

ಪಾರ್ಕಿನ ಜನದಟ್ಟಣೆಯಲ್ಲಿ ಮುದುಕನೊಬ್ಬ ಸೇರಿಕೊಂಡಿದ್ದ. ಆತನ ಮುಖದ ತುಂಬಾ ಸುಕ್ಕುಗಳು. ಬೆನ್ನು ಬಾಳೆಗೊನೆಯಂತೆ ಬಾಗಿತ್ತು. ಧರಿಸಿದ್ದ ನೀಳ ಅಂಗಿಯ ತುಂಬಾ ಧೂಳು. ಆಕರ್ಷಣೆ ಕಳೆದುಕೊಂಡ ಅವಯವಗಳು...ಬಣ್ಣ ಕಳೆದುಕೊಂಡ ಹಳೇ ಚಿತ್ರದಂತೆ ಆತ ಕಂಡುಬರುತ್ತಿದ್ದ.

ಸಂಜೆ ಸುಂದರವಾಗಿತ್ತು. ಮುದುಕ; ನೀಳವಾಗಿ ಉಸಿರೆಳೆದುಕೊಳ್ಳುತ್ತಾ ಪಾರ್ಕಿಗೆ ಸುತ್ತು ಬಂದ. ಅನಂತರ ಬಳಲಿದಂತೆ ರೆಪ್ಪೆ ಮುಚ್ಚಿಕೊಂಡ. ಗೇಟಿನ ಬದಿ ಕುಳಿತುಕೊಂಡ. ಸ್ವಲ್ಪಹೊತ್ತಿನ ನಂತರ ಬಾಗಿ ನೆಲದ ಮೇಲೆ ಕೈಯಾಡಿಸುತ್ತ ಏನನ್ನೋ ಹುಡುಕಲಾರಂಭಿಸಿದ. ದೂರದಿಂದ ಪರೀಕ್ಷಿಸುತ್ತಿದ್ದ ಯುವಕನೊಬ್ಬ ಕುತೂಹಲದಿಂದ ಮುದುಕನ ಸಮೀಪ ಬಂದು ದನಿಯೆತ್ತರಿಸಿ ಕೇಳಿದ-

"ಏನು ಹುಡುಕುತ್ತಿದ್ದೀ, ಅಜ್ಜಾ?" ತಲೆಯೆತ್ತಲಿಲ್ಲ ಮುದುಕ, ಸ್ವಲ್ಪ ತಡೆದು ಹೇಳಿದ-

"ಏನೋ ಕಳೆದುಹೋಗಿದೆ. ಇಲ್ಲೆಲ್ಲಾದರೂ ಕಳೆದುಕೊಂಡಿರಬೇಕು..." ಅನಂತರ ಮೌನ. ಪುನಃ ಹುಡುಕುವುದನ್ನು ಮುಂದುವರಿಸಿದ. ಆತನ ದನಿ ಸುಂದರವಾಗಿತ್ತು.

ಆಸಕ್ತಿ ಹೊಂದಿದ ಯುವಕ ವಿಚಾರಿಸಿದ–"ಏನದು ಕಳೆದು ಹೋದದ್ದು?... ಹೇಳಿ: ಹುಡುಕಲು ನಾನೂ ಸಹಾಯ ಮಾಡುತ್ತೇನೆ...

ಮುದುಕನೀಗಲೂ ತಲೆಯೆತ್ತಲಿಲ್ಲ. ಒಂದು ವಿಧವಾಗಿ ನಕ್ಕಂತೆ ಮಾಡಿ ಕೈಯಲ್ಲಿ ನಟನೆ ಮಾಡುತ್ತಾ ಹೇಳಿದ-

"ಅದೇ...ಅದು ನನಗೆ ತಿಳಿದಿದ್ದಲ್ಲಿ ಈ ಎಲ್ಲಾ ಕಷ್ಟವಿತ್ತಾ. ಆದರೆ ಏನೋ ಕಳೆದು ಹೋದದ್ದು ಮಾತ್ರ ದೇವರಾಣೆಗೂ ಸತ್ಯ. ಸುಳ್ಳು ಹೇಳುವದಿಲ್ಲ ನಾನು."

ಯುವಕನೀಗ: ಮುದುಕನ ಬುದ್ಧಿ ಸ್ವಾಧೀನದಲ್ಲಿಲ್ಲವೆಂದು ತೀರ್ಮಾನಿಸಿಕೊಂಡ. ಏನು ಕಳೆದುಹೋಗಿದೆಯೆಂದು ತಿಳಿಯದ ಮೇಲೆ...? ತಮಾಷೆ ಮಾಡುವ ಧಾಟಿಯಲ್ಲಿ ಆತ ಹೇಳಿದ.

"ಬಿಡಿ ಅಜ್ಜಾ... ಹೋಗಲಿ: ಆದರ ರೂಪ, ಆಕಾರ...ಅದಾದರೂ ತಿಳಿದಿರಬಹುದಾ?"

ಎದ್ದುನಿಂತ ಮುದುಕ. ಯುವಕನೆದುರು ಮುಖ ತಂದು ಕಣ್ಣಲ್ಲಿ ಕಣ್ಣಿಟ್ಟು ಹೇಳಿದ- "ಏನಂದಿ ತಮ್ಮ: ರೂಪವಾ? ಆಕಾರವಾ? ಏನದರ ಅರ್ಥ? ರೂಪ ಆಕಾರ ಇರದ ವಸ್ತುಗಳೇ ಇಲ್ವಾ ಈ ಲೋಕದಲ್ಲಿ. ದೇವರಿಗೆ ಆಕಾರವಿದೆಯಾ? ಭೂಮಿಗೆ ರೂಪ ಇದೆಯಾ? ಏನು ಹೇಳುತ್ತೀ ಇದಕ್ಕೆ?"

ಮುದುಕನ ಮಾತುಗಳು ಸ್ವಾರಸ್ಯವಾಗಿದ್ದವು. ಸ್ವಲ್ಪ ಹೊತ್ತು ಅದೇ ರೀತಿ ಪ್ರಶ್ನಾರ್ಥಕವಾಗಿ ನಿಂತಿದ್ದು ಅನಂತರ; ಯುವಕನ ಭಾವನೆಗಳಿಗೇನೂ ಬೆಲೆ ಕೊಡದಂತೆ ಅಲ್ಲಿಂದ ದೂರ ನಡೆಯುತ್ತ ಹೋದ, ಆ ಬಡಕಲು ಬೆನ್ನಿನ ಹಣ್ಣು ಮುದುಕ......

ಆರೇಳು ಮಂದಿ ಒಟ್ಟು ಕುಳಿತು ಹಸು ಹಸಾಲಿನಲ್ಲಿ ಏನೋ ಗಂಭೀರವಾದುದನ್ನು ಚರ್ಚಿಸುತ್ತಿದ್ದಲ್ಲಿ ನೇರವಾಗಿ ನುಗ್ಗಿ ಮುದುಕ ವಿಚಾರಿಸಿದ–


"ನನ್ನ ವಸ್ತುವನ್ನೇನಾದರೂ ನೀವಿಲ್ಲಿ ಕಂಡಿದ್ದೀರಾ? ನಾನದನ್ನೆಲ್ಲೋ ಕಳೆದುಕೊಂಡಿದ್ದೇನೆ..."

ಗುಂಪಿನ ಮುಖಗಳೆಲ್ಲಾ ಆಚ್ಚರಿಯಿಂದ ಮುದುಕನನ್ನಳೆದವು. ಒರಟು ಕಂಠದಲ್ಲಿ ಒಬ ಹೇಳಿದ–

"ಏನನ್ನು ಕಳೆದುಕೊಂಡದ್ದು? ನಿಮ್ಮ ಕನ್ನಡಕವಾ?"

ಮುದುಕನ ಮುಖದಲ್ಲಿ ಕೊಂಚ ನಗುವಿನ ಸುಳಿ ಹಬ್ಬಿತು: ತಲೆಯಾಡಿಸುತ್ತ ಆತ ಹೇಳಿದ– "ಛಿ, ಛಿ!, ಅಷ್ಟೆಲ್ಲಾ ಚಿಕ್ಕ ವಿಷಯಕ್ಕೆ ಈ ಪ್ರಾಯದಲ್ಲಿ ಹುಡುಕಾಡಬೇಕು ಯಾಕೆ ನಾನು? ಅದೂ ಒಂದೆರಡು ವಾರಗಳಾದವು. ಊರೆಲ್ಲಾ ಸುತ್ತಿ ಹುಡುಕಾಡಿದ್ದೇನೆ?"

ಆದರೆ ಗುಂಪಿನ ಜನ ಆಲೋಚಿಸುವುದರೊಳಗಾಗಿ ಮುದುಕ ಅಲ್ಲಿಂದ ಕಾಲ್ತೆಗೆದಿದ್ದ. ಮುಂದೆ ನಡೆಯುತ್ತಾ ಆತ ಹೇಳಿದ,



"ನಿಮ್ಮ ಬಳಿಯೂ ಅದಿಲ್ಲ. ಇರುತ್ತಿದ್ದಲ್ಲಿ ನಾನ ದನ್ನು ನೆಲದ ವಾಸನೆಯಿಂದಲೇ ಗುರ್ತು ಹಿಡಿಯುತ್ತಿದ್ದೆ.?

ಆನಂತರ ಮುದುಕ ಪಾರ್ಕಿನ ಇನ್ನೊಂದು ಮೂಲೆಗೆ ನಡೆದ. ಕೆಲವೇ ಹೆಂಗಸರು ಕಾಲುಚಾಚಿ ಕುಳಿತು ಏನನ್ನೋ ಚಿಂತಿಸುವಂತಿದ್ದರು. ಬಿಸಿಲಿಗೆ ಅವರ ಅರಿವೆಯ ಬಣಗಳು ಹೊಳೆಯುತ್ತಿದ್ದುವು. ಮುದುಕ; ಅವರಿಗೆ ನಾಚಿಕೆ ತರಿಸುವಷ್ಟು ಸಮೀಪ ತನ್ನ ಮುಖ ತಂದು ಹೇಳಿದ- "ಸ್ವಲ್ಪ ಬದಿಗೆ ಸರಿಯಿರಿ. ನಾನಿಲ್ಲಿ ನನ್ನದೇನನ್ನಾದರೂ ಕಳೆದುಕೊಂಡಿರುವ ಸಾಧ್ಯತೆಯಿದೆ..."

ಅಗಲಮುಖದ ಹೆಂಗಸೊಬ್ಬಳು ಮೃದುಸ್ವರದಲ್ಲಿ ಹೇಳಿದಳು- "ನಮ್ಮ ಬಳಿ ನಿಮ್ಮದು ಯಾವ ವಸ್ತುವೂ ಇಲ್ಲ..." ಅನಂತರ ಬದಿಗೆ ಹೊರಳಿ ಪಿಸುಮಾತಿನಲ್ಲಿ ಗೆಳತಿಯೊಬ್ಬಳಲ್ಲಿ ಹೇಳಿದಳು- "ಜಾಗ್ರತೆಯಿಂದಿರಬೇಕು; ಇಂತಹವರೊಂದಿಗೆಲ್ಲಾ. ಯಾರು, ಯಾವ ಯಾವ ವೇಷ ಹಾಕಿ ಬರುತ್ತಾರಂತ ಹೇಳಲಿಕ್ಕಾಗುವುದಿಲ್ಲ ಈ ದಿನಗಳಲ್ಲಿ..."

ಆದರೆ ಮುದುಕನ ಕಿವಿ ಚುರುಕಾಗಿತ್ತು. ಆತ ಹೆಂಗಸರ ನಡುವಿನಿಂದ ಹೋಗಬರುತ್ತಾ ಹೇಳಿದ-

"ತಪ್ಪು ತಿಳಿಯಬೇಡ ತಂಗೀ...ನಾನು ಏನನ್ನೋ ಕಳೆದುಕೊಂಡುದು ಮಾತ್ರ ಸತ್ಯ, ಆದರೆ ಏನು, ಎಲ್ಲಿ ಎಂದು ಮಾತ್ರ...?"

ಆತನ ವರ್ತನೆಯಿಂದ ಗುಂಪಿನಲ್ಲಿ ಕ್ರೋಧ ಅರಳುವ ಮೊದಲೇ ಆತ ಅಲ್ಲಿಂದ ದೂರ ಸರಿಯುತ್ತಾ ಹೇಳಿದ "ಸಿಕ್ಕಿಲ್ಲ ಇಲ್ಲೂ...?

ಗೊಣಗುತ್ತಾ ಮುಂದೆ ನಡೆದ ಆತ; ಕೆಲವು ಮಕ್ಕಳು ಆಟವಾಡುತ್ತಿದ್ದೆಡೆ ಬಂದ. ಒಂದು ಚಿಕ್ಕ ನೀರು ಒಸರದ ಕಾರಂಜಿ. ಕಾರಂಜಿಯ ಪಕ್ಕ ಒಂದೆರಡು ಆಸನಗಳು, ಚಪ್ಪಾಳೆತಟ್ಟಿ ಮಣ್ಣಲ್ಲಿ ಕೆನೆಯುತ್ತಿದ್ದ ಗುಂಪಿನ ಹುಡುಗನೊಬ್ಬನ ಹೆಗಲು ಹಿಡಿದಲ್ಲಾಡಿಸುತ್ತಾ ಆತ ಹೇಳಿದ-

"ನೀನೇನಾದರೂ ನನ್ನದೊಂದು ವಸ್ತು ಕಂಡಿದ್ದೀಯಾ?"

ತಲೆಯಾಡಿಸಿದ ಹುಡುಗ ಮುದುಕ ಮುಂದುವರಿಸಿ ಹೇಳಿದ-

"ಅದಕ್ಕೆ ಆಕಾರ ರೂಪ ಇರಲೇಬೇಕೆಂದು ನಾನು ಖಚಿತ ಹೇಳುವುದಿಲ್ಲ. ಆದರೆ ಇಷ್ಟು ತಿಳಿಯಿರೋ; ದೇವರಾಣೆಗಾದರೂ ನಾನು ಸುಳ್ಳು ಹೇಳುವುದಿಲ್ಲ. ಅದನ್ನೆಲ್ಲೊ ಕಳೆದುಕೊಂಡಿದ್ದೇನೆ...?

ಒಂದು ಗಳಿಗೆ ಮಕ್ಕಳ ಮುಖದ ಮೇಲೆ ದೃಷ್ಟಿ ಹರಿಸಿ ಅಲ್ಲಿಂದ ಮುಂದೆ ನಡೆದು ಹೇಳಿದ.

"ನಿಮ್ಮ ಬಳಿಯೂ ಅದಿಲ್ಲ. ಇರುತ್ತಿದ್ದಲ್ಲಿ ನಾನದನ್ನು ನಿಮ್ಮ ಉಸಿರಿನಿಂದಲೇ ಗುರುತು ಹಿಡಿಯುತ್ತಿದ್ದೆ..."

ಅದೇ ರೀತಿ ಗೊಣಗಿಕೊಂಡು ಆತ ಪಾರ್ಕಿನ ಎಲ್ಲಾ ಮೂಲೆಗೂ ಚಲಿಸತೊಡಗಿದ.

ಇಷ್ಟರಲ್ಲೇ ಮುದುಕ, ಪಾರ್ಕಿನಲ್ಲಿ ಪ್ರಖ್ಯಾತಿಗೇರಿದ್ದ ಆತ ನಡೆಯುತ್ತಿದ್ದಾಗ ಆತನ ಹಿಂದಿನಿಂದ ಒಂದು ಗುಂಪೇ ಚಲಿಸುತ್ತಿತ್ತು. ಕೆಲವರು ಆತನ ಬುದ್ಧಿ ಭ್ರಮಣೆಯಾಗಿರಬೇಕೆಂದು ಆಡಿಕೊಳ್ಳುತ್ತಿದ್ದರು. ಅಂತಹ ಜನರು ಆತನಲ್ಲಿ ವಿಚಿತ್ರ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯಲು ಉತ್ಸಾಹ ಪಡುತ್ತಿದ್ದರು. ಆದರೆ ಮುದುಕ ಮಾತ್ರ ಯಾವ ಬಗೆಯ ಕೋಪವನ್ನು ಪ್ರದರ್ಶಿಸುತ್ತಿರಲಿಲ್ಲ.

ಆತನಿಗೆ ಕೋಪ ಬರಿಸಲೆಂದೇ ಕೆಲವರು- "ನಿನ್ನ ಹೆಂಡತಿಯನ್ನೇನಾದರೂ ಕಳೆದುಕೊಂಡಿದ್ದೀಯಾ ಅಜ್ಜಾ" ಎಂದು ವಿಚಾರಿಸುತ್ತಿದ್ದರು. ಆದರೆ ಮುದುಕ ಮಾತ್ರ ಯಾವ ಬೇಸರ ಪ್ರದರ್ಶಿಸದೆ, ತನ್ನ ಸುಕ್ಕುಗಟ್ಟಿದ ಮೋರೆಯಲ್ಲಿ ನಗು ಪ್ರದರ್ಶಿಸಿ ಹೇಳುತ್ತಿದ್ದ.

"ಏನು ಹೇಳುತ್ತಿದ್ದೀ ತಮ್ಮ...ಹೆಂಡತಿ ಇದ್ದರೆ ತಾನೆ ಕಳೆದುಕೊಳ್ಳುವುದು? ತಮ್ಮಲ್ಲಿರದ್ದನ್ನು ಕಳೆದುಕೊಳ್ಳಲಾಗುತ್ತದೆಯಾ?"

ಸ್ವಲ್ಪ ಹೊತ್ತಿನಲ್ಲಿ ಪಾರ್ಕಿನಲ್ಲಿ ಕತ್ತಲು ಸೇರಿಕೊಂಡಿತು. ಪಾರ್ಕಿನ ಜನರೆಲ್ಲಾ ಅವಸರ ಅವಸರವಾಗಿ ಪಾರ್ಕಿನಿಂದ ಹೊರ ನಡೆಯತೊಡಗಿದರು. ಮಾರ್ಗದ ಅಲ್ಲಲ್ಲಿ ಸೈನಿಕ ಅಂಗಿ ಧರಿಸಿದ ಮೀಸೆ ಹೊತ್ತ ಜನರು ಕಾಣಿಸಿಕೊಂಡರು. ಅವರೆಲ್ಲರ ಕೈಗಳಲ್ಲೂ ಒಂದೊಂದು ಹೊಳೆಯುವ ಕೋವಿಗಳಿದ್ದವು. ಬೂಟಿನ ಕಾಲುಗಳನ್ನು ಮಾರ್ಗದ ಅಗಲಕ್ಕಲ್ಲಿ ಬಡಿಯುತ್ತಾ ಅವರು ದಾರಿಹೋಕರನ್ನು ಕಡೆಗಣ್ಣಿನಿಂದ ಪರೀಕ್ಷಿಸುತ್ತಿದ್ದರು ಮತ್ತು ಕೊಂಚ ಆತುರ ವ್ಯಕ್ತಪಡಿಸಿದ ಜನರನ್ನು ಏಯ್ ಹಂದಿಮಗನೇ ಬಾರೋ ಇಲ್ಲಿ" ಎಂದು ದನಿಯೇರಿಸಿ ಕೂಗುತ್ತಿದ್ದರು. ಅನಂತರ ಅವರ ಕಾಲ ಬೆರಳಮೇಲೆ ತಮ್ಮ ದಪ್ಪ ಬೂಟಿನ ತುದಿಯನ್ನು ಚುಚ್ಚಿ ಹಿಡಿದು ಹೇಳುತ್ತಿದ್ದರು.

"ಹುಂ ಬೋಗಳು ಬೊಗಳು ಏನಿಷ್ಟು ತಡವಾಗಿ ವಾಪಸ್ಸಾಗುತ್ತಿರುವುದು. ಮಕ್ಕಳನ್ನು ಹೊತ್ತ ಹೆಂಗಸರು ಆ ಹಾದಿಯಾಗಿ ಬಂದಾಗ 'ಏಯ್ ಸೂಳೆ; ಈ ಕಡೆ ಬಾ ಈ ಕಡೆ ಬಾ...' ಎಂದು ಅವರ ರಟ್ಟೆ ಹಿಡಿದು ಎಳೆಯುತ್ತಿದ್ದರು. ಅನಂತರ ಅವಳನ್ನು ಭಯ ಹುಟ್ಟಿಸಲೆಂದು ಮಗುವಿನ ಕೆನ್ನೆಗಳನ್ನು ರಕ್ತ ಬರುವಷ್ಟು ಜೋರಾಗಿ ಚಿವುಟುತ್ತಿದ್ದರು ನಡುಗುವ ತಾಯಂದಿರು ಅವರ ಬೂಟನ್ನು ಅಳುತ್ತಾ ಅಪ್ಪಿಕೊಂಡಾಗ ದರ್ಪದಿಂದ ಹೇಳುತ್ತಿದ್ದರು ಸಡೆಯಾಚೆ ಇಷ್ಟು ಕತ್ತಲಾಗುವವರೆಗೆ ಏನು ನಡೆಸುತ್ತಿದ್ದೀ ಎಂದು ಎಲ್ಲಾ ಗೊತ್ತಂಟು ನನಗೆ. ನಿನ್ನ ಈ ಸೋಗೆಲ್ಲಾ ಬೇಡ ದೊಡ್ಡ ಪತಿವ್ರತೆಯ ಸೋಗು."

ಕೆಲ ನಿಮಿಷಗಳಲ್ಲಿ ಪಾರ್ಕ್ ನಿರ್ಜನವಾಯಿತು. ಕೊನೆಯದಾಗಿ ಪಾರ್ಕಿನಿಂದ ಆ ಮುದುಕ ಹೊರಬಿದ್ದ. ಆತ ಬಳಲಿದ ಹೆಜ್ಜೆಗಳನ್ನಿಡುತ್ತಾ ಪಾರ್ಕಿನಿಂದ ಸ್ವಲ್ಪ ದೂರ ನಡೆದಾಗ ಒರಟು ದನಿಯ ಸೈನಿಕನೊಬ್ಬ ಹೇಳಿದ. ನಡಿ ನಡಿ ಈ ಬಾರಿ ನಿನಗೆ ಮಾಫಿ ಇನ್ನೊಂದು ಬಾರಿ ಈ ರೀತಿ ತಡವಾಗಿರುವುದನ್ನು ನಾನು ನೋಡಿದರೆ" ಅನಂತರ ತನ ಕೋವಿಯ ಹಿಡಿಯ ಮೇಲೆ ಒಂದು ಬಾರಿ ಪಟ್ಟ ಸದ್ದು ಮಾಡಿದ... ಮುದುಕ ಮಾತ್ರ ಅದನ್ನು ಕೇಳಿಸದವನಂತೆ ತನ ದಾದ ವಸ್ತುವೊಂದನ್ನು ಕಳೆದುಕೊಂಡಿದ್ದೇನೆಂದೂ ಅದನ್ನೇ ಹುಡುಕುತ್ತಾ ಇದ್ದೇನೆಂದೂ ತಿಳಿಸಿದ, ಸೈನಿಕ ತನ್ನ ಕೋವಿಯ ಹಿಂಬದಿಯಿಂದ ಮುದುಕನ ಬಾಗಿದ ಬೆನ್ನನ್ನು ತಿವಿಯುತ್ತಾ ಹೇಳಿದ. ನಡಿ ನಡಿ ಮನೆಯಲ್ಲಿ ನಿನ್ನ ಮುದುಕಿ ಯಾರೊಂದಿಗೆ ಚಕ್ಕಂದವಾಡುತ್ತಿದ್ದಾಳೆಂದು ನೋಡು..."

ಆ ರಾತ್ರಿ ಅಲ್ಲಿನ ಮನೆಗಳಲ್ಲೆಲ್ಲಾ ಮುದುಕನ ಕುರಿತೇ ಮಾತು. ಪಾರ್ಕಿಗೆ ಒಂಟಿಯಾಗಿ ತೆರಳಿದ ಗಂಡಸರು ತಮ್ಮ ಪತ್ನಿಯರಲ್ಲಿ ಎಷ್ಟು ಹಣ್ಣು ಮುದುಕ ಗೊತ್ತಾ ಅವನ ಮುಖದ ಸುಕ್ಕುಗಳನ್ನು ಲೆಕ್ಕ ಹಾಕಬೇಕಾದರೆ ವರ್ಷ ಬೇಕಾದೀತು ಎಂದು ಬಣ್ಣಿಸುತ್ತಿದ್ದರು. ಅವರು ಮುಂದುವರಿಸಿ ಆದರೆ ಕೊನೆಗೂ ಅವನು ಹೇಳಲಿಲ್ಲ ನೋಡು ತಾನೇನನ್ನು ಕಳೆದುಕೊಂಡಿದ್ದೇನೆಂದು. ಅವನಿಗೇ ಅದು ತಿಳಿದಿಲ್ಲವಂತೆ. ನೀನೇ ಹೇಳು ಅದಕ್ಕೆ ಆಕಾರ ರೂಪ ಇರಲೇಬೇಕೆಂದೇನಿಲ್ಲವಂತೆ ಅದನ್ನೆಲ್ಲಿ ಕಳೆದುಕೊಂಡದ್ದೇ ತಿಳಿದಿಲ್ಲವಂತೆ ತಮಾಷೆ ನೋಡು.

ಪಾರ್ಕಿನಿಂದ ಹಿಂತೆರಳಿದ ಮಕ್ಕಳು ತಮ್ಮ ತಾಯಂದಿರಲ್ಲಿ ಹೇಳುತ್ತಿದ್ದರು "ಗೊತ್ತುಂಟಾ ನಿನಗೆ ಅಮ್ಮ, ರೂಪ ಇರದ್ದು, ಆಕಾರ ಇರದ್ದು ವಸ್ತು ಅಕಿ

ಬೆಲೆ ಬಾಳುವಂತಹದು ಗೊತ್ತುಂಟಾ?"ಮುಂದುವರಿಸಿ ಅವರು ಕತ್ತಲಲ್ಲಿ ಆತ ಯಾವ ಹೆದರಿಕೆಯಿರದೆ ಅಲ್ಲಿ ಹುಡುಕುತ್ತಿದ್ದುದರ ಕುರಿತು ಬಣ್ಣಿಸುತ್ತಿದ್ದರು.

ಅಲ್ಲಿಂದ ಹೊರಟ ಮುದುಕನ ಮುಖದಲ್ಲಿ ನಿರುತ್ಸಾಹವಿತ್ತು. ಆದರೂ ಅದನ್ನು ಪ್ರದರ್ಶಿಸಲು ಬೇಸರಗೊಂಡಂತೆ ಆತ ತನ್ನ ಕುತ್ತಿಗೆಯನ್ನೆತ್ತಿ ನಿಧಾನವಾಗಿ ನಡೆಯಲು ಪ್ರಯತ್ನಿಸುತ್ತಿದ್ದ. ದಾರಿಯುದ್ದಕ್ಕೂ ಆತ ಸುತ್ತಲೂ ದೃಷ್ಟಿ ಹರಿಸುತ್ತಾ ಹೆಜ್ಜೆ ಹಾಕುತ್ತಿದ್ದ. ಕೆಲವೊಮ್ಮೆ ದಾರಿ ಬದಿಯ ಚರಂಡಿಗೆ ತಾಗಿನಿಂತು ನೆಟ್ಟ ದೃಷ್ಟಿಯಿಂದ ಏನೋ ಅಳೆಯುತ್ತಿದ್ದ. ದಾರಿಯಲ್ಲಿ ಎದುರಾದವರನು ಕೈಚಾಚಿ ನಿಲ್ಲಿಸುತ್ತಿದ್ದ ಮತ್ತು ತನ್ನ ಇಂಥ ಕಂಠದಲ್ಲಿ ವಿಚಾರಿಸುತ್ತಿದ್ದ "ಏನು ತಮ್ಮಾ ನೀನೇನಾದರೂ ಈ ಮುದುಕನ ಕಳೆದು ಹೋದ ವಸ್ತುವೊಂದನ್ನು ನೋಡಿಲ್ಲ ತಾನೇ?"

ಕತ್ತಲಲ್ಲಿ ನಡೆಯುತ್ತಾ ಆತ ಹಂಚಿನ ಮಾಡಿನ ಚಿಕ್ಕ ಕಟ್ಟಡ ಬದಿಗೆ ಬಂದ. ಅದೊಂದು ಪ್ರೈಮರಿ ಶಾಲೆ. ಶಾಲೆ ಎದುರಿನ ಅಂಗಳದ ಹೂಗಿಡಗಳ ಪಾತಿಗಳೆಲ್ಲಾ ಒಣಗಿದ್ದುವು. ಗೋಡೆಯ ಒಂದು ಪಾರ್ಶ್ವದ ಗಾರೆ ಕುಸಿದುಬಿದ್ದಿತು. ಹೊರ ಜಗಲಿಯಲ್ಲೆಲ್ಲಾ ಧೂಳು ತುಂಬಿಕೊಂಡಿತ್ತು. ಜಗಲಿಯ ಒಂದು ಪಾರ್ಶ್ವದಲ್ಲಿ ಒಬ್ಬ ಗಂಭೀರ ಮುಖದ ಸೈನಿಕ ನಾಯಕನ ಚಿತ್ರವಿತ್ತು. ಯಾರೋ ತಮಾಷೆಗಾಗಿ ಚಿತ್ರದಲ್ಲಿ ಆತನ ಟೊಪ್ಪಿಗೆಯ ಮೇಲೆ ಮಸಿಯಿಂದ ಕ್ರಾಸ್‌ನ ಗುರುತು ಮಾಡಿದ್ದರು. ಶಾಲೆಯ ಕೋಣೆಗಳೆಲ್ಲಾ ಬೀಗ ಜಡೆದು ಮುಚ್ಚಿದ್ದವು. ಜಗಲಿಯ ಒಂದು ತುದಿಯಲ್ಲಿ ಬೋಳು ತಲೆಯ ಗಂಡಸೊಬ್ಬ ತನ್ನ ಬೆನ್ನಮೇಲೆ ಮಲಗಿ ಬೀಡಿಯ ಹೊಗೆ ಬಿಡುತ್ತಿದ್ದ. ಬೀಡಿಯ ಬೆಂಕಿಯಿಂದ ಲಷ್ಟೇ ಆತನನ್ನು ಆ ಕತ್ತಲಲ್ಲಿ ಗುರುತು ಹಿಡಿಯಬಹುದಿತ್ತು.. ಅವನು ಆ ಶಾಲೆಯ ಜವಾನ. ಆದರೆ ಒಂದೆರಡು ತಿಂಗಳ ಹಿಂದೆ ಆತನನ್ನು ಆ ಕೆಲಸದಿಂದ ತೆಗೆದುಹಾಕಲಾಗಿತ್ತು,...ಮುದುಕ: ಆತನ ಹೆಗಲ ಮೇಲೆ ನಿಧಾನವಾಗಿ ಕೈಯಿಡುತ್ತಾ ಹೇಳಿದ–"ಇಲ್ಲಿ, ನಾನು ಕಳೆದುಕೊಂಡ ವಸ್ತುವನ್ನೇನಾದರೂ ಕಂಡಿದ್ದೀಯಾ ತಮ್ಮಾ ಕಂಡಿದ್ದರೆ..."ಜವಾನನೀಗ ಎದ್ದು ಕುಳಿತ. ಬೀಡಿಯ ತುಂಡು ಹಿಡಿದ ಆತನ ಬೆರಳುಗಳು ಆವೇಶದಿಂದ ನಡುಗುತ್ತಿದ್ದುವು. ಆ ಕತ್ತಲಲ್ಲೂ ಆತನ ಕಣ್ಣುಗಳು ಕೆಂಪಗೆ ಹೊಳೆಯುತ್ತಿದ್ದುವು. ವಿಚಿತ್ರವಾಗಿ ಉಸಿರೆಳೆದುಕೊಳ್ಳುತ್ತ ಆತ ಮುದುಕನ ಕೈಯನ್ನು ದೂರ ತಳ್ಳಿ ಹೇಳಿದ–

"ಹೋಗಾಚೆ ಪಾಪಿ ಹೋಗ್ತೀಯಾ ಅಥವಾ..." ಸ್ವಲ್ಪ ಹೊತ್ತು ಉದ್ವೇಗದಿಂದ ಆತನ ಮಾತು ನಿಂತುಹೋಯಿತು. ಅನಂತರ ಮುಂದುವರಿಸಿದ, "ಇದೆಲ್ಲಾ ನಿನ್ನಂತವರಿಂದಲೇ ಆಗುವುದು...ನನ್ನ ಎರಡು ಮಕ್ಕಳು...ಯಾರೀಗ ಅವರನ್ನು ಹಿಂದಕ್ಕೆ ತಂದು ಕೊಡುತ್ತಾರೆ? ಒಬ್ಬನಿಗಂತೂ ತಿಂಗಳು ತುಂಬಿದ ಹೆಂಡತಿ ಬೇರೆ. ಈಗವಳು ನನ್ನ ಹತ್ರ: ಹೇಳಿ ಮಾವಾ. ಹೇಳಿ ಏನು ಮಾಡಿದಿರಿ ನನ್ನ ದೇವರನ್ನು ಎಂದು ಕೇಳಿಸುವಾಗ ಏನು ಉತ್ತರ ಕೊಡಬೇಕು ನಾನು ಅವನೀ ಶಾಲೆಯಲ್ಲಿ ಎಷ್ಟು ಒಳ್ಳೇ ಮಾಸ್ತರನಾಗಿದ್ದ ಗೊತ್ತ? ದೂರ ಹೋಗು. ಇದೆಲ್ಲಾ ನಿನ್ನಂತ ಪಾಪಿಗಳಿಂದಲೇ ಆಗುವುದು. ಈಗ ಕೊನೆ ಮಗನೂ ಕೇಳುತ್ತಿದ್ದಾನೆ. ನನಗೂ ಒಂದು ಕೋವಿ ತಂದುಕೊಡಲಾಗುವುದಿಲ್ವಾ ಅಪ್ಪ ಎಂದು...ನ [illegible]. ಇಲಾ: ಈ ಶಾಲೆಯನ್ನು ನಿನ್ನನ್ನು ಒಟ್ಟು ಹಾಕಿ ಸುಟ್ಟು ಬಿಡುತ್ತೇನೆ ನಾನೀಗ..?

ಆದರೆ ಮುದುಕ ಅಂಜಿದಂತಿರಲಿಲ್ಲ: ತಲೆಯಾಡಿಸುತ್ತ ಆತ ಅಲ್ಲಿಂದೆದ್ದು ನಿಧಾನವಾಗಿ ಹೊರಟ. ಮತ್ತು ಸ್ವಲ್ಪ ತಗ್ಗಿದ ಸ್ವರದಲ್ಲಿ ಗೊಣಗಿಕೊಂಡ "ದೇವರೇ; ನಾನದನ್ನು ಹೇಗಾದರೂ ಪಡೆಯಲಾಗುತ್ತಿದ್ದರೆ...?"

ಆತನಲ್ಲಿಂದ ಅಂಗಡಿ ಸಾಲುಗಳಿದ್ದೆಡೆ ನಡೆದ ಅಲ್ಲೀಗ ಕಾರ್ಯನಿರತರಾಗಿದ್ದುದು ಬೀದಿ ದೀಪಗಳು. ಮತ್ತು ಲಕ್ಷಣವಾಗಿ ಉಡುಗೆ ತೊಟ್ಟ ಸೈನಿಕರು ಮಾತ್ರ. ಕೆಲ ಅಂಗಡಿ ಬಾಗಿಲುಗಳು ಮುಚ್ಚಿದ್ದುವು ಮತ್ತು ಅವಸರವಾಗಿ ಗೀಚಿದ ಅಕ್ಷರಗಳಲ್ಲಿ ಬಾಗಿಲ ತುಂಬಾ ಏನೋ ಬರೆಯಲಾಗಿತ್ತು. ಒಂದು ಅಂಗಡಿಯ ಮುಂದಿನ ಡಸ್ಟ್‌ಬಿನ್‌ನ ಪಕ್ಕ ಕೆಲ ನಾಯಿಗಳು ಕಚ್ಚಾಟ ನಡೆಸಿದ್ದವು. ಡಸ್ಟ್‌ಬಿನ್‌ನ ವಸ್ತುಗಳು ಸುತ್ತಲೂ ಚೆಲ್ಲಿ ನಾರುತ್ತಿದ್ದುವು...ಮುದುಕ ವಿಶಾಲವಾದ ಅಂಗಡಿಯೊಂದರ ಮುಂದೆ ನಿಂತುಕೊಂಡ. ಅಂಗಡಿಯ ಬಾಗಿಲು ಅರ್ಧ ಮುಚ್ಚಿತ್ತು. ಉಳಿದರ್ಧ ಮುಚಲು ಆಸಕ್ತಿ ವಹಿಸಿದ್ದ ಅಂಗಡಿಕಾರ ತಿರುಗಿ

ನಿಂತು ಮುದುಕನನ್ನಳೆದು ಪ್ರಶ್ನಾರ್ಥಕವಾಗಿ ದಿಟ್ಟಿ ಸುತ್ತಿದ್ದ ಮುದುಕನಿಗಾಗಿ ಕನಿಕರ ತುಂಬಿದ ಧನಿಯಲ್ಲಿ ಹೇಳಿದ–

"ಇಲ್ಲಜ್ಜಾ...ಏನೂ ದೊರೆಯುವುದಿಲ್ಲ. ಅಡಗಿಸಿಟ್ಟು ಏನು ಪ್ರಯೋಜನ. ಸತ್ಯ ಹೇಳಬೇಕೆಂದರೆ ನಮ್ಮಲ್ಲೀಗ ಒಂದು ಪಾವು ಅಕ್ಕಿ ಕೂಡಾ ಇಲ್ಲ. ಅಕ್ಕಿ, ಗೋದಿ ಕೊನೆಗೆ ಗೆಣಸು ಕೂಡಾ ದಾಸ್ತಾನಿಲ್ಲ..."

ಸ್ವಲ್ಪ ತಡೆದು ತನ್ನಲ್ಲೆ ಎಂಬಂತೆ ಹೇಳಿದ ಇನ್ನು ಕೆಲವೇ ದಿನ...ನೀವೇ ನೋಡುತ್ತೀರಿ ಮತ್ತೆ ನಾವಿನ್ನು ಮನುಷ್ಯ ಮನುಷ್ಯರನ್ನೇ ತಿನ್ನಬೇಕಾಗುವ ದಿನ ದೂರ ವಿಲ್ಲ. ಮಣ್ಣು ತಿನಲಾಗದ ಮೇಲೆ ಅದೊಂದೇ ಹಾದಿ ಉಳಿದಿರುವುದು. ಬದುಕುಳಿಯಲಿಕ್ಕೆ ಹಸಿ ಹಸಿ ಮನುಷ್ಯರನ್ನೇ ತಿನ್ನಬೇಕಾಗುತ್ತದೆ, ಆಗ ನಮ್ಮಲ್ಲಿ ಒಂದು ಚಿಂಕಿ ಕಡಿಯೂ ಸಿಗಲಾರದು ಖಂಡಿತಾ ಅದು...

ಆತನ ಮಾತು ಮುಗಿಯುವ ಮೊದಲೇ ಮುದುಕ ಅಲ್ಲಿಂದ ಕಾಲ್ತೆಗೆದಿದ್ದ. ಪಕ್ಕದ ಬೀದಿ ನಿರ್ಜನವಾಗಿತ್ತು. ಕೆಲವೊಮ್ಮೆ ಕೇಳಿ ಬರುವ ಸೈನಿಕರ ಬೂಟಿನಸದ್ದು; ಯಾವುದೋ ಮನೆಯಲ್ಲಿ ಮಗು ಚೀರಿದ ದನಿ, ಮತ್ತು ಮನೆಬಾಗಿಲುಗಳ ಮೇಲೆ ಯಾರೋ ಬಲವಾಗಿ ಪಟಪಟ ಬಡಿದ ಸದ್ದಿನ ಹೊರತು ಅಲ್ಲೆಲ್ಲಾ ನಿಶ್ಯಬ್ದ ವಾಗಿತ್ತು. ಬೀದಿ ದೀಪಗಳು ನಂದಿಹೋಗಿದ್ದವು. ಬೀದಿಯ ಅಲ್ಲಲ್ಲಿ ಕೊಳತ ಪದಾರ್ಥಗಳು ತುಂಬಿ ಸುತ್ತಲೂ ನಾರುತ್ತಿತ್ತು. ಕೆಲವೊಮ್ಮೆ ಬೀದಿಯ ಆಚೀಚೆ ಹೆಗ್ಗಣಗಳು ಕಿರುಚುತ್ತಾ ಓಡಾಡಿ ಮಾಯ ವಾಗುತ್ತಿದ್ದುವು......

ಮುಂದೆ ನಡೆದ ಮುದುಕ ಒಂದು ವಿಶಾಲ ಕಟ್ಟಡ ದೆದುರು ನಿಂತುಕೊಂಡ. ಕಟ್ಟಡದೆದುರು ಅಗಲ ಮುಖದ ಸೈನಿಕನೊಬ್ಬ ಹುಡುಗಿಯೊಬ್ಬಳ ತೊಡೆಯ ಮೇಲೆ ಕೈಯಾಡಿಸುತ್ತ ಕುಳತಿದ್ದ; ಹುಡುಗಿ ನಕ್ಕಾಗ ಅವಳ ಮುಖ ವಿಕಾರವಾಗಿ ಉಬ್ಬ ನಿಲ್ಲುತ್ತಿತ್ತು.... ಕಟ್ಟಡದ ಒಂದುಬದಿ ಕೆಲ ಜೀಪುಗಳು ನಿಂತಿದ್ದವು.

ಅದೊಂದು ಆಸ್ಪತ್ರೆ ಕಟ್ಟಡವಾಗಿತ್ತು. ಮುದುಕ ಸೈನಿಕನ ಬಳಿ ತೆರಳಿ ಏನೋ ಹೇಳಲು ಆರಂಭಿಸುತ್ತಾ 'ತಮ್ಮ' ಎಂದು ಕರೆದ. ಸೈನಿಕ, ಹುಡುಗಿಯಿಂದ ಮುಖ ತಿರುಗಿಸಿಕೊಂಡು ಕೋಪಗೊಂಡವನಂತೆ ಹೇಳಿದ... "ಏನೋ ಮುದುಕಾ... ಪಿತ್ತ ತಲೆಗೇರಿದೆಯಾ ನಿಂದು. ತಮ್ಮ ಅಂತೆ. ನೀನು ತಮ್ಮ, ತಮ್ಮ ಎಂದು ಕರೆಯು ವುದನ್ನು ಈಗಲೇ ನಿಲ್ಲಿಸಿಬಿಡುತ್ತೇನೆ... ಅಹಂಕಾರ ಬೆಳೆ ದಿದೆ ನಿಮಗೆಲ್ಲಾ. ಹೀಗೆ ತಮ್ಮ ತಮ್ಮ ಎಂದು ಕರೆದೇ ಕೊನೆಗೇ..."

ಮುದುಕ ತಲೆಯಾಡಿಸುತ್ತಾ ಮಾತನಾಡದೆ ಅಲ್ಲಿಂದ ನಡೆದು ಆಸ್ಪತ್ರೆಯ ಒಳಹೊಕ್ಕ.

ಅಲ್ಲಿ ಆತ ಎಲ್ಲಾ ಕೋಣೆಗಳಿಗೂ ಸುತ್ತು ಹಾಕಿದ. ವಾರ್ಡಿನ ಮಂಚಗಳೆಲ್ಲಾ ಬರಿದಾಗಿದ್ದವು. ಅವುಗಳ ಮೇಲೆ ಹಾಸಿದ ಬಟ್ಟೆಗಳೆಲ್ಲಾ ಕೊಳೆಯ ಬಣ್ಣ ಪಡೆದಿದ್ದವು. ಎಂದೂ ಗೊಣಗಿಕೊಂಡಿರುತ್ತಿದ್ದ ಡಾಕ್ಟರರು, ತಲೆಗೂದಲು ಕೆದರಿ ಅಳುಮೋರೆ ಮಾಡಿ ನಿಂತಿರುತ್ತಿದ್ದ ದಾದಿಯರು, ಮತ್ತು ಕೆಲ ಸೈನಿಕ ರೋಗಿಗಳ ಹೊರತು ಬೇರಾವ ಮಂದಿಯೂ ಅಲ್ಲಿರುತ್ತಿದ್ದಿಲ್ಲ. ಅಪರೂಪ ಕ್ಕೊಮ್ಮೆ ಕೆಲ ಜನರು, ಹುಚ್ಚುನಾಯಿಯಿಂದ ಕಚ್ಚಿಸಿ ಕೊಂಡ ತಮ್ಮ ಮಕ್ಕಳನ್ನೋ, ತೀರಾ ಹೊಟ್ಟೆನೋವಿನಿಂದ ಬಳಲುತ್ತಿದ್ದ ಮುದಿ ತಂದೆತಾಯಿಯರನ್ನೋ ಅಥವಾ ವಿಷಮಜ್ವರದಿಂದ ನರಳುತ್ತಿದ್ದ ಸಂಬಂಧಿಕ ರನ್ನು ಕರೆತರುತ್ತಿದ್ದರು. ಹಾಗೆ ಕರೆದುತಂದ ರೋಗಿ ಗಳಲ್ಲಿ ಅಪರೂಪಕ್ಕೊಮ್ಮೆಯಷ್ಟೇ ಕೆಲ ಜನರು ಜೀವಂತ ಮರಳುತ್ತಿದ್ದರು... ಬಂದವರಿಗೆಲ್ಲಾ ಡಾಕ್ಟರರು ಜುಗುಪ್ಸೆಯಿಂದ ತಮ್ಮ ತಲೆಯಾಡಿಸುತ್ತಾ ಹೇಳುತ್ತಿದ್ದರು —

"ಇಲ್ಲ, ಇಲ್ಲ, ಇಂತಹ ಆಸ್ಪತ್ರೆ. ನನಗೆ ಕೇಳಿ ಕೂಡಾ ಗೊತ್ತಿಲ್ಲ... ಬೇರೆಲ್ಲಾದ್ದಕ್ಕೂ ಹೋಗಲಿ, ಗಾಯಕ್ಕೆ ಒಂದು ತುಂಡು ಬ್ಯಾಂಡೇಜ ವಸ್ತ್ರವೂ ಇಲ್ಲಿ ಸಿಗುತ್ತಿಲ್ಲ ಎಂದ ಮೇಲೆ... ಇಲ್ಲ, ಹೀಗಾಗುವುದು ಸಾಧ್ಯವೇ ಇಲ್ಲ... ನಾಳೆಯಿಂದ ನಾನು ಖಂಡಿತಾ ರಾಜೀನಾಮೆ ಬರೆದುಕೊಟ್ಟು ಹೋಗುವವನಿದ್ದೇನೆ. ಇವರೆಲ್ಲಾ ಏನೆಣಿಸಿದ್ದಾರೆ. ನಮ್ಮ ವೃತ್ತಿಗೂ ಒಂದು ಮಾನ ಮರ್ಯಾದೆ ಇದೆ."

ಆ ರೀತಿ ಆಸ್ಪತ್ರೆಗೆ ಬಂದು ಸತ್ತವರನ್ನೆಲ್ಲಾ ಅಲ್ಲಿನ ಕಂಪೌಂಡಿನೊಳಗೆ ಹೂಳಲು ಅವಕಾಶ ಮಾಡಿಕೊಡಲಾಗಿತ್ತು.

ತೀರಾ ಬಳಲಿದ ಮುದುಕ ಒಂದು ಹಾಲ್‌ನೊಳಗೆ ಕಾಲಿಟ್ಟ. ಹಾಲ್‌ನ ತೆರೆದ ಬಾಗಿಲಿನಿಂದ ಹಲ ನಗುವಿನ ಸದ್ದು ಕೇಳಬರುತಿತ್ತು. ಅಲ್ಲಿ ಸಾಲಾಗಿ ಹತ್ತು ಹನೆರಡು ಮಂಚಗಳಿದ್ದುವು. ಆದರೆ ಮೂಲೆ ಕಿಟಕಿ ಬದಿಯ ಮಂಚದ ಮೇಲೆ ಒರಗಿದ ಮೂರು ನಾಲ್ಕು ಮಂದಿಯ ಹೊರತು ಉಳಿದೆಲ್ಲ ಮಂಚಗಳೂ ಖಾಲಿಯಾಗಿದ್ದುವು. ಮುದುಕ ನೇರ ಅವರ ಬಳಿ ನಡೆದ. ಅವರಲ್ಲೊಬ್ಬ ಸುಂದರವಾಗಿ ಸಿಗರೇಟಿನ ಹೊಗೆಯ ಸುರುಳಿಬಿಡುತ್ತಾ ಮಂಚದ ಮೇಲೆ ಮಲಗಿದ್ದ. ಆತನ ಬಲಕಾಲಿನುದ್ದಕ್ಕೂ ಬ್ಯಾಂಡೇಜು ಸುತ್ತಲಾಗಿತ್ತು. ಆತ ಆ ಕಾಲನ್ನು ದರ್ಪದಿಂದ ಮಂಚದ ಮೇಲೆ ಪ್ರದರ್ಶಿಸಿದ್ದ. ಮುದಿ ಆಗಂತುಕನನ್ನು ನೋಡುತ್ತಾ ಆತ ಹೇಳಿದ "ಏನು ಮಾವಾ. ಹೇಗಿದ್ದೀರಿ?" ಮುದುಕ, ಸುಂದರ ಕಂಠದಲ್ಲಿ ಹೇಳಿದ.

ನನ ದೇನೋ ಕಳೆದು ಹೋಗಿದೆ. ಅದನ್ನು ಹುಡುಕುತ್ತಾ ಇಲ್ಲೀತನಕ ಬಂದುಬಿಟ್ಟೆ."

ಸಿಗರೇಟಿನ ಹೊಗೆ ಬಿಡುತ್ತಿದ್ದ ಸೈನಿಕ ಹೇಳಿದ; ನಗುತ್ತಾ–

"ಏನು, ಏನು ಕಳೆದು ಹೋದದ್ದು?"

ಅನಂತರ ಮುಂದ ವರಿಸಿದ "ಇಲ್ಲ ಮಾವಾ; ನಿಮ್ಮ ಮಗಳನ್ನು ನಾನಾಗಲೇ ಮಾರಿಬಿಟ್ಟದೇನೆ. ಅವಳನ್ನು ನಿಮಗೆ ಸಿಗುವುದು ಅಸಂಭವ." ಸ್ವಲ್ಪ ಹೊತ್ತು ಸಿಗರೇಟಿನ ಹೊಗೆಯನು ಫು ಫು ಎಂದು ಬಿಡುತ್ತಿದ್ದ. ಅನಂತರ ಇಂಗ್ಲೀಷಿನಲ್ಲಿ ಹೇಳಿದ. "ಅವಳು ತುಂಬ ಬೆಲೆ ಬಾಳುತ್ತಿದ್ದಳು. ಮತ್ತು ನಾನು ಯಾರಿಗೂ ನಷ್ಟವಾಗದಂತೆ ಮಾರಿಬಿಟ್ಟೆ."

ಉಳಿದ ಮಂಚಗಳಿಂದೆಲ್ಲಾ ನಗು. ಮುದುಕ ಆ ನಗುವಿನಲೆಯ ಮಧ್ಯದಲ್ಲೇ ಕೋಣೆಯ ಹೊರಬಂದು ಆಸ್ಪತ್ರೆಯಿಂದ ಹೊರಬರುತ್ತ ಹೇಳಿಕೊಂಡ. "ಇಲ್ಲೂ ಇಲ್ಲ. ಇರುತ್ತಿದ್ದಲ್ಲಿ ಗಾಳಿಯಿಂದಲೇ ನನಗೆ ಗುರುತು ಹಿಡಿಯಬಹುದು."

ಮಾರ್ಗ ಸೇರಿದ ಮುದುಕ ನಿಧಾನವಾಗಿ ಮುಂದೆ ಹೆಜ್ಜೆ ಹಾಕಿದ. ಮಾರ್ಗದಲ್ಲಿ ಅಪರೂಪಕ್ಕೊಮ್ಮೆಯಷ್ಟೇ ವಾಹನಗಳು ಚಲಿಸುತ್ತಿದ್ದುವು. ಕೆಲವು ಸೈನ್ಯದ ಜೀಪ ಗಳು, ಸೈಕಲ್ ರಿಕ್ಷಾಗಳು ಮತ್ತು ವಿಪರೀತ ಹಾರ್ನ ಮಾಡುತ್ತ ಚಲಿಸುತ್ತಿದ್ದ ಟ್ರಕ್‌ಗಳು...ಮನೆಗಳು ಅವ ರೂಪವಾಗತೊಡಗಿದ್ದುವು. ಕೆಲವೊಮ್ಮೆ ಮನೆಗಳ ಪ್ರಾಕಾರದ ಹಿಂಬದಿಯಿಂದ ಹೆಂಗಸಿನ ಚೀರಾಟ ಅಥವಾ ಬೊಗಳುತ್ತಿದ್ದ ತಮ್ಮ ನಾಯಿಯನ್ನು ಸುಮ್ಮನಾಗಲು ಗದರಿಸುತ್ತಿದ್ದ ಗಂಡಸಿನ ದನಿಯ ಹೊರತು ಸುತ್ತಲೂ ನೀರವತೆ ಹಬ್ಬಿತ್ತು. ಕೆಲ ಮನೆಗಳ ಮಾಡು ಬೆಂಕಿಯಿಂದ ಸಂಪೂರ್ಣ ಸುಟ್ಟು ಹೋಗಿದ್ದು ಗೋಡೆಯ ಇಟ್ಟಿಗೆಗಳು ಚಿತ್ರವಿಚಿತ್ರವಾಗಿ ಹಬ್ಬಿದ್ದವು. ಮತ್ತು ಅವುಗಳ ಬದಿ ಕೆಲ ಬಡಕಲ ಬೆಕ್ಕುಗಳು ಬೊಬ್ಬೆಯಿಬ್ಬಿಸುತ್ತಾ ಕುಳಿತಿರುತ್ತಿದ್ದುವು. ಮುದುಕ ಅವನ್ನೆಲ್ಲಾ ದಾಟಿ ಹೋದ! ಆತನೀಗ ನಡೆದು ಸಾಕಷ್ಟು ಬಳಲಿದ್ದ. ಆತನ ದೇಹ ಪೂರ್ಣ ಬೆವರಿಂದ ತೊಯ್ದಿತ್ತು. ಆದರೂ ಆತನ ಕಣ್ಣುಗಳು ಚುರು ಕಾಗಿದ್ದುವು.



ರಾಷ್ಟ್ರಕಪಿ

ಭಾಷಣವ ಬಿಗಿವರೊಬ್ಬರು
ಆವೇಶದಲಿ

'ರಾಷ್ಟ್ರಕವಿ' ಎಂದು
ನುಡಿವುದರ ಬದಲು

ಅಮೃತವಚನಕೆ ಮೃತವಚನ
ಅವತರಿಸಿತ್ತು

'ರಾಷ್ಟ್ರಕಪಿ' ಎನೆ
ಜನರ್ಗೆ ನಗಲು!

– ಗುಂಡಿ, ಚಂದ್ರಶೇಖರ ಐತಾಳ

ದಾರಿಯಲ್ಲಿ ಆತನೊಂದು ಚಿಕ್ಕ ಸೇತುವೆಯನ್ನು ದಾಟಿದ. ಸೇತುವೆಯ ಒಂದು ಮೂಲೆಯಲ್ಲಿ ಮಗುವಿನ ಹೆಣವೊಂದು ಬಿದ್ದಿತ್ತು. ಆದರ ಸೊಂಟದ ಕೆಳಭಾಗ ನಗ್ನವಾಗಿದ್ದು ದೇಹ ಪೂರ್ತಿ ರಕ್ತಹಬ್ಬಿತ್ತು. ಸೇತುವೆಯ ಮತ್ತೊಂದು ಮೂಲೆಯಲ್ಲಿ ಯುವಕನೊಬ್ಬ ವಿಪರೀತ ಕುಡಿದುಬಿದ್ದಿದ್ದ. ಆತ ನಿದ್ದೆಗಣ್ಣಿನಲ್ಲಿ ಎಚ್ಚರಗೊಂಡಂತೆ ಕೆಲ ನಿಮಿಷಗಳಿಗೊಮ್ಮೆ ತಲೆಯೆತ್ತಿ ಸೇತುವೆಯ ಕಂಬಕ್ಕೆ ಕೆಲಬಾರಿ ಹಣೆಬಡಿಯುತ್ತಿದ್ದ. ಅನಂತರ ಏನೋ ಗೊಣಗುತ್ತ ಬಿದ್ದುಬಿಡುತ್ತಿದ್ದ... ಆತನ ಕಾಲಬುಡದಲ್ಲಿ ಬಡಕಲು ನಾಯಿಯೊಂದು ಬಾಲ ಅಲ್ಲಾಡಿಸುತ್ತ ಕುಳಿತಿತ್ತು. ಆತ ಎಚ್ಚರಗೊಂಡಾಗಲೆಲ್ಲಾ ಅದೂ ಆತನ ಮುಖವನ್ನು ಮೂಸಿ ನೋಡುತ್ತಿತ್ತು.

ಹಿಂದೆ ನೋಡಿದಲ್ಲೆಲ್ಲಾ ಬರಿ ಭೂಮಿ, ಮರಗಳು ಮತ್ತು ಕಪ್ಪು ಆಕಾಶ. ದೂರದಲ್ಲಿ ಕೆಲವೊಮ್ಮೆ ಮಿಂಚಿನಂತೆ ಬೆಳಕು ಹೊಳೆದು ಮಾಯವಾಗುತ್ತಿತ್ತು. ಆದರ ಹಿಂದೆ ಗುಂಡಿನ ಸದ್ದು. ಸ್ವಲ್ಪ ಹೊತ್ತಿನ ನಂತರ ಸುತ್ತಲೂ ಕಟುಮೌನ. ಮಾರ್ಗದಲ್ಲಿ ಅಪರೂಪಕ್ಕೊಮ್ಮೆ ಸೈನ್ಯದ ಜೀಪುಗಳು ಬೆಳಕು ಚೆಲ್ಲುತ್ತ ಹಾದುಬರುತ್ತಿದ್ದುವು. ಅವೆಲ್ಲಾ ಮಾರ್ಗದ ಒಂದೇ ದಿಕ್ಕಿಗೆ ಚಲಿಸುತ್ತಿದ್ದವು. ಜೀಪಿನ ತುಂಬಾ ದೊಡ್ಡ ಸ್ತನಗಳುಳ್ಳ ಹೆಂಗಸರ ಕುರಿತು ಪದ ಹಾಡುತ್ತಿದ್ದ ಸೈನಿಕರು...

ಮುದುಕ ಬಾಯಾರಿದ್ದ. ಆದರೆ ಈಗ ದಾರಿಯ ಎರಡೂ ಬದಿಗಳಲ್ಲೂ ಜನವಸತಿ ಇದ್ದಿರಲಿಲ್ಲ. ಕೆಲವೊಂದು ಮನೆಗಳು ಸುಟ್ಟುಕೊಂಡು ಬೋಳಾಗಿ ಮಾರ್ಗದ ಪಕ್ಕ ನಿಂತಿರುತ್ತಿದ್ದವು. ಅಲ್ಲಿ ಸುತ್ತಲೂ ಭೀಕರ ಎನಿಸುವ ಮೌನ. ಸ್ವಲ್ಪ ದೂರದ ಹಳ್ಳದ ಬದಿಯ ಗದ್ದೆಯಲ್ಲಿ ಕೆಲ ಹಸುಗಳು ಮೇಯುತ್ತಾ ಚಲಿಸುತ್ತಿದ್ದವು. ನಕ್ಷತ್ರದ ಬೆಳಕಿನಡಿ ಅವುಗಳ ಮೈ ಹೊಳೆಯುತ್ತಿದ್ದವು.

ಸ್ವಲ್ಪ ದೂರ: ಮಾರ್ಗದಿಂದ ಕೆಲ ಗಜಗಳ ಆಳತೆಯಲ್ಲಿ ಮುದುಕ, ಒಂದು ಚಿಕ್ಕ ದೀಪವನ್ನು ಕಂಡ. ಮುದುಕ ಹತ್ತಿರವಾದಂತೆ, ಆ ದೀಪದ ಪ್ರಕಾಶದ ಹಿಂದೆ ಮೂರು ಜೋಡಿ ಕಣ್ಣುಗಳನ್ನು ಕಂಡ...ಚಿಕ್ಕ ಮೇಣದ ಬತ್ತಿಯಡಿ ಮೂರು ಯುವಕರು ಕುಳಿತು ಬ್ರೆಡ್ಡು ತಿನ್ನುತ್ತಿದ್ದರು. ಕೋವಿಯ ಹಿಡಿಯೊಂದರ ಮೇಲೆ ಮೇಣದ ಬತ್ತಿ ಕುಳಿತಿತ್ತು. ಗಾಳಿಗೆ ಬತ್ತಿ ಆರದಿರಲೆಂದು ಅಂಗಿಯೊಂದನ್ನು ಮಂಡಚಿ ಕೋಟೆಯಂತೆ ಬತ್ತಿಯ ಸುತ್ತ ನಿಲ್ಲಿಸಲಾಗಿತ್ತು. ಅವರ ಕೂದಲುಗಳೆಲ್ಲಾ ಕೆದರಿದ್ದವು. ಎಣ್ಣೆ ಕಾಣದೆ ಅದು ಕಂದು ಬಣ್ಣಕ್ಕೆ ತಿರುಗಿತ್ತು. ಅವರಲ್ಲಾರಿಗೂ ಒಳ ಅಂಗಿ ಇರಲಿಲ್ಲ. ಅಂಗಿಯ ಗುಂಡಿಗಳು ತೆರೆದಿದ್ದು ಅವರೆದೆಯ ದಟ್ಟ ರೋಮಗಳು ಕಂಡು ಬರುತ್ತಿದ್ದವು.

ನೇರವಾಗಿ ಅಲ್ಲಿಗೆ ತೆರಳಿದ ಮುದುಕ ಬಳಲಿಕೆಯಿಂದ ಅವರ ಮುಂದೆ ಕುಸಿದು ಕುಳಿತ. ಸುಂದರ ದನಿಯಲ್ಲಿ ಹೇಳಿದ– "ಒಂದಿಷ್ಟು ನೀರು ಕೊಡ್ತೀರಾ ತಮ್ಮ...ನಾನು ಒಣಗಿ ಮರುಭೂಮಿಯಂತಾಗಿದ್ದೇನೆ" ಮೂರು ಜೊತೆ ಕಣ್ಣುಗಳೂ ಮುದುಕನನ್ನಳೆದವು. ಆ ಕೂಡಲೇ ಒಬ್ಬ ಮಾತನಾಡಿದ– ಆತನ ಸ್ವರ ಹೆಣ್ಣಿನ ಸ್ವರದಂತೆ ಇಂಪಾಗಿತ್ತು. "ನಿಮ್ಮ ಮೇಲೆ ನಂಬಿಕೆಯಿಟ್ಟು ನಾವು...ಆದರೆ ನಡುವೆ ಏನಾದರೂ ಪಿಕಲಾಟ ಸುರು ಮಾಡಿದರೆ ಏನಜ್ಜ..." ಅನಂತರ ತನ್ನ ಬದಿ ನೆಲದಲ್ಲಿದ್ದ ಕೋವಿಯ ಕಡೆ ಬೆರಳು ತೋರಿಸಿದ.

ಮಾತನ್ನು ಕೇಳಿಸದಿದ್ದಂತೆ ಮುದುಕ ಹೇಳಿದ– "ನಿಜಕ್ಕೂ ನಾನಾಗ ಎಷ್ಟು ಹೆದರಿ ಹೋಗಿದ್ದೆ ಎಂದರೆ, ಈ ರೀತಿ ಬಾಯಾರಿ ಬಾಯಾರಿ ದಾರಿ ಮಧ್ಯದಲ್ಲೇ ಬಿದ್ದು ಸತ್ತು ಬಿಡಬಹುದಂತ...ಆದರೆ ದೇವರ ಹಾಗೆ ನೀವು ಪ್ರತ್ಯಕ್ಷರಾದಿರಿ..." ಸ್ವಲ್ಪ ಹೊತ್ತಿನ ನಂತರ ಹೆಣ್ಣು ದನಿಯವ ಮುದುಕನ ಕೈಗೆ ಒಂದು ಲೋಟ ನೀರು ಕೊಟ್ಟ. ಅನಂತರ ಕೆಲ ಬ್ರೆಡ್ಡು ಚೂರುಗಳನ್ನು ಸಕ್ಕರೆ ಹಾಕದ ಚಾವನ್ನು ಕೊಟ್ಟು ಹೇಳಿದ– "ನಮಗೆ ಸಕ್ಕರೆ ದೊರೆಯದೆ ವಾರಗಳಾದುವು ಅಜ್ಜಾ...ಆದರೆ ಈಗದರ ಆವಶ್ಯಕತೆ ಅಷ್ಟಾಗಿಲ್ಲ. ಸಕ್ಕರೆ ಹಾಕದೇ ರುಚಿಯೆನಿಸುತ್ತದೆ..."

ಸ್ವಲ್ಪ ಹೊತ್ತಿನ ನಂತರ ಮುದುಕ ಹೇಳಿದ– "ಇಲ್ಲಿನ ಗಾಳಿಯಲ್ಲಿ ಏನೋ ವಿಶೇಷ ಇದ್ದಂತಿದೆ. ನಾನು ಕಳೆದುಕೊಂಡುದನ್ನು ಇಲ್ಲೆಲ್ಲಾದರೂ ಕಂಡು ಹಿಡಿಯಬಹುದೇನೋ..." ಅವನು, ತಾನು ತನ್ನ ದೇಶನ್ನೇ ಕಳೆದುಕೊಂಡಂತೆ ಭಾವಿಸುತ್ತಿದ್ದುದನ್ನು, ಅದಕ್ಕಾಗಿ ಊರೂರು ಸುತ್ತುತ್ತಿದ್ದುದನ್ನು ಮತ್ತು ಒಂದು ವೇಳೆ ಏನು ದೊರೆಯದೆ ಸತ್ತರೆ ತಾನು ಪಾಪಿಯಾದಂತೆ ಭಾವಿಸುತ್ತಿರುವುದನ್ನೆಲ್ಲಾ ವಿವರಿಸಿ ಹೇಳಿದ. ಮುಂದುವರಿಸಿ:–

"ಕಳೆದುಕೊಂಡುದು ಮಾತ್ರ ಸತ್ಯ. ಆದರೆ ಏಣಿಯಾದರೆ ನನ್ನ ರಕ್ತ ಈಗಲೂ ಬಿಸಿ ರಕ್ತದಂತೆ ಕುದಿಯುತ್ತವೆ. ನನ್ನ ಕಾಲುಗಳಿಗೆ ಶಕ್ತಿ ತುಂಬುತ್ತದೆ."

ಹೆಣ್ಣುದನಿಯ ಯುವಕ, ಮುದುಕನನ್ನು ಸಂತೈಸಿ

ಮುದುಕನಿಗೆ ಸಹಾಯ ಒದಗಿಸುವುದರಲ್ಲಿ ತಾವೆಂದೂ ಹಿಂಜರಿಯಲಾರೆವೆಂದು ಹೇಳಿದ. ಅನಂತರ ತನ್ನ ಅಂಗಿಯೊಳಗಿಂದ ಒಂದು ಚಿಕ್ಕ ಭಾವಚಿತ್ರವನ್ನು ಹೊರ ತೆಗೆದು ಮುದುಕನ ಮುಂದೆ ಹಿಡಿದು ಭಾವ ಚಿತ್ರದಿಂದ ಚಿಕ್ಕ ಮೀಸೆ ಹೊತ್ತ, ಅಗಲ ಹಣೆಯ, ನೇರವಾಗಿ ದಿಟ್ಟಿಸುತ್ತ ಮನುಷ್ಯನೊಬ್ಬನ ಕಣ್ಣುಗಳು ಮುದುಕನನ್ನು ದಿಟ್ಟಿಸುತ್ತಿದ್ದವು. ಚಿತ್ರವನ್ನು ಅಂಗಿಯ ಕಿಸೆಯೊಳಗಿಳಿಸುತ್ತ ಆತ ಹೇಳಿದ:-

"ಇದರ ಹಿಂದೆ ಏನು ಬರೆದಿದೆ ಗೊತ್ತಾ, ಅಜ್ಜಾ ನಾನು ರಾಷ್ಟ್ರದ ಮುಕ್ತಿಗಾಗಿ ಪ್ರಾಣವನ್ನಾದರೂ ತೆರಲು ಸಿದ್ಧನಿದ್ದೇನೆ...ಕೇಳಿದಿರಾ?"

ಸ್ವಲ್ಪ ಹೊತ್ತಿನ ನಂತರ ಅವರಲ್ಲೊಬ್ಬ ದೂರ-ದೆಡೆಗೆ ಕೈತೋರಿಸಿದ. ಕತ್ತಲಲ್ಲಿ ಆ ದಿಕ್ಕಿನಿಂದ ದೀಪವೊಂದು ಅಲೆದಾಡಿಕೊಂಡು ಬರುತ್ತಿತ್ತು. ನಿಧಾನವಾಗಿ ಬೀಸುತ್ತಿದ್ದ ಗಾಳಿಯಲ್ಲಿ ಜೀಪಿನ ಇಂಜನ್ನಿನ ದನಿ...ಒಬ್ಬ ದೀಪವನ್ನು ಬಾಯಿಯಲ್ಲೂದಿ ನಂದಿಸಿದ. ಮೂರು ಮಂದಿಯೂ ಅಲ್ಲಿಂದೆದ್ದು ಕತ್ತಲಲ್ಲಿ ಮಾರ್ಗದಿಂದ ಹಿಂದಕ್ಕೆ ಹೆಜ್ಜೆ ಹಾಕಿದರು. ಎದ್ದುನಿಂತ ಮುದುಕ ಏಳುತ್ತಾ ಬೀಳುತ್ತಾ ಹಿಂಬಾಲಿಸಿದ, ಅವರು ನೀರು ತುಂಬಿಕೊಂಡ ಹಳ್ಳದಲ್ಲಿಳಿಯಲು ಮುದುಕನಿಗೆ ಸಹಾಯ ಒದಗಿಸಿದರು. ಮುದುಕನ ದೇಹವೆಲ್ಲಾ ಹುಲ್ಲಿನ ಅಲಗು ಚುಚ್ಚುತಿತ್ತು. ನೀರಭರತದ ಸಮಯವಾದುದರಿಂದ ಹಳ್ಳ ಪೂರ್ತಿ ನೀರಿನಿಂದ ತುಂಬಿಕೊಂಡಿತ್ತು. ಮುದುಕ ಗಡಗಡ ನಡುಗುತ್ತಿದ್ದ. ಹಳ್ಳದ ಇನ್ನೊಂದು ದಿಕ್ಕಿನಿಂದ ಕಪ್ಪೆಗಳು ವಿಚಿತ್ರವಾಗಿ ಕೂಗುತ್ತಿದ್ದುವು. ಹಳ್ಳದ ದಂಡೆಗೊರಗಿದ ಮೂವರಲ್ಲೊಬ್ಬ ಕೋವಿಯನ್ನು ಆಧರಿಸಿ ಹಿಡಿಯಲು ಹೆಣಗುತ್ತಿದ್ದ.

ದೀಪ ಸಮೀಪವಾಯಿತು. ಸೈನಿಕರ ಹಾಡು ಕೇಳಿ ಬರುತ್ತಿತ್ತು. ಕೋವಿಯ ನೇರಕ್ಕೆ ಜೀಪು ಹಾಯುತ್ತಿದ್ದಂತೆ ಕೋವಿ ಹಿಡಿದಾತ ಕೀಲಿಯೆಳೆದ. ಗುಂಡಿನ ಸದ್ದಿನಲ್ಲಿ ಮುದುಕನ ಕಿವಿ ಕಿವುಡಾಗುತ್ತಿರುವಂತೆ ಭಾಸವಾಯಿತು. ಆತ ಈಗ ದೇಹಪೂರ್ತಿ ನಡಗುತ್ತಿದ್ದ ಒಂದು ನಿಮಿಷ ಜೀಪಿನ ವೇಗ ಕುಗ್ಗಿತು. ಆದರೆ ಮರು ನಿಮಿಷದಲ್ಲೇ ವೇಗ ದ್ವಿಗುಣಗೊಂಡು ಜೀಪು ಕಣ್ಮರೆಯಾಯಿತು...ಗುಂಡುಬಿಟ್ಟ ಯುವಕ ಅಸಮಾಧಾನದಿಂದಲೇ ಎದ್ದುನಿಂತ. ತನ್ನ ಮುಷ್ಟಿಯಿಂದ ಕೋವಿಯ ಹಿಡಿಯಮೇಲೆ ಬಲವಾಗಿ ಹೊಡೆದು ಹೇಳಿದ - "ಹಾಳಾದುದು...ನಾನಿದು ಮೂರನೆಯ ಸರ್ತಿ ಗುರಿ ತಪ್ಪುತ್ತಿರುವದು..." ಸ್ವಲ್ಪ ಹೊತ್ತು ಮೌನವಾಗಿದ್ದು ಅನಂತರ ಮುಂದುವರಿಸಿದ "ಛಿ!, ನಾನವರಲ್ಲಿ ಒಬ್ಬನನ್ನಾದರೂ ಸುಡಲು ಸಾಧ್ಯವಿರುತ್ತಿದ್ದಲ್ಲಿ...ಪಾಪಿಗಳು ನಾಲ್ಕ್ಲಿ ಇಬ್ಬರು ಹೆಂಗಸರನ್ನು ನೋಡಿದರಾಕ್ಷಸರು..." ಅದೇ ಆವೇಶದಲ್ಲಿ ಅತ ಕೆಲ ಅಸಹ್ಯ ಶಬ್ದಗಳನ್ನುಚ್ಚರಿಸಿದ.

ಚಳಿಯಿಂದ ನಡಗುತ್ತಿದ್ದ ಮುದುಕ. ಹಳ್ಳದಿಂದ ಎದ್ದುನಿಂತಾಗ ಆತನ ಕಾಲುಪೂರ್ತಿ ಕೆಸರುಮಣ್ಣು ಅಂಟಿಕೊಂಡಿತ್ತು. ಅದೇ ಅವಸ್ಥೆಯಲ್ಲಿ ಆತ ಆ ಮೂವರನ್ನು ಹಿಂಬಾಲಿಸಿದ. ಆ ಗುಂಡಿನ ಸದ್ದನ್ನೇ

ಜೋಲಿ ಹೊಡೆಯುತಿದೆ



ಧಾರವಾಡದ ನೆಲದಾಯಿಯ ಮೇಲೆಲ್ಲ
ಬೆಳುದಿಂಗಳ ಮಳೆ ಸುರಿದಿದೆ!
ಚಕೋರ ಬೆಳುದಿಂಗಳ ಕುಡಿದು
ಮತ್ತವಾಗಿ ಜೋಲಿ ಹೊಡೆಯುತಿದೆ!

– ಪಂಚಾಕ್ಷರಿ ಹಿರೇಮಠ

ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತ ಆತ ಆ ಕತ್ತಲಲ್ಲಿ ಹೆಜ್ಜೆಯಿಡುತ್ತಿದ್ದ.

ಅವರೆಲ್ಲಾ ಅಲ್ಲಿಂದ ಬರಿದಾದ ಗದ್ದೆಗಳನ್ನು ಹಸುಗಳು ಮೇಯುತ್ತಿದ್ದ ಮೈದಾನಗಳನ್ನು ದಾಟಿಕೊಂಡು ಒಂದು ಚಿಕ್ಕ ಬೋಳು ಮೈದಾನವನ್ನು ಪ್ರವೇಶಿಸಿದರು. ಮೈದಾನದ ಕೊನೆಯಲ್ಲೊಂದು ಚಿಕ್ಕ ಕಟ್ಟಡವಿತ್ತು. ಅದರ ಮಾಡು ಎಷ್ಟು ಕೆಳ ಬಾಗಿತ್ತೆಂದರೆ ಅದು ಈಗಲೇ ಕುಸಿದು ಬೀಳಬಹುದೆಂಬ ಭ್ರಮೆ ಹುಟ್ಟಿಸುತ್ತಿತ್ತು. ಕಟ್ಟಡದೊಳಗಿದ್ದ ಒಂದೇ ಒಂದು ವಿಶಾಲ ಹಾಲನ್ನು ಹಲವು ಮೇಣದ ಬತ್ತಿಗಳು ಬೆಳಗಿದ್ದುವು. ಆ ಪ್ರಕಾಶವನ್ನು ಕಂಡ ಚಳಿಯಿಂದ ನಡುಗುತ್ತಿದ್ದ ಮುದುಕನ ಮುಖವರಳಿತು. ಅಲ್ಲಿ ಆತ ಹಲ ಆಕರ್ಷಕ ಯುವಕರನ್ನು ಕಂಡ. ಅವರೆಲ್ಲರ ಕೈಯಲ್ಲೂ ಹೊಳೆಯುವ ಕೋವಿಗಳಿದ್ದುವು. ಮತ್ತು ಈಗಷ್ಟೇ ಪ್ರಣಯದ ವಿಜಯ ತಿಳಿದವರಂತೆ ಸಂತೃಪ್ತರಾಗಿದ್ದರು ಆ ಕೋವಿಗಳೆಲ್ಲದರಿಂದ ಕೇಳಿಬರಬಹುದಾಗಿದ್ದ ಗುಂಡಿನ ಸಪ್ಪಳದ ಎಣಿಕೆ ಮುದುಕನಲ್ಲಿ ಉತ್ಸಾಹ ತುಂಬುವಂತಿತ್ತು.

...ಮುದುಕ ಆತುರದಿಂದ ಕೋವಿಯೊಂದನ್ನೆತ್ತಿಕೊಂಡ. ಆ ಭಾರಕ್ಕೆ ಆತನ ಬೆನ್ನು ಇನ್ನಷ್ಟು ಬಾಗುತ್ತಿರುವಂತೆ ಕಂಡುಬಂತು. ಆತನ ನಡುಗುವ ಬೆರಳುಗಳು ಆತ್ಮೀಯತೆಯಿಂದ ಕೋವಿಯ ಕೀಲಿಯನ್ನು ಸವರುತ್ತಿತ್ತು.

ಕೆಲ ನಿಮಿಷದ ನಂತರ ಅವರೆಲ್ಲಾ ಕಟ್ಟಡದಿಂದ ಹೊರ ಹೊರಟರು. ಮೇಣದ ಬತ್ತಿಗಳನ್ನೆಲ್ಲಾ ನಂದಿಸಲು ಆಜ್ಞೆಯಾಗಿತ್ತು. ಕತ್ತಲಲ್ಲಿ ಹೆಜ್ಜೆಹಾಕುತ್ತಿದ್ದ ಅದರು ಸದ್ದಾಗದಂತ ಬಹಳಷ್ಟು ಜಾಗ್ರತೆ ವಹಿಸುತ್ತಿದ್ದಂತಿತ್ತು ಮುದುಕನೀಗ ತನ್ನ ಬಳಿಯಲ್ಲಿ ನಡೆಯುತ್ತಿದ್ದ ಹೆಣ್ಣುದನಿಯವನೊಂದಿಗೆ ಹೇಳಿದ ತಮ್ಮಾ ನನಗೆ ಖಂಡಿತ ಭರವಸೆಯಿದ ನಾನು ನನ್ನ ಕಳೆದುಕೊಂಡ ವಸ್ತುವನ್ನು ಪಡೆದೇ ತೀರುತ್ತೇನೆಂದು ಸಾಯುವ ಮೊದಲು ನಾನದನು ಪಡೆದೇತೀರಬೇಕು.

ಅವರಲ್ಲಿಂದ ಕತ್ತಲಲ್ಲಿ ಮಿಯುತ್ತಿದ್ದ ಚಿಕ್ಕ ಪಟ್ಟಣವೊಂದನ್ನು ಪ್ರವೇಶಿಸಿದರು. ಚಿಕ್ಕ ಚಿಕ್ಕ ಗಲ್ಲಿಗಳ ಮೂಲಕ ಅವರು ರೈಲು ನಿಲ್ದಾಣ ತಲುಪಿದರು. ಅನಂತರ ಮುದುಕ ಎಣಿಸಿದಂತೆಯೇ ಎಲ್ಲಾ ನಡೆಯಿತು ಕೊಬ್ಬಿದ ಸೈನಿಕರು ಮತ್ತು ಇವರೊಳಗೆ ಗಂಭೀರ ಕಾಳಗ ನಡೆಯಿತು. ಹೆಣ್ಣು ದನಿಯವ ಮುದುಕನಲ್ಲಿ ಅವೇಶದಿಂದ ಮೀಸೆ ಹೊತ್ತ ಸೈನಿಕರು ಕಂಡಲ್ಲೆಲ್ಲಾ ಗುರಿಯಿಟ್ಟು ಗುಂಡು ಬಿಡಲು ಹೇಳಿದ.


ಕಾಳಗ ಇಡೀ ರಾತ್ರಿ ನಡೆಯಿತು. ಆದರೆ ಸೂರ್ಯ ಮೂಡುವುದರೊಳಗಾಗಿ ಅವರು ನಿಲ್ದಾಣವನ್ನು ವಶಪಡಿಸಿಕೊಂಡಿದ್ದರು ವಿಜಯದ ಗುರುತಿಗಾಗಿ ಯಾರೋ ಸ್ಟೇಶನಿನ ಮಾಡಿನ ಮೇಲೆ ಧ್ವಜವೊಂದನ್ನು ಹಾರಿಸಿದರು. ಗೋಡೆಯ ಮೇಲೆ ತಮ್ಮ ನಾಯಕನ ಭಾವಚಿತ್ರಗಳನ್ನು ಅಂಟಿಸಿದರು ಮತ್ತು ಅಲ್ಲಲ್ಲಿ ಹೆಣವಾಗಿ ಬಿದ್ದಿದ್ದ ತಮ್ಮವರ ದೇಹವನ್ನು ಹಿಂದೆ ಬಿಟ್ಟು ಅವಸರ ಅವಸರವಾಗಿ ನೆರೆಯ ನಗರದತ್ತ ಹೆಜ್ಜೆಹಾಕಿದರು.

× × ×

ಸ್ಟೇಶನ್ನಿನ ಹಿಂಬದಿ ಕಂಪೌಂಡಿನ ಮೂಲೆಯಲ್ಲಿ ಮುದುಕನೊಬ್ಬನ ಹೆಣ. ಆತನ ಮುಖದ ತುಂಬಾ ಸುಕ್ಕುಗಳು, ಧರಿಸಿದ್ದ ನೀಳ ಅಂಗಿಯ ತುಂಬಾ ಧೂಳು. ಆತನ ಬಳಿಯಲ್ಲೊಂದು ಗುರಿ ಹೊಡೆಯದ ಗುಂಡುಗಳು ತುಂಬಿದ್ದ ಹೊಳೆಯುವ ಕೋವಿ. ಆದರದು ದಾರಿಹೋಕರಿಗೆ ಕಾಣದಂತೆ ಪೊದೆಯೊಂದರ ಮರೆಯಲ್ಲಿತ್ತು. ದಾರಿಹೋಕನೊಬ್ಬ ಹೆಣದ ಸಮೀಪದಿಂದ ಹೊರ ಬರುತ್ತಿದ್ದ ಅಸಹ್ಯ ವಾಸನೆಗೆ ಜಿಗುಪ್ಸೆಪಟ್ಟು ಇನ್ನೊಬ್ಬನೊಂದಿಗೆ ಹೇಳಿದ-

ಈ ಜನರಿಗೆಲ್ಲಾ ಏನಾಗುತ್ತಿದೆಯೆಂದು ನಾನು ಕೇಳುತ್ತಿದ್ದೇನೆ. ಏನು ಹುಚ್ಚು ಹಿಡಿದಿದೆ ಹೇಳು, ನಮ್ಮ ದೇಶಕ್ಕೆ?...ಪಾಪಿಗಳು ನೋಡಿದಿಯಾ ಅಲ್ಲಿ ಆ ಹೆಣವನ್ನು ನಾನಲ್ಲಿ ಒಂದೆರಡು ವಾರಗಳಿಂದಲೂ ನೋಡುತ್ತಿದ್ದೇವೆ. ಪ್ರತೀ ರಾತ್ರಿ ಹೆಗ್ಗಣಗಳು ಅದನ್ನು ಕೊಂಚ ಕೊಂಚವಾಗಿ ಮುಗಿಸುತ್ತ ಬಂದಿದೆ. ಹೇಳು, ಈ ಮುಕ್ತಿ ಮುಕ್ತಿ ಎಂದು ಬೊಬ್ಬೆ ಹಾಕುತ್ತಿದ್ದಾರಲ್ಲಾ ಈ ಜನ. ಇದೇಯಾ ಉಪಯೋಗ ಅವರದ್ದು.

ಇದು ಇದೇ ರೀತಿ ನಡೆದಲ್ಲಿ ನೋಡುತ್ತಿರು, ಸುಮ್ಮನಿರುವುದಿಲ್ಲ ಜನ. ನಾನೆ ಮೊದಲ ಊರು ಊರುಗಳಿಗೆ ಬೆಂಕಿ ಕೊಡುವುದನ್ನು ಆರಂಭಿಸುತ್ತೇನೆ. ಮೊದಲು ಇಲ್ಲೆ ನನ್ನ ಪಟ್ಟಣದಿಂದಲೇ ಆರಂಭಿಸುವುದು!



ಅಸತ್ಯಮೇವ ಜಯತೇ?

ಚಿರಂಜೀವಿ

ಹಿಂದಿನಂತೆ ಈಗಿಲ್ಲ. ಅನೇಕ ಬದಲಾವಣೆಗಳಾಗಿವೆ. ಕಾಲವೇ ಬದಲಾಗಿರಲಿ ಅಥವಾ ಜನರೇ ಬದಲಾಗಿರಲಿ ನಾವು ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳಬೇಡವೆ?

'ಕಾಲ ಬದಲಾಯಿಸಿ ಹೋಗಿದೆ ಸ್ವಾಮಿ. ತುಂಬಾ ಬದಲಾಯಿಸಿ ಹೋಗಿದೆ!'

ನೀವು ಒಪ್ಪುತೀರೋ ಇಲ್ಲವೋ, ಈ ಕಾಲದಲ್ಲಿ ಎಲ್ಲರ ಬಾಯಲ್ಲೂ ಬರುವ ಮಾತು ಇದು. ಸ್ವಲ್ಪ ಮಂದಿ ಇದನ್ನೊಪ್ಪದವರು, "ಕಾಲ ಏನಾಗಿದೆ ಸ್ವಾಮಿ? ಕಾಲ ಏನೂ ಆಗಿಲ್ಲ. ಬದಲಾಯ್ಸಿರೋದು ಜನ, ಜನರ ಮೆಂಟಾಲಿಟಿ", ಎಂದೆಲ್ಲಾ ಹೇಳಬಹುದು. 'ಜನ ಏನ್ಮಾರ್ ಮಾಡ್ತಾರೆ, ಕಾಲಕ್ಕೆ ತಕ ಹಾಗೆ ನಡ್ಕೋತಾರೆ', ಎಂದು ಸ್ವಲ್ಪ ಜನ ಸಮರ್ಥಿಸಿಕೊಳ ಬಹುದು. ಕಾಲವಾದ್ರೂ ಬದಲಾಯಿಸಿರಲಿ ಅಥವಾ ಜನವಾದ್ರೂ ಬದಲಾಯಿಸಿರಲಿ, ಆದರೆ ಒಂದು ಮಾತಂತೂ ನೀವು ಖಂಡಿತಾ ಒಪ್ಪಬೇಕು: ಈಗ ಏನೇನೋ ಬದಲಾವಣೆಗಳಾಗಿವೆ. ಹಿಂದಿನ ಬದುಕಿದ್ದ ಹಾಗೆ ಈಗ ಬದುಕಿಲ್ಲ.

ಹಿಂದಿನ ಕಾಲದ ವಿಷಯಗಳನ್ನು ಸ್ವಲ್ಪ ಕೆದಕಿ ನೋಡೋಣ. ಆಗೆಲ್ಲಾ ಈಗಿನಂತೆ ಸ್ಕೂಲು–ಕಾಲೇಜುಗಳು ಇರಲಿಲ್ಲ. ಈಗಿನಂತೆ ತರಹೆವಾರಿ ಪುಸ್ತಕಗಳು ಪತ್ರಿಕೆಗಳು ಇರಲಿಲ್ಲ. ಹುಡುಗರು ಮೈಲಿಗಟ್ಟಲೆ ಸ್ಕೂಲಿಗಾಗಿ ಹೋಗಬೇಕಾಗಿರಲಿಲ್ಲ. ಬಸ್ಸುಗಳಲ್ಲಿ ನುಗ್ಗಿ–ಹೊಡೆದಾಡಿ ಸ್ಥಳಗಿಟ್ಟಿಸಿ ಕೆಲಸ ಮುಂದುವರಿಸಬೇಕಾಗಿರಲಿಲ್ಲ. ಇನ್ನೂ ಪಟ್ಟಿ ಮಾಡುತ್ತಾ ಹೋದರೆ ಈ ಕಾಲದ ಚಟುವಟಿಕೆಗಳಿಗೆ ಕೊನೆಯೇ ಇಲ್ಲ ಬಿಡಿ. ಹಿಂದಿನ ವಿಷಯಕ್ಕೆ ಬರೋಣ. ಆಗಿನ ಹುಡುಗರು ಹಾಯಾಗಿ ಗುರುಗಳ ಮನೆಯಲ್ಲಿಯೇ ಇದ್ದು ಬಿಟ್ಟು ಊಟ–ತಿಂಡಿಯನ್ನು ಅಲ್ಲೇ ಮುಗಿಸಿ, ಗುರುಗಳೋ ಗುರುಪತ್ನಿಯೋ ಹೇಳಿದ ಕೆಲಸ ಮಾಡಿಕೊಟ್ಟು ನಿಧಾನವಾಗಿ ವಿದ್ಯೆ ಕಲಿಯುತ್ತಿದ್ದರು. ಪದವಿಗಾಗಿಯೋ–ಕೆಲಸ ಗಿಟ್ಟಿಸಲಿಕ್ಕೋ ಅವರು ವಿದ್ಯೆ ಕಲಿಯುತ್ತಿರಲಿಲ್ಲ; ಜ್ಞಾನಾರ್ಜನೆ ಅವರ ಗುರಿ. ಎಷ್ಟೋ ವರ್ಷಗಳಾದ ಮೇಲೆ 'ನಿನ್ನ ವಿದ್ಯೆ ಮುಗಿಯಿತು', ಎಂದು ಗುರುಗಳು ಹೇಳಿದ ಮೇಲೆ ಹೊರಬಂದು ಬದುಕುವ ದಾರಿ ಹಿಡಿಯುತ್ತಿದ್ದರು. ವಿದ್ಯೆ ಮುಗಿಸುತ್ತಿದ್ದಂತೆಯೇ ಅವರಿಗೆ ಹೊಟ್ಟೆಯ ಪಾಡಿಗೂ ದಾರಿಯಾಗುತ್ತಿತ್ತು. ಬದುಕಿನುದ್ದಕ್ಕೂ ಗುರುಗಳು ಹೇಳಿಕೊಟ್ಟಂತೆ ಅವರು ಬಾಳಿ ಬದುಕುತ್ತಿದ್ದರು. ಅರ್ಥಾತ್ ಸತ್ಯಮೇವ ಜಯತೇ ಎಂಬುದೇ ಅವರ ಆದರ್ಶದ ಬದುಕಾಗಿತ್ತು.

ಇದು ಆಗಿನ ಬದುಕು, ಸ್ವಾಮಿ. ಸತ್ಯಮೇವ ಜಯತೇ ಎನ್ನುವುದು ಆಗಿನವರ ಮಂತ್ರ. ಅಷ್ಟೇ ಏಕೆ, ಮೊನ್ನೆ ಮೊನ್ನೆಯವರೆವಿಗೂ, ಮಹಾತ್ಮಾಗಾಂಧಿ ಇರುವವರೆವಿಗೂ ಈ ಮಂತ್ರಕ್ಕೆ ದೊಡ್ಡ ಅರ್ಥವಿತ್ತು. ಅಂದರೆ "ಕಲಿಯುಗವೆಲ್ಲಾ ಕೆಟ್ಟು ಹೋದ ಕಾಲ" ಎಂದು ಹೇಳಿಬಿಡುವಂತಿಲ್ಲ. ಏಕೆಂದರೆ ಸತ್ಯ–ನ್ಯಾಯ–ಧರ್ಮ ಅಂದುಕೊಂಡೇ ಬಾಳಿ ಬದುಕಿದ ಮಹನೀಯರ ಜೀವನ ಚರಿತ್ರೆಯ ಕೆಲವು ಹರಿದುಹೋದ ಪ್ರತಿಗಳು ಇನ್ನೂ ಉಳಿದುಕೊಂಡಿವೆ. ಅವುಗಳಲ್ಲಿ ಒಂದೆರಡನ್ನಾದರೂ ನಾವು ಓದಿದಲ್ಲಿ ಅವೆಲ್ಲಾ ಅರ್ಥವಾಗುತ್ತದೆ.

ಯಾವ ಯುಗದಲ್ಲಾಗಲೀ, ಯಾರ ಬದುಕನ್ನಾಗಲೀ ತೆಗೆದುಕೊಂಡು ನೋಡಿದಲ್ಲಿ, ಒಂದು ರೀತಿಯ ಬದುಕುವ ಮಾರ್ಗದ ಒಂದು ಚಿತ್ರ ಸಿಗುತ್ತದೆ. ಹೀಗ್ಹೀಗೆ ಮಾಡಿದರೆ, ಹೀಗೆ ಮಾತನಾಡಿದರೆ, ಹೀಗೆ ನಡೆದುಕೊಂಡರೆ ಹೀಗ್ಹೀಗೆ ಬದುಕಿಬಾಳಬಹುದು ಎಂದೆಲ್ಲಾ ಅರ್ಥವಾಗುತ್ತದೆ. ನಮ್ಮ ಹಿರಿಯರೆಲ್ಲಾ ಹಾಗೇ ಬಾಳಿದರು. ಸ್ವಾಮಿ ತಮ್ಮ ಹಿರಿಯರು ಹೇಳಿದಂತೆ ನಡೆದಂತೆ ಅವರೂ ಬದುಕಿದರು. ನಮ್ಮ ಕಾಲದಲ್ಲಿ ನಾವು ನಮ್ಮ ಹಿರಿಯರಿಂದಲೂ ಸ್ವಲ್ಪ ಕಲಿತೆವು. ಆದರೆ ಹೆಚ್ಚು ಕಲಿತದ್ದು ನಮ್ಮ ಸುತ್ತ ಮುತ್ತಲ ವೈವಿಧ್ಯಮಯ ಪರಿಸರದಿಂದ. ಅದರಿಂದಲೇ ಏನೋ ಆ ಸತ್ಯ–ನ್ಯಾಯ–ಧರ್ಮ ಎಂಬ ವಸ್ತುಗಳು ತೇಪೆತೇಪೆಯಾಗಿ ನಮ್ಮಲ್ಲಿ ಉಳಿದುಕೊಂಡವು.

ಈಗ ಸ್ವಲ್ಪ ಯೋಚನೆ ಮಾಡಿ ನೋಡಿ. ಈ ತೇಪೆಯ ಕೆಲಸದಿಂದ ನಾವು ಹಿಂದಿನವರೂ ಆಗಲಿಲ್ಲ. ಮುಂದಿನವರೂ ಆಗಲಿಲ್ಲ. ನೋಡಿದಿರಾ, ಇಲ್ಲೇ ಕೆಲಸ ಕೆಟ್ಟಿದ್ದು. ಏನೇನೋ ಆದರ್ಶಗಳನ್ನು ತಲೆಯಲ್ಲಿ ತುಂಬಿಕೊಂಡು ಬದುಕಿನ ವಾಸ್ತವಿಕತೆಯನ್ನು ನಾವುಗಳು ಯಾವ ಯೋಚನೆಯನ್ನೂ ಮಾಡಲಿಲ್ಲ.

ಇವೆಲ್ಲಾ ಯಾಕೆ ಹೇಳುವುದಕ್ಕೆ ಬಂದೆ ಅಂದರೆ, ಅದೇ ಕಾಲ ತುಂಬಾ ಕೆಟ್ಟು ಹೋಗಿದೆ ಎಂದು ಮಾತು ಪ್ರಾರಂಭಿಸಿದೆವಲ್ಲ, ಕಾಲವೋ, ಜನಗಳೋ ಬದಲಾಯಿಸಿ ಹೋದ ಮೇಲೆ ನಮ್ಮ ಮಕ್ಕಳು–ನಮ್ಮ ದೇಶದ ಭಾವೀ ಪ್ರಜೆಗಳು–ಈ ಬದಲಾಯಿಸಿದ ಪರಿಸರಕ್ಕೆ ಹೊಂದಿಕೊಳ ಬೇಡವೇ? ಈ ಕಾಲದಲ್ಲಿ ಒಳೆಯ ಪ್ರಜೆಯಾದರೆ ಮಾತ್ರ ಸಾಲದು ಸ್ವಾಮಿ, ಬದುಕಲು ಕಲಿಯಬೇಕು. ಬದುಕಲು ನಾನು –ನೀವು ನಮ್ಮ ಹಿರಿಯರಿಂದ ಕಲಿತಷ್ಟನ್ನು ಕಲಿತರೆ ಮಾತ್ರ ಕಲಿತಿದ್ದರೆ ಖಂಡಿತಾ ಸಾಲದು. ನಮ್ಮದು ಹಳೆಯ ಹೊಸದರ ತೇಪೆಯ ಬದುಕು. ಅದು ಯಾವುದಕ್ಕೂ ಉಪಯೋಗವಿಲ್ಲ. ಬದುಕಿ ಸುಖ ಪಡೆಯಬೇಕಾದರೆ ಈಗಿನ ಕೆಲವು ಬದುಕಿನ ಯಶಸ್ವಿ ಮುಖಗಳನ್ನು ತಳಪಾಯವನ್ನಾಗಿ ಇಟ್ಟುಕೊಂಡು ಒಂದು ವಿಶ್ವಾಮಿತ್ರ ಸೃಷ್ಟಿಯನ್ನು ನಾವೀಗ ಮಾಡಬೇಕು.

ಮೊನ್ನೆ ನನ್ನ ಮಗ ಹೇಳಿದ: 'ಅಣ್ಣಾ ಗುರುರಾಜ ನನಗೆ ಹೊಡೀತಾನೆ. ಆದ್ರೆ ನಾನು ಜಗಳಾನೇ ಆಡೋಲ್ಲ'. ಅವನ ಮಾತು ಕೇಳಿ ನನಗೆ ಒಂದು ನಿಮಿಷ ಕಸಿವಿಸಿ



ಯಾಯಿತು. 'ತುಂಬಾ ಜಾಣ', ಎಂದು ಬಿಡಲೇ ಅಂದು ಕೊಂಡೆ. ಆದರೆ ನಾಲ್ಕು ವರ್ಷ ವಯಸ್ಸಿನಿಂದಲೇ ಅವನು ಸುಮ್ಮನಿದ್ದು ಬಿಡುವ ಗುಣವನ್ನು ಬೆಳೆಸಿ ಕೊಂಡರೆ ಮುಂದೇನು ಗತಿ ಎಂದು ಥಟ್ಟನೆ ಅನಿಸಿತು. ಕೂಡಲೇ ಅವನಿಗೆ ಬದುಕುವ ಮಾರ್ಗದ ಪ್ರಥಮ ಕಾಂಡವನ್ನು ಉಪದೇಶಮಾಡಿದೆ:"ಅವ್ನು ಹೊಡೆಯೋಕೆ ಬಂದ್ರೆ ನೀನೂ ಹೊಡೆಯುವನ ಹಾಗೆ ಹೆದ್ರಿಸು. ಅವ್ನು ಸುಮ್ನಾದ್ರೆಸುಮ್ಮನಿದ್ದುಬಿಡು. ಹೊಡೆದ್ರೆ ನೀನೂ ಎರಡು ಬಿಡು. ಆದ್ರೆ ರಕ್ತ ಬರದ ಹಾಗೆ ನೋಡ್ಕೋ!"

'ಸ್ವ ರಕ್ಷಣೆ'ಯ ಮೊದಲ ಕಾಂಡವನ್ನು ಅವನಿಗೆ ಉಪದೇಶ ಮಾಡಿದಾಗಲೇ ನನಗೆ ಬದುಕಿನ ಉಳಿದೆಲ್ಲ ಕಾಂಡಗಳನ್ನೂ ಬರೆದಿಟ್ಟುಕೊಂಡುಬಿಡಬೇಕೆಂದು ಅನಿಸಿದ್ದು. ಇದೋ ನೋಡಿ. ಅವು ಈ ರೀತಿ ಇವೆ. ನಿಮಗೆ ಬೇಕಾದರೆ ಉಪಯೋಗಿಸಿಕೊಳ್ಳಿ. ನನಗಾಗಲಿ, ನನ್ನ ಸರ್ವಸ್ವಗಳ ಹಕ್ಕುದಾರಳಾದ ನನ್ನ ಹೆಂಡತಿಗಾಗಲೀ ನೀವು ಯಾವ ಗೌರವಧನವನ್ನೂ ಕೊಡಬೇಕಾಗಿಲ್ಲ.

ಅ) ಮುಂದಿನ ದಿನಗಳಲ್ಲಿ ಕೆಲಸ ಸಿಗುವುದು ಸ್ವಲ್ಪ ಕಷ್ಟವಾಗಬಹುದು. ತುಂಬಾ ಓದಿದವರಿಗೆ ಮಾತ್ರ ಪ್ರಾಶಸ್ತ್ಯ ಸಿಗಬಹುದು. ಅಂದರೆ ಓದದವರಿಗೆ ಕೆಲಸ ಸಿಗುವುದೇ ಇಲ್ಲವೆಂತಲ್ಲ. ಆದರೂ 'ಕ್ಷೇಮ ಪಕ್ಷ' (Safeside)ದಲ್ಲಿರುವುದಕ್ಕಾಗಿ ಸ್ವಲ್ಪ ಓದಿರುವುದು ಒಳೆಯದು. ಹೇಗೋ ಒಂದು ಪದವಿ ಸಂಪಾದಿಸಿಕೊಂಡು ಬಿಡಬೇಕು. (ಕೊಂಡುಕೊಳುವ ಹಾಗಿದ್ದರೆ, ಮಾರುವ ಕಂಪನಿ ಮತ್ತು ಅದರ ಅಧಿಕಾರಿಗಳ ಸರ್ವೀಸ್' ಬಗ್ಗೆ ಮೊದಲೇ ತಿಳಿದುಕೊಳು ವುದು ಕ್ಷೇಮ, ಏಕೆಂದರೆ ಅನಂತರದ ಅನಾಹುತಗಳಿಂದ ನಿಮ್ಮನ್ನು ಯಾರೂ ಕಾಪಾಡಲಾರರು.)

ಇ) ಕೆಲಸ ಬರೀ ಪದವಿ ಸಂಪಾದಿಸಿದವರಿಗೆಲ್ಲಾ ಸಿಕ್ಕಿ ಬಿಡುವುದಿಲ್ಲ. ಜೊತೆಗೊಂದು ಯೋಗ್ಯತೆಯೂ ಇರಬೇಕು. ಶಾಲಾ–ಕಾಲೇಜಿನ ದಿವಸಗಳಲ್ಲಿ ಯೂನಿಯನ್ ಚಟುವಟಿಕೆಗಳಲ್ಲಿ, ಸ್ಟ್ರೈಕು–ಗಲಾಟೆಗಳಲ್ಲಿ ಭಾಗ ವಹಿಸಿರುವುದು ಬಹಳ ಅಗತ್ಯ. ಇದರಿಂದ ಪೋಲೀಸಿನವರ, ಶಾಸಕರ, ಮಂತ್ರಿಗಳ ಗುರುತಾಗುತ್ತದೆ. ಇದು ಓದು ಮುಗಿಸುವುದಕ್ಕೆ, ಓದು ಮುಗಿದ ಮೇಲೆ ಕೆಲಸ ಗಿಟ್ಟಿಸುವುದಕ್ಕೆ ಉಪಯೋಗವಾಗುತ್ತದೆ.

ಇ) ಕೆಲಸಕ್ಕೆ ಸೇರುವ ಮೊದಲೇ ನಾಲ್ಕುಮಂದಿಯ ಮುಂದೆ ದಬಾಯಿಸಿ ಮಾತನಾಡಲು ಕಲಿತುಕೊಂಡು ಬಿಡಬೇಕು. ಎಲ್ಲೆಲ್ಲಿ ಹೇಗೆ ಮಾತನಾಡಬೇಕು ಎಂದು ತಿಳಿದುಕೊಳ ಬೇಕು. ಯಾರಾದರೂ ಏನಾದರೊಂದು ಪ್ರಶ್ನೆ ಕೇಳಿದರೆ, ವಿಸ್ತಾರವಾಗಿ ಅವರಿಗೆ ಮನದಟ್ಟಾಗುವಂತೆ, ಇರುವುದನ್ನು ಇದ್ದ ಹಾಗೆಯೇ ಹೇಳುವುದರಲ್ಲಿ ಇನ್ನು ಮುಂದೆ ಯಾವ ಉಪಯೋಗವೂ ಇಲ್ಲ: ಅರ್ಥವೂ ಇಲ್ಲ. ನಿಜವೋ, ಸುಳ್ಳೋ ಥಟ್ಟನೆ ಚುರುಕಾಗಿ– ಚುಟುಕದ ಹಾಗೆ ಉತ್ತರಿಸಿ ಪಾರಾಗುವ ಅಭ್ಯಾಸ ಮಾಡಿಕೊಳ ಬೇಕು. ಆದರೆ ಇಂತಹ ಉತ್ತರಗಳು ಯಾವಾಗಲೂ ಸುಳ್ಳೇ ಆಗಿರಬೇಕು ಎಂಬ ಕಡ್ಡಾಯವೇನಿಲ್ಲ. ಆಗಾಗ್ಗೆ ಒಂದೆರಡು ಸರ್ತಿ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ ದಂತೆ ನಿಜ ಹೇಳುವುದು ಒಳೆಯದು; ಕ್ಷೇಮ, ಅಥವಾ ವ್ಯಕ್ತಿಗೆ ಜಾಣತನ ಅತಿಯಾಗಿದ್ದು ಇನ್ಯಾವುದಾದರೂ ದಾರಿ ಥಟ್ಟನೆ ಹೊಳೆದರೆ ನಿಜ ಹೇಳಬೇಕಾಗಿಲ್ಲ. ನಿಜವನ್ನು 'ಕೊನೆಯ ಅಸ್ತ್ರ' (Last resort)ವಾಗಿ ಉಪಯೋಗಿಸಿಕೊಳ ಬಹುದು.



ಈ) ಇಷ್ಟೆಲ್ಲಾ ಪರಿಶ್ರಮವಾದ ಮೇಲೆ ಕೆಲಸ ಖಂಡಿತಾ ಸಿಕ್ಕೇ ಸಿಗುತ್ತದೆ. ಕೆಲಸ ಸಿಕ್ಕ ಹೊಸದರಲ್ಲಿ ಎಲ್ಲಂದರಲ್ಲಿ ಬಿಸಾಡುತ್ತಾರೆ. ಯಾವುದೆಂದರೆ ಆ ಕೆಲಸ ಮುಂದಿಕ್ಕುತ್ತಾರೆ. ಮೊದಲ ಒಂದು ವರ್ಷ ತಾಳ್ಮೆಯಿಂದ ಎಲ್ಲೆಲ್ಲಿ ಏನೇನಾಗುತ್ತಿದೆ ಎಂದು ತಿಳಿದುಕೊಂಡು ಬಿಡಬೇಕು. ಈಗಾಗಲೇ ಹತ್ತು–ಹದಿನೈದು, ಇಪ್ಪತ್ತು ವರ್ಷ ಸರ್ವೀಸ್ ಆಗಿರುವವರು ಏನೇನು ಹೇಗೆ ಮಾಡುತ್ತಾರೆ ಎಂದು ನೋಡಿಕೊಳ ಬೇಕು. ಸಾಹೇಬರ ಆಫೀಸಿನಲ್ಲಿ ನಡೆಯುವ ಚಟುವಟಿಕೆಗಳನ್ನು, ತಿಳಿದುಕೊಳ ಬೇಕು. ಸಾಹೇಬರ ಆಫೀಸಿನ ಜವಾನನನ್ನೋ–ಕಾರಕೂನನನ್ನೋ 'ಫ್ರೆಂಡ್' ಮಾಡಿಕೊಳ ಬೇಕು. ಹೇಗಾದರೂ ಮಾಡಿ ಸಾಹೇಬರ ದೃಷ್ಟಿಗೆ ಬೀಳಬೇಕು. ಅವರ ಮನೆಗೆ ಆಗಾಗ ಹೋಗಬೇಕು. ಅವರ ಮನೆಯ ಕೆಲಸ ಮಾಡಿಕೊಡಬೇಕು.

ಸಾಹೇಬರ ಗುರುತಾದ ಕೂಡಲೇ ಹತ್ತಿರದ ಮೇಲಿನವರನ್ನು ಕಡೆಗಾಣಿಸಬಾರದು. ಇದರಲ್ಲಿ ಅತಿ ಸೂಕ್ಷ್ಮವಾದ ಅಂಶ ಅಡಗಿದೆ. ಯಾರನ್ನೂ ಕೆಟ್ಟವರನ್ನಾಗಿಸಿಕೊಳ ಬಾರದು. ಸಾಹೇಬರ ಜೊತೆಗೆ ಸಂಬಂಧವಿರುವುದರಿಂದ ಯಾರೂ ನಿಮ್ಮ ತಂಟೆಗೆ ಬರುವುದಿಲ್ಲ.

ಮೇಲಿನವರಿಗೆ, 'ಹೌದು', 'ನೀವೇ ಸರಿ'. 'ಆಗಲಿ' ಮೊದಲಾದ ಪದಗಳನ್ನು ಕಂಡರೆ ಬಹಳ ಇಷ್ಟ. ಸಾಧ್ಯವಿದ್ದಾಗಲೆಲ್ಲಾ ಅದನ್ನು ಅವರ ಮುಂದೆ ಬಳಸಬೇಕು.

ಉ) ಯಶಸ್ವೀ ರಾಷ್ಟ್ರ ನಾಯಕರ ಬದುಕಿನ ಗೆರೆಗಳನ್ನು ಅಭ್ಯಾಸ ಮಾಡಬೇಕು. ಹಣ, ನೆಲ, ಅಂತಸ್ತು, ಪದವಿಗಳನ್ನು ಅವರು ಹೇಗೆ ಸಂಪಾದಿಸಿದರು ಎಂದು ತಿಳಿದುಕೊಳ ಬೇಕು. ಆಗಾಗ್ಗೆ ಪತ್ರಿಕೆಗಳಲ್ಲಿ ಬರುವ ವಿರೋಧ ಪಕ್ಷದವರ ಹೇಳಿಕೆಗಳನ್ನು ತಪ್ಪದೇ ಓದುತ್ತಿದ್ದರೆ ಉಪಯೋಗವಾಗುತ್ತದೆ. ಆಳುವ ಪಕ್ಷದವರ ಗುಟ್ಟನ್ನೆಲ್ಲಾ ಅವರು ರಟ್ಟು ಪಡಿಸುತ್ತಿರುತ್ತಾರೆ. ಇದರ ಜೊತೆಗೆ ಯಾವಾಗಲೂ ಆಳುವ ಪಕ್ಷದ ಗಟ್ಟಿ ವ್ಯಕ್ತಿಯ ಕ್ಯಾಂಪಿನಲ್ಲಿ ಇರುವುದು ಲಾಭಕರ. ಆದರೆ ಆ ವ್ಯಕ್ತಿಯಾಗಲಿ, ಅವನ ಪಕ್ಷವಾಗಲಿ ಉರುಳಿದರೆ ಪಕ್ಷಾಂತರ ಮಾಡಲು ಯೋಚಿಸಬಾರದು, ಭಾವಾತಿರೇಕಕ್ಕೆ ಗುರಿಯಾಗಬಾರದು. ಇದು ಬಹಳ ಮುಖ್ಯ.

ಇಲ್ಲಿಗೆ ಸ್ಥೂಲವಾಗಿ ಬದುಕನ್ನು ಒಂದು ರೀತಿ ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಕಲಿತಂತಾಗುತ್ತದೆ. ವಯಸ್ಸಾಗುತ್ತ ಹೋದಂತೆ ಈ ಎಲ್ಲ ಕಾಂಡಗಳು ಮೈಗೆ ಹತ್ತಿ ಜೀರ್ಣವಾಗ ತೊಡಗಿದಂತೆ, ಮುಂದೆ ಏನೇನು ಮಾಡಬೇಕು ಎಂಬುದು ಹೊಳೆಯುತ್ತಾ ಹೋಗುತ್ತವಾದ್ದರಿಂದ ಆ ಬಗ್ಗೆ ಈಗಲೇ ಚಿಂತಿಸಬೇಕಾಗಿಲ್ಲ.

ಬದುಕಿಗೆ ಅರ್ಥ ಏನು? 'ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ', ಎಂದಷ್ಟಿದ್ದರೇ ಸಾಲದು. ಕಷ್ಟಗಳೇ ಬರದಂತೆ ನೋಡಿಕೊಳ ಬೇಕು. ಇದಕ್ಕೆ ಎಷ್ಟು ವೆಚ್ಚವಾದರೂ ಚಿಂತಿಲ್ಲ. ಯಾವ ಕತ್ತೆಯ ಕಾಲು ಕಟ್ಟಿದರೂ ಪರವಾಗಿಲ್ಲ. ಕೆಲಸ ಸುಲಭವಾಗಿ ಆಗಬೇಕು. ವಿಧಿ ಬರೆದಿರುವುದಷ್ಟನ್ನೇ ಅನುಭವಿಸಿ ಮರಳಿ ಮಣ್ಣಿಗೆ ಹೋಗುವುದಲ್ಲಿ ಯಾವ ಅರ್ಥವೂ ಇಲ್ಲ. 'ಕಾಲಾಯ ತಸ್ಮೈನಮಃ' ಎಂಬುದನ್ನು ಮರೆಯಬಾರದು



ಪಲಾಯನ

ದು. ನಿಂ. ಬೆಳಗಲಿ

ವಿಜಾಪುರದ ಕೊನೆಯ ಬಸ್ಸು ಬಂದು ಹೋಗಿರುತ್ತದೆ. ಆಗ ಕತ್ತಲೆ ಕರೀ ಚಂದ್ರಕಾಳಿ ಸೀರೆ ಉಟ್ಟಂತೆ, ಇನ್ನಿಷ್ಟು ದಟ್ಟಾಗಿ ಸಮಯ ಸರಿ ಹೊತ್ತಿಗೆ ನೆರೆಯಾಗಿರುತ್ತದೆ. ಹನುಮ ಅದಾಗಲೇ ತೂರಾಡುತ್ತ ಕಣ್ಣೆದುರು ವೃತ್ತಾಕಾರ ಸುತ್ತುತ್ತಲಿರುವ ಬೀದಿ ದೀಪಗಳ ಜಾಳಿಗೆಯಿಂದ ನುಸುಳುತ್ತಿರುವಂತೆ ಪಾರಾಗುವ ತೆರ ಕೇರಿ ಸೇರಲು ಪ್ರಯತ್ನಿಸುತ್ತ ಬರುತ್ತಿರುತ್ತಾನೆ. ಅಂದು ವಸೂಲಾದ

ದೀನದಲಿತರ ಉದ್ಧಾರಕ್ಕೆ ಪ್ರತಿಜ್ಞೆಗೈದ ಚಂದ್ರ, ಚೆಂದೊಳ್ಳೆ ಹೆಣ್ಣು ಸುಂದರಿಯನ್ನು ಮದುವೆಯಾಗುವದಾಗಿ ಹೇಳಿ ವಂಚಿಸಿದ. ಅದರ ಪರಿಣಾಮ.......

ಹಮಾಲಿ ರೊಕ್ಕ ಪೂರ್ತಿ ಗಡಂಗದವನಿಗೆ ಸಲ್ಲದಿದ್ದರೆ ಚೂರು ಚಾರು ಬಾಕಿ ಇದ್ದರೂ, ಹನುಮನ ಗಂಟಲಲ್ಲಿ ಇಳಿಯುವ ಪ್ರಮಾಣವೇನೂ ಕಡಿಮೆಯಾಗದು. ಬಾಕಿ, ಉದ್ರಿ ಈ ಮಾತು ಹನುಮನ ಪಾಲಿಗೆ ಅಂಥ ತಲೆ ತಿನ್ನುವ ಸಂಗತಿಗಳಲ್ಲ. ಆತ ಪೈಸಾ ಕೂಡ ಬಾಕಿ ತೀರಿಸುವ ಪ್ರಾಮಾಣಿಕ ಗಿರಾಕಿ. ಸಿಂದಿ ಅಂಗಡಿಯವನಿಗೆ ಇದೆಲ್ಲ ಗೊತ್ತು.

ಹನುಮನ ಸಮತೂಕವಿಲ್ಲದ ತಲೆಗೆ ಹೊಳೆಯದಿದ್ದರೂ, ಆತನ ಮೂಗು ಅದಾಗಲೆ ಆಕೆಯ ಮನೆಯ ವಾಸನೆಯನ್ನು ಗ್ರಹಿಸಿರುತ್ತದೆ. ಲಲಲ...' ಎಂದು ಆಲಾಪನೆ ಪ್ರಾರಂಭಿಸಿ, ಬೇಸೂರ ರಾಗದ ಬೆನ್ನ ಹತ್ತಿ ಒರಟು ನಾಲಗೆ ಸೊಟ್ಟಾಗಿಸಿ, ಕೈ ತಿರುವುತ್ತ, ಜೋಲಿ ಹೊಡೆಯುತ್ತ,

"ಒಳ್ಳೊಳ್ಳೇ ಹೆಣ್ಣೇನ ನೆನಪಾನs ನೆನಪೋsss
ಆದೂ ಆಕಿಯಾಂಗ ಯಾರ‍್ಯಿಲ್ಲ ಒನಪೋsss
.... ಒನಪೋsss!"

ಎಂದು ಅಡ್ಡ ತಿಡ್ಡ ಹಾಡಿಕೊಳ್ಳುತ್ತಾನೆ. ಈ ಹಾಡು ಯಾರು ಹೇಳಿದ್ದೋ, ಆತನ ಬಾಯಿಗೆ ಬಂದದ್ದೋ ಆತನಿಗೇ ಗೊತ್ತು. ಆದರೂ ದಿನನಿತ್ಯ ಸುಂದರಿಯ ಮನೆ ಸಮೀಪಿದರೆ ಆತನ ಬಾಯಿ ಒದರಲೇಬೇಕು.

"ಬಂದ.ಪಾ, ಎಲ್ಲಾರ ನಿದ್ದಿ ಕೆಡ್ಸಿಕೋತ! ರಾತ್ರಿ ಹನ್ನೊಂದಾತ ಕಾಣತೈತಿ..." ಎಂದು ಜೀವಣ್ಣ ಕಾಕಾ, ಹಾಸುಗೆಯಲ್ಲಿಯೇ ಮಗ್ಗಲು ಬದಲಿಸುತ್ತ ತನ್ನಲ್ಲಿಯೇ ಗುಣುಗಿಕೊಳ್ಳುತ್ತಾನೆ. ಹನುಮ್ಯಾನ ಬಗ್ಗೆ ಮರುಕವನ್ನೂ ಪಡುತ್ತಾನೆ. ಅದೆಷ್ಟೋ ಸಾರೆ ಆತ ಉಪಾಯವಾಗಿ "ಇದೆಲ್ಲಾ ಚಂದಲ್ಲೋ ಹನಮ್ಯಾ, ಸುಂದ್ರಿ ಅಂಥಾಕಿ ಅಲ್ಲ. ಹಾಂಗೆಲ್ಲಾ ಹಾಡಬಾರ್ದೊ" ಎಂದು ತಾಕೀತು ಮಾಡಿದ್ದರೂ ಅದೆಲ್ಲ ಕೇರಿಯ ಅನೇಕರು, ಹನುಮ ಸಹಿತ ಇದೇ ಜೀವಣ್ಣ ಕಾಕಾನ ಮುಂದೆ ಎಲ್ಲಪ್ಪನ ಮೇಲೆ ಆಣೆಯಿಟ್ಟು ಸಿಂದಿ ಕುಡಿಯುವದಿಲ್ಲವೆಂದು ಹೇಳಿ, ಸಿಂದಿಯ ಗಡಿಗೆಯನ್ನೇ ಕೊರಳಿಗೆ ಕಟ್ಟಿಕೊಂಡಂತಾಗಿತ್ತು. ಆದರೂ ಹನುಮ್ಯಾ ಅಂಥ ಅಪಾಯಕಾರಕ ಪ್ರಾಣಿ ಅಲ್ಲವೆಂದು ಜೀವಣ್ಣನಿಗೆ ಗೊತ್ತು.

ಸುಂದರಿಗೆ ಇನ್ನೂ ನಿದ್ರೆ ಬರದಿದ್ದರೆ, ಹಾಗೇ ಯಾವ ಕಥೆಯನ್ನೋ, ಕಾದಂಬರಿಯನ್ನೋ ಓದಿಕೊಳುತ್ತ ಹಾಸುಗೆಯಲ್ಲಿ ಒರಗಿದ್ದರೆ, ಹನುಮನ ಹಾಡು ಕಿವಿ ಸೇರಿದಾಗ ನಕ್ಕು ಬಿಡುತ್ತಾಳೆ. ಆ ಹಾಡು ತನ್ನನ್ನೇ ಕುರಿತಾಗಿದ್ದರೂ ಸುಂದರಿ ಸಿಡಿಮಿಡಿಗೊಳ್ಳದೆ ಆತನ ದರಿದ್ರ ಸ್ಥಿತಿ ಕಂಡು, ದಾರುಣ ಗತಿ ತಿಳಿದು, ನಗೆಯನ್ನೇ ಅರಳಿಸುತ್ತಾಳೆ. ಅದು ತಾತ್ಸಾರದ ನಗೆಯೂ ಅಲ್ಲ. ಒಂದು ರೀತಿಯ ಹನುಮನ ನಿಸ್ಸಹಾಯಕ ಪರಿಸ್ಥಿತಿ, ತಾರಾಸ್ಪರ್ಶದ ಸಾಹಸ ಕಂಡು ಇನ್ನೊಂದು ಬಗೆಯ ಅನುಕಂಪದ ನಗೆ ಅದು.

ಬೇರೊಂದು ಕೋಣೆಯಲ್ಲಿದ್ದ ಸುಂದರಿಯ ತಾಯಿ ರಾಣವ್ವಳಿಗೆ ಮಾತ್ರ ಹನುಮನ ಈ ಹಾಡು ಸೇರದು. ಈ ಹಿಂದೆ ಅದೆಷ್ಟೋ ಸಲ ಹನುಮನಿಗೆ ತನ್ನ ಮನೆಯ ಮುಂದೆ ಹೀಗೆ ಹಾಡುತ್ತ ಹೋಗಬಾರದೆಂದು ಕಣ್ಣು ಕಿಸಿದು ಹೇಳಿದ್ದರೂ, ಆತನಿಗೆ ಅದೆಷ್ಟೋ ಕೈ ಚಾಚಿ ಅಂಜಿಕೆ ಹಾಕಿದ್ದರೂ, ಕುಡಿದ ನಿಶೆಯಲ್ಲಿ ಆತನ ಬಾಯಿ ಹಾಗೆ ಬೊಗಳುವುದೇ ಸರಿ! ಅದಕ್ಕೆ ಯಾವ ಲಂಗೂ ಇಲ್ಲ, ಲಗಾಮೂ ಇಲ್ಲ. ರಾಣವ್ವನ ಪಕ್ಕದಲ್ಲಿ ಯಾರಾದರೂ ಇದ್ದರೆ ಅದನ್ನೂ ಮರೆತು ಆಕೆ ಆ ಹಾಡಿನಿಂದ ಮುಖ ಗಂಟಾಗಿಸಿ, ಅನಂತರ ತಪ್ಪಿನ ಅರಿವಾಗಿ ಗಿರಾಕಿಯ ಸಂತೃಪ್ತಿಗಾಗಿ ಮುಖ ಅಗಲಿಸಿದ್ದೂ ಉಂಟು.

ಹನುಮನ ಹೆಜ್ಜೆ ತಡವರಿಸುತ್ತ, ಅಟ್ಟದ ಮೇಲೊಂದು ಬೆಟ್ಟದ ಮೇಲೊಂದಾಗಿ ಇನ್ನೂ ಐದಾರು ತಗ್ಗುಗಳನ್ನು ದಾಟುತ್ತವೆ.

ರಾತ್ರಿಯ ಮೌನವನ್ನು ಸೀಳಿಕೊಂಡು ಹನುಮನ ಹಾಡು ಅಲೆ ಅಲೆಯಾಗಿ ಪಸರಿಸುತ್ತಲೇ ಇರುತ್ತದೆ.

ಊರಿಗೆ ಬಂದಾಗ ತನ್ನ ಕೋಣೆಯಲ್ಲಿ ವಿದ್ಯುತ್ ಬೆಳಕಿನಲ್ಲಿ ಪತ್ರಿಕೆಯನ್ನು ಓದುತ್ತಲೋ, ಲೇಖನವನ್ನು ಬರೆಯುತ್ತಲೋ ಇದ್ದ ಚಂದ್ರ ಆ ಹದಗೆಟ್ಟ ಧ್ವನಿ ಕೇಳಿ, ಎದ್ದು ಬಾಗಿಲು ತೆರೆದು ಹನುಮ್ಯಾನ ಕುತ್ತಿಗೆ ಹಿಸುಕಲೇ ಎಂದು ಬೆಂಕಿಯಾಗಿ, ಮತ್ತೆ ಕೈ ಮುಷ್ಟಿ ಬಿಗಿದು ತಾನೇ ಗುದ್ದಿಕೊಳ್ಳುತ್ತಾನೆ. ಬೆಂಗಳೂರಿಗೆ ಹೋಗುವ ಮುಂಚೆ ಐದಾರು ಸಲ ಆತನಿಗೆ ತಾಕೀತು ಮಾಡಿ ಮೂರು ನಾಲ್ಕು ಸಲ ಕಣ್ಣು ಕಿಸಿದು, ಒಂದೆರಡು ಸಾರೆ ಆತನ ಬೆನ್ನಿಗೆ ಬಾರಿಸಿದ್ದರೂ, ಹನುಮನ ರಾಗಕ್ಕೆ ತಡೆಯಾಗಿರಲಿಲ್ಲ. ವಿದ್ಯುತ್ ಪೂರೈಕೆ ನಿಂತರೂ ಟ್ರಾನ್ಸಿಸ್ಟರ್ ಗೊಗ್ಗರು ಮಾಡಿದಂತೆ ಆತ ದಿನನಿತ್ಯ ಹಾಡಿಕೊಳ್ಳುವವನೇ. ಅನೇಕ ಸಲ ಚಂದ್ರ ಈ ಹಾಡಿನ ಬಗೆಗೆ ಸುಂದರಿಗೂ ಹೇಳಿದ್ದಾನೆ. ಆಕಿಯಾದರೂ ಅದೇನನ್ನು ಮಾಡಬೇಕು? "ತನಪುರ್ತೆ ತಾ ಹಾಡಿಕ್ಕೊಂತ ತಿರಗತೈತಿ. ನಾಯಾರಾ ಏನ್ ಮಾಡ್ಲಿ?" ಎಂದಿಷ್ಟೇ ಹೇಳಿ ನಕ್ಕುಬಿಡುತ್ತಾಳೆ ಆಕೆ.

ಹನುಮ, ಕೇರಿಯ ಜನರೆಲ್ಲರ ಬಾಯಲ್ಲಾಯಿತು, ಊರಲ್ಲಿಯ ಎಲ್ಲರ ಕರೆಯಲ್ಲಾಯಿತು, 'ಹನಮ್ಯಾ' ಎಂದಾದವನ ಹಿಂದು ಮುಂದು, ಮೇಲೆ ಕೆಳಗೆ ಯಾರೂ ಇಲ್ಲ. ಯಾರು ಸಂಬಂಧಿಕರೋ, ಅದಾರು ಸೂತ್ರದವರೋ ಎಂದು ತಿಳಿಯುವ ಗೊಡವೆಗೂ ಆತ ಹೋಗಿಲ್ಲ. ಬೆಳಗಿನಿಂದಲೂ ರಾತ್ರಿಯವರೆಗೆ ಬಸ್ ನಿಲ್ದಾಣದಲ್ಲಿ ಹಮಾಲಿ, ಬಸ್ಸಿನ ಸುಳಿವಿಲ್ಲದಿದ್ದಾಗ ಬಿಡುವಿನಲ್ಲಿ ಮತ್ತೇನಾದರೂ ಅತ್ತಿತ್ತ ಭಾರ ಎತ್ತಿ ಸಾಗಿಸುವ ಕೂಲಿ, ಎಲ್ಲಿಯಾದರೂ ತಿನಿಸು, ರಾತ್ರಿ ಕುಡಿತ ಹೀಗೆ ದಿನಗಳೆಯುವುದು. ಆತನೂ ಮನುಷ್ಯ, ಗಂಡಸು. ವಯಸ್ಸು ಮೂವತ್ತು ದಾಟಿದ್ದರೂ ಮದುವೆಯ ಬಗ್ಗೆ ಅದಾರು ಚಿಂತಿಸಬೇಕು. ಎಂದು ಕೇಳುವುದಕ್ಕಿಂತ ಇಂಥ ಎರೆಮಣ್ಣಿನ ಬಣ್ಣದ ಡೊಗರು ಮರದ ಮೋರೆಯನ್ನು ಯಾರು ಕಟ್ಟಿಕೊಳ್ಳಬೇಕೆಂಬ ಪ್ರಶ್ನೆಯೇ ಪ್ರಾಮುಖ್ಯತೆ ಪಡೆದಿದೆ. ಕೇರಿಯಲ್ಲಿ ಕೂಸು ಅಳುತ್ತಲಿದ್ದರೆ "ಹನುಮ್ಯಾ ಬಂದ. ಹಿಂಡ್ಕೊಂಡ ಹೋಗ್ತಾನ ನೋಡ" ಎಂದು ಭಯ ತೋರಿಸಿ ಮಕ್ಕಳನ್ನು ಮೌನಗೊಳಿಸುವಷ್ಟು ಅಪರೂಪ ಕುರೂಪ ಪಡೆದುಕೊಂಡು ಬಂದಿದ್ದ ಆತ.

ಆತನ ಬಗೆಗೆ ಯಾರು ಏನೇ ಅನ್ನಲಿ, ಆತನ ಎದೆಗೇನೂ ಚುಚ್ಚುವುದಿಲ್ಲ. ಅದೇಕೆ? ಇದೇ ಕೇರಿಯ ಸಾಂವಿ, ನೀಲಿ, ಎಲ್ಲಿ, ಕಾಳಿ, ಬಾಳಿ ಅದೆಷ್ಟು ಸಾರೆ ಹನುಮ್ಯಾನ ಪೌರುಷಕ್ಕೆ ಆಹ್ವಾನ ಕೊಟ್ಟಂತೆ 'ಯಾಂಸೀ ದೀಡಿ ಮಾತನಾಡುತ್ತಿಲ್ಲ. ! ಆತ "ಹೊಲಿ

ದೀಪಾವಳಿಯು ಸಕಲರಿಗೂ ಸುಖವಾಗಲಿ;

ಅಶೋಕ ಲಾಡ್ಜ

ಅಶೋಕ ರೋಡ್, ದಾವಣಗೆರೆ-೧

ಉತ್ತಮ ವಸತಿ ಮತ್ತು ನಮ್ರ ಸೇವೆಗೆ
ಒಮ್ಮೆ ಭೇಟಿ ಕೊಡಿರಿ.

ರೈಲ್ವೆ ಸ್ಟೇಶನ್, ಬಸ್ ನಿಲ್ದಾಣ, ಅಂಚೆ ಕಚೇರಿ, ಬ್ಯಾಂಕುಗಳು
ಪ್ರಮುಖ ವಾಣಿಜ್ಯ, ಕೈಗಾರಿಕಾ ಸಂಸ್ಥೆಗಳು ಹೀಗೆ
ಎಲ್ಲದಕ್ಕೂ ಸಮೀಪವಿರುವ ಏಕೈಕ

ವಸತಿ ಸೌಕರ್ಯದ ಕೇಂದ್ರ

ಪ್ರೊಪ್ರೈಯಿಟರ್ಸ್ :
ಕೋಮಲ ಎಂಟರ್‌ಪ್ರೈಜಸ್,
ದಾವಣಗೆರೆ.

ದೀಪಾವಳಿಯ ಶುಭಾಶಯಗಳು

ಜನತಾ ಫೈನಾನ್ಸಿಯಲ್ ಕಾರ್ಪೋರೇಶನ್ (ರಿ)

ರಮಾನಂದ ಬಿಲ್ಡಿಂಗ್, ದಾವಣಗೆರೆ

— ದೀಪಾವಳಿ ಹಬ್ಬದ ವಿಶೇಷ ಉಡುಗರೆ —

**ಫಿಕ್ಸೆಡ್ ಡಿಪಾಜಿಟ್‌ಗಳಿಗೆ
ನೀಡುವ ಹೆಚ್ಚಿನ ಬಡ್ಡಿದರ
14% ರಿಂದ 15% ವರೆಗೆ**

ನಿಮ್ಮ ಹಣವು ನಿಮಗಾಗಿ ಅತಿ ಹೆಚ್ಚುಗಳಿಸಲಿ

ಪ್ರಮುಖ ವಾಣಿಜ್ಯೋದ್ಯಮಿಗಳು ಹಾಗೂ
ವ್ಯಾಪಾರೋದ್ಯಮದಲ್ಲಿ ಅನುಭವವುಳ್ಳವರಿಂದ
ನಡೆಸಲ್ಪಡುವ ಸಂಸ್ಥೆ.

ಮ್ಯಾನೇಜಿಂಗ್ ಪಾರ್ಟನರ್ : ಮ್ಯಾನೇಜರ್ :
A. ಕೊಟ್ರಪ್ಪ B. M. ವಾಗೀಶ ಶಿವಾಚಾರ್ಯ,
B. A. B. L

ದೀಪಾವಳಿಯ ಶುಭಾಶಯಗಳು

**ಕಾರ್ತಿಕೇಯ ಎಲೆಕ್ಟ್ರಿಕ್ ಮೋಟಾರು
ಗಳು, ಪಂಪುಗಳು ಮತ್ತು
ಮೋನೋ ಬ್ಲಾಕ್‌ಸೆಟ್ಟುಗಳನ್ನು
ಉಪಯೋಗಿಸಿರಿ.**



ತಯಾರಕರು :

ಕಾರ್ತಿಕೇಯ ಫೌಂಡ್ರಿ

ಪಾಪನಾಯಕನಪಾಳಯಂ, ಕೊಯಂಬತ್ತೂರು -37

★

ಹೆಚ್ಚಿನ ವಿವರಗಳಿಗೆ ಇವರಲ್ಲಿ ವಿಚಾರಿಸಿರಿ

ಕೇಜ್ ಎಜನ್ಸೀಜ್

4. ಸಿಲ್ವರ್‌ಜೂಬಿಲಿ ಪಾರ್ಕ ರಸ್ತೆ,
ಬೆಂಗಳೂರು-560002
ಫೋನ್ : 27849 P.P.

ಕರ್ನಾಟಕ ಅಗ್ರೊ ಇಂಡಸ್ಟ್ರೀಸ್ ಕಾರ್ಪೋರೇಷನ್,
ಕರ್ನಾಟಕ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕ್,
ಕರ್ನಾಟಕ ಕೇಂದ್ರ ಭೂ ಅಭಿವೃದ್ಧಿ ಸಹಕಾರ ಬ್ಯಾಂಕ
ಮತ್ತು ಬೇರೆ ಅನೇಕ ಬ್ಯಾಂಕುಗಳಿಂದ
ಅಂಗೀಕೃತವಾಗಿವೆ.

ಶೂಳ್ಯಾರ್ಯಾ…ಥೂ…" ಎಂದುಗುಳಿ ಹಳಿಯುವು ದನ್ನು ಬಿಟ್ಟು ಇನ್ನೇನೂ ಅನ್ನುತ್ತಿಲ್ಲ. ಅವರನ್ನೆಲ್ಲ ಜಜ್ಜಬೇಕೆಂದರೂ, ಸುಂದರಿಯ ಮುಖ ಸ್ಮರಿಸಿ "ಸುಂದ್ರಿ ಮುಂದ ಇವ್ನ್ಯೆಲ್ಲಾ ನಿವಾಳಿಸಿ ಚಲ್ಲಬೇಕು" ಎಂದುಕೊಂಡು ತನಗಿಷ್ಟಳಾದ ಸುಂದರಿಯ ಬಗೆಗೆ ಮರುಕ್ಷಣ ಹೆಮ್ಮೆ ತಾಳಿ. ನಾಲಗೆ ಚಪ್ಪರಿಸುವಲ್ಲಿ ಜೊಲ್ಲು ಸುರಿಯುತ್ತದೆ. ಅಷ್ಟೇ.

ಹನುಮನ ಕೈ ಕತ್ತಲಲ್ಲಿಯೇ ತಡಕಾಡಿ ತನ್ನ ಮುರುಕು ಬಾಗಿಲು ಬೀಗವನು ಹುಡುಕುತ್ತಲಿರುತ್ತದೆ. ಅದೇನು ನೆನಪೋ! ಆದೇ. "ಒಳೊಳ್ಳೇ ಹೆಣ್ಣೀನ ನೆನಪಾನ ನೆನಪೋ…" ಇದರ ಸ್ಮರಣೆಯಲ್ಲಿ ಮತ್ತೇನನ್ನೋ ಮರೆತವರಂತೆ "ಓ ಮರ್ತ ಬಂದ್ನೆಲ್ಲ!" ಎಂದು ಬಾಗಿಲು ಮುಟ್ಟಿದ ಕೈ ಹಿಂದೆ ಸರಿದಂತೆ ಹಾಗೇ ಜೋಲಿ ಹೊಡೆಯುತ್ತಲೆ ಹನುಮ ಹಿಂದಿರುಗುತ್ತಾನೆ.

ಸುಂದರಿಯ ಕಿಟಕಿಯಿಂದ ದೀಪದ ಮಂದ ಬೆಳಕು ಒಸರಿದ್ದು ಕಾಣುತ್ತದೆ. ಕಿಟಕಿ ಹತ್ತಿರ ಆತ ನಿಲ್ಲುವ ಯತ್ನದಲ್ಲಿ ಎಡಗಾಲು, ಗೋಡೆಗೆ ಒತ್ತಿಕೊಂಡ ಬಚ್ಚಲಿನ ರೊಜ್ಜಿನಲ್ಲಿ ಇಳಿಯುತ್ತದೆ. ಆತನಿಗೆ ಯಾವ ಪರಿವೆಯೂ ಇಲ್ಲ. ಕಿಟಕಿಯ ಶಲಾಕೆಗೆ ತುಟಿ ಮುಟ್ಟಿಸಿ ನಗುತ್ತಾನೆ. ಆ ನಗು ಕತ್ತಲಲ್ಲಿಯೇ ಕರಗುತ್ತದೆ. ಎರಡೂ ಕೈ ಬಿಚ್ಚಿ ಗಾಳಿಯನ್ನು ಅಪ್ಪಿಕೊಳ್ಳುತ್ತಾನೆ. ಆ ಕೈಸೆರೆಯಲ್ಲಿ ಸುಂದರಿ ಸಿಕ್ಕು ವಿಲಿ ವಿಲಿ ಮುಲುಗಿದಂತೆ ಎಂಥ ಮಧುರ ಸುಖವೋ! ತೃಪ್ತಿಯ ಸೆಲೆ ಚಿಮ್ಮಿದಂತೆ ಆ ಅಪ್ಪುಗೆಯಲ್ಲಿಯೇ ಅರಳೆಯ ಮೇಲೆ ಒರಗಿದಂತೆ ಜೋಲಿ ಹೋಗುತ್ತದೆ. ತೂಕ ತಪ್ಪಿದಾಗ ಬಲಗೈಯನ್ನು ಕೊಳಚೆಯ ದಿನ್ನೆಗೆ ಊರಿ ಸಾವರಿಸಿಕೊಳ್ಳುತ್ತಾನೆ. ಮತ್ತೆ ರಸ್ತೆಯನ್ನು ಕೂಡಲು ಆತನ ವಿಶ್ವ ಪ್ರಯತ್ನ. ಎರಡೂ ಕೈಯೂರಿ ಮಂಗನಾಗಬೇಕು.

ಕಿಟಕಿಯಿಂದ ಮರೆಯಾಗಿ ಸುಂದರಿ ಇದನ್ನೆಲ್ಲ ನೋಡುತ್ತಿರಬೇಕು. ಬಾಯಿಗೆ ಸೆರಗು ಹಿಡಿದು ನಗುತ್ತಾಳೆ. ಈ ಮುಂಚೆ ಆಕೆ ಬಾಗಿಲು ತೆರೆದು ಹೊರ ಬರುವುದರಲ್ಲಿ ಮತ್ತೆ ಮರಳಿದ ಹನುಮ್ಯಾನ ಕಂಡು ಒಳ ಸೇರಿ, ಬಾಗಿಲು ಭದ್ರಪಡಿಸಿಕೊಂಡಿದ್ದಳು. ಅನೇಕ ಸಲ ಸುಂದರಿ ತನ್ನ ಕಿಟಕಿಯ ಹತ್ತಿರ ಹನುಮಾ ಆಚರಿಸಲಿರುವ ವಿಧಿ ವಿಧಾನಗಳನ್ನು ಕಂಡಿದ್ದಾಳೆ. ಆತನ ಕಾರ್ಯಾಚರಣೆಗಳು ಆಕೆಯ ನಗುವಿಗೆ ಮೂಲ ಅಷ್ಟೆ.

ಆಗ ತಾಯಿಯ ಕೋಣೆಯಲ್ಲಿ ಮೌನ. ಕಿವಿ ಓರೆ ಮಾಡಿ, ಅಲ್ಲಿನ ಸದ್ದನ್ನು ಆಲಿಸಲು ಯತ್ನಿಸುತ್ತಾಳೆ. ಬಂದವ ಹೊರಟು ಹೋಗಿರಬಹುದೆಂದು ಎದೆಗೊಂಡು ಮೆಲ್ಲನೆ ಬಾಗಿಲು ತೆರೆಯುವುದರಲ್ಲಿ, ಹಾದರಗಿತ್ತಿಯ ಬಾಯಿಯಂತೆ ಅದು 'ಕಿರ್' ಎಂದು ಚೀರಿದಾಗ ಒಂದಿಷ್ಟು ತಡೆದು ಮತ್ತೆ ಹೊರಡುತ್ತಾಳೆ. ಆ 'ಕಿರ್' ಸದ್ದು ದೂರದಲ್ಲಿ ಜೀವಣ್ಣ ಕಾಕಾನಿಗೂ ಕೇಳಿಸುತ್ತದೆ. "ಸುಂದ್ರಿ, ಚಂದ್ರ್ಯಾನ ಖೋಲಿಗಿ ಹೊಂಟ್ಳು ಕಾಣತೈತಿ" ಎಂದು ಆತ ಪರಿತಪಿಸುತ್ತಾನೆ. ಗಾಂಧೀಜಿಯವರ ಸತ್ಯ ಶೋಧನೆ ಪುಸ್ತಕ ಬದಿಗಿಟ್ಟು, ಒಂದು ಸಲ ಕಣ್ಣು ಮುಚ್ಚಿಕೊಳ್ಳುತ್ತಾನೆ. ಜೀವಣ್ಣನಿಗೆ ಅದೇನೂ ಅಂಥ ಗಂಭೀರ ವಿಷಯದವಾಗಿ ಕಾಣದಿದ್ದರೂ, ಮದುವೆಗೆ ಮುಂಚೆ ಈ ವ್ಯವಹಾರ ಸರಿ ಅನ್ನಿಸದು. ಚಂದ್ರ ಸುಂದರಿ ಲಗ್ನವಾಗಬೇಕೆನ್ನುವುದರಲ್ಲಿ ಆತನೇ ಚುಕ್ಕಾಣಿ ಹಿಡಿದವ.

× × ×

ಇಂದಿನ ಕಾರು



ಇಂದಿನ ಕಾರುಗಳ
ಮುಖವ್ಯೊಂದೆ ತಿಕವ್ಯೊಂದೆ
ಹಿಂದಿಲ್ಲ ಸ್ವಾಮಿ ಮುಂದಿಲ್ಲ
ಎದುರು ಬದುರು
ಯಾವುದೆಂಬುದನು ತಿಳಿಯೆ
ಓಡಿಸಿ ನೋಡಿದವ ಬಲ್ಲ!
– ಗುಂಡ್ಮಿ, ಚಂದ್ರಶೇಖರ ಐತಾಳ

ಚಂದ್ರನ ಬಿ. ಎ. ಫಲಿತಾಂಶ ಪ್ರಕಟವಾದ ತಕ್ಷಣ ಬೆಂಗಳೂರಿನಲ್ಲಿ ಆತನಿಗೆ ಒಳ್ಳೆಯ ಸರಕಾರೀ ನೌಕರಿ ಸಿಕ್ಕಿತು. ಆತನ ತಂದೆ ಗೌಡಪ್ಪ ಇನ್ನೂ ಸಂಕನಗೌಡರಲ್ಲಿ ಜೀತದಾಳಾಗಿಯೇ ಇದ್ದಾನೆ. ತಾಯಿ, ಪಂಚಾಯ್ತಿಯಿಂದ ಊರ ಕಸಗೂಡಿಸುವುದು, ಹಗ್ಗ ಹೊಸೆಯುವುದು, ಮನೆಗೆಲಸ ಮಾಡುತ್ತಾಳೆ. ಚಂದ್ರ ಹಿಂದುಳಿದವರ ವಿದ್ಯಾರ್ಥಿವೇತನದಿಂದ ಸುಲಭವಾಗಿಯೇ ಶಿಕ್ಷಣವನ್ನು ಪೂರೈಸಿದ.

ಚಂದ್ರನ ಶಿಕ್ಷಣಕ್ಕೆ ಪೂರ್ಣ ಹೊಣೆಗಾರ ಜೀವಣ್ಣ ಕಾಕಾ. ಮಗ ಚಿಕ್ಕವನಿದ್ದಾಗಲೇ ಗೌಡರ ದನಗಳನ್ನು ಮೇಯಿಸಲು ತೊಡಗಿಸಬೇಕೆಂದು ಗೌಡಪ್ಪ ನಿರ್ಧರಿಸಿದಾಗ, ಜೀವಣ್ಣ ವಿರೋಧಿಸಿ ಆತನನ್ನು ಶಾಲೆಗೆ ಸೇರಿಸಿದ. ಅನಂತರ ವಿಜಾಪುರ ಕಾಲೇಜು ಸೇರಿಸುವವರೆಗೂ ಕಾಕಾನೇ ಸೂತ್ರಧಾರ. ನೌಕರಿ ಕೂಡ ಜೀವಣ್ಣನ ಪ್ರಯತ್ನವೇ. ಪರಿಚಿತ ಶಾಸಕರಿಗೆ ಹೇಳಿಸಿ ನೌಕರಿ ಕೊಡಿಸಿದ್ದ.

ಗಾಂಧೀಜಿಯವರ ಅಸಹಕಾರ ಆಂದೋಲನದಲ್ಲಿ ಹೊಲೆಯರವನಾದರೂ ಜೀವಣ್ಣ ಭಾಗವಹಿಸಿ, ಸೆರೆಮನೆಯಲ್ಲಿದ್ದಾಗ ಅಕ್ಷರ ಜ್ಞಾನ ಪಡೆದು ಕೇರಿಯಲ್ಲಿಯೇ ಸುಸಂಸ್ಕೃತ ಎನಿಸಿಕೊಂಡಿದ್ದ. ಈಗ ರಾಜಕೀಯ ಸಂತ್ರಸ್ತನೆಂದು ಆತನಿಗೆ ಮಾಸಾಶನ ಬರುತ್ತಿದ್ದು, ಹೆಂಡತಿ ತೀರಿದ್ದರೂ ಇಬ್ಬರು ಹೆಣ್ಣು ಮಕ್ಕಳನ್ನು ಒಳ್ಳೇ ಸ್ಥಳ ನೋಡಿ ಕೊಟ್ಟು ವೃದ್ಧಾಪ್ಯವನ್ನು ನೂಕಿಕೊಂಡ ಹೋಗುತ್ತಿದ್ದಾನೆ. ಕೇರಿಯ ಜನರಂತೆ ಊರವರಿಗೂ ಆತ 'ಜೀವಣ್ಣ ಕಾಕಾ'.

ಆತ ಕೇರಿಯಲ್ಲಿ ಅನೇಕ ಸುಧಾರಣೆ ಕೈಗೊಂಡರೂ ಅದೆಲ್ಲ ತೂತಿದ್ದ ಮಡಕೆಯಲ್ಲಿ ಹಾಲು ಕಾಯಿಸಿದಂತಾಗಿದೆ. ಸತ್ತ ದನಗಳ ಮಾಂಸ ತಿನ್ನುವುದಾಗಲಿ, ಮಾದಕಪೇಯಗಳನ್ನು ಸೇವಿಸುವುದಾಗಲಿ, ಸೂಳೆತನಕ್ಕೆ ಸೇರುವುದಾಗಲಿ, ಸಾಲ ಮಾಡಿ ಮನೆ ಮಾರು ಹಾಳುಮಾಡಿಕೊಳ್ಳುವುದಾಗಲಿ, ಬಾಡಿಗೆಗೆ ಬಡಿದಾಡಿ ಖೂನಿಗೀನಿ ಮಾಡಿ ಬರುವುದಾಗಲಿ, ಸೋಮಾರಿಯಾಗಿ ಬಿದ್ದುಕೊಂಡಿರುವುದಾಗಲಿ, ಹೊಲಸು ಇರುವುದಾಗಲಿ, ಕೇರಿಯ ಹುಡುಗರು ಶಾಲೆ ಬಿಟ್ಟು ತಿರುಗುವುದಾಗಲಿ ಆತನಿಗೆ ಯಾವುದೂ ಸೇರದು. ಆತನ ಪ್ರಯತ್ನಕ್ಕೆ ಒಂದಿಷ್ಟು ಒಳ್ಳೇ ಪ್ರತಿಕ್ರಿಯೆ ತೋರಿ ಬಂದಂತಾದರೂ ಅದು ಬಹಳ ಹೊತ್ತಿನ ವರೆಗೆ ನಿಲ್ಲುವ ಪರಿಣಾಮ ಕಾಣಲಿಲ್ಲ. ಆ ಪ್ರಯತ್ನ ಸಾಬೂನ ಗುಳ್ಳೆಗಳಾಗಿದ್ದವು.

"ಸಿಂದಿ ಸೆರಿ ಕುಡಿಬ್ಯಾಡ್ರಿ, ಅದ ಧರ್ಮ ಅಲ್ಲ…" ಎಂದು ಪಾನ ಪ್ರತಿಬಂಧ ಸಡಿಲಿಸಿದ ದಿನ, ಕೇರಿಯ ಎಲ್ಲ ಪ್ರಮುಖರನ್ನು ಸೇರಿಸಿ ಕಾಕಾ ತಿಳಿಹೇಳುತ್ತಿರುವ ಸಮಯ, ದುರ್ಗವ್ವನ ಗುಡಿ ಹೊನ್ನ ತೋಳೇರಿಸಿ ಕಾಕಾನನ್ನು ಗುದ್ದಲು ಹೋಗಿದ್ದ. ಕಲ್ಲು ಫಡಿ ಫಕೀರ ಕಾಕಾನ ಕುತ್ತಿಗೆ ಹಿಡಿದಾಗ ಅಲ್ಲಿಂದ ಪಾರಾಗಿ ಬರುವುದು ಕಾಕಾನಿಗೆ ತೊಂದರೆಯಾಗಿತ್ತು. "ಇಂವೊಬ್ಬ ಬಂದ್ನಪಾ ಗಾಂಧೀ ಮಹಾರಾಜ, ನಮ್ಗ ಬುದ್ಧಿ ಹೇಳ್ತಾನು" ಎಂದು ಎಲ್ಲರೂ ತಾತ್ಸಾರದಿಂದ ವ್ಯಂಗ್ಯ ನುಡಿದಿದ್ದರು. ಅಂದೇ ಕೇರಿಯ ದುರ್ಗವ್ವನ ಗುಡಿಯಿಂದಲೇ ಸಿಂದಿ–ಸೆರೆಯ ಪಾತ್ರೆಗಳ ಭವ್ಯ ಮೆರವಣಿಗೆ ಹೊರಡಿಸಿ ಅವುಗಳನ್ನು ಪೂಜಿಸಿದ್ದರು. ಆಗ ಜೋಗತಿಯರು ಕೂಡ ಕುಡಿದು ಎಲ್ಲವ್ವನ ಜಗಹೊತ್ತು ಕುಣಿದಿದ್ದರು. ಸುಂದರಿ ಆ ದಿನ ಮನೆ ಬಿಟ್ಟು ಹೊರ ಬಂದಿರಲಿಲ್ಲ. ಆಕೆ ತೀರ ಹೇಸಿಕೊಂಡಿದ್ದಳು.

ಅದೆಷ್ಟೋ ಪ್ರಾಮಾಣಿಕ ಪ್ರಯತ್ನಗಳೆಲ್ಲ ಸೋತು ಹೋದಾಗ ನೊಂದ ಜೀವಣ್ಣ ಒಂದಿಷ್ಟು ನೋವನ್ನು ಮರೆಯುವುದು ಚಂದ್ರನನ್ನು ಕಂಡು, ಆತನ ಭವಿತವ್ಯವನ್ನು ಸ್ಮರಿಸಿ. ತನ್ನ ಪ್ರಯತ್ನಕ್ಕೆ ಫಲವಾಗಿ ಒಂದೇ ಆಶಾಕಿರಣ ಎಂಬಂತೆ ಚಂದ್ರ ರೂಪಗೊಳ್ಳುತ್ತಲಿದ್ದ. ಆದರೆ ಆತನ ಬೆಂಕಿಯ ಸ್ವಭಾವಕ್ಕೆ ತಂಪನೆರೆದು ಹದಕ್ಕೆ ತರಬೇಕಾದರೆ ಜೀವಣ್ಣನಿಗೆ ಸಾಕು ಬೇಕಾಗಿತ್ತು.

ರಾಣವ್ವಳ ಹೇಸಿ ಬದುಕನ್ನು ಮೊದಲೇ ಅರಿತಿದ್ದ ಜೀವಣ್ಣ ಕಾಕಾ, ಆವಳ ಮಗಳು ಸುಂದರಿಯ ಭವಿತವ್ಯವನ್ನು ರೂಪಿಸಲು ಕೂಡ ಅದೆಷ್ಟೋ ಸಹಕಾರಿಯಾಗಿದ್ದ. ಹಾಲು ಬಣ್ಣದ, ಹೂವಿನ ಮುಖದ ಪುಟ್ಟ ಸುಂದರಿ, ಪೂರ್ತಿ ಬಟ್ಟೆ ಇಲ್ಲದೆ ಕೇರಿಯಲ್ಲಿ ಓಡಾಡುತ್ತಿರುವಾಗಲೇ ಊರಲ್ಲಿಯ ಶಾಲೆಗೆ ಸೇರಿಸಿದ. ತಾನೇ ಒಂದೆರಡು ಸಲ ವಿಜಾಪುರದಿಂದ ಮಗುವಿಗಾಗಿ ಹೊಸ ಫ್ರಾಕ್ ತಂದುಕೊಟ್ಟಿದ್ದ. ಸುಂದರಿ ಏಳನೆಯ ವರ್ಗದಲ್ಲಿ ಉತ್ತೀರ್ಣಳಾದಾಗ ಹೈಸ್ಕೂಲಿಗೆ ಸೇರಿಸಲು ಕಾಕಾ ಯತ್ನಿಸಿದಾಗ ರಾಣವ್ವ, ಒಪ್ಪದಿದ್ದರೂ ಸುಂದರಿ ಕೇಳಿರಲಿಲ್ಲ. ಮಗಳು ಕೂಡ ತನ್ನಂತೆ ಆದರೆ ಸಲಿಕೆಯಿಂದ ರೊಕ್ಕ ಜಗ್ಗಬಹುದೆಂದು ರಾಣವ್ವಳ ಹಂಚಿಕೆ. ರೂಪಸಿ ಸುಂದರಿ ಸುತ್ತಲಿನ ಹತ್ತಾರು ಹಳ್ಳಿಗಳನ್ನು ಸುಲಿಯಬಹುದೆಂಬ ಭವಿಷ್ಯ, ತಾಯಿಗೆ ತುಂಬ ಸುಖವನ್ನು ನೀಡುವುದು.

ರಾಣವ್ವಳ ಮನೆಗೆ ಬರುವವರನೇಕರು ಮೊಗ್ಗು ಬಿರಿದ ಸುಂದರಿಯ ದೇಹ ಸ್ಪರ್ಶಕ್ಕಾಗಿ



ಹಾತೊರೆದಾಗ ಅದಕ್ಕೆ ಈಗಲೇ ಎಡೆ ಮಾಡಿರಲಿಲ್ಲ ರಾಣವ್ವ. ಬೇಡಿದಷ್ಟು ಹಣ ಕೊಡುವವರು ವ್ಯಾಪಾರ ಕುದುರಿಸಲು ಕೇಳಿಕೊಂಡಾಗ ರಾಣವ್ವ ಅವರವರ ತಿಜೋರಿಗೆ ಪಾತಾಳಗಡ ಹಾಕಲು ಸಿದ್ಧತೆ ನಡೆಸಿದ್ದಳು.

ಈಗ ಬೆಳೆದುನಿಂತ ತುಂಬ ತರುಣಿ ಸುಂದರಿ. ಎಸ್ಸೆಸ್ಸೆಲ್ಸಿ ಮುಗಿಸಿದ್ದಾಳೆ. ಆಕೆ ಊರಿಗೆ, ನೀರಿಗೆ ಹೋದಾಗ ಕಪೋಲಕೇಶಿ, ಪಾತರಗಿತ್ತಿ ಶರ್ಟಿನ ಯುವಕರನೇಕರು ಶಿಳ್ಳಿನ ಜತೆಯಲ್ಲಿಯೇ ನಾಚಿಕೆ ಬಿಟ್ಟು ತಮ್ಮ ಆಶೆ ಆಮಿಷ ತೋರಿದರೂ ಆಕೆ ಅವರತ್ತ ಕಣ್ಣೆತ್ತಿ ನೋಡಿರಲಿಲ್ಲ. "ಬಾ ಸುಂದರೀ...ಓ ಸುಂದರೀ..." ಎಂದು ಹಾಡಿದರೂ ಆ ಶಬ್ದಗಳನ್ನು ಕಿವಿಯಲ್ಲಿ ಹಾಕಿಕೊಂಡಿರಲಿಲ್ಲ. ಹನುಮನ ಹಾಡು ಮಾತ್ರ ಮೋಜಿನ ವಿಷಯ, ಅದು ಬೇರೆ.

ಚಂದ್ರನ ಸಾದುಗಪ್ಪಾದ ಮುಖವೇ ಸುಂದರಿಗೆ ಆಕರ್ಷಕವಾಗಿ ಕಂಡಂತೆ ಆತನ, ವ್ಯಕ್ತಿತ್ವಕ್ಕೆ ಮಾರು ಹೋಗಿದ್ದಳು. ಪ್ರಾರಂಭದಿಂದಲೂ ಕೇರಿಯಲ್ಲಿ ಚಂದ್ರನೆಂದರೆ ಆಕೆಗೆ ಎಲ್ಲಿಲ್ಲದ ಜೀವ, ತುಂಬ ಪ್ರೀತಿ, ಅತ್ಯಾಭಿಮಾನ. ತಾಯಿಯ ತುಡುಗಿನಿಂದ ಆತನಿಗೆ ಕೊಟ್ಟದ್ದೆಷ್ಟೋ, ತಿನಿಸಿದ್ದೆಷ್ಟೋ, ಆಕೆಯ ನೆನಪಿಗೂ ಲೆಕ್ಕ ಹತ್ತದು. ಚಂದ್ರ ಎಂದರೆ ಬಿದ್ದು ಸಾಯುತ್ತಾಳೆ.

ಒಂದಿಷ್ಟು ತಿಳುವಳಿಕೆ ಮೂಡಿದಾಗ ಸುಂದರಿಗೆ ತುಂಬ ವ್ಯಥೆ. ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳ ಹೆಸರಿನ ಜತೆ ಅವರವರ ತಂದೆಗಳ ಹೆಸರು ಸೇರಿದ್ದು, ತನ್ನ ಹೆಸರಿನ ಮುಂದೆ ಮಾತ್ರ ತಾಯಿಯ ಹೆಸರು ಸೇರಿದ್ದು ಆಕೆಗೆ ನೋವಾಗಿತ್ತು. ಈಗಲೂ ಆಕೆಗೆ ತನ್ನ ತಂದೆ ಯಾರು, ಎಂಬುದು ಬೃಹತ್ ಪ್ರಶ್ನೆ. ಮನೆಗೆ ಬರುವ ಜನರಲ್ಲಿ ಯಾರನ್ನು ಖಚಿತ ತಂದೆಯೆಂದು ಆಯ್ಕೆ ಮಾಡಬೇಕು? ತಾಯಿಗಾದರೂ ಗೊತ್ತೇ? ಎಂದು ಹಲುಬುವಳು. ಆದರೆ ಜೀವಣ್ಣ ಕಾಕಾನ ಸಾಂತ್ವನೆಯಿಂದ, ಚಂದ್ರನ ಸ್ಮರಣೆಯಲ್ಲಿ ಆ ನೋವು ಒಂದಿಷ್ಟು ಮರೆಯಾಗಲು ಅವಕಾಶವಾಗುತ್ತದೆ. ತಾಯಿಯ ಬದುಕು ಎಂಥದು? ಎಂಬ ಮರು ಪ್ರಶ್ನೆ ಮಾತ್ರ ಆಕೆಯನ್ನು ಇನ್ನೂ ಘಾಸಿಗೊಳಿಸುತ್ತದೆ.

ಈಗೀಗ ಸುಂದರಿಗೆ ಏಕಾಂತ ಮತ್ತು ಚಂದ್ರನ ಜತೆ ಮಾತ್ರ ಸೇರುತ್ತದೆ. ಮನೆಗೆ ಬರುವವರ ಸಲುಗೆಯ ವಿಷಯಾಸಕ್ತ ಮಾತುಗಳು ಈಟಿಯಂತೆ ಚುಚ್ಚುತ್ತವೆ. ಹೀಗಾಗಿ ಆಕೆ ತನ್ನ ಚಿಕ್ಕ ಕೋಣೆ ಬಿಟ್ಟು ಹೊರಬರುವುದಿಲ್ಲ. ಈಗ ತಾಯಿಯ ಮಾತಿಗೂ ಸಿಡಿಮಿಡಿಗೊಳ್ಳುತ್ತಾಳೆ. ಚಂದ್ರ ರಜೆಯಲ್ಲಿ ಬಂದಾಗ ಮಾತ್ರ ಆಕೆಗೆ ತುಂಬ ಸಂತಸ.

× × ×

ಮುಂದು ಮಾಡಿದ ಬಾಗಿಲನ್ನು ನೂಕಿ ಸುಂದರಿ ಒಳಬಂದಳು. ಈ ವರೆಗೂ ಕಾಯ್ದು ಕಾಯ್ದು ಬೇಸತ್ತಿದ್ದ ಬನಿಯನ್ ಮೇಲಿದ್ದ ಚಂದ್ರ ಕೆಂಜಗ ಮುಖದಿಂದಲೇ ಆಕೆಯನ್ನು ಬರಸೆಳೆದ. ತೆರೆದ ಬಾಗಿಲ ಚಿಂತೆ ಕೂಡ ಆಕೆಗೇ. ಆತನ ಉಸಿರಿನಲ್ಲಿ ದೀರ್ಘವಾಗಿ ಬಂದ 'ಮುಸ್' ಸದ್ದು ಆಲಿಸಿದ್ದಳಾಕೆ. ಆತನಿಂದ ಬಿಡುಗಡೆಯಾಗಿ ಬಾಗಿಲು ಮುಚ್ಚಿದಳು. ಚಂದ್ರ ತನ್ನ ಬ್ಯಾಗಿನಿಂದ ಬೀರ್ ಬಾಟಲಿ ತೆಗೆದ. ಈ ಹಿಂದೆ ಸುಂದರಿಯ ಎದುರು ಎಂದೂ ಕುಡಿದಿರಲಿಲ್ಲ. ಸಂದೇಹಗೊಂಡ ಆಕೆಗೆ ಈಗ ಖಚಿತವಾಗಿ ಹುಬ್ಬು ಏರಿಸಿ "ಇದೇನ್?" ಎಂದು ಕೇಳಿದಳು.

"ಗೊತ್ತಿಲ್ಲ ಇದ ಬೀರ್. ಈ ದರಿದ್ರ ಮಕ್ಕ ಕುಡಿಯೂ ಹನಮ್ಯಾ ಛಾಪ ಸಿಂದಿ ಅಂತ ತಿಳಿಬ್ಯಾಡ. ದೊಡ್ಡವ್ರು, ಅಂತಸ್ತಿನ್ಯಾವ್ರು ಕುಡಿಯೂ ಫಾರಿನ್ ಬೀರ್. ಬೆಂಗ್ಳೂರಿನ್ಯಾಗ ಎಲ್ಲಾರೂ ಕುಡೀತಾರು. ನೀನೂ ಒಂದೀಟ...ಛಾಳ ಮಜಾ..." ಆತನ ಎಡಗೈ ಸುಂದರಿಯನ್ನು ಬಳಸಿದ್ದು, ಬಲಗೈಯ ಬಾಟಲಿ ಗ್ಲಾಸಿಗೆ ಬಾಗಿತ್ತು.

"ಅಲ್ಲಾ, ಎಲ್ಲಾರ್ನೂ ಸುಧಾರ್ಸುದು, ನಮ್ನಾತಿ ಮುಂದ ತರೂದುಂತ ಏನೇನೋ ಪ್ರತಿಜ್ಞಾ ಮಾಡಿ, ಇದೇನ ಸುರು ಮಾಡಿದ್ರಿ. ತಗೀರಿ, ಇದ ನನಗ ಚಲೂ ಕಾಣೂದಿಲ್ಲ" ಎಂದಾತನ ಬಲಗೈ ಹಿಡಿದು ಹುಸಿಮುನಿಸಿನಿಂದ ತಡೆಯಲು ಯತ್ನಿಸಿದಳು ಸುಂದರಿ.

"ಹುಚ್ಚೀ ಸಮಾಜ ಸುಧಾರ್ಸುದ್ಕ ಮತ್ತ ಬೀರ್ ಕುಡಿಯುದ್ಕ ಎಲ್ಲೀ ಸಂಬಂಧ? ಈಗ ಬೀರ್ ಕುಡದ್ರನ ಹೆಚ್ಚಿನ ಇಚಾರ ಜ್ಞಾನ ಬರ್ತೈತಿ...ಬಾ, ನೀನೂ ಒಂದ ಗುಟಕ..." ಗ್ಲಾಸು ಸುಂದರಿಯ ತುಟಿಗೆ ಹೋಗುವುದರಲ್ಲಿ ಆಕೆ ಆತನ ಕೈಯನ್ನು ನೂಕಿದ್ದು, ಕೈ ಜಾರಿ, ಗ್ಲಾಸು ನೆಲಕ್ಕೆ ಬಿದ್ದು ಒಡೆದಿತ್ತು. ಸುಂದರಿಗೆ ಅಳುಕು. ಸಿಟ್ಟಿನ ಚಂದ್ರ ಮತ್ತೆ ಏನನ್ನುವನೋ ಎಂಬ ಭೀತಿ ಕೂಡ. ಚಂದ್ರನ ಕಣ್ಣು ಬೆಂಕಿಯಾಗಿದ್ದವು. ಇನ್ನೂ ದೀರ್ಘವಾಗಿ 'ಮುಸ್' ಎಂದು ನಿಶ್ವಾಸ ಬಿಟ್ಟಿದ್ದ.

"ಯಲಾ ನಿನ. ಅಲ್ಲ ನೀನು ಅಂಥಾಕಿ ಮಗನಿದ್ದ" ಉದ್ರಿಕ್ತಗೊಂಡ ಚಂದ್ರನ ಮುಂದಿನ ಮಾತು ಸಹ್ಯವಾಗಿರಲಿಲ್ಲ ಸುಂದರಿಗೆ. ಸರ್‍ರನೆ ಎದ್ದು ಆತನ ಬಾಯನ್ನು ತನ್ನ ಕೈಯಿಂದ ತಡೆದಿದ್ದಳು.

"ನೋಡ ಚಂದ್ರು, ನೀವ್ ಬೇಕಾದ್ದನ್ರಿ, ಆದರ ಆ ಮಾತ ಅನಬ್ಯಾಡ್ರಿ, ಅಂತ ಹೇಳ್ತೀನಿ..."

ಆತನ ಮಾತು ಛೈರಿಗೆಯಂತೆ ಸುಂದರಿಯ ಎದೆ ಕೊರೆದು ಹೃದಯಕ್ಕೆ ಘಾಯವಾಗಿರಬೇಕು. ಕಣ್ಣಿನಿಂದ ಒಂದೆರಡು ಹನಿ ನೀರು ಪಳಕ್ಕನೆ ಆಕೆಯ ಅರೆದೆರೆದ ಎದೆಯ ಮೇಲೆ ಉರುಳಿದ್ದವು. ಆಗ ಅಲ್ಲಿ ನಿಲ್ಲದಂತೆ ಸ್ವಾಭಿಮಾನ ಕಾಡಿತ್ತು. ಮೃದುವಾಗಿ ಆತನ ಹಿಡಿತ ಬಿಡಿಸಿಕೊಂಡು ಹೆಜ್ಜೆ ಕೀಳತೆತ್ನಿಸಿದಳು. ಅಷ್ಟರಲ್ಲಿ ಬಾಟಲಿ ಖಾಲಿ ಮಾಡಿದ ಚಂದ್ರ ಆಕೆಯನ್ನು ಬಲವಾಗಿ ನೆಲಕ್ಕೆ ನೂಕಿ ಕೆಡವಿದ್ದ. ನಿಶೆಯಲ್ಲಿ ಎಂಥ ಸಾಮರ್ಥ್ಯವೋ. ಆತನ ಹಿಡಿತದಲ್ಲಿ ಬಟ್ಟೆಗಳೆಲ್ಲ ಚಿಂದಾಪಿಂದಿಯಾಗಿ ವಿಲಿವಿಲಿ ಒದ್ದಾಡಿದ್ದಳು ಸುಂದರಿ.

ಇನ್ನೂ ನಿದ್ರೆ ಬಾರದ ಜೀವಣ್ಣ ಕಾಕಾ ಬಾಗಿಲು ತೆರೆದು ಒಂದಕ್ಕೆ ಬಂದವ, ಹಾಗೇ ತಂಗಾಳಿಗೆ ರಸ್ತೆಯಲ್ಲಿ ನಿಂತಿದ್ದ. ರಾತ್ರಿ ಸರಿಯುತ್ತಿತ್ತು. ಮುಪ್ಪಾವಸ್ಥೆಯಲ್ಲಿ ರಾತ್ರಿ ನೂಕುವುದೇ ಒಂದು ದೊಡ್ಡ ಕೆಲಸವಾಗಿತ್ತು, ಆತನಿಗೆ. ಅದೇನೋ ಸದ್ದು ಕೇಳಿ ಕೆಳಗಡೆ ಓಣಿಯತ್ತ ದೃಷ್ಟಿ ಬೀರಿದ. ಅದಾರೋ ಮುಖ ಮುಚ್ಚಿಕೊಂಡು ಅಳುತ್ತ ಬರುತ್ತಿರುವುದು ರಸ್ತೆಯ ಮಂದ ಬೆಳಕಿನಲ್ಲಿ ಅಸ್ಪಷ್ಟವಾಗಿ ಕಾಣಿಸಿತು. ಇನ್ನೂ ಆ ವ್ಯಕ್ತಿ ಸಮೀಪಿಸಿದಾಗ ಗುರುತು ಹತ್ತದೇನು?

"ಯಾಕ ಸುಂದ್ರಿ ಅಳ್ಕೋತ ಬಂದಿ?" ಆಕೆಯನ್ನು ಕೇಳುತ್ತ ಅದೇ ದಾರಿಯತ್ತ ಮತ್ತೆ ನೋಡಿದಾಗ ಚಂದ್ರನ ತೆರೆದ ಕೋಣೆಯಿಂದ ಪ್ರಕಾಶ ಕಿರಣಗಳು ಹೊರ ಹೊಮ್ಮುತ್ತಿದ್ದುದು ಕಂಡಿತು.

"ಚಂದ್ರ ಏನಾದ್ರೂ ಅಂದೇನ?" ಮತ್ತೆ ಕೇಳಿದ ಕಾಕಾ ಇನ್ನೂ ಹತ್ತರ ಸರಿದು. ಯಾವುದಕ್ಕೂ ಪ್ರತಿಕ್ರಿಯೆ ವ್ಯಕ್ತಪಡಿಸದೆ ಭಾರವಾದ ದುಃಖವನ್ನು ತಡೆಯುವ ಯತ್ನದಲ್ಲಿ ಸುಂದರಿ ಹೆಜ್ಜೆಯ ಗತಿಯನ್ನು ತೀವ್ರಗೊಳಿಸಿದಳು.

ತನ್ನನ್ನು ದಾಟಿ ಹೋದ ಸುಂದರಿಯ ಅಸ್ತವ್ಯಸ್ತ ಬಟ್ಟೆಗಳನ್ನು ಕಂಡೇ ಅದೇನೋ ಅಸ್ತವ್ಯಸ್ತ ಘಟನೆ ಸಂಭವಿಸಿರಬಹುದೆಂಬ ಸಂದೇಹದಿಂದ ಕಾಕಾ ಚಂದ್ರನ ಕೋಣೆಯತ್ತ ಸಾಗಿದ. ಒಂದು ರೀತಿಯ ಕಳವಳ ಆತನಿಗೆ. ಅದೇ ತಳಮಳದಲ್ಲಿ ಪರಿವರ್ತಿತವಾಗುತ್ತಿರುವುದು 'ಎಂಥದೋ ಹೊಸ ನೋವು.

ಚಂದ್ರನ ಕೋಣೆಯ ಬಾಗಿಲಿಗೆ ಬಂದು ನೋಡುತ್ತಾನೆ. ಅಲ್ಲೇನಿಲ್ಲ? ಖಾಲಿ ಬೀರ್ ಬಾಟ್ಲಿ ಇನ್ನೂ ಮಗ್ಗಲು ಬದಲಿಸುತ್ತಲೇ ಇದೆ. ಗ್ಲಾಸಿನ ಚೂರುಗಳ ಜತೆ ಬಳೆ ಚೂರುಗಳೂ ಸೇರಿಕೊಂಡಿವೆ. ಹಾಸಿಗೆಯಂತೂ ಗ್ರಾಮ ಪಂಚಾಯತಿ ತಿಪ್ಪೆಯಾಗಿದೆ. ಅದೇ ತಿಪ್ಪೆಯಲ್ಲಿ ಸತ್ತ ನಾಯಿಯನ್ನು ಚೆಲ್ಲಿದಂತೆ ಅದೇ ರೀತಿ ವಿವಸ್ತ್ರನಾಗಿ ಚಂದ್ರ ಬಿದ್ದುಕೊಂಡಿದ್ದಾನೆ. ಎಲ್ಲವೂ ಅಸ್ತವ್ಯಸ್ತ! ಏನೋ ಒಂದು ಆಶೆಯ ಬೆಂಬತ್ತಿ ಒಂದೇ ಒಂದಾದ ಬೆಳಕಿನ ಕಿರಣವನ್ನು ಕಾಣಲು ಯತ್ನಿಸುತ್ತಲಿದ್ದ ಗಾಂಧೀವಾದಿ ಜೀವಣ್ಣ ಕಾಕಾನನ್ನು ಅದಾರೋ ಒದ್ದು ಅದೇ ಬಾಯಿ ತೆರೆದ ಖಾಲಿ ಹಗೆವಿನಲ್ಲಿ ಚೆಲ್ಲಿದಂತಾಗಿತ್ತು.

ಬದಿಯ ಕೋಣೆಯಲ್ಲಿದ್ದ ಗೌಡಪ್ಪನನ್ನು ಎಬ್ಬಿಸಿ, ಒಂದು ಕೊಡ ನೀರು ತಂದು ಚಂದ್ರನನ್ನು ಹೊರಲೋಕಕ್ಕೆ ತರಬೇಕಾದರೆ ಸಾಕಾಗಿತ್ತು, ಕಾಕಾನಿಗೆ. ಗೌಡಪ್ಪನಂತೆ ಆತನ ಹೆಂಡತಿ ಕೂಡ ಗಾಬರಿಯ ಜತೆ ಬೆರಗಾಗಿ ಮಗನ ಬಿಸಿರಿಯನ್ನು ನೋಡುತ್ತಲಿದ್ದಳು. ಜೀವಣ್ಣ ಚಂದ್ರನ ಮೈ ಒರೆಸಿ ಬೇರೆ ಬಟ್ಟೆ ತೊಡಿಸಿ ಇನ್ನೊಂದು ಹಾಸುಗೆ ಹಾಸಿ ಆತನನ್ನು ಮಲಗಿಸಿ ಬಾಗಿಲು ಮುಂದು ಮಾಡಿಕೊಂಡು ಹೊರ ಬಂದಿದ್ದ. ಆಗ ಚಂದ್ರನ ಕೆನ್ನೆಗೆ ಹೊಡೆದು ವಿವರ ಕೇಳಬೇಕೆಂಬ ಸಂತಾಪವಾದರೂ ಅದು ಸಮಯವಲ್ಲವೆಂದು ಬಿಟ್ಟಿದ್ದ. ಮರುದಿನ ಇದೆಯಲ್ಲ. ಚಂದ್ರನ ಮನಸ್ಸೂ ಸ್ಥಿಮಿತಕ್ಕೆ ಬಂದಿರುವುದು. ವಾತಾವರಣವೂ ತಿಳಿಯಾಗಿರುವುದು. ಆತನನ್ನು ಒಂದು ಹಿಡಿತಕ್ಕೆ ತರಲೇಬೇಕೆಂಬ ನಿರ್ಧಾರದಿಂದ ಜೀವಣ್ಣ ಕಾಕಾ ಹಾಸುಗೆಗೆ ಮೈ ಹಚ್ಚಿದರೆ ನಿದ್ರೆ ಇನ್ನೂ ಪಲಾಯನ ಮಾಡಿತ್ತು. ಇನ್ನೂ ಸಡಿಲ ಬಿಟ್ಟರೆ ಚಂದ್ರ ಕೂಡ ಸುಧಾರಿಸಿದ ಇನ್ನೊಬ್ಬ 'ಹನಮ್ಯಾ' ಆಗಬಾರದೆಂದು ಕಾಕಾನಿಗೆ ಭಯದ ಚಿಂತೆ.

× × ×

ತೀರ ಬೆಳಕಿನಲ್ಲಿ ಒಂದಿಷ್ಟು ಕಣ್ಣು ಕೂಡಿ ತೆರೆಯುವುದರಲ್ಲಿ ಬಿಸಿಲೇರಿ, ಗೌಡಪ್ಪ ಕೂಗಿ ಎಬ್ಬಿಸಿದಾಗಲೇ

ದೀಪಾವಳಿಯು ಹಾಗೂ ಹೊಸ ವರ್ಷವು ಸರ್ವರಿಗೂ
ಸುಖ—ಸಮೃದ್ಧಿ ಬೀರಲಿ !!

ಯಾವಾಗಲೂ
ಉತ್ಕೃಷ್ಟ
ಸಾಮಗ್ರಿಗಳಿಂದಲೇ
ತಯಾರಿಸಿದ್ದು

ಮಂಗಳೂರ ಗಣೇಶ ಬೀಡಿಗಳು

ಅವುಗಳನ್ನು
ಗ್ರಾಹಕರು
ಎಂದೂ
ಬಿಡಲಾರರು

ಪ್ರತಿನಿತ್ಯದ ಮಾರಾಟ ೫ ಕೋಟಿ ಬೀಡಿಗಳಿಗೂ ಮಿಕ್ಕಿದೆ

: ಮುಖ್ಯ ಕಚೇರಿ :

ಮಂಗಳೂರ ಗಣೇಶ ಬೀಡಿ ವರ್ಕ್ಸ್

ವಿನೋಬಾ ರಸ್ತೆ [] [] ಮೈಸೂರು-೫೭೦೦೦೫

ಟೆಲಿಫೋನ: **20 41** ಟೆಲಿಗ್ರಾಮ್ಸ್: **'/ RO''A'**

ಜೀವಣ್ಣ ಎದ್ದಿದ್ದು. ವಿಸ್ಮಯಗೊಂಡ ಗೌಡಪ್ಪನ ಮುಖವನು ಕಾಕಾ ನಿಟ್ಟಿಸುತ್ತಿರುವುದರಲ್ಲಿಯೇ ಆತ, "ಚಂದ್ರ್ಯಾ ನಸಕಿನ್ಯಾಗ ಬೆಂಗಳೂರ್ಗಿ ಹೋಗ್ತನಂತ ಹೋಗಿ ಬಿಟ್ಟ..." ಎಂದು ವರದಿ ಒಪ್ಪಿಸಿದ. ಇನ್ನೂ ಒಂದೆರಡು ದಿನ ರಜೆಗಳಿದ್ದು ಚಂದ್ರ ಹೋಗಿದ್ದು ಮುದ್ದಾಂ ಎಂದೆನಿಸದಿರಲಿಲ್ಲ ಕಾಕಾನಿಗೆ. ಆತನಿಗೆ ತಿಳಿ ಹೇಳಬೇಕಾದ ನೀತಿ ಮಾತುಗಳು, ಮಾನವೀಯ ವಿಚಾರಗಳು, ಶುದ್ಧಾಚರಣೆಯ ಹಿತವಚನಗಳು ಎಲ್ಲವೂ ಜೀವಣ್ಣ ಕಾಕಾನ ಮನಸ್ಸಿನ ಬುಟ್ಟಿಯಲ್ಲಿ ಮಾರಾಟವಾಗದ ಕೊಳೆತ ಕಾಯಿಪಲ್ಲೆಯಂತೆ ಉಳಿದವು.

ಮಧ್ಯಾಹ್ನ ಸುಂದರಿ ತಾನಾಗಿಯೇ ಕಾಕಾನ ಹತ್ತಿರ ಬಂದಿದ್ದಳು. ಆಕೆಯನ್ನು ಸಾಂತ್ವನಗೊಳಿಸಿದ ಜೀವಣ್ಣ ತಾನು ತನ್ನ ನಿರೀಕ್ಷಿತ ಆಶೆಯಿಂದ ಕೈತೊಳೆದುಕೊಳಲು ಸಿದ್ಧನಾಗದೆ ಇನ್ನೂ ಆಸೆಯ ಬೆಂಬತ್ತಿ ಎದೆಗೊಳಲು ಯತ್ನಿಸುತ್ತಲಿದ್ದ.

ಅಂದು ಯಾವ ರೀತಿಯೂ ಸುಂದರಿಗೆ ಸೊಗಸಿಲ್ಲ. ಚಂದ್ರನ ಕುಡಿತ ಹಿತವೋ ಅಹಿತವೋ, ಆತ ಚುಚ್ಚಿ ಮಾತನಾಡಿದ್ದು ಉಚಿತವೋ ಅನುಚಿತವೋ ಆತನ ವರ್ತನೆ ಮಾನುಷವೋ ಅಮಾನುಷವೋ ಎಂದು ಮೊರದಲ್ಲಿನ ಕಾಳಿನಲ್ಲಿಯ ಕಲ್ಲು, ಕಸಕಡ್ಡಿ ಆರಿಸುವ ಗೋಜಿಗೆ ಆಕೆ ಹೋಗದಿದ್ದರೂ, ಚಂದ್ರ ಹೇಳದೆ ಕೇಳದೆ ಹೊರಟು ಹೋದದ್ದು ಎದೆಕೊರೆಯುವ ಸಂಗತಿಯಾಗಿತ್ತು. ತಾಯಿಗೆ ಯಾವುದೋ ನೆಪ ಹೇಳಿ ಆ ದಿನ ಆಕೆ ಸ್ನಾನ, ಊಟ ಮಾಡಿರಲಿಲ್ಲ. ಅದೇನೋ ಸ್ಮರಣೆಯಾಗಿ ಮಧ್ಯಾಹ್ನ ಕುಳಿತು ಚಂದ್ರನಿಗೆ ಒಂದು ದೀರ್ಘ ಪತ್ರ ಬರೆದಾಗ, ಎಂಥದೋ ಮಾನಸಿಕ ಅಸ್ವಸ್ಥೆಯಲ್ಲಿ ಒಂದು ಚುಟುಕಿ ತೃಪ್ತಿ. ಚಂದ್ರನ ಪಲಾಯನ ಆಕೆಯ ಮನಶ್ಶಾಂತಿಯ ಜೇನುಗೂಡಿಗೆ ಕಲ್ಲು ಬೀರಿದಂತಾಗಿತ್ತು.

"ಒಳೊಳೇ ಹೆಣ್ಣೀನ ನೆನಪಾನ ನೆನಪೋ
ಆದರೂ ಆಕಿಯಂಗ ಯಾರ್ದಿಲ್ಲ ಒನಪೋ
... ... ಒನಪೋ..."

ಅದೇ ಹನುಮನ ಬೇಸೂರ ರಾಗ, ಭಾರತೀಯ ಎಲ್ಲ ಆಕಾಶವಾಣಿ ಕೇಂದ್ರಗಳು ಮಲಗಿದ್ದರೂ ಪ್ರಸಾರವಾಗುತ್ತಲಿತ್ತು. ಸುಂದರಿಯನ್ನು ತೊರೆದು ನಿದ್ರೆ ಕೂಡ ಅದೆಷ್ಟೋ ದೂರ ಓಡಿ ಹೋಗಿತ್ತು. ನಿನ್ನೆಯ ರಾತ್ರಿ ಚಂದ್ರನಿಗೆ ಖಚಿತ ಸಂಗತಿ ತಿಳಿಸಿ ಪರಿಹಾರ ಹುಡುಕಬೇಕೆಂದರೆ, ಆತನ ಕೋಣೆಯಲ್ಲಿನ ಪರಿಸ್ಥಿತಿಯೇ ಬೇರೆಯಾಗಿತ್ತು. ಹಾಲಿನಲ್ಲಿ ಉಪ್ಪು ಹಾಕಿದಂತೆ ಚಂದ್ರನಿಗೆ ಈ ಕುಡಿತದ ಚಟವೇಕೋ ಎನ್ನುವ ಚಿಂತೆ. ಮೊದಲು ಎಂದೂ ಕುಡಿಯದವ ಬೆಂಗಳೂರಿಗೆ ಹೋಗಿ ಅಂಟಿಸಿಕೊಂಡಂತೆ ಕಾಣುತ್ತದೆ. ಮುಂದೆ ಉಪಾಯವಾಗಿ ಅದನ್ನು ದೂರಗೊಳಿಸುವುದು ಅಂಥ ಗುಡ್ಡ ಕಡಿದಂತೇನಲ್ಲ. ಎಂಬ ಸಾಂತ್ವನದ ಮಾತು ಹಿತವಾಗಿರುವುದು. ಈ ದೀಪಾವಳಿಗೆ ಲಗ್ನಾ ಮುಗಿಸಬೇಕೆಂದು ಜೀವಣ್ಣ ಕಾಕಾನ ವಿಚಾರ. ಅದರಂತೆ ಗೌಡಪ್ಪನೂ ತಯಾರು. ಚಂದ್ರ ಮೊದಲು ಹಾಗೇ ಹೇಳಿದ್ದ. ನಿನ್ನೆ ರಾತ್ರಿ ಆ ಬಗೆಗೆ ಕೇಳುವುದಾಗಲಿ, ಇನ್ನೊಂದು ಬಗೆಗೆ ಹೇಳುವುದಾಗಲಿ ಅವಕಾಶವಿಲ್ಲದೆ ಬೇರೊಂದು ನಾಟಕ ನಡೆಯಿತಲ್ಲ.

"ನೆನಪೋ..." ಬಿದ್ದುಹೋದ, ದೂರದಲ್ಲಿ ತೆಳಗಾಗಿ ತೇಲಿ ಬಂದ ಗೊಗ್ಗರ ದನಿಯನ್ನೇ ಆಲಿಸಿ ಮಗ್ಗಲು ಬದಲಿಸಿದಳು ಸುಂದರಿ. ಹಾಸುಗೆಗೆ ಊರಿದ ಎದೆ ಅಳುಕಿದಂತೆ ನೋವಾಗಿತ್ತು. ಚಂದ್ರನ ಉಗುರು ಎದೆಗೆ ಕೊರೆದ ನೋವು ಈಗ ಕಾಣಿಸಿಕೊಂಡಿತ್ತು. ಕೈಗೆ ಬಳೆ ಹತ್ತಿದ ನೋವೂ ನರಳಿತ್ತು. ಉಗುಳು ಹಚ್ಚಿ ನೋವುಗಳನ್ನು ಸಾಂತ್ವನಗೊಳಿಸಿದ್ದಳು.

× × ×

ಬಹಳ ದಿನಗಳಾದ ಬಳಿಕ ನೆರೆಯೂರಿನ ಕಾಶಪ್ಪ ಸೆಟ್ಟಿಯ ಆಗಮನವಾಗಿದ್ದು ರಾಣವ್ವಳ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಿತ್ತು. ಬರುವಾಗ ಆತ ನಾಲ್ಕಾರು ಲೋ ಸಕ್ಕರೆ ಚಹಪುಡಿ, ಬಿಸ್ಕೀಟ ಪುಡಿಕೆ ತಮ್ಮ ಕಿರಾಣಿ ಅಂಗಡಿಯಿಂದ ತಂದಿದ್ದ.

"ರಾಣೀ, ನನ್ನ ಇಚಾರ ಯೇನಾಯ್ತು?" ಮತ್ತೆ ಕೇಳಿದ ಕಾಶಪ್ಪ. ಆಕೆಯ ಕಣ್ಣ ಮುಂದೆ ಕಂಡ, ಆತ ಸೂಚಿಸಿದ ಐನೂರರ ಗಂಟು ಮುದುಡಿಕೊಂಡಂತೆ ತನ ಆಕಾರವನ್ನು ಕಿರಿದಾಗಿಸಿತ್ತು.

"ಅದ್ಯಾಕ, ಸಂಕನಗೊಂಡ ಸಾವಿರ ಕೊಡ್ತನಂದ್ರೂ ನಿನ ಕೇಳ್ದ, ಅಂವ ಮಾತ ಕೊಡಬಾರ್ದಂತ ಇಲ್ಲೀತಂಕಾ ಸುಂದ್ರೀನ ಜ್ವಾಪಾನ ಮಾಡೀನಿ. ಈ ಯಾವಾರ ಆಗ, ಮುಗಸ್ಲಾಕ ಬರ್ತೀತ್ತ. ನಿನ್ನ ಯಾಕ ಕೇಳ್ಬೇಕು?" ಎಂದ ರಾಣವ್ವಳ ಯುಕ್ತಿಯನ್ನು ತಟ್ಟಿಗೆ ಹತ್ತಿದ ಬೆಲ್ಲವನ್ನೂ ತೂಗಿಕೊಡುವ ಸೆಟ್ಟಿಗೆ ಅರಿಯದಿರುವುದೆ? ಸುಂದರಿಯ ಪ್ರಥಮ ಸಹಭಾಗಿಯಾಗುವ ಶ್ರೇಯಸ್ಸಿಗಾಗಿ ಆತ ಸಾವಿರ ಕೊಡಲೂ ಸಿದ್ಧ. ಅಲ್ಲದೆ ಒಂದು ವರ್ಷ ಸುಂದರಿ ಯಾರ ಪದರಿಗೂ ಬೀಳಲಾರಳು. ಆದರೆ ಚೌಕಾಶಿ ವ್ಯಾಪಾರದಿಂದ ಒಂದಿಷ್ಟು ಮೊತ್ತ ಕಡಿಮೆಯಾದರೆ ಮತ್ತೆ ಒಂದು ತಿಂಗಳ ಮನೆಯ ಖರ್ಚಾದರೂ ಹೋದೀತು ಎಂಬ ಬಣಜಿಗ ಹವಣಿಕೆ ಆತನದು.

"ಮಂದೀ ಹೆಸರ ನನಗ ಹೇಳಬ್ಯಾಡಾ... ಅದೇನ ಇರ್ಲಿ. ಮುಂದಿನ ವಾರ ಬರ್ತೀನು. ಸುಂದ್ರೀನ ತಯಾರ ಮಾಡು. ಹಿಂದ್ಕ ಸುಂದ್ರಿ, ಮರ್ಳ್ಯೋ ಒಲ್ಲೆಂದಾಳು ಅಂತಿದ್ದಿ ಒೂಂಚೂರ ಸಂವದೂ ಅಂದ್ರ ಹಾದ್ಯಾಗ ಬರ್ತಾವು."

"ಕಾಶಪ್ಪನ ಆಶ್ವಾಸನೆಯಿಂದ ಸಾವಿರ ರೂಪಾಯಿ ಪಡೆದಷ್ಟು ಸಂತೋಷವಾಗಿತ್ತು ರಾಣವ್ವಳಿಗೆ.

"ಸುಂದ್ರೀನ ಹಾದ್ಯಾಗ ತರೋದೇನ ತ್ರಾಸ ಇಲ್ಲಾ. ಅದೇನೋ ಮದವಿಗಿದವಿ ಅಂತ ತಲ್ಯಾಗ ಹುಚ್ಚ ಸೇರೇತಿ. ಖಾಲಿ ಕುಂತ ಜೀವಪ್ಪ ಏನೇನೋ ತಗದಿರ್ತಾನು. ಅದ್ಕ ನಾ ಚಿಂತೀ ಮಾಡಿಲ್ಲಾ. ನನ್ನ ಮಗಳ ನನ ಕೈಯಾಗಿಲ್ಲೇನ?" ತೃಪ್ತಿಯ ನಗೆ ನಕ್ಕು ರಾಣವ್ವ ಸೆಟ್ಟರ ಮುಖದ ಮೇಲಿನ ಸಂದೇಹವನ್ನು ಅಳಿಸಿ ಹಾಕಿದ್ದಳು.

× × ×

ಬೆಂಗಳೂರಿನಿಂದ ಚಂದ್ರನ ಪತ್ರ ಸ್ಫೋಟಕ ದ್ರವ್ಯವನ್ನು ಅಂಟಿಸಿಕೊಂಡು ಬರುವುದೆಂದು ಸುಂದರಿ ಎಂದೂ ತಿಳಿದಿರಲಿಲ್ಲ. ಪತ್ರಬಾಂಬ್ ಪತ್ರ ತೆಗೆದ ಕೂಡಲೇ ಆಸ್ಫೋಟಿಸಬಹುದು. ಆದರೆ ಚಂದ್ರನ ಪತ್ರ ಮಾತ್ರ ಒಂದಿಷ್ಟು ವಿಲಂಬಿಸಿ ಪತ್ರದ ಕೊನೆಯಲ್ಲಿ ಮದ್ದನ್ನು ಸಿಡಿಸಿತ್ತು. ಪ್ರಾರಂಭವೇನು, ಕೊನೆಯೇನು, ಆಸ್ಫೋಟನೆಯಿಂದ ಸುಂದರಿಯ ದೇಹ ಒಡೆದು ಚಿಪ್ಪಾಡಿಯಾಗಿ ಆಸ್ಪತ್ರೆ ಕಾಣದಿದ್ದರೂ, ಆಕೆಯ ಹೃದಯ ಮಾತ್ರ ಚೂರುಚೂರಾಗಿತ್ತು.

"...ನೀನು ತಿಳಿಸಿದ ಸಂಗತಿ ನಾನೇ ಹೊಣೆಗಾರನೆಂದು ಹೇಗೆ ಹೇಳಬೇಕು? ಈ ಹಿಂದೆ ನಾವು ಸೇರಿರಬಹುದು. ನಿಮ್ಮ ತಾಯಿಯ ಒತ್ತಾಯದಂತೆಯೂ ಬೇರೆ ಯಾರಾದರೂ ಹೊಣೆಗಾರರಿದ್ದರೆ?... ಈಗ ನನ್ನ ಮನಸ್ಸು ಸರಿಯಿಲ್ಲ. ಏನಾದರೂ ಬರೆದು ತೊಂದರೆ ಕೊಡಬೇಡ. ಈ ಸಂಗತಿ ಕಾಕಾನಿಗೂ ತಿಳಿಸಬಾರದು. ನನ್ನ ಮಾತು ಮೀರಿದರೆ..." ಇನ್ನೂ ಏನೇನೋ ಗೊಂದಲಿಸಿದ ಮನಸ್ಸು ತೋಚಿದಂತೆ, ಹದಗೆಟ್ಟ ತಲೆ ಚಿಂತಿಸಿದಂತೆ, ಲಗಾಮಿಲ್ಲದ ಕೈ ಬರೆದಂತೆ ಅಕ್ಷರ ಬಿಗಿದುಕೊಂಡಿದ್ದವು.

ಆ ದಿನ ಕೂಡ ಸುಂದರಿ ನೆಲ ಬಿಟ್ಟು ಏಳಲೇ ಇಲ್ಲ. ಗಾದಿಯ ಬುಡಕ್ಕೆ ಸೇರಿದ ಆ ಪತ್ರವನ್ನೇ ಒತ್ತಿ ಮಲಗಿಕೊಂಡಿದ್ದಳು. ಈ ಸಲ ಬೆಂಗಳೂರಿನಿಂದ ಚಂದ್ರ ಬಂದಾಗಿನ ನಡತೆಯೇ ಬೇರೆಯಾಗಿ ಕಂಡಿತ್ತು. ಸುಂದರಿಗೆ ಮೊದಲು ಅನೇಕ ಸಲ ಬಂದಾಗಿನ ಹಿತಕ್ಕಿಂತ ಈ

ಸೆಲದ ಹಿತ ಪರಕೀಯವಾಗಿ ಅನುಭವವೇದ್ಯವಾಗಿತ್ತು.

ಮರುದಿನ ಬರುವುದಾಗಿ ಹೇಳಿ ಕಳಿಸಿದ ಕಾಶಪ ಸೆಟ್ಟಿಯ ಪೌರೋಹಿತ್ಯ ವಹಿಸಬೇಕಾಗಿದ್ದ ರಾಣವ್ವಳಿಗೆ ಒಂದು ಮಹಾ ಚಿಂತೆ ಮಗಳನ್ನು ಸಾಂತ್ವನಗೊಳಿಸಲು ಆಗಿರಲಿಲ್ಲ. ಎಬ್ಬಿಸಿ ಊಟ ಮಾಡಿಸಲು ಯತ್ನಿಸಿ ಸೋತಿದ್ದಳು.

ಅವಸರದಿಂದ ಬಂದ ಜೀವಣ್ಣಾ ಕಾಕಾನನ್ನು ಕಂಡು ಅನಿವಾರ್ಯವಾಗಿ ಸುಂದರಿ ಎದ್ದು ಕುಳಿತಳು. ತಾಯಿ ಆತನನ್ನು ಕಳುಹಿಸಿರಬೇಕೆಂಬ ಸಂದೇಹಕ್ಕೆ "ನಿಮ್ಮವ್ವ ಹೇಳಿದ್ಲು. ಯಾಕ ಮಲಗೇದಿ? ಮೈಯಾಗ ಆರಾಮ ಇಲ್ಲೇನು?" ಎಂದ ಜೀವಣ್ಣನ ಉಪಚಾರದ ಪ್ರಶ್ನೆಯೇ ಖಚಿತ ಮಾಡಿಕೊಟ್ಟಿತ್ತು.

ಹಾಸುಗೆಯಿಂದ ಎದ್ದು ಸುಂದರಿ ತಲೆಯ ಮೇಲೆ ಕೈಯಾಡಿಸಿಕೊಂಡು ಸೀರೆ ಸರಿಪಡಿಸಿಕೊಂಡಳು ಗಾದಿಯ ಒಂದು ಮೂಲೆಗೆ ಸರಿದು ಕಾಕಾನಿಗೆ ಕೂಡಲು ಅವಕಾಶ ಮಾಡಿಕೊಟ್ಟಳು.

"ಯಾಕ?" ಕಾಕಾನ ಮುಂದಿನ ಮಾತು ಗಂಟಲಿನಿಂದ ಪೂರ್ತಿ ಹೊರಬರುವುದರಲ್ಲಿ ದುಃಖ ಚಿಮ್ಮಿ, ಆಕೆ ಬಿಕ್ಕಳಿಸಿ ಮುಖ ಮುಚ್ಚಿಕೊಂಡಳು. ಕಾಕಾನಿಗೆ ಮತ್ತೂ ಸಂದೇಹ ದೂರದ ಬೆಂಗಳೂರಿನ ಚಂದ್ರಕೆಂಡ ಕೆದಕಿ ಹೊಗೆಯಾಡಿಸುತ್ತಿರುವ ಚಿತ್ರ ಅವನ ಒಗೆಗಣ್ಣಿಗೆ ಕಾಣುತ್ತಿರುವಂತೆ, ಸುಂದರಿ ಚಂದ್ರನ ಬೆದರಿಕೆಯನ್ನು ಮರೆತು ಗಾದಿಯ ಕೆಳಗಿನ ಪತ್ರವನ್ನು ಮುಂದೆ ಸರಿಸಿದ್ದಳು. ಕಾಕಾ ಅದನ್ನು ಪೂರ್ತಿಯಾಗಿ ಓದಿಕೊಂಡ, ಮತ್ತೂ ಮತ್ತೂ ದಿಟ್ಟಿಸಿ ಮಬ್ಬು ದೃಷ್ಟಿಯಲ್ಲಿ ಅಕ್ಷರಗಳ ಸಂದುಗೊಂದುಗಳನ್ನು ಜಾಲಿಸಿದ. ಅರ್ಥವಾಗಿತ್ತು ಆತನಿಗೆ. ಜೀವಣ್ಣಾ ಕಾಕಾನ ಬಲಗೈ ಮುಷ್ಟಿ ಬಿಗಿದುಕೊಂಡಾಗ ಅಲ್ಲಿ ನರಗಳೆದ್ದು ಕೈ ಕಂಪಿಸಿ ಹಾಸು ಹೊಯ್ದಿದ್ದು ಸುಂದರಿಗೆ ಕಂಡಿತ್ತು. ಆದರೆ ನರೆತ ಕೈಯಲ್ಲಿ ಸ್ಥಿರತೆ ಎಲ್ಲಿಯದು? ತುಸು ಸಮಯ ಕಾಕಾನ ಕೈ ಕಂಪಿಸುತ್ತಲೇ ಇತ್ತು.

"ಸುಂದರೀ, ನೀ ಕಾಳಜಿ ಮಾಡಬ್ಯಾಡಾ, ಆ ಚಂದ್ರ್ಯಾನ ತಂದ ನಿನಗ ಗಂಟ ಹಾಕೇ ಎಡ್ವೇ ಕೆಲ್ಸಾ! ನೀವೂ ವಯಾದಾಗ ತತ್ತೀಗೋಟ ಹಿಡ್ಕೊಂಡ ಗಟ್ಟಿ ಇರೂದಿಲ್ಲಾ! ತತ್ತೀ ಯಾಂಸಿ ಹಿಡದ ಒಡದಾಂಗ ಮನಸ ಸಡ್ಲ ಬಿಡ್ತೀರಿ. ಅದೇನಾರ ಆಗಲಿ! ಇದ್ಕ ಚಂದ್ರ್ಯಾನ ಕಾರ್ಣ ಹೌದಲ್ಲೊ?" ಎಂದು ನಡುಗುವ ದನಿಯಲ್ಲಿಯೇ ಜೀವಣ್ಣಾ ಕಾಕಾ ತನ್ನ ಖಾದಿ ಧೋತರ ಚುಂಗಿನಿಂದ ಕಣ್ಣೀರು ನೀವಿಕೊಂಡಿದ್ದು ಸುಂದರಿ ಕಾಣದಿರಲಿಲ್ಲ. ಕಣ್ಣು ಒರತೆ ಬತ್ತಿದಂತೆ ಶೂನ್ಯ ದೃಷ್ಟಿಯಿಂದ ಸುಂದರಿ ಎತ್ತಲೋ ದೃಷ್ಟಿ ನೆಟ್ಟಿದ್ದಳು.

"ಇದ್ಕ ಚಂದ್ರ್ಯಾನ ಕಾರ್ಣ ಹೌದಲ್ಲೊ?" ಜೀವಣ್ಣನ ಮರು ಪ್ರಶ್ನೆ ಸುಂದರಿಯನ್ನು ಬಾಹ್ಯಪ್ರಜ್ಞೆಗೆ ಇಳಿಸಿ ತಂದಾಗ ಆಕೆ "ಹ್ಞೂ" ಎಂದಿಷ್ಟೇ ಹೇಳಿದ್ದಳು.

× × ×

ಜೀವಣ್ಣಾ ಕಾಕಾ ಬೆಂಗಳೂರಿಗೆ ಹೋದ ಸಮಾಚಾರ ತಿಳಿದು ಎಲ್ಲರಿಗಿಂತ ಹೆಚ್ಚಿಗೆ ರಾಣವ್ವಳಿಗೆ ಹಾಲು ಸಕ್ಕರೆ ಕುಡಿದಂತಾಗಿತ್ತು. ಆ ಮುಂಜಾನೆ ಸಡಗರದಿಂದ ಮಗಳಿಗೆ ಇಷ್ಟಿಷ್ಟು ಉಪಚಾರ ಮಾಡಿ, ಎಲ್ಲವ್ವನ ಗುಡಿಗೆ ಕರೆತಂದು ಪೂಜಾರಿಗೆ ಕಾಣಿಕೆಯನ್ನಿತ್ತಳು. ಸಂಜೆಗೆ ಬರಲಿರುವ ಲಕ್ಷ್ಮಿಯ ಸಾವಿರ ಸ್ವರೂಪ ಹುಸಿಯಾಗದೆ ಹೋಗಬಹುದೆಂಬ ಧೈರ್ಯ ಆಕೆಗೆ. ಮಗಳು ಗೆಲುವಾಗಿರುವಂತೆ ಪ್ರಯತ್ನಿಸುತ್ತಲಿದ್ದಳು. ಆದರೆ ಮೂಲ ಮಂತ್ರವನ್ನು ಪಠಿಸಲು ರಾಣವ್ವಳಿಗೆ ಎದೆಯಾಗಿರಲಿಲ್ಲ. ಗಂಟಲಲ್ಲಿಯ ಮಾತು ಜಿಗುಟಾಗಿ ಅಂಟಿಕೊಂಡಿತ್ತು. ಆದರೆ ಸುಂದರಿ ಎಲ್ಲವ್ವನ ಗುಡಿಗೆ ಹೋಗಲು ತಯಾರಾಗಿದ್ದು, ಇನ್ನೊಂದು ಉದ್ದೇಶಕ್ಕಾಗಿ.



× × ×

ಸೀಮೆಗೊಬ್ಬರ ಚೀಲ ಬೆನ್ನ ಮೇಲೆ ಹೊತ್ತ ಹನುಮ, ದೂರದಿಂದ ಎಲ್ಲವ್ವನ ಗುಡಿಯ ಹತ್ತಿರ ಸುಂದರಿಯನ್ನು ಕಂಡವನು ಸಾವ್ಕಾರ ಕೆಂಚಪ್ಪನಲ್ಲಿ ಚೀಲ ಇಳಿಸಿ ಮರಳುವಾಗ, ಎಲ್ಲಮ್ಮನ ಗುಡಿಯ ಎದುರು ಅಡ್ಡ ಬಿದ್ದು, "ತಾಯೀ" ಎಂದು ಇನ್ನೇನೋ ಒರಲಿಕೊಂಡ. ಸುಂದರಿ ನಿಂತ ಸ್ಥಳದಲ್ಲಿಯೇ ಒಂದಿಷ್ಟು ಕಾಲೂರಿ, ಒಂದು ಬಗೆಯ ಸುಖ ಅನುಭವಿಸಿದ್ದ.

ಗುಡಿಯಿಂದ ಮನೆಗೆ ಬಂದ ಬಳಿಕ ರಾಣವ್ವ ಮಗಳನ್ನು ಅತೀ ಪ್ರೀತಿಯಿಂದ ಮಾತನಾಡಿಸಿದಳು. ಮೈಯಲ್ಲಿಯ ಅಸ್ವಸ್ಥತೆಯೇ ಮಗಳ ಸಪ್ಪಗಿನ ಮುಖಕ್ಕೆ, ನಿರಾಸಕ್ತಿಗೆ ಕಾರಣವೆಂದು ಊಹೆ.

"ಸುಂದ್ರಿ, ಇಂದ ಮೋರ್ತ ಚಲೂ ಐತೆಂತ. ಸಂಜೀಕಡಿ ಸೆಟ್ರು ಬರ್ತಾರು. ಒಂದ್ಸಾವಿರ್ಕ ಹ್ಞೂ ಅನ್ನೇನಿ. ಅವರ್ನ, ಹ್ಞೂ ಅನ್ನಬೇಕಾದ್ರ ಉರಿ ಬಿಸ್ಲಾಗ ಎರೀ ಸುತ್ತಿಧಾಂಗಾತು. ಸೆಟ್ರು ಹಿಂಡೂ ಹೋಳಿಸಾಲ ಎಮ್ಮಿ ಇದ್ದಾಂಗ, ಮುಂದೂ ರೊಕ್ಕಾ ಬಿಚ್ತಾರು. ನಾಯೇನ ಹೇಳಬೇಕಾಗಿಲ್ಲ. ನೀನೂ ಸಾಲಿ ಬರ್ದಾಕಿ. ನಿನಗ ಭಾಳ ಕಿಮ್ಮತ್ತು, ರೂಪಾನೂ ಚೆಂದ..."

"ಅವ್ವಾ, ಇದೆಲ್ಲಾ ಏನ್ ಹೇಳ್ಲಾಕ ಹತ್ತಿದಿ? ಎಂದೋ ನಿನ್ನ ಹೇಳೇನಿ, ಇಂಥಾ ಮಾತ ನನ ಮುಂದ

ತಗೀ ಬ್ಯಾಡಾ ಅಂತ. ಈಗ ನನಗ ಮನ್ಯಾಕ ಇರ್ರಂದ್ರ ಈ ಮಾತ ತಗೀ ಬ್ಯಾಡಾ..." ಮೊದಲೇ ಘಾಸಿಗೊಂಡ ಸುಂದರಿಗೆ ಎಕ್ಕೆಯ ಹಾಲಿಗೆ ಸಕ್ಕರೆ ಸೇರಿಸಿದ ತಾಯಿಯ ಮಾತು ಸರಿಕಾಣಲಿಲ್ಲ. ಮಗಳ ಮಾತಿನಿಂದ ತಾಳ್ಮೆಗೆಟ್ಟರೂ ರಾಣವ್ವ, ಉಪಾಯವಾಗಿ ಆಕೆಯನ್ನು ಸಾಧುಗೊಳಿಸಬೇಕಾಗಿತ್ತು. ಕಾಕಾ ಊರಲ್ಲಿ ಇಲ್ಲದ್ದು ಆಕೆಗೆ ಇನ್ನೂ ಧೈರ್ಯ.

"ನೋಡ ಸುಂದ್ರಿ, ನೀ ನನ ಮಗಳು, ನನ ಹಕ್ಕ ಐತಿ. ನಿನ ಸುಖಕ್ಕ ಹೇಳ್ತನು. ನನಗೂ ಸುಖಾ! ನಾನೂ ಎಷ್ಟ ದಿನಾ ದುಡೀಬೇಕ? ಮುಪ್ಪಿನ ಕಾಲ್ಕ ನನಗ ನಿಂದ ಆಸ್ರಲ್ಲಾ! ಜೀವಪ್ಪ ಹೇಳ್ತಾನಂತ ತೆಲ್ಯಾಗ ಏನಾರೇ ಹಾಕ್ಕೋ ಬ್ಯಾಡಾ. ಗಿಣಿಗೆ ಹೇಳ್ದಂಗ ಹೇಳ್ತನು ನನ ಮಾತ ಕೇಳು. ಮದವಿ ಗಿದವಿ ನಮ ಹಣ್ಯಾಗ ಬರ್ದಿಲ್ಲ. ಆದ್ರೂ ಅದ ಕಡೀ ತನಕಾ ಪುರೋಸು ಮಾತಲ್ಲಾ..."

"ಅವ್ವಾ, ನಾ ಚಂದ್ರೂನ ಮದವಿ ಆಗ್ತನು. ನಿನಗೂ ಗೊತ್ತಿರ್ಬೇಕು, ಅದೆಲ್ಲಾ ಮಾತ ಆಗಿ ಹೋಗೇತಿ. ನೀ ನಡು ಬರಬ್ಯಾಡಾ, ಅಲ್ದ ಈಗ ನನ ಹೊಟ್ಟಿ-ನಿಂತೈತೆ..." ಮುಂದಾದರೂ ಹೇಳಲೇಬೇಕಾದ ಮಾತನ್ನು, ಬಾಯಿ ಬಿಚ್ಚಿ ಸುಂದರಿ ತಾಯಿಗೆ ಸ್ಪಷ್ಟ ಪಡಿಸಿ ಅಲ್ಲಿಂದ ಭರ್ರನೆ ಎದ್ದು ಹೋದಳು. ಮಗಳು ಬಸಿರು ನಿಂತ ಮಾತಿನಿಂದ ಹಾಗೇನು ಭಯಪಡದ ರಾಣವ್ವ ಆಕೆಯ ಲಗ್ನದ ಮಾತು ಕೇಳಿ ಸಂತಪ್ತಳಾಗಿದ್ದಳು. ತಲೆತಲಾಂತರದಿಂದ ಬಂದ ತಲೆಯಲ್ಲಿ ಭಂಡಾರ ಹಾಕಿಕೊಳ್ಳು ವ್ಯರೂಢಿ ಈಗಲೇ ನಿಂತರೆ, ಎಲ್ಲವ್ವನಿಗೇನು ಹೇಳಬೇಕು?

× × ×

ಯಾವ ಸಂತಾಪದಿಂದ ಜೀವಣ್ಣಾ ಕಾಕಾ ಬೆಂಗಳೂರಿಗೆ ಹೋಗಿದ್ದನೋ, ಅಷ್ಟೇ ಸಂತಾಪದ ಜತೆ ವ್ಯಗ್ರತೆ-ಉಗ್ರತೆಯನ್ನಿಷ್ಟು ಸೇರಿಸಿಕೊಂಡು ಬಂದ ದಾರಿಗೆ ಸುಂಕಕೊಡದೆ ಮರಳಿದ್ದ. ಅಲ್ಲಿ ಕಂಡ ಚಿತ್ರ ಇನ್ನೂ ವಿಸ್ಮಯಕಾರಕವಾಗಿ ರೂಪಾಂತರಿಸಿತ್ತು. ಆದಾರೋ ಶಾಸಕ ಸಂಬಂಧಿಕರು ಚಂದ್ರನನ್ನು ಹಿಡಿದು ಆತನಿಗೆ ಎಲ್.ಎಲ್.ಬಿ. ಮುಂದುವರಿಸಲು ವೆಚ್ಚವನ್ನಿತ್ತು, ಸಾಕಷ್ಟು ವರದಕ್ಷಿಣೆ ಸಲ್ಲಿಸಿ, ತಿಂಗಳ ಹಿಂದೆ ತಮ್ಮ ಮಗಳ ಜತೆ ಗಂಟು ಹಾಕಿ ಬಿಟ್ಟಿದ್ದರು. ಜೀವಣ್ಣಾ ಕಾಕಾ ಬಂದ ವಾಸನೆ ಹಿಡಿದ ಚಂದ್ರ, ಅವನ ಕಣ್ಣು ತಪ್ಪಿಸಲು ಮರೆಯಾಗಿದ್ದ. ಒಂದುವಾರದವರೆಗೆ ಕಾಯ್ದು, ಕೈ ಬರಿದು ಮಾಡಿಕೊಂಡು ಕತ್ತಲಲ್ಲಿ ಊರಿಗೆ ಮರಳಿದ್ದ ಕಾಕಾ. ಸುಂದರಿಗೆ ಬರೆದ ಚಂದ್ರನ ಪತ್ರದಲ್ಲಿಯ ಉದ್ದೇಶ ಈಗ ಸ್ಪಷ್ಟವಾಗಿತ್ತು. ಸುಂದರಿಯನ್ನು ಮೋಸಗೊಳಿಸಿದ ಆತ ಪಾರಾಗಲು, ಅದೇನೋ ಪಲಾಯನವಾದಿತ್ವದ ಮಾರ್ಗವನ್ನು ಅನುಸರಿಸಿ, ಅದನ್ನೇ ಯೋಚಿಸಿ ಬರೆದಿದ್ದ.

ಕಾಕಾನ ಒಂದೇ ಒಂದಾದ ಆಶಾಕಿರಣ ಕೂಡ ಕರಗಿದ್ದು, ಅಲ್ಲಿ ಕತ್ತಲಾವರಿಸಿತ್ತು. ದೀನ ದಲಿತರ ಉದ್ಧಾರಕ್ಕೆ ಪ್ರತಿಜ್ಞೆ ಗೈದಂತಿದ್ದ ಚಂದ್ರನ ವ್ಯಕ್ತಿತ್ವ, ಬೆಳೆಯ ನಿಲುವಿನಲ್ಲಿ ನಿಂತ ಬೆದರು ಬೊಂಬೆಯಂತೆ ಕಂಡಿತ್ತು.

× × ×

ಮುಂಬಯಿಯಿಂದ ಬಂದ ಕೇರಿಯ ಗೆಳತಿ ಕಮಲಿಯ ಜತೆ ಸುಂದರಿ ಮುಂಬಯಿಗೆ ಹೋಗಿದ್ದಳು. ಹವಾ ಬದಲಾವಣೆ ಎಂದು ರಾಣವ್ವ ಊರಲ್ಲಿ ಸುದ್ದಿ ಮಾಡಿದರೂ, ಸುಂದರಿಯ ಪಲಾಯನದ ಸಂದೇಹ ಸೋರಿ ಬಿಟ್ಟಿತ್ತು.

"ಹೊಟ್ಟ ಇಳ್ಸಾಕ ಹೋಗ್ಯಾಳು! ತಾಯೇನ ಗರ್ತಿಗಂಗವ್ವಾಂಗ ಮಾತಾಡ್ತಿದು. ಸಾಲೀ ಬರ್ದಾವ್ರ ಪಾಡೂ ನಮ್ಮಿಂತಾ ಕಮ್ಮಿ! ನಾವು ಮಾಡೂದೇನ ಈಕಿಯಾಂಗ ಕದ್ದಾ ಮುಚ್ಚಿ ಅಲ್ಲ..." ಎಂದು ಕೇರಿಯ ಅನೇಕ ಸಮವಯಸ್ಸಿನ ಯುವತಿಯರಿಗೆ ಆಡಿಕೊಂಡು ಬಾಯಿ ಹಗುರ ಮಾಡಿಕೊಳಲು ಅವಕಾಶದೊರೆತಿತ್ತು.

ಭ್ರಾಂತಳಾದ ಸುಂದರಿ ಮುಂಬಯಿಗೆ ಬಂದಾಗ ಅದೆಷ್ಟೋ ಸಲ ಸಾಯಲು ಪ್ರಯತ್ನಿಸಿದ್ದಳು. ಎದೆಯಾಗಿರಲಿಲ್ಲ. ಸಾಯಲೇನು? ಕ್ಷಣಕ್ಷಣಕ್ಕೂ ಮರಣಕ್ಕೆ ಅವಕಾಶಗಳಿದ್ದಾಗ, ಬಲುಕೆಟ್ಟದಾದ ಬದುಕುವ ಆಶೆ ಆಕೆಯ ಪ್ರಾಣವನ್ನು ಉಳಿಸಿತ್ತು. ಆ ಬೃಹತ್ ನಗರದಲ್ಲಿ ಬದುಕು, ತುಂಬ ವಿಶಾಲವಾಗಿ ಆಕೆಗೆ ಕಂಡಿತ್ತು.

ಕಣ್ಣು ಮುಂದಿನ ಆದರ್ಶಗಳೆಲ್ಲ ಕಳಚಿಕೊಂಡು ಬಿದ್ದಾಗ, ಚಂದ್ರನ ಇನ್ನೊಂದು ಸಂಸಾರದ ಕಲ್ಪನೆ ಮೂಡಿದಾಗ, ನೌಕರಿ ಕೊಡಿಸುವುದಾಗಿ ಹೇಳಿ ಕೇಡಿಯೊಬ್ಬ ಆಕೆಯ ಮಾನಭಂಗ ಮಾಡಿದಾಗ, ಆಕೆ ಹುಚ್ಚು ಹಿಡಿದಂತೆ ಆಗಿದ್ದ ಸಮಯ ಚಂದ್ರನ ಕೈಯಿಂದ ಕೆಡವಿ ಒಡೆದ ಗ್ಲಾಸಿನ ಚೂರನ್ನೇ ಹೊಕ್ಕಾಗ, ನೌಕರಿ ಹುಚ್ಚು ಆಶೆಯಲ್ಲಿ ಬೇರೆ ಬೇರೆಯವರ ತೋಳತೆಕ್ಕೆಯಲ್ಲಿದ್ದಾಗ ಹೊಟ್ಟೆ ಕಳೆದುಕೊಂಡು ಹೊಸ ಬದುಕನ್ನು-ಎಂಥ ಬದುಕೋ, ಆದರೂ ಬದುಕುವ ಆಶೆಯನ್ನು ಅರಿಸಿದಾಗ, ಸುಂದರಿಯ ಜೀವನ ಇನ್ನೊಂದು ತೆರ ಸಾಗಿತ್ತು.

× × ×

ಸುಂದರಿ ಮುಂಬಯಿಯಲ್ಲಿ ಸೂಳೆತನಕ್ಕೆ ನಿಂತ ಸಮಾಚಾರ ಎತ್ತಿನ ಗಾಡಿಯನ್ನೇರಿ ಬರಲಿಲ್ಲ. ಅದು ವಾಯುವೇಗದಲ್ಲಿಯೇ ಆಗಮಿಸಿ ಊರಲ್ಲಿ ಕಾಲೂರಿತ್ತು. ಆ ಸಮಾಚಾರ ಹರಡಿದ ದಿನವೇ ಜೀವಣ್ಣಾ ಕಾಕಾ, ಎಲ್ಲಿ ಪಲಾಯನ ಗೈದಿದ್ದನೋ ರಾತ್ರಿ ಮನೆಗೆ ಬಂದಿರಲಿಲ್ಲ.


"ಒಳ್ಳೋಳ್ಳೇ ಹೆಣ್ಣೀನ ನೆನಪಾನ ನೆನಪೋ..." ಎಂದು ಸೋತ ಧ್ವನಿಯಲ್ಲಿ ಹಲುಬುತ್ತ ಬಂದ ಹನುಮ ಆ ರಾತ್ರಿ ಸುಂದರಿಯ ಕಿಟಕಿಗೆ ಹಣೆ ಹಚ್ಚಿ ಜಜ್ಜಿಕೊಳ್ಳುತ್ತಲೇ ಇದ್ದ. ಕುಡಿದ ಅಮಲಿನಲ್ಲಿ ನೋವಿನ ಅರಿವೂ ಆತನಿಗಿರಲಿಲ್ಲವೇನೋ! ಆತನ ಹಣೆಯಿಂದ ರಕ್ತ ಬಳಬಳ ಸುರಿಯುತ್ತಲಿತ್ತು. ಆದರೂ ಜಜ್ಜಿಕೊಳ್ಳುತ್ತಲಿದ್ದ.

●

ಬೀರಯ್ಯಾ ಹೀಗೆ ಬಾರಯ್ಯಾ

ನಿತ್ಯವೂ ತರಗತಿಗೆ ಬಂದು
ಹಾಜರಿ ಹೇಳಿ
ಸುಸುಳಿ ಹೋಗುತ್ತಿದ್ದ
ಬೀರಯ್ಯನನ್ನು
ಅಧ್ಯಾಪಕರು ಒಮ್ಮೆ
ಹೀಗೆಂದು ಹೇಳಿದರು:
'ಬೀರಯ್ಯಾ, ಹೀಗೆ
ಬಾರಯ್ಯ' ಎಂದು!

– ಗುಂಡ್ಮಿ ಚಂದ್ರಶೇಖರ ಐತಾಳ


FIRE WORK AGENCIES
GLOW YOUR DIWALI
FIRE WORKS BEST ALWAYS
BUY TODAY
FIRE WORK FINE QUALITY
"ಈಗಿನ ಸಿಡಿಮದ್ದಿನ ಧೈರ್ಯವಿಲ್ಲರಾಯರೆ. ಶೀವ್ರ ಬಂದೆರಡು ಇಲ್ಲೇ ಉರಿಸಿ ತೋರಿಸಿ"
KARNATAKA 74
"ಅಮೇರಿಕಾದೋರು ಎರಡು-ಮೂರು ಜನ ಕೂಡಿಸುವಾಗ ನಾವ್ಯಾಕೆ ಟಾಮಿಯನ್ನು ಕಳಿಸಬಾರ-ದೂಂತ-ಒಂದು ಹೊಸ ಎಕ್ಸ್‌ಪೆರಿಮೆಂಟ್ ಮಾಡಲಿದ್ದೇನೆ
ದೀಪಾವಳಿ ಪಟಾಕಿ
PRICE RISE
"ಈ ರಾಕೆಟ್ಟಿಗೆ ಬೆಲೆ ಏರಿಕೆ ಅಂತ ಹೆಸರಿಟ್ಟಿದ್ದು ತಪ್ಪು ಕಣೋ ಇದು ಬೇಗನೇ ಮೇಲೆ ಏರಿದರೂ ಹಾಗೆಯೇ ಇಳಿಯುತ್ತಲ್ಲಾ"
ಯಾಕೋ ಒಂದು ಪಟಾಕಿಯೂ ಸಿಡಿಯೋಲ್ಲ ಇವುಗಳನ್ನು ಸಾಲವಾಗಿ ತಂದಿದ್ದೀಯೇನಪ್ಪಾ
Shree

೧೯೭೪ ರ ಹಿಂದಿ ಚಿತ್ರರಂಗ- ಒಂದು ನೋಟ

ನಿರಾಶೆಯ ನೆರಳಲ್ಲೂ ಆಶೆಯ ಸುಳಿಮಿಂಚು

— ವಸಂತ ಕಲಕೋಟಿ

1973–74 ರ ವರುಷ ಹಿಂದೀ ಚಿತ್ರರಂಗಕ್ಕೆ ಅಷ್ಟು ಆಶಾದಾಯಕವಾಗಿ ಪರಿಣಮಿಸಲಿಲ್ಲ. ಚಿತ್ರಗಳಸಂಖ್ಯೆ ಕಳೆದ ವರ್ಷಕ್ಕಿಂತ ಕಡಿಮೆಯೇ. ಜೊತೆಗೆ ಚಿತ್ರಗಳ ಗುಣಮಟ್ಟಗಳಲ್ಲಿಯೂ ಸಹ ತುಂಬ ವ್ಯತ್ಯಾಸ. ರಾಷ್ಟ್ರದ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಯ ವಿಷಮತೆಯು ಚಿತ್ರರಂಗದ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿದೆ. ಅನೇಕ ವರುಷಗಳಿಂದ ತಮ್ಮ ಪ್ರಭಾವ ವನ್ನು ಬೀರಿ ಅನಭಿಷಕ್ತದೊರೆಗಳೆನಿಸಿದ್ದ ಕೆಲ ಕಲಾವಿದರು ಈ ವರುಷ ಹೊಸ ಕಲಾವಿದರ ಅಪ್ರತಿಮ ಕಲಾ ಪ್ರತಿಭೆಯ ಸೆಳವಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಭಾರೀ ತಾರಾಜೋಡಿಗಳಿಂದ ಕೂಡಿದ ಚಿತ್ರ ಯಶಸ್ವಿಯಾಗಬಲ್ಲದೆಂಬ ಭರವಸೆ ತಾಳಿದ್ದ ನಿರ್ಮಾಪಕರಿಗೆ ನಿರಾಶೆಯಾದರೂ ಅವರಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಚಿತ್ರಗಳಲ್ಲಿ ಸಂಗೀತದ ಪ್ರಾಧಾನ್ಯ ಪ್ರಭಾವ ಕುಂದುತ್ತ ಬಂದಿದೆ. ಹಾಸ್ಯದ ಅಂಶ ಕಡಿಮೆಯಾಗುತ್ತಿದೆ. ಕಾಮಪ್ರಚೋದನೆ, ಅಪರಾಧ ಮನೋವೃತ್ತಿಯನ್ನು ಪ್ರಚೋದಿಸುವ ಚಿತ್ರಗಳು ಈ ವರ್ಷದ ಬಹ್ವಂಶ ಹಿಂದೀ ಚಿತ್ರಗಳ ಜೀವಾಳವೆಂದರೆ ಬಹುಶಃ ತಪ್ಪಾಗದು. ಪುಣೆಯ ಚಲಚ್ಚಿತ್ರ ಹಾಗೂ ಟೆಲಿವಿಜನ್ ಕೇಂದ್ರದಲ್ಲಿ ತರಬೇತಿ ಪಡೆದ ಅನೇಕ ಕಲಾವಿದರುಗಳಿಗೆ ಹಿಂದೀ ಚಿತ್ರರಂಗದಲ್ಲಿ ಅವಕಾಶ ದೊರಕಿದೆ. ಹೊಸ ಮುಖಗಳ ಸಂಖ್ಯೆ ಹೆಚ್ಚಿದೆ. ಭಾರತವು ಎದುರಿಸುತ್ತಿರುವ ಜ್ವಲಂತ ಸಮಸ್ಯೆಯ ಮೇಲೆ ಕ್ಷ ಕಿರಣ ಬೀರುವ ಚಿತ್ರಗಳ ಸಂಖ್ಯೆ ತೀರ ಕಡಿಮೆ. ಐತಿಹಾಸಿಕ ಕಥೆಯನ್ನಾಧರಿಸಿದ ಅಥವಾ ಐತಿಹಾಸಿಕ ಹಿನ್ನಲೆಯಲ್ಲಿ ರೂಪುಗೊಂಡ ಹಿಂದೀಚಿತ್ರ ಬಿಡುಗಡೆಯಾಗಿಲ್ಲ. ಕೆಲ ಪೌರಾಣಿಕ ಚಿತ್ರಗಳು ತೆರೆಕಂಡಿದ್ದರೂ ಗುಣ ಮಟ್ಟದಲ್ಲಿ ತೀರ ಕೀಳಮಟ್ಟದಲ್ಲಿರುವಂಥವಾಗಿವೆ. ಚಲಚ್ಚಿತ್ರ ನಿಯಂತ್ರಣ ಮಂಡಳ (Film Censor Board) ವನ್ನು ವಂಚಿಸಲು ಕೆಲ ನಿರ್ಮಾಪಕರು, ಅತ್ಯಂತ ಹೆಚ್ಚಿನಂಶದ ಕಾಮಪ್ರಚೋದನೆಯನ್ನುಂಟು ಮಾಡುವ ಪೌರಾಣಿಕ ಚಿತ್ರಗಳನ್ನು ಹೊರತಂದಿದ್ದಾರೆ. ಶೈಕ್ಷಣಿಕ ಸಮಸ್ಯೆ ಕುರಿತು ಒಂದೆರಡು ಚಿತ್ರಗಳು ತೆರೆಕಂಡಿದ್ದರೂ, ಅಲ್ಲಿಯೂ ಸಹ ವಿದ್ಯಾರ್ಥಿಗಳ ಅಸಹನೆ, ಅಶಿಸ್ತು, ಅನಾಚಾರ, ಶಿಕ್ಷಕರ ಅನೀತಿಗಳಿಗೆ ಅವಶ್ಯಕತೆಗಿಂತ ಹೆಚ್ಚು ಪ್ರಾಧಾನ್ಯ ನೀಡಿ, ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಕಾಮದ ಬೊಂಬೆಗಳನ್ನಾಗಿ ಮಾಡಲು ಯತ್ನಿಸಲಾಗಿದೆ. ಸಂಖ್ಯೆಯಲ್ಲಿ ಕಡಿಮೆಯೆನಿಸಿದರೂ ಕೆಲವಾದರೂ ಒಳ್ಳೆಯ ಚಿತ್ರಗಳು ಬೆಳಕು ಕಂಡಿವೆ ಎಂಬುದೊಂದು ಸಮಾಧಾನದ ಸಂಗತಿ.

ನವ್ಹೆಂಬರ 1973ರಿಂದ ಆಕ್ಟೋಬರ 1974ರ ಅವಧಿಯಲ್ಲಿ ಒಟ್ಟು 142 ಹಿಂದಿ ಚಿತ್ರಗಳು ಬಿಡುಗಡೆಯಾಗಿವೆ. ಅವುಗಳಲ್ಲಿ ಪ್ರತಿಶತ 80ರಷ್ಟು ಸಾಮಾಜಿಕ ಚಿತ್ರಗಳಾಗಿವೆ. ಸಾಮಾಜಿಕ ಸಮಸ್ಯೆಗಳನ್ನು ಆಧರಿಸಿದ ಚಿತ್ರಗಳ ಸಂಖ್ಯೆ 82 ಇದ್ದರೆ ಅಪರಾಧಿ ಮನೋವೃತ್ತಿಯನ್ನಾಧರಿಸಿ ತೆರೆ ಕಂಡ ಚಿತ್ರಗಳ ಸಂಖ್ಯೆ 27. ಪೌರಾಣಿಕ ಚಿತ್ರ ಗಳ ಸಂಖ್ಯೆ 6. ಅದರಂತೆ ಶೈಕ್ಷಣಿಕ ವಿಷಯವನ್ನಾಧರಿಸಿ ತೆರೆಕಂಡ ಚಿತ್ರಗಳು ಎರಡು ಅಥವಾ ಮೂರು. ಕೇವಲ ಏಳು ಕಲಾತ್ಮಕ ಹಿಂದೀ ಚಿತ್ರಗಳು ಈ ವರುಷ ತೆರೆಕಂಡಿವೆ. ಹಿಂದೀ ಚಿತ್ರರಂಗದಲ್ಲಿ ಈ ಚಿತ್ರಗಳು ಬಹು ಪರಿಣಾಮ, ಪ್ರಭಾವವನ್ನುಂಟು ಮಾಡಲು ಸಮರ್ಥವಾಗಿವೆ. ಸಾಮಾನ್ಯ ಪ್ರೇಕ್ಷಕರ ಒಲವು ಮಾತ್ರ, ಅಪರಾಧೀ ಮನೋವೃತ್ತಿ ಹಾಗೂ ಕಾಮ ಪ್ರಚೋದನೆ, ಅಶ್ಲೀಲ ನೃತ್ಯ ಅವ್ಯವಹಾರ ವಿಷಯಗಳನ್ನಾಧರಿಸಿ ತಯಾರಾದ ಚಿತ್ರಗಳತ್ತ ವಾಲಿದೆಯೆಂದು ಹೇಳಬಹುದು.

ಯಶಸ್ವಿ ಚಿತ್ರಗಳು

ಶಮ್ಮಿ ಕಪೂರ ನಿರ್ದೇಶಿಸಿದ "ಮನೋರಂಜನ್" ರಾಜಾ ನವಾಥೆ ದಿಗ್ದರ್ಶಿಸಿದ "ಮನಚಲಿ" ದುಲಾಲ



[illegible]



ಟೆಲಿಫೋನ ಕರೆಗೆ ಓಗುತ್ತಿರುವ ಮೌಸಮಿ "ಬೇನಾಮ" ಚಿತ್ರದಲ್ಲಿ

ಗುಹಾ ದಿಗ್ದರ್ಶಿಸಿದ "ದೋಸ್ತ" ಸುಲ್ತಾನ ಅಹ್ಮದರ "ಹೀರಾ" ಅಲಿ ರಾಜಾ ದಿಗ್ದರ್ಶಿತ "ಪ್ರಾಣ ಜಾಯೆ ಪರ್ ವಚನ ನ ಜಾಯ್" ರಾಜ ಕಪೂರನ "ಬಾಬ್ಬಿ" ಬಿ. ನಾಗಿರೆಡ್ಡಿಯ 'ಪ್ರೇಮ ನಗರ' ಜೆ. ಓಂಪ್ರಕಾಶರ "ಅಪಕೀ ಕಸಂ" ಸಾಗರ ಸಹೋದರರ "ಹಮರಾಹೀ" ಅನಿಲ ಗಾಂಗುಲಿ ದಿಗ್ದರ್ಶಿತ 'ಕೋರಾ ಕಾಗಜ" ಮನೋಜ ಕುಮಾರನ "ರೋಟಿ ಕಪಡಾ ಔರ್ ಮಕಾನ" ಮೋಹನಕುಮಾರನ "ಅಮೀರ ಗರೀಬ" ಹೃಷಿಕೇಶ ಮುಕರ್ಜಿ ದಿಗ್ದರ್ಶಿಸಿದ 'ನಮಕ ಹರಾಮ" ಶಕ್ತಿ ಸಾಮಂತರ "ಅಜನಬೀ" ಮತ್ತು ಶಶಿಕಪೂರ ಅಭಿನಯಿಸಿದ "ಚೋರ ಮಚಾಯೆ ಶೋರ" ಗಲ್ಲಾ ಪೆಟ್ಟಿಗೆಯ ದೃಷ್ಟಿಯಿಂದ ತುಂಬಾ ಯಶಸ್ಸು ಪಡೆದರೆ ರಾಜಕುಮಾರನ 'ಬಾಬ್ಬಿ' ಮೆಟ್ರೋ ಚಿತ್ರಮಂದಿರದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿತು. "ಪ್ರೇಮನಗರ ' 'ಹಮರಾಹೀ' 'ಕೋರಾ ಕಾಗಜ' 'ನಮಕ ಹರಾಮ' 'ಮನೋರಂಜನ' 'ದೋಸ್ತ" 'ಅಪಕೀ ಕಸಂ' 'ಮನಚಲಿ" "ಕಹಾನೀ ಕಿಸ್ಮತ್‌ಕಿ" ಚಿತ್ರಗಳು ರಜತ ಮಹೋತ್ಸವ ಕಂಡವು. ಹೇಮಾಮಾಲಿನಿ, ಧರ್ಮೇಂದ್ರ, ಶತ್ರುಘ್ನ ಸಿನ್ಹ ಅಭಿನಯಿಸಿದ "ದೋಸ್ತ" ಚಿತ್ರವು ಎಲ್ಲೆಡೆ ಗಲ್ಲಾ ಪೆಟ್ಟಿಗೆಯ ವಿಕ್ರಮವನ್ನು ಮುರಿದಿದೆ ಎಂದು ಹೇಳಬಹುದು. ಭಾರೀ ತಾರಾಗಣವಿದ್ದೂ, ಅರವಿಂದ ಸೇನರ "ಕಸೌಟಿ" ತಪನ ಸಿನ್ಹ ಅವರ "ನಗೀನಾ" ಬಸು ಚಟರ್ಜಿಯವರ "ಉಸ್‌ಪಾರ್" ಹೃಷಿಕೇಶ ಮುಕರ್ಜಿಯವರ "ಫಿರ್ ಕಬ್ ಮಿಲೋಗಿ" ಚಿತ್ರಗಳು ಯಶಸ್ವಿಯಾಗಲಿಲ್ಲ. ರಾಷ್ಟ್ರಭಕ್ತಿ ಪ್ರೇರಿತ ಚೇತನ ಆನಂದರ "ಹಿಂದುಸ್ತಾನಕೀ ಕಸಂ" ದಾರಾಸಿಂಗನ "ಮೇರಾ ದೇಶ ಮೇರಾ ಧರ್ಮ" ನಿಸ್ತೇಜವೆನಿಸಿದವು. ಸಮಾಜವಾದವನ್ನು ಬಲವಾಗಿ ಪ್ರತಿಪಾದಿಸುವ ಹೃಷಿಕೇಶ ಮುಖರ್ಜಿಯವರ 'ನಮಕ ಹರಾಮ್' ಚಿತ್ರವು ಅಮಿತಾಭ ಬಚ್ಚನ್, ರಾಜೇಶ ಖನ್ನಾರ ಅತ್ಯುತ್ತಮ ಅಭಿನಯದಿಂದ ಉತ್ತಮ ಚಿತ್ರವೆನಿಸಿತು. ಆದರೆ ಸಮಾಜದ ಅನ್ಯಾಯದ ವಿರುದ್ಧ ಕಿಡಿಯೆಬ್ಬಿಸಿದ ಜೆ.ಎಚ್. ನರೀನ ದಿಗ್ದರ್ಶಿತ "ದೋ ಚಟ್ಟಾನೆ "ಅಭಿನಯದ ಕೊರತೆಯಿಂದ ಅಯಶಸ್ವಿಯಾಯಿತು.

ಅಪರಾಧೀ ಮನೋವೃತ್ತಿಯ ಚಿತ್ರಗಳಲ್ಲಿ ಬಿ.ಆರ್. ಚೋಪ್ರಾ ಅವರ '36 ಘಂಟೆ' ಗುಲಜಾರ್ ದಿಗ್ದರ್ಶಿತ 'ಅಚಾನಕ' ನಜೀರ ಹುಸೇನರ' ಯಾದೋಂಕಿ ಬಾರಾತ್" ಮೊದಲಾದವು ಯಶಸ್ವಿಯಾದವು. ಪೌರಾಣಿಕ ಚಿತ್ರಗಳಲ್ಲಿ "ಹನುಮಾನ ವಿಜಯ" "ಹರಹರಮಹಾದೇವ್" ಹೆಚ್ಚಿನಂಶ Sexdose ನಿಂದ ಯಶಸ್ಸು ಸಂಪಾದಿಸಿದವು ಪ್ರೇಕ್ಷಕರಲ್ಲಿ ಕಾಮ ಪ್ರಚೋದನೆಯನ್ನುಂಟುಮಾಡಲೆಂದೇ ನಿರ್ಮಿಸಲಾದ "ದೋ ನಂಬರಕೇ ಅಮೀರ" "ಬಾಜಾರ ಬಂದ ಕರೊ" "ಹವಸ್" "ಕಾಲಗರ್ಲ" "ಪ್ರೇಮ ಶಾಸ್ತ್ರ" ಚಿತ್ರಗಳು ಸಂಪೂರ್ಣ ಸೋಲನ್ನಪ್ಪಿದವು. ಆದರೆ ಕಾಮಶಾಸ್ತ್ರವನ್ನು ಶೈಕ್ಷಣಿಕ ದೃಷ್ಟಿಯಲ್ಲಿ ನಿರೂಪಿಸಲು ಯತ್ನಿಸಿದ ಆದರ್ಶರ "ಗುಪ್ತಜ್ಞಾನ" ನಿರೀಕ್ಷೆಗಿಂತ ಹೆಚ್ಚು ಯಶಸ್ಸು ಸಂಪಾದಿಸಿತು. ಈ ಚಿತ್ರದಲ್ಲಿ ಅನೇಕ ತಾಂತ್ರಿಕ ನ್ಯೂನತೆಗಳು ಕಂಡು ಬಂದರೂ, 'ಗುಪ್ತ ಜ್ಞಾನ" ವನ್ನು ಕದ್ದು ನೋಡುವ ಯುವಕ ಯುವತಿಯರ ಉತ್ಕಟ ಅಭಿಲಾಷೆ ಹಾಗೂ ವೃದ್ಧ ವಯಸ್ಕರ ಚಪಲದಿಂದ ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ತಂದು ಕೊಟ್ಟಿತು. ಶಿಕ್ಷಣ ಸಮಸ್ಯೆಯನ್ನು ಕುರಿತು ಚಿತ್ರಿಸಲಾದ "ಇಮ್ತಿಹಾನ" ಕೆಲ ಮಟ್ಟಿಗೆ ಸಫಲವಾದರೂ, ಆಶಾಪರೇಖ ಅಭಿನಯಿಸಿದ "ಅಂಜಾನ ರಾಹೇ" ಅಯಶಸ್ವಿಯಾಯಿತು.

ಸಂಪೂರ್ಣವಾಗಿ ಕಲಾತ್ಮಕ ದೃಷ್ಟಿಯನ್ನಿರಿಸಿಕೊಂಡು ಚಿತ್ರಿತವಾದ ಚಟರ್ಜಿಯವರ "ರಜನೀ ಗಂಧಾ" ಅನಿಲ ಗಾಂಗುಲಿ ದಿಗ್ದರ್ಶಿಸಿದ "ಕೋರಾ ಕಾಗಜ," ಬಸು ಭಟ್ಟಾಚಾರ್ಯರ "ಆವಿಷ್ಕಾರ" ಶಾಮ ಬೆನೆಗಲ್‌ರ "ಅಂಕುರ" ಎಂ.ಎಸ್. ಸತ್ಯು ದಿಗ್ದರ್ಶಿಸಿದ "ಗರಂ ಹವಾ" ಉತ್ತಮ ಚಿತ್ರಗಳಾಗಿವೆಯಲ್ಲದೇ ಹಿಂದೀ ಚಿತ್ರರಂಗದ ಬಗ್ಗೆ ಹೊಸ ಆಶೆಯನ್ನು ಮೂಡಿಸುವಲ್ಲಿ ಸಫಲವಾಗಿವೆ. ದಿಗ್ದರ್ಶನ, ಅಭಿನಯ, ಸಂಗೀತ ನಿಯೋಜನೆ, ಕಥಾವಸ್ತು ಹಾಗು ವಾಸ್ತವಿಕ ಅಂಶಗಳ ದೃಷ್ಟಿಯಿಂದ ಈ ಚಿತ್ರಗಳ ಸಾಧನೆ ತುಂಬಾ ಹಿರಿದಾಗಿದೆ. ಗಲ್ಲಾ ಪೆಟ್ಟಿಗೆಯ ಯಶಸ್ಸಿನ ದೃಷ್ಟಿಯಿಂದ "ಕೋರಾ ಕಾಗಜ" "ರಜನೀ ಗಂಧಾ" ಸಾಕಷ್ಟು ಯಶಸ್ಸು ಗಳಿಸಿವೆ. "ಕೋರಾ ಕಾಗಜ" ರಜತೋತ್ಸವ ಆಚರಿಸುವದನ್ನು ನೋಡಿದರೆ, ಕಲಾತ್ಮಕ ಚಿತ್ರಗಳಿಗೆ ಈಗೀಗ ಪ್ರೇಕ್ಷಕರು ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆಂಬುದು ತಿಳಿಯದಿರದು.

ಶ್ರೇಷ್ಠ ನಟ-ನಿರ್ದೇಶಕರು

ಅಭಿನಯದಲ್ಲಿ ತುಂಬ ಯಶಸ್ವಿಯಾದ ನಾಯಕ ನಟರಲ್ಲಿ ವಿನೋಧ ಖನ್ನಾ ("ಇಮ್ತಿಹಾನ") ಅಮಿತಾಭ ಬಚ್ಚನ್ (ನಮಕ್ ಹರಾಮ್" ರೋಟಿ ಕಪಡಾ ಔರ್ ಮಕಾನ") ರಾಜೇಶ ಖನ್ನಾ (ನಮಕ್ ಹರಾಮ" "ಪ್ರೇಮ ನಗರ" "ಅಪಕೀ ಕಸಂ" "ಆವಿಷ್ಕಾರ")

ಸುನೀಲ ದತ್ತ ("ಪ್ರಾಣಜಾಯ್ ಪರ ವಚನ ನ ಜಾಯ್" "36 ಘಂಟೆ") ಮನೋಜಕುಮಾರ (ರೋಟಿ ಕಪಡಾ ಔರ್ ಮಕಾನ್) ಶಶಿಕಪೂರ (ಪಾಪ ಔರ್ ಪುಣ್ಯ) ಧರ್ಮೇಂದ್ರ (ಯಾದೋಂಕಿ ಬಾರಾತ್" "ದೋಸ್ತ") ಸಂಜೀವ ಕುಮಾರ ("ಮನ ಚಲಿ" "ನಯಾ ಧಿನ್ ನಯೀರಾತ್) ಶತ್ರುಘ್ನಸಿನ್ಹ ("ದೋಸ್ತಾ" "ಬದಲಾ") ರಿಷಿ ಕಪೂರ ("ಬಾಬಿ) ರನ್ನು ಹೆಸರಿಸಬಹುದು. ನಟಿಯರಲ್ಲಿ ಜಯಾ (ನಯಾ ದಿನ್ ನಯೀರಾತ್" "ದೂಸರೀ ಸೀತಾ" "ಕೋರಾ ಕಾಗಜ") ತನುಜಾ ("ಹಮರಾಹೀ") ಡಿಂಪಲ್ ಕಪಾಡಿಯಾ ("ಬಾಬ್ಬಿ") ಹೇಮಾ ಮಾಲಿನಿ ("ಪ್ರೇಮ ನಗರ" "ದೋಸ್ತ" "ಹಾತ– ೯ ಸಫಾಯೀ") ಝೀನತ್ ಅಮಾನ ("ಹೀರಾ ಪನ್ನಾ "ಮನೋರಂಜನ") ಮುಮತಾಜ (ಆಪಕೀ ಕಸಂ) ಶರ್ಮಿಳಾ ಟಾಗೋರ (ಆವಿಷ್ಕಾರ) ಮೊದಲಾದವರನ್ನು ಹೆಸರಿಸಬಹುದು.

ವಿದ್ಯಾ ಸಿನ್ಹ, ಅಮೊಲು ಪಾಲೇಕರ ದಿನೇಶ ಠಾಕೂರ ("ರಜನೀ ಗಂಧಾ") ಶಬನಾ ಆಜ್ಮಿ, ಪ್ರಿಯಾ ತೆಂಡೂಲಕರ, ಸಾಧು ಮೇಹರ, ಅನಂತ ನಾಗರಕಟ್ಟಿ ("ಅಂಕುರ") ಗೀತಾ, ಕಲ್ಪನಾ ಸಹಾನಿ (ಗರಂ ಹವಾ") ರೋಚಕ ಪರಿಚಿತ್ (27 Down) ಗುಲಶನ್ ಆರೋರಾ, ಕಬೀರ ಬೇಡಿ, ("ಮಂಜಿ ೯ ಔರ ಭೀ ಹೈಂ) ಮೊದಲಾದವರು ಹೊಸಬರಾದರೂ ಶ್ರೇಷ್ಠ ಅಭಿನಯ ನೀಡಿದ್ದಾರೆ. "ಅಂಕುರ" ದ ಯಶಸ್ಸಿನ ಶಬನಾ ಆಜ್ಮಿ ಈಗಾಗಲೆ 30 ಚಿತ್ರಗಳ ನಾಯಿಕೆಯಾಗಿ ಅಭಿನಯಿಸಲು ಸಹಿ ಹಾಕಿದ್ದಾಳೆ. ಈಕೆ ಪುಣೆಯ ಫಿಲ್ಮ ಇನ್ಸಿಟ್ಯೂಟಿನ ಪದವೀಧರೆ. ಅಭಿನಯದಲ್ಲಿ ಪ್ರಥಮ ತರಗತಿಯಲ್ಲಿ ಪ್ರಥಮಳಾಗಿ ಪಾಸಾಗಿ ಸುವರ್ಣಪದಕ ಪಡೆದಿದ್ದಾಳೆ.

ದಿ॥ ಅವತಾರ ಕೌಲ (27 Down) ಗುಲಜಾರ್ ("ಅಚಾನಕ್) ಬಸು ಭಟ್ಟಾಚಾರ್ಯ ("ಆವಿಷ್ಕಾರ") ಬಸು ಚಟರ್ಜಿ ("ರಜನೀ ಗಂಧಾ") ಅನಿಲ ಗಾಂಗುಲಿ "(ಕೋರಾ ಕಾಗಜ") ಹೃಷಿಕೇಶ ಮುಖರ್ಜಿ (ನಮಕ್ ಹರಾಮ್) ಶಾಮ ಬೆನೆಗಲ್ ("ಅಂಕುರ") ರಾಜ ಕಪೂರ ("ಬಾಬಿ") ರಾಜ ತಿಲಕ (36 ಘಂಟೆ") ದುಲಾಲ ಗುಹಾ("ದೋಸ್ತ) ಎಮ್.ಎಸ್. ಸತ್ಯು ("ಗರಂ ಹವಾ") ಚೇತನ ಆನಂದ (ಹಿಂದೂಸ್ತಾನಕೀ ಕಸಂ") ತಪನ್ ಸಿನ್ಹ ("ಸಗೀನಾ") ಮನೋಜಕುಮಾರ್ ("ರೋಟಿ, ಕಪಡಾ ಔರ್ ಮಕಾನ್") ಜೆ. ಓಂ ಪ್ರಕಾಶ್ ("ಆಪಕೀ ಕಸಂ") ಅತ್ಯುತ್ತಮ ನಿರ್ದೇಶಕರೆನಿಸಿದ್ದಾರೆ. ಅವತಾರ ಕೌಲ್, ಶಾಮ ಬೆನೆಗಲ್ ಗುಲಜಾರ, ರಾಜ ತಿಲಕ ಎಂ.ಎಸ್. ಸತ್ಯ ಚಿತ್ರರಂಗದಲ್ಲಿ ಹೊಸದಾಗಿ ಸೇರಿದ ನಿರ್ದೇಶಕರಾಗಿದ್ದು ತಮ್ಮ ಪ್ರತಿಭೆಯಿಂದ ತುಂಬಾ ಯಶಸ್ಸು ಪಡೆದಿದ್ದಾರೆ.

ಲಕ್ಷ್ಮೀಕಾಂತ ಪ್ಯಾರೇಲಾಲ ("ಬಾಬ್ಬಿ" "ಮನ ಚಲೀ" "ದೋಸ್ತ") ಆರ್.ಡಿ. ಬರ್ಮನ್ ("ಯಾದೊಂಕಿ ಬಾರಾತ್" "ಹೀರಾಪನ್ನಾ" "ಆ ಗಲೇ ಲಗ್ ಜಾ" "ಉಸ್ ಪಾರ್") ಕಲ್ಯಾಣಜೀ ಆನಂದಜೀ (ಕಹಾನೀ ಕಿಸ್ಮತ್ ಕೀ") ವನ್ ಚಕ್ರವರ್ತಿ (36 ಘಂಟೆ") ಎಸ್.ಡಿ. ಬರ್ಮನ್ ("ಸಗೀನಾ") ಸಲೀಲ ಚೌಧರಿ ("ರಜನೀ ಗಂಧಾ") ಉಷಾ ಖನ್ನಾ ("ಹದಾಸ್") ಈ ವರ್ಷದ ಯಶಸ್ವೀ ಸಂಗೀತ ನಿರ್ದೇಶಕರೆಂದು ಹೆಸರಿಸಬಹುದು,



"ಹರ ಹರ ಮಹಾದೇವ"ದ ದುರ್ಗೆ ಜಯಶ್ರೀ ಗಡಕರ.



ನರ್ಗೀಸನಾ ಹಾಗೂ ವಿನೋದ ಮೆಹ್ರಾ ಸರಸ ಸಂಭಾಷಣೆಯಲ್ಲಿ. ಚಿತ್ರ "ಅಲಬೇಲಿ"



ಹೇಮಾ, ಮತ್ತು ಮೋಹನಚೋಟಿ "ಕಸೌಟಿ" ಚಿತ್ರದ ಒಂದು ಸನ್ನಿವೇಶದಲ್ಲಿ

ಕೆ.ಎ. ಅಬ್ಬಾಸರ ಕಥೆ "13th Victim ಆಧಾರದಿಂದ ಚಿತ್ರಿಸಲಾದ. ಗುಲಜಾರರ ಪ್ರಥಮ ದಿಗ್ದರ್ಶನದ "ಅಚಾನಕ್ " ಉತ್ತಮ ಕಥಾವಸ್ತು ವನ್ನು ಹೊಂದಿದೆ. ಉತ್ತಮ ಸೇವೆಗಾಗಿ ರಾಷ್ಟ್ರ ಪ್ರಶಸ್ತಿ ದೊರಕಿಸಿದ ಮಿಲಿಟರಿ ಮೇಜರ ತನ್ನ ಪತ್ನಿಯ ನಡತೆಯಲ್ಲಿ ಸಂಶಯ ತೋರಿ ಅವಳನ್ನು ಕೊಲ್ಲುತ್ತಾನೆ. ನಂತರ ಅವನಿಗೆ ಮರಣ ದಂಡನೆ ಯಾಗುತ್ತದೆ. ಆದರೆ ಮರಣದಂಡನೆಯ ಮೊದಲೇ ಜೇಲಿನಿಂದ ಮೇಜರ ಓಡಿ ಹೋಗುತ್ತಾನೆ. ಅಸ್ವಸ್ಥ ನಾಗಿ ಡಾಕ್ಟರ್ ಉಪಚಾರದಲ್ಲಿರುತ್ತಾನೆ. ಕೊನೆಗೂ ಆತನಿಗೆ ಮರಣ ದಂಡನೆ ತಪ್ಪದೇ ಹೋಯಿತು.

ಉತ್ತಮ ಕಥೆಗಳು

ರಮೇಶ ಬಕ್ಷಿ ಅವರ "ಅಥರಾ ಸೂರಜ ಕೆ. ಪೋಂಡೆ" ಹಿಂದಿ ಕಾದಂಬರಿ ಅವತಾರ ಕೌಲರ "27 Down" ಚಿತ್ರದ ಕಥೆಗೆ ಹಿನ್ನೆಲೆ ಒದಗಿಸಿದೆ. ಗುಲಶನ್ ನಂದಾ ಅವರ ಸುಪ್ರಸಿದ್ಧ ಕಾದಂಬರಿ "ಅಜನಬೀ" ಶಕ್ತಿಸಾಮಂತರ "ಅಜನಬೀ" ಚಿತ್ರಕ್ಕೆ ಕಥಾ ವಸ್ತು, ಆದರೆ ಚಿತ್ರದ ಯಶಸ್ಸಿಗೆ ಕಥಾ ವಸ್ತು ಅಷ್ಟು ಪೋಷಕವಾಗಿಲ್ಲ. ಮನು ಭಂಡಾ ರಿಯವರ ಕಥೆಯನ್ನು ಆಧರಿಸಿ ಚಿತ್ರಿಸಿದ "ರಜನಿ ಗಂಧಾ" ಒಳ್ಳೆಯ ಕಥಾವಸ್ತು. ಇಬ್ಬರು ಪ್ರೇಮಿ ಗಳ ಸೆಳೆತದಲ್ಲಿ ಸಿಕ್ಕು ಒದ್ದಾಡುತ್ತಿರುವ ಕಾಲೇಜು ಯುವತಿಯೊಬ್ಬಳ ಕಥೆ ತುಂಬ ಮಾರ್ಮಿಕವಾಗಿದೆ.

1947ರಲ್ಲಿ ಭಾರತದ ವಿಭಜನವಾದ ನಂತರ. ಭಾರತದಲ್ಲಿ ನೆಲೆಸಿದ ಮುಸಲ್ಮಾನ ವ್ಯಾಪಾರಿ



ಗರಂ-ಹವಾ "ಚಿತ್ರದಲ್ಲಿ ಶೌಕತ ಅಜ್ಮಿ ಮತ್ತು ಬಲರಾಜ ಸಹಾನಿ

ಯೊಬ್ಬನ ಕಥೆಯನ್ನು ಮನೋವೈಜ್ಞಾನಿಕ ರೀತಿ ಯಲ್ಲಿ "ಗರಂ ಹವಾ" ನಿರೂಪಿಸುತ್ತವೆ. ಆತನ ಮಕ್ಕಳು ಪಾಕಿಸ್ತಾನಕ್ಕೆ ಹೋಗುತ್ತಾರೆ. ಪಾಕಿಸ್ತಾನ ದಿಂದ ಬಂದ ಅಳಿಯನಾಗಬೇಕೆಂದಿರುವ ವ್ಯಕ್ತಿಯನ್ನು ಸಂಶಯದಿಂದ ಭಾರತ ಸರಕಾರವು ಬಂಧಿಸಿದಾಗ ವ್ಯಾಪಾರಿಯ ಮಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಷ್ಟೆಲ್ಲ ಇದ್ದರೂ ಆ ವ್ಯಾಪಾರಿ ತುಂಬ ಸಹನೆ ಯಿಂದ ಧೈರ್ಯದಿಂದ ಸಮಸ್ಯೆಗಳನ್ನು ಎದುರಿಸು ತ್ತಾನೆ. ಕಥೆ ಬಹು ಹೃದಯ ಸ್ಪರ್ಶಿಯಾಗಿದೆ. ತ ಕೆ.ಎ. ಅಬ್ಬಾಸರ್ ಕಥೆಯ ಆಧಾರದಿಂದ ರಾಜ ಕಪೂರರ 'ಬಾಬ್ಬಿ' ತುಂಬಾ ಜನಪ್ರಿಯವಾಯಿತು.



'ಅಂಕುರ'ದಲ್ಲಿ ಅನಂತ ನಾಗರಕಟ್ಟೆ, ಶಬನಾ ಅಜ್ಮಿ



ಹುಬ್ಬಳ್ಳಿಯ ವಿಕ್ರಮ ಹೀನಾ ಕೌಸರಳೊಂದಿಗೆ,
ಚಿತ್ರ "ಕಾಲ್ ಗರ್ಲ್"

ಬಡ ನಾಯಿಕೆ (ಡಿಂಪಲ್ ಕಪಾಡಿಯಾ) ಸಿರಿಮಂತ ನಾಯಕ (ರಿಷಿ ಕಪೂರ) ಸುತ್ತ ಕತೆ ಹೆಣೆಯಲಾಗಿದ್ದರೂ ಹೊಸ ರೀತಿಯಲ್ಲಿ ಪ್ರೇಕ್ಷಕರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಸನ್ನಿವೇಶಗಳನ್ನು ಯೋಜಿಸಲಾಗಿದೆ.

ಸುಪ್ರಸಿದ್ಧ ಕಲಾತ್ಮಕ ಚಿತ್ರ "ಅಂಕುರ ಕ್ಕೆ ಶಾಮ ಬೆನೆಗಲ್ ಕಥೆ ಬರೆದಿದ್ದಾರೆ. ಜಮೀನದಾರ ತಂದೆಯ ಆಗ್ರಹಕ್ಕೆ ಮಣಿದು ಪದವೀಧರ ಯುವಕನು ಹಳ್ಳಿಗೆ ಹೋಗಿ ಬೇಸಾಯ ಮಾಡುತ್ತಾನೆ. ಆದರೆ ಆತನಿಗೆ ಹಳ್ಳಿಯ ಜೀವನ ಒಗ್ಗದು. ಹಳ್ಳಿಯಲ್ಲಿ ಒಬ್ಬ ಕಿವುಡ, ಮೂಕ ರೈತನ ಹೆಂಡತಿಯನ್ನು ಮೋಹಿಸಿ ಅವಳೊಂದಿಗೆ ಅನೈತಿಕ ಸಂಬಂಧವಿಟ್ಟುಕೊಳ್ಳುತ್ತಾನೆ. ಅವಳು ಗರ್ಭಿಣಿಯಾಗುತ್ತಾಳೆ. ಆದರೆ ಕಿವುಡ, ಮೂಕ ರೈತ ತನ್ನ ಹೆಂಡತಿಯ ತಪ್ಪನ್ನು ಮನ್ನಿಸಿ ಮತ್ತೆ ಸ್ವೀಕರಿಸುತ್ತಾನೆ. ಇದು 'ಅಂಕುರ' ಕಥಾವಸ್ತು, ತುಂಬ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಕಾಲೇಜು ಶಿಕ್ಷಕರ ಆರ್ಥಿಕ ಸಮಸ್ಯೆ, ವಿವಾಹ ವಿಚ್ಛೇದನೆಯ ಪರಿಣಾಮವಾಗಿ ಹಾಗು ತಾಯಿಯ ಮಾತುಗಳನ್ನು ಕೇಳಿ ತನ ಸಂಸಾರವನ್ನು ಹಾಳು ಮಾಡಿಕೊಂಡ ಸುಶಿಕ್ಷಿತ ಮಹಿಳೆಯ ಕಥೆಯೇ "ಕೋರಾ ಕಾಗಜ," ಬಂಗಾಲಿ ಕಾದಂಬರಿ ಆಧರಿತ ಈ ಚಿತ್ರವನ್ನು ಅನೀಲ ಗಾಂಗೂಲಿ ನಿರ್ದೇಶಿಸಿದ್ದಾರೆ.

ಛಾಯಾಗ್ರಹಣದಲ್ಲಿ ರಾಧು–ಕರ್ಮಕರರ ("ಬಾಬ") ಗೋವಿಂದ ನಿಹಾಲನಿ, ಕಾಮತ ಘಾಣೇಕರ ("ಅಂಕುರ)" ಛಾಲಿ ಮಿಸ್ತ್ರಿ ("ಹೀರಾ ಪನ್ನಾ") ಯಶಸ್ವೀ ಛಾಯಾಗ್ರಾಹಕರು. "ಪ್ರೇಮ ನಗರ" "ರಂಜನೀ ಗಂಧಾ" "ಮನೋರಂಜನ" "ಹಮರಾಹೀ" ಕೋರಾ ಕಾಗಜ" "ನಮಕ್ ಹರಾಮ" "36 ಘಂಟೆ" 'ಅಮೀರ ಗರೀಬ" "ಗುಪ್ತ ಜ್ಞಾನ" "ಕಾಲಗರ್ಲ" "ಆವಿಷ್ಕಾರ" ಚಿತ್ರಗಳ ಛಾಯಾಗ್ರಹಣ ಉತ್ತಮ ಮಟ್ಟದಲ್ಲಿದೆ.

ಬಾಬ್ಬಿ-ಪ್ರಭಾವ

"ಬಾಬ್ಬಿ" ಚಿತ್ರ ಸಮಾಜ ಜೀವನದಲ್ಲಿ ಹೊಸ ಬದಲಾವಣೆಯನ್ನೇ ನಡೆಸಿದೆ. ಯುವಕ ಯುವತಿಯರು 'ಬಾಬಿ'ಯ ಅನುಕರಣೆ ನಡೆಸಿದ್ದಾರೆ. ಬಾಬಿ ಫ್ರಾಕ್ ಇಂದು ತುಂಬಾ ಜನಪ್ರಿಯತೆ ಪಡೆದಿದೆ. 'ಬಾಬಿ' ಹೆಸರಿನಲ್ಲಿ ಹೇಅರ್ ಕಟಿಂಗ್ ಸಲೂನು, ಲಾಂಡ್ರಿ, ಟೇಲರ್ ಚಪ್ಪಲ ಅಂಗಡಿಗಳು ಆರಂಭವಾಗಿವೆಯಲ್ಲದೆ ತಮ್ಮ ಮಕ್ಕಳಿಗೆ 'ಬಾಬಿ' ಎಂದು ಹೆಸರಿಡುವ ರೂಢಿ ಸಾಮಾನ್ಯವಾಗಿ ಬಿಟ್ಟದೆ.

ಈ ವರುಷ ಚಿತ್ರರಂಗಕ್ಕೆ ಹೊಸ ನಾಯಕ, ನಾಯಕಿ, ದಿಗ್ದರ್ಶಕ ಛಾಯಾಗ್ರಾಹಕ, ಸಂಗೀತ ದಿಗ್ದರ್ಶಕರು ಹೆಚ್ಚಾಗಿ ಪರಿಶ್ರಮಿಸಿದ್ದಾರೆ. ಸುಶಿಕ್ಷಿತ ಯುವಕ ಯುವತಿಯರು ಚಿತ್ರರಂಗದ ಕಡೆಗೆ ಆಕರ್ಷಿತರಾಗುತ್ತಿರುವದು ಚಿತ್ರರಂಗಗಳ ಅಭಿವೃದ್ಧಿಯ ದೃಷ್ಟಿಯಿಂದ ಶುಭದಾಯಕವೆಂದೇ ಹೇಳಬಹುದು. ಹೊಸಬರು ಹೆಚ್ಚಾಗಿ ಪುಣೆಯ ಫಿಲ್ಮ್ ಇನ್ಸಿಟ್ಯೂಟನಲ್ಲಿ ಶಾಸ್ತ್ರೋಕ್ತವಾಗಿ ತರಬೇತಿ ಪಡೆದವರಾಗಿದ್ದು ಚಿತ್ರರಂಗವನ್ನೇ ತಮ್ಮ ವ್ಯವಸಾಯವನ್ನಾಗಿರಿಸಿಕೊಳ್ಳುವ ಹಂಬಲ ಅವರಿಗಿದೆ. ನಾಯಕ, ನಾಯಕಿಯರನ್ನೆ ಸಂಪೂರ್ಣವಾಗಿ ಅವಲಂಬಿಸಿರುವ ಸ್ಥಿತಿ ಇಂದಿಲ್ಲ. ತಾಂತ್ರಿಕ ಹಾಗೂ ಕಥಾ ನಿರೂಪಣೆಯಡೆ ವಿಶೇಷ ಗಮನ ನೀಡಲಾಗುತ್ತಿದೆ.

ಕಲಾತ್ಮಕ ಚಿತ್ರಗಳಿಗೆ ಅವಕಾಶ, ಸೌಲಭ್ಯಗಳು ಸರಿಯಾಗಿ ದೊರೆಯುತ್ತಿಲ್ಲ. ಆ ಚಿತ್ರಗಳ ಪ್ರಚಾರ ಪ್ರಸಿದ್ಧಿಗಾಗಿ ಸಾಧನಗಳು ಅಷ್ಟಿಲ್ಲ. ಚಲಚ್ಚಿತ್ರ ವಿತರಕರು ಕಲಾತ್ಮಕ ಚಿತ್ರಗಳನ್ನು ಅಸಡ್ಡೆಯಿಂದ ಕಾಣುತ್ತಾರೆ. ಅಂತೆಯೇ '27 Down'" ದಂತಹ ಉತ್ತಮ ಚಿತ್ರ ಇನ್ನೂವರೆಗೆ ಮುಂಬಯಿಯಲ್ಲಿ ಕಮರ್ಶಿಯಲ್ ರೀತಿಯಲ್ಲಿ ತೆರೆ ಕಂಡಿಲ್ಲ. ಆದರೆ ಅವಕಾಶ ದೊರಕಿಸಿ ಕೊಂಡ "ರಜನೀ ಗಂಧಾ" ವಿಮರ್ಶಕರ ಹಾಗು ಜನಸಾಮಾನ್ಯರ ಮೆಚ್ಚುಗೆ ಗಳಿಸಿದೆ. ಉತ್ತಮ ಚಿತ್ರವೆಂದು ಹೇಳಲಾಗುತ್ತಿರುವ 'ಕ್ಷಿತಿಜ" ಇನ್ನೂ ತೆರೆ ಕಂಡಿಲ್ಲ.

ವಾಸ್ತವಿಕ ಜೀವನವನ್ನು ಆಧರಿಸಿ ಜನತೆಯ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳ ನಿವಾರಣೆಗೆ ಯತ್ನಿಸುವಂತಹ ಕಲಾತ್ಮಕ ಚಿತ್ರಗಳ ನಿರ್ಮಾಣಗಳೆಡೆ ನಮ್ಮ ಚಿತ್ರರಂಗ ಶ್ರಮಿಸಬೇಕು. ಕಲಾತ್ಮಕ ಚಿತ್ರಗಳ ಮಟ್ಟಿಗಾದರೂ ಕಪ್ಪುಹಣದ ಬಳಕೆಯನ್ನು ನಿಲ್ಲಿಸಬೇಕು. ಕಲಾತ್ಮಕ ಚಿತ್ರಗಳ ಅಭಿವೃದ್ಧಿಗೆ, ಪ್ರಗತಿಗೆ ನಮ್ಮ ಪತ್ರಿಕಾ ರಂಗ ತುಂಬ ಪ್ರೋತ್ಸಾಹ ನೀಡುತ್ತಿದೆ. ಕಲಾತ್ಮಕ ಚಿತ್ರಗಳ ವಾಸ್ತವಿಕ ವಿಮರ್ಶೆಯು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದೆ. ಈ ವಿಮರ್ಶೆಯನ್ನು ನೋಡಿಯೇ ಅನೇಕರು ಚಿತ್ರಗಳಿಗೆ ಹೋಗುವದುಂಟು. ಪ್ರೇಕ್ಷಕ ವರ್ಗ ನಿಧಾನವಾಗಿ ಬದಲಾಗುತ್ತದೆ. ಕಲಾತ್ಮಕ ಚಿತ್ರಗಳಿಗೆ ಇಂದಿನ ಸುಶಿಕ್ಷಿತ, ಯುವಕ ಯುವತಿಯರ, ಪ್ರೋತ್ಸಾಹ, ಸಿಗಬೇಕು. ಲೈಂಗಿಕ, ಅಥವಾ ಕಾಮ ಪ್ರಚೋದನೆಯ ಸನ್ನಿವೇಶಗಳಿಂದ ಕೂಡಿದ ಇಂದಿನ ಚಿತ್ರಗಳನ್ನು ಪ್ರೇಕ್ಷಕರು ತ್ಯಜಿಸಬೇಕು.

★●



ಸುದ್ಯೈವಿ ನಟಿ
ರಿನಾರಾಯು

118
Bharat Offset, DWR

ಸುದ್ದೈವಿ ತಾರೆ-
ರೀನಾರಾಯ್

—ರಮೇಶ ಕೆರೂರ



ವಿನೋದ ಮೆಹರಾನ ಅಪ್ಪುಗೆಯಲ್ಲಿ, ರೀನಾರಾಯ್ ಚಿತ್ರ "ಅರಜಾನ"

ಇತ್ತೀಚೆಗಷ್ಟೇ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಂಡ ರೀನಾ ರಾಯ್ ಬಲು ಸುದೈವಿ. ಯಶಸ್ವೀ ನಟಿ ಎನಿಸಿರುವ ಈಕೆಗೆ ಇಂದು ಹಿಂದೀ ಚಿತ್ರರಂಗದಲ್ಲಿ ತುಂಬ ಬೇಡಿಕೆ. ಪಂಜಾಬಿ ಕುಟುಂಬದವಳಾದ ರೀನಾ ಮುಂಬಯಿಯಲ್ಲಿಯೇ ಬೆಳೆದು ಎಸ್.ಎಸ್.ಸಿ. ವರೆಗೆ ಓದಿದಾಕೆ. ಕೆಲದಿನ ಕಲಕತ್ತಾದಲ್ಲೂ ಓದಿದವಳು.

ಸುಂದರ ಮೊಗದ ಬೊಗಸೆಗಂಗಳ ರೀನಾಳನ್ನು ಮೊತ್ತ ಮೊದಲಬಾರಿಗೆ ಕಂಡ ನಿರ್ದೇಶಕ ಪ್ರೇಮ್ ಪ್ರಾಣಿಕ್ ನಿರ್ಮಾಪಕ ಐ.ಎಂ. ಕುನ್ನು ಅವರ ಚಿತ್ರವೊಂದಕ್ಕೆ ಆಯ್ಕೆಮಾಡಿಕೊಂಡರು. ದುರ್ದೈವವಶಾತ್ ಆ ಚಿತ್ರ ಸೆಟ್ಟೇರಲಿಲ್ಲ. ಅದಕ್ಕಿರುವ ಕಾರಣಗಳು ಬೇರೆ.

ಏತನ್ಮಧ್ಯೆ ಅವಳ ಫೋಟೋ ನೋಡಿದ ಬಿ.ಆರ್. ಇಶಾರಾ ಅವಳನ್ನು ಕುನ್ನು ಅವರ ಇನ್ನೊಂದು ಚಿತ್ರವಾದ "ಜರೂರತ್"ನ ತಾರಾಗಣಕ್ಕೆ ಸೇರಿಸಿಕೊಂಡರು. ಜರೂರತ್ ದೇಶಾದ್ಯಂತ ಬಹುಚರ್ಚಿತ ಚಿತ್ರವೆನಿಸಿತಲ್ಲದೇ ಅದರಲ್ಲಿ ತುಂಬಲಾಗಿದ್ದ ಅತಿ ಕಾಮುಕತೆಯ ಬಗ್ಗೆ ಕೇಂದ್ರದಲ್ಲೂ ಭಾರೀ ಚರ್ಚೆಗಳಾದವು. ಇದರಿಂದಾಗಿ ರೀನಾಗೆ ಪ್ರಸಿದ್ಧಿ ದೊರೆಯಿತಲ್ಲದೇ ಅನೇಕ ಕಾಂಟ್ರಾಕ್ಟಗಳು ಸಿಕ್ಕುವಂತಾಯಿತು

ತದನಂತರ ರೀನಾ ಇಶಾರಾ ಅವರ "ಮಿಲಾಪ" ಮತ್ತು "ನಯಾ ದುನಿಯಾ, ನಯೆ ಲೋಗ್" ಗಳಲ್ಲಿಯೂ ನಟಿಸಿದಳು. ಆದರೆ ಆಕೆ ಅಭಿನಯಿಸಿದ "ಸೊಸೈಟಿ" ಎಂಬ ಚಿತ್ರ ಕೇಂದ್ರ ಸೆನ್ಸಾರ್ ಮಂಡಳಿಯವರಿಂದ ತಿರಸ್ಕರಿಸಲ್ಪಟ್ಟು ಬಹಿಷ್ಕರಿಸಲ್ಪಟ್ಟಿತು ಕೂಡ. ಮುಂದೆ ಕೆಲ ತಿಂಗಳುಗಳು ಕೆಲಸವಿಲ್ಲದೇ ಕಾಲ ಕಳೆದ ರೀನಾಗೆ "ಜೈಸೆ ಕೋ ತೈಸಾ" ಮತ್ತು ಷ್ಟೂ ಹೆಸರು–ಹಣ ತಂದುಕೊಟ್ಟಿತು. ಇದೇ ತೆರನಾಗಿ ತಾಹಿರ್ ಹುಸ್ಸೇನರ "ಮದಹೋಶ್" ಕೂಡ ಗಲ್ಲಾ ದೃಷ್ಟಿಯಿಂದ ಬಹು ಯಶಸ್ವಿಯಾಯಿತು. ಗೂಂಜ್ ಹಾಗೂ ವರದಾನ್‌ಗಳು ಸಹ ರೀನಾಳನ್ನು ಪ್ರಸಿದ್ಧಿಗೇರಿಸಲು ಕಾರಣವಾದುವು.

ಸಧ್ಯ ರೀನಾ ಸೋನೇ ಕೆ ಪಿಂಜರಾ, ಜಖ್ಮೀ, ಡಾಕು ಔರ್ ಜವಾನ್, ಉಮರ್ ಕಯಾದ್, ಪಾಪಿ, ನಾಗಿನ್, ದಿ ಬಾರ್ಡರ್, ಅಜಬ್ ತೇರೀ ಸರ್ಕಾರ್, ಡಾಕು ಔರ್ ಮಹಾತ್ಮಾ, ಚಿತ್‌ಚೋರ್, ಅಕೇಲಾ, ಬಾರೂದ್ ಹಾಗೂ ಮೆಹಬೂಬಾ ಮುಂತಾದ ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. ಆಕೆಯ ಆಪ್ತ ಕಾರ್ಯದರ್ಶಿಯೇ ಹೇಳುವಂತೆ ರೀನಾ 1976ವರೆಗೆ ಬಹು ಬೀಜಿ. ಅವಿರತವಾಗಿ ಶೂಟಿಂಗ್‌ಗಳಲ್ಲಿ ಭಾಗವಹಿಸುತ್ತಿದ್ದಾಳಾಕೆ. ಅಷ್ಟೇ ಅಲ್ಲ, ಅವು ಮುಗಿಯದ ಹೊರತೂ ಹೊಸ ಕಂಟ್ರಾಕ್ಟಗಳನ್ನು ಕೂಡ ಆಕೆ ಒಪ್ಪುತ್ತಿಲ್ಲವಂತೆ. ಎಷ್ಟೋ ನಿರ್ಮಾಪಕರು ಆಕೆಯನ್ನು ತಮ್ಮ ಚಿತ್ರಗಳಲ್ಲಿ ನಟಿಸುವ ಕೋರಿಕೆಯೊಂದಿಗೆ ಮನೆಗೆಬಾಗಿಲಿಗೆ ದಿನವೂ ಕಾದು ನಿರಾಶರಾಗಿ ಮರಳುತ್ತಿದ್ದಾರಂತೆ.

ನಾನು ರೀನಾಳ ಸಂದರ್ಶನಕ್ಕಾಗಿ ಅಪಾಯಿಂಟಮೆಂಟ್ ಕೇಳಲು ಅವಳ ಮನೆಗೆ ಹೋದಾಗ ಎರಡ್ಮೂರು ಜನ ನಿರ್ಮಾಪಕರು, ಉದಾಸೀನರಾಗಿ ಹೊರಟಿರುತ್ತಿರುವುದನ್ನು ಕಂಡೆ. ಆ ಮುನ್ನ ಆ ನಿರ್ಮಾಪಕರು ರೀನಾಳಿಗೆ ಯಾವ ಮಾಹಿತಿಯನ್ನೂ ನೀಡಿರಲಿಲ್ಲವಂತೆ. ಅಷ್ಟೇ ಅಲ್ಲ ರೀನಾ "ಮೆಹಬೂಬಾ" ಚಿತ್ರದ ಕೆಲಸದಲ್ಲಿ ಅವಿರತವಾಗಿ ತೊಡಗಿದ್ದಳು. ಮೆಹಬೂಬಾ ಚಿತ್ರದಲ್ಲಿ ರೀನಾ, ಹೇಮಮಾಲಿನಿ ಇಬ್ಬರೂ ನಾಯಕಿಯರು; ರಾಜೇಶ್ ಖನ್ನಾಗೆದುರಾಗಿ ನಟಿಸುತ್ತಾರವರು;

ಇತ್ತೀಚೆಗೆ ಪ್ರಮೋದ ಚಕ್ರವರ್ತಿಯವರ ಚಿತ್ರವೊಂದರ ಹೊರಾಂಗಣಕ್ಕಾಗಿ ಯುರೋಪು ದೇಶಗಳಲ್ಲಿ ರೀನಾ ಸಂಚರಿಸಿದಳು. "ಅದೊಂದು ಮರೆಯಲಾಗದ ಸಂಗತಿ. ಟ್ರಿಪ್ ತುಂಬಾ ಚೆನ್ನಾಗಿತ್ತು." ಎನ್ನುತ್ತಾಳೆ ರೀನಾ. ಪ್ಯಾರಿಸ್ ಒಂದನ್ನು ಬಿಟ್ಟರೆ ಬೇರೆಲ್ಲೂ ಆಕೆಗೆ ಆಹಾರದ ವಿಷಯದಲ್ಲಿ ತೊಂದರೆಯಾಗಲಿಲ್ಲವಂತೆ. "ಅಲ್ಲಿ ಬರಿ ನಾನ್–ವೆಜ್!" ಎಂದಳು ರೀನಾ, ಮುಖ ಸಿಂಡರಿಸಿ.

ಮುಂಬೈ ಚಿತ್ರರಂಗದಲ್ಲಿ ಸಾಕಷ್ಟು ಹೇಲ್ತ್ರಗತಿಯವಳೆನಿಸಿರುವ ರೀನಾ ಸೆಕ್ಸ ಚಿತ್ರಗಳಲ್ಲೂ ನಟಿಸುತ್ತಿದ್ದಾಳೆ. "ಎಂಥ ಪಾತ್ರಗಳಾದರೂ ಸರಿ, ಅಭಿನಯಿಸುವೆ. ಹೊಸ ಹೀರೋನೇ ಇರಲಿ, ಅವನಿಗೆದುರಾಗುವೆ" ಎನ್ನುವ ರೀನಾ ಈಗ "ಉಮರ ಕಯಾದ್"ನಲ್ಲಿ ನರ್ತಕಿಯಾಗಿ ಅಭಿನಯಿಸುತ್ತಿದ್ದಾಳೆ.

"ಅದು ಬರಿ ಸೆಕ್ಸ ಪಾತ್ರವಲ್ಲ. ಎಮೋಶನಲ್ ಕೂಡ

ಇದೆ" ಎನ್ನುತ್ತಾಳೆ ರೀನಾ.

ಕ್ಯಾಬರೆ ಡ್ಯಾನ್ಸರ್‌ಳ ವಿಷಯ ಬಂದಾಗ ನಾನು ತಟ್ಟನೇ ಕೇಳಿದೆ.

"ಅಂದ ಹಾಗೆ ನೀವು ಚಿತ್ರರಂಗ ಪ್ರವೇಶಿಸುವ ಮುನ್ನ ಕ್ಯಾಬರೆ ಡ್ಯಾನ್ಸರ್ ಎಂದು ಕೆಲಸ ಮಾಡುತ್ತಿದ್ದಿರಂತೆ ನಿಜವೇ? ಹಾಗಂತ ಯಾರೋ ಆಡಿಕೊಳುತ್ತಿದ್ದರು..."

ಅದನ್ನು ಬಲವಾಗಿ ನಿರಾಕರಿಸಿದ ರೀನಾ "ನನ್ನ ಮೊದಲ ಹೆಸರು ರೂಪಾ. ಅದೇ ಹೆಸರಿನ ಪ್ರಸಿದ್ಧ ಕ್ಯಾಬರೆ ನರ್ತಕಿಯೊಬ್ಬಳು ಮುಂಬೈಯಲ್ಲಿದ್ದಳು. ಅವಳೇ ನಾನು ಎಂದು ಎಷ್ಟೋ ಜನ ತಿಳಿದಿದ್ದಾರೆ" ಎಂದಳು ನೋವಿನ ಧ್ವನಿಯಲ್ಲಿ.

ಚಿತ್ರರಂಗಕ್ಕೆ ಬರುವದಕ್ಕಿಂತ ಮೊದಲು ರೀನಾ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದಳು. ನರ್ತನ ಪ್ರದರ್ಶನಗಳನ್ನೂ ನೀಡುತ್ತಿದ್ದಳು. ಆಕೆಗೆ ಪಾಶ್ಚಾತ್ಯ ಹಾಗೂ ಭಾರತೀಯ ನೃತ್ಯಗಳಲ್ಲಿ ತುಂಬ ಜಾಣ್ಮೆಯಿದೆ. ತಿಳುವಳಿಕೆ ಇದೆ. ನಮ್ಮ ದೇಶದ ಶ್ರೇಷ್ಠ ನಟಿಯಾಗುವ



ಆಸೆ ಆಕೆಯದು. ಈಗ ಆಕೆಯ ಸೋದರನೊಬ್ಬ ಚಿತ್ರ ನಿರ್ಮಾಣದಲ್ಲಿ ತೊಡಗಿದ್ದು ಅದರ ನಾಯಕಿ ಅವಸಕ್ಕ ರೀನಾಳೇ ಎಂದು ಬೇರೆ ಹೇಳಬೇಕಿಲ್ಲ. ವಿಕ್ರಂ ಈ ಚಿತ್ರದ ನಾಯಕ,

ಕಲಾತ್ಮಕ ಚಿತ್ರಗಳಲ್ಲಿನ ಪಾತ್ರಗಳೂ ತನಗೆ ಬಹು ತೃಪ್ತಿ ತಂದಿವೆ ಎನ್ನುವ ರೀನಾ–ರಜನೀಗಂಧಾ, ಅಂಕುರ, ಅನುಭವ ಮುಂತಾದ ಚಿತ್ರಗಳಲ್ಲಿ ನಟಿಸಿ ಸಮಾಧಾನ ಹೊಂದಿದ್ದಾಳೆ. ಇಂಥ ಕಲಾತ್ಮಕ ಚಿತ್ರಗಳು ಹೆಚ್ಚಾಗಿ ಪ್ರಾಯೋಗಿಕವಾದವುಗಳಿದ್ದು ಹೊಸ ನಟಗಣದೊಂದಿಗೆ, ಫಿಲ್ಮ ಫೈನಾನ್ಸ ಕಾರ್ಪೊರೇಶನ್ನಿನ ಸಹಕಾರದೊಂದಿಗೆ ತಯಾರಿಸಲ್ಪಡುತ್ತವೆ ಎನ್ನುತ್ತಾಳಾಕೆ.

ಸರಳ–ಸೌಜನ್ಯದ ರೀನಾ ಅನವಶ್ಯಕ ಪ್ರಸಿದ್ಧಿ ಬೇಡ ಎನ್ನುತ್ತಾಳೆ. ತಾನು ನಟಿ ಎಂದು ಯಾರೆದುರೂ ಹಮ್ಮು–ಬಿಮ್ಮುಗಳಿಂದ ವರ್ತಿಸುವುದಿಲ್ಲ. ಬಿಡುವು ಸಿಕ್ಕಾಗ ಮಾತ್ರ ಫಿಲ್ಮ ಪಾರ್ಟಿಗಳಲ್ಲೋ, ವಿದೇಶೀ ಚಿತ್ರಗಳು ಪ್ರದರ್ಶನಗೊಳು ವಲ್ಲಿಯೋ ರೀನಾ ಇರುತ್ತಾಳೆ,

ಕೊನೆಯಲ್ಲಿ ನಾನು ಆಕೆಯನ್ನು ಅಭಿನಂದಿಸಿದಾಗ, "ಕರ್ಮವೀರದ ಓದುಗರಿಗೆಲ್ಲಾ ನನ್ನ ದೀಪಾವಳಿಯ ಶುಭಕಾಮನೆಗಳು" ಎಂದು ಹೇಳಿ ನನ್ನನ್ನು ಬೀಳ್ಕೊಟ್ಟಳು.

●

ಪ್ರಗತಿಪಥದಲ್ಲಿರುವ ಕನ್ನಡ ಚಿತ್ರರಂಗ

ಒಂದು ಅವಲೋಕನ

– ಜಿ. ಕೆ. ಪಾಟೀಲ

ಕನ್ನಡ ಚಿತ್ರರಂಗವು ಈ ವರುಷ ಗಣನೀಯ ಸಾಧನೆಯನ್ನು ಸಾಧಿಸದಿದ್ದರೂ,ಗಮನಾರ್ಹ ರೀತಿಯಲ್ಲಿ ಮುಂದುವರಿದಿದೆ. ಪ್ರೇಕ್ಷಕವರ್ಗವನ್ನು ರಂಜಿಸುವಲ್ಲಿ ನಮ್ಮ ಚಿತ್ರಗಳು ಸಫಲವಾಗಿವೆ. ಎಂದಿನಂತೆ ಸಾಮಾಜಿಕ, ಪೌರಾಣಿಕ ಚಿತ್ರಗಳು ಈ ವರ್ಷ ತೆರೆಕಂಡಿವೆ. ಆದರೆ ವೈಚಾರಿಕ ಚಿತ್ರಗಳಿಗೆ ಹೆಚ್ಚು ಬೆಲೆ ಬಂದಿದೆ ಎಂದು ಹೇಳಬೇಕು. ಇದೊಂದು ಶುಭ ಸಂಕೇತವೆನ್ನಬಹುದು. ಹೊಸ ಅಲೆಯೊಂದು ಕಾಲಿರಿಸಿ ಹಿಂದೀ ಚಿತ್ರರಂಗವನ್ನು ಎದುರಿಸಿ ನಿಲ್ಲಬಲ್ಲ ಶಕ್ತಿ ಕನ್ನಡ ಚಿತ್ರಗಳಿಗಿಂದು ತೋರಿಸಿ ಕೊಟ್ಟಿದೆ. ವರ್ಣ, ಇಂಪಾದ ಸಂಗೀತ, ಉತ್ತಮ ತಾಂತ್ರಿಕ ಮೌಲ್ಯಗಳನ್ನು ಹೊಂದಿ ಹೊರಬಂದ ನಮ್ಮ ಚಿತ್ರಗಳು ಇತರ ಭಾಷೆಯ ಚಿತ್ರಗಳೊಂದಿಗೆ ಸರಿಗಟ್ಟಬಲ್ಲವೆಂಬುದನ್ನು ಗಮನಿಸಿದರೆ ಯಾವ ಕನ್ನಡಿಗನಿಗೆ ಹೆಮ್ಮೆ ಎನಿಸಲಿಕ್ಕಿಲ್ಲ.

ಕನ್ನಡ ಚಿತ್ರಗಳು ಹೆಚ್ಚಾಗಿ ನಿರ್ಮಾಣವಾಗುತ್ತಿರುವುದು ಮದ್ರಾಸಿನಲ್ಲಿ. ಅದಕ್ಕೆ ಕಾರಣ ನಮ್ಮ ರಾಜ್ಯದಲ್ಲಿ ಸಾಕಷ್ಟು ಸ್ಟುಡಿಯೋಗಳಿಲ್ಲದಿರುವುದರಿಂದ ಎಂದು ಹೇಳಲಾಗುತ್ತಿದೆ. ಆದರೆ ವಾಸ್ತವಾಂಶ ಹಾಗಿಲ್ಲ.ಇತ್ತೀಚೆ ಹಲವಾರು ಸ್ಟುಡಿಯೋಗಳು ತಲೆಎತ್ತಿ ನಿಂತಿವೆ. ಮೈಸೂರಿನ ಪ್ರಿಮಿಯರ್ ತಿಂಗಳಿಗೆ ಸುಮಾರು 170 ಕಾಲ್‌ಶೀಟುಗಳ ಕಾರ್ಯ ನಿರ್ವಹಿಸಿ, ದಕ್ಷಿಣ ಭಾರತದ ಸ್ಟುಡಿಯೋಗಳ ಇತಿಹಾಸದಲ್ಲಿ ಹೊಸ ವಿಕ್ರಮ ಸ್ಥಾಪಿಸಿದೆ. ಏಕ ಕಾಲದಲ್ಲಿ ನಾಲ್ಕು ಚಿತ್ರಗಳ ಚಿತ್ರೀಕರಣ ನಡೆಸುವ ಸೌಲಭ್ಯವಿದೆ. ಹೀಗಿದ್ದೂ ನಮ್ಮ ನಿರ್ಮಾಪಕರು ಮದ್ರಾಸಿಗೇ ತೆರಳುತ್ತಿರುವುದನ್ನು ಪ್ರತಿಭಟಿಸಿ ಮದ್ರಾಸಿನಲ್ಲಿ ತಯಾರಾದ ಕನ್ನಡ ಚಿತ್ರಗಳನ್ನು ಬಹಿಷ್ಕರಿಸುವುದಾಗಿ ಕನ್ನಡ ಜನತೆ ಬೆದರಿಕೆ ಹಾಕಿದ್ದರಿಂದಲೋ ಏನೋ ನಿರ್ಮಾಪಕರು ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಸಲು ನಿರ್ಧರಿಸಿದರು. ಆದರೆ ವಿದ್ಯುಚ್ಛಕ್ತಿಯ ಕ್ಷಾಮ, ಕಚ್ಚಾ ಫಿಲ್ಮಿನ ಕೊರತೆಗಳಿಂದಾಗಿ ಕನ್ನಡ ಚಿತ್ರಗಳಿಗೆ ಇಲ್ಲಿ ಚಿತ್ರೀಕರಣ ನಡೆಸುವುದು ಸಾಧ್ಯವಾಗದೆ ಮತ್ತೆ ಮದ್ರಾಸಿಗೇ ಹೋಗಬೇಕಾದ ಸಂದರ್ಭ ಬಂತು. ಅನೇಕ ನಿರ್ಮಾಪಕರಿಗೆ ಪೇಚುಂಟಾಯಿತಲ್ಲದೆ ಕೆಲವು ಚಿತ್ರಗಳಂತೂ ಮುಂದುವರೆಯದೆ ಸ್ಥಗಿತಗೊಂಡವು. ಮತ್ತೆ ಹಲವು ಚಿತ್ರಗಳು ಹುಟ್ಟಿಕೊಂಡಲ್ಲೆ ಮಲಗಿಬಿದ್ದಿದ್ದರೆ ಯಾರೂ ಅಚ್ಚರಿಪಡಬೇಕಾಗಿಲ್ಲ. ಚಿತ್ರರಂಗವನ್ನವಲಂಬಿಸಿದ ಸಹಸ್ರಾರು ನೌಕರರು ಬದುಕಬೇಕಾದರೆ ವರ್ಷಕ್ಕೆ ಸರಾಸರಿ 30 ಚಿತ್ರಗಳಾದರೂ ತೆರೆ ಕಾಣಬೇಕು. ಇಲ್ಲವಾದಲ್ಲಿ ಉಪವಾಸವೇ ಗತಿ. ಮೊದಲಿನ ಆರು ತಿಂಗಳಲ್ಲಿ ತೆರೆ ಕಂಡ ಚಿತ್ರಗಳು ಕೇವಲ ಆರು ಮಾತ್ರ. ಎಂಬುದನ್ನು ಗಮನಿಸಿದಾಗ ನಮ್ಮ ಚಿತ್ರರಂಗದ ಪರಿಸ್ಥಿತಿಯು ಅದೆಷ್ಟು ಗಂಭೀರವಾಗಿದೆಯಲ್ಲ ಎಂದು ಯೋಚಿಸುವಂತಾಗುತ್ತದೆ.

ಆಷಾಢಶೂನ್ಯ ಮಾಸ ಕಳೆದು ಶ್ರಾವಣ ಆರಂಭದೊಂದಿಗೆ ಬಿರುಸಾಗಬೇಕಿದ್ದ ಸಿನಿಮಾ ಚಟುವಟಿಕೆ ಮಂದವಾಯಿತು. ಜೂನ ತಿಂಗಳಲ್ಲಿ ಮೂರು ಚಿತ್ರಗಳು ಏಕ ಕಾಲದಲ್ಲಿ ಸೆಟ್ಟೇರಿ ಬಿರುಸಿನ ಚಿತ್ರೀಕರಣ ನಡೆಸಿದವಾದರೂ ಜುಲೈ ತಿಂಗಳಲ್ಲಿ ಆ ಉತ್ಸಾಹ ವಿರಲಿಲ್ಲ. ಆದರೆ ಜೂನ ತಿಂಗಳು ಸಿನಿಮಾ ಚಟುವಟಿಕೆಯ ದೃಷ್ಟಿಯಿಂದ ಬೆಂಗಳೂರಿಗೆ ಅತ್ಯಂತ ಶುಭಪ್ರದವಾಗಿ ಪರಿಣಮಿಸಿತು. ಬಭ್ರುವಾಹನ ವರ್ಣಚಿತ್ರದ ಹಿಂದೆಯೇ ಶ್ರೀನಿವಾಸ ಕಲ್ಯಾಣ, ವೇಕಟಿ ಶಿವರಾಮ ನಿರ್ದೇಶನದ ಬಣ್ಣದ ಹೊಸ



ಕನ್ನಡಚಿತ್ರರಂಗಕೆ ಹೊಸತಿರುವು ಕೊಟ್ಟ ಗಿರೀಶ ಕಾರ್ನಾಡ

ಚಿತ್ರಗಳ ಚಿತ್ರೀಕರಣವಿಲ್ಲಿ ನಡೆಯಿತು. ಇದೇ ಅವಧಿಯಲ್ಲಿ ಮತ್ತೆರಡು ಚಿತ್ರಗಳು ಸೆಟ್ಟೇರಿದವು. ಅವುಗಳಲ್ಲಿ ಶ್ರೀ ಕೃಷ್ಣ ಆಲನಹಳಿಯವರ "ಫೀನಿಕ್ಸ್" ಪ್ರಾಯೋಗಿಕ ಚಿತ್ರವೂ ಒಂದು.

ಅನಿಷ್ಟ ವ್ಯಾಮೋಹ

ಬಣ್ಣದ ವ್ಯಾಮೋಹ ಇಂದು ಕನ್ನಡಕ್ಕೂ ಪಸರಿಸಿದೆ. ಹೊರಾಂಗಣ ಚಿತ್ರೀಕರಣಕ್ಕಾಗಿ ದೇಶದ ಉದ್ದಗಲವನ್ನು ಸಂಚರಿಸುವ ಹವ್ಯಾಸ ನಮ್ಮ ಚಿತ್ರರಂಗವನ್ನಾವರಿಸಿದೆಂದು ಹೇಳಿದರೆ ತಪ್ಪಾಗದು. ಹಾಗೆ ನೋಡಿದರೆ ಕೃಷ್ಣದೇವರಾಯ ಚಿತ್ರದ ಹಲವು ದೃಶ್ಯಗಳ ಚಿತ್ರೀಕರಣ ಉತ್ತರ ಭಾರತದಲ್ಲಿ ನಡೆಯಿತು. "ಬಿಡುಗಡೆ" ಚಿತ್ರದ ಹೊರಾಂಗಣ ಚಿತ್ರೀಕರಣ ದಾರ್ಜಿಲಿಂಗದಲ್ಲಿ ನಡೆದರೆ "ಸಿಪಾಯಿ ರಾಮು"ಕ್ಕಾಗಿ ಚಂಬಲ್ ಕಣಿವೆಯಲ್ಲಿ ನಡೆಸಲಾಯಿತು. "ಸಾಕ್ಷಾತ್ಕಾರ" ಚಿತ್ರದ ನಿರ್ಮಾಪಕ ಶ್ರೀ ಮಲ್ಲಿಕರು ತಮ್ಮ ಹೊಸ ಚಿತ್ರಕ್ಕಾಗಿ ಸಿಮ್ಲಾದಲ್ಲಿ ಚಿತ್ರೀಕರಣ ನಡೆಸಲು ಯೋಚಿಸಿದ್ದಾರೆ. ಅನ್ಯ ಭಾಷೆಯ ನಿರ್ಮಾಪಕರು ಬೆಂಗಳೂರಿಗೆ ಬಂದು ಇಲ್ಲಿನ ದೃಶ್ಯಗಳನನ್ನು ಮೆಚ್ಚಿದರೆ ನಮ್ಮವರು ಬೇರೆಡೆ ಹೋಗುತ್ತಿರುವುದನ್ನು ಗಮನಿಸಿದರೆ ನಮ್ಮಲ್ಲಿನ ಪ್ರಕೃತಿ ರಮ್ಯ ತಾಣಗಳ ಪರಿಚಯವೇ ನಮ್ಮವರಿಗಿಲ್ಲವೆಂದು ಹೇಳಬೇಕಾಗುತ್ತದೆ.

ಬೂತಯ್ಯನ ಮಗ ಅಯ್ಯು, ಕಾಡು, ಮಣ್ಣಿನ ಮಗಳು, ಭಕ್ತ ಕುಂಬಾರ, ಎರಡು ಕನಸು, ಶ್ರೀನಿವಾಸ ಕಲ್ಯಾಣ, ಪ್ರೊ. ಹುಚ್ಚೂರಾಯ, ಸಂಪತ್ತಿಗೆ ಸವಾಲು ಮೊದಲಾದವುಗಳು ಈ ವರ್ಷದಲ್ಲಿ ತೆರೆಕಂಡ ಪ್ರಮುಖ ಚಿತ್ರಗಳು. ರಾಜಕುಮಾರ ಇಲ್ಲದ ಚಿತ್ರಗಳು ಯಶಸ್ವಿಯಾಗವು ಎಂಬ ಮಾತನ್ನು ಬೂತಯ್ಯನ ಮಗ ಅಯ್ಯು, ಸುಳ್ಳಾಗಿಸಿದೆ. ಇದು ತೆರೆ ಕಂಡಲ್ಲೆಲ್ಲ ರಜತೋತ್ಸವವನ್ನಾಚಾರಿಸಿ ಅತಿ ಹೆಚ್ಚು ಹಣವನ್ನು ಗಳಿಸಿದ ಮೂರು ಚಿತ್ರಗಳಲ್ಲಿ ಒಂದಾಗಿದೆಯೆಂದು ಹೇಳಬೇಕು. ಕನ್ನಡ ಚಿತ್ರೋದ್ಯಮಕ್ಕೆ ಹೆಮ್ಮೆಯ ವರುಷವಿದಾಗಿದೆ.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಚಿಕ ಕಥೆಯನ್ನೇ ಚಿತ್ರವನ್ನಾಗಿಸಿ ಮೂರು ಗಂಟೆಗಳ ಕಾಲ ಪ್ರೇಕ್ಷಕರನ್ನು ರಂಜಿಸುವಲ್ಲಿ ನಿರ್ದೇಶಕ ಸಿದ್ದಲಿಂಗಯ್ಯನವರು ಯಶಸ್ವಿಯಾಗಿದ್ದಾರೆನ್ನುವುದಕ್ಕೆ ಈ ಚಿತ್ರ ಹಣಗಳಿಕೆಯಲ್ಲಿ ನಿರ್ಮಿಸಿದ ದಾಖಲೆಯೇ ಸಾಕ್ಷಿ. ಗ್ರಾಮದಲ್ಲಿನ ತಂಟೆಗಳು, ಅದಕ್ಕಾಗಿ ನ್ಯಾಯಾಯಾಲಯದ ಕಟ್ಟೆ ಏರುವುದು, ಹಾಳಾಗುವುದು, ಒಂದಾಗಿ ಬಾಳಿದರೇನೇ ಅನುಪಮ ಸುಖ ದೊರೆಯುವದೆಂದು ಸಾರುವ ಕಥಾವಸ್ತುವನ್ನು ನಿರ್ದೇಶಕರು ಬಹು ಜಾಣ್ಮೆಯಿಂದ ನಿರೂಪಿಸುವಲ್ಲಿ ಸಫಲರಾಗಿದ್ದಾರೆ. ಎಲ್ಲ ವರ್ಗದ ಪ್ರೇಕ್ಷಕರನ್ನು ರಂಜಿಸುವ, ಕಂಗಳನ್ನು ತಣಿಸುವ ಬಣ್ಣದ ದೃಶ್ಯ ನೀರಿನ ಪ್ರವಾಹದ ಅಪೂರ್ವ ದೃಶ್ಯಾವಳಿಯಿಂದ ಕೂಡಿದ ಈ ಚಿತ್ರ ಹಿಂದೀ ಚಿತ್ರವನ್ನು ನಾಚಿಸುವಂತಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಭಾಷೆಗಿಂತ ಗುಣ ಮುಖ್ಯ. ಯಾರೂ ಮಾಡದ ಕೆಲಸವನ್ನು ನಾವು ಮಾಡಿದಾಗ ಹಾಗೂ ಅದರಲ್ಲಿ ವಿಶಿಷ್ಟತೆ ಏನಾದರೂ ಇದ್ದರೆ ಅಂಥದನ್ನು ನಾವು ಪ್ರಾಯೋಗಿಕವೆಂದು ಹೆಸರಿಸಬಹುದು. ಅಂಥ ಒಂದು ಚಿತ್ರವನ್ನು ಎಚ್. ಎಲ್. ಎನ್. ಸಿಂಹ ಅವರು ದಕ್ಷಿಣ ಭಾರತದಲ್ಲಿಯೇ ಮೊಟ್ಟ ಮೊದಲು ನಿರ್ಮಿಸಿದರು. ಅದುವೇ ಸಂಸಾರ ನೌಕೆ. ಚಿತ್ರ. ಅಂದಿನಿಂದಲೇ ಪ್ರಾಯೋಗಿಕ ಚಿತ್ರಗಳ ಯುಗ ಆರಂಭವಾಗಿದೆ. ಈ ಸಲ ಕನ್ನಡ ಚಿತ್ರರಂಗ ಅಂತಹ ಪ್ರಾಯೋಗಿಕ ಚಿತ್ರವನ್ನು ತೆರೆಗೆ ತಂದು ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದೆಯಲ್ಲದೆ, ಕನ್ನಡಕ್ಕೆ 'ಊರ್ವಶಿ' ಪ್ರಶಸ್ತಿಯನ್ನು ಪ್ರಥಮಬಾರಿಗೆ ತಂದುಕೊಟ್ಟಿದೆ. ಇದೊಂದು ಹೆಮ್ಮೆಯ ಸಂಗತಿ. ಶ್ರೀಕೃಷ್ಣ ಆಲನಹಳಿಯವರ ಕಾದಂಬರಿಯನ್ನು ಚಾಣಾಕ್ಷ್ಯ ರೀತಿಯಲ್ಲಿ ತೆರೆಗಳವಡಿಸಿ, ಹೊಸ ಹೊಸ ತಂತ್ರಗಳನ್ನು ಪ್ರಯೋಗಿಸಿ ಕನ್ನಡ ಚಿತ್ರರಂಗದಲ್ಲಿ ಪ್ರಾಯೋಗಿಕ ಚಿತ್ರಗಳು ಬದುಕ ಬಲ್ಲವೆಂಬುದನ್ನೂ ಶ್ರೀ ಗಿರೀಶ ಕಾರ್ನಾಡ "ಕಾಡು" ಚಿತ್ರದ ಮೂಲಕ ತೋರಿಸಿ ಕೊಟ್ಟಿದ್ದಾರೆ.

ಸ್ವಾತಂತ್ರ್ಯ ಲಭಿಸಿ ಕಾಲುಶತಮಾನವೇ ಆಗಿ



← ಕನ್ನಡಕ್ಕೆ 'ಊರ್ವಶಿ' ಪ್ರಶಸ್ತಿ ತಂದುಕೊಟ್ಟ ನಂದಿನಿ

ಅದ್ದೂರಿ ಪೌರಾಣಿಕ ಚಿತ್ರವೆಂದು ಹೆಸರುಗಳಿಸಿದ 'ಶ್ರೀನಿವಾಸ ಕಲ್ಯಾಣ'ದ ಜೋಡಿ ರಾಜಕುಮಾರ—ಮಂಜುಳಾ ↓



ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು !!

ಸೋಮೇಶ್ವರ ಸ್ಟೀಲ ವರ್ಕ್ಸ
ಸೋಮೇಶ್ವರ ರೋಲಿಂಗ್ ಷಟರ್ಸ

ಎಳೆಯುವದು ಮತ್ತು ತಳ್ಳುವದು ಅಥವಾ ಗೇಯರ ಚಲನೆಯುಳ್ಳದ್ದು. (ಸುರಳಿ ಬಾಗಿಲುಗಳು)



Rolling Shutters Manufacturers

ಸೋಮೇಶ್ವರ ಅಂದರೆ :

- ಶ್ರೇಷ್ಠತೆ ಮತ್ತು ನೈಪುಣ್ಯತೆಗೆ ಹೆಸರಾದುದು
- ನಿಮ್ಮ ಹಣಕ್ಕೆ ನಿಸ್ಸಂದೇಹವಾಗಿ ದೊರೆಯುವಲ್ಲಿ ಸರ್ವೋತ್ತಮವಾದುದು.
- ಸದಾ ಕಾಲವೂ ಸುರಕ್ಷಿತ ಮತ್ತು ಭದ್ರತೆಯುಳ್ಳದ್ದು.
- ಕದದ (ಬಾಗಿಲು) ಸಮಸ್ಯೆಗೆ ಯುಕ್ತ ಉತ್ತರವೆಂದರೆ... ಇದೊಂದೇ ಮಾದರಿ
- ಕದವನ್ನು (ಬಾಗಿಲು) ಸ್ವಂತಃ ಪರಿಶೀಲಿಸಿದರೆ ನೀವೇ ನಂಬುವಿರಿ.

SOMESHWAR STEEL WORKS, HUBLI-20

ತಯಾರಕರು :-

ಸೋಮೇಶ್ವರ ರೋಲಿಂಗ್ ಷಟರ್ಸ್ & ಇಂಜನಿಯರಿಂಗ್ ವರ್ಕ್ಸ

ಹಳೇಹುಬ್ಬಳ್ಳಿ ಕಿಲ್ಲೆ. ಹುಬ್ಬಳ್ಳಿ-21 ಪ್ರೊ-ಪಿ. ವೀರಭದ್ರಪ್ಪ ಫೋನ್ : 3981

ದೀಪಾವಳಿಯು ಸರ್ವರಿಗೂ ಹರ್ಷದಾಯಕವಾಗಲಿ!!

ಬೆಳಗಾವಿ ನಗರದ ಕಣ್ಮಣಿ

ಫೋನ್ : 2018

ಹೋಟೆಲ್

ರಾಜಮಹಲ

ರಾಮಲಿಂಗ ಖಿಂಡಗಲ್ಲಿ ಬೆಳಗಾವಿ

ಅತ್ಯುತ್ತಮ ಬಾರ ಮತ್ತು ರುಚಿಕರ ಮಾಂಸಾಹಾರಿ ಊಟದ ಉತ್ತಮ ವ್ಯವಸ್ಥೆ

ಬಾಗಲಕೋಟೆಯ ಶೋಭೆ

ಫೋನ್ : 166

ಮಾಂಸಾಹಾರಿ ಊಟದ ಉತ್ತಮ ವ್ಯವಸ್ಥೆಗೆ ಮಿಗಿಲಾದದ್ದು

ಹೋಟೆಲ್

ಸರ್ದಾರ

ಸ್ಟೇಶನ್ ರೋಡ. ಬಾಗಲಕೋಟ

ಸಂಚಾಲಕರು : ಬಾಬುರಾವ ಕೊಕಾಟೆ

ದ್ದರೂ ಭಾರತದ ಕೆಲ ಗ್ರಾಮಗಳು ಇನ್ನೂ ಕಾಡು ಸ್ಥಿತಿಯಲ್ಲೇ ಉಳಿದು ಬಂದು ಕ್ಷುಲ್ಲಕ ಕಾರಣಕ್ಕಾಗಿ ಹಳಿಗಳೆರಡು ಹೇಗೆ ನಾಶವಾಗುತ್ತವೆಂಬ ಕಥಾವಸ್ತುವಿನ ಆಧಾರದಿಂದ ನಿರ್ಮಿತವಾದ ಶ್ರೀ ಕೃಷ್ಣ ಆಲನಹಳಿಯವರ ಅದೇ ಹೆಸರಿನ ಕಾದಂಬರಿ ಚಿತ್ರವಾಗಿ ತೆರೆಗೆ ಬಂದರೂ ಕಾದಂಬರಿಯಷ್ಟೇ ಸತ್ವವನ್ನುಳಿಸಿಕೊಂಡಿದೆ. ಈ ಚಿತ್ರದಲ್ಲಿ ನಟಿಸಿದ ನಂದಿನಿ, ನಟರಾಜ. ಭಾರತದ ಲಕ್ಷ್ಯವನ್ನೇ ತಮ್ಮೆಡೆಗೆ ಸೆಳೆದುಕೊಂಡಿದ್ದಾರೆ.

ಕಾಡು ಚಿತ್ರ ತೆರೆ ಕಂಡಾಗ ಅದನ್ನು ವೀಕ್ಷಿಸಿದ ಪ್ರೇಕ್ಷಕರು ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನಿದು ಪಡೆಯಬಹುದೆಂದುಕೊಂಡುದುಂಟು. ಅವರ ನಿರೀಕ್ಷೆಯಂತೆ ಅದಕ್ಕೆ ರಾಷ್ಟ್ರಮಟ್ಟದ ದ್ವಿತೀಯ ಪ್ರಶಸ್ತಿ ಬಂದುದಲ್ಲದೆ ಚಿತ್ರದಲ್ಲಿ ಅಭಿನಯಿಸಿದ ಶ್ರೀಮತಿ ನಂದಿನಿಯವರಿಗೆ "ಊರ್ವಶಿ" ಪ್ರಶಸ್ತಿಯೂ ಬಂತು. ಇದು ಹೆಮ್ಮೆಯ ಜೊತೆಗೆ ಅಚ್ಚರಿಯನ್ನುಂಟು ಮಾಡುವಂತಹ ಸಂಗತಿ! ಚಿತ್ರರಂಗವೊಂದು ಬೃಹತ್ ಉದ್ದಿಮೆಯಾಗಿದ್ದು, ಇಂದಿನ ಪರಿಸ್ಥಿತಿಯಲ್ಲಿ ಆ ರಂಗದ ಪ್ರತಿಭಟನೆಯ ಹಿಂದೆ ರಾಜಕೀಯದ ಸೋಂಕು ಇರುವಾಗ ನಟಿಸಿದ ಪ್ರಥಮ ಚಿತ್ರದಿಂದಲೇ ಊರ್ವಶಿ' ಪ್ರಶಸ್ತಿಗೆ ಆಯ್ಕೆಯಾದ ಶ್ರೀಮತಿ ನಂದಿನಿ ನಿಜವಾಗಿಯೂ ಅಭಿನಂದನಾರ್ಹಳು.

ಅವರ ಮಾತೃ ಭಾಷೆ ಮಲಯಾಳ. ಆದರೂ ಅವರಿಗೆ ಕನ್ನಡದ ಬಗೆಗೆ ಅಪಾರ ಅಭಿಮಾನ. ಬಿ. ಎ. ಪದವೀಧರೆ. ಮೇಲಾಗಿ ಮೂರು ಮಕ್ಕಳ ತಾಯಿ. ಚೊಕ್ಕ ಸಂಸಾರ. ಸಂತಸದ ಜೀವನ ನಡೆಸುತ್ತಿರುವ ನಂದಿನಿಗೆ ಚಲನ ಚಿತ್ರಗಳಲ್ಲಿ ಆಸಕ್ತಿಯೇ ಇರಲಿಲ್ಲ. ಚಿತ್ರರಂಗವನ್ನು ಪ್ರವೇಶಿಸುವ ಕನಸು ಕೂಡ ಕಂಡಿರಲಿಲ್ಲ. ಆದರೆ ಆಕಸ್ಮಿಕವಾಗಿ ಅವಕಾಶ ದೊರೆತು, ಆಯ್ಕೆ ಮಂಡಳಿಯ ಲಕ್ಷ್ಯ ಸೆಳೆದಳು. ಇದು ಕನ್ನಡ ಚಿತ್ರರಂಗದ ಶ್ರೇಯೋಭಿವೃದ್ಧಿಗೆ ಸಹಾಯಕವಾಗಿದೆಯೆನ್ನಬಹುದು.



ಹಾಸ್ಯಪ್ರಧಾನ ಚಿತ್ರ ಪ್ರೊ॥ ಹುಚ್ಚುರಾಯ"ದ ನಾಯಕನಟ ನರಸಿಂಹರಾಜು ಮತ್ತು ರಾಜಾಶಂಕರ

ಜ್ಯುಬಿಲಿ ಚಿತ್ರಗಳ ನಿರ್ದೇಶಕರೆಂದು ಖ್ಯಾತಿ ಪಡೆದ ಪುಟ್ಟಣ್ಣ ಕಣಗಾಲ ನಿರ್ದೇಶನದ ಈ ವರ್ಷ ತೆರೆ ಕಂಡ ಚಿತ್ರ, 'ಉಪಾಸನೆ' ಸಾಕಷ್ಟು ಯಶಸ್ಸುಗಳಿಸಲಿಲ್ಲವೆಂದೇ ಹೇಳಬೇಕು. ಗಿರೀಶ ಕಾರ್ನಾಡ, ಸಿದ್ಧಲಿಂಗಯ್ಯ ಲಕ್ಷ್ಮೀನಾರಾಯಣರವರನ್ನು ಈ ವರ್ಷದ ಶ್ರೇಷ್ಠ ನಿರ್ದೇಶಕರ ಸಾಲಿಗೆ ಸೇರಿಸಬಹುದು. ಬೂತಯ್ಯನನ್ನು ನಿರ್ದೇಶಿಸಿದ ಸಿದ್ಧಲಿಂಗಯ್ಯನವರು 'ಬಂಗಾರದ ಮನುಷ್ಯ' ನಿಂದ ತಮಗಿರುವ ಕೀರ್ತಿಯನ್ನು ಬೂತಯ್ಯನಿಂದ ಇಮ್ಮಡಿಸಿಕೊಂಡಿದ್ದಾರೆ.

ಬದಲಾದ ದೃಷ್ಟಿಕೋನ

ಕನ್ನಡದಲ್ಲಿ ಯೋಗ್ಯ ಕಥೆಗಳೇ ದೊರೆಯವೆಂಬ ಸೊಲ್ಲು ಬಹು ಹಿಂದಿನಿಂದ ಕೇಳಿಬರುತ್ತಿತ್ತು. ಬೇರೆ ಭಾಷೆಯಲ್ಲಿ ಯಶಸ್ವೀಯಾದ ಚಿತ್ರಗಳನ್ನು ಅನುವಾದಿಸಿ ಚಿತ್ರ ನಿರ್ಮಿಸುವ ಕಾಲವೂ ಒಂದಿತ್ತು. ಕೇವಲ ಪೌರಾಣಿಕ ಇಲ್ಲವೆ ಜಾನಪದ ಕಥಾವಸ್ತುಗಳನ್ನು ತೆರೆಗೆ ಅಳವಡಿಸಿ ಹಣ ಗಳಿಸುವ ಪ್ರಯತ್ನ ಮಾಡುತ್ತಿದ್ದ ನಮ್ಮ ನಿರ್ಮಾಪಕರ ದೃಷ್ಟಿ ಈಗ ಕಾದಂಬರಿಗಳತ್ತ ಹೊರಳಿರುವದೊಂದು ವಿಶೇಷವೆನ್ನಬೇಕು. ಮಹಾತ್ಯಾಗ, ಉಪಾಸನೆ ಚಿತ್ರಗಳು ಕಾದಂಬರಿ ಅಧಾರದಿಂದ ತಯಾರಾಗಿ ಆಗಲೇ ತೆರೆಕಂಡಿದ್ದರೆ, ಮುಂಬರಲಿರುವ ಹಲವಾರು ಚಿತ್ರಗಳು ಕೂಡ ಕಾದಂಬರಿ ಆಧಾರಿತವಾದವುಗಳಾಗಿವೆ. ಹಾಗೆ ನೋಡಿದರೆ ಕಾದಂಬರಿಯನ್ನಾಧರಿಸಿ ತಯಾರಾದ ಚಿತ್ರಗಳೇ ಶತದಿನೋತ್ಸವನು ಆಚರಿಸುತ್ತಿರುವದೇ ನಿರ್ದೇಶಕರ ಈ ಶೋಧನೆಗೆ ಇನ್ನೊಂದು ಕಾರಣ. ಕುಮಾರಿ ಟಿ. ಶಾಂತಿಯವರ ಜ್ಞಾನದ ಬೆಳಕು, ಶಿವರಾಮ ಕಾರಂತರ ಚೋಮನ ದುಡಿ ವ್ಯಾಸರಾಯ ಬಲ್ಲಾಳರ ಅನುರಕ್ತೆ, ವಾರ ಪತ್ರಿಕೆಯೊಂದರಲ್ಲಿ ಧಾರವಾಹಿಯಾಗಿ ಬಂದ ನಂಜು ಜೇನು ಮೊದಲಾದ ಕಾದಂಬರಿಗಳು ಚಿತ್ರಗಳಾಗಿ ಹೊರಬರಲಿವೆ.

ಸುಮಾರು 40 ವರ್ಷಗಳ ಹಿಂದೆಯೆ ಡಾ. ಶಿವರಾಮ ಕಾರಂತರು 'ಡೋಮಿಂಗೊ' ಎಂಬ ದಲಿತ ವರ್ಗದ ಸಮಸ್ಯೆ ಕುರಿತು ಚಿತ್ರ ತಯಾರಿಸಿದ್ದರಾದರೂ ಅದು ಬೆಂಕಿಗಾಹುತಿಯಾಯಿತು ಅದೇ ಸಮಸ್ಯೆಯನ್ನಾಧರಿಸಿದ ಅವರ 'ಚೋಮನ ದುಡಿ' ಚಿತ್ರವಾಗಲು ಸಿದ್ಧವಾಗಿ ನಿಂತಿದೆ. ಪ್ರಚಲಿತ ಭೂ ಸುಧಾರಣೆಯ ಸಮಸ್ಯೆಯ ಕುರಿತು ರಚಿತವಾದ ಶ್ರೀ. ಎಚ್. ದೇವಿರಪ್ಪನವರ ಕಾದಂಬರಿ 'ಬೆಳವಲ ಮಡಿಲಲ್ಲಿ' ಕೂಡ ಚಿತ್ರವಾಗಲಿದೆ. ನಮ್ಮ ಚಿತ್ರಗಳಿಂದು ಪರಭಾಷೆಯ ಚಿತ್ರಬ್ರಹ್ಮರ ಲಕ್ಷ್ಯವನ್ನು ತನ್ನೆಡೆಗೆ ಸೆಳೆದಿದೆ. ಕನ್ನಡದ ಯಶಸ್ಸು



ಕಾಡಿನ ರಮ್ಯದೃಶ್ಯಗಳ ವರ್ಣಚಿತ್ರ "ಗಂಧದಗುಡಿ" ಚಿತ್ರದಲ್ಲಿ ರಾಜ ಮತ್ತು ಪ್ರಭಾಕರ

ಚಿತ್ರವೆನಿಸಿ ಅಪಾರ ಜನ ಮನ್ನಣೆ ಪಡೆದ 'ನಾಗರ ಹಾವು ಹಿಂದಿಯಲ್ಲಿ 'ಜಹ್ರೀಲಾ ಇನ್ಸಾನ್' ಆಗಿ ತೆರೆ ಕಾಣಲಿದೆಯಲ್ಲದೆ ಕಾಡು, ಬೂತಯ್ಯನ ಮಗ ಅಯ್ಯು ಚಿತ್ರಗಳು ಇಷ್ಟರಲ್ಲೇ ಅನ್ಯಭಾಷೆಗಳಲ್ಲಿ ರೂಪಾಂತರ ಗೊಳಲಿವೆ. ಇದು ಕನ್ನಡ ಚಿತ್ರರಂಗದ ಪ್ರಗತಿಯನ್ನು ಎತ್ತಿತೋರುತ್ತದೆ.

ಕೃಷ್ಣದೇವರಾಯ ಚಿತ್ರದ ನಂತರ ಚರಿತ್ರಾರ್ಹ ಐತಿಹಾಸಿಕ ಚಿತ್ರಗಳೇ ಹೊರಬಂದಿಲ್ಲವಾದರೂ ನಿರ್ಮಾಣದ ಹಂತದಲ್ಲಿರುವ ಐತಿಹಾಸಿಕ 'ಮಯೂರ' ಈ ವರ್ಷ ತೆರೆಕಾಣುವ ನಿರೀಕ್ಷೆ ಇದ್ದು ಕನ್ನಡದಲ್ಲೆ ಅತ್ಯಂತ ಅದ್ದೂರಿಯ ಚಿತ್ರವೆನಿಸಲಿದೆ.. ಈ ವರ್ಷದಲ್ಲಿ ಬಿಡುಗಡೆಯಾದ ಶ್ರೀನಿವಾಸ ಕಲ್ಯಾಣ, ಭಕ್ತಕುಂಬಾರ ಪೌರಾಣಿಕ ಚಿತ್ರಗಳು ಕೂಡ ಅದ್ದೂರಿಯ ಚಿತ್ರಗಳೆನಿಸಿವೆ. ಸಾಮಾಜಿಕ ಚಿತ್ರಗಳಲ್ಲಿ ಎರಡು ಕನಸು ಬೂತಯ್ಯ ಶತದಿನೋತ್ಸವವನ್ನಾಚರಿಸಿ ದಾಖಲೆ ಸ್ಥಾಪಿಸಿವೆ.

ಕನ್ನಡದಲ್ಲಿ ಹಾಸ್ಯಪ್ರಧಾನ ಚಿತ್ರಗಳೇ ಕಡಿಮೆಯೆಂದು ಹೇಳಬಹುದಾದರೂ ಹಾಸ್ಯ ನಟ ನರಸಿಂಹರಾಜುರವರು ಅಂಥ ಚಿತ್ರವೊಂದನ್ನು ನಿರ್ಮಿಸಿ ಬಿಡುಗಡೆಮಾಡಿದ್ದಾರೆ. ಎಂ.ಆರ್. ವಿಠ್ಠಲ್ ನಿರ್ದೇಶನದ ಪ್ರೊ. ಹುಚ್ಚೂರಾಯ ಇದೀಗ ತೆರೆ ಕಂಡಿದೆ. ಪ್ರೊ. ಹುಚ್ಚೂರಾಯ್ ಹಾಸ್ಯಭರಿತವಾಗಿರದೆ. ಗಂಭೀರವೂ ಆಗಿರದೆ ಅವೆರಡರ ಮಿಶ್ರಣವಾಗಿದೆ. ಉದ್ದುದ್ದಾದ ಭಾಷಣಗಳನ್ನು ಚಿತ್ರದಲ್ಲಿ ತುರುಕಲಾಗಿದೆ. ಭಾಷಣಗಳಿಲ್ಲದಿದ್ದರೆ ಚಿತ್ರರಸಿಕರನ್ನು ರಂಜಿಸಬಹುದಿತ್ತು.

ಹೊನ್ನಿ ಮದುವೆ, ನಮ್ಮ ಊರ ದೇವರು, ಫಿನಿಕ್ಸ್, ನಮಸ್ಕಾರ, ಮೈದಾನ ಛಲಗಾರ, ಚೋಮನ ದುಡಿ, ಬೆಂಗಳೂರ ಭೂತ ಮೊದಲಾದವು ನಿರ್ಮಾಣ ಹಂತದಲ್ಲಿರುವ ಚಿತ್ರಗಳು.

ಪ್ರಗತಿಪರ ಲಕ್ಷಣಗಳು

ಕನ್ನಡ ಚಿತ್ರಗಳ ನಡುವೆ ಅಹಿತಕರ ಪೈಪೋಟಿ ನಡೆಯಬಾರದೆಂಬ ಸದುದ್ದೇಶದಿಂದ ಎರಡು ಕನ್ನಡ ಚಿತ್ರಗಳ ನಡುವೆ ಕನಿಷ್ಟ ಎರಡು ವಾರದ ಅಂತರ ವಿರಬೇಕೆಂಬ ನಿರ್ಣಯವನ್ನು ನಮ್ಮ ಫಿಲ್ಮ ಚೇಂಬರ ಮಾಡಿದೆ. ಅದರಿಂದ ಅನಾವಶ್ಯಕ ಪೈಪೋಟಿ ನಡೆಯದೆ ಕನ್ನಡ ಚಿತ್ರಗಳು ಬದುಕಬಲ್ಲವು. ಈ ನಿರ್ಣಯ ಸ್ವಾಗತಾರ್ಹವೇ! ಆದರೆ ಕೆಲಸಮಯ ಅದನ್ನು ಸಡಲಿಸುವ ಅಗತ್ಯತೆ ಹೆಚ್ಚಿದೆ.

ಹಳೆಯ ಮುಖಗಳನ್ನೇ ಕಂಡು ಬೇಸತ್ತಿದ್ದ ಕನ್ನಡ ಪ್ರೇಕ್ಷಕರಿಗೆ ಇಂದು ಹಲವಾರು ಜನ ಕಲಾವಿದರನ್ನು ಕಾಣುವ ಸುಯೋಗ ಒದಗಿದೆ. ಲೋಕೇಶ ಮಾ. 'ಹೊನ್ನಪ್ಪ ಜಯಲಕ್ಷ್ಮಿ' ಮಂಗಳೂರಿನ ಹುಡಿಗೆ ರೀಟಾ, ನಂದಿನಿ, ಮೊದಲಾದವರು ಕನ್ನಡದ ಆಶಾ ಕಿರಣವೆಂದು ಹೇಳಬಹುದು. ತಾರೆ ಮಂಜುಳಾ, ವಜ್ರಮುನಿಯವರು ಬೇರೆ ಭಾಷೆಯ ಚಿತ್ರಗಳಿಗಾಗಿ ಆಯ್ಕೆಯಾಗಿದ್ದಾರೆ.

ಕನ್ನಡ ಚಿತ್ರಗೀತೆಗಳ ರಿಕಾರ್ಡುಗಳಿಂದ ಅಪಾರ ಸಂಖ್ಯೆಯಲ್ಲಿ ಮಾರಾಟವಾಗುತ್ತಿವೆ. ಕೇವಲ ನೂರಿನ್ನೂರು ರಿಕಾರ್ಡುಗಳು ವರುಷವೊಂದಕೆ ಮಾರಾಟವಾಗುತ್ತಿದ್ದ ಕಾಲವೊಂದಿತ್ತು. ಆದರೆ ಇಂದು ತಿಂಗಳಿಗೆ ಸುಮಾರು ಐದಾರುನೂರು ರಿಕಾರ್ಡುಗಳು



ಕೀರ್ತಿ-ಹಣ ಸಂಪಾದಿಸಿದ ಭಕ್ತಿಪ್ರಧಾನ ವರ್ಣಚಿತ್ರ "ಭಕ್ತಕುಂಬಾರ"ದಲ್ಲಿ ರಾಜಕುಮಾರ್ ರಾಜಾಶಂಕರ, ಸುಹದೇವ್.

ಮಾರಾಟವಾಗುತ್ತಿವೆ. ಹೊಸದಾಗಿ ಬೆಳಕಿಗೆ ಬಂದ ಹಿನ್ನಲೆಗಾಯಕರಲ್ಲಿ ಸುರೇಶ ಹುಬ್ಲೀಕರ ಒಬ್ಬರು.

ಕನ್ನಡದ ಚಿತ್ರರಂಗ ನಾಲ್ಕು ದಶಕಗಳಿಂದ, ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತ ನಡೆದಿದೆ. ಈ ಅಭಿವೃದ್ಧಿಗೆ ನಮ್ಮ ನಟವರ್ಗ. ಚಿತ್ರೋದ್ಯಮಿಗಳು ಕಾರಣರೆನಿಸಿದರೂ ಅಭಿಮಾನಿ ಪ್ರೇಕ



"ಮೈದಾನ" ಚಿತ್ರದ ಹೊಸನಟಿ ಮೈಥಿಲಿ

ಕವರ್ಗವನ್ನು ಯಾರೂ ಮರೆಯುವಂತಿಲ್ಲ. ಅವರು ನೀಡಿದ ಪ್ರೋತ್ಸಾಹದಿಂದ ಕನ್ನಡ ಚಿತ್ರಗಳು ಬಣ್ಣದಲ್ಲಿ ಬರುವಂತಾಗಿವೆ. ಒಂದು ಕಾಲಕ್ಕೆ ಕನ್ನಡ ಚಿತ್ರವನ್ನು ನಿರ್ಮಿಸುವದೆಂದರೆ ಕೈಸುಟ್ಟುಕೊಂಡಂತೆ ಎಂದು ಬಗೆಯಲಾಗಿತ್ತು. ಆದರೆ ಇಂದಿನ ಪರಿಸ್ಥಿತಿಯು ತುಂಬ ಭಿನ್ನವಾಗಿದೆ. ಇತರ ಭಾಷೆಗಳವರೂ ಕನ್ನಡಚಿತ್ರ ನಿರ್ಮಾಣಕ್ಕೆ ಧಾವಿಸಿ ಬರುವಂತಾಗಿದೆ. ಕನ್ನಡ ಚಿತ್ರಗಳು ಇತರ ಭಾಷೆಗೆ ಅನುವಾದಗೊಳ್ಳತೊಡಗಿವೆ. ಕನ್ನಡ ಚಿತ್ರಗೀತೆಗಳು ಇಂದು ನಾಡಿನ ಮನೆಮಾತಾಗಿವೆ.

ಕನ್ನಡ ಚಿತ್ರಗಳಿಗೆ ಸೀಮಿತ ಮಾರುಕಟ್ಟೆಯುಂಟೆಂಬುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಚಿತ್ರರಂಗ ತನ್ನ ಕಾಲು ಮೇಲೆ ನಿಂತುಕೊಳಬೇಕಾದರೆ ಸಹಕಾರದ ಅಭಯಹಸ್ತವೂ ಬೇಕು. ಕನ್ನಡ ಚಿತ್ರಗಳಿಗೆ ಸಹಾಯ ಧನ ನೀಡುತ್ತಿದ್ದ ಸರಕಾರ ಕಳಪೆ ಚಿತ್ರಗಳೇ ಹೊರಬರುತ್ತಿವೆ ಎಂದು ಆಪಾದಿಸಿ ಅದನ್ನು ಹಿಂತೆಗೆದುಕೊಂಡಿತು ಚಲನಚಿತ್ರ ರಂಗದ ಉದ್ಧಾರಕ್ಕಾಗಿಯೇ ಟೊಂಕಕಟ್ಟಿ ನಿಂತಿರುವ ಚಲಚಿತ್ರ ಅಭಿವೃದ್ಧಿ ಮಂಡಳಿಯಲ್ಲೂ ಇತ್ತೀಚೆಗೆ ಅನ್ಯಾಯ, ರಾಜಕೀಯ ನಡೆದುದರಿಂದ ಕನ್ನಡ ಚಿತ್ರರಂಗಕ್ಕೆ ತುಸು ಪೆಟ್ಟಾಗಿರಲು ಸಾಕು. ಸರಕಾರ ಬರೀ ಕರ ವಿನಾಯತಿ ನೀಡುವದರಿಂದ ಚಿತ್ರರಂಗದ ಏಳಿಯಾಗಲಾರದು. ಉತ್ತಮ ಚಿತ್ರಗಳಿಗೆ ಪ್ರೋತ್ಸಾಹ ನೀಡುತ್ತೇವೆಂದು ಕೇಂದ್ರ ಸರಕಾರದ ಸುದ್ದಿ ಹಾಗು ಪ್ರಸಾರ ಶಾಖೆಯ ಮಂತ್ರಿಗಳು ಹೇಳುತ್ತಿದ್ದಾದರೂ, ಆ ಬಗೆಯ ಪ್ರೋತ್ಸಾಹ ದೊರೆಯುತ್ತಿಲ್ಲ.

ಸರಕಾರದ ಸಹಾಯ ಹಸ್ತ, ಪ್ರೇಕ್ಷಕ ವರ್ಗದ ಸಹಾನುಭೂತಿ ಕನ್ನಡ ಚಿತ್ರಗಳಿಗಿದ್ದರೆ ಅವು ಪ್ರಗತಿಯ ಮೆಟ್ಟಲನ್ನೇರುವದರಲ್ಲಿ ಯಾವ ಸಂಶಯವೂ ಇಲ್ಲ.

★★★★★

We wish you all
Happy and Prosperous Deepavali

This Deepavali Number of Karmaveer Weekly owned by Loka Shikshana Trust, Hubli is printed by M. H. Belgaumkar at the Samyukta Karnatak Press Koppikar Road Hubli-20 and published by him at the Samyukta Karnatak Koppikar Road Hubli-20 and 2 Residency Road Bangalore-25

KARMAVEER 14-11-1974
Licence No. 38
Licensed to Post without prepayment
Registered with the Registrar of Newspapers for India under No. 3558/57
Regd. No. KRN